ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ಪುಸ್ತಕ ಸಂಖ್ಯೆ 10,644 ದಿನಾಂಕ 31.8.95

ಅಧಿಕೃತ ವರದಿ
OFFICIAL REPORT

ಸಂಪುಟ ೩ (ಕ್ರಮಾಂಕ ೧ ರಿಂದ ೫)
VOLUME III (NO.S 1 TO 5)

(೬ನೇ ಮಾರ್ಚ್ ೧೯೯೨ ರಿಂದ ೭ನೇ ಮಾರ್ಚ್ ೧೯೯೨ ಮತ್ತು
೯ನೇ ಮಾರ್ಚ್ ೧೯೯೨ ರಿಂದ ೧೧ನೇ ಮಾರ್ಚ್ ೧೯೯೨ ರವರೆಗೆ)
(6th March 1992 to 7th March 1992 and
9th March 1992 to 11th March 1992)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ, ಬೆಂಗಳೂರು
Karnataka Legislature Secretariat, Bangalore.

BLANK PAGE

CONTENTS
TO THE
KARNATAKA LEGISLATIVE ASSEMBLY DEBATES
Volume - III (Nos.1 to 5)

(6ನೇ ಮಾರ್ಚ್ 1992 ಮತ್ತು 7ನೇ ಮಾರ್ಚ್ 1992, 9ನೇ ಮಾರ್ಚ್ 1992 ರಿಂದ 11ನೇ ಮಾರ್ಚ್ 1992 ರವರೆಗೆ)

ಶುಕ್ರವಾರ ೬ನೇ ಮಾರ್ಚ್ 1992

1. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 1-38
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 38-41
3. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 41-94
4. ಸಭೆಯ ಮುಂದಿಡಲಾದ ಕಾಗದ ಪತ್ರಗಳು. 94
5. ವರದಿಯನ್ನೊಪ್ಪಿಸುವುದು. 94
6. ನಿಯಮ ೩೩೪ ರ ಮೇರೆಗೆ. 94-96

ವಿಷಯ :

1. ಮುಳವಾಡ ಏತ ನೀರಾವರಿ ಯೋಜನೆ 94-96
2. Subsidy amount due, in respect of Sugar and levy paddy to TAPCMS, Channapatna 96-97
3. ಜಯನಗರ ಬಸ್ ನಿಲ್ದಾಣದಿಂದ ಮೈಸೂರಿಗೆ ಬಸ್ ಸೌಕರ್ಯ ಒದಗಿಸುವುದು 97
4. ಕುಂಠಿ ಶಾಮನಹಳ್ಳಿ ಗ್ರಾಮದ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿ ಕೊಂಡಿರುವುದು. 98
5. ಪುತ್ತೂರು ತಾಲ್ಲೂಕಿನಲ್ಲಿ ಒಂದು ಹೊಸ ಸರ್ವೆ - ಕಂದಾಯ ಇಲಾಖಾ ಫಿರ್ಕಾದ ಸ್ಥಾಪನೆ 98

7. ವಿರೋಧ ಪಕ್ಷದವರಿಂದ ಸಭೆಯ ಬಹಿಷ್ಕಾರದ ಬಗ್ಗೆ ಪ್ರಸ್ತಾವನೆ. 98-106

ಶನಿವಾರ 7ನೇ ಮಾರ್ಚ್ 1992 ಫಾಲ್ಗುಣ 17, 1913 ಶಕ

1. ಗಮನ ಸೆಳೆಯುವ ಸೂಚನೆ

ವಿಷಯ:- ಬೆಂಗಳೂರಿನ ಅನುದಾನಿತ ಮತ್ತು ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್. ಕೆ. ಜಿ. ಯು.ಕೆ.ಜಿ. ಮತ್ತು ಒಂದನೇ ತರಗತಿಗಳಿಗೆ ಅತಿ ಹೆಚ್ಚು ಡೊನೇಷನ್ ತೆಗೆದುಕೊಳ್ಳುತ್ತಿರುವ ಬಗ್ಗೆ 107-109

2. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕದ ಮಂಡನೆ

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು, ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992 109-111

3. ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ. 112-117

ಸೋಮವಾರ 9ನೇ ಮಾರ್ಚ್ 1993, ಫಾಲ್ಗುಣ 19, 1913 ಶಕ

1. ಸಂತಾಪ ಸೂಚನೆ (ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ನಿಧನದ ಬಗ್ಗೆ) 118-128

ಮಂಗಳವಾರ 10ನೇ ಮಾರ್ಚ್ 1992 ಫಾಲ್ಗುಣ 20, ಶಕವರ್ಷ 1913

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 129-143
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 143-146
3. ದಿನಾಂಕ 9.3.1992 ರ ಚುಕ್ಕೆ ಗುರುತು ಹಾಗೂ ಚುಕ್ಕೆರಹಿತ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು 146-167
4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು 168-223
5. ಚುನಾವಣಾ ಪ್ರಸ್ತಾವಗಳು 223-225
6. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ : 225

ವಿಷಯ :

1. ಬೆಂಗಳೂರಿನ ಬಾಗಲೂರು ಬಡಾವಾಣೆಯಲ್ಲಿ ಕಳ್ಳಭಟ್ಟಿ ಸೇವನೆಯಿಂದ ಜನರು ಸತ್ತಿರುವುದ 225-231
2. ಭದ್ರಾವತಿಯಲ್ಲಿರುವ ಮೈಸೂರು ಕಾಗದ ಕಾರ್ಖಾನೆಯಲ್ಲಿ ತೆಗೆದು ಹಾಕಿರುವ ನೌಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದು 231-232
3. ದಿನಾಂಕ 11.3.92 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದ 232

4. ದಿನಾಂಕ 07.03.92 ರಂದು ಸುಳ್ಯ ಶಾಸನಕರಾದ
ಶ್ರೀ. ಕೆ. ಕುಶಾಲಪ್ಪರವರ ಮೇಲೆ ಎಸಗಿರುವ ಹಲ್ಲೆ 232
5. ಉರ್ದು ಉಪನ್ಯಾಸಕರ ಹುದ್ದೆಗಳ ಭರ್ತಿ 233-235
6. ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಕಲ್ಕೇರಿ
ಗ್ರಾಮದಲ್ಲಿರುವ ಜಯಶ್ರೀ ನಾಯ್ಕರ್ ಎಂಬ ವಿದ್ಯಾರ್ಥಿನಿಯ
ಬೆತ್ತಲೆ ಮೆರವಣಿಗೆ 235-237
7. ನಿಯಮ 334 ರ ಮೇರೆಗೆ 237-238

ವಿಷಯ :

1. ಬೆಂಗಳೂರು ನಗರ ಪ್ರಕಾಶನಗರದಲ್ಲಿ ರೌಡಿಗಳ ಗುಂಪು
ಘರ್ಷಣೆಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ 237-238
2. ಬೆಂಗಳೂರು ಜಯನಗರದಲ್ಲಿರುರ ಸಂಜಯ ಗಾಂಧಿ ಅಪಘಾತ
ಪುನರ್ವಸತಿ ಕೇಂದ್ರದಲ್ಲಿ ಧರ್ಮಶಾಲೆಯನ್ನು ಕಟ್ಟಿಸುವುದು 238
3. ಕುಂದಗೋಳು ತಾಲ್ಲೂಕು, ಕಳಸ ಮಂಡಲ ಪ್ರಧಾನರಾದ
ಶ್ರೀ ಫಕೀರ ಗೌಡ ಪಾಟೀಲ್‌ರವರು ನಾಪತ್ತೆಯಾಗಿರುವುದು 238
4. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ರಂಗಸ್ವಾಮಿ
ಗುಡ್ಡದ ತೋಟಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ
ಪರಿಶಿಷ್ಟ ಜಾತಿಯ ಕಾರ್ಮಿಕರನ್ನು ತೋಟಗಾರಿಕಾ
ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಮುಂದುವರಿಸುವುದು 239
8. ಅರ್ಧ ಗಂಟೆ ಕಾಲಾವಧಿ ಚರ್ಚೆ :- 240-252

ವಿಷಯ : ಬೆಂಗಳೂರಿನ ಲಾಲ್‌ಬಾಗ್ ತೋಟಗಾರಿಕಾ
ಉತ್ಪಾದಕರ ಸಹಕಾರ ಮಾರಾಟ ಸಂಘ.

9. ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ
ಭಾಗವಹಿಸಲು ಮನವಿ 252-256

ಬುಧವಾರ 11ನೇ ಮಾರ್ಚ್ 1992 ಫಾಲ್ಗುಣ 1913 ಶಕ

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ
ನೀಡಲಾದ ಉತ್ತರಗಳು 257-292
2. ಸದನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 292-293
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ
ನೀಡಲಾದ ಉತ್ತರಗಳು 293-316
4. ಗಮನ ಸೆಳೆಯುವ ಸೂಚನೆಗಳು 316

ವಿಷಯ :

1. ದಿನಾಂಕ : 11.03.92 ರಂದು ಕೆ.ಎಸ್.ಆರ್.ಟಿ.ಸಿ. ನೌಕರರ ಒಕ್ಕೂಟವು ಮುಷ್ಕರ ಹೂಡಲಿರುವುದರಿಂದ ಸಾರ್ವಜನಿಕರಿಗೆ ಉಂಟಾಗಲಿರುವ ತೊಂದರೆ 316-320

2. ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡವು ಕಳೆದ 3–4 ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿರುವುದು 320

5 ಪ್ರಕಟಣೆ 321-322

(ಕಾಮನ್ ವೆಲ್ತ್ ದಿನಾಚರಣೆಯ ಅಂಗವಾಗಿ ಬಂದಿರುವ ಸಂದೇಶ)

6. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 322

ವಿಷಯ :-

1. ಮುಳವಾಡ ಏತ ನೀರಾವರಿಯ ಬಗ್ಗೆ ಶಾಸಕರ ಬಂಧನ. - ಶ್ರೀ ಎಲ್.ಆರ್. ಶಿವರಾಮೇಗೌಡ 322

2. ಗುಲ್ಬರ್ಗ ಕೆ.ಇ.ಬಿ. ಯಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಪರಿಶಿಷ್ಟ ಜಾತಿಯ ನೌಕರರಿಗೆ ತೊಂದರೆ ಕೊಡುತ್ತಿರುವುದನ್ನು ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ 323

3. ಗುಬ್ಬಿ ತಾಲ್ಲೂಕಿನಲ್ಲಿ ವೋಲ್ಟೇಜ್ ಸಮಸ್ಯೆಯಿಂದ ಜನಜೀವನ ಅಸ್ತವ್ಯಸ್ತ 323

7. ನಿಯಮ 334 ರ ಮೇರೆಗೆ 324

ವಿಷಯ :

1. ಕಡಬಾ ವಿದ್ಯುತ್ ಸರಬರಾಜು ಸ್ಟೇಷನ್‌ನ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು 324

2. ದಕ್ಷಿಣ ಕನ್ನಡ ಮತ್ತು ಇತರೆ ಜಿಲ್ಲೆಗಳಲ್ಲಿ ಲಾರಿಗಳನ್ನು ಅಪಹರಿಸಿ ಬಾಲಕ, ನಿರ್ವಾಹಕರನ್ನು ಕೊಲೆ ಮಾಡಿರುವುದು 324-327

8. ಶಾಸನ ರಚನಾ ಕಾರ್ಯಕಲಾಪಗಳು 327-328

ವಿಧೇಯಕದ ಮಂಡನೆ :

(1992 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ)

9. ಅನುಬಂಧ 328-329

10. ಸಭೆಗೆ ಬಹಿಷ್ಕರಿಸಿದ ಭಾರತೀಯ ಜನತಾ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿರುವುದು 329-330

11. ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ 330-335

ಕರ್ನಾಟಕ ವಿಧಾನ ಸಭೆ

ಶುಕ್ರವಾರ 6ನೇ ಮಾರ್ಚ್1992
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.35 ಗಂಟೆಗೆ ಸಮಾವೇಶಗೊಂಡಿತು.
ಉಪಾಧ್ಯಕ್ಷರು : ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ
ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಅನಾಥ ವೃದ್ಧಾಶ್ರಮಗಳ ಸಂಖ್ಯೆ

1083 ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ವೃದ್ಧರಿಗೆ ಮತ್ತು ಅನಾಥರಿಗೆ ಸಮಾಜ ಕಲ್ಯಾಣ ಇಲಾಖೆಯು ವೃದ್ಧಾಶ್ರಮಗಳನ್ನು ನಡೆಸುತ್ತಿದೆಯೇ?

ಆ) ಬೆಂಗಳೂರು ನಗರ ಮತ್ತು ಇತರ ಸ್ಥಳಗಳಲ್ಲಿರುವ ಇಂತಹ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು? ಪ್ರತಿಯೊಂದು ಸಂಸ್ಥೆಗೆ ನಿಗದಿ ಪಡಿಸಿರುವ ನಿವಾಸಿಗಳ ಸಂಖ್ಯೆ ಎಷ್ಟು? ಹಾಗೂ ಹಾಲಿ ಇರುವ ನಿವಾಸಿಗಳ ಸಂಖ್ಯೆ ಎಷ್ಟು?

ಇ) ಸರ್ಕಾರವು ಸಮಾಜ ಸೇವಾ ಸಂಸ್ಥೆಗಳು ಹಾಗೂ ದಾನದತ್ತಿ ಸಂಸ್ಥೆಗಳ ಸಹಾಯಪಡೆದು ಇನ್ನೂ ಹೆಚ್ಚಿನ ಇಂತಹ ಸಂಸ್ಥೆಗಳನ್ನು ಸ್ಥಾಪಿಸಿವೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು.

ಆ) ಬೆಂಗಳೂರು ನಗರದಲ್ಲಿ ಒಂದು ಸಮಾಜ ಸೇವಾ ಸಂಕೀರ್ಣ ಸಂಸ್ಥೆಯನ್ನು ಸರ್ಕಾರವು ನಡೆಸುತ್ತಿದೆ. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನಾಥ ವಯೋವೃದ್ಧರಿಗಾಗಿ ಮೂರು ಸಂಸ್ಥೆಗಳು ನಡೆಯುತ್ತಿವೆ.

	ವೃದ್ಧಾಶ್ರಮಗಳ ಸಂಖ್ಯೆ	ಹಾಲಿ ಇರುವ ನಿವಾಸಿಗಳ ಸಂಖ್ಯೆ	ನಿಗದಿಪಡಿಸಿದ ಸಂಖ್ಯೆ
1)	ಸಮಾಜ ಸೇವಾ ಸಂಕೀರ್ಣ. ಬೆಂಗಳೂರು (ಸರ್ಕಾರವು ನಡೆಸುತ್ತಿದೆ)	57	100
2)	ವೆಲ್ಫೇರ್ ಹೋಂ ಇಂಡಿಯಾ, ಬೆಂಗಳೂರು.	13	ನಿಗದಿಪಡಿಸಿಲ್ಲ.
3)	ಫ್ರಂಡ್ ಇನ್ ನೀಡ್ ಸೊಸೈಟಿ, ಬೆಂಗಳೂರು.	81	ನಿಗದಿಪಡಿಸಿಲ್ಲ.
4)	ಅಭಯಾಶ್ರಮ, ಮಂಗಳೂರು.	93	ನಿಗದಿಪಡಿಸಿಲ್ಲ.

ಇ) ಇಲ್ಲ

SRI DERICK M.B. FULLINFAW :– Respected Madam Deputy Speaker, almost every country in the world expresses concern for these aged destitute people and introduces several schemes for their welfare. But it is very surprising to note that in a big progressive city like Bangalore, formerly known as "Pensioners' Paraddise", the State Government runs only one Home for the aged, and that too not to its full capacity. There are innumerable aged destitute people in our city and our State and their plight is miserable. The least the State Government can do is, provide them with some form of shelter. I, therefore, appeal to our Hon'ble Minister either to set up such homes for the aged or provide necessary infrastructure like land, building to those service organisations which render service by running such homes. Will the Hon'ble Minister consider my request?

SRI B. SHIVANNA : – It is a good suggestion. Definitely Government will take necessary action and see that such homes are provided. There is one oldage home – social service complex run by Government. Then there are three oldage homes run by Voluntary Organisation or agencies. Like this, there are four oldage homes in Karnataka State. There is also provision where Government of India is giving financial assistance to those people who come forward to open the oldage homes. Like that the State Government has also issued circulars to all the voluntary organisations saying that if they come and open, this Government is also ready to help and our friend has suggested that the State Government should take up this matter. Definitely, we will consider and see that the State Government also look into this matter.

SRI DERICK M.B. FULLINFAW : – Now the Minister has come with an assurance, but, earlier when I asked whether the Government will consider setting up such homes with the assistance of social service organisations, the answer was point blank "No". I think, the only inference we can draw is, if the Government doesn't want to set up homes for the ages, then this Social Welfare Department is dead. I, therefore, request the Hon'ble Minister, this one programme which should require top priority from the Social Welfare Ministry, to consider it and see that this type of project is implemented not only in Bangalore but also elsewhere in the State.

SRI B. SHIVANNA : Social Welfare Department is not dead. It is living and doing lot of service.

ಶ್ರೀ ಬಾಬುರಾವ್ ಆರ್. ಚಿಮ್ಮಾಣ್ :– ಮಾನ್ಯ ಉಪಾಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ವೃದ್ಧರಿಗೆ ಮತ್ತು ಅನಾಥರಿಗೆ ಮಂದಿರಗಳನ್ನು ಸರ್ಕಾರದ ಕಡೆಯಿಂದ ಓಪನ್ ಮಾಡಲಿಕ್ಕೆ ಇಚ್ಛಾ ಇದೆಯೆ ? ಏಕೆಂದರೆ ಮಂತ್ರಿಗಳೂ ಸಹ ಆ ಭಾಗದಿಂದ ಬಂದವರು, ಆ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಬಿ. ಶಿವಣ್ಣ : ನಾನು ಮೊದಲೇ ಹೇಳಿದ್ದೇನೆ. ನಮ್ಮದು ಓಲ್ಡ್ ಏಜ್ ಹೋಮ್ ಇದೆ. ಬೇರೆ ಯಾರಾದರೂ ಬೇಕೆಂದರೆ ವಿಚಾರ ಮಾಡೋಣ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ. ಎ.ಕೆ. ಆನಂತಕೃಷ್ಣ :- ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯಮಂತ್ರಿಗಳು ಹೇಳಿದ್ದರು ಮಾನ್ಯ ಸದಸ್ಯರಾದ ಡೆರಿಕ್ ಫರ್ನಾಂಡಿಸ್ ಅವರಿಗೆ ತೃಪ್ತಿಯಾಗಿಲ್ಲ. ಮಾನ್ಯಮಂತ್ರಿಗಳಿಗೆ ಮತ್ತಷ್ಟು ವಿಷಯ ಗೊತ್ತಾಗುವುದಿಲ್ಲ. ಮುಂದಕ್ಕೆ ವಿಷಯವು ಗೊತ್ತಾಗುವುದಿಲ್ಲ, ಅವರು ಬ್ರಹ್ಮಚಾರಿಗಳು. ಈ ವಿಚಾರವನ್ನು ದಯವಿಟ್ಟು ಸರಿಯಾಗಿ ತಿಳಿದುಕೊಳ್ಳಬೇಕು. ನಿಮ್ಮಲ್ಲಿ ಸಾಕಷ್ಟು ಸಮಾಜಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಇದು ಖಂಡಿತವಾದರೂ, ಆ ಜನಗಳಿಗೆ ಕೃತಜ್ಞತಾ ಪೂರ್ವಕವಾದ, ಅಭಿನಂದನೀಯ ಪೂರ್ವಕವಾದ ಸಹಾಯವನ್ನು ಮಾಡಬೇಕಾಗಿತ್ತು. ಸರ್ಕಾರ ಮಾಡಬೇಕಾಗಿರುವ ತನ್ನ ಮೂಲ ಕರ್ತವ್ಯ ಇದು. ಈಗಾಗಲೇ ಬಸ್ ಪಾಸ್‌ಗಳನ್ನು ಸೀನಿಯರ್ ಸಿಟಿಜನ್ಸ್‌ಗಳಿಗೆ ಕೊಡುವುದಿಲ್ಲವೆಂದು ಹೇಳಿ ಆಯಿತು. ಬಹಳ ವಯಸ್ಸಾದ ಮೇಲೆ ಎಲ್ಲಿಯಾದರೂ ಒಂದುಕಡೆ ಇರಬೇಕೆಂದು ಹೇಳಿದರೆ ಅವರಿಗೆ ಮಾಡಬೇಕಾದ ಕೆಲಸವನ್ನು ಸರ್ಕಾರ ಮಾಡುವುದು ಅದರ ಮೂಲ ಕರ್ತವ್ಯವೆಂದು ಅವರಿಗೆ ಭಾವಿಸುತ್ತೇನೆ. ಆದ್ದರಿಂದ ಮಾನ್ಯಮಂತ್ರಿಗಳು ಇದರ ಬಗ್ಗೆ ತೀವ್ರವಾದ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ : ಆಗಬಹುದು.

ಡಾ: ಜಿ. ಪರಮೇಶ್ವರ್ :- ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮೂರು ಪ್ರವೇಟ್ ವಾಲೆಂಟರಿ ಆರ್ಗನೈಸೇಷನ್‌ಗಳನ್ನು ನಡೆಸುತ್ತಿದ್ದಾರೆಂದು ಅವು ಬೆಂಗಳೂರಿನಲ್ಲಿವೆಯೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಮೂರು ಪ್ರಶ್ನೆಗಳು ಏನೆಂದರೆ ಈ ಮೂರು ವಾಲೆಂಟರಿ ಆರ್ಗನೈಸೇಷನ್‌ಗಳಿಗೆ ಸರ್ಕಾರದಿಂದ ಹಣ ಕೊಡುತ್ತಾ ಇದ್ದೀರಾ ? ಎರಡನೆಯ ಪ್ರಶ್ನೆ ಇದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದವರು ಫಂಡನ್ನು ಕೊಡುತ್ತಾರೆಂದು ಹೇಳಿದ್ದೀರಿ. ಕಳೆದ ಸಾರಿ ಎಷ್ಟು ಹಣವನ್ನು ಗೌರ್ನಮೆಂಟ್ ಆಫ್ ಇಂಡಿಯಾದವರು ಕರ್ನಾಟಕ ಸರ್ಕಾರಕ್ಕೆ ಒದಗಿಸಿದ ಹಣವೆಷ್ಟು ? (ಆ ಹಣವನ್ನು ಉಪಯೋಗಿಸಿಕೊಂಡಿದ್ದೀರಾ ಅಥವಾ ಇದು ಶ್ಯಾಪ್ಸ್ ಆಗಿದೆಯೇ ?)

ನೀವು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕೇಳಿದ ಹಣವೆಷ್ಟು ಎಂಬುದನ್ನು ಹೇಳಬೇಕು.

ಶ್ರೀ ಬಿ. ಶಿವಣ್ಣ :- ನಮಗೆ ಗೌರ್ನಮೆಂಟ್ ಆಫ್ ಇಂಡಿಯಾದವರು ಒಲ್ಡ್ ಏಜ್ ಹೋಮ್ ಸಲುವಾಗಿ ಹಣ ಸಹಾಯವನ್ನು ಕೊಡುತ್ತಾರೆ. ಬೇರೆ ವಾಲೆಂಟರಿ ಆರ್ಗನೈಸೇಷನ್‌ಗಳು ಮುಂದೆ ಅಂದರೆ ಅಂತಹವರಿಗೂ ಸಹ ಗೌರ್ನಮೆಂಟ್ ಆಫ್ ಇಂಡಿಯಾದವರು ದುಡ್ಡು ಕೊಡುತ್ತಿದ್ದಾರೆ. ಅಂತಹ ಅಪ್ಲಿಕೇಷನ್ಸ್ ನಮಗೇನೂ ಬಂದಿಲ್ಲ. ಅಂತಹ ಅರ್ಜಿಗಳು ಬಂದರೆ ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿಕೊಡುತ್ತೇನೆಂದು ನಾನು ಹೇಳುತ್ತೇನೆ.

ಡಾ: ಜಿ. ಪರಮೇಶ್ವರ್ :- ಪ್ರವೇಟ್ ಆರ್ಗನೈಸೇಷನ್ಸ್‌ನವರು ನಡೆಸತಕ್ಕ ಇಂತಹ ಮಂದಿರಗಳಿಗೆ ತಾವೇನಾದರೂ ಹಣವನ್ನು ಕೊಡುತ್ತಾ ಇದ್ದೀರಾ?

ಉಪಾಧ್ಯಕ್ಷರು : ರಾಜ್ಯಸರ್ಕಾರದಿಂದ ಅಂತಹ ಸಂಸ್ಥೆಗಳಿಗೆ ನೀವು ಹಣವನ್ನು ಕೊಡುತ್ತಾ ಇದ್ದೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ : ನಾವು ಕೊಡುತ್ತಿದ್ದೇವೆ. ಒಂದು ಲಕ್ಷದ 50 ಸಾವಿರ ರೂಪಾಯಿಗಳನ್ನು ಈ ಮೂರು ಪ್ರವೇಟ್ ಆರ್ಗನೈಸೇಷನ್ಸ್‌ಗಳಿಗೆ ಕೊಟ್ಟಿದ್ದೇವೆ. ಈ ಹಣ ವರ್ಷಕ್ಕೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿ ಬಗ್ಗೆ

1285 ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ–

ಅ) ಗುಬ್ಬಿ ತಾಲ್ಲೂಕು ಚಿಕ್ಕ ಕುನ್ನಾರಿ ಗ್ರಾಮಕ್ಕೆ ಪಿ.ಹೆಚ್.ಸಿ. ಮಂಜೂರಾಗಿರುವುದು ನಿಜವೆ?
ಆ) ಇದಕ್ಕೆ ಸಿಬ್ಬಂದಿವರ್ಗದವರು ಮಂಜೂರಾತಿ ದೊರಕಿದೆಯೆ?
ಇ) ಇಲ್ಲದಿದ್ದಲ್ಲಿ ಸಿಬ್ಬಂದಿ ವರ್ಗದವರನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಅಲ್ಲಿ ಪಿ.ಹೆಚ್.ಸಿ.ಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು –

ಅ) ಹೌದು

ಆ) ಇಲ್ಲ

ಇ) ಸಿಬ್ಬಂದಿಯನ್ನು ಸದ್ಯದಲ್ಲೇ ಮಂಜೂರು ಮಾಡಲಾಗುವುದು. ಸಿಬ್ಬಂದಿ ಮಂಜೂರಾದ ಕೂಡಲೇ ಪಿ.ಹೆಚ್.ಸಿ.ಯನ್ನು ಪ್ರಾರಂಭಿಸಲಾಗುವುದು.

ಶ್ರೀ ಜಿ.ಎಸ್.ಶಿವನಂಜಪ್ಪ :– ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಮೊದಲನೆಯ ಪ್ರಶ್ನೆ 'ಗುಬ್ಬಿ ತಾಲ್ಲೂಕು ಚಿಕ್ಕಕುನ್ನಾಲ ಗ್ರಾಮಕ್ಕೆ ಪಿ.ಹೆಚ್.ಸಿ. ಮಂಜೂರಾಗಿರುವುದು ನಿಜವೆ' ಅಂದರೆ ಉತ್ತರವಾಗಿ 'ಹೌದು ಎಂದು ಹೇಳಿದ್ದಾರೆ. 'ಇದಕ್ಕೆ ಸಿಬ್ಬಂದಿ ವರ್ಗದವರ ಮಂಜೂರಾತಿ ದೊರಕಿದೆಯೇ' ಅಂದರೆ ಇಲ್ಲವೆಂದು ಹೇಳಿದ್ದಾರೆ. ಇಲ್ಲದಿದ್ದರೆ ಸಿಬ್ಬಂದಿ ವರ್ಗವನ್ನು ಯಾವಾಗ ಮಂಜೂರು ಮಾಡುತ್ತೀರಿ ? ಹಾಗೂ ಅಲ್ಲಿ ಪಿಹೆಚ್‌ಸಿಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ ಎನ್ನುವ ನನ್ನ ಪ್ರಶ್ನೆಗೆ ಸಿಬ್ಬಂದಿಯನ್ನು ಸದ್ಯದಲ್ಲಿಯೇ ಮಂಜೂರು ಮಾಡಲಾಗುವುದು, ಸಿಬ್ಬಂದಿ ಮಂಜೂರಾದಕೂಡಲೇ ಪಿಹೆಚ್‌ಸಿಯನ್ನು ಪ್ರಾರಂಭ ಮಾಡಲಾಗುವುದು ಅಂದರೆ ಎಷ್ಟು ದಿವಸಗಳಲ್ಲಿ ಇದನ್ನು ಜನಗಳಿಗೆ ಅವರ ಉಪಯೋಗಕ್ಕೆ ನೀವು ಪ್ರಾರಂಭ ಮಾಡಬಹುದೆಂದು ಮಾನ್ಯ ಮಂತ್ರಿಗಳಿಂದ ಕೇಳಬಯಸುತ್ತೇನೆ.

ಶ್ರೀ. ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ರಾಜ್ಯದಲ್ಲಿ ಸುಮಾರು 322 ಅನ್ನು ಮಂಜೂರು ಮಾಡಲಾಗಿದ್ದು ಅವುಗಳಿಗೆ ಬೇಕಾದಂತಹ ಸಿಬ್ಬಂದಿ ಮತ್ತು ಇತರೆ ವೆಚ್ಚಗಳಿಗೆ ಈಗಾಗಲೇ ಆರೋಗ್ಯ ಇಲಾಖೆ ಪ್ಲಾನಿಂಗ್ ಇಲಾಖೆಗೆ ಮಂಜೂರಾತಿಗಾಗಿ ಕಳುಹಿಸಿ ಕೊಡಲಾಗಿದೆ. ಬಹುಶಃ ಅದು ಒಂದೆರಡು ದಿವಸಗಳಲ್ಲಿ ಮಂಜೂರಾತಿ ಸಿಗುತ್ತದೆನ್ನುವ ನಿರೀಕ್ಷೆ ಕೂಡ ಇದೆ. ಅದು ಆದ ನಂತರ ನೇಮಕಾತಿಗಳನ್ನು ಮಾಡಿ ಮಂಜೂರಾತಿಯಾದ ಕೇಂದ್ರಗಳಿಗೆ ವೈದ್ಯರುಗಳನ್ನು ಇತರೆ ನೌಕರರನ್ನು ತುಂಬ ತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ :– ಅಲ್ಲಿಗೆ ಪಿ.ಹೆಚ್.ಸಿ. ಯನ್ನು ಮಂಜೂರು ಮಾಡಿದ್ದುದು ಬಹುಶಃ ತಾವು ಕಡತವನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಬಹಳಷ್ಟು ಜನ ಬೀಡಿ ಕಾರ್ಮಿಕರು ಹರಿಜನ ಗಿರಿಜನರು ಬಡ ಜನರು ಇರತಕ್ಕ ಈ ಜಾಗದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಅಂದಾಗ ಸರ್ಕಾದವರು ಮಂಜೂರು ಮಾಡಿ ಕೊಟ್ಟಿದ್ದಾರೆ. ಅದಕ್ಕೆ ನಿಮಗೆ ಧನ್ಯವಾದಗಳು. ಈಗ ಏನಾದರೂ ಮಧ್ಯದಲ್ಲಿ ಗ್ಯಾಪ್ ಅರೆಂಜ್‌ಮೆಂಟ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಮಂತ್ರಿಗಳು ಹೇಳಬೇಕು. ಡಿ.ಹೆಚ್.ಒ. ಆಫೀಸಿನಲ್ಲಿ ಲೀವ್ ರಿಸರ್ವ್ ಎಂದು ನಾಲ್ಕೈದು ಪೋಸ್ಟ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಏನಾದರೂ ಐದಾರು ತಿಂಗಳುಗಳವರೆಗೆ ಹುದ್ದೆಗಳನ್ನು ಮಂಜೂರು ಮಾಡುವ ತನಕ ಡಾಕ್ಟರುಗಳ ಸೇವೆಯನ್ನು ಒದಗಿಸಿ ಆ ಆಸ್ಪತ್ರೆಯ ಸೌಕರ್ಯವನ್ನು ಸಾರ್ವಜನಿಕರಿಗೆ ಮಾಡಿಕೊಡುವುದಕ್ಕೆ ಸಾಧ್ಯವೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದಹಾಗೆ ಇನ್ನು ಒಂದೆರಡು ದಿವಸಗಳಲ್ಲಿ ಇದಕ್ಕೆ ಮಂಜೂರಾತಿ ಸಿಗುವ ನಿರೀಕ್ಷೆ ಇದೆ. ಪೂರ್ವಭಾವಿಯಾಗಿ ಸಂಬಂಧಪಟ್ಟ ನೇಮಕಾತಿ ಸಮಿತಿ ರಚನೆ ಕೂಡ ಮಾಡಿದ್ದೇವೆ. ಕೆ.ಪಿ.ಎಸ್.ಸಿ.ಗೂ ಕೂಡ ನಾವು ಬರೆದಿದ್ದೇವೆ. ಬಹುಶಃ ಈ ನೇಮಕಾತಿ ಇನ್ನೂ ಒಂದೆರಡು ತಿಂಗಳಲ್ಲಿ ಆಗತಕ್ಕಂಥ ನಿರೀಕ್ಷೆ ಇದೆ. ನೇಮಕಾತಿ ಆದ ನಂತರ ಈ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಈ ಮಧ್ಯ ಕೆಲವು ಪಿ.ಜಿ. ಕೋರ್ಸ್‌ಗೆ ಹೋಗಿರತಕ್ಕಂಥ ವೈದ್ಯರುಗಳು ಕೂಡ ವಾಪಾಸ್ಸು ಬರುವವರಿದ್ದಾರೆ. ಅವರು ಬಂದನಂತರ ಖಾಲಿ ಜಾಗಗಳನ್ನು ತುಂಬತಕ್ಕಂಥ ಕೆಲಸ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ :– ನಾನು ಕೇಳುತ್ತಿರುವುದು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸ್‌ನಲ್ಲಿ ಲೀವ್ ರಿಸರ್ವ ವೆಕೆನ್ಸೀಸ್ ಎಂದು ನಾಲ್ಕೈದು ಜನರನ್ನು ರಿಸರ್ವ್ ಮಾಡಿಕೊಂಡಿರುತ್ತಾರೆ. ಅವರಲ್ಲಿ ಯಾರಾದರೂ ಒಬ್ಬರನ್ನು ಈ ಜಾಗಕ್ಕೆ ಪೋಸ್ಟ್ ಮಾಡಿ ಈ ಆಸ್ಪತ್ರೆಯನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ಮಂತ್ರಿಗಳು ಸಹಾಯ ಮಾಡುತ್ತಾರೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಲೀವ್ ರಿಸರ್ವ್ ವೆಕೆನ್ಸಿಗಳು ಕೂಡ ಖಾಲಿ ಇವೆ. ಬಹುತೇಕ ಜಿಲ್ಲೆಗಳಲ್ಲಿ ಎಲ್ಲಾ ಸ್ಥಾನಗಳೂ ಕೂಡ ಖಾಲಿ ಇದ್ದು, ಇದರ ಬಗ್ಗೆ ನಾವು ಕೇಳುತ್ತಿದ್ದೇವೆ. ಆದರೆ ತುಮಕೂರಿನಲ್ಲಿ ಖಾಲಿ ಸಂಖ್ಯೆ ಜಾಸ್ತಿ ಇದ್ದು ಈ ವ್ಯವಸ್ಥೆ ಮಾಡತಕ್ಕದ್ದು ಕಷ್ಟವಾಗುತ್ತದೆ. ಒಂದುವೇಳೆ

ನಾವು ಮಾಡಿದರೂ ಕೂಡ ಅವರು ವಾರಕ್ಕೆ ಒಮ್ಮೊಮ್ಮೋ ಅಥವ ಹದಿನೈದು ದಿವಸಕ್ಕೆ ಒಮ್ಮೆ ಹೋಗಿಬಂದರೆ ಅಲ್ಲಿಯ ಆವಶ್ಯಕತೆ ಪೂರೈಕೆ ಮಾಡತಕ್ಕದ್ದು ಕೂಡ ಕಷ್ಟವಾಗುತ್ತದೆ. ಏನೇ ಆಗಲಿ, ಇದನ್ನು ಗಮನದಲ್ಲಿಟ್ಟುಕೊಂಡು ಆದಷ್ಟುಬೇಗ ಖಾಲಿ ಹುದ್ದೆಗಳನ್ನು ತುಂಬಿಸತಕ್ಕಂಥ ಕೆಲಸ ಮಾಡುತ್ತೇವೆ.

ಶ್ರೀ ಬಿ. ಶಿವರಾಮು :– ಪ್ರತಿವರ್ಷ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಡತಕ್ಕದ್ದು ಸುಮಾರುವರ್ಷಗಳಿಂದ ನಡೆದುಕೊಂಡುಬಂದಿದೆ. ನನಗೆ ಗೊತ್ತಿರುವ ಹಾಗೆ ಸರ್ಕಾರ ಮಂಜೂರಾತಿ ಕೊಡಬೇಕಾದರೆ ಪ್ಲಾನಿಂಗ್ ಮತ್ತು ಫೈನಾನ್ಸ್ ಕ್ಲಿಯರೆನ್ಸ್ ಇದ್ದರೆ ಮಾತ್ರ ಮಂಜೂರಾತಿ ಕೊಡುತ್ತದೆ. ಈಗ ಮಂತ್ರಿಗಳು ಹೇಳುತ್ತಿದ್ದಾರೆ, ಫೈನಾನ್ಸ್ ಕ್ಲಿಯರೆನ್ಸ್ ಈ 324 ಆಸ್ಪತ್ರೆಗಳಿಗೆ ಇನ್ನು ಒಂದೆರಡು ದಿವಸಗಳಲ್ಲಿ ಬರುತ್ತದೆ ಎಂದು. ಹಾಗಿದ್ದರೆ ಹಿಂದೆ ಇದಕ್ಕೆ ಪ್ಲಾನಿಂಗ್, ಫೈನಾನ್ಸ್ ಕ್ಲಿಯರೆನ್ಸ್ ಸಿಕ್ಕಿರಲಿಲ್ಲವೆ? ಮತ್ತು ಈ 324 ಆಸ್ಪತ್ರೆಗಳಿಗೆ ಸಿಬ್ಬಂದಿವರ್ಗದ ವ್ಯವಸ್ಥೆ ಆಗಿಲ್ಲವಾದರೆ ಆ ಆಸ್ಪತ್ರೆಗಳ ಪರಿಸ್ಥಿತಿ ಏನು?

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಕೇಂದ್ರಸರ್ಕಾರದ ಯೋಜನೆಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಒಂದು ವರ್ಷಕ್ಕೆ ಇಷ್ಟು ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಗುರಿಯಿದೆ ಮತ್ತು ಈ ಹಿನ್ನಲೆಯಲ್ಲಿ ಈ ಗುರಿಯನ್ನು ಸಾಧನೆ ಮಾಡತಕ್ಕಂಥ ವ್ಯವಸ್ಥೆಯನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಆದರೆ ರಾಜ್ಯದಲ್ಲಿ ಆರ್ಥಿಕ ನಿರ್ಬಂದ ಇದ್ದುದರ ಪರಿಣಾಮವಾಗಿ ನೇಮಕಾತಿಗಳನ್ನು ಮಾಡುವುದಕ್ಕೆ ಆಗಲಿಲ್ಲ. ಈ ಕಾರಣದಿಂದ ಈ ಎಲ್ಲಾ ಹುದ್ದೆಗಳೂ ಖಾಲಿ ಇವೆ. ಇದನ್ನು ಗಮನದಲ್ಲಿಟ್ಟುಕೊಂಡು ಈಗ ಸರ್ಕಾರ ಆರ್ಥಿಕ ನಿರ್ಬಂಧವನ್ನು ವೈದ್ಯಕೀಯ ಕ್ಷೇತ್ರಕ್ಕೆ ರದ್ದುಮಾಡಿ ನೇಮಕಾತಿ ಮಾಡಲಿಕ್ಕೆ ವಿಶೇಷವಾಗಿ ಅಜ್ಞೆ ಮಾಡಿದೆಯೆಂದು ತಮ್ಮ ಮೂಲಕ ತಿಳಿಸಲು ಬಯಸುತ್ತೇನೆ. ಆ ಹಿನ್ನಲೆಯಲ್ಲಿ ಎಲ್ಲಾ ಖಾಲಿ ಸ್ಥಾನಗಳನ್ನು ತುಂಬತಕ್ಕಂಥ ಕಾರ್ಯಕ್ರಮವನ್ನು ತ್ವರಿತವಾಗಿ ಮಾಡುತ್ತೇವೆ.

ಡಾ : ವೈ. ನಾಗಪ್ಪ :– ಮಾನ್ಯ ಆರೋಗ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇದು ಒಂದು ತಾಲ್ಲೂಕಿನ ಪರಿಸ್ಥಿತಿ ಅಲ್ಲ. ಇಡೀ ನಮ್ಮ ರಾಜ್ಯದಲ್ಲಿ ಈ ಡಾಕ್ಟರ್‌ಗಳು ರೂರಲ್ ಸರ್ವಿಸ್‌ಗೆ ಸರಿಯಾಗಿ ಹೋಗುತ್ತಿಲ್ಲ. ಅವರಿಗೆ ಪೋಸ್ಟಿಂಗ್ಸ್ ಕೊಟ್ಟರೂ ಕೂಡ ಹೋಗುವುದಿಲ್ಲ. ಸರ್ಕಾರದಲ್ಲಿ ಕೆಲವು ತಿದ್ದುಪಡಿ ಮಾಡುವವರೆಗೆ ಇದು ಸರ್ವೇಸಾಮಾನ್ಯವಾಗಿ ಸಾಧ್ಯವಿಲ್ಲ. When they enter into the medical college, they must execute a bond stating that unless they serve in rural areas for 5 years their degree is not recognised. ಈ ರೀತಿ ಅಮೆಂಡ್‌ಮೆಂಟ್ ಮಾಡದೇ ಹೋದರೆ ಹಳ್ಳಿಗಾಡಿನಲ್ಲಿ ವೈದ್ಯಕೀಯ ಸೇವೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಮಂತ್ರಿಗಳಿಗೆ ನಾನು ತಿಳಿಸುತ್ತೇನೆ. ಇದರ ಬಗ್ಗೆ ತಾವು ಏನು ಉತ್ತರ ಹೇಳುತ್ತೀರೋ ಹೇಳಿ?

ಶ್ರೀ ಜಿ.ಪುಟ್ಟಸ್ವಾಮಿಗೌಡ :– ಸನ್ಮಾನ್ಯ ಸದಸ್ಯರ ಪ್ರಶ್ನೆ ಈ ಪ್ರಶ್ನೆಯ ವ್ಯಾಪ್ತಿಗೆ ಮೀರಿದ್ದಾದರೂ ಉಪಯುಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರು ಹೋಗುತ್ತಿಲ್ಲ. ಅದಕ್ಕೆ ನಮ್ಮ ಕಾಯದೆಯನ್ನು ಬದಲಾವಣೆ ಮಾಡಿಕೊಳ್ಳಬೇಕು. ಅವರಿಗೆ ಶಿಕ್ಷಣವನ್ನು ಕೊಡುವ ಹಂತದಲ್ಲೇ ಕಮಿಟ್ ಮಾಡಿಸತಕ್ಕಂಥ ಅತ್ಯುತ್ತಮ ಸಲಹೆ ಕೊಟ್ಟಿದ್ದಾರೆ ಮಾನ್ಯ ಸದಸ್ಯರು ವೈದ್ಯರೂ ಕೂಡ ಆಗಿದ್ದಾರೆ. ಅವರ ಸಲಹೆ ಉಪಯುಕ್ತವಾದುದಾಗಿದ್ದು ಸರ್ಕಾರ ಇದನ್ನು ಗಮನಿಸುತ್ತದೆ ಎಂದು ಹೇಳುತ್ತೇನೆ.

ಡಾಃ ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸುವ ಬಗ್ಗೆ

1134. ಡಾ : ಜಿ. ಪರಮೇಶ್ವರ (ಮಧುಗಿರಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರ ಹಿಂದೆಯೇ ನಿರ್ಧರಿಸಿದಂತೆ ಬೆಂಗಳೂರು ನಗರದಲ್ಲಿ ಡಾ: ಬಾಬಾ ಸಾಹೇಬ ಅಂಬೇಡ್ಕರ್‌ರವರ ನೆನಪಿನಲ್ಲಿ ಭವನ ನಿರ್ಮಾಣ ಉದ್ದೇಶವಿರಿಸಿಕೊಂಡಿರುತ್ತದೆಯೇ;

ಆ) ಹಾಗಿದ್ದಲ್ಲಿ, ಈ ಉದ್ದೇಶಕ್ಕಾಗಿ ಒದಗಿಸಿದ ಹಣ, ಹಾಗೂ ಎಂದಿನಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗುತ್ತದೆ ?

ಶ್ರೀ. ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು

ಆ) ಡಾ॥ ಬಿ.ಆರ್. ಅಂಬೇಡ್ಕರ್ ಭವನ ನಿರ್ಮಿಸಲು 6.50 ಕೋಟಿ ರೂ.ಗಳ ಅಂದಾಜು ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಈಗಾಗಲೇ ಪೂರ್ವ ಸಿದ್ಧತೆ ನಡೆಸಲಾಗಿದೆ.

ಡಾ: ಜಿ. ಪರಮೇಶ್ವರ್ :– ಮಾನ್ಯ ಅಧ್ಯಕ್ಷರೇ, ಕಳೆದ ಸಾರಿ ಮಾನ್ಯ ಮುಖ್ಯ ಮಂತ್ರಿಗಳು 1990–91ರ ಆಯವ್ಯಯವನ್ನು ಮಂಡಿಸುವಾಗ, During 1991–92 the Government will start construction of Ambedkar Bhavan, and have made a provision of Rs.20 lakhs for this purpose. ಎಂದು ಕಳೆದ ಸಲ ಹೇಳಿದ್ದರು. ಈ ಸಲ ಬಜೆಟ್‌ನಲ್ಲಿ - We have also taken up construction of Ambedkar Bhavan and I would like to reiterate that the Government is committed in the development and the Welfare of the people.. ಎಂದು ಹೇಳುತ್ತಾರೆ. ಇಲ್ಲಿ, ಮಾನ್ಯಮಂತ್ರಿಗಳು ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದಾರೆ, necessary preliminary action has been taken ಎಂದು ಹೇಳುತ್ತಾರೆ. ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆಂದು ಬಜೆಟ್‌ನಲ್ಲಿ ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಹೇಳುತ್ತಾರೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿದೆ, ಈಗಾಗಲೆ ಆರೂವರೆ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಅಲ್ಲಿ ಇಷ್ಟಿನವರೆಗೂ ಒಂದು ಇಟ್ಟಿಗೆಯನ್ನೂ ಕೂಡ ಇಟ್ಟಿಲ್ಲ. ಈ ರೀತಿಯಾಗಿ ಅಂಬೇಡ್ಕರ್ ಜನ್ಮಶತಾಬ್ದಿ ಆಚರಿಸುವುದಾದರೆ, ಈ ರೀತಿಯಾಗಿ ಅಂಬೇಡ್ಕರ್‌ರವರಿಗೆ ನಾವು ಗೌರವ ತೋರಿಸುವುದಾದರೆ, ಈ ಸರ್ಕಾರ ಏನು ಮಾಡುತ್ತದೆಂದು ನಾನು ಮಾನ್ಯಮಂತ್ರಿಗಳಲ್ಲಿ ಪ್ರಶ್ನೆಯನ್ನು ಕೇಳುತ್ತೇನೆ. ನಮಗೆ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೇವೆಂದು ನಿರ್ದಿಷ್ಟವಾದ ಉತ್ತರ ಕೊಡಬೇಕು, ನಿರ್ದಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿ, ಎಷ್ಟುದಿವಸದೊಳಗಾಗಿ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ಇವತ್ತಿನದಿವಸ ಆಶ್ವಾಸನೆ ಕೊಡಬೇಕು.

ಶ್ರೀ ಬಿ.ಶಿವಣ್ಣ :– ಮಾನ್ಯ ಉಪಾಧ್ಯಕ್ಷೀಣಿಯರೇ, ಡಾ: ಅಂಬೇಡ್ಕರ್ ಭವನದ ಸಲುವಾಗಿ 1991–92ರಲ್ಲಿ, ಮಾನ್ಯ ಸದಸ್ಯರು ಹೇಳಿದಹಾಗೆ, ಮುಖ್ಯಮಂತ್ರಿಗಳು 21 ಲಕ್ಷ 72 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದರು. ಅದೇ ಪ್ರಕಾರ ಇವತ್ತು ಕೂಡ ಬಜೆಟ್ಟಿನಲ್ಲಿ ಹೇಳಿದ್ದಾರೆ. ಡಾ|| ಅಂಬೇಡ್ಕರ್ ಭವನ ಪೂರ್ಣವಾಗುತ್ತದೆ, ಕೆಲಸ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ತಮ್ಮ ಮೂಲಕ ಸದಸ್ಯ ಮಿತ್ರರಿಗೆ ಹೇಳಬಯಸುತ್ತೇನೆ. ಸಂಪೂರ್ಣವಾಗಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಿಕ್ಕಿದೆ, ನಮ್ಮ ಹತ್ತಿರ ದುಡ್ಡು ಕೂಡ ಸಂಗ್ರಹಣೆ ಮಾಡಿದ್ದೇವೆ, ಕೆಲಸ ಮಾಡುವುದಕ್ಕೆ ಇಂಜಿನಿಯರ್‌ರವರಿಗೂ ಹೇಳಿದ್ದೇವೆ. ನಾನು ಮತ್ತು ಡೈರೆಕ್ಟರ್ ಹಾಗೂ ಸೆಕ್ರೆಟರಿಯವರು ಹೋಗಿ ನೋಡಿದ್ದೇವೆ, ಸ್ಥಳ ಫೈನ್ ಆಗುತ್ತಿದೆ. ಇವತ್ತಲ್ಲ, ನಾಳೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಚೀಫ್ ಇಂಜಿನಿಯರ್‌ರವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ, ಅವರು ವರ್ಕ್ ಪ್ರಾರಂಭಮಾಡುತ್ತಾರೆ, ಕನ್‌ಸ್ಟ್ರಕ್ಷನ್ ಆಗುತ್ತದೆ. 1993–94 ರೊಳಗೆ ಡಾ || ಅಂಬೇಡ್ಕರ್ ಭವನ ಪೂರ್ಣವಾಗುತ್ತವೆ.

ಡಾ|| ಜಿ. ಪರಮೇಶ್ವರ್ :– ಈ ಕಾರಣಕ್ಕಾಗಿ ಆಯವ್ಯಯದಲ್ಲಿ ಹಣ ಒದಗಿಸಿದ್ದರೂ ಕೂಡ ಇಷ್ಟು ವಿಳಂಬ ಆಗಬೇಕಾದರೆ ಇದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ :– ಅವರು ಹೇಳಿದ ಪ್ರಕಾರ ಮೊದಲು ನಾಲ್ಕೂವರೆ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿಕೊಂಡಿದ್ದೆವು. ಆದರೆ, ಚೀಫ್ ಇಂಜಿನಿಯರ್ ಆರ್ಕಿಟೆಕ್ಟ್ ಅವರ ಸಲಹೆ ಮೇರೆಗೆ, ಆದರಲ್ಲಿ ಲೈಬ್ರರಿ, ಆಡಿಟೋರಿಯಂ ಮತ್ತು ಕೆಲವು ಆಫೀಸರಗಳೂ ಇರಬೇಕೆಂದು ಹೇಳಿದ್ದಕ್ಕಾಗಿ, ಈಗ 6 ಕೋಟಿ 50 ಲಕ್ಷಕ್ಕೆ ಬಂದಿದೆ. ಇದು ಪುನಃ ಸರ್ಕಾರದ ಮುಂದೆ ಬರಬೇಕಾಗಿತ್ತು, ಆದರಂತೆ ಕ್ಯಾಬಿನೆಟ್ ಮುಂದೆ ತಂದು, ಮುಖ್ಯಮಂತ್ರಿಗಳೂ ಕೂಡ ಈ ಆರೂವರೆ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಕೊಟ್ಟಿದ್ದಾರೆ, ನಂತರ ಕರ್ನಾಟಕ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಇನ್ನು ಒಂದು ವಾರದಲ್ಲಿ ಕೆಲಸ ಪ್ರಾರಂಭವಾಗುತ್ತದೆಂದು ನಮ್ಮ ಸ್ನೇಹಿತರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮುನಿಸ್ವಾಮಿ :– ಮಾನ್ಯ ಉಪಾಧ್ಯಕ್ಷರೆ, 1988ನೇ ಇಸವಿಯಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದೂ ಮತ್ತು 1989ನೇ ಇಸವಿಯಲ್ಲಿ ಶಂಕುಸ್ಥಾಪನೆ ಮಾಡಿ, ಆಗಿನ ಹಣಕಾಸಿನ ಸಚಿವರಾದ ಶ್ರೀ ರಾಜಶೇಖರಮೂರ್ತಿಯವರು ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ, ಈಗಾಗಲೇ 4 ವರ್ಷಗಳಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಜನ್ಮಶತಾಬ್ದಿ ವರ್ಷ ಮುಗಿಯುತ್ತಾ ಇದೆ. ಇದೇರೀತಿ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳಿಕೊಂಡು ಹೋಗುತ್ತಲೇ ಇದ್ದೀರಿ. ಶ್ರೀಮಾನ್ ಪರಮೇಶ್ವರ್ ಹೇಳಿದಹಾಗೆ, ಇಲ್ಲಿ ಒಂದು ಇಟ್ಟಿಗೆ ಕೂಡ ಇಟ್ಟಿಲ್ಲ. ಇಲ್ಲಿ ಕೊಟ್ಟಿರುವ ಪ್ರಕಾರ ಆರು ಕೋಟಿ ಚಿಲ್ಲರೆ ಹಣವನ್ನು ಒದಗಿಸಿದ್ದೇವೆಂದು ಹೇಳುತ್ತೀರಿ. ಸನ್ಮಾನ್ಯ ಮುಖ್ಯಮಂತ್ರಿಗಳು 20 ಲಕ್ಷ ಒದಗಿಸಿದ್ದೇವೆಂದು ಹೇಳುತ್ತಾರೆ. ಇದರಲ್ಲಿ ಸಂಶಯ ಇದೆ, ಕಟ್ಟಡ ಬರುತ್ತದೆಯೋ ಇಲ್ಲವೋ ಎಂಬ ಒಂದು ರೀತಿಯ ಅಸಮಾಧಾನ ತೋರುತ್ತಿದೆ. ನಮ್ಮ ಸ್ನೇಹಿತರು ಹೇಳಿದಹಾಗೆ, ಸಮಾಜ ಕಲ್ಯಾಣ ಇಲಾಖೆ ಡೆಡ್ ಆಗಿದೆ ಎಂದು ಹೇಳಬಹುದು. ದಯಮಾಡಿ ಮಾನ್ಯಮಂತ್ರಿಗಳು ತಪ್ಪಾಗಿ ತಿಳಿಯಬಾರದು, ತಮ್ಮ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಾ ಇಲ್ಲ, ಡಾ || ಬಾಬಾಸಾಹೇಬ್ ಅಂಬೇಡ್ಕರ್ ರವರ ಜನ್ಮಶತಾಬ್ದಿ ವರ್ಷದಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ, 4 ವರ್ಷ ಆಯಿತು. ಇದರ ಬಗ್ಗೆ ಮಾನ್ಯಮಂತ್ರಿಗಳು ಗಮನಕೊಡುತ್ತಾ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯಮಂತ್ರಿಗಳು ಸದನದಲ್ಲಿ ಆಶ್ವಾಸನೆ ಕೊಟ್ಟು, ನಾಳೆ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ, ದಯಮಾಡಿ, ನನಗೆ ಅವರ ಮೇಲೆ ನಂಬಿಕೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಾಬಾಸಾಹೇಬ್ ಅಂಬೇಡ್ಕರ್‌ರವರಿಗೆ ಅವಮಾನ ಮಾಡುತ್ತೀರೆಂದು ಭಾವಿಸುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್ :– ಮಾನ್ಯ ಉಪಾಧ್ಯಕ್ಷರೇ, ಪ್ರಶ್ನೆ ಕಳುಹಿಸಿರತಕ್ಕ ಡಾ || ಪರಮೇಶ್ವರ್ ರವರು ಹೇಳಿದಂತೆ, ಅಂಕಿಅಂಶಗಳ ಪ್ರಕಾರ 20 ಲಕ್ಷ ಎಂದು ಹೇಳಿ ಒಂದು ವರ್ಷವಾಯಿತು ಮತ್ತೆ ಆರೂವರೆ ಕೋಟಿ ಎಂದು ಒಂದಾಯಿತು, ಮತ್ತೆ ಮಾನ್ಯಮಂತ್ರಿಗಳು ಹೇಳಿದಪ್ರಕಾರ ನಾಲ್ಕೂವರೆ ಕೋಟಿ ಒಂದು ಅಂದಾಜು ಆಯಿತು. ನಾನು ಅಂತಿಮವಾಗಿ ಮಾನ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ಈ ಭವನದ ನಿರ್ಮಾಣಕ್ಕಾಗಿ ಆಯ್ಕೆ ಮಾಡಿರತಕ್ಕ ಸ್ಥಳ ಯಾವುದು ಮತ್ತು ಕೆಲಸ ಪ್ರಾರಂಭ ಮಾಡುವುದಕ್ಕೆ ಇದ್ದಂಥ ತೊಡಕು ಏನು ಎನ್ನುವ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಶಿವಣ್ಣ :– ಅಂತಿಮವಾಗಿ ತಮಗೆ ಹೇಳುತ್ತಿದ್ದೇನೆ, ಬೇಕಾದರೆ ತಾವೆಲ್ಲರೂ ನಾಳೆ ಬನ್ನಿ, ಕಟ್ಟದ ಪ್ರಾರಂಭ ಮಾಡೋಣ, ಎಲ್ಲಾ ರೀತಿಯಲ್ಲೂ ರಡಿಯಾಗಿದೆ, ನನಗೆ ದುಡ್ಡಿನ ಕೊರತೆ ಇಲ್ಲ.

ಶ್ರೀ ಎಂ.ಮುನಿಸ್ವಾಮಿ :– ನಾಳೆಯೇ ಪ್ರಾರಂಭ ಮಾಡುವುದಕ್ಕೆ ನಿಮಗೆ ಏನು ತೊಂದರೆ ಇದೆ, ಇಷ್ಟು ದಿವಸ ಏತಕ್ಕೆ ತಡವಾಯಿತಿ? ಅಂಬೇಡ್ಕರ್‌ರವರನ್ನು ಹೊರಗೆ ಹಾಕಬೇಕೆಂದು ನಿಮಗೆ ಏನಾದರೂ ಇದೆಯೇ? ನಿಮ್ಮ ಇಲಾಖೆಯೇ ಸರಿಯಾಗಿ ಕೆಲಸ ಮಾಡುತ್ತಿಲ್ಲ.

— (ನೊಂದಲ) —

ಉಪಾಧ್ಯಕ್ಷರು :– ಒಬ್ಬೊಬ್ಬರಾಗಿ ಕೇಳಿ ಅವರು ಹೇಳುತ್ತಾರೆ.

ಶ್ರೀ ಬಾಬೂರಾವ್ ಆರ್. ಚವಾಣ್ (ಶಹಾಬಾದ್) :– ಅಂಬೇಡ್ಕರ್ ಭವನಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ತೆಗೆದುಕೊಳ್ಳುವುದಕ್ಕೆ ಎರಡು ವರ್ಷ ಮಾಡುತ್ತೀರಿ, ಮತ್ತೆ ನಮಗೆಲ್ಲಾ

— (ನೊಂದಲ) —

ಶ್ರೀ ಬಾಬೂರಾವ್ ಆರ್. ಚವಾಣ್ : ಅಂಬೇಡ್ಕರ್ ಅವರಂತೆ ನಾವು ಶಾಲೆ ಕಲಿತು ಇಲ್ಲಿಯವರೆಗೆ ಬಂದಿದ್ದೇವೆ, ಮಾನ್ಯ ಮಂತ್ರಿಗಳು ಬಂದಿದ್ದಾರೆ, ನಾವೂ ಕೂಡ ಇಲ್ಲಿಗೆ ಬಂದಿದ್ದೇವೆ, ಅಂಬೇಡ್ಕರ್ ಅವರ ಬಗ್ಗೆ ಮಾನ್ಯ ಸಚಿವರಿಗೆ ಘನತೆ ಗೌರವ ಇದೆ, ನಮಗೂ ಕೂಡ ಇದೆ, ಆದರೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ತೆಗೆದುಕೊಳ್ಳುವುದಕ್ಕೆ ಎರಡು ವರ್ಷ ಆಗಿದೆ, ಇಷ್ಟು ಡಿಲೇ ಮಾಡುತ್ತಾರೆ ಎಂದರೆ ಏನು, ನಮಗೆ 'ರಿಸರ್ವೇಷನ್ ಕೊಡುತ್ತೀರಿ, ಎಲ್ಲಾ ಫೇಸಿಲಿಟೀಸ್ ಕೊಡುತ್ತೀರಿ, 18 ಪರ್ಸೆಂಟ್ ಇದೆ, ಜಲ್ದಿ ಬನ್ನಿ ಎಂದು ಹೇಳುತ್ತೀರಿ, ಆದರೆ ಇದನ್ನು ಕನ್‌ಸ್ಟ್ರಕ್ಷನ್ ಮಾಡುವುದುದಕ್ಕೆ ಏತಕ್ಕೆ ಡಿಲೇ ಮಾಡುತ್ತಿದ್ದೀರಿ? ಅಧಿಕಾರಿಗಳು ಲಾ ಪರವಾ ಮಾಡುತ್ತಿದ್ದಾರೆ ಎಂದರೆ ಅವರನ್ನು ಕೇಳುವುದಕ್ಕೆ ಆಗುವುದಿಲ್ಲವೇ, ತಾವು ಸ್ಟ್ರಾಂಗ್ ಆಗಿ ಕೇಳಿ, ಇದರ ಕನ್‌ಸ್ಟ್ರಕ್ಷನ್ ಏತಕ್ಕೆ ಮಾಡಲಿಲ್ಲ? ಎರಡು

ವರ್ಷ ನಾವು ಇದೇ ರೀತಿ ಹಿಂದಕ್ಕೆ ಬೀಳಬೇಕೇ, ತಾವು ಸ್ಪಷ್ಟವಾಗಿ ಇದರ ಬಗ್ಗೆ ಆದೇಶ ಕಳುಹಿಸಿಕೊಡಿ ಹಾಗೂ ಉತ್ತರ ಕೊಡಬೇಕೆಂದು ಕೇಳುತ್ತೇನೆ.

– (ನೊಂದಲ) –

ಉಪಾಧ್ಯಕ್ಷರು :- ಅವರು ಉತ್ತರ ಹೇಳುತ್ತಿದ್ದಾರೆ ಐನಾಪುರ್ ಅವರೇ ನಿಮ್ಮನ್ನು ಕರೆಯುತ್ತೇನೆ.

- (ನೊಂದಲ) -

ಉಪಾಧ್ಯಕ್ಷರು :- ಶ್ರೀಯುತ ನಾಗಪ್ಪನವರೇ ಸಚಿವರು ಅವರಿಗೆ ಉತ್ತರ ಹೇಳುತ್ತಿದ್ದಾರೆ ಆಮೇಲೆ ತಾವು ಕೇಳಿರಿ.

ಡಾ || ವೈ. ನಾಗಪ್ಪ :- ನಮ್ಮ ಮಂತ್ರಿಗಳು ಹೇಳುತ್ತಾರೆ This Department is not dead, It is living. ಎಂದು Last year under SC/ST schemes Rs.130.00 crores have been allotted, out of that, only Rs.50.00 crores have been spent.

ಉಪಾಧ್ಯಕ್ಷರು :- ಪ್ರಶ್ನೆ ಇರುವುದು ಅಂಬೇಡ್ಕರ್ ಭವನದ ಬಗ್ಗೆ ಮಾತ್ರ.

ಡಾ. ವೈ.ನಾಗಪ್ಪ :- ಅಲ್ಲ ಅಲ್ಲ, ಈ ರೀತಿ ಆದರೆ ಹಳ್ಳಿಗಾಡಿನಲ್ಲಿರತಕ್ಕಂಥ ಎಸ್.ಸಿ., ಎಸ್.ಟಿ., ಜನಗಳ ಗತಿ ಏನು? If you do not provide basic amenities for them... neither the Officers takes interest nor the Government takes interest.

ಉಪಾಧ್ಯಕ್ಷರು :- ಮಿಸ್ಟರ್ ಐನಾಪುರ್

ಡಾ || ವೈ. ನಾಗಪ್ಪ :- ಹೋದವರ್ಷ ಎಸ್.ಸಿ. ಎಸ್.ಟಿ. ಡಿಪಾರ್ಟ್‌ಮೆಂಟ್‌ನಲ್ಲಿ 80 ಕೋಟಿ ರೂಪಾಯಿ ಉಳಿಸಿದ್ದಾರೆ. ಇವರು ಹೇಳುತ್ತಾರೆ ಡಿಪಾರ್ಟ್‌ಮೆಂಟ್ ಬದುಕಿದೆ ಎಂದು, ನಾವು ಕೆಲಸ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು :- ಇದು ಅಂಬೇಡ್ಕರ್ ಭವನದ ಬಗ್ಗೆ ಈಗ ಮಿಸ್ಟರ್ ಐನಾಪುರ್‌ರವರು ಮಾತನಾಡಲಿ.

ಡಾ || ವೈ. ನಾಗಪ್ಪ :- ಅಂಬೇಡ್ಕರ್ ಭವನ ಕಟ್ಟುವುದು ಇರಲಿ, ರೀತಿ ಆದರೆ ಹಳ್ಳಿಗಾಡಿನಲ್ಲಿರತಕ್ಕ ಎಸ್.ಸಿ. / ಎಸ್.ಟಿ. ಜನ ಏನು ಇದ್ದಾರೆ ಅವರ ಗತಿ ಏನು, ಹೋದ ವರ್ಷ ಇದಕ್ಕಾಗಿ 130 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದರೂ under that scheme only Rs.50.00 crores have been spent. What about other eighty crores of rupees? Why it is not spent?

ಶ್ರೀ ಮನೋಹರ್ ಐನಾಪುರ (ಬಳ್ಳಿಗಿ) :- ಮಾನ್ಯ ಸಭಾಧ್ಯಕ್ಷರೇ, ಡಾ || ಪರಮೇಶ್ವರ ಮತ್ತು ನಮ್ಮ ಮುನಿಸ್ವಾಮಿಯವರು ಹೇಳಿದ್ದುದನ್ನು ಸಮರ್ಥಿಸುತ್ತಾ, ಅಂಬೇಡ್ಕರ್ ಭವನಕ್ಕೆ ೆಡಿ ನೇ ಇಸವಿಯಲ್ಲಿ, 89 ನೇ ಇಸವಿಯಲ್ಲಿ ಮತ್ತು 91 ನೇ ಸಾಲಿನಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆ, ಬಿಡುಗಡೆ ಮಾಡುತ್ತಿದ್ದೇವೆ, ಕೆಲಸ ಪ್ರಾರಂಭ ಮಾಡುತ್ತೇವೆ, ನಾಳೆ ಪ್ರಾರಂಭ ಮಾಡುತ್ತೇವೆ, ನಾಳೆ ಬನ್ನಿ ಎಲ್ಲಾ ಕೂಡಿ ಮಾಡೋಣ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅಂಬೇಡ್ಕರ್ ಸೆಂಟಿನರಿ ಸೆಲಬರೇಷನ್ ಇಯರ್ ಮುಕ್ತಾಯವಾಯಿತೋ ಅಥವಾ ಇನ್ನೂ ಕಂಟಿನ್ಯೂ ಮಾಡುತ್ತಾರೋ ಗೊತ್ತಿಲ್ಲ? ಡಾ || ಅಂಬೇಡ್ಕರ್ ಭವನವನ್ನು ನಾಳೆ ಎಷ್ಟರ ಮಟ್ಟಿಗೆ ಪ್ರಾರಂಭ ಮಾಡುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಗಳು ನಿರ್ದಿಷ್ಟವಾಗಿ ಹೇಳಬೇಕು. ವಿಷಕ್ಕೆಂದರೆ ಅಂಬೇಡ್ಕರ್ ಭವನವನ್ನು, ಅಂಬೇಡ್ಕರ್ ಸೆಂಟಿನರಿ ಇಯರ್ ಸೆಲಬರೇಷನ್ ಇಯರ್‌ನಲ್ಲಿ ಪ್ರಾರಂಭ ಮಾಡಿದ್ದೀರಿ, ಕಟ್ಟಡ ಮಾಡುತ್ತೇವೆ ಎಂಬುದನ್ನು ಪದೇ ಪದೇ ಕೇಳುತ್ತಿದ್ದೇವೆಯೇ ಹೊರತಾಗಿ ಅದು ಇನ್ನೂ ಪ್ರಾರಂಭವಾಗಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ನಿರ್ದಿಷ್ಟವಾದ ಉತ್ತರವನ್ನು ಸದನಕ್ಕೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಅಧ್ಯಕ್ಷರೇ, ಅಂಬೇಡ್ಕರ್ ಭವನ ಕಟ್ಟುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ನಾವು ಮಾಡಿಕೊಂಡಿದ್ದೇವೆ, ಈಗಾಗಲೇ ನಾವು ಚೀಫ್ ಎಂಜಿನಿಯರ್‌ರವರನ್ನು ಕರೆಯಿಸಿ ಮಾತನಾಡಿ ಅವರಿಗೆ ಕನ್‌ಸ್ಟ್ರಕ್ಷನ್ ಸ್ಟಾರ್ಟ್ ಮಾಡುವುದಕ್ಕೆ ಹೇಳಿದ್ದೇವೆ. ನಾಳೆ ಕೂಡ ಅದು ಪ್ರಾರಂಭವಾಗಬಹುದು. ಅಲ್ಲಿ ಯಾವ ತೊಂದರೆಯೂ ಇಲ್ಲ ನಮ್ಮ ಸ್ನೇಹಿತರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ, ಅಂಬೇಡ್ಕರ್ ಬವನ ಯಾವತ್ತಿಗೂ ಯಾವ ಕಾಲಕ್ಕೂ ನಿಲ್ಲುವಹಾಗೆ ಇಲ್ಲ ನಾಳೆಯೋ, ನಾಡಿದ್ದೋ ನಮ್ಮ ಚೀಫ್ ಎಂಜಿನಿಯರ್‌ರವರು ಸ್ಟಾರ್ಟ್ ಮಾಡುತ್ತಿದ್ದಾರೆ. ತಾವು ನೋಡಬಹುದೆಂದು ಹೇಳುತ್ತೇನೆ.

ಡಾ|| ವೈ. ನಾಗಪ್ಪ :- ನಾಳೆ ಕನ್‌ಸ್ಟ್ರಕ್ಷನ್ ಸ್ಟಾರ್ಟ್ ಮಾಡುತ್ತೀರಾ ?
(ಉತ್ತರ ಇಲ್ಲ).

ದಸೂಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

735. ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ದಸೂಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಜಿಲ್ಲಾ ಪರಿಷತ್ತಿನ ಅನುಮೋದನೆ ದೊರೆತಿದ್ದರೂ ಸಹ ಇದುವರೆವಿಗೂ ಮಂಜೂರಾತಿ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣವೇನು ?

ಇ) ಆರೋಗ್ಯ ಕೇಂದ್ರ ಸ್ಥಾಪನೆಗೆ ಅನುಮತಿಯನ್ನು ಸರ್ಕಾರ ಎಂದಿನಿಂದ ಕೊಡಲಿಚ್ಚಿಸಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಸಾರ್ವಜನಿಕರು ಹಾಗೂ ಶಾಸಕರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಸಲ್ಲಿಸಿದ ಕೋರಿಕೆ ಹಾಗೂ ಜಿಲ್ಲಾ ಪರಿಷತ್ತಿನಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅವಶ್ಯಕತೆಯಿರುವ ಸ್ಥಳಗಳಿಗೆ ಪ್ರಾಥಮಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

ಇ) 1992-93 ರಲ್ಲಿ ಈ ಪ್ರಸ್ತಾವನೆಯನ್ನು ಪುನರ್ ನವೀಕರಿಸಿದರೆ ಮಂಜೂರಾತಿಯನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆಯವರೇ, ನನ್ನ ಪ್ರಶ್ನೆಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಜಿಲ್ಲಾ ಪರಿಷತ್ ಅನುಮೋದನೆ ದೊರೆತಿದ್ದರೂ ಸಹ ಇದುವರೆಗೆ ಮಂಜೂರಾತಿ ದೊರೆಯದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ವಿಳಂಬವಾಗುವುದಕ್ಕೆ ಕಾರಣ ಏನು? ಮಂಜೂರಾತಿ ಆಗದಿರುವುದಕ್ಕೆ ಎಂದರೆ, ಜಿಲ್ಲಾ ಪರಿಷತ್ತಿನಿಂದ ಬಂದ ಪ್ರಸ್ತಾವನೆಗಳನ್ನು ಪರೀಶಿಲಿಸಿ ಅವಶ್ಯಕತೆ ಇರುವ ಸ್ಥಳಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರಾತಿ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರಿಂದ ಅರ್ಥವಾಗತಕ್ಕದ್ದು ಇಷ್ಟು. ಈಗಾಗಲೇ ಅದ್ಯತೆ ಮೇಲೆ ಕೊಟ್ಟು ಬಿಟ್ಟಿದ್ದಾರೆ, ಈ ಊರಿಗೆ ಕೊಟ್ಟಿಲ್ಲ ಎಂಬ ಅಭಿಪ್ರಾಯ ಹೇಳುತ್ತಿದ್ದಾರೆ. ಅದನ್ನು ನೇರವಾಗಿ ಹೇಳಬಹುದು. ಸನ್ಮಾನ್ಯ ಸಚಿವರಲ್ಲಿ ಒಂದು ವಿಷಯ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏನು ದಸೂಡಿ ಎಂಬ ಊರಿದೆ ಇದು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿದೆ. 1978ನೇ ಜನಗಣತಿ ಆಧಾರದ ಮೇಲೆ ಇದನ್ನು ವೇಕೆಂಟ್ ಬ್ಲಾಕ್ ಎಂದು ಹೇಳಿದ್ದಾರೆ. ಅದರಲ್ಲಿ ಬಹುತೇಕ ಹರಿಜನ ಮಾತ್ರ ಭರತಕ್ಕವರು. ಬೇರೆ ಇನ್ನು ಯಾರೂ ಬರತಕ್ಕವರಲ್ಲ. ಅದು ಒಂದು ಗಡಿ ಪ್ರದೇಶ. ಯಾವ ರೀತಿ ಇದು ಗಡಿ ಅಂದರೆ ಹಿರಿಯೂರು ತಾಲ್ಲೂಕು ಮತ್ತು ಹೊಸದುರ್ಗ ತಾಲ್ಲೂಕುಗಳ ಗಡಿಯಲ್ಲಿರತಕ್ಕಂಥ ಒಂದು ಪ್ರದೇಶ ಅದು. ಗುಡ್ಡಗಾಡು ಪ್ರದೇಶದಲ್ಲಿರತಕ್ಕಂಥವರು ಹಿಂದುಳಿದ ವರ್ಗದ ಜನರು ಅಲ್ಲಿರತಕ್ಕಂಥವರು ಅಲ್ಲಿಗೆ ಆಸ್ಪತ್ರೆ ಕೊಡಬೇಕೆಂದು ಸುಮಾರು 15 ವರ್ಷಗಳಿಂದ ಕೋರಿಕೆ ಇಟ್ಟಿದ್ದಾರೆ. ಅದು ವೇಕೆಂಟ್ ಬ್ಲಾಕ್ ಎಂದು ಹೇಳಿ ಅಂದೆ ತೀರ್ಮಾನ ಆಗಿದೆ. ಮತ್ತು ಈಗಾಗಲೇ 1990-91ನೇ ಸಾಲಿನಲ್ಲಿ ಆಸ್ಪತ್ರೆ ಕೂಡ ಮಂಜೂರಾಗಿದ್ದು ಏತಕ್ಕೋಸ್ಕರ ಅದನ್ನು ಶಿಫ್ಟ್ ಮಾಡುವ ನಿರ್ಧಾರ ಮಾಡಿದರೋ ಗೊತ್ತಿಲ್ಲ. ಬಹುಶಃ ಹರಿಜನ ಮತ್ತು ಗಿರಿಜನರು ಇರತಕ್ಕಂಥ ಕಡೆ ಆಸ್ಪತ್ರೆ ಕೊಡಬಾರದು ಎನ್ನತಕ್ಕಂಥ ನಿಲುವು ಏನಾದರೂ ತೆಗದುಕೊಂಡಿದ್ದೀರೋ ಹೇಗೆ ?

ಉಪಾಧ್ಯಕ್ಷರೆಯವರು :- ಪ್ರಶ್ನೆ ಕೇಳಿ ...

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷೀಣಿಯವರೇ ನಾನು ಇದರಲ್ಲಿ ಉಪಪ್ರಶ್ನೆ ಕೇಳುವುದು ಎನೂ ಇಲ್ಲ, ನೇರವಾಗಿ ಮಂತ್ರಿಗಳ ಉತ್ತರವನ್ನು ಬಯಸುತ್ತೇನೆ. ಆದ್ದರಿಂದ ನಾನು ಒಂದೇ ಸಾರಿ ಕೇಳಿಬಿಡುತ್ತೇನೆ. ದಯಮಾಡಿ ಇಲ್ಲಿ ಹರಿಜನ ಮತ್ತು ಗಿರಿಜನರು ಬಿಟ್ಟು ಬೇರೆ ಜನರು ಇಲ್ಲ, ಈಗಾಗಲೇ ಆಸ್ಪತ್ರೆ ಮಂಜೂರು ಮಾಡಿ ಆಸ್ಪತ್ರೆ ಪ್ರಾರಂಭ ಮಾಡಿ ಬೇರೆ ಕಡೆ ಶಿಫ್ಟ್ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಅದಕ್ಕೆ ಕಾರಣವೇನು ಎಂದು ನಾನು ಕೇಳತಕ್ಕಂಥಾದ್ದು. ಕಾರಣ ತಮಗೂ ಸಹ ಗೊತ್ತಿದೆ. ಅದಕ್ಕೆ ನಾನು ನೇರವಾಗಿ ತಮ್ಮನ್ನು ಕೇಳುತ್ತೇನೆ. ನಿಜವಾಗಿಯೂ ಕೂಡ ಇದನ್ನು ಅದ್ಯತೆ ಮೇಲೆ ನೀವು ಕೊಟ್ಟಿದ್ದೇ ಆದರೆ -ಅದನ್ನು ಬಿಟ್ಟು ಬೇರೆ ಯಾವ ಊರಿಗೂ ಕೊಡುವುದಕ್ಕೂ ಆಗಿಲ್ಲ, ದಯಮಾಡಿ ಒಂದು ಅರಿಕೆ. ದಯಮಾಡಿ ಇನ್ನು ಮೇಲೆ ಇಲಾಖೆಯವನು ಎಷ್ಟೇ ಸಲಹೆ ಕೊಟ್ಟರೂ ಆ ಸಲಹೆಗಳಲ್ಲಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳಬೇಕು. ದಯಮಾಡಿ ಅವರ ಸಲಹೆ ಒಂದು ಕಡೆ ಇಟ್ಟು ಇವತ್ತು ತಾವೇ ಹಿಂದಿನ ಸಭೆಯಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರಂತೆ 1991-92ನೇ ಸಾಲಿನಲ್ಲಿ ಇದನ್ನು ಮಂಜೂರು ಮಾಡಿಕೊಡಬೇಕು. ಹಿಂದೆ ಈ ಮಾತನ್ನು ಹೇಳಿ ಈಗ 1992-93ನೇ ಸಾಲಿನಲ್ಲಿ ಕೊಡುತ್ತೇನೆಂದು ಹೇಳತಕ್ಕಂಥ ಮಾತು ಹೇಳುವುದಾದರೆ ಮಾನ್ಯ ಸಚಿವರು ತಾವೆ ಹಿಂದೆ ಉತ್ತರ ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ದಯಮಾಡಿ ನನ್ನ ಕ್ಷೇತ್ರದ ಮೇಲೆ ಮಾನ್ಯ ಸಚಿವರಿಗೆ ಮನಸ್ಸು ಇದ್ದಂತೆ ಕಾಣುವುದಿಲ್ಲ, ಆ ಮನಸ್ಸು ಬಿಟ್ಟು ಆಸ್ಪತ್ರೆ ಮಂಜೂರು ಮಾಡತಕ್ಕಂಥ ಘೋಷಣೆ ತಾವು ಮಾಡಿದರೆ ನಾನು ನಿಜವಾಗಿಯೂ ಈ ಸರ್ಕಾರವನ್ನು ಮಾನ್ಯ ಸಚಿವರನ್ನು ಮೆಚ್ಚುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಸನ್ಮಾನ್ಯ ಅಧ್ಯಕ್ಷೀಣಿಯವರೇ ಸನ್ಮಾನ್ಯ ಜಯಚಂದ್ರರವರ ಕ್ಷೇತ್ರದ ಬಗ್ಗೆ ನನಗೆ ಅನಾಸಕ್ತಿ ಅಂತೂ ಇಲ್ಲ, ಅವರು ಈ ಸಂಶಯಕ್ಕೆ ಎಡೆ ಕೊಡತಕ್ಕಂಥ ಸಂದರ್ಭ ಯಾವುದೂ ಇಲ್ಲ, ವೈದ್ಯಕೀಯ ಕ್ಷೇತ್ರದಲ್ಲಿ ಮೊನ್ನೆ ತಾನೇ ಕೇಳಿದಂತಹ ಒಂದು ಪ್ರಶ್ನೆಗೆ ಅವರಿಗೆ ಕೊಟ್ಟ ಭರವಸೆಯನ್ನು ನಾವು ಪೂರ್ತಿ ಮಾಡುವ ಹಂತದಲ್ಲಿದ್ದೇವೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಸೇರಿದಂತಹ ದಸೊಡಿ ಗ್ರಾಮ ಎನಿದೆ ಹಿಂದೆ ಅಲ್ಲಿಗೆ ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಿದ್ದು ನಿಜ, ತದನಂತರ ರದ್ದಾಗಿದ್ದುದು ನಿಜ, ಅವರ ಪ್ರಶ್ನೆಯ ಹಿನ್ನೆಲೆಯಲ್ಲಿ ಮುಂದಿನ ಸಾಲಿನಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದುದು ನಿಜ, ಆದರೆ ಈಗಾಗಲೇ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತನೆ ಮಾಡತಕ್ಕಂಥ ಒಂದು ದೊಡ್ಡ ಕಾರ್ಯವನ್ನು ಅವರ ಕ್ಷೇತ್ರಕ್ಕೆ ನಾವು ಮಾಡಿದ್ದೇವೆ. ಅವರ ಒತ್ತಾಯ ಇನ್ನು ಒಂದು ಆಗಬೇಕು ಎನ್ನುವ ಬಯಕೆ ಬಹುಶಃ ಅವರ ಕ್ಷೇತ್ರದಲ್ಲಿ ಸಾಕಷ್ಟು ವೈದ್ಯಕೀಯ ವ್ಯವಸ್ಥೆ ವೈದ್ಯಕೀಯ ಸೌಲಭ್ಯಗಳು ಒದಗಿಸಿ ಕೊಡಬೇಕೆನ್ನುವ ಒಂದು ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದಾರೆ. 1992-93ನೇ ಸಾಲಿನಲ್ಲಿ ಇದ್ದಂತಹ ಗುರಿಯನ್ನು ನಾವು ಈಗಾಗಲೇ ಸಾಧಿಸಿದ್ದೇವೆ. ಪುನಃ 10 ಆರೋಗ್ಯ ಕೇಂದ್ರಗಳನ್ನು ಕೊಡತಕ್ಕಂಥಾದ್ದಕ್ಕೆ ವಿತ್ತೀಯ ಇಲಾಖೆಗೆ ನಮ್ಮ ಇಲಾಖೆಯಿಂದ ಮನವಿ ಕೂಡ ಮಾಡಿದ್ದೇವೆ. ಅದು ಮಂಜೂರಾಗಿ ಬರುವ ನಿರೀಕ್ಷೆಯಲ್ಲಿದೆ. ಅದನ್ನು ಕೂಡ ಮಂಜೂರು ಮಾಡಿ ಕೊಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿದೆ. ಇನ್ನು ಒಂದು ವಾರದಲ್ಲಿ ಕೊಡಿಸಿಕೊಡತಕ್ಕಂಥ ಪ್ರಯತ್ನ ಮಾಡಿದರೆ ನಿಜವಾಗಿಯೂ ನಾನು ನನ್ನ ಕ್ಷೇತ್ರದ ಜನರ ಪರವಾಗಿ ವಂದನೆಗಳನ್ನು ಅರ್ಪಿಸುತ್ತೇನೆ.

ಎಸ್.ಸಿ.ಎಸ್.ಟಿ. ವಿದ್ಯಾರ್ಥಿಗಳಿಗೆ ಐ.ಎ.ಎಸ್. ಪದವಿಗೆ ಟ್ರೈನಿಂಗ್.

759. - ಶ್ರೀ ಆರ್.ಬಿ. ತಿಮ್ಮಾಪುರ್ (ಮುಧೋಳ್) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಐ.ಎ.ಎಸ್. ಪದವಿ ಪಡೆಯಲು ತರಬೇತಿ ಕೊಡುವ ಸರ್ಕಾರದ ಸಂಸ್ಥೆಗಳ ಸಂಖ್ಯೆ ಎಷ್ಟು :

ಅ) ಈ ಸಂಸ್ಥೆಯಿಂದ ಇಲ್ಲಿಯವರೆಗೆ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಆ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಐ.ಎ.ಎಸ್. ನಲ್ಲಿ ತರಬೇತಿ ನೀಡಲು ಬೆಂಗಳೂರು ಇಂದಿರಾನಗರದಲ್ಲಿ 1990 ರಲ್ಲಿ ಪರೀಕ್ಷಾಪೂರ್ವ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಇ) ಇದುವರೆಗೆ ಯಾರೂ ಐ.ಎ.ಎಸ್. ತೇರ್ಗಡೆಯಾಗಿರುವುದಿಲ್ಲ.

ಶ್ರೀ ಆರ್. ಬಿ. ತಿಮ್ಮಾಪುರ್ :– ಮಾನ್ಯ ಅಧ್ಯಕ್ಷರೇ ನನ್ನ 'ಆ' ಪ್ರಶ್ನೆಗೆ ಉತ್ತರವಾಗಿ ಇಲ್ಲಿಯವರೆಗೂ ಒಬ್ಬ ಅಭ್ಯರ್ಥಿಯೂ ಪಾಸಾಗಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಅದಕ್ಕೆ ಕಾರಣವೇನು ಎನ್ನುವುದು ಗೊತ್ತಾಗಲಿಲ್ಲ ? ಸರ್ಕಾರದಿಂದ ಇಲ್ಲಿಯವರೆಗೆ ಈ ಒಂದು ಸಂಸ್ಥೆಗೆ ಎಷ್ಟು ಹಣ ಖರ್ಚು ಆಗಿದೆ ಮತ್ತು ದೆಹಲಿಯಲ್ಲಿ ಐ.ಎ.ಎಸ್. ಗೆ ರಾವ್ ಸ್ಟಡೀ ಇನ್‌ಸ್ಟಿಟ್ಯೂಟ್ ಎಂದು ಇದೆ. ಅಲ್ಲಿಗೆ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಕಳುಹಿಸಿದ್ದೀರಿ. ಕಳುಹಿಸಿಕೊಡದಿದ್ದರೆ ನಮ್ಮ ಸರ್ಕಾರ ಏನಾದರೂ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತದೆಯೇ ಹೇಗೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ. ಶಿವಣ್ಣ :– ಮಾನ್ಯ ಅಧ್ಯಕ್ಷಣೀಯವರೇ ಈ ಐ.ಎ.ಎಸ್. ಕೋಚಿಂಗ್ ಕ್ಲಾಸ್ 1990ರಿಂದ ಬೆಂಗಳೂರಿನಲ್ಲಿ ಇಂದಿರಾನಗರದಲ್ಲಿ ನಾವು ನಡೆಸುತ್ತಿದೇವೆ. ಆದರೆ ಪ್ರಿಲಿಮಿನರಿ ಎಗ್ಜಾಮಿನೇಶನ್‌ಗೆ ಕೊರತಕ್ಕಂಥ ಕ್ಯಾಂಡಿಡೇಟ್ಸ್‌ಗೆ ನಾವು ಕೋಚಿಂಗ್ ಮಾಡಿದರೂ ಕೂಡ ಪ್ರಿಲಿಮಿನರಿ ಎಗ್ಜಾಮಿನೇಶನ್ 1990 ಲ್ಲಿ 49 ಜನ ಕ್ಯಾಂಡಿಡೇಟ್ಸ್‌ಲ್ಲಿ 2 ಮಾತ್ರ ಪ್ರಿಲಿಮನರಿ ಎಗ್ಜಾಮಿನೇಶನ್‌ನಲ್ಲಿ ಪಾಸಾದರು. ಆದರೆ ಮುಂದೆ ಅವರು ಫೈನಲ್ ಎಗ್ಜಾಮಿನೇಶನ್‌ನಲ್ಲಿ ಪಾಸಾಗಲಿಲ್ಲ. ಅದೇ ಪ್ರಕಾರ 90–91 ರಲ್ಲಿ 28 ಕ್ಯಾಂಡಿಡೇಟ್ಸ್‌ಗಳು ಅಪಿಯರ್ ಆದರು. ಆದರೆ ಪ್ರಿಲಿಮಿನರಿಯಲ್ಲೂ ಕೂಡಾ ಪಾಸ್ ಆಗಲಿಲ್ಲ. ಫೈನಲ್‌ನಲ್ಲೂ ಕೂಡ ಪಾಸ್ ಆಗಲಿಲ್ಲ. ಇದಕ್ಕೆ ನಮಗೆ ಇದ್ದಂಥ ಹಣ 7 ಲಕ್ಷದ 29 ಸಾವಿರ. ನಮಗೆ ಈ ಪ್ರಾಜೆಕ್ಟ್ ಸಲುವಾಗಿ ಬಜೆಟ್ ಇದೆ. ನಾವು ಈ ಪ್ರಕಾರ ಖರ್ಚು ಮಾಡುತ್ತೇವೆ. ಆದರೆ ಇದುವರೆಗೂ ಯಾರೂ ಉತ್ತೀರ್ಣ ಆಗಲಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಶ್ರೀ ಮನೋಹರ ಐನಾಪುರ :– ಮಾನ್ಯ ಉಪಾಧ್ಯಕ್ಷೆಯವರೆ, ಒಂದು ವಿಷಯ ಕೇಳಬಯಸುತ್ತೇನೆ. 2–3 ವರ್ಷದಿಂದ ಈ ಟ್ರೈನಿಂಗ್ ಕೋರ್ಸ್‌ನ್ನು ಪ್ರಾರಂಭ ಮಾಡಿದರೂ ಕೂಡ ಒಬ್ಬರೂ ವಿದ್ಯಾರ್ಥಿಗಳು ಉತ್ತೀರ್ಣರಾಗಲಿಲ್ಲ. ಇಲ್ಲಿ ಸರಿಯಾದ ಟ್ಯೂಟರ್ಸ್ ಇಲ್ಲವೊ? ಸರಿಯಾದ ವ್ಯವಸ್ಥೆ ಇಲ್ಲವೊ? ಅಥವಾ ಅಭ್ಯರ್ಥಿಗಳನ್ನು ಸರಿಯಾಗಿ ಸೆಲೆಕ್ಷನ್ ಮಾಡುತ್ತಿಲ್ಲವೊ? ಕಾರಣ ಏನು ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :– ಅಧ್ಯಕ್ಷರೇ, ಇದಕ್ಕೆ ಕಾರಣ ಏನು ಎಂದು ಹೇಳುವುದಕ್ಕೆ ಬರುವ ಹಾಗಿಲ್ಲ. ಇದು ಕ್ಯಾಂಡಿಡೇಟ್ಸ್ ಮೇಲೆ ಡಿಪೆಂಡ್ ಇರುತ್ತದೆ. ಯಾವ ಪ್ರಕಾರ ಓದುತ್ತಾರೆ ? ಏನಿಲ್ಲ ಎಂಬುದು ಮುಖ್ಯ ಅವರು ಸರಿಯಾಗಿ ಓದಿಕೊಂಡು ಪ್ರಯತ್ನ ಪಟ್ಟು ಕಷ್ಟಪಟ್ಟರೆ ಬಹುಶಃ ನನಗನಿಸುತ್ತದೆ, ರಿಸಲ್ಟ್ ಸರಿಯಾಗಿ ಬರುತ್ತದೆ. ಐ.ಎ.ಎಸ್. ಕಾಂಪಿಟಿಟೀವ್ ಎಕ್ಸಾಮಿನೇಷನ್ ಎಂದರೆ ಅಷ್ಟು ಈಸಿ ಅಲ್ಲ. ಬಹಳ ಕಷ್ಟಪಡಬೇಕಾಗುತ್ತದೆ. ಅದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿದ್ದೇವೆ. ಆದರೆ, ಇನ್ನೂ ಏನಾದರೂ ಸಲಹೆಗಳು ಇದ್ದರೆ ತಾವು ಹೇಳಿ ಅದೇ ಪ್ರಕಾರ ನಾವು ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್.ಬಿ.ತಿಮ್ಮಾಪುರ್ :– ಹೈದರಾಬಾದ್‌ನಲ್ಲಿ ಆ ಸರ್ಕಾರದವರು ಎಸ್.ಸಿ., ಎಸ್. ಟಿ. ಹುಡುಗರನ್ನು ಯಾವ ರೀತಿ ಕಳುಹಿಸುತ್ತಾರೋ ಆ ರೀತಿ ನಮ್ಮ ಸರ್ಕಾರದಿಂದ ಕಳುಹಿಸುವುದಕ್ಕೆ ಸಾಧ್ಯ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ :– ಅದು ಒಳ್ಳೆಯ ಸಲಹೆ. ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ರೇಣುಕ ರಾಜೇಂದ್ರನ್ :- ಸನ್ಮಾನ್ಯ ಅಧ್ಯಕ್ಷರೆಯವರೆ, ಖಾಸಗಿಯವರು ನಡೆಸುತ್ತಿರುವ ಅನೇಕ ಸಂಸ್ಥೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಕೊಡತಕ್ಕಂಥ ಈಗಾಗಲೇ ಸುಮಾರು ನಮ್ಮಲ್ಲಿ ಇದ್ದಾವೆ. ರಾವ್ ಟುಟೋರಿಯಲ್ಸ್ ಇದೆ, ಮಂಗಳೂರು ಟುಟೋರಿಯಲ್ಸ್ ಇದೆ. ಹಾಗೆಯೆ ಇನ್ನಿತರ ಟುಟೋರಿಯಲ್ಸ್ ಇದ್ದಾವೆ. ಅಲ್ಲಿ ರಿಸಲ್ಟ್‌ನ್ನು ಚೆನ್ನಾಗಿ ಎಕ್ಸ್‌ಪೋಟ್ಸ್ ಮಾಡಬಹುದು ಮತ್ತು ನೂಕು ನುಗ್ಗಲು, ಅಡ್ಮಿಷನ್ ಸಿಕ್ಕುವುದೇ ಕಷ್ಟ ಎಂದು ಹೇಳುತ್ತಾರೆ. ಅಂಥಾ ಒಂದು ಸಂಸ್ಥೆಯಲ್ಲಿ ಖಾಸಗಿ ವ್ಯಕ್ತಿಗಳ ಮೂಲಕ ನಿಮ್ಮ ವರ್ಗದವರಿಗೆ ತರಬೇತಿ ಪಡೆಯಲಿಕ್ಕೆ ಸರ್ಕಾರ ಮುಂದೆ ಬರುತ್ತದೆಯೇ ಎಂದು ನನ್ನ ಪ್ರಶ್ನೆ.

ಶ್ರೀ ಬಿ. ಶಿವಣ್ಣ : ಒಳ್ಳೆ ಸಲಹೆ, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಆಗಬಹುದು.

ಶ್ರೀ ಬಾಬುರಾವ್ ಆರ್. ಚೌಹಾಣ್ : ಸನ್‌ಮಾನ್ಯ ಅಧ್ಯಕ್ಷೆಯವರೇ ಹರಿಜನ ಗಿರಿಜನ ಸ್ಟೂಡೆಂಟ್ಸ್ ಕಾಂಪಿಟ್ ಮಾಡವುದಕ್ಕೆ ಬಹಳ ಕಷ್ಟ. ಏಕೆ ಕಷ್ಟ ಎಂದರೆ ಅವರಿಗೆ ಒಳ್ಳೆಯ ವಾತಾವರಣ ಸಿಕ್ಕುವುದಿಲ್ಲ, ಒಳ್ಳೆಯ ಫೆಸಿಲಿಟಿ ಸಿಕ್ಕುವುದಿಲ್ಲ. ಆದ್ದರಿಂದ, ಡಿಪಾರ್ಟ್‌ಮೆಂಟಿನಿಂದ ಅವರಿಗೆ ಒಳ್ಳೆಯ ವಾತಾವರಣ, ಒಳ್ಳೆಯ ಒಂದು ಫೀಡಿಂಗ್ ಕೊಡಲಿಕ್ಕೆ ಮಾನ್ಯ ಮಂತ್ರಿಗಳು ಆಸ್ಪದ ಮಾಡಿಕೊಟ್ಟರೆ ಕಾಂಪಿಟಿಟೀವ್ ಎಕ್ಸಾಮಿನೇಷನ್‌ನಲ್ಲಿ ಪಾಸ್ ಆಗುವುದಕ್ಕೆ ಅನುಕೂಲವಾಗುತ್ತದೆ. ಫಾರ್ ಎಕ್ಸಾಂಪಲ್ ಹೈದರಾಬಾದ್ ಕರ್ನಾಟಕದ ಕಡೆಯ ಹುಡುಗರು, ಈ ಹುಡುಗರಿಗೆ ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ ಇದರ ಬಗ್ಗೆ ಗಮನ ಹರಿಸುತ್ತಿರಾ?

ಶ್ರೀ ಬಿ. ಶಿವಣ್ಣ :- ಆಗಬಹುದು.

Permits for supply of Sugarcane

1046. Smt. Damayanthi Bore Gowda (Srirangapattana) :– for Smt. Maljamma (Malavalli) :– Will the Ministerr for Large and Medium Industries be pleased to state –

a) The No. of permits for supply of Sugarcane given to non–oppigedars by the Mysore Sugar Company Ltd.I:
b) Whether the company bear the loss incurred by thee oppigedars:
c) The action taken by the Government for this loss?

Smt. Manorama Madvaraj (Minister for Large and Medium Industries) -

a) 297
b) As there is no loss to oppigedars the question off bearing loss by the company does not arise.
c) Does not arise.

ಶ್ರೀಮತಿ ಮಲ್ಲಾಜಮ್ಮ :– (ಶ್ರೀಮತಿ ದಮಯಂತಿ ಬೋರೇಗೌಡ ಅವರ ಪರವಾಗಿ) : ಮಾನ್ಯ ಉಪಾಧ್ಯಕ್ಷೆಯವರೇ, ನಾನು ಕೇಳಿದ ಪ್ರಕಾರ ಮೈಸೂರು ಸಕ್ಕರೆ ಕಂಪನಿ ನಿಯಮಿತದವರಿಂದ ಒಪ್ಪಿಗೆದಾರರಲ್ಲದವರಿಗೆ ಕಬ್ಬು ಪೂರೈಕೆಗೆ ನೀಡಿದ ಪರವಾನಿಗೆಗಳ ಸಂಖ್ಯೆ ಎಷ್ಟು? ಅದಕ್ಕೆ 297 ಎಂದು ಕೊಟ್ಟಿದ್ದಾರೆ. ಇದರಿಂದ ಒಪ್ಪಿಗೆದಾರರಿಗೆ ಕಬ್ಬು ಈಗಾಗಲೇ 18 ತಿಂಗಳು ಕಬ್ಬು, 16 ತಿಂಗಳು ಕಬ್ಬು ಸ್ಟ್ಯಾಂಡಿಂಗ್ ಕಬ್ಬು ಇರುವುದರಿಂದ ನಾನ್ ಒಪ್ಪಿಗೆದಾರರಿಗೆ ಕಬ್ಬು ಕೊಟ್ಟಿರುವುದರಿಂದ ಒಪ್ಪಿಗೆ ದಾರರಿಗೆ ಅನ್ಯಾಯ ಆಗಿಲ್ಲವೆ? ಇದರಿಂದ ಒಪ್ಪಿಗೆದಾರರಿಗೆ ಆದ ನಷ್ಟವನ್ನು ಕಂಪನಿಯು ಭರಿಸುವುದೇ ಎಂದು ಕೇಳಿರುವುದಕ್ಕೆ As there is no loss to oppegedars, the question of bearing the loss by the company does not arise. ಎಂದು ಕೊಟ್ಟಿದ್ದಾರೆ. ಲಾಸ್ ಇಲ್ಲವೆಂದು ಹೇಗೆ ಹೇಳುತ್ತೀರಿ? ಮತ್ತೆ ಇದುವರೆಗೆ ಒಪ್ಪಿಗೆ ಆಗಿರತಕ್ಕಂಥ ಕಬ್ಬಿಗೆ ಬಾಕಿ ಎಷ್ಟು ಉಳಿದುಕೊಂಡಿದೆ ? ಎಷ್ಟು ಬಾಕಿ ಇದೆ? ಇದಕ್ಕೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡುತ್ತೀರಾ ?

ಶ್ರೀಮತಿ ಮನೋರಮಾ ಮದ್ವರಾಜ್ :– ಮಾನ್ಯ ಸಭಾಧ್ಯಕ್ಷರೆಯವರೆ, ನಮ್ಮ ಮಲ್ಲಾಜಮ್ಮನವರ ಪ್ರಶ್ನೆ ಉತ್ತರ, ಒಪ್ಪಿಗೆದಾರರಿಂದ ಒಟ್ಟು ಶುಗರ್‌ಕೇನ್ ಪರ್ಚೇಸ್ ಮಾಡುವಂತಾದ್ದು 7 ಲಕ್ಷ 80 ಸಾವಿರ 480 ಟನ್. ಅದರಲ್ಲಿ ಈಗಾಗಲೇ 4 ಲಕ್ಷ 88 ಸಾವಿರ ಟನ್ ನಷ್ಟು ಇನ್ನೊಂದು ಶೇಕಡ 20 ಅಡಿಷನಲ್ ಕೇನ್ ಇನ್ನೂ 99 ಸಾವಿರ ಟನ್ ಪಡೆದುಕೊಂಡಿದ್ದೇವೆ. ನಾನ್ ಒಪ್ಪಿಗೆದಾರರಿಂದ ಬರೀ 28 ಸಾವಿರ 897 ಟನ್‌ನ್ನು ಮಾತ್ರ ಪಡೆದುಕೊಂಡಿದ್ದೇವೆ. ಮತ್ತೆ ಒಪ್ಪಿಗೆದಾರರಿಂದ ಬರಬೇಕಾದಂಥ ಶುಗರ್‌ಕೇನ್ ಏನು ಉಂಟು ಅದು ಎರಡೂವರೆ ಲಕ್ಷ ಟನ್ ಮಾತ್ರ. ನಮ್ಮ ಮೈಸೂರು ಶುಗರ್ ಕಂಪನಿಯವರಿಗೆ ಮಾರ್ಚ್, ಏಪ್ರಿಲ್, ಎಂಡ್‌ತನಕ ಶುಗರ್‌ಕೇನ್ ಕ್ರಷ್ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇವೆ. ಅಲ್ಲಿ ಹೊರಗಿನ ರಾಜ್ಯಗಳಿಂದ ಕೂಡ ಶುಗರ್ ಕೇನನ್ನು ಮಂಡ್ಯ ಜಿಲ್ಲೆಯಿಂದ ಕೊಂಡು ಹೋಗುವವರಿಗೆ ಪರ್ಚೇಸ್ ಟ್ಯಾಕ್ಸ್ ಕೂಡ ಈಗ ಎಕ್ಸೆಂಪ್ಟ್ ಮಾಡಿದ್ದೇವೆ ಹಾಗಾಗಿ ಇನ್ನೆರಡು ತಿಂಗಳಲ್ಲಿ ಎಲ್ಲಾ ಪ್ರಾಬ್ಲಂಸ ಸಾಲ್ವ್ ಆಗುವುದರಲ್ಲಿ ಸಂದೇಹವಿಲ್ಲ.

ಶ್ರೀಮತಿ ಮಲ್ಲಾಜಮ್ಮ :– ಮತ್ತೆ ಕಬ್ಬಿನ ದರವನ್ನು ಇನ್ನೂ ನಿಗದಿ ಮಾಡಿಲ್ಲ, ಇದನ್ನು ಯಾವಾಗ ಮಾಡುತ್ತೀರಿ? ನಮ್ಮ ಚಾಮುಂಡೇಶ್ವರಿ ಶುಗರ್ ಕಂಪೆನಿಯವರು 410 ರೂ ಒಂದು ಟನ್ನಿಗೆ ಕೊಡುತ್ತಾ ಇದ್ದಾರೆ. ಮಂಡ್ಯ ಜಿಲ್ಲೆಯಲ್ಲಿರುವ ಮೂರು ಸಕ್ಕರೆ ಕಾರ್ಖಾನೆಗಳು ಬೇರೆ ಬೇರೆ ರೀತಿಯ ದರವನ್ನೂ ಕೊಡುತ್ತಿವೆ. ಆದ್ದರಿಂದ ಕಬ್ಬಿನ ದರವನ್ನು ಇನ್ನೆಷ್ಟು ದಿವಸದಲ್ಲಿ ನಿಗದಿಪಡಿಸುತ್ತೀರಿ ಎಂದು ಹೇಳಬೇಕು.

ಶ್ರೀಮತಿ ಮನೋರಮಾ ಮದ್ವರಾಜ್ :– ಕಬ್ಬಿನ ದರನಿಗದಿಪಡಿಸಿದ್ದೇವೆ. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಬಗ್ಗೆ 380 ರೂಪಾಯಿಗಳನ್ನು ನಿಗದಿ ಮಾಡಿದೆ.

ಶ್ರೀಮತಿ ಮಲ್ಲಾಜಮ್ಮ :– 380 ಅನ್ನು ಮಂಡ್ಯ ಶುಗರ್ ಕಂಪನಿಗೆ ಮಾಡಿದ್ದೀರಾ ಅಥವಾ ಚಾಮುಂಡೇಶ್ವರಿ ಕೆಂಪನಿಗೆ ಮಾಡಿದ್ದೀರಾ ? ಚಾಮುಂಡೇಶ್ವರಿ ಕಂಪನಿಯವರು 410 ರೂ ಕೊಡುತ್ತಾ ಇದ್ದಾರೆ. ಹೀಗೆ ನೀವು ಬೇರೆ ಬೇರೆ ಕಂಪನಿಗಳಿಗೆ ಒಂದೊಂದು ಬೆಲೆ ನಿಗದಿಪಡಿಸಿ ತಾರತಮ್ಯ ಮಾಡುವುದರಿಂದ ರೈತರಿಗೆ ಅನ್ಯಾಯವಾಗುವುದಿಲ್ಲವೇ?

ಶ್ರೀಮತಿ ಮನೋರಮಾ ಮದ್ವರಾಜ್ :– ನಾನು ತಿದ್ದಿಕೊಳ್ಳುತ್ತೇನೆ. ಮೈಸೂರು ಶುಗರ್ ಕಂಪನಿಗೆ 360 ರೂ ನಿಗದಿಪಡಿಸಿದ್ದೇವೆ. ಇದು ಮಿನಿಮವಲ್, ಜಾಸ್ತಿ ಕೊಡುವುದು ಇದ್ದರೆ ಅದು ಕಂಪನಿಯವರಿಗೆ ಬಿಟ್ಟಿದ್ದು. ಚಾಮುಂಡೇಶ್ವರಿ ಖಾಸಗಿಯವರ ಕಂಪನಿಯಾಗಿರುವುದರಿಂದ ನಾವು ಅವರಿಗೆ ದರ ವಿಧಿಸುವ ಹಾಗಿಲ್ಲ, ಕನಿಷ್ಟ 360 ಅವರು ಕೊಡಲೇಬೇಕು, ಅದಕ್ಕಿಂತ ಜಾಸ್ತಿ ಕೊಟ್ಟಿದ್ದರೆ ಅದು ಕಂಪನಿಯವರ ವಿಚಾರ.

ಶ್ರೀ ಎಲ್.ಆರ್. ಶಿವರಾಮೇಗೌಡ :– ಈ ಮಂಡ್ಯ ಜಿಲ್ಲೆಯಲ್ಲಿರುವ ಕಂಪನಿಗಳಿಗಿಂತ ಕಬ್ಬು ಹೆಚ್ಚಾಗಿ ಹೊರಗಿನ ರಾಜ್ಯಗಳಿಗೆ ಹೋಗುತ್ತ ಇದೆ ಹೋದರೂ ಅಲ್ಲೂ ಸಹಿತ ಕಬ್ಬು ತೆಗೆದುಕೊಳ್ಳುವ ಸ್ಥಿತಿ ಇಲ್ಲ. ಕಸದ ಜತೆ ಹಾಕಿ ಇವತ್ತು ಕಬ್ಬಿಗೆ ಬೆಂಕಿ ಹಚ್ಚೊ ಸ್ಥಿತಿ ನೋಡಿದ್ದೇವೆ. ಆದ್ದರಿಂದ ಬೇರೆ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಯಾರಾದರೂ ಮುಂದೆ ಬಂದರೆ ನೀವು ಪರವಾನಗಿ ಕೊಡಿಸುತ್ತೀರಾ?

ಶ್ರೀಮತಿ ಮನೋರಮಾ ಮದ್ವರಾಜ್ :– ಶಿವರಾಮೇಗೌಡರೇನಾದರೂ ಸಹಕಾರಿ ಸೆಕ್ಟಾರ್ ನಲ್ಲಿ ಓಪನ್ ಮಾಡುವುದಾದರೆ ಖಂಡಿತವಾಗಿ ನಾವು ಪರವಾನಗಿ ಕೊಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು :– ಮಾನ್ಯ ಸಚಿವರು ಏನಾದರೂ ಪ್ರಪೋಸಲ್ ಇದ್ದರೆ ಮಾಡ್ತೀವಿ ಅಂತ ಹೇಳಿದರು, ನಮ್ಮ ಇಂಡಿ ತಾಲ್ಲೂಕಿನಲ್ಲಿ ಒಂದು ಪ್ರಪೋಸಲ್ ಈಗಾಗಲೇ ಕೇಂದ್ರಸರ್ಕಾರಕ್ಕೆ ಹೋಗಿದೆ. ಅದನ್ನೇನಾದರೂ ಕನ್‌ಸಿಡರ್ ಮಾಡುತ್ತಾರೇ ಹೇಗೆ ಎಂದು ಸಚಿವರು ಹೇಳಬೇಕು.

ಶ್ರೀಮತಿ ಮನೋರಮಾ ಮದ್ವರಾಜ್ :– ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬಂದರೆ ಖಂಡಿತ ಅದನ್ನು ಪರಿಶೀಲಿಸಿ ನಾವು ಒಪ್ಪಿಗೆ ಕೊಡುತ್ತೇವೆ.

ಬಿಜಾಪುರದಲ್ಲಿ ಶುಶ್ರೂಷಾ ಶಾಲೆಯನ್ನು ತೆರೆಯುವುದು.

855. ಡಾ|| ಆರ್.ಬಿ. ಚೌಧುರಿ (ಸಿಂಧಗಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಿಜಾಪುರದಲ್ಲಿ ಶುಶ್ರೂಷಾ ಶಾಲೆಯನ್ನು ಪ್ರಾರಂಭಿಸಲು ಸರ್ಕಾರದ ಪರಿಶೀಲನೆ ಯಲ್ಲಿದೆಯೇ;
ಆ) ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)–

ಅ) ಹೌದು
ಆ) 1992–93ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಶ್ರೀ ಆರ್.ಬಿ. ಚೌಧುರಿ :- ಈಗಾಗಲೇ ನಮ್ಮ ಬಿಜಾಪುರದಲ್ಲಿ ಒಂದು ನರ್ಸಿಂಗ್ ಸ್ಕೂಲ್ ಇತ್ತು, ಅದನ್ನು ಬೆಳಗಾವಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಕೇಳಿದ್ದೇನೆ. ಅದು ಸುಸಜ್ಜಿತವಾಗಿದ್ದುದು ಬೆಳಗಾವಿಗೆ ಏಕೆ ವರ್ಗವಾಯಿತೆಂದು ಸಚಿವರು ತಿಳಿಸುವರೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ :- 91–92ರಲ್ಲಿ ಎಎನ್ಎಂ ಟ್ರೈನಿಂಗ್ ಸ್ಕೂಲ್‌ನ್ನು ಆರಂಭ ಮಾಡುವುದಕ್ಕೆ ಪ್ರಸ್ತಾವನೆಯನ್ನು ನಾವು ಆರ್ಥಿಕ ಇಲಾಖೆಗೆ ಕಳಿಸಿದ್ದೆವು. ಕೆಲವೊಂದು ಮಾಹಿತಿಗಾಗಿ ಅದು ವಾಪಸ್ ಬಂದಿದ್ದರಿಂದ ಮತ್ತು ಅದಕ್ಕೆ ಸಾಕಷ್ಟು ಹಣವನ್ನು ಆಯವ್ಯಯದಲ್ಲಿ ನಿಗದಿ ಮಾಡದೇ ಇದ್ದುದರಿಂದ ನಿಧಾನವಾಯಿತು. ಆದರೆ ಈ ಸಾರಿ ಅದನ್ನೆಲ್ಲ ಪೂರೈಸಿದ್ದೇವೆ. 92–93ನೇ ಸಾಲಿಗೆ ಬಿಜಾಪುರದಲ್ಲಿ ಈ ಸಲ ಎ.ಎನ್.ಎಂ. ಕೋರ್ಸನ್ನು ತೆಗೆಯುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ.

ಶ್ರೀ ಆರ್.ಬಿ. ಚೌಧುರಿ :- ಈಗಾಗಲೇ ಇದ್ದ ಸ್ಕೂಲನ್ನು ಏಕೆ ವರ್ಗಾಯಿಸಲಾಯಿತೆಂದು ತಿಳಿಯಲಿಲ್ಲ, ಇದು ಉಪಪ್ರಶ್ನೆ.

ಶ್ರೀ. ಜಿ. ಪುಟ್ಟಸ್ವಾಮಿಗೌಡ :- ಅಧ್ಯಕ್ಷಿಣಿಯವರೇ ಏಕೆ ವರ್ಗ ಮಾಡಲಾಗಿದೆ ಎಂದು ಪ್ರಶ್ನಿಸಿದ್ದಾರೆ ಅದಕ್ಕೆ ಸರಿಯಾದ ಮಾಹಿತಿ ನನ್ನಲ್ಲಿಲ್ಲ, ತದನಂತರ ಅವರಿಗೆ ಒದಗಿಸುತ್ತೇನೆ.

ಶ್ರೀ ಆರ್.ಬಿ. ಚೌಧುರಿ :- ಈಗಾಗಲೇ ಅಲ್ಲಿ ಸುಸಜ್ಜಿತ ಕಟ್ಟಡ, ಪೀಠೋಪಕರಣ ಮತ್ತು ಬೋಧಕ ಸಿಬ್ಬಂದಿ ಕೂಡ ಇರುವುದರಿಂದ ಬೇಗನೆ ನರ್ಸಿಂಗ್ ಸ್ಕೂಲನ್ನು ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಚಿವರು ಪರಿಶೀಲಿಸಲಾಗುವುದೆಂದಿದ್ದಾರೆ, ಪರಿಶೀಲಿಸಲಾಗುವುದು ಎಂದರೆ ಈ ಅಕಾಡೆಮಿಕ್ ವರ್ಷದಲ್ಲಿ ಪ್ರಾರಂಭವಾಗುವುದಿಲ್ಲವೆಂದು ನನ್ನ ಭಾವನೆ. ಆದಕ್ಕೆ ಇದೇ ಅಕಾಡಮಿಕ್ ಇಯರ್ ನಲ್ಲೇ ಇದ್ದ ನರ್ಸಿಂಗ್ ಸ್ಕೂಲನ್ನು ಪುನಃ ಪ್ರಾರಂಭಿಸುತ್ತೇವೆ ಎಂದು ಈಗ ಆಶ್ವಾಸನೆ ಏನಾದರೂ ಕೊಡುತ್ತಿದ್ದಾರೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಸರ್ಕಾರ ಪರಿಶೀಲಿಸುತ್ತದೆ ಎಂದರೆ ಮಾಡುತ್ತದೆಯೋ ಇಲ್ಲವೋ ಎಂಬ ಸಂಶಯ ಇದ್ದ ಹಾಗೆ ಕಾಣುತ್ತದೆ. ಪರಿಶೀಲಿಸಲಾಗುತ್ತದೆ ಎಂದರೆ ಅದನ್ನು ಮಾಡುವ ದಿಕ್ಕಿನಲ್ಲಿ ಕಾರ್ಯನಿರತವಾಗಿದೆ. ಆದ್ದರಿಂದ ಖಂಡಿತ ಮಾಡಿಯೇ ಮಾಡುತ್ತೇವೆ ಎಂದು ಹೇಳುತ್ತೇನೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ

877. ಶ್ರೀ. ಹೆಚ್. ಎಸ್. ಪಾಟೀಲ್ (ಕುಷ್ಟಗಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದ ಜಿಲ್ಲಾ ಸ್ಥಳಗಳ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆ ಎಷ್ಟು ಹಾಗೂ ಜಿಲ್ಲಾ ಸ್ಥಳಗಳಲ್ಲಿನ ಹಾಸಿಗೆಗಳ ಸಂಖ್ಯೆ ಕಡಿಮೆ ಇದೆಯೆ;

ಅ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು? ಮತ್ತು ಅದನ್ನು ಸರಿಪಡಿಸಲು ಸರ್ಕಾರ ನಿರ್ದಿಷ್ಟ ಯೋಜನೆಯನ್ನೇನಾದರೂ ರೂಪಿಸಿದೆಯೆ ;

ಆ) ತಾಲ್ಲೂಕು ಕೇಂದ್ರ ಸ್ಥಳಗಳುಳ್ಳ ಆಸ್ಪತ್ರೆಯನ್ನು ಮತ್ತು ಕಂದಾಯ ಉಪವಿಭಾಗಾಧಿಕಾರಿ ಕಛೇರಿ ಸ್ಥಳಗಳುಳ್ಳ ಆಸ್ಪತ್ರೆಗಳನ್ನು ಕ್ರಮವಾಗಿ 30 ಮತ್ತು 50 ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ರಾಜ್ಯ ಸರ್ಕಾರದ ಯೋಜನೆ ಯಾವ ವರ್ಷದಿಂದ ಜಾರಿಯಲ್ಲಿ ತರಲಾಗಿದೆ ;

ಈ) ಈ ಯೋಜನೆಯಿಂದ ಲಾಭ ಪಡೆದಿರುವ ಮತ್ತು ಪಡೆಯದಿರುವ ಸ್ಥಳಗಳಾವುವು ;

ಉ) ಜಿಲ್ಲಾ ಪರಿಷತ್ ಅಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಜಿಲ್ಲಾವಾರು ಪ್ರಾರಂಭಿಸಲಾಗಿರುವ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಅದಕ್ಕೂ ಪೂರ್ವದಲ್ಲಿನ ಸಂಖ್ಯೆ ಎಷ್ಟು ;

ಊ) ರಾಯಚೂರು ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಕೇಂದ್ರಗಳ ವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು ;

ಋ) ಯಾವ ಯಾವ ಸ್ಥಳಗಳ ಆಸ್ಪತ್ರೆಗಳ ವೈದ್ಯಾಧಿಕಾರಿಗಳ ಮತ್ತು ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಯಾವ ಯಾವ ವರ್ಷದಿಂದ ಖಾಲಿಯಾಗಿಯೇ ಉಳಿದಿದೆ (ಪ್ರತಿಯೊಂದು ಆರೋಗ್ಯ ಘಟಕ ಮತ್ತು ಕೇಂದ್ರಗಳ ಪಟ್ಟಿಯನ್ನು ಲಗತ್ತಿಸುವುದು) ;

ೠ) ಈ ಹುದ್ದೆಗಳನ್ನು ಸರ್ಕಾರ ಎಂದು ಭರ್ತಿ ಮಾಡಿಕೊಳ್ಳಲಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 13446, 1000 ಜನ ಸಂಖ್ಯೆಗೆ ಒಂದು ಹಾಸಿಗೆ ಇರಬೇಕೆಂಬ ನಿಯಮಾವಳಿ ಪ್ರಕಾರ ಹಾಸಿಗೆಗಳ ಸಂಖ್ಯೆ ಕಡಿಮೆ ಇದೆ.

ಆ) ಹೆಚ್ಚುವರಿ ಹಾಸಿಗೆಗಳನ್ನು ಹಣದ ಅಭಾವದಿಂದ ಮಂಜೂರು ಮಾಡಲು ಸಾಧ್ಯವಾಗಿಲ್ಲ. ಇದನ್ನು ಸರಿಪಡಿಸಲು ಮಧ್ಯಂತರ ಆಸ್ಪತ್ರೆಗಳ ಅಭಿವೃದ್ಧಿ ಯೋಜನೆ (ಹೊರ ದೇಶಗಳ ನೆರವಿನಿಂದ) ರೂಪಿಸಲಾಗಿದೆ.

ಇ) 1980–81ನೇ ಸಾಲಿನಿಂದ ಜಾರಿಯಲ್ಲಿ ತರಲಾಗಿದೆ.

ಈ) 110 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಾರ್ವಜನಿಕ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ತಾಲ್ಲೂಕು ಕೇಂದ್ರಗಳಲ್ಲಿರುವ 8 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ (ವಿವರಗಳನ್ನು ಅನುಬಂಧ - 1 ಮತ್ತು 2 ರಲ್ಲಿ ಕೊಟ್ಟಿದೆ).

ಉ)

ಜಿಲ್ಲಾ ಪರಿಷತ್ ಅಧಿಕಾರ ಅಸ್ತಿತ್ವಕ್ಕೆ ಬರುವ ಮುನ್ನ ಇದ್ದ ಒಟ್ಟು ಪ್ರಾ.ಆ.ಘಟಕ / ಪ್ರಾ.ಆ. ಕೇಂದ್ರಗಳು		ಜಿಲ್ಲಾಪರಿಷತ್ ಅಧಿಕಾರ ಅಸ್ತಿತ್ವಕ್ಕೆ ಬಂದನಂತರ ಮಂಜೂರಾದ ಪ್ರಾ.ಆ.ಘಟಕ / ಪ್ರಾ.ಆ.ಕೇಂದ್ರಗಳು.	
ಪ್ರಾ.ಆ.ಘಟಕ :	ಪ್ರಾ.ಆ.ಕೇಂದ್ರ	ಪ್ರಾ.ಆ. ಘಟಕ :	ಪ್ರಾ.ಆ. ಕೇಂದ್ರ
1108	465	ಇಲ್ಲ	771
(ವಿವರಗಳನ್ನು ಅನುಬಂಧ - 3 ರಲ್ಲಿ ಕೊಟ್ಟಿದೆ)			

ಊ) ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ 38 ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 40 ವೈದ್ಯರ ಹುದ್ದೆಗಳು ಮಂಜೂರಾಗಿರುತ್ತವೆ.

ಋ) ಅನುಬಂಧ - 4 ರಲ್ಲಿ ಕೊಟ್ಟಿದೆ.

ೠ) ಸಾರ್ವಜನಿಕ ವರ್ಗಾವಣೆಯಲ್ಲಿ ಅಥವಾ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ಸೇವೆಯಲ್ಲಿರುವ ವೈದ್ಯಾಧಿಕಾರಿಗಳಿಂದ ಈ ಖಾಲಿ ಹುದ್ದೆಗಳನ್ನು ತುಂಬಲು ಯತ್ನಿಸಲಾಗುವುದು.

ಅನುಬಂಧ - 1

1980–81ನೇ ಸಾಲಿನಿಂದ 30 : 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿದ ಸ್ಥಳಗಳ ಹೆಸರು.

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ಸ್ಥಳ	ಹಾಸಿಗೆಗಳ ಸಂಖ್ಯೆ	ಷರಾ
1.	ಬೆಂಗಳೂರು	ರಾಮನಗರ	ರಾಮನಗರ	50	
2.	ಬೆಂಗಳೂರು	ಮಾಗಡಿ	ಮಾಗಡಿ	30	
3.	ಬೆಂಗಳೂರು	ಚನ್ನಪಟ್ಟಣ	ಚನ್ನಪಟ್ಟಣ	50	
4.	ತುಮಕೂರು	ಮಧುಗಿರಿ	ಮಧುಗಿರಿ	50	
5.	ತುಮಕೂರು	ಕುಣಿಗಲ್	ಕುಣಿಗಲ್	50	
6.	ಮೈಸೂರು	ಹೆಚ್.ಡಿ.ಕೋಟೆ	ಹೆಚ್.ಡಿ.ಕೋಟೆ	50	
7.	ಮೈಸೂರು	ನಂಜನಗೂಡು	ನಂಜನಗೂಡು	30	
8.	ಮಂಡ್ಯ	ಪಾಂಡವಪುರ	ಪಾಂಡವಪುರ	50	
9.	ಮಂಡ್ಯ	ಕೆ.ಆರ್.ಪೇಟೆ.	ಕೆ.ಆರ್.ಪೇಟೆ	30	
10.	ಕೊಡಗು	ಸೋಮವಾರಪೇಟೆ	ಕುಶಾಲನಗರ	50	
11.	ದಕ್ಷಿಣ ಕನ್ನಡ	ಸುಳ್ಯ	ಸುಳ್ಯ	30	
12.	ಬೆಳಗಾವಿ	ರಾಯಭಾಗ್	ರಾಯಭಾಗ್	30	
13.	ಬಿಜಾಪುರ	ಇಂಡಿ	ಇಂಡಿ	50	
14.	ಬಿಜಾಪುರ	ಸಿಂದಗಿಗೋಳ್	ಸಿಂದಗಿಗೋಳ್	30	
15.	ದಾರವಾಡ	ಕುಂದಗೋಳ್	ಕುಂದಗೋಳ್	30	
16.	ಗುಲ್ಬರ್ಗಾ	ಸೇಡಂ	ಸೇಡಂ	50	
17.	ಗುಲ್ಬರ್ಗಾ	ಜೇವರ್ಗಿ	ಜೇವರ್ಗಿ	30	
18.	ಗುಲ್ಬರ್ಗಾ	ಅಫಜಲ್‌ಪುರ್	ಅಫಜಲ್‌ಪುರ್	30	
19.	ಬೀದರ್	ಬಾಲ್ಕಿ	ಬಾಲ್ಕಿ	30	
20.	ಬೀದರ್	ಔರಾದ್	ಔರಾದ್	30	
21.	ರಾಯಚೂರು	ಯಲ್ಬುರ್ಗಾ	ಯಲ್ಬುರ್ಗಾ	30	
			1981–82		
23.	ಬೆಂಗಳೂರು	ಕನಕಪುರ	ಕನಕಪುರ	50	
24.	ಬಿಜಾಪುರ	ಹುನಗುಂದ	ಇಳಕಲ್	50	
25.	ಧಾರವಾಡ	ರೋಣ	ಗಜೇಂದ್ರ ಗಾಡ್	30	
26.	ಧಾರವಾಡ	ಶಿರಹಟ್ಟಿ	ಲಕ್ಷ್ಮೇಶ್ವರ	30	
27.	ಗುಲ್ಬರ್ಗಾ	ಯಾದ್‌ಗೀರ್	ಗುರುಮಠ್ಕಲ್	30	
28.	ಗುಲ್ಬರ್ಗಾ	ಚಿತ್ತಾಪುರ	ಶಹಬಾದ್	30	
29.	ಗುಲ್ಬರ್ಗಾ	ಯಾದ್‌ಗೀರ್	ಯಾದ್‌ಗೀರ್	50	
			1982 – 83		
29.	ಹಾಸನ	ಬೇಲೂರು	ಬೇಲೂರು	30	

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ಸ್ಥಳ	ಹಾಸಿಗೆಗಳ ಸಂಖ್ಯೆ	ಷರಾ
30.	ಬೆಳಗಾವಿ	ಬೈಲಹೊಂಗಲ್	ಬೈಲಹೊಂಗಲ್	50	
31.	ಬೆಳಗಾವಿ	ಚಿಕ್ಕೋಡಿ	ಚಿಕ್ಕೋಡಿ	50	
32.	ಬಿಜಾಪುರ	ಮುಧೋಳ್	ಮುಧೋಳ್	30	
33.	ಬೆಂಗಳೂರು	ದೇವನಹಳ್ಳಿ	ದೇವನಹಳ್ಳಿ	30	
34.	ಕೋಲಾರ	ಮುಳಬಾಗಿಲು	ಮುಳಬಾಗಿಲು	30	
35.	ತುಮಕೂರು	ಶಿರ	ಶಿರ	30	
36.	ಮೈಸೂರು	ಟಿ.ನರಸೀಪುರ	ಟಿ.ನರಸೀಪುರ	30	
37.	ಮಂಡ್ಯ	ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ	30	
38.	ದಕ್ಷಿಣ ಕನ್ನಡ	ಬೆಳ್ತಂಗಡಿ	ಬೆಳ್ತಂಗಡಿ	30	
39.	ಹಾಸನ	ಅರಕಲಗೂಡು	ಅರಕಲಗೂಡು	30	
40.	ಉತ್ತರಕನ್ನಡ	ಸಿದ್ದಾಪುರ	ಸಿದ್ದಾಪುರ	30	
41.	ಉತ್ತರಕನ್ನಡ	ಹಳಿಯಾಳ್	ಹಳಿಯಾಳ್	30	
42.	ಗುಲ್ಬರ್ಗ	ಚಿತ್ತಾಪುರ	ಚಿತ್ತಾಪುರ	30	
43.	ಬಳ್ಳಾರಿ	ಹಡಗಲಿ	ಹಡಗಲಿ	30	
			1984 – 85		
44.	ತುಮಕೂರು	ಗುಬ್ಬಿ	ಗುಬ್ಬಿ	30	
45.	ಹಾಸನ	ಆಲೂರು	ಆಲೂರು	30	
46.	ಬಳ್ಳಾರಿ	ಕೂಡ್ಲಗಿ	ಕೂಡ್ಲಗಿ	30	
47.	ಧಾರವಾಡ	ನವಲಗುಂದ್	ನವಲಗುಂದ್	30	
48.	ಚಿತ್ರದುರ್ಗ	ಜಗಳೂರು	ಜಗಳೂರು	50	
49.	ಕೋಲಾರ	ಬಾಗೇಪಲ್ಲಿ	ಬಾಗೇಪಲ್ಲಿ	50	
50.	ಕೋಲಾರ	ಜಿಂತಾಮಣಿ	ಚಿಂತಾಮಣಿ	50	
51.	ಕೋಲಾರ	ಶ್ರೀನಿವಾಸಪುರ	ಶ್ರೀನಿವಾಸಪುರ	50	
52.	ಕೋಲಾರ	ಮಾಲೂರು	ಮಾಲೂರು	30	
53.	ಕೋಲಾರ	ಶಿಡ್ಲಘಟ್ಟ	ಶಿಡ್ಲಘಟ್ಟ	30	
54.	ಮಂಡ್ಯ	ಮದ್ದೂರು	ಮದ್ದೂರು	50	
55.	ಮಂಡ್ಯ	ಮಳವಳ್ಳಿ	ಮಳವಳ್ಳಿ	50	
56.	ಚಿತ್ರದುರ್ಗ	ಮೊಳಕಾಲ್ಮೂರು	ಮೊಳಕಾಲ್ಮೂರು	30	
57.	ಚಿತ್ರದುರ್ಗ	ಹೊಳಲ್ಕೆರೆ	ಹೊಳಲ್ಕೆರೆ	30	
58.	ಶಿವಮೊಗ್ಗ	ಹೊಸನಗರ	ಹೊಸನಗರ	30	
59.	ತುಮಕೂರು	ಕೊರಟಗೆರೆ	ಕೊರಟಗೆರೆ	30	
60.	ತುಮಕೂರು	ಪಾವಗಡ	ಪಾವಗಡ	30	
61.	ಉತ್ತರ ಕನ್ನಡ	ಕುಮಟಾ	ಕುಮಟಾ	30	

ಭಾ.ಜ.ಸ. ಯೋಜನೆಯಡಿಯಲ್ಲಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ಸ್ಥಳ	ಹಾಸಿಗೆಗಳ ಸಂಖ್ಯೆ	ಷರಾ
62.	ಧಾರವಾಡ	ಬ್ಯಾಡಗಿ	ಬ್ಯಾಡಗಿ	30	
63.	ಧಾರವಾಡ	ಮುಂಡರಗಿ	ಮುಂಡರಗಿ	30	
64.	ಧಾರವಾಡ	ಶಿಗ್ಗಾಂವ	ಶಿಗ್ಗಾಂವ	30	
65.	ಧಾರವಾಡ	ಸವಣೂರು	ಸವಣೂರು	30	
66.	ಧಾರವಾಡ	ಹಿರೇಕೆರೂರು	ಹಿರೇಕೆರೂರು	30	
67.	ಧಾರವಾಡ	ರೋಣ	ರೋಣ	30	
68.	ಧಾರವಾಡ	ಹಾನಗಲ್	ಹಾನಗಲ್	30	
69.	ಧಾರವಾಡ	ನರಗುಂದ್	ನರಗುಂದ್	30	
70.	ಬೆಳಗಾವಿ	ಸೌಂದತ್ತಿ	ಎರಗಟ್ಟಿ	30	
71.	ಬೆಳಗಾವಿ	ಖಾನ್‌ಪುರ	ಖಾನ್‌ಪುರ	30	
72.	ಬೆಳಗಾವಿ	ಬೈಲಹೊಂಗಲ	ಕಿತ್ತೂರು	30	
73.	ಬೆಳಗಾವಿ	ರಾಮದುರ್ಗ	ರಾಮದುರ್ಗ	30	
74.	ಬೆಳಗಾವಿ	ಹುಕ್ಕೇರಿ	ಹುಕ್ಕೇರಿ	30	
75.	ಬೆಳಗಾವಿ	ಅಥಣಿ	ಅಥಣಿ	30	
76.	ಬಿಜಾಪುರ	ಜಮಖಂಡಿ	ರಬಕವಿಬನಹಟ್ಟಿ	30	
		ಬಾದಾಮಿ	ಬಾದಾಮಿ	30	
77.	ಬಿಜಾಪುರ	ಮುದ್ದೇಬಿಹಾಳ್	ಮುದ್ದೇಬಿಹಾಳ್	30	
78.	ಬಿಜಾಪುರ	ಮುದ್ದೇಬಿಹಾಳ್	ತಾಳೀಕೋಟಿ	30	
79.	ಗುಲ್ಬರ್ಗ	ಸೇಡಂ	ಮುಧೋಳ್	30	
80.	ಗುಲ್ಬರ್ಗ	ಆಳಂದ್	ಎಂ.ಹಿಪ್ಪರಗಿ	30	
81.	ಗುಲ್ಬರ್ಗ	ಜೇವರ್ಗಿ	ನಿಂದರ್ಗ	30	
82.	ಗುಲ್ಬರ್ಗ	ಚಿತ್ತಾಪುರ	ಕಾಳಗಿ	30	
83.	ಗುಲ್ಬರ್ಗ	ಚಿಂಚೋಳಿ	ಚಿಂಚೋಳಿ	30	
84.	ರಾಯಚೂರು	ದೇವದುರ್ಗ	ದೇವದುರ್ಗ	30	
85.	ರಾಯಚೂರು	ಸಿಂಧನೂರು	ಸಿಂಧನೂರು	30	
86.	ರಾಯಚೂರು	ಯಲ್ಬುರ್ಗ	ಕುಕ್ಕನೂರು	30	
87.	ರಾಯಚೂರು	ಮಾನ್ವಿ	ಮಾನ್ವಿ	30	
88.	ರಾಯಚೂರು	ಗಂಗಾವತಿ	ಗಂಗಾವತಿ	30	
89.	ರಾಯಚೂರು	ಕುಷ್ಟಗಿ	ಕುಷ್ಟಗಿ	30	
90.	ಬೀದರ್	ಹುಮ್ನಾಬಾದ್	ಮನ್ನೇಖಹಳ್ಳಿ	30	
			1990–91		
91.	ದಕ್ಷಿಣ ಕನ್ನಡ	ಬಂಟ್ವಾಳ	ಬಂಟ್ವಾಳ	30	
92.	ಶಿವಮೊಗ್ಗ	ಸೊರಬ	ಸೊರಬ	50	
93.	ಬೆಂಗಳೂರು (ಗ್ರಾ)	ನೆಲಮಂಗಲ	ನೆಲಮಂಗಲ	50	

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ಸ್ಥಳ	ಹಾಸಿಗೆಗಳ ಸಂಖ್ಯೆ	ಷರಾ
94.	ಶಿವಮೊಗ್ಗ	ಹೊನ್ನಾಳಿ	ಹೊನ್ನಾಳಿ	30	
95.	ತುಮಕೂರು	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	30	
96.	ತುಮಕೂರು	ತುರುವೇಕೆರೆ	ತುರುವೇಕೆರೆ	30	
97.	ಚಿತ್ರದುರ್ಗ	ಚಳ್ಳಕೆರೆ	ನಾಯಕನಹಳ್ಳಿ	30	
98.	ಉತ್ತರಕನ್ನಡ	ಅಂಕೋಲಾ	ಅಂಕೋಲಾ	30	
99.	ಉತ್ತರಕನ್ನಡ	ಅಂಕೋಲಾ	ಅಂಕೋಲಾ	30	
100.	ಉತ್ತರಕನ್ನಡ	ಮುಂಡಗೋಡು	ಮುಂಡಗೋಡು	30	
101.	ಧಾರವಾಡ	ಶಿರಹಟ್ಟಿ	ಶಿರಹಟ್ಟಿ	30	
102.	ಧಾರವಾಡ	ಕಲಘಟಗಿ	ಕಲಘಟಗಿ	30	
103.	ಬಿಜಾಪುರ	ಬಿಳಗಿ	ಬಿಳಗಿ	30	
104.	ಚಿಕ್ಕಮಗಳೂರು	ನರಸಿಂಹರಾಜಪುರ	ನರಸಿಂಹರಾಜಪುರ	30	
105.	ಮೈಸೂರು	ಗುಂಡ್ಲುಪೇಟೆ	ಬ್ಯಳ್ಳಿ	30	
106.	ಮೈಸೂರು	ಕೆ.ಆರ್.ನಗರ	ಸಾಲಿಗ್ರಾಮ	30	
107.	ಬೆಂಗಳೂರು (ಗ್ರಾಮಾಂತರ)	ಹೊಸಕೋಟೆ	ಹೊಸಕೋಟೆ	30	
108.	ಹಾಸನ	ಹಾಸನ	ದುದ್ದ	30	
109.	ಮಂಡ್ಯ	ಮದ್ದೂರು	ಕೆ.ಎಂ. ದೊಡ್ಡಿ	30	

ಅನುಬಂಧ - 2

ಮೇಲ್ದರ್ಜೆಗೇರಿಸಬೇಕಾಗಿರುವ ಆಸ್ಪತ್ರೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಮೇಲ್ದರ್ಜೆಗೇರಿಸಬೇಕಾದ ಸ್ಥಳ	ಈಗ ಇರುವ ಹಾಸಿಗೆಗಳ ಸಂಖ್ಯೆ
1.	ಕೋಲಾರ	ಗುಡಿಬಂಡೆ	16
2.	ಬೆಂಗಳೂರು (ನ)	ಆನೇಕಲ್	16
3.	ಮೈಸೂರು	ಯಳಂದೂರು	6
4.	ಚಿಕ್ಕಮಗಳೂರು	ಶೃಂಗೇರಿ	8
5.	ಉತ್ತರಕನ್ನಡ ಜಿಲ್ಲೆ	ಅಂಕೋಲ	22
6.	ಬಳ್ಳಾರಿ	ಹಗರಿಬೊಮ್ಮನಹಳ್ಳಿ	10
7.	ಬಳ್ಳಾರಿ	ಸಿರಗುಪ್ಪ	24
8.	ರಾಯಚೂರು	ಕೊಪ್ಪಳ	18

ಅನುಬಂಧ - 3

ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ದಿನಾಂಕ : 1–4–87 ರಿಂದ ಹಿಂದೆ ಇದ್ದ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕ : ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಅನಂತರ ಮಂಜೂರಾದ ಪ್ರಾಥಮಿಕ ಆರೋಗ್ಯ ಘಟಕ : ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜಿಲ್ಲಾವಾರು.

ಕ್ರ. ಸಂ.	ಜಿಲ್ಲೆ	ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ದಿನಾಂಕ 1–4–87 ರಿಂದ ಹಿಂದೆ ಇದ್ದ ಪ್ರಾ.ಆ.ಘ : ಪ್ರಾ.ಆ.ಕೇಂ.		ಜಿಲ್ಲಾಪರಿಷತ್ಅಸ್ತಿತ್ವಕ್ಕೆ ಬಂದ ದಿನಾಂಕ : 1–4–87 ರಿಂದ ಇರುವ ಪ್ರಾ.ಆ.ಘ.: ಪ್ರಾ.ಆ.ಕೇಂ.	
		ಪ್ರಾ.ಆ.ಘಟಕ :	ಪ್ರಾ.ಆ.ಕೇಂದ್ರ	ಪ್ರಾ.ಆ.ಘಟಕ.:	ಪ್ರಾ.ಆ.ಕೇಂದ್ರ
1.	ಬೆಂಗಳೂರು	54	10	–	14
2.	ಬೆಂಗಳೂರು (ಗ್ರಾ)	50	21	–	27
3.	ಚಿತ್ರದುರ್ಗ	78	21	–	42
4.	ತುಮಕೂರು	76	25	–	49
5.	ಶಿವಮೊಗ್ಗ	78	20	–	37
6.	ಕೋಲಾರ	66	27	–	37
7.	ಬೆಳಗಾವಿ	36	34	–	71
8.	ಬಿಜಾಪುರ	35	33	–	42
9.	ಉತ್ತರ ಕನ್ನಡ	36	21	–	27
10.	ಧಾರವಾಡ	62	38	–	43
11.	ಗುಲ್ಬರ್ಗ	44	34	–	37
12.	ರಾಯಚೂರು	37	23	–	37
13.	ಬಳ್ಳಾರಿ	36	19	–	25
14.	ಬೀದರ್	21	17	–	16
15.	ಮೈಸೂರು	98	32	–	80
16.	ಮಂಡ್ಯ	64	19	–	31
17.	ಹಾಸನ	77	21	–	36
18.	ಚಿಕ್ಕಮಗಳೂರು	56	17	–	20
19.	ಕೊಡಗು	16	7	–	18
20.	ದಕ್ಷಿಣಕನ್ನಡ	66	26	–	82
	ಒಟ್ಟು	1108	465	–	771

ಅನುಬಂಧ - 4

ರಾಯಚೂರು ಜಿಲ್ಲೆಯಲ್ಲಿರುವ ವಿವಿಧ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳ ವಿವರ.

ಕ್ರಮ. ಸಂಖ್ಯೆ	ಸ್ಥಳ	ಹುದ್ದೆ ಹೆಸರು	ಖಾಲಿ ಹುದ್ದೆ ಇರುವ ದಿನಾಂಕ
1.	ಪ್ರಾ.ಆ.ಕೇಂದ್ರ, ಮಠಮಾರಿ	ವೈದ್ಯಾಧಿಕಾರಿ	ಡಿಸೆಂಬರ್ 91
2.	ಪ್ರಾ.ಆ.ಕೇಂದ್ರ, ಹನುಮನಾಳ	ವೈದ್ಯಾಧಿಕಾರಿ	ಜೂನ್ 91
3.	ಪ್ರಾ.ಆ.ಕೇಂದ್ರ, ಸಂತ್ ಕಲ್ಲೂರ್	ವೈದ್ಯಾಧಿಕಾರಿ	ಜೂನ್ 91
4.	ಪ್ರಾ.ಆ.ಕೇಂದ್ರ, ಬಳಗನೂರು	ವೈದ್ಯಾಧಿಕಾರಿ	ಅಕ್ಟೋಬರ್ 91
5.	ಪ್ರಾ.ಆ.ಕೇಂದ್ರ, ಕನಕಗಿರಿ	ವೈದ್ಯಾಧಿಕಾರಿ	ಜೂನ್ 91
6.	ಪ್ರಾ.ಆ.ಕೇಂದ್ರ, ಆಸೆಹೊಸೂರು	ವೈದ್ಯಾಧಿಕಾರಿ	ಅಕ್ಟೋಬರ್ 91
7.	ಪ್ರಾ.ಆ. ಘಟಕ, ಹನುಮಸಾಗರ	ವೈದ್ಯಾಧಿಕಾರಿ	ಡಿಸೆಂಬರ್ 91
8.	ಪ್ರಾ.ಆ.ಕೇಂದ್ರ, ಕೆ.ಪುರ	ವೈದ್ಯಾಧಿಕಾರಿ	ಮಾರ್ಚ್ 91
9.	ಎಲ್.ಸಿ.ಡಿ.ಆರ್. ರಾಯಚೂರು	2 ಹುದ್ದೆಗಳು	ಜುಲೈ 90
10.	ಸಾರ್ವಜನಿಕ ಆಸ್ಪತ್ರೆ, ಕುಷ್ಟಗಿ	ವೈದ್ಯಾಧಿಕಾರಿ	ನವೆಂಬರ್ 91
11.	ಸಾರ್ವಜನಿಕ ಆಸ್ಪತ್ರೆ, ಮಾನ್ವಿ	ಮಹಿಳಾ ವೈದ್ಯಾಧಿಕಾರಿ	ಮಾರ್ಚ್ 91
12.	ಪ್ರಾ.ಆ.ಕೇಂದ್ರ, ಕುನಾಳ	ಮಹಿಳಾ ವೈದ್ಯಾಧಿಕಾರಿ	ಮಾರ್ಚ್ 91
13.	ಪ್ರಾ.ಆ.ಕೇಂದ್ರ,ಕನಕಗಿರಿ	ಮಹಿಳಾ ವೈದ್ಯಾಧಿಕಾರಿ	ಜೂನ್ 90
14.	ಸಾರ್ವಜನಿಕ ಆಸ್ಪತ್ರೆ, ದೇವದುರ್ಗ	ಮಹಿಳಾ ವೈದ್ಯಾಧಿಕಾರಿ	ಜೂನ್ 91
15.	ಪ್ರಾ.ಆ.ಕೇಂದ್ರ,ಹಿರೇಸಿಂದೋಗಿ	ಮಹಿಳಾ ವೈದ್ಯಾಧಿಕಾರಿ	ಜುಲೈ 91
16.	ಪ್ರಾ.ಆ.ಕೇಂದ್ರ, ತಾವರಗೆರ	ಮಹಿಳಾ ವೈದ್ಯಾಧಿಕಾರಿ	ಜುಲೈ 91
17.	ಸರಕಾರಿ ಹೆರಿಗೆ ಕೇಂದ್ರ, ತದಕಲ್	ಮಹಿಳಾ ವೈದ್ಯಾಧಿಕಾರಿ	ಅಕ್ಟೋಬರ್ 91
18.	ಪ್ರಾ.ಆ.ಕೇಂದ್ರ, ಕುಕ್ಕನೂರು	ಮಹಿಳಾ ವೈದ್ಯಾಧಿಕಾರಿ	ಸೆಪ್ಟೆಂಬರ್ 91
19.	ಪ್ರಾ.ಆ.ಕೇಂದ್ರ, ಮಂಗಳೂರು	ಮಹಿಳಾ ವೈದ್ಯಾಧಿಕಾರಿ	ಅಕ್ಟೋಬರ್ 91
20.	ಸಾರ್ವಜನಿಕ ಆಸ್ಪತ್ರೆ, ಮಾನ್ವಿ	ದಂತ ವೈದ್ಯರು	ಜುಲೈ 87
21.	ಸಾರ್ವಜನಿಕ ಆಸ್ಪತ್ರೆ, ಸಿಂಧನೂರು	ದಂತ ವೈದ್ಯರು	ಏಪ್ರಿಲ್ 91
22.	ಸಾರ್ವಜನಿಕ ಆಸ್ಪತ್ರೆ, ಕೆ. ಪುರ.	ದಂತ ವೈದ್ಯರು	ಅಕ್ಟೋಬರ್ 91
23.	ಸಾರ್ವಜನಿಕ ಆಸ್ಪತ್ರೆ, ಯಲ್‌ಬುರ್ಗ	ದಂತ ವೈದ್ಯರು	ಜುಲೈ 87
24.	ಸಾರ್ವಜನಿಕ ಆಸ್ಪತ್ರೆ, ದೇವದುರ್ಗ	ದಂತ ವೈದ್ಯರು	ಜುಲೈ 87
25.	ಸಾರ್ವಜನಿಕ ಆಸ್ಪತ್ರೆ, ಲಿಂಗಸೂಗೂರು	ದಂತ ವೈದ್ಯರು	18-7-87
26.	ಸಾರ್ವಜನಿಕ ಆಸ್ಪತ್ರೆ, ದೇವದುರ್ಗ	ಉಪಶಸ್ತ್ರ ಚಿಕಿತ್ಸಕರು	ಆಗಸ್ಟ್ 91
27.	ಸಾರ್ವಜನಿಕ ಆಸ್ಪತ್ರೆ, ಕುಷ್ಟಗಿ	ಉಪಶಸ್ತ್ರ ಚಿಕಿತ್ಸಕರು	ಸೆಪ್ಟೆಂಬರ್ 91
28.	ಸಾರ್ವಜನಿಕ ಆಸ್ಪತ್ರೆ, ಮಾನ್ವಿ	ಉಪಶಸ್ತ್ರ ಚಿಕಿತ್ಸಕರು	ನವೆಂಬರ್ 91

ಶ್ರೀ ಹೆಚ್.ಎಸ್.ಪಾಟೀಲ್ :– ನನ್ನ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕ ಜನುಮಸಾಗರ, ಸಾರ್ವಜನಿಕ ಆಸ್ಪತ್ರೆ ಕೊಟಿಗೆಯಲ್ಲಿ ಎರಡು ವೈದ್ಯಾಧಿಕಾರಿಗಳು ಮತ್ತು ಉಪಶಸ್ತ್ರ ಚಿಕಿತ್ಸಕ ಇಷ್ಟೆಲ್ಲ ಹುದ್ದೆಗಳು 1990 ರಿಂದ ಖಾಲಿ ಇದ್ದು ಕೊಟಿಗೆ ಜನರಲ್ ಆಸ್ಪತ್ರೆಯಲ್ಲಿ ರೋಗದಿಂದ ಪ್ರತಿ ಮೂರು ನಾಲ್ಕು ದಿವಸಕ್ಕೆ ಅಪಘಾತ ಒಂದು ಸಂಭವಿಸಿ ಕೇವಲ ಒಬ್ಬ ಮಹಿಳಾ ವೈದ್ಯಾಧಿಕಾರಿ ಇದ್ದು, ಅವರ ಗಂಡನೂ ಕೂಡ ಸೇವೆಯಲ್ಲಿದ್ದು ಸಸ್ಪೆಂಡಾಗಿದ್ದಾರೆ. ಮಹಿಳಾ ವೈದ್ಯಾಧಿಕಾರಿಗಳು ಗಂಡನ ಜೊತೆ ಹೊರಟು ಹೋಗಿದ್ದಾರೆ, ಹೀಗಾಗಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳೇ ಇರುವುದಿಲ್ಲ. ಮೊನ್ನೆ ಒಬ್ಬ ರೋಗಿ ಯಾವ ವೈದ್ಯಾಧಿಕಾರಿಯೂ ಇಲ್ಲದಿದ್ದುದಕ್ಕೆ ಅಸುನೀಗಿದ್ದಕ್ಕೆ ಸಾರ್ವಜನಿಕರು ಅತ್ಯುಗ್ರ ಪ್ರತಿಭಟನೆ ಮಾಡಿ, ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹೆಲ್ತ್ ಕೂಡ ಅಲ್ಲಿಗೆ ಬಂದಿದ್ದರು. ಅವರಿಗೆ ಉತ್ತರ ಕೊಡುವ ಪರಿಸ್ಥಿತಿಯಲ್ಲಿ ನಾವಿದ್ದಿಲ್ಲ. ಅದನ್ನು ಸಚಿವರು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ, ಶುಶ್ರೂಷ ಕಾರ್ಯಕ್ರಮ ಮಾಡಿ, ಮನೆಮನೆಗೆ ಹೋಗಿ ಜನಕ್ಕೆ ವೈದ್ಯಕೀಯ ಉಪಚಾರ ಕೊಡಿ ಎನ್ನುವುದನ್ನು ಬಜೆಟ್ ಭಾಷಣದಲ್ಲಿ ನಮ್ಮ ಸರ್ಕಾರ ಹೇಳಿದೆ. ಆದರೆ ಈ ಒಂದು ಜನರಲ್ ಆಸ್ಪತ್ರೆಯಲ್ಲಿ ಇವತ್ತು ವೈದ್ಯಾಧಿಕಾರಿ ಇಲ್ಲವೆಂದರೆ ಅದು ಬಹಳ ನೋವಿನ ಸಂಗತಿ. ಅದಕ್ಕೆ ಕೂಡಲೇ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿ, ಸಾರ್ವಜನಿಕ ವರ್ಗಾವಣೆಯಲ್ಲಿ ನೇಮಕಾತಿ ಮಾಡುತ್ತೇವೆಂದು ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿಯವರೆಗೆ ಕಾಯುವ ಶಕ್ತಿ ನಮಗಿಲ್ಲ ಮತ್ತು ಜನತೆಗೂ ಸಹಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತೀವ್ರವಾಗಿ ವೈದ್ಯಕೀಯ ಅಧಿಕಾರಿಯನ್ನು ನೇಮಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ವೈದ್ಯರ ಕೊರತೆ ರಾಜ್ಯವ್ಯಾಪೀ ಸಮಸ್ಯೆ. ಹಲವಾರು ಬಾರಿ ಇದು ಇಲ್ಲಿ ಚರ್ಚೆಯಾಗಿದೆ. ಇದನ್ನು ತುಂಬುವ ಕಾರ್ಯದಲ್ಲಿ ಇಲಾಖೆ ಸಾಕಷ್ಟು ಶ್ರದ್ಧಾಭಕ್ತಿಯಿಂದ ಕಾರ್ಯ ಮಾಡುತ್ತಾ ಬಂದಿದ್ದರೂ ಕೂಡ ಈ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಸನ್ಮಾನ್ಯ ಪಾಟೀಲರು ಹೇಳಿದಂತೆ ಅವರು ಹೇಳಿದ ಘಟ್ಟನೆಯ ಹಿನ್ನೆಲೆಯಲ್ಲಿ ಅವರ ಕೇಂದ್ರಕ್ಕೆ ಆದಷ್ಟು ಬೇಗ ವೈದ್ಯರನ್ನು ಭರ್ತಿ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :– ಜಿಲ್ಲಾ ಆಸ್ಪತ್ರೆಗಳಿಗೆ ಹಾಸಿಗೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಶ್ರೀಮತಿ ನಾಗರತ್ನಮ್ಮನವರು ಆರೋಗ್ಯ ಮಂತ್ರಿಯಾಗಿದ್ದಾಗಿನಿಂದಲೂ, ಮನೋರಮಾ ಮಧ್ವರಾಜ್ ಆರೋಗ್ಯ ಸಚಿವೆಯಾಗಿದ್ದಾಗಿನಿಂದಲೂ ಆತ್ಮಾನಂದರು ನಾವೆಲ್ಲರೂ ಸಹಿತ ಮಂಡ್ಯ ಜಿಲ್ಲಾ ಆಸ್ಪತ್ರೆಯನ್ನು 250 ಹಾಸಿಗೆ ಇರುವುದನ್ನು 500 ಕ್ಕೆ ಏರಿಸಬೇಕೆಂದು ಸತತವಾಗಿ ಬೇಡಿಕೆ ಮಾಡಿಕೊಳ್ಳುತ್ತಾ ಬಂದಿದ್ದೇವೆ. ದಯಮಾಡಿ ತಮ್ಮ ಕಾಲದಲ್ಲಾದರೂ, ತಾವು ಮಂಡ್ಯ ಜಿಲ್ಲೆಯ ಪಕ್ಕದಲ್ಲಿದ್ದೀರಿ - ಬಹಳ ಕಷ್ಟ ಇದೆ ಜನಕ್ಕೆ ತೊಂದರೆ, ಇವತ್ತು ಮರದಡಿಯಲ್ಲೆಲ್ಲಾ ಹಾಸಿಗೆ ಹಾಕುವ ಪರಿಸ್ಥಿತಿ ಬಂದಿದೆ. ಆದಕ್ಕೆ ಈ ಆಸ್ಪತ್ರೆಯನ್ನೂ 500 ಹಾಸಿಗೆಗೆ ಏರಿಸುವ ಉದ್ದೇಶವನ್ನು ತಾವು ಸದನದಲ್ಲಿ ಘೋಷಣೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಉಪಾಧ್ಯಕ್ಷೆಣಿಯವರೇ, ಜನಸಂಖ್ಯೆಗೆ ಅನುಗುಣವಾಗಿ ಜಿಲ್ಲಾಮಟ್ಟದ ಆಸ್ಪತ್ರೆಗಳ ಹಾಸಿಗೆಯ ಗಾತ್ರವನ್ನು ಹೆಚ್ಚು ಮಾಡಬೇಕು ಎನ್ನತಕ್ಕಂಥ ಒಂದು ಗುರಿ ಸರ್ಕಾರಕ್ಕೆ ಇರುವುದೇನೋ ನಿಜ. ಒಂದು ಸಾವಿರ ಪ್ರಜಾಸಂಖ್ಯೆಗೆ ಒಂದು ಹಾಸಿಗೆಯನ್ನು ಮಾಡಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿನ ಒಂದು ಆದೇಶ ಕೂಡ ಉಂಟು. ಆ ಹಿನ್ನೆಲೆಯಲ್ಲಿ ಕೆಲಸ ಮಾಡುವುದಕ್ಕೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯಿಂದ ಸಾಧ್ಯವಾಗಿಲ್ಲ. ಅದರ ಹಿನ್ನೆಲೆಯಲ್ಲಿ ವಿಶ್ವಬ್ಯಾಂಕಿನ ನೆರವನ್ನು ಪಡೆದು ಈ ಕೊರತೆಯನ್ನು ನೀಗುವುದಕ್ಕೆ ಒಂದು ಪ್ರಾಜೆಕ್ಟ್‌ನ್ನು ನಾವು ತಯಾರು ಮಾಡಿದ್ದೇವೆ. ಆ ಪ್ರಾಜೆಕ್ಟ್‌ನ್ನು ಈಗಾಗಲೇ ಕೇಂದ್ರ ಸರ್ಕಾರದ ಪರಿಶೀಲನೆಗೋಸ್ಕರ ಕಳುಹಿಸಿದ್ದೇವೆ. ಕೆಲವೊಂದು ಅಬ್ಜೆಕ್ಷನ್‌ಗಳು ಎಂದು ನಾವು ಏನು ಹೇಳುತ್ತೇವೆ, ಅವುಗಳನ್ನು ಹಾಕಿ ವಾಪಸ್ ಬಂದು ಅದನ್ನು ಪೂರ್ತಿ ಮಾಡತಕ್ಕಂಥ ಹಂತದಲ್ಲಿದ್ದೇವೆ. ಅದು ಏನಾದರೂ ಕೂಡ ಪೂರ್ತಿಯಾದಾಗ ಸುಮಾರು 200 ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಈ ಯೋಜನೆ ಮಂಜೂರಾಗಿ ವಿಶ್ವಬ್ಯಾಂಕಿನ ನೆರವು ಸಿಕ್ಕಿದಾಗ ಸನ್ಮಾನ್ಯ ಶಿವರಾಮೇಗೌಡರು ಹೇಳಿದ ಹಾಗೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳನ್ನು ಅವುಗಳ ಹಾಸಿಗೆಗಳ ಗಾತ್ರವನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದರೆ ಅವರಿಗೆ ಮಂಡ್ಯ ಜಿಲ್ಲಾ ಆಸ್ಪತ್ರೆ ಒಂದರ ಮೇಲೆಯೇ ಹೆಚ್ಚು ಆಸಕ್ತಿ ಇದ್ದಂತೆ ಕಾಣುತ್ತದೆ. ಆದುದರಿಂದ ಅದನ್ನು ನಾವು ಹೆಚ್ಚು ಮಾಡುವುದಕ್ಕೆ ಈಗಾಗಲೇ ಒಂದು ಕಮಿಟಿಯನ್ನು ಮಾಡಿ ಜಿಲ್ಲಾ

ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಅವರು ತಮ್ಮ ವರದಿಯನ್ನೂ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ನಮ್ಮ ಆರೋಗ್ಯ ನಿರ್ದೇಶಕರು ಅದನ್ನು ತಪಾಸಣೆ ಮಾಡತಕ್ಕಂಥ ಹಂತದಲ್ಲಿದ್ದಾರೆ. ಅದರ ಬಗ್ಗೆ ಸರ್ಕಾರ ಕೂಡ ಶೀಘ್ರದಲ್ಲೇ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಬಾಬುರಾವ್ ಆರ್. ಚವ್ಹಾಣ್ :– ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ, ಒಂದು ಸಾವಿರ ಜನಸಂಖ್ಯೆ ಇದ್ದಲ್ಲಿ ಒಂದು ಹಾಸಿಗೆಯನ್ನು ಮಾಡುತ್ತೇವೆ ಎಂದು ಉತ್ತರವನ್ನು ಹೇಳುವಾಗ ಹೇಳಿದ್ದಾರೆ. ಒಂದು ಸಾವಿರ ಜನಸಂಖ್ಯೆಗೆ ಒಂದು ಬೆಡ್ ಎಂದು ಹೇಳಿದರೆ ಬಹಳ ಪ್ರಾಬ್ಲಮ್ ಆಗುತ್ತದೆ. ಅದನ್ನು ಸಡಿಲಿಸುವುದಕ್ಕಾಗುವುದಿಲ್ಲವೇ? 500 ಜನಸಂಖ್ಯೆ ಇರುವಲ್ಲಿ ಒಂದು ಬೆಡ್ ಎಂದು ಮಾಡುವುದಕ್ಕೆ ತಾವೇನಾದರೂ ಆದೇಶವನ್ನು ಕೊಡುತ್ತೀರಾ? ಅದನ್ನು ಸಡಿಲಿಸುವುದಕ್ಕಾಗುವುದಿಲ್ಲವೇ?

ಶ್ರೀ. ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಉಪಾಧ್ಯಕ್ಷೆಯವರೇ, ಒಂದು ಸಾವಿರ ಪ್ರಜಾಸಂಖ್ಯೆಗೆ ಒಂದರಂತೆ ಮಾಡುವುದಕ್ಕೆ ನಮ್ಮ ಹತ್ತಿರ 200 ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಸನ್ಮಾನ್ಯ ಸ್ನೇಹಿತರು ಹೇಳಿದ ಹಾಗೆ 500 ಕ್ಕೆ ಒಂದು ಮಾಡುವುದಾದರೆ ಬಹುಶಃ ಅದನ್ನು ನಾವು ಡಬಲ್ ಮಾಡಬೇಕಾಗುತ್ತದೆ ಎಂದು ಕಾಣುತ್ತದೆ. 400 ಕೋಟಿ ರೂಪಾಯಿ ಆಗಬೇಕಾಗಬಹುದು. ಆದರೆ ಒಂದು ಸಾವಿರಕ್ಕೆ ಒಂದು ಹಾಸಿಗೆ ಎನ್ನತಕ್ಕಂಥದ್ದನ್ನು ನಿಗದಿ ಮಾಡಿರುವುದು ರಾಷ್ಟ್ರೀಯ ವೈದ್ಯಕೀಯ ಪರಿಷತ್ತು. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಎಂದು ಏನು ಇದೆ, ಅವರುಗಳ ನಾರ್ಮ್ಸ್ ಪ್ರಕಾರ ಆ ರೀತಿ ಮಾಡಬೇಕು ಎಂದು ಇದೆ, ಇದನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಅಂತೂ ಜಿಲ್ಲಾ ಆಸ್ಪತ್ರೆಗಳ ಹಾಸಿಗೆಗಳ ಗಾತ್ರ ಹೆಚ್ಚಾಗಬೇಕು, ವೈದ್ಯಕೀಯ ಸವಲತ್ತು ಹೆಚ್ಚಾಗಬೇಕು. ಹೊಸ ಹೊಸ ಉಪಕರಣಗಳನ್ನು ನಾವು ಅಳವಡಿಸತಕ್ಕಂಥದ್ದರ ಮೂಲಕ ಆರೋಗ್ಯವನ್ನು ಕಾಪಾಡುವುದಕ್ಕೆ ಸರ್ಕಾರ ತೀವ್ರವಾದ ಪ್ರಯತ್ನವನ್ನು ಮಾಡುತ್ತದೆ. ಸರ್ಕಾರ ವಿಶ್ವಬ್ಯಾಂಕಿನ ನೆರವನ್ನು ಪಡೆದುಕೊಳ್ಳುವುದಕ್ಕೆ ವಿಶೇಷವಾದಂಥ ಆಸಕ್ತಿಯನ್ನು ವಹಿಸಿದೆ ಎನ್ನತಕ್ಕಂಥದ್ದನ್ನು ಅವರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದಲ್ಲಿ 1990–91ನೇ ಸಾಲಿನಲ್ಲಿ ರೇಷ್ಮೆ ಅಭಿವೃದ್ಧಿ

28. ಶ್ರೀ ಇಳ್ಳಲ್ ವಿಜಯಕುಮಾರ್ (ಹೊಸದುರ್ಗ) :– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ 1990–91ನೇ ಸಾಲಿನಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಹೊಸ ಯೋಜನೆಗಳಾವುವು? ಮತ್ತು ಅದಕ್ಕಾಗಿ ಖರ್ಚಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರ ತಿಳಿಸುವುದು)

ಆ) ಹಾಗಿದ್ದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ತಾಲ್ಲೂಕಾವಾರು ಕೈಗೊಂಡಿರುವ ಕ್ರಮ ಮತ್ತು 1990–91ನೇ ಸಾಲಿನಲ್ಲಿ ಖರ್ಚಾದ ಹಣವೆಷ್ಟು?

ಇ) ಹೊಸದುರ್ಗ ತಾಲ್ಲೂಕಿನಲ್ಲಿ ನಿಗದಿತ ಯೋಜನೆ ಕಾರ್ಯಗತ ಆಗದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :–

ಅ) ರಾಜ್ಯದಲ್ಲಿ 1990–91ನೇ ಸಾಲಿನಲ್ಲಿ ಹಾಲಿ ಇರತಕ್ಕಂತಹ ಯೋಜನೆಗಳಲ್ಲದೆ ಎರಡು ಹೊಸ ಯೋಜನೆಗಳಿಗಾಗಿ ಒಟ್ಟು ರೂ.242.15 ಲಕ್ಷ ಖರ್ಚಾಗಿದೆ. ವಿವರ ಈ ಕೆಳಕಂಡಂತಿದೆ.

1)	ಕರ್ನಾಟಕ ರೇಷ್ಮೆ ಯೋಜನೆ 2ನೇ ಹಂತ :	232.93
2)	ರೋಗ ನಿಯಂತ್ರಣ ಕಾರ್ಯಕ್ರಮಗಳು	9.22
	ಒಟ್ಟು	242.15

ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಲಾಗಿದೆ.

ಅ) 1990–91 ರಲ್ಲಿ ಒಟ್ಟು ರೂ.7,07,169–00 ಈ ಯೋಜನೆಗಳಿಗೆ ಖರ್ಚಾಗಿದೆ. ವಿವರಗಳನ್ನು ಅನುಬಂಧ 'ಆ' ನಲ್ಲಿ ಒದಗಿಸಿದೆ.

ಇ) 10 ಎಕರೆ ಜಮೀನನ್ನು ರೇಷ್ಮೆ ಕೃಷಿ ಕ್ಷೇತ್ರ ಸ್ಥಾಪನೆಗೆ ತೆಗೆದುಕೊಂಡಿದೆ. ಕ್ಷೇತ್ರ ಸ್ಥಾಪನೆ ಕಾರ್ಯಗತ ಮಾಡಲಾಗುವುದು.

ಅನುಬಂಧ 'ಅ'

1990–91ನೇ ಸಾಲಿನ ಹೊಸ ಯೋಜನೆಗಳ ಜಿಲ್ಲಾವಾರು ವೆಚ್ಚದ ವಿವರ.

ಕ್ರಮ ಸಂಖ್ಯೆ	ಜಿಲ್ಲೆ	ಕರ್ನಾಟಕ ರೇಷ್ಮೆ ಕೃಷಿ ಯೋಜನೆ	ಎರಡನೇ ಹಂತ	
1.	ಬೆಂಗಳೂರು ನಗರ ಜಿಲ್ಲೆ	94,15,493–00	2,41,949–00	96,57,442–00
2.	ಬೆಂಗಳೂರು ಗ್ರಾಮಾಂತರ ಜಿಲ್ಲೆ	18,600–00	1,13,157–00	1,31,157–00
3.	ಬೆಳಗಾಂ	14,000–00	–	14,000–00
4.	ಬಳ್ಳಾರಿ	6,95,814–00	–	6,95,814–00
5.	ಚಿಕ್ಕಮಗಳೂರು	16,812–00	–	16,812–00
6.	ಚಿತ್ರದುರ್ಗ	7,07,169–00	–	7,07,169–00
7.	ದಕ್ಷಿಣಕನ್ನಡ	1,500–00	–	1,500–00
8.	ಧಾರವಾಡ	8,15,000–00	–	8,15,000–00
9.	ಕೊಡಗು	3,80,500–00	–	3,80,500–00
10.	ಕೋಲಾರ	12,48,000–00	4,71,531–00	17,19,531–00
11.	ಮಂಡ್ಯ	20,48,576–00	95,649–00	21,44,225–00
12.	ಮೈಸೂರು	41,44,975–00	–	41,44,975–00
13.	ರಾಯಚೂರು	71,000–00	–	71,000–00
14.	ಹಾಸನ	3,29,980–00	–	3,29,980–00
15.	ತುಮಕೂರು	25,69,576–00	–	25,69,576–00
16.	ಉತ್ತರ ಕನ್ನಡ	8,16,000–00	–	8,16,000–00
	ಒಟ್ಟು	2,32,92,996–00	9,22,286–00	2,42,15,282–00

ಅನುಬಂಧ 'ಆ'

ಚಿತ್ರದುರ್ಗ ಜಿಲ್ಲೆಯ ಹೊಸ ಯೋಜನೆಗಳ ತಾಲ್ಲೂಕುವಾರು ವಿವರ (ಕರ್ನಾಟಕ ರೇಷ್ಮೆ ಕೃಷಿ ಯೋಜನೆ ಎರಡನೇ ಹಂತ)

ಕ್ರಮ ಸಂಖ್ಯೆ	ಕಾರ್ಯಕ್ರಮ	ಸಿಬ್ಬಂದಿ ವೆಚ್ಚ	ಸಿವಿಲ್ ಕಾಮಗಾರಿಗಳು	ಮೊತ್ತ
	ದಾವಣಗೆರೆ ತಾಲ್ಲೂಕು			
1.	ತೋಳಹುಣಸೆಗ್ರಾಮದಲ್ಲಿಸ್ಥಾಪಿಸಿರುವ ತರಬೇತಿ ಶಾಲೆಯನ್ನು ಸದೃಢಪಡಿಸುವುದು.	ರೂ.2.80 ಲಕ್ಷ	ರೂ.3.00 ಲಕ್ಷ	ರೂ.5.80 ಲಕ್ಷ
	ಚಿತ್ರದುರ್ಗ ತಾಲ್ಲೂಕು			
2.	ಮಾರಘಟ್ಟ ಗ್ರಾಮದಲ್ಲಿ ಸ್ಥಾಪಿಸಿರುವ ಪಿ2 ರೇಷ್ಮೆಕೃಷಿ ಕ್ಷೇತ್ರವನ್ನು ಬಲಪಡಿಸುವುದು.	ರೂ.0.08 ಲಕ್ಷ	ರೂ.1.19 ಲಕ್ಷ	ರೂ.1.27 ಲಕ್ಷ
	ಎರಡು ತಾಲ್ಲೂಕು ಸೇರಿ ಒಟ್ಟು	ರೂ.2.88 ಲಕ್ಷ	ರೂ.4.19ಲಕ್ಷ	ರೂ.7.07ಲಕ್ಷ.

ಶ್ರೀ ಇಲ್ಕಲ್ ವಿಜಯಕುಮಾರ್ :- ಮಾನ್ಯ ಉಪಾಧ್ಯಕ್ಷರೆಯವರೇ, ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ಹತ್ತು ಎಕರೆ ಜಮೀನನ್ನು ರೇಷ್ಮೆ ಕೃಷಿ ಕ್ಷೇತ್ರ ಸ್ಥಾಪನೆ ತೆಗೆದುಕೊಂಡಿದೆ, ಕ್ಷೇತ್ರ ಸ್ಥಾಪನೆ ಕಾರ್ಯಗತ ಮಾಡಲಾಗುವುದು ಎಂದು ಹೇಳಿ ಉತ್ತರ ಕೊಟ್ಟಿದ್ದೀರಿ. ಈ ಕ್ಷೇತ್ರವನ್ನು ತೆಗೆದುಕೊಂಡು ಎಷ್ಟು ವರ್ಷವಾಯಿತು? ಎಷ್ಟು ವರ್ಷದಿಂದ ಅದು ಕಾರ್ಯಗತವಾಗದೇ ಉಳಿದಿದೆ? ನಾನು ಹೇಳುತ್ತೇನೆ ಇದರಿಂದ ಅಕ್ಕಪಕ್ಕದಲ್ಲಿರತಕ್ಕಂಥ ಜನರಿಗೆ ತೊಂದರೆಯಾಗಿದೆ. ತಾವು ಯಾವಾಗ ಅಲ್ಲಿ ಕ್ಷೇತ್ರ ಕಾರ್ಯಾರಂಭವನ್ನು ಮಾಡುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ವಿ. ಮುನಿಯಪ್ಪ :- ಮಾನ್ಯ ಉಪಾಧ್ಯಕ್ಷರೆಯವರೇ, 1989-90ರಲ್ಲಿ ರೆವಿನ್ಯೂ ಇಲಾಖೆಯಿಂದ ಹತ್ತು ಎಕರೆ ಜಮೀನನ್ನು ಇಲಾಖೆಗೆ ನಾವು ಪಡೆದುಕೊಂಡಿದ್ದೇವೆ. ಇದರ ಬಗ್ಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಡುವುದಕ್ಕೆ ಜಿಲ್ಲಾ ಪರಿಷತ್ತಿನವರನ್ನು ಕೇಳುತ್ತಿದ್ದೇನೆ. ಮುಂದೆ, ಏಪ್ರಿಲ್ ನಿಂದ ಅದಕ್ಕೆ ಬೇಕಾದಂಥ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಇಲ್ಕಲ್ ವಿಜಯಕುಮಾರ್ :- ರೇಷ್ಮೆ ಕೃಷಿ ಕ್ಷೇತ್ರಕ್ಕೆ ತೆಗೆದು ಕೊಂಡಂಥ ಜಮೀನು ಈಗಾಗಲೇ ಅದು ಬಗರ್ ಹುಕುಂ ಜಮೀನು ಎಂದು ಹೇಳಿ ಅರ್ಜಿಗಳನ್ನು ಕೆಲವರು ರೈತರು ಸಲ್ಲಿಸಿದ್ದಾರೆ. ರೇಷ್ಮೆ ಇಲಾಖೆಯವರಿಗೆ ಕೂಡ ಅಲ್ಲಿ ಜಮೀನು ಇದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಈ ತಾಲ್ಲೂಕಿನಲ್ಲಿ ಕೆಲಸ ಮಾಡತಕ್ಕಂಥವರಿಗೆ ಗೊತ್ತಿಲ್ಲ. ತಾವು ಅದಷ್ಟು ಬೇಗನೆ ಕ್ರಮ ತೆಗೆದುಕೊಂಡು ಏಪ್ರಿಲ್ ತಿಂಗಳಿಂದ ಪ್ರಾರಂಭ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ :- ಖಂಡಿತಾ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್ ತೆರೆಯಲು ಬಂದ ಅರ್ಜಿಗಳ ಸಂಖ್ಯೆ

1018. ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1991-92ನೇ ಸಾಲಿನಲ್ಲಿ ಮೈಸೂರು ಹಾಗೂ ನಂಜನಗೂಡು ತಾಲ್ಲೂಕುಗಳಲ್ಲಿ ಪ್ರೌಢಶಾಲೆಗಳ ಮತ್ತು ಕಾಲೇಜು ವಿದ್ಯಾರ್ಥಿಗಳ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲ್ ತೆರೆಯಲು ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಮಂಜೂರಾಗಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ;
ಇ) ವಿದ್ಯಾರ್ಥಿಗಳು ಹಾಸ್ಟೆಲ್‌ಗಳ ಸೌಲಭ್ಯವಿಲ್ಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;
ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಯಾವುದೇ ಅರ್ಜಿಗಳು ಬಂದಿರುವುದಿಲ್ಲ.
ಆ) ಉದ್ಭವಿಸುವುದಿಲ್ಲ.
ಇ) ಉದ್ಭವಿಸುವುದಿಲ್ಲ.
ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಶ್ರೀನಿವಾಸಯ್ಯ :- ಮಾನ್ಯ ಉಪಾಧ್ಯಕ್ಷೀಣಿಯವರೇ, 1991–92ನೇ ಸಾಲಿನಲ್ಲಿ ಮೈಸೂರು ಹಾಗೂ ನಂಜನಗೂಡು ತಾಲ್ಲೂಕುಗಳಲ್ಲಿ ಪ್ರೌಢಶಾಲೆಗಳ ಮತ್ತು ಕಾಲೇಜು ವಿದ್ಯಾರ್ಥಿಗಳ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲ್ ತೆರೆಯಲು ಮಂಜೂರಾತಿಗಾಗಿ ಅರ್ಜಿಗಳು ಬಂದಿವೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಇದರಲ್ಲಿ ಮಂಜೂರಾತಿಯಾಗಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ 'ಇಲ್ಲ' ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳು ಹಾಸ್ಟೆಲ್‌ಗಳ ಸೌಲಭ್ಯವಿಲ್ಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಕಳೆದ ವರ್ಷ ಹಾಸ್ಟೆಲ್ ಬೇಕೆಂದು ಹೋರಾಟವನ್ನು ನಡೆಸಿದಾಗ ಅದರ ಬಗ್ಗೆ ನನ್ನನ್ನು ಅರೆಸ್ಟ್ ಮಾಡಿದಾಗ ತಾವೇ ನನ್ನ ಸಹಾಯಕ್ಕೆ ಬಂದು ನನ್ನನ್ನು ಬಿಡಿಸಿಕೊಳ್ಳುವುದಕ್ಕೆ ತಾವೇ ಕಾರಣ ಕರ್ತರಾಗಿದ್ದಿರಿ. ಇಷ್ಟೆಲ್ಲಾ ಆದರೂ ಕೂಡ ಅದು ನನ್ನ ಗಮನಕ್ಕೆ ಬಂದಿಲ್ಲವೆಂದು ಸಚಿವರು ಹೇಳುತ್ತಿದ್ದಾರೆ. ತಾವು ಮತ್ತೆ ಅದನ್ನು ಪರಿಶೀಲಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಉಪಾಧ್ಯಕ್ಷೀಣಿಯವರೆ, 1991–92ರಲ್ಲಿ ನಂಜನಗೂಡಿಗೆ ಒಂದು ಹಾಸ್ಟೆಲ್‌ನ್ನು ಕೊಡಲಾಗಿದೆ. ಇನ್ನೇನಾದರೂ ಬೇಕಾಗಿತ್ತು ಎಂದು ಸದಸ್ಯರು ಹೇಳಿದರೆ ಅದನ್ನು ಪರಿಶೀಲನೆ ಮಾಡಿಕೊಡಬಹುದು. ಮೈಸೂರಿನಿಂದಲೂ ಅಪ್ಲಿಕೇಷನ್ ಬಂದಿಲ್ಲ, ಜಯದೇವಪುರಕ್ಕೆ ಒಂದು ಹಾಸ್ಟೆಲ್ ಬೇಕು ಎಂದು ಹೇಳಿ. ತಾಲ್ಲೂಕು ಆಫೀಸಿನಿಂದ ಒಂದು ಪ್ರಪೋಸಲ್ಸ್‌ನ್ನು ಕಳುಹಿಸಿದ್ದಾರೆ. ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಹದೇವ್ :- ಹಾಸ್ಟೆಲ್ ಮಂಜೂರಾಗಿ ಹತ್ತು ವರ್ಷವಾಗಿದೆ. ಆದರೆ ಹಾಸ್ಟೆಲ್ ಕಟ್ಟಡ ಇನ್ನೂ ಪೂರ್ಣವಾಗಿಲ್ಲ. ಅಲ್ಲಿರತಕ್ಕಂಥ ಹುಡುಗರು ಬೀದಿ ಪಾಲಾಗಿದ್ದಾರೆ. ಒಂದು ವರ್ಷಕ್ಕೆ ಐದು ನೂರರಿಂದ, ಸಾವಿರ ಜನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಅದಕ್ಕೋಸ್ಕರವಾಗಿ ಈ ವರ್ಷ ಹಾಸ್ಟೆಲ್‌ನ್ನು ಪ್ರಾರಂಭ ಮಾಡುತ್ತೀರೋ ಅಥವಾ ಮುಂದಿನ ವರ್ಷ ಮಾಡುತ್ತೀರೋ, ಅಥವಾ ಇನ್ನು ಹತ್ತು ವರ್ಷಕ್ಕೇನಾದರೂ ಮಾಡುತ್ತೀರಾ ಎನ್ನುವುದನ್ನು ದಯವಿಟ್ಟು ಖಚಿತವಾಗಿ ಹೇಳಬೇಕು.

ಶ್ರೀ ಬಿ.ಶಿವಣ್ಣ :- ಅದು ಆಗಬಹುದು ಪರಿಶೀಲನೆ ಮಾಡಿ ಹೇಳುತ್ತೇನೆ. ಆದಷ್ಟು ಮಟ್ಟಿಗೂ ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ :- ಓಪನ್ ಮಾಡುವುದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೆ ಹೇಗೆ ? ನಂಜನಗೂಡು ತಾಲ್ಲೂಕು ಬಹಳ ದೊಡ್ಡ ತಾಲ್ಲೂಕು. ಅದಕ್ಕೆ ಮೂರು ಕ್ಷೇತ್ರ ಸೇರಿವೆ. ಅಲ್ಲಿ ಪರಿಶಿಷ್ಟ ಜನಾಂಗದವರು ಜಾಸ್ತಿ ಇದ್ದಾರೆ. ಅಲ್ಲಿ ಹಾಸ್ಟೆಲ್ ಅಗತ್ಯ ಇದೆ. ಹೊನ್ನಾಳದಲ್ಲಿ ನಿಂತಿರತಕ್ಕಂಥ ಹಾಸ್ಟೆಲ್‌ನ್ನು ರನ್ ಆಗುವ ಹಾಗೆ ಮಾಡಿ. ಇಲ್ಲ ಓಪನ್ ಆದರೂ ಆಗುವ ಹಾಗೆ ಜಾಗ್ರತೆ ಮಾಡಿ. ಅಥವಾ ಅದನ್ನು ಪೂರ್ಣ ಪ್ರಮಾಣವಾಗಿ ಚಾಲೂ ಮಾಡುವ ಹಾಗೆ ಮಾಡಿ. ಇಲ್ಲ ಅಂದರೆ ಅದನ್ನು ಮುಚ್ಚಿಬಿಡಿ. ಇಲ್ಲ ಯಾವಾಗ ಅದನ್ನು ಪ್ರಾರಂಭ ಮಾಡುತ್ತೀರಿ ಎಂದು ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮಾಡುತ್ತೇನೆ ಎನ್ನುವುದಕ್ಕೂ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತೀರಿ.ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೀರಿ. ನಾವು ಊರಿಗೆ ಹೋಗಬೇಕು ಎಂದು ಹೇಳಿದರೆ ಅದನ್ನೂ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ :– 91–92ರಲ್ಲಿ ಹಾಸ್ಟೆಲ್ ಅಲ್ಲಿಗೆ ಕೊಟ್ಟೆವು ಎಂದು ಹೇಳಿದ್ದೇನೆ. ಆದೇ ಪ್ರಕಾರ ನಮ್ಮ ಸ್ನೇಹಿತರಿಗೂ ಬಿ.ಸಿ.ಎಂ. ಹಾಸ್ಟೆಲ್‌ನ್ನು ಮೊನ್ನೆ ಎರಡು ಮೂರು ದಿವಸದಲ್ಲಿ ಕೊಟ್ಟಿದ್ದೇವೆ. ಅವರು ಒಂದು ಹಾಸ್ಟೆಲ್ ಬಗ್ಗೆ ಹೇಳುತ್ತಿದ್ದಾರೆ. ಅದಕ್ಕೆ ನಾನು ಕಾರ್ಯಕ್ರಮವನ್ನು ಹಾಕಿಕೊಂಡು ತೀವ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಮಹದೇವ್ :– ಇನ್ನು ಒಂದು ದೊಡ್ಡ ತಾಲ್ಲೂಕು ಆಗಿರುವುದರಿಂದ ಪರಿಶಿಷ್ಟ ಜನಾಂಗದ ಹಾಸ್ಟೆಲ್ ಬೇಕಾಗಿವೆ. ಅದನ್ನು ದಯಯವಿಟ್ಟು ಆದಷ್ಟು ಜಾಗ್ರತೆ ಮಂಜೂರು ಮಾಡಿ ಒಂದು ಕಾಲಾವಧಿಯನ್ನು ನಿಗದಿಗೊಳಿಸಿ ಎಂದು ಹೇಳಿ. ತಮಗೇನು ಎಂದು ಹೇಳಿದರೆ ಒಂದು ತಾವು ಎಲ್ಲಾ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿರುವುದನ್ನು ನೋಡಿದರೆ ನಿಮಗೆ ಪರಿಶೀಲನೆ ಖಾತೆಯನ್ನೇ ಕೊಟ್ಟು ಬಿಡುವುದು ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಬಿ. ಶಿವಣ್ಣ :– ಅದೂ ಕೂಡ ಒಳ್ಳೆಯ ಸಲಹೆ.

ಶ್ರೀ ಎಂ. ಮಹದೇವ್ :– ಅದನ್ನೂ ಕೂಡ ಪರಿಶೀಲನೆ ಮಾಡಿ. ನಾವು ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಅವರಿಗೆ ಏನಾದರೂ ಪರಿಶೀಲನಾ ಖಾತೆ ಇದ್ದರೆ ಕೊಡಿ ಎಂದು ಹೇಳುತ್ತೇವೆ. ಅವರೇನಾದರೂ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರೆ ಸಂತೋಷ.

ಉಪಾಧ್ಯಕ್ಷಿಣಿಯವರು :– ಶ್ರೀನಿವಾಸಯ್ಯನವರು ಕೇಳುತ್ತಿರುವುದು ಅಲ್ಲಿರತಕ್ಕಂಥ ಹಾಸ್ಟೆಲ್ ಬಿಲ್ಡಿಂಗ್ ಬಗ್ಗೆ ಕೇಳುತ್ತಿದ್ದಾರೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಬಿ. ಶಿವಣ್ಣ :– ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಆದಷ್ಟು ಮಟ್ಟಿಗೆ ತೀವ್ರವಾಗಿ ನೋಡುತ್ತೇವೆ.

ಉಪಾಧ್ಯಕ್ಷಿಣಿಯವರು :– ಹೊಸ ಹಾಸ್ಟೆಲ್‌ನ್ನು ಕೊಡುತ್ತೀರಿ, ಬಿಲ್ಡಿಂಗ್‌ನ್ನು ಕೊಡುತ್ತೀರಿ.

ಶ್ರೀ ಬಿ.ಶಿವಣ್ಣ :– ಹೊಸದು ಕೊಟ್ಟಿದ್ದೇವೆ. ಅದಕ್ಕೆ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ.

ಉಪಾಧ್ಯಕ್ಷಿಣಿಯವರು :– ನಿಮ್ಮದೆಲ್ಲಾ ಕೆಲಸ ಆಗಿದೆ ಬಿಡಿ.

ಶ್ರೀ ಬಾಬಾರಾವ್ ಆರ್. ಚವಾಣ್ :– ಮಾನ್ಯ ಅಧ್ಯಕ್ಷಿಣಿಯವರೇ, ಒಂದು ಉಪಪ್ರಶ್ನೆಯನ್ನು ಕೇಳಬೇಕಾಗಿದೆ.

ಉಪಾಧ್ಯಕ್ಷಿಣಿಯವರು :– ಇಲ್ಲ, ಅದು ಮುಗಿಯಿತು. ಮುಂದಿನ ಪ್ರಶ್ನೆ ಕೇಳಿ.

ಶ್ರೀ ಬಾಬುರಾವ್ ಆರ್. ಚವಾಣ್ :– ಸ್ವಲ್ಪ ಇದೆ ಮೇಡಂ, ಜಾಸ್ತಿ ಏನೂ ಇಲ್ಲ.

ಉಪಾಧ್ಯಕ್ಷಿಣಿಯವರು :– ಅದು ನಂಜನಗೂಡಿಗೆ ಸಂಬಂಧಪಟ್ಟ ಹಾಗೆ ಅವರು ಕೇಳಿದ್ದಾರೆ.

ಶ್ರೀ ಬಾಬುರಾವ್ ಆರ್. ಚವಾಣ್ :– ವಿದ್ಯಾರ್ಥಿ ಹಾಸ್ಟೆಲ್‌ಗಳಲ್ಲಿ ಸೌಲಭ್ಯವಿಲ್ಲದೆ ತೊಂದರೆ ಪಡುತ್ತಿದ್ದಾರೆ. ಇದೇ ಪ್ರಶ್ನೆಯನ್ನು ನಾನೂ ಕೇಳಬೇಕಾಗಿದೆ.

ಉಪಾಧ್ಯಕ್ಷಿಣಿಯವರು :– ನಂಜನಗೂಡಿನ ತಾಲ್ಲೂಕಿನ ಬಗ್ಗೆ ಕೇಳುತ್ತೀರಾ ?

ಶ್ರೀ ಬಾಬುರಾವ್ ಆರ್. ಚವಾಣ್ :– ವಿದ್ಯಾರ್ಥಿಗಳ ಬಗ್ಗೆ ಕೇಳಬೇಕಾಗಿದೆ.

ಉಪಾಧ್ಯಕ್ಷಿಣಿಯವರು :– ಹೇಳಿ. ಅವರು ಪರಿಶೀಲಿಸುತ್ತಾರೆ.

ಶ್ರೀ ಬಾಬುರಾವ್ ಆರ್. ಚವಾಣ್ :– ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹರಿಜನ ಗಿರಿಜನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೋಸ್ಕರ ತಾವು ಹಾಸ್ಟೆಲ್ ಅಡ್ಮಿಷನ್ ಓಪನ್ ಆಗಿ ಇಟ್ಟಿದ್ದೀರೋ, ಅಥವಾ ನಿರ್ಮೂಲನಾ ಮಾಡಿದ್ದೀರೋ ? ಏಕೆಂದರೆ ಹಾಸ್ಟೆಲ್‌ನಲ್ಲಿ ಅರ್ಜಿಯನ್ನು ಕೊಟ್ಟಾಗ 200 ಸ್ಟೆಂಥ್ ಇದ್ದಾಗ 400 ಅಡ್ಮಿಷನ್ ಬಂದಾಗ ಎರಡು ನೂರು ಹುಡುಗರಿಗೆ ತೆಗೆದುಕೊಳ್ಳುತ್ತೀರೋ ಅಥವಾ ಎರಡು ನೂರು ಹುಡುಗರಿಗೆ ವಾಪಸ್ ಹಾಕುತ್ತೀರಾ ? ಓಪನ್ ಆಗಿ ಎಸ್.ಸಿ. ಎಸ್.ಟಿ. ಹುಡುಗರಿಗೆ ಎಲ್ಲರಿಗೂ ಮನಸ್ಸಿಗೆ ಬಂದವರಿಗೆ ಹಾಸ್ಟೆಲ್ಸ್ ಫೆಸಿಲಿಟೀಸ್ ಕೊಡುತ್ತೀರೋ ಅಥವಾ ಇಲ್ಲವೇ ?

ಶ್ರೀ ವಿಜಯಕುಮಾರ್ ಶೆಟ್ಟಿ :– ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟವರ್ಗದವರ ಒಂದು ಹಾಸ್ಟೆಲ್ ಇದೆ. ಅಲ್ಲಿ ಸುಮಾರು 2–3 ವರ್ಷದಿಂದ ಕರೆಂಟ್ ಇದ್ದರೆ ನೀರಿಲ್ಲ, ನೀರಿದ್ದರೆ ಕರೆಂಟ್ ಇಲ್ಲ, ಅದೇ ರೀತಿ ಶೌಚಾಲಯ ಮತ್ತು ಅಡುಗೆ ಮನೆಯ ವ್ಯವಸ್ಥೆ ಸರಿಯಾಗಿಲ್ಲ. ಇದರ ಬಗ್ಗೆ ಹಲವಾರು ಸಲ ಅರ್ಜಿಗಳನ್ನು ಕೊಟ್ಟರೂ ಏನೂ ಆಗಲಿಲ್ಲ, ಅದಕ್ಕೆ, ದಯವಿಟ್ಟು ಈ ವರ್ಷದಲ್ಲಾದರೂ ಅದನ್ನು ರಿಪೇರಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :- ಆಗಬಹುದು, ರಿಪೇರಿ ವರ್ಕ್ಸ್ ತೆಗೆದುಕೊಂಡಿದ್ದೇವೆ.

ಗುಲ್ಬರ್ಗ ಜಿಲ್ಲೆಯಲ್ಲಿ ಅನಧಿಕೃತ ಕಲ್ಲುಗಣಿಗಳು

839. ಶ್ರೀ ಬಾಬುರಾವ್ ಆರ್. ಚವಾಣ್ (ಶಹಾಬಾದ್) :– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ಐದು ಸಾವಿರಕ್ಕಿಂತಲೂ ಹೆಚ್ಚಿಗೆ ಕಲ್ಲು ಗಣಿಗಳು ಅನಧಿಕೃತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅವುಗಳನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ. ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :–

ಅ) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅನಧಿಕೃತ ಶಹಾಬಾದ್ ಶಿಲೆ ಸಾಗಾಣಿಕೆಯನ್ನು ತಡೆಯುವು ಸಲುವಾಗಿ ಚೆಕ್‌ಪೋಸ್ಟ್ ಒಂದನ್ನು ಇತ್ತೀಚೆಗೆ ತೆರೆಯಲಾಗಿದೆ. ಇದರಿಂದಾಗಿ ನೆರೆ ರಾಜ್ಯಗಳಿಗೆ ಅನಧಿಕೃತವಾಗಿ ತೆಗೆದ ಶಿಲೆಗಳ ಸಾಗಾಣಿ ತಪ್ಪುವುದು ಜೊತೆಗೆ ಚೆಕ್‌ಪೋಸ್ಟ್‌ಗಳಲ್ಲಿ ಅನಧಿಕೃತ ಉಪ-ಖನಿಜಗಳ ಮೇಲೆ ರಾಜಧನ ಮತ್ತು ದಂಡ ವಸೂಲಿ ಮಾಡಬಹುದಾಗಿದೆ.

ಶ್ರೀ ಬಾಬುರಾವ್ ಆರ್. ಚವಾಣ್ :– ಸನ್ಮಾನ್ಯ ಅಧ್ಯಕ್ಷಣೆಯವರೇ, ನನ್ನ ಮತ ಕ್ಷೇತ್ರ ಶಹಾಬಾದ್, ಆ ಶಹಬಾದ್‌ನಲ್ಲಿ, ಶಹಾಬಾದ್ ಸ್ಟೋನ್ ಎನ್ನುವ ಒಂದು ಕಲ್ಲುಗಣಿ ಬಹಳ ಫೇಮಸ್ ಆಗಿದೆ. ನಾನು ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು 5 ಸಾವಿರಕ್ಕಿಂತಲೂ ಹೆಚ್ಚು ಕಲ್ಲು ಗಣಿಗಳು ಅನಧಿಕೃತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಅದಕ್ಕೆ ಅವರು ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ ಎಂದು ಉತ್ತರಗಳನ್ನು ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳು ಗುಲ್ಬರ್ಗಕ್ಕೆ ಬಂದಾಗ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಸುಮಾರು 34 ಸಾವಿರಕ್ಕಿಂತ ಜಾಸ್ತಿ ಇಲ್ಲೀಗಲ್ ಕ್ವಾರೀಸ್ ನಡೆಯುತ್ತಿದೆ ಎಂದು ಅವರು ಬಾಯಿಯಿಂದ ಪ್ರೆಸ್‌ನಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಡಿಪಾರ್ಟ್‌ಮೆಂಟಿನವರು ಉತ್ತರ ಏನು ಕೊಟ್ಟಿದ್ದಾರೆಂದರೆ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ ಎಂದು ಹೇಳಿದ್ದಾರೆ. ಕೆಲವು ಎಂದರೆ ಎಷ್ಟು ಪ್ರಕರಣಗಳು ಬಂದಿವೆ. ಒಂದೇ, ಹತ್ತೆ, ಇಪ್ಪತ್ತೇ, ನಲ್ವತ್ತೆ, ನಾನು 5 ಸಾವಿರ ಗಣಿಗಳು ಎಂದು ಕಣ್ಣಾರೆ ನೋಡಿ ಅವರಿಗೂ ಹೇಳಿದ್ದೇನೆ. ಇದರಲ್ಲಿ ಕೆಲವು ಪ್ರಕ್ಕರಣಗಳು ಎಂದು ಹೇಳಿದ್ದಾರೆ, ಇದು ಒಂದು. ಇನ್ನು ಎರಡನೆಯದು, ಹಾಗಿದ್ದಲ್ಲಿ ಅವುಗಳನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ಎಂದರೆ ಅನಧಿಕೃತ ಶಿಲೆಗಳ ಸಾಗಾಣಿಕೆ ತಡೆಯಲು ಚೆಕ್‌ಪೋಸ್ಟ್ ಹಾಕಿದೆ ಎನ್ನುತ್ತಾರೆ. ಚೆಕ್‌ಪೋಸ್ಟ್ ಹಾಕಿದ್ದುದು ಮೊನ್ನೇ ಒಂದು ತಿಂಗಳ ಹಿಂದೆ. ಇಲ್ಲಿ ಚೆಕ್‌ಪೋಸ್ಟ್ ಹಾಕಿ ಏನು ಮಾಡುತ್ತಿದ್ದೀರಿ, ರಾಯಲ್ಟಿಯನ್ನು 10 ರೂಪಾಯಿ ವಸೂಲಿ ಮಾಡಿ ಎಂದರೆ 20 ರೂಪಾಯಿ ವಸೂಲಿ ಮಾಡುತ್ತಾ ಇದ್ದಾರೆ. ಇಲ್ಲಿ ಗ್ರಾನೈಟ್‌ಗೆ ಇರತಕ್ಕಂಥ ರಾಯಲ್ಟಿ 20 ರೂಪಾಯಿ, ಶಹಬಾದ್ ಕಲ್ಲಿಗೂ ಕೂಡ 20 ರೂಪಾಯಿ ಹಾಕುತ್ತಾ ಇರುವುದು ಅನ್ಯಾಯ ಆಗುತ್ತಾ ಇದೆ. ಏಕೆಂದರೆ ಗ್ರಾನೈಟ್ ಕೇಟ್ ಜಾಸ್ತಿ ಇದೆ. ಇದು ಒಳ್ಳೆಯ ಕ್ವಾಲಿಟಿ. ಶಹಾಬಾದ್ ಸ್ಟೋನ್ ಎನ್ನತಕ್ಕದ್ದು ಬ್ಯಾಡ್ ಕ್ವಾಲಿಟಿ. ಅದಕ್ಕೆ ತಾವು 10 ರೂಪಾಯಿ ರಾಯಲ್ಟಿ ಮಾಡುತ್ತೀರಾ ? ಅಥವಾ ಪೆನಾಲ್ಟಿ ಕೂಡ ತಾವು ತೆಗೆದು ಹಾಕುತ್ತೀರಾ ? ದಯವಿಟ್ಟು ತಿಳಿಸಿಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್ :– ಮಾನ್ಯ ಅಧ್ಯಕ್ಷಣೆಯವರೇ, ಹೋದಸಲ 18–1–1992 ನೇ ದಿವಸ ಗುಲ್ಬರ್ಗದಲ್ಲಿ ಇದೇ ಚವಾಣ್‌ರವರು ಮತ್ತು ಇತರ ಶಾಸಕರ ಕೋರಿಕೆ ಮೇರೆಗೆ ನಾನು ಗುಲ್ಬರ್ಗಕ್ಕೆ ಹೋಗಿ ಅಲ್ಲಿ ಒಂದು ಮೀಟಿಂಗ್ ಮಾಡಿದೆ. ಈ ಶಹಬಾದ್ ಕಲ್ಲು ಮಹಾರಾಷ್ಟ್ರಕ್ಕೆ ಏನು ರಫ್ತು ಆಗುತ್ತದೆ ಅದನ್ನು ನಿಲ್ಲಿಸಬೇಕು ಇದರ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಮಾಡಿದೆವು. ಆ ಪ್ರಕಾರವಾಗಿ ಎಂ.ಎಲ್.ಎ. ಮತ್ತುಎಂ.ಎಲ್.ಸಿ. ಗಳವರು ಆ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಅವರದು ಮುಖ್ಯ ಗ್ರಿವೆನ್ಸ್ ಏನು ಅಂದರೆ ಡೆಡ್‌ರೆಂಟ್ 5 ನೂರರಿಂದ 5 ಸಾವಿರ ರೂಪಾಯಿ ಏನು ಮಾಡಿದ್ದೇವೆ ಇದನ್ನು ಇಳಿಸಬೇಕು, ಅದೇ ಪ್ರಕಾರವಾಗಿ ಮೊದಲು 85 ರಲ್ಲಿ ಏನು ಲೀಸ್ ಇದ್ದುವು ಅವು ಈಗ 1991–92ರಲ್ಲಿ ಇಳಿಮುಖವಾಗಿವೆ. ಅದರ ಸಲುವಾಗಿ ಇದನ್ನು

ಚೆಕ್ ಮಾಡಿ ಡಿಡ್‌ರೆಂಟ್ ಇಳಿಸಬೇಕು. ಎರಡನೆಯದು, ಅನ್‌ಆಥರೈಸ್ಡ್ ಕ್ವಾರೀಸ್ ಚೆಕ್ ಮಾಡಬೇಕು ಎಂದು ಹೇಳಿದರು. ಆ ಪ್ರಕಾರವಾಗಿ ನಾನು ಒಂದು ಹೇಳಿಕೆಯನ್ನು ಕೊಟ್ಟಿ. ಇದು ಸ್ಪೆಸಿಫೈಡ್ ನಾನ್‌ಸ್ಪೆಸಿಫೈಡ್ ಮಿನರಲ್ಸ್ ಆನ್ ಪಾರ್ ವಿತ್ ದಿ ಬಿಲ್ಡಿಂಗ್ ಸ್ಟೋನ್‌ಗೆ 5 ಸಾವಿರ ಇದ್ದದ್ದು 2,500 ಡಿಡ್‌ರೆಂಟ್ ಮಾಡುತ್ತೇನೆ. ಎರಡನೆಯದು ಇದನ್ನು ಚೆಕ್ ಮಾಡಲಿಕ್ಕೆ ಒಂದು ಗುಬ್ಬರ್ಗಾದಲ್ಲಿ ಆಳಂದ ರೋಡ್‌ನಲ್ಲಿ ಒಂದು ಚೆಕ್‌ಪೋಸ್ಟನ್ನು ಸಹ ನಾವು ಹಾಕಿದ್ದೇವೆ. ಆ ಒಂದು ಚೆಕ್ ಪೋಸ್ಟ್ ಹಾಕಿದ ನಂತರ ಒಂದೇ ತಿಂಗಳಿನಲ್ಲಿ ಕನಿಷ್ಟ ಅಂದರೆ 3 ಲಕ್ಷ ರೂಪಾಯಿ ರಾಯಲ್ಟಿ ಮತ್ತು ಪೆನಾಲ್ಟಿಯನ್ನು ನಾವು ಕಲೆಕ್ಟ್ ಮಾಡಿದೆವು. ಈಗ ಸದ್ಯಕ್ಕೆ ಸಹ 31–3–92 ತನಕ ಎಲ್ಲರಿಗೂ ಒಂದು ವಾರ್ನಿಂಗ್ ಕೊಟ್ಟಿದ್ದೇವೆ. ಮಾರ್ಚ್ 31ನೇ ತಾರೀಖು ಒಳಗಾಗಿ ಯಾರು 50 ಪರ್ಸೆಂಟ್ ಅರಿಯರ್ಸ್ ಕೊಡುತ್ತಾರೋ ಅಂಥವರ ಅರಿಯರ್ಸ್ ತೆಗೆದುಕೊಂಡು ನಾವು ರಿನ್ಯೂವಲ್ ಮಾಡಿಕೊಡುತ್ತೇವೆ, ಮತ್ತು ಫ್ರೇಶ್ ಅಪ್ಲಿಕೇಶನ್ ಏನು ಕೊಡುತ್ತಾರೆ ಅದೂ ಸಹ ಆನ್ ದಿ ಸ್ಪಾಟ್ ನಾವು ಸ್ಯಾಂಕ್ಷನ್ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ. ಆ ಪ್ರಕಾರ ಈಗ ಸದ್ಯಕ್ಕೆ ಅಲ್ಲಿ ಕನಿಷ್ಟ ಅಂದರೆ ಎಲ್ಲಾ ಕೂಡಿಸಿ ಈಗ ನಾವು ನೋಟಿಫಿಕೇಶನ್ ಮಾಡಿದ್ದು 40. ಈ 118 ಏನು ಶಹಬಾದ್ ಕಲ್ಲಿನ ಗುತ್ತಿಗೆ ಇತ್ತು ಈಗ ಅದು 138 ಕ್ಕೆ ಏರಿದೆ. ಅದೇ ಪ್ರಕಾರವಾಗಿ ಈ ನಾನ್‌ಸ್ಪೆಸಿಫೈಡ್ ಮಿನರಲ್ಸ್ ನಾವು ಮಾಡಲಿಕ್ಕೆ ಆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ತಕ್ಷಣವಾಗಿ ಇದು ಸದ್ಯದಲ್ಲೇ ನಾವು ಮಾಡುತ್ತೇವೆಂದು ಇಷ್ಟು ಮಾತ್ರ ಹೇಳಬಲ್ಲೆ, ಎರಡನೆಯದು ತಾವು ಏನು ಕೇಳಿದ್ದೀರಿ, ತಾವು ಕೇಳಿದ್ದು 5 ಸಾವಿರ ಕಲ್ಲುಗಣಿಗಳು ಅನಧಿಕೃತವಾಗಿ ನಡೆಯುತ್ತಿದೆಯೇ ಎಂದು, ಈ ಶಹಬಾದ್ ಕಲ್ಲು ಬಗ್ಗೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೀರಿ, ಬಂದಿದೆ ಎಂದು ಹೇಳುತ್ತೇನೆ. ಆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ಆದಷ್ಟು ಬೇಗ ಇದನ್ನು ಚೆಕ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಾಬುರಾವ್ ಆರ್. ಚವಾಣ್ :– ಅನ್‌ಆಥರೈಸ್ಡ್ ಐದು ಸಾವಿರ ಇದೆ ಎಂದು ನಾನು ಹೇಳಿದ್ದೇನೆ. ಅದು ಗಮನಕ್ಕೆ ಬಂದಿದೆ ಎಂದು ತಾವು ಉತ್ತರ ಹೇಳಿದ್ದೀರಿ. ಇದು ಡಿಪಾರ್ಟ್‌ಮೆಂಟಿನವರಿಗೆಲ್ಲಾ ಎಲ್ಲೆಲ್ಲಿ ಇಲ್ಲೀಗಲ್ ಕ್ವಾರೀಸ್ ನಡೆಯುತ್ತಿದೆ, ಎಲ್ಲೆಲ್ಲಿ ಅನ್‌ಆಥರೈಸ್ಡ್ ಇದೆ ಎನ್ನುವುದು ಗೊತ್ತಿದೆ. ಇಲ್ಲೀಗಲ್ ಕ್ವಾರೀಸ್ ಇದ್ದ ಮೇಲೆ ಅವರ ಮೇಲೆ ಕೇಸ್ ಹಾಕಬೇಕು. ಇಲ್ಲೀಗಲ್ ಕ್ವಾರೀಸ್ ಸ್ಟಾಪ್ ಮಾಡಬೇಕೆಂದು ಡಿಪಾರ್ಟ್‌ಮೆಂಟಿನವರು ಹೇಳಬೇಕಾಗಿತ್ತು. ಇಲ್ಲೀಗಲ್ ಕ್ವಾರೀಸ್‌ಗೆ ಒಂದು ಚೆಕ್‌ಪೋಸ್ಟನ್ನು ಆಳಂದ್ ರೋಡಿನಲ್ಲಿ ಕೂಡಿಸಿಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈಗ ಆಳಂದ್ ರೋಡೂ ಒಂದೇ, ರೋಡ್ ಇರೋದು, ಮಹಾರಾಷ್ಟ್ರ, ಆಂಧ್ರ ಹೋಗಲಿಕ್ಕೆ, ಹತ್ತಾರು ರೋಡ್‌ಗಳು ಇವೆ. ಒಂದು ರೋಡ್‌ಗೆ ಚೆಕ್‌ಪೋಸ್ಟ್ ಹಾಕಿದರೆ ಇನ್ನೊಂದು ರೋಡಿನಲ್ಲಿ ಕಲ್ಲುಗಳು ಹೋಗುತ್ತಲೆ ಇದೆ. ನಾನು ಹೇಳತಕ್ಕಂಥ ಮಾತು ಏನೆಂದರೆ ಇಲ್ಲೀಗಲ್ ಕ್ವಾರೀಸ್ ತಡೆಯುವುದಕ್ಕೆ ಇಲ್ಲೀಗಲ್ ಕ್ವಾರೀಸ್ ಎಲ್ಲಿ ಮಾಡುತ್ತಿದ್ದಾರೆ ಅಲ್ಲಿ ಹೋಗಿ ನೀವು ಅವರ ಮೇಲೆ ಕೇಸ್ ಹಾಕಿ. ನೀವು ಕೇಸ್ ಹಾಕದೇ ಚೆಕ್‌ಪೋಸ್ಟ್‌ನಲ್ಲಿ ಕಾಯುತ್ತಾ ಕುಳಿತರೆ ಇನ್ನೊಂದು ರೋಡಿನಲ್ಲಿ ಅವರು ಹೋಗಿಯೇ ಹೋಗುತ್ತಾರೆ. ನೀವು ಗ್ರಾನೈಟ್ ಕಲ್ಲಿಗೆ ರಾಯಲ್ಟಿ 20 ರೂಪಾಯಿ ಮಾಡಿದ್ದೀರಲ್ಲಾ ಅದನ್ನು ಕಡಿಮೆ ಮಾಡಿ, ಅದನ್ನು 10 ರೂಪಾಯಿ ಮಾಡಬೇಕು ಎಂದು ಕಳಕಳಿಯ ಮನವಿ. ತಾವು ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

12–35 ಪಿ.ಎಂ.

ನಂತರ ಚೆಕ್‌ಪೋಸ್ಟ್‌ನಲ್ಲಿ ಪೆನಾಲ್ಟಿಯನ್ನು ಹಾಕುತ್ತೀರಿ, ದಯವಿಟ್ಟು ಪೆನಾಲ್ಟಿಯನ್ನು ತೆಗೆದುಹಾಕುವುದರ ಬಗ್ಗೆ ನನಗೆ ಆಶ್ವಾಸನೆ ಕೊಡಬೇಕು.

ಶ್ರೀ ಎಂ.ಎಲ್. ಉಸ್ತಾದ್ :– ಈಗ ಪ್ರತಿ ಮೆಟ್ರಿಕ್‌ಟನ್ನಿಗೆ 10 ರೂಪಾಯಿಗಳಿಂದ 20 ರೂಪಾಯಿಗಳಿಗೆ ಏನು ಹೆಚ್ಚು ಮಾಡಿದ್ದೇವೆ, ಅದರ ಬಗ್ಗೆ ಪರಿಶೀಲಿಸುತ್ತೇವೆ. ಎರಡನೆಯದಾಗಿ, ಅನಧಿಕೃತವಾಗಿ ಏನು ಈ ಕಲ್ಲನ್ನು ಟ್ರಾನ್ಸ್‌ಪೋರ್ಟ್ ಮಾಡುತ್ತಿರುತ್ತಾರೆ ಅದಕ್ಕೆ ಪೆನಾಲ್ಟಿ ಹಾಕಬಾರದೆಂದು ತಾವು ಹೇಳುತ್ತಿದ್ದೀರಿ, ನಾವು ಪೆನಾಲ್ಟಿಯನ್ನು ಹಾಕಲೇಬೇಕಾಗುತ್ತದೆ, ಅದನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ, ಪೆನಾಲ್ಟಿ ಮತ್ತು ರಾಯಲ್ಟಿ ಎರಡನ್ನೂ ಕೂಡ ಕಲೆಕ್ಟ್ ಮಾಡಬೇಕಾಗಿದೆ. ಅದರ ಸಲುವಾಗಿ ನಾವು 31ನೇ ಮಾರ್ಚ್ 1992 ಅಂತಿಮ ದಿನಾಂಕ ಎಂದು ಕೊಟ್ಟಿದ್ದು. ಇದರೊಳಗೆ

ಯಾರದು ರಿನ್ಯೂವಲ್ ಆಗಬೇಕಾಗಿತ್ತು, ಅವರಿಗೆ 50 ಪರ್ಸೆಂಟ್ ಕನ್‌ಸೇಶನ್ ಕೊಟ್ಟಿದ್ದೇವೆ. ರಿನ್ಯೂವಲ್ ಟೇಕಾದರೆ 50 ಪರ್ಸೆಂಟ್ ಕೊಟ್ಟು ತಾವು ರಿನ್ಯೂವಲ್ ಮಾಡಿಕೊಳ್ಳಿ, ಮತ್ತು ಮಿಕ್ಕಿದ್ದು ಕಂತಿನಲ್ಲಿ 50 ಪರ್ಸೆಂಟ್ ಕೊಡಬೇಕೆಂದು, ಅದಕ್ಕೋಸ್ಕರವೇ 31ನೇ ಮಾರ್ಚ್ 1992 ಎಂದು ದಿನಾಂಕ ಕೊಟ್ಟಿದ್ದೇವೆ. ಆದರೆ, ಪೆನಾಲ್ಟಿಯನ್ನು ತೆಗೆದುಹಾಕುವುದಕ್ಕೆ ಖಂಡಿತ ಸಾಧ್ಯವಿಲ್ಲ.

ಶ್ರೀ ಬಾಬುರಾವ್ ಆರ್. ಚವಾಣ್ :– ಆಂಧ್ರಪ್ರದೇಶದಲ್ಲಿ ಕ್ವಾರೀಸ್ ಕಲ್ಲನ್ನು ತೆಗೆದುಕೊಂಡು ಚೆಕ್‌ಪೋಸ್ಟ್‌ಗೆ ಬಂದ ನಂತರ ರಾಯಲ್ಟಿ ದುಡ್ಡನ್ನು ಕಟ್ಟಿ ನಂತರ ಹೋಗುತ್ತಾರೆ. ಅವರು ಪೆನಾಲ್ಟಿಯನ್ನು ಹಾಕುವುದಿಲ್ಲ, ಬೇರೆ ರಾಜ್ಯಗಳಲ್ಲಿಯೂ ಸಹ ಪೆನಾಲ್ಟಿಯನ್ನು ಹಾಕುವುದಿಲ್ಲ. ನಮ್ಮ ರಾಜ್ಯದಲ್ಲಿ ಏತಕ್ಕೆ ಪೆನಾಲ್ಟಿ ಹಾಕುತ್ತೀರಿ? ಬಡ ಕಾರ್ಮಿಕರಿಗೆ ಇದರಿಂದ ಬಹಳ ಅನ್ಯಾಯವಾಗುತ್ತಿದೆ, ತೊಂದರೆಯಾಗುತ್ತಿದೆ. ತಾವು ಒಂದು ತಿಂಗಳಿನಿಂದ ಪೆನಾಲ್ಟಿ ಹಾಕುವುದನ್ನು ಪ್ರಾರಂಭ ಮಾಡಿದ್ದೀರಿ, ಪೆನಾಲ್ಟಿಯಿಂದ ಜನರು ಒದ್ದಾಡುತ್ತಿದ್ದಾರೆ. ಅಂತಹವರಿಗೆ ಪೆನಾಲ್ಟಿ ಏತಕ್ಕೆ ಹಾಕುತ್ತೀರಿ. ಇಲ್ಲೀಗಲ್ ಕ್ವಾರಿ ಕಲ್ಲಿಗೆ ಪೆನಾಲ್ಟಿ ಹಾಕಿ. ಅಂತಹವರ ಮೇಲೆ ಕೇಸ್ ಹಾಕಿ. ಆಂಧ್ರ ಪ್ರದೇಶದಲ್ಲಿ ಪೆನಾಲ್ಟಿ ಹಾಕದೆ, ನಮ್ಮ ರಾಜ್ಯದಲ್ಲಿ ಪೆನಾಲ್ಟಿ ಹಾಕಿರುವುದರ ಬಗ್ಗೆ ತಮ್ಮ ಸ್ಪಷ್ಟ ನಿಲುವು ಏನೀದು ತಿಳಿಸಬೇಕು.

ಶ್ರೀ ಎಂ. ಎಲ್. ಉಸ್ತಾದ್ :– ಈಗ ಬಹಳಷ್ಟು ಜನರು ಶಹಾಬಾದ್ ಸ್ಟೋನ್‌ನಲ್ಲಿ ಕೆಲಸ ಮಾಡುತ್ತಿರುವವರು ವೀಕರ್ ಸೆಕ್ಷನ್‌ಗೆ ಸೇರಿದವರು. ರಿನ್ಯೂವಲ್ ಮಾಡಲು 31.3.1992 ಅಂತಿಮ ದಿನವೆಂದು ಏತಕ್ಕೆ ಕೊಟ್ಟಿದ್ದೇವೆಂದರೆ, ಅವರಿಗೆ ಕೊಟ್ಟಿದ್ದು ತ್ರಾಸ್ ಆಗಬಾರದೆಂದು, ಇದರಲ್ಲಿ ಆದಷ್ಟು ಬೇಗ ಯಾರು ರಾಯಲ್ಟಿಯನ್ನು ಕೊಡಬೇಕಾಗಿರುತ್ತದೆ, ಅವರು 50 ಪರ್ಸೆಂಟ್ ಅನ್ನು ಕೊಟ್ಟರೆ ಅವರೂ ರಿನ್ಯೂವಲ್ ಮಾಡಿಕೊಳ್ಳಬಹುದು. ಎರಡನೆಯದಾಗಿ, ಯಾರು ಫ್ರೆಷ್ ಆಗಿ ಅಪ್ಲಿಕೇಶನ್ ಕೊಡುತ್ತಾರೆ, ಅವರಿಗೆ ಸ್ಥಳದಲ್ಲಿಯೇ ತಹಶೀಲ್ದಾರ್ ಅವರನ್ನು ಕರೆದು ಎನ್.ಓ.ಸಿ. ಕೊಡಬೇಕೆಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಏಕೆಂದರೆ ಮೊದಲು ಎಂ.ಎಲ್.ಎ. ಸಾಹೇಬರು ಹೇಳಿದ್ದರು: ತಾವು ಹೇಗಾದರೂ ಮಾಡಿ ಚೆಕ್ ಮಾಡಿ, ಅನ್‌ಆಥರೈಸ್ಡ್ ಆಗುತ್ತಿದೆ, ಕೇಸ್ ಬುಕ್ ಮಾಡಿ, ಪೆನಾಲ್ಟಿ ಹಾಕಿ ಎಂದು ಹೇಳಿದವರು ತಾವೇ. ಇವೊತ್ತು ಚೆಕ್‌ಪೋಸ್ಟ್‌ಗೆ ಹೋಗಿ ನೋಡಿ ಒಂದೇ ತಿಂಗಳಿನಲ್ಲಿ ರಾಯಲ್ಟಿ ಮತ್ತು ಪೆನಾಲ್ಟಿ ಹಾಕಿ ಮೂರು ಲಕ್ಷ ರೂಪಾಯಿಗಳನ್ನು ಕಲೆಕ್ಷನ್ ಮಾಡಿದ್ದೇವೆ. ಈಗ ತಾವು ಪೆನಾಲ್ಟಿಯನ್ನು ಹಾಕಬಾರದೆಂದು ಹೇಳುತ್ತಿದ್ದೀರಿ. ತಾವು ತಮ್ಮ ಎಲ್ಲಾ ಜನರಿಗೆ ಹೇಳಿ, 31ನೇ ಮಾರ್ಚ್ 1992ರೊಳಗೆ ಅವರೆಲ್ಲರೂ ಬಂದು ಅಪ್ಲಿಕೇಶನ್ ಕೊಟ್ಟು ಫ್ರೆಷ್ ಅಪ್ಲಿಕೇಶನ್ ಅನ್ನು ಯಾರು ತೆಗೆದುಕೊಳ್ಳುತ್ತಾರೋ ಅವರು ತೆಗೆದುಕೊಳ್ಳಲಿ ಅಥವಾ ರಿನ್ಯೂವಲ್ ವಿಚಾರದಲ್ಲಿ 50 ಪರ್ಸೆಂಟ್ ಕಟ್ಟಿ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಾಬುರಾವ್ ಆರ್. ಚವಾಣ್ :– 31ನೇ ಮಾರ್ಚ್ 1992ರ ನಂತರ ತಾವು ಪೆನಾಲ್ಟಿ ಹಾಕಿ. ಈಗ ಏತಕ್ಕೆ ಪೆನಾಲ್ಟಿ ಹಾಕುತ್ತೀರಿ ? ತಾವು ಪೆನಾಲ್ಟಿ ಮತ್ತು ರಾಯಲ್ಟಿಯನ್ನು ಹೇಗೆ ಕಲೆಕ್ಟ್ ಮಾಡುತ್ತಿದ್ದೀರಿ ? ನೀವು ರಾಯಲ್ಟಿಯನ್ನು ಕಲೆಕ್ಟ್ ಮಾಡಿ ಪೆನಾಲ್ಟಿಯನ್ನು ತೆಗೆದು ಹಾಕಿ. ಮತ್ತು ರಾಯಲ್ಟಿಯನ್ನು ಕಡಿಮೆ ಮಾಡುತ್ತೇವೆಂದು ಹೇಳಲಿಲ್ಲ, ಗ್ರಾನೈಟಿಗೂ ಕೂಡ ರಾಯಲ್ಟಿ 20 ರೂಪಾಯಿ ಇದೆ, ಮತ್ತು ಶಹಾಬಾದ್ ಸ್ಟೋನ್‌ಗೂ 20 ರೂಪಾಯಿ ಇದೆ. ಇದು ಅನ್ಯಾಯವಾಗುತ್ತಿದೆ.

ಉಪಾಧ್ಯಕ್ಷೆಯವರು :– ಚವಾಣ್‌ರವರೇ, ತಾವು ನಾಲ್ಕನೆಯ ಉಪಪ್ರಶ್ನೆ ಕೇಳುತ್ತಿರುವುದು. ಪಟ್ಟಿಯಲ್ಲಿ ಇನ್ನು ಮೂರು ಪ್ರಶ್ನೆಗಳಿರುವುದರಿಂದ, ದಯವಿಟ್ಟು ಮುಂದಿನ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಾಬುರಾವ್ ಆರ್. ಚವಾಣ್ :– ಗ್ರಾನೈಟ್‌ಗೆ 20 ರೂಪಾಯಿಗಳ ರಾಯಲ್ಟಿ ಕಲೆಕ್ಟ್ ಮಾಡುತ್ತಿದ್ದಾರೆ. ಗ್ರಾನೈಟ್ ಸುಪೀರಿಯರ್ ಕ್ವಾಲಿಟಿಯದ್ದಾಗಿದೆ, ಆದರೆ ಶಹಬಾದ್ ಸ್ಟೋನ್ ಅಷ್ಟು ಸುಪೀರಿಯರ್ ಕ್ವಾಲಿಟಿ ಇಲ್ಲ.

ಉಪಾಧ್ಯಕ್ಷೆಯವರು :– ಶ್ರೀ ಬಸವಂತರೆಡ್ಡಿ ಮೋತಕಪಲ್ಲಿಯವರೆ ನಿಮ್ಮ ಪ್ರಶ್ನೆ ಹಣಕಾಸು ಇಲಾಖೆಗೆ ವರ್ಗಾವಣೆಯಾಗಿರುವುದರಿಂದ, ಮುಂದೆ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಕಿದ್ವಾಯಿ ಗಂಥಿ ಆಸ್ಪತ್ರೆಯಲ್ಲಿ ಹೊರರೋಗಿ ಘಟಕಗಳನ್ನು ಹೆಚ್ಚಿಸುವ್ದದು.

748. ಶ್ರೀ ರಾಮಲಿಂಗರೆಡ್ಡಿ (ಜಯನಗರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಬೆಂಗಳೂರಿನಲ್ಲಿ ಇರುವ ಹೊರರೋಗಿ ಘಟಕಗಳ ಸಂಖ್ಯೆ ಎಷ್ಟು :

ಆ) ಮೇಲ್ಕಂಡ ಆಸ್ಪತ್ರೆಗೆ ಪ್ರತಿದಿನ ಸಾಮಾನ್ಯವಾಗಿ ಬರುತ್ತಿರುವ ಹೊರರೋಗಿಗಳ ಸಂಖ್ಯೆ ಎಷ್ಟು;

ಇ) ರೋಗಿಗಳು ಶುಶ್ರೂಷೆ ಪಡೆಯುವಲ್ಲಿ 4–5 ಗಂಟೆ ಕಾಲ ಕಾಯುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಈ) ಹೊರರೋಗಿಗಳ ಘಟಕ ವಿಸ್ತರಿಸುವ ಬಗ್ಗೆ ಪ್ರಸ್ತಾವನೆ ಇದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) 12

ಆ) ಸುಮಾರು 600

ಇ) ಸಾಮಾನ್ಯವಾಗಿ ಈ ರೀತಿ ಇಲ್ಲ. ಆದರೆ, ಸೋಮವಾರ ಮತ್ತು ಗುರುವಾರ ರೇಡಿಯೋ ಥೆರಪಿ ಮತ್ತು ಸರ್ಜರಿ ಹೋರರೋಗಿಗಳ ವಿಭಾಗದಲ್ಲಿ ರೋಗಿಗಳ ಒತ್ತಡವು ಹೆಚ್ಚಾಗಿಯೇ ಇರುವುದರಿಂದ, ರೋಗಿಗಳನ್ನು ಕ್ರಮಬದ್ಧವಾಗಿ ಪರಿಶೀಲಿಸಬೇಕಾಗುವುದರಿಂದ, ಅವರು ಸ್ವಲ್ಪ ಸಮಯ ಕಾಯಬೇಕಾದ ಅಗತ್ಯವಿದ್ದು, ಇದು ಅನಿವಾರ್ಯವಾಗಿದೆ.

ಈ) ಇಲ್ಲ.

ಶ್ರೀ ರಾಮಲಿಂಗರೆಡ್ಡಿ :- ಮಾನ್ಯ ಉಪಾಧ್ಯಕ್ಷಣಿಯವರೆ, ಸಚಿವರು ಉತ್ತರದಲ್ಲಿ ಕ್ಯಾನ್ಸರ್ ಇನ್ಸ್‌ಟಿಟ್ಯೂಟಿಗೆ ಪ್ರತಿದಿನ 600 ಜನ ರೋಗಿಗಳು ಬರುತ್ತಾರೆಂದು ಕೊಟ್ಟಿದ್ದಾರೆ. ಆದರೆ, ಅಲ್ಲಿರುವುದು ಕೇವಲ 12 ಘಟಕಗಳು. ಪ್ರತಿ ದಿನ ಟ್ರೀಟ್‌ಮೆಂಟ್‌ಗೋಸ್ಕರ 4–5 ಗಂಟೆಗಳ ಕಾಲ ಕಾಯಬೇಕಾಗುತ್ತದೆಂದು ನಾನು ಕೇಳಿದೆ. ಆದಕ್ಕೆ, ಆ ರೀತಿ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಸಚಿವರಿಗೆ ಆಸ್ಪತ್ರೆಯವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಸಚಿವರು, ಬೇರೆ ರೋಗಿಗಳನ್ನು ಯಾರನ್ನೇ ಖುದ್ದಾಗಿ ಕಳುಹಿಸಿದರೆ ಅವರುಗಳು ಪ್ರತಿ ದಿನ 4–5 ಗಂಟೆ ಕಾಯಬೇಕಾದಂಥ ಪರಿಸ್ಥಿತಿ ಇರುತ್ತದೆ. ರೇಡಿಯೋ ಥೆರಪಿಯಾಗಲಿ, ಇಲ್ಲವೆ ಸರ್ಜರಿಯಾಗಲಿ ಪ್ರತಿಯೊಬ್ಬರು ಕನಿಷ್ಠ ಪಕ್ಷ 4–5 ಗಂಟೆ ಕಾಯುತ್ತಾರೆ. ಇದರ ಮಧ್ಯೆ ಆಗಾಗ ಮೆಡಿಕಲ್ ರೆಪ್ರಸೆಂಟೇಟಿವ್ಸ್ ಬರುತ್ತಾರೆ. ಅವರು ಡಾಕ್ಟರ್ ಹತ್ತಿರ ಕುಳಿತು ಗಂಟೆಗಟ್ಟಲೆ ಸಮಾಲೋಚಿಸುವುದುಂಟು. ರೋಗಿಗಳಿಗೆ ಬಹಳ ತೊಂದರೆಯಾಗುತ್ತಿದೆ ಎನ್ನುವುದು ನನ್ನ ಭಾವನೆ. ಅದೇ ರೀತಿ ಸೆಂಟ್‌ಜಾನ್ ಮೆಡಿಕಲ್ ಕಾಲೇಜ್‌ನವರು ಪ್ರೈವೇಟ್ ಡಾಕ್ಟರ್‌ಗಳನ್ನು ಕರೆಯಿಸಿ, ಅವರಿಗೆ ಇಂತಿಷ್ಟು ಎಂದು ದುಡ್ಡುಕೊಟ್ಟು ರೋಗಿಗೆ ಟ್ರೀಟ್‌ಮೆಂಟ್ ಕೊಡಿಸುತ್ತಾರೆ. ಆದುದರಿಂದ, ಅದೇ ರೀತಿ ಬೇರೆ ಡಾಕ್ಟರ್ ಅನ್ನು ಕರೆಯಿಸಿ ಅವರಿಗೂ ಇಂತಿಷ್ಟು ಎಂದು ದುಡ್ಡನ್ನು ಕೊಟ್ಟು ರೋಗಿಗಳಿಗೆ ಏತಕ್ಕೆ ಚಿಕಿತ್ಸೆ ಕೊಡಿಸಬಾರದು ಎನ್ನುವುದು ನನ್ನ ಸಲಹೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಉಪಾಧ್ಯಕ್ಷಣಿಯರೆ, ಕಿದ್ವಾಯ್ ಆಸ್ಪತ್ರೆಗೆ ರೋಗಿಗಳ ಒತ್ತಡ ಜಾಸ್ತಿಯಾಗಿರುವುದಂತೂ ನಿಜ. ಆದರೆ ಅವರಿಗೆ ಚಿಕಿತ್ಸೆಯನ್ನು ಬೇರೆ ಖಾಯಿಲೆಯೊಂದಿಗೆ ಕೊಡುವುದರಲ್ಲಿ ವಿನಾ ಕಾರಣದಿಂದ ವಿಳಂಬವಂತೂ ಆಗುವುದಿಲ್ಲ. ಹೋಲಿಕೆ ಮಾಡಿದರೆ ಈ ಕಾಯಿಲೆಯನ್ನು ಪರೀಕ್ಷೆ ಮಾಡತಕ್ಕ ಮತ್ತು ಚಿಕಿತ್ಸೆಯನ್ನು ಕೊಡತಕ್ಕ ವಿಧಾನವೇ ಬೇರೆ. ಈ ಕಾಯಿಲೆಯನ್ನು ಪರೀಕ್ಷೆ ಮಾಡಲು ಹೆಚ್ಚು ಸಮಯ ಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ರೇಡಿಯೋಥೆರಫಿ ಮತ್ತು ಫಿವೊಥೆರಫಿಯನ್ನು ಕೊಡತಕ್ಕದ್ದಕ್ಕೆ ಒಂದೊಂದು ರೋಗಿಗೆ ಕನಿಷ್ಠಪಕ್ಷ 20–25 ಅಥವಾ ಅರ್ಧ ಗಂಟೆಯ ಕಾಲಾವಧಿ ಬೇಕಾಗುತ್ತದೆ. ಈ ಕಾರಣದಿಂದ ರೋಗಿಗಳು ಕಾಯಬೇಕಾದಂಥ ಅನಿವಾರ್ಯ ಪರಿಸ್ಥಿತಿ ಬರತಕ್ಕದ್ದು ನಿಜ. ಆದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡತಕ್ಕವ್ದಾಗಲಿ ಮತ್ತು ಅದನ್ನು

ಪರೀಕ್ಷೆ ಮಾಡುವುದರಲ್ಲಾಗಲಿ ಯಾವುದೇ ವಿಧವಾದಂಥ ಕಳಪೆಯಾಗಲಿ, ಅನಾಸಕ್ತಿಯಾಗಲಿ ಇಲ್ಲ ಎನ್ನತಕ್ಕವನ್ನು ಖಚಿತವಾಗಿ ತಮ್ಮ ಮೂಲಕ ಹೇಳಬಯಸುತ್ತೇನೆ. ಈ ಚಿಕಿತ್ಸೆಯ ವಿಶೇಷತೆಯೆ ಹಾಗೆ ಸಮಯವನ್ನು ತೆಗೆದುಕೊಂಡು ಕೊಡಬೇಕಾಗುತ್ತದೆ. ಆ ಕಾರಣಕ್ಕಾಗಿ ರೋಗಿಗಳು ಸ್ವಲ್ಪ ಕಾಯಬೇಕಾಗುತ್ತದೆ. ಇಲ್ಲಿ ಮತ್ತೊಂದು ವಿಷಯವನ್ನು ನಾವು ಪರಿಗಣಿಸಬೇಕಾಗುತ್ತದೆ. ಒಬ್ಬ ವೈದ್ಯರು ಇನ್ನೊಬ್ಬ ವೈದ್ಯರಿಗೆ ಒಂದು ಮೇಳಿ ರೆಫರ್ ಮಾಡಬೇಕಾಗಿ ಬಂದಾಗ ಬಹುಶಃ ಆ ವೈದ್ಯರು ಪೂರ್ವಭಾವಿಯಾಗಿ ಅವರ ಒಂದು ಸರದಿಯ ಪಟ್ಟಿಯನ್ನು ತಯಾರು ಮಾಡಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿಯೂ ಕೂಡ ರೋಗಿಗಳು ಕಾಯಬೇಕಾದ ಪರಿಸ್ಥಿತಿಯಾಗುತ್ತದೆ. ಮಾನ್ಯ ರೆಡ್ಡಿಯವರು ಸೆಂಟ್‌ಜಾನ್ ಆಸ್ಪತ್ರೆಯಲ್ಲಿರತಕ್ಕ ವ್ಯವಸ್ಥೆಯನ್ನು ಇಲ್ಲಿಯೂ ಕೂಡ ಮಾಡಬೇಕೆಂದು ಹೇಳಿದ್ದಾರೆ. ಅದರ ಹಿನ್ನೆಲೆಯಲ್ಲಿ ನಾನೂ ಇದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ :- ಉಪಾಧ್ಯಕ್ಷೀಣಿಯರೆ, ಕರ್ನಾಟಕದಲ್ಲಿ ಈ ರೀತಿಯ ಆಸ್ಪತ್ರೆ ಇದೊಂದು ಇರುವುದು, ಆದುದರಿಂದ ಇದರ ಹೆಚ್ಚಿನ ಘಟಕವನ್ನು ತೆರೆಯಬೇಕೆಂದು ಮಾನ್ಯ ಸಚಿವರಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಕೆ. ಲಕ್ಷ್ಮಣ್ಣ :- ಉಪಾಧ್ಯಕ್ಷೀಣಿಯವರೆ ಕಿದ್ವಾಯಿ ಆಸ್ಪತ್ರೆಯಲ್ಲಿ ಹೊರರೋಗಿಗಳಿಗೆ ಮತ್ತು ಒಳರೋಗಿಗಳಿಗಿಬ್ಬರಿಗೂ ತುಂಬಾ ಅಡಚಣೆ ಇದೆ. ನಾನು ವಿಸಿಟಿಂಗ್ ಬೋರ್ಡ್‌ನ ಸದಸ್ಯನಾಗಿದ್ದಾಗ ಅಲ್ಲಿನ ಡೈರೆಕ್ಟರ್‌ರವರು ಬಹಳ ಅನಾನುಕೂಲವಿದೆ ಎಂದು ಹೇಳಿದರು. ಅಲ್ಲಿ ಹೆಚ್ಚು ರೂಮುಗಳ ಅವಶ್ಯಕತೆ ಇದೆ, ವೈದ್ಯರುಗಳು ಹೆಚ್ಚಾಗಬೇಕಾಗಿದೆ, ಹೊರರೋಗಿಗಳನ್ನು ಪರೀಕ್ಷೆ ಮಾಡಬೇಕಾದರೆ ನಿಧಾನವಾಗುತ್ತಿದೆ. ತಾವು ಹೇಳಿದ ಪ್ರಕಾರವೂ ಸಹ ತೊಂದರೆಯಾಗುತ್ತಿದೆ. ಇದನ್ನು ಅಲ್ಲಿನ ಡೈರೆಕ್ಟರ್ ಸಹ ನಮ್ಮ ಬಳಿ ಹೇಳಿದ್ದಾರೆ. ಆದುದರಿಂದ ಒಳರೋಗಿಗಳಿಗೆ ವ್ಯವಸ್ಥಿತವಾದಂಥ ರೂಮ್‌ಗಳ ವ್ಯವಸ್ಥೆ ಆಗಬೇಕಾಗಿದೆ. ಇದು ಹೊರರೋಗಿಗಳಿಗೂ ಆಗಬೇಕಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಉಪಾಧ್ಯಕ್ಷೀಣಿಯವರೆ, ನಾನು ಮೊದಲೇ ಹೇಳಿದಂತೆ ಈ ಒಂದು ಆಸ್ಪತ್ರೆಗೆ ರೋಗಿಗಳ ಒತ್ತಡ ಜಾಸ್ತಿ ಇದೆ. ಆದರಲ್ಲೂ ಈ ಶುಶ್ರೂಷ ಕಾರ್ಯಕ್ರಮ ಆದಮೇಲಂತೂ ಇದು ಇನ್ನೂ ಜಾಸ್ತಿಯಾಗಿದೆ ಎಂದು ಹೇಳತಕ್ಕದ್ದು ಅನಿವಾರ್ಯವೆಂದು ತಿಳಿದುಕೊಂಡಿದ್ದೇನೆ. ಈಗ ಹೆಚ್ಚುವರಿ ಸಿಬ್ಬಂದಿಯನ್ನು ಮತ್ತು ಸವಲತ್ತುಗಳನ್ನು ಕೊಡಬೇಕೆಂದು ನಮ್ಮ ಸನ್ಮಾನ್ಯ ಸದಸ್ಯರ ಸಲಹೆ. ಈ ಒಂದು ಹಿನ್ನೆಲೆಯಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಮತ್ತು ಶ್ರೀಮಾನ್ ರೆಡ್ಡಿಯವರು ಇದರ ಘಟಕವನ್ನು ಏಕೆ ಇನ್ನು ಹೆಚ್ಚು ಮಾಡಬಾರದೆಂಬ ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಹಣಕಾಸಿನ ಪರಿಸ್ಥಿತಿ ಮತ್ತು ಪರಿಸರವನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಅಂತು ಸರ್ಕಾರದ ವತಿಯಿಂದ ಈ ಒಂದು ಆಸ್ಪತ್ರೆಗೆ ವಿಶೇಷವಾದಂಥ ಆರ್ಥಿಕ ವ್ಯವಸ್ಥೆಯನ್ನಾಗಲಿ ಅಥವಾ ಸವಲತ್ತುಗಳನ್ನು ಕೊಡತಕ್ಕ ವಿವರಣೆಯನ್ನು ಪರಿಶೀಲನೆಯಲ್ಲಿ ಇಟ್ಟುಕೊಂಡಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ರೋಗಿಗಳ ಸಹಕಾರವೂ ಬೇಕಾಗುತ್ತದೆ ಮತ್ತು ಸಾರ್ವಜನಿಕರ ಸಹಕಾರವೂ ಕೂಡ ಬೇಕಾಗುತ್ತದೆ. ಕಾರಣವೇನೆಂದರೆ ರಾಜ್ಯಕ್ಕೆಲ್ಲಾ ಇದೊಂದೆ ಇಂಥ ಪ್ರಮುಖವಾದ ಆಸ್ಪತ್ರೆ ಇರುವುದರಿಂದ ಮತ್ತು ರೋಗಿಗಳ ಒತ್ತಡ ಹೆಚ್ಚಾಗಿರುವುದರಿಂದ ಅವರೂ ಸಹ ಸಹಕರಿಸಬೇಕು ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ಕ್ಲಿನಿಕಲ್ ಸೌಲಭ್ಯಗಳು

751. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಖಾಸಗಿ ವಲಯದ ವೈದ್ಯಕೀಯ ಕಾಲೇಜುಗಳ ಕೊರತೆಯನ್ನು ನೀಗಲು ಸರ್ಕಾರಿ ಆಸ್ಪತ್ರೆಗಳ ಕ್ಲಿನಿಕಲ್ ಸೌಲಭ್ಯವನ್ನು ಬಳಸಿಕೊಳ್ಳಲು ಸರ್ಕಾರ ಅನುಮತಿಯನ್ನು ಎಷ್ಟು ವೈದ್ಯಕೀಯ ಕಾಲೇಜುಗಳಿಗೆ ,ಯಾವಾಗ ನೀಡಲಾಗಿದೆ;

ಆ) ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಈ ಬಗ್ಗೆ ವರ್ಷಕ್ಕೆ ಎಷ್ಟು ಸಂದಾಯವಾಗುತ್ತಿದೆ;

ಇ) ಈಗ ಯಾವ ಯಾವ ಕಾಲೇಜುಗಳಿಂದ ಎಷ್ಟೆಷ್ಟು ಹಣ ಬಾಕಿ ಬರಬೇಕಾಗಿದೆ;

ಈ) ಬಾಕಿ ಹಣ ಕೊಡದಿರುವ ಕಾಲೇಜುಗಳಿಗೆ ಯಾವಾಗಿನಿಂದ ಕ್ಲಿನಿಕಲ್ ಸೌಲಭ್ಯ ರದ್ದುಗೊಳಿಸಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 12 ಖಾಸಗಿ ವೈದ್ಯಕೀಯ ವಿದ್ಯಾಲಯಗಳಿಗೆ ನೀಡಲಾಗಿದೆ ಮತ್ತು ವಿವರಗಳು ಈ ಕೆಳಕಂಡಂತಿವೆ.

1.	ಜೆ.ಎಸ್. ಮೆಡಿಕಲ್ ಕಾಲೇಜು, ಬೆಳಗಾಂ	- 1963
2.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	- 1965
3.	ಎಂ.ಆರ್.ವೈದ್ಯಕೀಯ ಕಾಲೇಜು, ಗುಲ್ಬರ್ಗ	- 1963
4.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	- 1977
5.	ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	- 1979
6.	ಕೆಂಪೇಗೌಡ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು	- 1980
7.	ಡಾ.ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	- 1980
8.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	- 1985
9.	ಆಲ್-ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	- 1984
10.	ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಳ್ಳೂರು	- 1985
11.	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	- 1986
12.	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	- 1988

ಆ) ಆಡಳಿತ ಮಂಡಲಿಯ ಪಾಲಿನ ಸೀಟಿಗೆ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ರೂ.2,500.00

ಇ) ತಾತ್ಕಾಲಿಕವಾಗಿ ಬಾಕಿ ಇರುವ ಮೊತ್ತ ಈ ಕೆಳಕಂಡಂತಿದೆ :

1.	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	- ರೂ.52.36 ಲಕ್ಷಗಳು
2.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	- ರೂ.82.64 ಲಕ್ಷಗಳು
3.	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗ	- ರೂ.51.39 ಲಕ್ಷಗಳು
4.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	- ರೂ.45.89 ಲಕ್ಷಗಳು
5.	ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	- ರೂ.31.12 ಲಕ್ಷಗಳು
6.	ಕೆಂಪೇಗೌಡ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು	- ರೂ.69.45 ಲಕ್ಷಗಳು
7.	ಡಾ : ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	- ರೂ.66.97 ಲಕ್ಷಗಳು
8.	ಆಲ್ ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	- ರೂ.14.01 ಲಕ್ಷಗಳು
9.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	- ರೂ.58.32 ಲಕ್ಷಗಳು
10.	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	- ರೂ. 6.83 ಲಕ್ಷಗಳು
11.	ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಳ್ಳೂರು	ರೂ. 43.13 ಲಕ್ಷಗಳು
12.	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	ರೂ. 7.47 ಲಕ್ಷಗಳು

ಕೆಳಗೆ ಕಾಣಿಸಿದ ಆದೇಶಗಳನ್ವಯ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲು ಖಾಸಗಿ ವೈದ್ಯಕೀಯ ಕಾಲೇಜುಗಳು ಆಡಳಿತ ಮಂಡಳಿಗಳು ಕೋರುತ್ತಿವೆ :

ಅ) ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ 102 ಎಂಎಸ್ ಎಫ್ 87, ದಿನಾಂಕ : 12–6–1989 ರ ಪ್ರಕಾರ ಆಡಳಿತ ಮಂಡಳಿ ಪಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ನಿಗದಿ ಪಡಿಸುವುದು.

ಆ) ಕ್ಲಿನಿಕಲ್ ವ್ಯಾಸಂಗ ಮಾಡಿದ ಅವಧಿಗೆ ಮಾತ್ರ ಕ್ಲಿನಿಕಲ್ ಫೀಯನ್ನು ಪಾವತಿ ಮಾಡಬೇಕೆಂದು ನಿರ್ದೇಶಿಸಿರುವ ಆದೇಶ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ165 ಎಂಎಂಇ 83, ದಿನಾಂಕ 17–1–84ರ ಪ್ರಕಾರ.

ಇ) ಕ್ಲಿನಿಕಲ್ ವ್ಯಾಸಂಗಕ್ಕೆ ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸಿದ ವಿದ್ಯಾರ್ಥಿಗಳಿಗೆ ಮಾತ್ರ.

ಈ) ಕ್ಲಿನಿಕಲ್ ಫೀಯನ್ನು ಸ್ವಂತ ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸಲು ಆಡಳಿತ ಮಂಡಳಿಗಳಿಗೆ ಅನುಮತಿ ನೀಡಿರುವ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ 165 ಎಂ.ಎಂ.ಇ. 83, ದಿನಾಂಕ 17–1–1984 ರ ಪ್ರಕಾರ.

ಉ) ಕ್ಲಿನಿಕಲ್ ಫೀಯನ್ನು ಸರ್ಕಾರಿ ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸಲು ಮಾತ್ರ ಮತ್ತು ಖರ್ಚು ಮಾಡಿರುವ ಬಗ್ಗೆ ನಿರ್ದೇಶಿಸಿರುವ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ 4 ಎಂ.ಎಂ.ಇ. 88, ದಿನಾಂಕ 14–3–1988 ರ ಪ್ರಕಾರ.

ಈ ಲೆಕ್ಕ ಹೊಂದಾಣಿಕೆಯನ್ನು 15–3–92 ರೊಳಗೆ ಮುಕ್ತಾಯಗೊಳಿಸಲು ನಿರ್ದೇಶಿಸಲಾಗಿದೆ.

ಈ) ಲೆಕ್ಕ ಮರು ಹೊಂದಾಣಿಕೆ ಮುಗಿದ ನಂತರ, ಬಾಕಿ ಇರುವ ಕ್ಲಿನಿಕಲ್ ಫೀ ಪಾವತಿ ಮಾಡದಿದ್ದರೆ.

ಶ್ರೀ ಜಿ. ರಾಜುಗೌಡ (ಹನೂರು) :– ಉಪಾಧ್ಯಕ್ಷೀಣೆಯವರೇ, ಸರ್ಕಾರದ ಅನಾಧರಣೆಯಿಂದ 12 ಖಾಸಗಿ ವೈದ್ಯಕೀಯ ಕಾಲೇಜುಗಳಿಂದ 575 ಲಕ್ಷ ಅಂದರೆ 5 ಕೋಟಿ 75 ಲಕ್ಷ ರೂಪಾಯಿಗಳು ಬಾಕಿ ಬರಬೇಕಾಗಿದೆ. ನಿಮ್ಮ ಪರಿಸ್ಥಿತಿಯನ್ನು ನೋಡಿ ಬಹುಶಃ ನನಗೇನನ್ನಿಸುತ್ತದೆಂದರೆ ದಾಕ್ಷಿಣ್ಯಕ್ಕೆ ಗರ್ಭಿಣಿಯಾಗಿ ಹಡಿಯಲು ಸ್ಥಳವಿಲ್ಲ ಎನ್ನುವಂತೆ ಇದೆ. ತಾವು ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವ ಮೊದಲು, ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಪರವಾನಗಿಯನ್ನು ಕೊಡುವ ಮೊದಲು 5 ವರ್ಷದೊಳಗೆ ಆಯಾಯಾ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಅನುಸರಿಸಿ ಅವರು ಆಸ್ಪತ್ರೆಯನ್ನು ಕಟ್ಟಬೇಕೆಂದು ನಿಬಂಧನೆ ಇದೆ. ಈಗ ಆ ನಿಬಂಧನೆಯ ಉಲ್ಲಂಘನೆಯಾಗಿದೆ. ಸರ್ಕಾರದವರು ಅದನ್ನು ಉಲ್ಲಂಘನೆ ಮಾಡಿದ್ದಾರೆ. ಕಾಲೇಜಿನವರು ಕೂಡ ನಿಬಂಧನೆಯನ್ನು ಉಲ್ಲಂಘನೆ ಮಾಡಿದ್ದಾರೆ. ಈಗ ಅವರು ನಿಬಂಧನೆಯನ್ನು ಉಲ್ಲಂಘನೆ ಮಾಡಿರುವುದರಿಂದ ಅವರಿಗೆ ನೀಡಿರತಕ್ಕ ಮಾನ್ಯತೆಯನ್ನು ಏಕೆ ರದ್ದು ಮಾಡಬಾರದು ; ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದಾಗಿ ನಿಮಗೆ ಬರಬೇಕಾಗಿರತಕ್ಕ 5 ಕೋಟಿ 75 ಲಕ್ಷ ರೂಪಾಯಿಗಳನ್ನು ಯಾವಾಗ ವಸೂಲಿ ಮಾಡುತ್ತೀರಿ ? ಇದರ ಬಗ್ಗೆ ತಾವು ದಯಮಾಡಿ ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಸನ್ಮಾನ್ಯ ಅಧ್ಯಕ್ಷೀಣೆಯವರೇ, ಈ ಖಾಸಗೀ ಮೆಡಿಕಲ್ ಕಾಲೇಜಿನವರಿಂದ ಸರ್ಕಾರಕ್ಕೆ ಬರತಕ್ಕಂತಹ ಕ್ಲಿನಿಕಲ್ ಚಾರ್ಜ್‌ಸನ್ನು ವಸೂಲಿ ಮಾಡುವಲ್ಲಿ ಸರ್ಕಾರ ಅನಾಸಕ್ತಿ ತೋರಿಸುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ತರಹ ಖಂಡಿತ ಇಲ್ಲವೆಂದು ಸ್ಪಷ್ಟಪಡಿಸುತ್ತೇನೆ. 1984ರಿಂದ ಇಲ್ಲಿಯವರೆಗೆ ಹಣ ವಸೂಲಿ ಆಗಿಲ್ಲ, ಅದಕ್ಕೆ ಕಾರಣ ಹಲವಾರು ಇವೆ. ಅವುಗಳನ್ನು ಹೇಳುವುದರಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ. ಈ ಹಣವನ್ನು ವಸೂಲಿ ಮಾಡಬೇಕಾದುದು ಸರ್ಕಾರದ ಹೊಣೆಗಾರಿಕೆ ಇದೆ. ಈಗಾಗಲೇ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಕಳೆದ 29ನೇ ತಾರೀಖು ಸಚಿವ ಸಂಪುಟದಲ್ಲಿ ಮೆಡಿಕಲ್ ಕಾಲೇಜ್‌ನವರು ಯಾರಾದರೂ ಹಣ ಕೊಡದೇ ಹೋದರೆ ಅವರಿಗೆ ಕೊಡತಕ್ಕಂತಹ ಫೆಸಿಲಿಟೀಸ್‌ಗಳನ್ನು ನಿಲ್ಲಿಸಬೇಕೆಂದೂ ಸಹ ನಿರ್ಣಯವಾಗಿದೆ. ಮತ್ತು ಈಗ ಬರಬೇಕಾದಂಥ ಬಾಕಿ ಹಣವನ್ನು ಕೂಡ ವಸೂಲಾತಿ ಮಾಡುವುದಕ್ಕೆ ಕ್ರಮತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. ಆದರೆ ಇತ್ತೀಚೆಗೆ 27ನೇ ಫೆಬ್ರವರಿಯಲ್ಲಿ ಒಂದು ಮೀಟಿಂಗ್ ಮಾಡಿದಾಗ ಈ ತೀರ್ಮಾನ ತೆಗೆಕೊಂಡಿದ್ದೇವೆ. ಖಾಸಗಿಯವರು ಮತ್ತು ಸರ್ಕಾರದ ಅಧಿಕಾರಿಗಳು ಕುಳಿತು ಮಾತನಾಡಿದಾಗ ಅಂಕಿಅಂಶಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದು ಅದನ್ನು ಸರಿಪಡಿಸುವಂಥಾದ್ದಕ್ಕೆ ಅವರು ಅನುಮತಿ ಕೇಳಿದ್ದಾರೆ. ಇದರ ಬಗ್ಗೆ ರಿಕನ್ಸಿಲಿಯೇಷನ್

ಮಾಡುತ್ತಿದ್ದಾರೆ. ಅದು ಏನೇ ಆದರೂ ನಮ್ಮ ತೀರ್ಮಾನವನ್ನು ಬಿಡುವುದಿಲ್ಲ, ಸರ್ಕಾರಕ್ಕೆ ಅವರಿಂದ ಬರಬೇಕಾದಂತಹ ಬಾಕಿಯನ್ನು ಅವರು ಕೊಡದೇ ಇದ್ದರೆ ಅವರಿಗೆ ಕೊಡತಕ್ಕಂಥ ಫೆಸಿಲಿಟೀಸ್‌ಗಳನ್ನು ನಿಲ್ಲಿಸುತ್ತೇವೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ತೀವ್ರವಾದಂತಹ ಕ್ರಮವನ್ನು ಕೂಡ ತೆಗೆದುಕೊಳ್ಳುತ್ತೇವೆ. ನಮಗಂತೂ ಅವರಿಂದ ಹಣ ವಸೂಲಿಯಾಗುತ್ತದೆಂದು ವಿಶ್ವಾಸವಿದೆ. ವಸೂಲಿ ಆಗದಿದ್ದರೆ ಅವರಿಗೆ ಕೊಡತಕ್ಕಂತಹ ಸೌಲಭ್ಯಗಳನ್ನು ನಿಲ್ಲಿಸುತ್ತೇವೆ. ಇದನ್ನು ಮಾಡಲು ಸರ್ಕಾರ ಹಿಂದುಮುಂದು ನೋಡುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಜಿ. ರಾಜುಗೌಡ :– ಅಂತಿಮವಾಗಿ ತಾವು ಯಾವಾಗ ಹಣವನ್ನು ವಸೂಲಿ ಮಾಡುತ್ತೀರೆಂದು ಹೇಳಲಿಲ್ಲ. ಬರೀ ವಸೂಲಿ ಮಾಡುತ್ತೇವೆಂದು ಮಾತ್ರ ಹೇಳಿದಿರಿ. ಖಾಸಗೀ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವ ಕಾಯಿದೆ ನಿಮ್ಮಲ್ಲಿಯೇ ಇವೆ. 5 ವರ್ಷದೊಳಗೆ ಅವರು ಸ್ವಂತ ಆಸ್ಪತ್ರೆಯ ಕಟ್ಟಡ ಕಟ್ಟಿಸಬೇಕಾಗಿದೆ. ಅವರು ಕಟ್ಟಿಸದಿದ್ದರೆ ತಾವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ, ಅದಕ್ಕೆ ಉತ್ತರ ಹೇಳಬೇಕು ಒಂದು. ಹಿಂದೆ ಡಾ : ಕೆ.ಎನ್. ನಂಜುಂಡಪ್ಪನವರ ಸಮಿತಿಯನ್ನು ನೇಮಿಸಿದ್ದಿರಿ , ಆ ಸಮಿತಿ ವರದಿ ಏನು ಹೇಳಿದೆ, ದಯವಿಟ್ಟು ತಾವು ನೋಡಬೇಕು. ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಒದಗಿಸಿರುವ ಆಸ್ಪತ್ರೆ ಸೌಲಭ್ಯವನ್ನು ಖಾಸಗೀ ಕಾಲೇಜುಗಳಿಗೆ ಹಂಚುವುದೆಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಖಾಸಗೀ ಕಾಲೇಜುಗಳಿಗೆ ಸೌಲಭ್ಯಗಳನ್ನು ಒದಗಿಸುವುದು ಅನಾವಶ್ಯಕವೆಂದು ಸರ್ಕಾರಕ್ಕೆ ವರದಿ ಕೊಟ್ಟಿದೆ. ಆ ವರದಿ ತಮ್ಮ ಕೈ ಸೇರಿದ ಮೇಲೂ ಕೂಡ ತಾವು ಸೌಲಭ್ಯವನ್ನು ಮುಂದುವರಿಸಿಕೊಂಡು ಹೋಗುವುದರಿಂದ ನಮ್ಮ ಸರ್ಕಾರಿ ಕಾಲೇಜಿಗೆ ಕೊಡತಕ್ಕಂತಹ ಒಂದು ಸೌಲಭ್ಯವನ್ನು ತಪ್ಪಿಸಿದ ಹಾಗೆ ಆಗುವುದಿಲ್ಲವೆ? 575 ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ. ನಮಗೆ ಒಂದು ಆಸ್ಪತ್ರೆ ಕೊಡಿ ಎಂದರೆ ಇಲ್ಲವೆಂದು ಹೇಳುತ್ತೀರಿ, ಆರ್ಥಿಕ ಪರಿಸ್ಥಿತಿ ಕೆಟ್ಟಿದೆಯೆಂದು ಹೇಳುತ್ತೀರಿ. 575 ಕೋಟಿ ರೂಪಾಯಿಗಳನ್ನು ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ಬಿಟ್ಟಿದ್ದೀರಿ. ಅವರು ಕೋಟ್ಯಾಂತರ ರೂಪಾಯಿಯನ್ನು ಕ್ಯಾಪಿಟೇಷನ್ ಶುಲ್ಕದಿಂದ ವಸೂಲಿ ಮಾಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಈ ಬಾಕಿಯ ಜೊತೆಗೆ ಅದಕ್ಕೆ 24 ಪರ್ಸೆಂಟ್ ಇಂಟರೆಸ್ಟನ್ನು ಸೇರಿಸಿ ಬಾಕಿ ವಸೂಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ಮೇಲೆ ಹೇಳಿದ ಹಾಗೆ ಫೆಬ್ರವರಿ 29ರಂದು ಅವರಿಂದ ಬರಬೇಕಾದಂಥ ಬಾಕಿಯನ್ನು ಕೊಡುವುದಕ್ಕೆ ಅಂತಿಮ ದಿನಾಂಕವನ್ನು ನಿಗದಿ ಮಾಡಿದ್ದೇವೆ. ಈಗ ಅವರು ಸರ್ಕಾರದ ಜೊತೆ ಸಮಾಲೋಚನೆಗೋಸ್ಕರ ಮತ್ತು ಲೆಕ್ಕಪತ್ರಗಳ ತಪಾಸಣೆಗಾಗಿ ಸಭೆ ಸೇರಿದ್ದಾರೆ. ನಮ್ಮ ಸಚಿವ ಸಂಪುಟದ ನಿರ್ಣಯದ ಪ್ರಕಾರ ಅವರಿಗೆ ಸವಲತ್ತುಗಳನ್ನು ನಿಲ್ಲಿಸಬೇಕಾಗಿದೆ. ನಿಲ್ಲಿಸುವುದಕ್ಕೆ ಮೊದಲು ಸಚಿವಸಂಪುಟದ ಮುಂದೆ ಈ ಒಂದು ವಿಚಾರವನ್ನು ಪ್ರಸ್ತಾವನೆಗೆ ಇಟ್ಟು ಅನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ. ಈ ಪ್ರಸ್ತಾವನೆಯನ್ನು ನಾವು ಈಗಾಗಲೇ ಕಳುಹಿಸಿದ್ದೇವೆ. ಮುಂಬರುವ ವಾರದಲ್ಲಿ ಸಚಿವಸಂಪುಟದ ಮುಂದೆ ಈ ವಿಷಯವನ್ನು ಇಟ್ಟು ಖಚಿತವಾದ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ. ಜಿ. ರಾಜುಗೌಡ :– ಮಾನ್ಯ ಉಪಾಧ್ಯಕ್ಷೀಣಿಯರೇ, ನನ್ನ ಪ್ರಶ್ನೆಗೆ ನೇರವಾದ ಉತ್ತರ ಹೇಳಲಿಲ್ಲ. ಐದು ವರ್ಷದೊಳಗೆ ಖಾಸಗೀಯವರು ತಮ್ಮ ಸ್ವಂತ ಕಟ್ಟಡ ಕಟ್ಟಬೇಕೆಂದು ನಿಯಮವಿದೆ. ಆ ನಿಯಮ ಬಾಹಿರವಾಗಿ ಆ ನಿಯಮವನ್ನು ಉಲ್ಲಂಘನೆ ಮಾಡಿದ್ದಾರೆ. ಅದರೆ ಏಕೆ ಆ ನಿಬಂಧನೆ ಉಲ್ಲಂಘನೆ ಮಾಡಿಲ್ಲ ಏಕೆ ಮಾನ್ಯತೆ ರದ್ದು ಮಾಡಬೇಕು ಎಂದು ನನ್ನ ಪ್ರಶ್ನೆ. ದಯವಿಟ್ಟು ಅದಕ್ಕೆ ಉತ್ತರ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಸ್ವಾಮಿ, ಸರ್ಕಾರಿ ಆಜ್ಞೆ ಪ್ರಕಾರ 1980 ರಂದು ಹಿಂದೆ ಖಾಸಗೀ ಕಾಲೇಜುಗಳು ಮಾನ್ಯತೆಯನ್ನು ಹೊಂದಿದ್ದರೆ ಅವು ಐದು ವರ್ಷದೊಳಗೆ ಇಷ್ಟೇ ಸವಲತ್ತುಗಳನ್ನು ಹೊಂದಬೇಕೆಂದು ಒಂದು ಸರ್ಕಾರಿ ಆಜ್ಞೆ ಇದೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಮೂರು ಮೆಡಿಕಲ್ ಕಾಲೇಜುಗಳಾಗಿ ಆಸ್ಪತ್ರೆಗಳನ್ನು ಇನ್ನೂ ಹೊಂದಿಲ್ಲ. ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು 1980ರ ನಂತರ ಆರಂಭವಾಗಿರತಕ್ಕಂತಹ ಕಾಲೇಜುಗಳಿಗೆ ಆಸ್ಪತ್ರೆಗಳನ್ನು ಕಟ್ಟುವುದಕ್ಕೆ 10 ವರ್ಷ ಕಾಲಾವಕಾಶ ಕೊಟ್ಟಿದ್ದಾರೆ. ಸರ್ಕಾರಿ ಆಜ್ಞೆಯಲ್ಲಿ ಒಂದು

ಸರ್ಕಾರಿ ಆಫೀಸ್ಗೂ ಮತ್ತೊಂದು ಸರ್ಕಾರಿ ಆಫೀಸ್ಗೂ ಕೂಡ ಸ್ವಲ್ಪಮಟ್ಟಿಗೆ ವಿಪರ್ಯಾಸವಿದೆ. ಅದನ್ನು ನಾವು ಗಣನೆಗೆ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆ ಸರ್ಕಾರಿ ಆಫೀಸ್ನಲ್ಲಿ ವ್ಯತ್ಯಾಸ ಏಕೆ ಎನ್ನುವ ಬಗ್ಗೆ ನಾನು ಪ್ರಸ್ತಾಪ ಮಾಡತಕ್ಕಂತಹ ಅಗತ್ಯವಿಲ್ಲ. ಆದರೆ ವಿಚಾರವನ್ನು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಮುಂದೆ ಇರತಕ್ಕಂತಹ ಒಂದು ಹೊಣೆಗಾರಿಕೆಯನ್ನು ಈ ಹಿನ್ನಲೆಯಲ್ಲಿ ಶೀಘ್ರವೇ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ವೆರಿಕರ್ ಎಂ ಮಲ್ಲಪ್ಪ :– ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಕ್ಲಿನಿಕಲ್ ಫೆಸಿಲಿಟಿಗಳನ್ನು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಕಳೆದ 5–6 ದಿನಗಳ ಹಿಂದೆ ನನ್ನ ಪ್ರಶ್ನೆಗೆ ಸ್ಪಷ್ಟವಾಗಿ ಭರವಸೆಯನ್ನು ಕೊಟ್ಟು 1–3–92 ರೊಳಗೆ ಖಾಸಗಿ ಮೆಡಿಕಲ್ ಕಾಲೇಜಿನವರು ಕೊಡಬೇಕಾದ 5.8 ಕೋಟಿ ರೂ.ಗಳನ್ನು ಅವರು ಕೊಡದೇ ಹೋದರೆ ನಾವು ಅವರಿಗೆ ಕೊಡುತ್ತಿರುವ ಎಲ್ಲಾ ಸೌಲಭ್ಯಗಳನ್ನೂ ನಿಲ್ಲಿಸುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳ ಉತ್ತರವನ್ನು ಕೊಟ್ಟರೂ ಇವತ್ತು ಅದನ್ನು ಕ್ಯಾಬಿನೆಟ್ಗೆ ಈ ವಿಚಾರವನ್ನು ತೆಗೆದುಕೊಂಡು ಹೋಗಿ ಇದರ ಬಗ್ಗೆ ಚೌಕಾಸಿ ಮಾಡಬೇಕು, ಅವರನ್ನು ಕರೆದು ಅವರ ಜೊತೆ ಮಾತನಾಡುತ್ತೇವೆ, ಅವರ ಲೆಕ್ಕ ಪತ್ರಗಳನ್ನು ಕೇಳುತ್ತಿದ್ದೇವೆ, ಅವರ ಲೆಕ್ಕಪತ್ರಗಳನ್ನು ಪರಿಶೀಲಿಸಿ ಕಳೆದ 4–5 ವರ್ಷಗಳಿಂದ ನಿಂತಿರತಕ್ಕ ಅವರ ಬಾಕಿಯನ್ನು ವಸೂಲು ಮಾಡಬೇಕೆಂದು ತಿಳಿಸಿದ್ದಾರೆ. ಈ ಸಭೆಯಲ್ಲಿ ಇದರ ಬಗ್ಗೆ ಪ್ರಶ್ನೆಯ ಮೇಲೆ ಪ್ರಶ್ನೆ ಬಂದಿವೆ. ಕಳೆದ 5–6 ದಿನಗಳ ಹಿಂದೆ ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳೇ ಭರವಸೆಯನ್ನು ಕೊಟ್ಟು ನಾವು ಈ ಹಣವನ್ನು ವಸೂಲ್ಮಾಡುತ್ತೇವೆ. 1–3–92ರೊಳಗೆ ಅವರ ಬಾಕಿಯನ್ನು ಕೊಡದಿದ್ದರೆ 1ನೇ ತಾರೀಖಿನಿಂದಲೇ ಅವರಿಗೆ ಕೊಡುತ್ತಿರುವ ಕ್ಲಿನಿಕಲ್ ಫೆಸಿಲಿಟೀಸ್ನ್ನು ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತು ಈ ನಿಯಮವನ್ನು ಬಿಟ್ಟು ಬೇರೆ ನಿಯಮನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರಿಂದ ಬರಬೇಕಾದ ಹಣವನ್ನು ವಸೂಲ್ಮಾಡಬೇಕೆಂಬ ಉದ್ದೇಶ ಈ ಸರ್ಕಾರಕ್ಕೆ ಇದೆಯೋ ಇಲ್ಲವೋ, ಕೇವಲ ಕಾಟಾಚಾರಕ್ಕೆ ನಮಗೆ ಉತ್ತರವನ್ನು ಕೊಡುತ್ತಿದ್ದಾರೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಸದಸ್ಯರು ನನ್ನ ಮಾತನ್ನು ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಈ ಹಿಂದೆ ಮಾನ್ಯ ಸದಸ್ಯರ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ನಾವು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವೋ ಅದರಲ್ಲಿ ಖಂಡಿತವಾಗಿ ಯಾವುದೇ ಬದಲಾವಣೆಯೂ ಇಲ್ಲ. ನಾವು ಬಾಕಿ ಇರುವ ಹೆಣವನ್ನು ವಸೂಲ್ಮಾಡುವುದರಲ್ಲಿ ಹಿಂದೆ ಬೀಳುವುದಿಲ್ಲ. ಫೆಬ್ರವರಿ 29ರ ನಮ್ಮ ಸಚಿವ ಸಂಪುಟದ ತೀರ್ಮಾನದ ಪ್ರಕಾರ ಬಾಕಿ ಕೊಡದೇ ಇರತಕ್ಕ ಖಾಸಗೀ ಮೆಡಿಕಲ್ ಕಾಲೇಜುಗಳಿಗೆ ಕೊಡುತ್ತಿರುವ ಸೌಲಭ್ಯಗಳನ್ನು ನಿಲ್ಲಿಸಲೇಬೇಕೆಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ಮಾತನ್ನು ಅವರಿಗೂ ಕೂಡ ನಾನು ಹೇಳಿದ್ದೇನೆ. ಫೆಬ್ರವರಿ 29ರ ತೀರ್ಮಾನದ ಪ್ರಕಾರ ಬರಬೇಕಾದ ಬಾಕಿಯನ್ನು ವಸೂಲ್ಮಾಡುವುದಕ್ಕೆ ರೆವಿನ್ಯೂ ಡಿಪಾರ್ಟ್ಮೆಂಟ್ ಮುಖಾಂತರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ಇವತ್ತೂ ಕೂಡ ನಾವು ಇದಕ್ಕೆ ಸ್ಟ್ರಿಕಾನ್ ಆಗಿದ್ದೇವೆ. ಅವರ ಜೊತೆ ಮಾತನಾಡಿ, ಚೌಕಾಸಿ ಮಾಡತಕ್ಕ ವ್ಯವಹಾರ ಖಂಡಿತ ಇಲ್ಲ. ಆದರೆ ಅಂತಿಮವಾಗಿ ಈ ತೀರ್ಮಾನದ ಪ್ರಕಾರ ಕಾನೂನನ್ನು ಜಾರಿಗೆ ಕೊಡುವ ವಿಚಾರದಲ್ಲಿ ಕೊನೆಯ ಹಂತದಲ್ಲಿದ್ದೇವೆ. ಖಂಡಿತವಾಗಿ ಸಚಿವಸಂಪುಟದಲ್ಲಿ ಇದರ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಕುಂದಾಪುರ ಸಾರ್ವಜನಿಕ ಆಸ್ಪತ್ರೆ ಆಂಬ್ಯೂಲೆನ್ಸ್ಗೆ ವಾಹನದ ಮಂಜೂರಾತಿ

852. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಾಪುರ ಸಾರ್ವಜನಿಕ ಆಸ್ಪತ್ರೆಗೆ ಆಂಬ್ಯೂಲೆನ್ಸ್ ಸೌಲಭ್ಯದ ಬಗ್ಗೆ ಸರ್ಕಾರದ ಮಂಜೂರಾತಿ ದೊರಕಿದ್ದರೂ ಈ ತನಕ ಆಂಬ್ಯೂಲೆನ್ಸ್ ಒದಗಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಆಂಬ್ಯುಲೆನ್ಸ್ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು;
ಇ) ಎಂದಿನಿಂದ ಈ ಸೌಲಭ್ಯ ಒದಗಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) –

ಅ) ಜಿಲ್ಲಾ ಪರಿಷತ್ ದಕ್ಷಿಣ ಕನ್ನಡ ಜಿಲ್ಲೆಯವರು ಆಂಬ್ಯುಲೆನ್ಸ್‌ನ್ನು ಕೊಂಡುಕೊಳ್ಳಲು ನಿರ್ಣಯಿಸಿದ್ದು ಪ್ರಸ್ತಾವನೆಯು ಸರ್ಕಾರದಿಂದ ಪರಿಶೀಲನೆಯಲ್ಲಿದೆ.
ಆ) ಪ್ರಸ್ತಾವನೆಯು ಮಂಜೂರಾದ ನಂತರ ಜಿಲ್ಲಾಪರಿಷತ್‌ನವರು ಆಂಬ್ಯುಲೆನ್ಸ್‌ನ್ನು ಕೊಂಡು ಕೊಳ್ಳುತ್ತಾರೆ.
ಇ) ಸದ್ಯದಲ್ಲೇ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :– ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ಜಿಲ್ಲಾ ಪರಿಷತ್ತಿನ ಒಂದು ನಿರ್ಣಯದ ಪ್ರಕಾರ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಯಾವ ಪ್ರಸ್ತಾವನೆ ಬಂದಿದೆ, ಯಾವ ವರ್ಷದಲ್ಲಿ ನಿರ್ಣಯ ಆಗಿದೆ, ಎಂದು ಮಂಜೂರಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಇಲ್ಲಿ ಹೇಳಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಉಪಾಧ್ಯಕ್ಷೀಣಿಯವರೆ ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಜಿಲ್ಲಾ ಪರಿಷತ್ತಿನವರ ಪ್ಲಾನ್ ಪ್ರಕಾರ ಪುತ್ತೂರು ಮತ್ತು ಕುಂದಾಪುರ ಆಸ್ಪತ್ರೆಗಳಿಗೆ ಜಿಲ್ಲಾ ಆಯವ್ಯಯದಲ್ಲಿ 3.5 ಲಕ್ಷ ರೂಪಾಯಿಗಳಿಗೆ ವಾಹನವನ್ನು ಕೊಂಡುಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿಕೊಂಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ರೆಸಲ್ಯೂಷನನ್ನೂ ಕೂಡ ಮಾಡಿಕೊಂಡಿದ್ದಾರೆ. ಇದನ್ನು ಅವರು ಸರ್ಕಾರಕ್ಕೆ ಕಳುಹಿಸಿಕೊಡಬೇಕಾದ ಅವಶ್ಯಕತೆ ಇರಲಿಲ್ಲ, ಏಕೆಂದರೆ ಈಗಾಗಲೇ ಎಲ್ಲಾ ಜಿಲ್ಲಾಪರಿಷತ್ತಿನವರೂ ಕೂಡ ಅವರ ಮಟ್ಟದಲ್ಲೇ ಒಂದು ತೀರ್ಮಾನವನ್ನು ತೆಗೆದುಕೊಂಡು ಅವರೇ ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರವನ್ನು ಹೊಂದಿರುವುದರಿಂದ ಅವರು ಸರ್ಕಾರಕ್ಕೆ ತಮ್ಮ ಪ್ರಸ್ತಾವನೆಯನ್ನು ಕಳುಹಿಸಿ ಮಂಜೂರಾತಿಯನ್ನು ಕೇಳಬೇಕಾದ ಅವಶ್ಯಕತೆ ಇರಲಿಲ್ಲ, ಅವರೇ ಮಾಡಿಕೊಳ್ಳಬಹುದಿತ್ತು ಆದರೂ ಅವರು ಸರ್ಕಾರಕ್ಕೆ ಏತಕ್ಕೆ ಕಳುಹಿಸಿದ್ದಾರೆಂಬುದು ಗೊತ್ತಿಲ್ಲದಿದ್ದರೂ ಕೂಡ ನಮ್ಮವರು ಇದಕ್ಕೆ ಅನುಮೋದನೆಯನ್ನು ಕೊಡುವುದಕ್ಕೆ ಏನೂ ಕಷ್ಟವಿಲ್ಲ, ಜಿಲ್ಲಾಪರಿಷತ್ತಿನವರು ಅವರ ಇತಿಮಿತಿಯಲ್ಲೇ ಮಾಡಿಕೊಳ್ಳುವಂಥಾದ್ದು ಇದಾಗಿರುವುದರಿಂದ ಅವರಿಗೆ ಇವತ್ತೇ ಆದೇಶ - ಕೊಡಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :– ಸನ್ಮಾನ್ಯ ಅಧ್ಯಕ್ಷೀಣಿಯವರೆ ಮಾನ್ಯ ಮಂತ್ರಿಗಳು ಜಿಲ್ಲಾಪರಿಷತ್ತಿನಿಂದ 1990–91ನೇ ಇಸವಿಯಲ್ಲಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಏತಕ್ಕೆ ಸರ್ಕಾರಕ್ಕೆ ಕಳುಹಿಸಿದ್ದಾರೆ ಎನ್ನುವ ವಿಚಾರ ಇದ್ದರೂ ಸಹ, ಇನ್ನೂ ಸಹ ಏನೂ ಸರ್ಕಾರದಿಂದ ಉತ್ತರವನ್ನೂ ಕೊಡುತ್ತಿಲ್ಲ, ಪ್ರಸ್ತಾವನೆ ಮಂಜೂರಾತಿಯ ಪರಿಶೀಲನೆಯಲ್ಲಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ಪರಿಶೀಲನೆಯ ಅವಶ್ಯಕತೆ ಇಲ್ಲದಿದ್ದರೂ ಸಹ ಅದನ್ನು ಪರಿಶೀಲನೆಯಲ್ಲಿದೆ ಎನ್ನುವಂಥ ಉತ್ತರವನ್ನು ಕೊಟ್ಟಿದ್ದಾರೆ, ಮತ್ತು ಇಲ್ಲಿಯವರಿಗೆ ಅಂದರೆ ಏಳು ವರ್ಷಗಳಿಂದ ಆಂಬುಲೆನ್ಸ್‌ನ್ನು ಕೊಳ್ಳಲು ನಿರ್ಣಯವಾಗಿದ್ದು ಅದಕ್ಕೆ ಬೇಕಾದಂಥ ವ್ಯವಸ್ಥೆ ಇದ್ದರೂ ಸಹ ಮಂಜೂರಾತಿ ಆಗಿಲ್ಲ, ಆಂಬುಲೆನ್ಸ್ ಬಂದಿಲ್ಲ, ಈ ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತೇನೆ ಏತಕ್ಕೆಂದರೆ ಸನ್ಮಾನ್ಯ ಮಂತ್ರಿಗಳು ಬೇಗ ಕೊಡಿಸುತ್ತೇವೆನ್ನುವಂಥದ್ದನ್ನು ಹೇಳಿದರೆ ಆಷ್ಟು ಸಾಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಅಧ್ಯಕ್ಷೀಣಿಯವರೇ ಇದಕ್ಕೆ ಮಂಜೂರಾತಿ ಸರ್ಕಾರದಿಂದ ಬೇಕಾಗಿಲ್ಲ, ಅವರದೇ ಹಣ, ಅವರೇ ಪ್ರಾವಿಷನ್ ಮಾಡಿಕೊಂಡಿರುತ್ತಾರೆ. ಅವರೇ ಕೊಂಡುಕೊಳ್ಳತಕ್ಕಂಥ ವಿಧಿವಿಧಾನವನ್ನು ಕೂಡ ಮಾಡಿಕೊಳ್ಳತಕ್ಕಂಥದ್ದು ಅವರಿಗೆ ಸೇರಿದ್ದುದು.

ಉಪಾಧ್ಯಕ್ಷೀಣಿಯವರು :– ಫೈಲ್ ಅವರಿಗೆ ಹೋಗಬೇಕಾಗಿದೆ. ನಿಮ್ಮಿಂದ ಮಂಜೂರಾತಿಯಾಗಿದೆ ಎಂದು ಏನಾದರೂ ಫೈಲ್ ವಾಪಸ್ ಹೋದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :– ಅವರು ಒಂದು ಲೆಟರ್‌ನ್ನು ಬರೆದಿದ್ದಾರೆ, ನಮಗೆ ಪೂರ್ವಾನುಮತಿ ಕೊಡಿ ಎಂದು. ನಮಗೆ ಲೆಟರ್ ಕೂಡ ಬರೆಯಬೇಕಾದ್ದಿಲ್ಲ, ಈಗಲೂ ಕೂಡ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ, ಜಿಲ್ಲಾಪರಿಷತ್‌ನವರು ಕೊಂಡುಕೊಳ್ಳುವುದಕ್ಕೆ ತಾವು ಎನ್.ಓ.ಸಿ. ಕೊಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ :– ಮಾನ್ಯ ಅಧ್ಯಕ್ಷರೇ ಕೊಟ್ಟಿರುವ ಉತ್ತರವನ್ನು ಓದಿದರೆ ನಮ್ಮ ಸರ್ಕಾರದ ರೀತಿಯಲ್ಲಿ ದ್ವಂದ್ವ ಕಾಣಿಸುತ್ತದೆ. ಜಿಲ್ಲಾ ಪರಿಷತ್ತಿಗೆ ಅಧಿಕಾರವಿದೆ ಎಂದು ತಾನು ಹೇಳುತ್ತೀರಿ, ಆದರೆ ಇಲ್ಲಿ ಕೊಟ್ಟಿರುವ ಉತ್ತರದಲ್ಲಿ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಸರ್ಕಾರದ ಉತ್ತರ ಬೇಕು. ಏತಕ್ಕೆಂದರೆ ನಿಮ್ಮ ಉತ್ತರ ಮತ್ತು ಜಿಲ್ಲಾಪರಿಷತ್ತಿನ ಅಧಿಕಾರ, ಇದರಲ್ಲಿ ಕೊಟ್ಟಿರುವಂಥ ಉತ್ತರಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ಸ್ಪಷ್ಟವಾಗಿ ಜಿಲ್ಲಾಪರಿಷತ್ತಿನವರಿಗೆ ಮಂಜೂರಾತಿ ಮಾಡಬೇಕು. ಮಾಡಲಿಲ್ಲವೇತಕ್ಕೆ ಎಂದು ಕೇಳತಕ್ಕಂಥ ಜವಾಬ್ದಾರಿ ತಮ್ಮದೆಂದು ನಾನು ಭಾವಿಸುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ :– ಉತ್ತರವನ್ನು ನನ್ನ ಹೇಳಿಕೆಯ ರೀತಿ ಮಾರ್ಪಾಡು ಮಾಡಿಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ಜಿಲ್ಲಾಪರಿಷತ್ತಿನವರಿಗೆ ಕೊಂಡುಕೊಳ್ಳುವುದಕ್ಕೆ ನಮ್ಮದೇನು ವಿರೋಧವಿಲ್ಲ, ನಮ್ಮ ಅನುಮತಿ ಕೊಡುತ್ತೇವೆಂದು ಹೇಳುತ್ತೇನೆ. ಆದಷ್ಟು ಬೇಗ ಜಿಲ್ಲಾಪರಿಷತ್ತಿಗೆ ಎರಡು ಆಸ್ಪತ್ರೆಗಳಿಗೂ ವಾಹನಗಳನ್ನು ಕೊಂಡುಕೊಳ್ಳುವುದಕ್ಕೆ ನಾನೂ ಕೂಡ ಪತ್ರ ಬರೆಯುತ್ತೇನೆ.

ಶ್ರೀ ವಿನಯಕುಮಾರ್ ಸೂರಕೆ :– ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಪುತ್ತೂರು ಆಸ್ಪತ್ರೆಯನ್ನು ಕೂಡ ಸೇರಿಸಿರುತ್ತಾರೆ. ಕೆಲವುಸಲ ಜಿಲ್ಲಾಪರಿಷತ್ತಿನಲ್ಲಿ ರೆಸಲ್ಯೂಷನ್ ಆಗಿ ಸರ್ಕಾರಕ್ಕೆ ಬಂದರೂ ಸಹ, ಕೆಲವುಸಲ ಸರ್ಕಾರದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಕೂಡ ಜಿಲ್ಲಾ ಪರಿಷತ್ತಿನ ರೆಸಲ್ಯೂಷನ್ ಕೇಳುತ್ತಿರುತ್ತಾರೆ. ಉದಾಹರಣೆಗೆ ಪುತ್ತೂರು ಆಸ್ಪತ್ರೆಯನ್ನು 100 ಬೆಡ್ಡಿನ ಆಸ್ಪತ್ರೆಯನ್ನಾಗಿ ಮಾಡಬೇಕೆನ್ನುವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಜಿಲ್ಲಾಪರಿಷತ್ತಿನ ರೆಸಲ್ಯೂಷನ್ ಬೇಕೆನ್ನುವ ರೀತಿ ಕೊಟ್ಟು, ಹಾಗೆಯೇ ಉಳಿದುಕೊಂಡು ಬಂದಿದೆ. ಜಿಲ್ಲಾಪರಿಷತ್ತಿನ ರೆಸಲ್ಯೂಷನ್ ಆಗಿ ಸರ್ಕಾರಕ್ಕೆ ಬಂದನಂತರ ಇಲ್ಲಿಯವರೆಗೂ ಯಾವ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ, ಮಾನ್ಯ ಸಚಿವರು ಕೂಡ ಇಲ್ಲಿಗೆ ಆಗಮಿಸಿದ ಸಂದರ್ಭದಲ್ಲಿ 100 ಬೆಡ್ ಆಸ್ಪತ್ರೆಯ ಅಗತ್ಯವಿದೆ ಎನ್ನುವ ರೀತಿಯಲ್ಲಿ ಘೋಷಣೆ ಮಾಡಿದ್ದಾರೆ. ಈ ದಿಸೆಯಲ್ಲಿ ಜಿಲ್ಲಾಪರಿಷತ್ತಿನ ರೆಸಲ್ಯೂಷನ್ ಎಂದು ಹೇಳಿ ಒಂದು ಕಾರಣವನ್ನು ಹೇಳಿ ಕೆಲವೊಂದು ತೀರ್ಮಾನವಾಗುವಂಥದ್ದು ಇದ್ದರೂ ಸರ್ಕಾರದ ಹಂತದಲ್ಲಿ ಬಾಕಿ ಆಗುತ್ತಿದೆ. ದಯವಿಟ್ಟು ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ :– ಮಾನ್ಯ ಅಧ್ಯಕ್ಷಿಣಿಯವರೇ ಜಿಲ್ಲಾ ಯೋಜನೆಗಳ ಅಡಿಯಲ್ಲಿ ತಾಲ್ಲೂಕು ಏಳು ಆಸ್ಪತ್ರೆಗಳು ಅದರ ವ್ಯಾಪ್ತಿಯಲ್ಲಿ ಬರುತ್ತವೆ. ಜಿಲ್ಲಾ ಪರಿಷತ್ತಿನವರು ಒಂದು ಶಿಫಾರಸ್ಸು ಇಲ್ಲದೆ ಸರ್ಕಾರ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಇದು ನಮ್ಮ ಸರ್ಕಾರದ ನಿಯಮ. ಈ ಹಿನ್ನೆಲೆಯಲ್ಲಿ ಈಗಾಗಲೇ ವಾಹನಗಳನ್ನು ಖರೀದಿ ಮಾಡತಕ್ಕಂಥದ್ದಕ್ಕೆ ಸ್ಪಷ್ಟಪಡಿಸಿದ್ದೇನೆ. ನಮ್ಮ ಅನುಮತಿ ಇವರಿಗೆ ಬೇಕಾಗಿಲ್ಲದಿದ್ದರೂ ಕೂಡ ಅವರು ನಮ್ಮ ಕಡೆಗೆ ಕಳುಹಿಸಿದ್ದಾರೆ. ಉತ್ತರವನ್ನು ಶೀಘ್ರದಲ್ಲಿಯೇ ಕೊಟ್ಟು ವಾಹನವನ್ನು ಖರೀದಿ ಮಾಡತಕ್ಕಂಥದ್ದಕ್ಕೆ ಒಂದು ಆದೇಶವನ್ನು ಕೂಡ ಕೊಡುವವರಿದ್ದೇವೆ. ಎರಡನೆಯದಾಗಿ ಪುತ್ತೂರು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಜಿಲ್ಲಾಪರಿಷತ್ತಿನವರೇ ಶಿಫಾರಸು ಮಾಡಿದ್ದು, ನಮ್ಮ ರಾಜ್ಯ ಸರ್ಕಾರದ ಹಣಕಾಸಿನ ಇತಿಮಿತಿಯೊಳಗೆ ಈ ಒಂದು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸತಕ್ಕಂಥದ್ದರ ಬಗ್ಗೆ ನಾವು ಈಗಾಗಲೇ ಪ್ರಸ್ತಾವನೆಯನ್ನು ಇಟ್ಟುಕೊಂಡಿದ್ದೇವೆ. ಆ ಬಗ್ಗೆಯೂ ಕೂಡ ಪರಿಶೀಲನೆ ಮಾಡಿಸಿ ಕೂಡಲೇ ಕ್ರಮತೆಗೆದುಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು
ಚಿಕ್ಕಮಗಳೂರು ವ್ಯಾಪ್ತಿಯಲ್ಲಿ ಗ್ಲೂಕೋಸ್ ಘಟಕದ ಸ್ಥಾಪನೆ

1100. ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮ್ಮಗಳೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಚಿಕ್ಕಮಗಳೂರು ನಗರದ ವ್ಯಾಪ್ತಿಯಲ್ಲಿರುವ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯಲ್ಲಿ ಗ್ಲೂಕೋಸ್ - ಪ್ಲಾಂಟ್ ಸ್ಥಾಪಿಸಲು ಸಾರ್ವಜನಿಕರಿಂದ ಅಥವಾ ಇಲಾಖೆಯಿಂದ ಸರ್ಕಾರಕ್ಕೆ ಬೇಡಿಕೆ ಬಂದಿದೆಯೆ ;

ಅ) ಈ ಗ್ಲೂಕೋಸ್-ಪ್ಲಾಂಟ್ ಸ್ಥಾಪಿಸಲು ಸರ್ಕಾರಕ್ಕೆ ತಗಲಬಹುದಾದ ಅಂದಾಜು ವೆಚ್ಚವೆಷ್ಟು ;
ಆ) ಈ ಗ್ಲೂಕೋಸ್ ಪ್ಲಾಂಟನ್ನು 91–92ರ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲು ಸೇರಿಸಲಾಗಿತ್ತೆ; ಇಲ್ಲದಿದ್ದರೆ, ಚಿಕ್ಕಮಗಳೂರು ಮಲೆನಾಡು ಪ್ರದೇಶವಾಗಿರುವುದರಿಂದ ಸಾರ್ವಜನಿಕರ ಹಿತಾಸಕ್ತಿಯಿಂದ ಈ ಗ್ಲೂಕೋಸ್ ಪ್ಲಾಂಟ್ ಅನ್ನು 1992–93ನೇ ಬಜೆಟ್‌ನಲ್ಲಿ ಸೇರಿಸಿ ಇದನ್ನು ಆದ್ಯತೆ ಮೇರೆಗೆ ಸ್ಥಾಪಿಸಲಾಗುವುದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

ಅ) ಬಂದಿರುವುದಿಲ್ಲ
ಆ) ಸುಮಾರು 1500 ಬಾಟ್ಲಿಗಳಷ್ಟು (ಐ.ವಿ. ದ್ರಾವಣ) ದೈನಿಕ ಉತ್ಪಾದನೆ ಇರುವ ಘಟಕಗಳನ್ನು ಸ್ಥಾಪಿಸಲು ತಗಲುವ ಅಂದಾಜು ವೆಚ್ಚದ ವಿವರ.
ಆವರ್ತ : ಸುಮಾರು 23.50 ಲಕ್ಷಗಳು
ಅನಾವರ್ತ : ಸುಮಾರು 90.00 ಲಕ್ಷಗಳು.
ಇ) ಇಲ್ಲ

ಸಕಲೇಶಪುರದಲ್ಲಿ ಸಣ್ಣ ಕೈಗಾರಿಕೆ ಇಲಾಖಾ ನಿವೇಶನವನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ.

767. ಶ್ರೀ ಬಿ. ಆರ್. ಗುರುದೇವ್ (ಆಲೂರು - ಸಕಲೇಶಪುರ) :– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸಕಲೇಶಪುರ ಪಟ್ಟಣದಲ್ಲಿ ಸಣ್ಣ ಕೈಗಾರಿಕಾ ಇಲಾಖೆಗೆ ಸೇರಿದ ನಿವೇಶನವಿದ್ದು ಅದು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಸದರಿ ನಿವೇಶನವನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡಿ ಅದನ್ನು ಪ್ರವಾಸಿ ಮಂದಿರವಾಗಿ ನಿರ್ಮಾಣ ಮಾಡುವ ಯೋಜನೆ ಇದೆಯೇ?
ಇ) ಇದ್ದಲ್ಲಿ ಸರ್ಕಾರ ಆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) :–

ಅ) ಹೌದು
ಆ) ಇಲ್ಲ
ಇ) ಸಕಲೇಶಪುರ ಮತ್ತು ಸಮೀಪದ ಪಟ್ಟಣಗಳಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿ ಪಡಿಸಲು ಸವಿಸ್ತಾರವಾದ ಯೋಜನೆಯಡಿಯಲ್ಲಿ ರೂಪಿಸಲು 10 ಎಕರೆ ಜಮೀನನ್ನು ಸಕಲೇಶಪುರದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಜಮೀನನ್ನು ಯಾವುದೇ ಬೇರೆ ಇಲಾಖೆಗೆ ವರ್ಗಾಯಿಸುವ ಪ್ರಸ್ತಾಪವಿರುವುದಿಲ್ಲ.

ಹೊಸ ಆರೋಗ್ಯ ಕೇಂದ್ರಗಳ ಪ್ರಸ್ತಾವನೆ

770. ಶ್ರೀ ಬಿ. ಹಂಪನಗೌಡ (ಸಿಂಧನೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಆರೋಗ್ಯ ಕೇಂದ್ರಗಳ ಸಂಖ್ಯೆ ... (ಅವುಗಳ ಜಾಗ ಮತ್ತು ಜಿಲ್ಲೆ, ತಾಲ್ಲೂಕು ವಿವರ ನೀಡುವುದು)
ಆ) ರಾಯಚೂರು ಜಿಲ್ಲೆಗೆ ಹೊಸದಾಗಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗಿದೆಯೇ;

ಇ) ಸಿಂಧನೂರು ಪಟ್ಟಣಕ್ಕೇನಾದರೂ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಈ) ಸಿಂಧನೂರು ಪಟ್ಟಣದಲ್ಲಿ ಹೆರಿಗೆ ಆಸ್ಪತ್ರೆ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 1991–92ನೇ ಸಾಲಿನಲ್ಲಿ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಗುರಿ ಹಾಕಿಕೊಳ್ಳಲಾಗಿದೆ. (ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ)

ಆ) ಹೌದು.

ಇ) ಸಿಂಧನೂರು ಪಟ್ಟಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಈಗಾಗಲೇ ಕಾರ್ಯ ನಿರ್ವಹಿಸುತ್ತಿದೆ.

ಈ) ಇಲ್ಲ.

1991–92ನೇ ಸಾಲಿಗೆ ಇದುವರೆವಿಗೂ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ.

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಸ್ಥಳ
1.	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಖಾಜಿಹೊಸಹಳ್ಳಿ
		ಕನಕಪುರ	ಗೊಡೂರು
2.	ಬೆಳಗಾಂ	ಅಥಣಿ	ತೆಲಸಂಗ
		ಸೌದತ್ತಿ	ಇಂಚಲ್
		ಚಿಕ್ಕೋಡಿ	ಎಕ್ಸಂಬಾ
3.	ಬೀದರ್	ಬಸವಕಲ್ಯಾಣ	ಕಿಟ್ಟಾ
4.	ಬಿಜಾಪುರ	ಬಿಜಾಪುರ	ಹೊನವಾಡ
		ಮುದ್ದೇಬಿಹಾಳ	ಗರಸಂಗಿ
		ಇಂಡಿ	ಬರಡೋಲಾ
5.	ಬಳ್ಳಾರಿ	ಕೂಡ್ಲಗಿ	ತೂಲಹಳ್ಳಿ
6.	ಚಿಕ್ಕಮಗಳೂರು	ತರಿಕೇರಿ	ಸೊಲ್ಲಾಪುರ
7.	ಚಿತ್ರದುರ್ಗ	ಚಿತ್ರದುರ್ಗ	ಕ್ಯಾಸಪುರ
		ದಾವಣಗೆರೆ	ಅರಸಪುರ
		ಜಗಳೂರು	ಪಲ್ಲಾಗಟ್ಟೆ
		ಹಿರಿಯೂರು	ಗುಯಿಲಾಳು
8.	ಧಾರವಾಡ	ಧಾರವಾಡ	ಮುಗದ
		ಕುಂದುಗೋಳ	ಯಲಿವಾಲ
		ಹಾನಗಲ್	ಬೈಚವಳ್ಳಿ
9.	ದಕ್ಷಿಣ ಕನ್ನಡ	ಬಂಟ್ವಾಳ	ನಾವೂರು
		ಮಂಗಳೂರು	ಬೆಂಗರೆ ಕಸಬಾ ಬಾಜಾರ
10.	ಹಾಸನ	ಅರಸೀಕೆರೆ	ಬಾಗೇವಾಳು
		ಹೊಳೆನರಸೀಪುರ	ಚಾಕೇನಹಳ್ಳಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಸ್ಥಳ
		ಹಾಸನ	ಕಾರ್ಲೆ
11.	ಉತ್ತರ ಕನ್ನಡ	ಕಾರವಾರ	ದೇವಳಮಕ್ಕಿ
12.	ಕೋಲಾರ	ಮುಳಬಾಗಿಲು	ಕುರುಡುಮಲೆ
13.	ಮಂಡ್ಯ	ಮದ್ದೂರು	ಗೆಜ್ಜಲಗೆರೆ
14.	ಮೈಸೂರು	ಪಿರಿಯಪಟ್ಟಣ	ಚಿಕ್ಕನೇರಳೆ
		ಕೊಳ್ಳೇಗಾಲ	ಹೊಸೂರುದೊಡ್ಡಿ
		ಹುಣಸೂರು	ಕರ್ನಾಕುಪ್ಪೆ
		ಟಿ. ನರಸೀಪುರ	ವ್ಯಾಸರಾಯನಪುರ
15.	ರಾಯಚೂರು	ಲಿಂಗಸಗೂರು	ಸಜ್ಜಲಗುಡ್ಡ
16.	ಶಿವಮೊಗ್ಗ	ಸೊರಬ	ಎಣ್ಣೆಕೊಪ್ಪ
		ಸಾಗರ	ಕಾರ್ಗಲ್
		ಸೊರಬ	ಶಕುನವಳ್ಳಿ
17.	ತುಮಕೂರು	ಮಧುಗಿರಿ	ಕಾರಣದಾಲ
		ತುರುವೇಕೆರೆ	ದಬ್ಬೇಗಟ್ಟ
		ಪಾವಗಡ	ಲಿಂಗದಹಳ್ಳಿ
		ಚಿಕ್ಕನಾಯಕನಹಳ್ಳಿ	ಶಟ್ಟಿಕೆರೆ
18.	ಗುಲ್ಬರ್ಗಾ	ಆಳಂದ	ದಂಗಾಪುರ
		ಜೇವರ್ಗಿ	ಆಂಡೋಳಾ

ವಿ.ಸೂ. : 40 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಉಳಿದ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿದೆ.

ಉಪಾಧ್ಯಕ್ಷಿಣಿಯವರು :- ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ದಿನಾಂಕ 6–3–1992ರ ಲಿಖಿತಮೂಲಕ ಉತ್ತರಿಸುವ 9ನೇ ಪಟ್ಟಿಯಲ್ಲಿರುವ 88 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 743, 926, 756, 854, 763, 841, 1070, 1079, 1074, 1095, 1096, 1296, 129, ಮತ್ತು 739 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 75 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ರೇಷ್ಮೆ ಗೂಡಿನ ಬಿತ್ತನೆ ವಲಯಗಳನ್ನು ಬೇರೆ ಕಡೆಗೆ ಮಾಡುವ ಬಗ್ಗೆ

753. ಶ್ರೀ ಬಿ. ರಾಜುಗೌಡ (ಹನೂರು) :– ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರೇಷ್ಮೆ ಗೂಡಿನ ಬಿತ್ತನೆ ವಲಯವನ್ನು ಒಂದೇ ಕಡೆ ಮಾಡುವ ಬದಲು ರಾಜ್ಯದ ನಾಲ್ಕಾರು ಕಡೆ ಮಾಡಲು ಸರ್ಕಾರ ಉದ್ದೇಶಿಸಿರುವುದೇ?
ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಮಾಡಲು ನಿಶ್ಚಯಿಸಿರುವುದು?
ಇ) ಪ್ರಯೋಗಾರ್ಥವಾಗಿ ಎಲ್ಲಾದರೂ ಬಿತ್ತನೆ ಗೂಡನ್ನು ಬೆಳೆಯಲಾಗುತ್ತಿದೆಯೆ?
ಈ) ಕಲುಷಿತಗೊಂಡ ಬಿತ್ತನೆ ವಲಯವನ್ನು ಬದಲಾವಣೆ ಮಾಡುವುದರಿಂದ ರೇಷ್ಮೆ ಹುಳುವಿಗೆ ತಗಲುವ ಎಲ್ಲಾ ರೋಗಗಳನ್ನು ನಿಯಂತ್ರಿಸಲು ಅನುಕೂಲವಾಗುವುದಿಲ್ಲವೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) –

ಅ) ಪರಿಶೀಲನೆಯಲ್ಲಿದೆ
ಆ) ಪರಿಶೀಲನೆಯಲ್ಲಿದೆ.
ಇ) ಪಿ2 ಬಿತ್ತನೆ ಗೂಡಿನ ಉತ್ಪನ್ನವನ್ನು ಕೊಳ್ಳೇಗಾಲ ತಾಲ್ಲೂಕಿನ ಹೂಗ್ಯದಲ್ಲಿ ಪ್ರಯೋಗಾರ್ಥವಾಗಿ ಕೈಗೊಳ್ಳಲಾಗಿದೆ.
ಈ) ಬಿತ್ತನೆ ವಲಯದಲ್ಲಿ ರೋಗಗಳನ್ನು ನಿಯಂತ್ರಿಸಲು ಮತ್ತು ತಡೆಗಟ್ಟಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಹೆಚ್ಚುವರಿ ಬಿತ್ತನೆ ವಲಯದ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ.

ಗರ್ಭಧಾರಣೆ ತಡೆಯುವುದರ ಬಗ್ಗೆ

757. ಶ್ರೀ ಜಿ. ರಾಜುಗೌಡ (ಹನೂರು) : – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗರ್ಭಧಾರಣೆ ತಡೆಯಲ್ಲಿಕ್ಕೆ ಚುಚ್ಚುಮದ್ದು ಭಾರತದಲ್ಲಿ ಸಿದ್ಧವಾಗಿದೆಯೇ;
ಆ) ಇದ್ದಲ್ಲಿ ಇದರ ಹೆಸರೇನು;
ಇ) ಸಿದ್ಧವಾಗಿದ್ದರೆ ಟುಬೆಕ್ಟಮಿ ಆಪರೇಷನ್ ಬದಲು ಇದನ್ನು ಏಕೆ ಉಪಯೋಗಿಸಬಾರದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಇಲ್ಲ
ಆ) ಪ್ರಶ್ನೆ ಉದ್ಭವಿಸುವುದಿಲ್ಲ.
ಇ) ಉದ್ಭವಿಸುವುದಿಲ್ಲ.

ದೇವದಾಸಿಯರ ಸಂಖ್ಯೆ ಹಾಗೂ ಪುನರ್ ವಸತಿ.

766. ಶ್ರೀ ಬಸವರಾಜರಾಯರೆಡ್ಡಿ (ಯುಲ್ಬುರ್ಗ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ದೇವದಾಸಿಯರ ಸಂಖ್ಯೆ (ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸಲು ತಿಳಿಸಲಾಗಿದೆ)?

ಅ) ದೇವದಾಸಿಯರ ಪುನರ್ವಸತಿಗಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳು ;
ಇ) ದೇವದಾಸಿ ಪದ್ಧತಿಯನ್ನು ತಡೆಗಟ್ಟಲು ಈ ಸರ್ಕಾರವು ತೆಗೆದುಕೊಂಡಿರುವ ಸೂಕ್ತ ಕಾರ್ಯಕ್ರಮಗಳು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) 21,856

ಜಿಲ್ಲೆಗಳ ವಿವರ :

1)	ಬಿಜಾಪುರ	4,895
2)	ಧಾರವಾಡ	2,503
3)	ಬಳ್ಳಾರಿ	1,635
4)	ರಾಯಚೂರು	7,374
5)	ಬೆಳಗಾಂ	3,737
6)	ಗುಲ್ಬರ್ಗ	690
7)	ಕೋಲಾರ	77
8)	ಚಿತ್ರದುರ್ಗ	915
9)	ಬೀದರ್	30

ಆ) ದೇವದಾಸಿಯರ ಪುನರ್ ವಸತಿಗಾಗಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮವು ವಿವಿಧ ಶಾಖೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿರುವುದಲ್ಲದೆ, ದೇವದಾಸಿಯರ ವಿವಾಹ, ಜನ ಜಾಗೃತಿ ಉಂಟು ಮಾಡಲು ಜಾಗೃತಾ ಶಿಬಿರ, ಕೈ ಮಗ್ಗ ನೇಯ್ಗೆ ತರಬೇತಿ ಮತ್ತು ಉತ್ಪಾದನಾ ಕೇಂದ್ರ ದೇವದಾಸಿಯರ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ ಮತ್ತು ಆರೋಗ್ಯ ಶಿಬಿರ ಇತ್ಯಾದಿಗಳನ್ನು ಏರ್ಪಡಿಸಲಾಗಿದೆ.

ಇ) 1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಒಂದು ವಿಶೇಷ ಘಟಕ ಮತ್ತು ರಾಯಚೂರು ಹಾಗೂ ಬೆಳಗಾಂಗಳಲ್ಲಿ 2 ಚಿಕ್ಕ ಘಟಕಗಳನ್ನು ಸ್ಥಾಪಿಸಲಾಗಿದೆ.

1. ಮುಂಬರುವ ವರ್ಷಗಳಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ;
2. ಬೀದರ್ ಜಿಲ್ಲೆಯಲ್ಲಿ ಎಷ್ಟು ಮಹಿಳಾ ಐ.ಟಿ.ಐ. ಕೇಂದ್ರಗಳಿವೆ.
3. ಇಲ್ಲದಿದ್ದಲ್ಲಿ, ಅತೀ ಹಿಂದುಳಿದ ಜಿಲ್ಲೆಯಾಈ ಬೀದರ್‌ನಲ್ಲಿ ಮುಂಬರುವ ವರ್ಷದಲ್ಲಿ ಮಹಿಳಾ ಐ.ಟಿ.ಐ. ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;
4. ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಸಚಿವರು) –

1.. 1. ಬೆಂಗಳೂರು ಜಿಲ್ಲೆ,
2. ತುಮಕೂರು ಜಿಲ್ಲೆ,
3. ಕೋಲಾರ ಜಿಲ್ಲೆ,
4. ದಕ್ಷಿಣ ಕನ್ನಡ ಜಿಲ್ಲೆ,
5. ಹಾಸನ ಜಿಲ್ಲೆ,
6. ಬಿಜಾಪುರ ಜಿಲ್ಲೆ ಮತ್ತು
7. ಚಿತ್ರದುರ್ಗ ಜಿಲ್ಲೆ.

2. ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಬೀದರ್ ಜಿಲ್ಲೆಯಲ್ಲಿ ಇಲ್ಲ.
3. ಸದ್ಯಕ್ಕೆ ಇಲ್ಲ, ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಪರಿಶೀಲಿಸಲಾಗುವುದು.
4. ಆರ್ಥಿಕ ಸೌಲಭ್ಯವಿಲ್ಲದಿರುವುದರಿಂದ.

ಶುಶ್ರೂಷಾ ಯೋಜನೆಯ ಪ್ರಗತಿ.

1076. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಶುಶ್ರೂಷಾ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು;
ಆ) ಈ ಪೈಕಿ ಇದುವರೆವಿಗೂ ಪ್ರತಿ ಜಿಲ್ಲೆಯಲ್ಲಿ ಎಷ್ಟು ಹಣವನ್ನು ಮೇಲ್ಕಂಡ ಯೋಜನೆಯ ಸಲುವಾಗಿ ವೆಚ್ಚ ಮಾಡಲಾಗಿದೆ;
ಇ) ಈ ಯೋಜನೆಯ ಸಲುವಾಗಿ ಎಷ್ಟು ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳಲಾಗಿದೆ (ಹುದ್ದೆವಾರು ವಿವರಗಳನ್ನು ಜಿಲ್ಲಾವಾರು ಅಂಕಿ–ಅಂಶಗಳಲ್ಲಿ ನೀಡುವುದು) ;
ಈ) ಇದಕ್ಕಾಗಿ ಎಷ್ಟು ವಾಹನ ಹಾಗೂ ಉಪಕರಣಗಳನ್ನು ಖರೀದಿಸಲಾಗಿದೆ. ಇದಕ್ಕೆ ತಗುಲಿದ ವೆಚ್ಚವೆಷ್ಟು;
ಉ) ಇದರಿಂದ ಎಷ್ಟು ಜನರಿಗೆ ಲಾಭವಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ರೂ. 54.30 ಲಕ್ಷ ರೂಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.
ಆ) ಜನವರಿ 31, 1992 ರ ಅಂತ್ಯದವರೆಗೆ ಒಟ್ಟು ರೂ. 11,20,678. (ಜಿಲ್ಲಾವಾರು ವೆಚ್ಚದ ವಿವರಗಳನ್ನು ತಃಖ್ತೆಯಲ್ಲಿ ಲಗತ್ತಿಸಿದೆ)
ಇ) ಯಾರನ್ನೂ ನೇಮಿಸಿಲ್ಲ.

ಈ) ಇದಕ್ಕಾಗಿ ವಾಹನಗಳನ್ನು ಖರೀದಿಸಲಾಗಿಲ್ಲ. ಕೆಲವು ಉಪಕರಣಗಳನ್ನು ಖರೀದಿಸಲಾಗಿದೆ. ಮತ್ತು ಜಿಲ್ಲಾವಾರು ವೆಚ್ಚವನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಉ) ಜನವರಿ 31,1992ರ ಅಂತ್ಯದವರೆಗೆ 4,88,169 ಜನರು.

SHUSHRUSHA SCHEMES EXPENDITURE STATEMENT

Sl. No.	DISTRICT	UP TO THE END OF JANUARY 1992
1.	Bangalore	13,174.00
2.	Bangalore (R)	94,535.10
3.	Belgaum	20,000.10
4.	Bellary	54,156.92
5.	Bidar	14,993.00
6.	Bijapur	55,963.54
7.	Chickmagalur	85,063.92
8.	Chitradurga	20,600.00
9.	D. Kannada	NIL
10.	Dharwad	29,681.97
11.	Gulbarga	45,000.00
12.	Hassan	14,979.00
13.	Kodagu	48,953.80
14.	Kolar	54,553.40
15.	Mandya	19,874.00
16.	Mysore	2,11,885.00
17.	Raichur	11,260.00 + 2,21,204 (Purchase of Equipments)
18.	Shimoga	78,800.00
19.	Tumkur	26,000.00
20.	U. Kannada	NIL
	Total	11,20,678.00

Purchase of Vehicles. Recruitment of Staff and Purchase of Equipments by District upto end of January, 1992.

Sl. No.	District	Purchase of Vehicles cles	Recruitment of Staff	Purchase of Equipments
1.	Bangalore	Nil	Nil	Nil
2.	Bangalore (R)	Nil	Nil	Nil
3.	Belgaum	Nil	Nil	Nil
4.	Bellary	Nil	Nil	Nil Test tube stand (wooden)– 14 test tubes–450, dropers (136) HB% books–100, Spirit bottles 1/2 ltrs. – 100, Test tube Holders – 62, Measuring tapes – 10, Spirit Lamps – 5, Rs.6,577.00
5.	Bidar	Nil	Nil	Nil 30 Uristix bottles, 150, Haemoglobin Talquest Books. Rs.8,153.00
6.	Bijapur	Nil	Nil	Nil
7.	Chickmagalore	Nil	NIl	Glucose, Nitric Acid, H.B. Book, Four Burner Stove, Bedsheet, B. Papparatus sheeting water proof septol Rs.12,994.00
8.	Chitradurga	Nil	Nil	Nil
9.	Dakshina Kannada	Nil	Nil	
10.	Dharwad	Nil	Nil	Nil
11.	Gulbarga	Nil	Nil	Nil
12.	Hassan	Nil	Nil	Talquest Hemoglobin book 100, Testubes – 100, Spirit lamps 20, Acitic Acid 20 Nos. Hydrochlorid Acid 20 Nos. Rs.4,720.00
13.	Kodagu	Nil	Nil	Laboratory articles, Shrusha Table 1, Rs.9,648.00
14.	Kolar	Nil	Nil	Nil

15.	Mandya	Nil	Nil	Nil
16.	Mysore	Nil	Nil	BP Apparatus, Test Tubes, Test Tube Holders, Spirit Lamps, Bedside Screen, Foot Step, Examination Tables, Lotion Stand folding chairs, Folding Tables Rs.1,51,689.00
17.	Raichur	Nil	Nil	Uristries HB Book, VDRL antiges 5, Centrifugal Serup disposal syringes Rs.2,21,204.00
18.	Shimoga	Nil	Nil	Nil
19.	Tumkur	Nil	Nil	Nil
20.	Uttara Kannada	Nil	Nil	Nil

ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಕ್ಕೆ ಬರಬೇಕಾಗಿರುವ ಕ್ಲಿನಿಕಲ್ ಫೆಸಿಲಿಟಿಯ ಬಾಕಿ

1075. ಶ್ರೀ ಆರ್. ವಿ. ದೇಶಪಾಂಡೆ (ಹುಳಿಯಾಳ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಕ್ಲಿನಿಕಲ್ ಸೌಲಭ್ಯಗಳನ್ನು ಒದಗಿಸಿರುವುದಕ್ಕಾಗಿ ಸರ್ಕಾರಕ್ಕೆ ಬರಬೇಕಾದ ಶುಲ್ಕದ ಮೊತ್ತವೆಷ್ಟು ;

ಆ) ರಾಜ್ಯದ ಯಾವ ಯಾವ ಖಾಸಗಿ ವೈದ್ಯಕೀಯ ಕಾಲೇಜುಗಳು ಈ ಕ್ಲಿನಿಕಲ್ ಸೌಲಭ್ಯದ ಶುಲ್ಕವನ್ನು ತುಂಬದೇ ಬಾಕಿ ಇವೆ ; ಪ್ರತಿ ಕಾಲೇಜಿನಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಯ ಮೊತ್ತವೆಷ್ಟು (ಕಾಲೇಜಿನ ಹೆಸರು ಹಾಗೂ ವಿವರ ನೀಡುವುದು) ;

ಇ) ಇವುಗಳ ವಸೂಲಿಗಾಗಿ ಕಟ್ಟುನಿಟ್ಟಿನ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ರೂ. 529.58 ಲಕ್ಷಗಳು (ತಾತ್ಕಾಲಿಕವಾಗಿ)

ಆ) ಈ ಕೆಳಕಂಡ ಖಾಸಗಿ ವೈದ್ಯಕೀಯ ಕಾಲೇಜುಗಳು ಕ್ಲಿನಿಕಲ್ ಸೌಲಭ್ಯದ ಶುಲ್ಕ ತಾತ್ಕಾಲಿಕವಾಗಿ ಬಾಕಿ ಇರುವ ಮೊತ್ತ

		(ರೂ. ಲಕ್ಷಗಳಲ್ಲಿ)
1.	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	ರೂ. 52.36
2.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	ರೂ. 82.64
3.	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	ರೂ. 51.39
4.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	ರೂ. 45.89
5.	ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	ರೂ. 31.12
6.	ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	ರೂ. 69.45
7.	ಡಾ. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	ರೂ 66.97
8.	ಆಲ್. ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	ರೂ. 14.01
9.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	ರೂ. 58.32

10. ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು ರೂ. 43.13
11. ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ ರೂ. 06.83
12. ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು ರೂ. 07.47

ಇ) ಹೌದು.

ಹಳಿಯಾಳದಲ್ಲಿ ರೇಷ್ಮೆ ಫಾರಂ ಸ್ಥಾಪನೆ.

1077. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ರೇಷ್ಮೆ ಫಾರಂ ಸ್ಥಾಪಿಸಲು ಸರ್ಕಾರ ನಿರ್ಧರಿಸಿರುವುದು ನಿಜವೇ;
ಆ) ಹಾಗಿದ್ದಲ್ಲಿ, ಇದಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆಯೇ;
ಇ) ಇದಕ್ಕಾಗಿ ಎಷ್ಟು ಹಣವನ್ನು ಇದುವರೆವಿಗೂ ವೆಚ್ಚ ಮಾಡಲಾಗಿದೆ;
ಈ) ರೇಷ್ಮೆ ಫಾರಂ ಅನ್ನು ಅಲ್ಲಿ ಯಾವಾಗ ಸ್ಥಾಪಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) –

ಅ) ಹೌದು.
ಆ) ವಶಪಡಿಸಿಕೊಳ್ಳಲಾಗಿದೆ.
ಇ) 8.62 ಲಕ್ಷ ರೂಪಾಯಿಗಳು.
ಈ) 1992 ಡಿಸೆಂಬರ್ ಅಂತ್ಯದೊಳಗೆ ಸ್ಥಾಪಿಸಲಾಗುವುದು.

ಮೈಸೂರು ಕ್ರೋಂ ಟ್ಯಾನಿಂಗ್ ಕಾರ್ಖಾನೆಯನ್ನು ಖಾಸಗಿಯವರಿಗೆ ಹಸ್ತಾಂತರ.

1080. ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯಲ್ಲಿ ಶೇಕಡಾ 90 ರಷ್ಟು ಪರಿಶಿಷ್ಟ ಕಾರ್ಮಿಕರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;
ಆ) ಹಾಗಿದ್ದಲ್ಲಿ, ಮೇಲ್ಕಂಡ ಕಾರ್ಖಾನೆಯನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವುದನ್ನು ನಿಲ್ಲಿಸಿ ಸರ್ಕಾರದಿಂದ ಮತಿಯಿಂದ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವರೆ ;
ಇ) ಇಲ್ಲದಿದ್ದಲ್ಲಿ, ಮೇಲ್ಕಂಡ ಕಾರ್ಖಾನೆಯನ್ನು ಹಸ್ತಾಂತರ ಮಾಡುವಾಗ ಪರಿಶಿಷ್ಟ ಕಾರ್ಮಿಕರಿಗೆ ಅನ್ಯಾಯವಾಗದಂತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ಹೌದು.
ಆ) ಈ ಕಂಪನಿಯು ಕೆಲವು ವರ್ಷಗಳಿಂದ ಸತತವಾಗಿ ನಷ್ಟ ಅನುಭವಿಸುತ್ತಿರುವುದರಿಂದ ಇದನ್ನು ಮುಚ್ಚಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.
ಇ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ವೈದ್ಯರುಗಳ ಖಾಲಿ ಹುದ್ದೆಗಳ ಭರ್ತಿ

1085. ಶ್ರೀಮತಿ ಸುಮಾವಸಂತ, (ವಿರಾಜಪೇಟೆ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೊಡಗು ಜಿಲ್ಲೆಯಲ್ಲಿ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು (ತಾಲ್ಲೂಕು ವಾರು ಮಾಹಿತಿಯನ್ನು ಒದಗಿಸುವುದು) ;

ಆ) ಖಾಲಿ ಇರುವ ಸ್ಥಳಗಳಿಗೆ ವೈದ್ಯರನ್ನು ಎಂದಿನಿಂದ ನೇಮಿಸಿಕೊಳ್ಳಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಒಟ್ಟು 12 ಹುದ್ದೆಗಳು
ಮಡಿಕೇರಿ . . . . . - . . . ಇಲ್ಲ
ಸೋಮವಾರಪೇಟೆ . . . . . - 7
ವಿರಾಜಪೇಟೆ . . . . . - 5

ಆ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸಾರ್ವತ್ರಿಕ ವರ್ಗಾವಣೆಯಲ್ಲಾಗಲಿ ಇಲ್ಲವೇ ಸೇವೆಯಲ್ಲಿದ್ದು ಸ್ನಾತಕೋತ್ತರ ಶಿಕ್ಷಣ ಮುಗಿಸಿ ಹಿಂದಿರುಗುವ ವೈದ್ಯರುಗಳಿಂದಾಗಲೀ ತುಂಬಲು ಪರಿಶೀಲಿಸಲಾಗುವುದು.

ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯರ ಸಂಖ್ಯೆ

1097. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ವೈದ್ಯರುಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಮಹಿಳಾ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ನಗರ ಪ್ರಾಂತ್ಯಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನ ವೈದ್ಯರುಗಳು ಸೇವೆ ಸಲ್ಲಿಸುತ್ತಿದ್ದಾರೆ ; ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಒಟ್ಟು 4473 ವೈದ್ಯಾಧಿಕಾರಿಗಳು ಇವರಲ್ಲಿ 855 ಜನ ಮಹಿಳಾ ವೈದ್ಯಾಧಿಕಾರಿಗಳು.

ಆ) ನಗರ ಪ್ರದೇಶದಲ್ಲಿ 2167 ಜನ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 2306 ವೈದ್ಯರು ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ 438 ವೈದ್ಯರುಗಳ ಹುದ್ದೆ ಖಾಲಿ ಇದೆ.

ಚಿಕ್ಕಮಗಳೂರು ವ್ಯಾಪ್ತಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಾಹನವಿಲ್ಲದಿರುವ ಬಗ್ಗೆ

1101. ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಂಗಳೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಚಿಕ್ಕಮಗಳೂರು ಪಟ್ಟಣದ ವ್ಯಾಪ್ತಿಯಲ್ಲಿರುವ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ತುರ್ತು ಚಿಕಿತ್ಸಾ ವಾಹನ (ಆಂಬ್ಯುಲೆನ್ಸ್) ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಾರ್ವಜನಿಕರಿಂದ ಅಥವಾ ಆಸ್ಪತ್ರೆಯಿಂದ ತುರ್ತು ಚಿಕಿತ್ಸಾ ವಾಹನದ ಬೇಡಿಕೆ ಬಂದಿದೆಯೇ ; ಬಂದಿದ್ದಲ್ಲಿ, ತುರ್ತು ಚಿಕಿತ್ಸಾ ವಾಹನವನ್ನು ಸದರಿ ಆಸ್ಪತ್ರೆಗೆ ಪೂರೈಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಕ್ರಮ ಕೈಗೊಂಡಿಲ್ಲದ ಪಕ್ಷದಲ್ಲಿ ವಾಹನವನ್ನು 1991–92ನೇ ಆರ್ಥಿಕ ಸಾಲಿನಲ್ಲಿಯೇ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಎ) ಬಂದಿರುವುದು.

ಐ) ಬಂದಿದೆ.

ಸರಬರಾಜು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಒದಗಿಸಿರುವ ಹಣ

1135. ಶ್ರೀ ಜಿ. ಪರಮೇಶ್ವರ (ಮಧುಗಿರಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಎ) ವಿಶೇಷ ಘಟಕಯೋಜನೆ ಕಾರ್ಯಕ್ರಮಗಳಿಗೆ ರಾಜ್ಯದಲ್ಲಿ ಒದಗಿಸಿರುವ ಒಟ್ಟು ಹಣವೆಷ್ಟು;

ಐ) ಈ ಯೋಜನೆಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

ಇ) ಈ ಹಣದಲ್ಲಿ ಜಿಲ್ಲೆಗಳಲ್ಲಿ ವೆಚ್ಚ ಮಾಡಲಾದ ಒಟ್ಟು ಹಣವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಎ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಗೆ 1991–92 ರ ಸಾಲಿಗೆ ರೂ. 15,051–14 ಲಕ್ಷಗಳನ್ನು ಒದಗಿಸಲಾಗಿದೆ.

ಐ) ಸದರಿ ಯೋಜನೆಗೆ 1991ರ ಡಿಸೆಂಬರ್ ಅಂತ್ಯದ ವರೆವಿಗೆ ರೂ.1432.48 ಲಕ್ಷಗಳನ್ನು ಜಿಲ್ಲಾ ಪರಿಷತ್ತ್‌ಗಳಿಗೆ ಬಿಡುಗಡೆ ಮಾಡಲಾಗಿದೆ ಜಿಲ್ಲಾವಾರು ಮಾಹಿತಿ ತಃಖ್ತೆಯನ್ನು ಲಗತ್ತಿಸಲಾಗಿದೆ.

ಇ) ಜಿಲ್ಲಾ ಪರಿಷತ್ತುಗಳು ಒಟ್ಟು ರೂ.961.66 ಲಕ್ಷಗಳನ್ನು ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿದೆ. ಜಿಲ್ಲಾವಾರು ಮಾಹಿತಿಯನ್ನು ಕೊಡಲಾಗಿದೆ.

ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳಿಗೆ 1991–92ನೇ ಸಾಲಿನಲ್ಲಿ ಜಿಲ್ಲಾವಾರು, ನಿಗದಿಯಾದ ಹಣ ಬಿಡುಗಡೆಯಾದ ಹಣ - ಖರ್ಚು ಮಾಡಲಾದ ಹಣದ ಬಗೆಗಿನ ಮಾಹಿತಿ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿಗದಿಯಾದ ಹಣ	ಬಿಡುಗಡೆಯಾದ ಹಣ	ಖರ್ಚು ಮಾಡಲಾದ ಹಣ31–12–91 ರವರೆಗೆ	ಷರಾ
1.	ಬೆಂಗಳೂರುನಗರ	69.34	39.64	24.79	
2.	ಬೆಂಗಳೂರು (ಗ್ರಾ)	224.67	84.81	49.96	
3.	ಚಿತ್ರದುರ್ಗ	100.89	54.84	50.08	
4.	ಕೋಲಾರ	217.07	83.92	32.41	
5.	ತುಮಕೂರು	162.84	67.31	55.42	
6.	ಶಿವಮೊಗ್ಗ	142.25	69.28	37.32	
7.	ಮೈಸೂರು	202.00	98.49	63.33	

8.	ಮಂಡ್ಯ	135.91	109.90	60.66
9.	ಹಾಸನ	122.34	56.12	44.17
10.	ಚಿಕ್ಕಮಗಳೂರು	94.36	64.13	41.22
11.	ಕೊಡಗು	56.71	32.25	31.97
12.	ದಕ್ಷಿಣ ಕನ್ನಡ	127.71	62.13	45.88
13.	ಬೆಳಗಾಂ	167.39	80.13	54.45
14.	ಬಿಜಾಪುರ	195.57	86.20	48.02
15.	ಧಾರವಾಡ	190.50	69.08	63.77
16.	ಕಾರವಾರ	59.95	27.36	28.93
17.	ಗುಲ್ಬರ್ಗಾ	266.58	120.80	82.68
18.	ರಾಯಚೂರು	251.51	110.63	56.66
19.	ಬಳ್ಳಾರಿ	111.62	54.40	43.30
20.	ಬೀದರ್	106.18	61.06	46.64
	ಒಟ್ಟು ರೂ.	3005.39	1432.48	961.66

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ

1136. ಶ್ರೀ ಜಿ. ಪರಮೇಶ್ವರ (ಮಧುಗಿರಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) 1991–92ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳಿಗಾಗಿ ಎಷ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆದಿದ್ದೀರಿ ? (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ಇನ್ನು ಎಷ್ಟು ವಿದ್ಯಾರ್ಥಿ ನಿಲಯಗಳು ಬೇಕಾಗಿದೆ ;

ಇ) ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) 87 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಹಾಗೂ 9 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಈ ಕೆಳಕಂಡಂತೆ ತೆರೆಯಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ
1	2	3	4
1.	ಬೆಂಗಳೂರು (ನಗರ)	4	2
2.	ಬೆಂಗಳೂರು (ಗ್ರಾ)	4	–
3.	ಚಿತ್ರದುರ್ಗ	5	–
4.	ಕೋಲಾರ	6	1
5.	ತುಮಕೂರು	5	–
6.	ಶಿವಮೊಗ್ಗ	5	–

7.	ಮೈಸೂರು	4	–
8.	ಮಂಡ್ಯ	2	–
9.	ಹಾಸನ	5	–
10.	ದಕ್ಷಿಣ ಕನ್ನಡ	3	–
11.	ಬೆಳಗಾಂ	3	2
12.	ಬಿಜಾಪುರ	5	–
13.	ಧಾರವಾಡ	6	–
14.	ಉತ್ತರ ಕನ್ನಡ	3	–
15.	ಬೀದರ್	4	1
16.	ಗುಲ್ಬರ್ಗಾ	8	1
17.	ಚಿಕ್ಕಮಗಳೂರು	2	1
18.	ರಾಯಚೂರು	4	–
19.	ಬಳ್ಳಾರಿ	3	1
20.	ಕೊಡಗು	1	–
		87	9

ಅ) ಮತ್ತು ಇ) ಹೊಸ ವಿದ್ಯಾರ್ಥಿನಿಲಯಗಳಿಗೆ ಕೆಲವು ಸ್ಥಳಗಳಲ್ಲಿ ಬೇಡಿಕೆಯಿದೆ. ಡಾ. ಬಿ. ಆರ್. ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ 1990–91 ರಿಂದ 1993–94ರ ಅವಧಿಯಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಬೇಡಿಕೆಯನ್ನು ಪರಿಶೀಲಿಸಿ ಉಳಿದ 54 ಹೊಸ ವಿದ್ಯಾರ್ಥಿನಿಲಯವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿರುವ ಬಗ್ಗೆ

1196. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿದ್ದರೂ ರಾಜ್ಯ ಸರ್ಕಾರ ಕಂಡೂ ಕಾಣದಂತೆ ಇರುವ ಉದ್ದೇಶವೇನು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ) ಅಕ್ರಮವಾಗಿ ಗ್ರಾನೈಟ್ ತೆಗೆಯುತ್ತಿರುವುದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತು ಪ್ರಯತ್ನ ಮುಂದುವರಿಯುತ್ತಿದೆ, ಅವು ಯಾವುವೆಂದರೆ (1) ಸ್ಥಳ ತನಿಖೆ ನಡೆಸಿ ಅನಧಿಕೃತ ಕೆಲಸ ನಿಲ್ಲಿಸುವುದು (2) ತೆಗೆದಿದ್ದ ಗ್ರಾನೈಟ್ ದಿಮ್ಮಿಗಳನ್ನು ಜಪ್ತಿ ಮಾಡಿ ಅವುಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಮೆ || ಎಂ.ಎಂ.ಎಲ್.ಗೆ ವಹಿಸಿಕೊಡುವುದು, ಹಾಗೂ (3) ಸಾಗಾಣಿಕೆ ಪರವಾನಗಿ ಇಲ್ಲದೆ ಗ್ರಾನೈಟ್ ದಿಮ್ಮಿಗಳನ್ನು ಸಾಗಣೆ ಮಾಡುತ್ತಿರುವ ವಾಹನಗಳನ್ನು ತನಿಖೆ ಮಾಡಿ (ಮಂಗಳೂರಿನ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಹಾಗೂ ಮಾರ್ಗಮಧ್ಯದಲ್ಲಿ) ಪರವಾನಗಿಯನ್ನು ಪಡೆಯದೆ ಸಾಗಿಸುವ ಗ್ರಾನೈಟ್ ಕಲ್ಲುಗಳಿಗೆ ರಾಜಧನ ಮತ್ತು ದಂಡವನ್ನು ವಿಧಿಸುವುದು : ದಂಡದ ಮೊತ್ತವನ್ನು ರಾಜಧನದ 5 ರಷ್ಟಕ್ಕೆ ಇತ್ತೀಚೆಗೆ ಏರಿಸಿ ಆ ಬಗ್ಗೆ ಸಾರ್ವಜನಿಕ ಸೂಚನೆ ನೀಡಲಾಗಿದೆ. ಈ ಕ್ರಮಗಳಿಂದ ಅಕ್ರಮ ಗ್ರಾನೈಟ್ ಕಲ್ಲುಗಣಿಕಾರಿಕೆ

ಮತ್ತು ಸಾಗಾಟ ತಡೆಯಲಾಗುತ್ತಿದೆ ಹಾಗೂ ಕೆ.ಎಂ.ಎಂ.ಸಿ. ನಿಯಮಾವಳಿಯಲ್ಲಿ ಅಳವಡಿಸಿರುವ ಅಧಿಕಾರವನ್ನು ಗ್ರಾನೈಟ್ ಕಲ್ಲಿನ ಕಳ್ಳ ಸಾಗಾಣಿಕೆಯನ್ನು ತಡೆಯುವ ಉದ್ದೇಶದಿಂದ ಕಂದಾಯ ಇಲಾಖೆಯ ಅಧಿಕಾರಿಗಳಿಗೂ ವಹಿಸಿಕೊಡಲಾಗಿದೆ. ಇದೂ ಅಲ್ಲದೆ ವಾಣಿಜ್ಯ ತೆರಿಗೆ ಇಲಾಖೆಯ ಸುಂಕದ ಕಟ್ಟೆಯಲ್ಲಿ ರಾಜಧನವನ್ನು ನೀಡದೆ ಕೊಂಡೊಯ್ಯುವ ಗ್ರಾನೈಟ್ ಕಲ್ಲುಗಳನ್ನು ಮತ್ತು ಇತರ ಖನಿಜಗಳನ್ನು ತಡೆದು ಸರ್ಕಾರಕ್ಕೆ ಬರಬೇಕಾಗಿದ್ದ ರಾಜಸ್ವ ಮತ್ತು ದಂಡವನ್ನು ವಸೂಲು ಮಾಡುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯ ಸುಂಕದ ಕಟ್ಟೆಯ ಅಧಿಕಾರಿಗಳಿಗೆ ವಹಿಸಿಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು

1195. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಸರ್ಕಾರ ಈಡೇರಿಸದೇ ಇರಲು ಕಾರಣವೇನು ;
ಆ) ಇವರ ಬೇಡಿಕೆಗಳನ್ನು ಎಷ್ಟು ಅವಧಿಯ ಒಳಗೆ ಈಡೇರಿಸಲಾಗುವುದು ;

ಶ್ರೀ ಎ.ಎಸ್. ನಾಡಗೌಡ (ಸಮಾಜ ಕಲ್ಯಾಣ ಸಚಿವರು) –

ಅ) ಸಮಗ್ರ ಬಾಲ ವಿಕಾಸ ಯೋಜನೆಯು ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಕಾರ್ಯಗತಗೊಳಿಸುತ್ತಿರುವುದರಿಂದ ಇವರ ಪ್ರಮುಖ ಬೇಡಿಕೆಗಳನ್ನು ಭಾರತ ಸರ್ಕಾರವೇ ಪರಿಗಣಿಸಬೇಕಾಗುತ್ತದೆ. ಇವರ ಇತರ ಕೆಲವು ಬೇಡಿಕೆಗಳನ್ನು ರಾಜ್ಯ ಸರ್ಕಾರವು ಸಾಧ್ಯವಾದ ಮಟ್ಟಿಗೆ ಈಡೇರಿಸಲಾಗಿದೆ. ಇನ್ನೂ ಕೆಲವು ಬೇಡಿಕೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಆ) 'ಅ' ನಲ್ಲಿ ತಿಳಿಸಿರುವ ಕಾರಣಗಳಿಂದ ರಾಜ್ಯ ಸರ್ಕಾರದ ವ್ಯಾಪ್ತಿಯ ಬೇಡಿಕೆಗಳನ್ನು ಅತೀ ಶೀಘ್ರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಕಾರ್ಮಿಕ ಮೊಕದ್ದಮೆಗಳು.

1194. ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಕಾರ್ಮಿಕ ಮೊಕದ್ದಮೆಗಳೆಷ್ಟು ;
ಆ) ಎಷ್ಟು ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಕೊರತೆ ಇದೆ?

ಶ್ರೀ. ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) 12,344 (1991ರ ಡಿಸೆಂಬರ್ ಅಂತ್ಯದವರೆಗೆ)
ಆ) 1. ಕಾರ್ಮಿಕ ನ್ಯಾಯಾಲಯಗಳು

ಮೈಸೂರು, ಚಿಕ್ಕಮಗಳೂರು, ಹುಬ್ಬಳ್ಳಿ ಮತ್ತು ಬೆಂಗಳೂರು.

2. ಔದ್ಯಮಿಕ ನ್ಯಾಯಾಧೀಕರಣ

ಮೈಸೂರು.

ರಾಜ್ಯದಲ್ಲಿರುವ ಆಸ್ಪತ್ರೆಗಳ ಸ್ವಚ್ಛತೆ

1193. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿರುವ ಬಹುತೇಕ ಆಸ್ಪತ್ರೆಗಳು ಸ್ವಚ್ಛತೆ ಇಲ್ಲದೇ ಕೊಳೆತು ನಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇವೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿಲ್ಲ

ಆ) 87 ಪ್ರಾಥಮಿಕ ಆರೋಗ್ಯ ಕೇಂದ್ರಗಳು.

ರೇಷ್ಮೆ ಗೂಡಿನ ಮಾರುಕಟ್ಟೆಗಳಿಂದ ವಸೂಲಾದ ಶುಲ್ಕ

1260. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ ಮತ್ತು ಅವುಗಳು ಯಾವಾಗಿನಿಂದ ಸ್ಥಾಪಿಸಲ್ಪಟ್ಟಿವೆ ;

ಆ) ಮಾರುಕಟ್ಟೆಗಳು ಸ್ಥಾಪನೆಯಾದಂದಿನಿಂದ ಡಿಸೆಂಬರ್ 91ರ ಅಂತ್ಯದವರೆಗೆ ವಸೂಲಾಗಿರುವ ಮಾರುಕಟ್ಟೆ ಶುಲ್ಕ ಎಷ್ಟು ;
(ಕಳೆದ 5 ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆಶುಲ್ಕ ವಿವರ ನಮೂದಿಸುವುದು)

ಇ) ಹೀಗೆ ಸಂಗ್ರಹವಾಗಿರುವ ಹಣದಲ್ಲಿ ರೇಷ್ಮೆ ಬೆಳೆಗಾರರಿಗೆ ವೆಚ್ಚ ಮಾಡಿರುವ ಹಣವೆಷ್ಟು ;

ಈ) ರೇಷ್ಮೆ ವಿನಿಮಯ ಕೇಂದ್ರ ಸ್ಥಾಪನೆಯಾದಂದಿನಿಂದ ಸಂಗ್ರಹವಾಗಿರುವ ಶುಲ್ಕ ಎಷ್ಟು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) –

ಅ) 61 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಅನುಬಂಧ 1 ರಲ್ಲಿ ವಿವರ ಒದಗಿಸಿದದೆ.

ಆ) ರೂ. 5346.92 ಲಕ್ಷ ರೂ.ಗಳು ಅನುಬಂಧ 2 ರಲ್ಲಿ ವಿವರ ಒದಗಿಸಿದೆ.
ರೂ. 2775.820 ಲಕ್ಷ ರೂ.ಗಳು.

ಇ) ಈ ಹಣವನ್ನು ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಒಪ್ಪಿಗೆಯಾದ ಯೋಜನೆಗಳಿಗೆ ಖರ್ಚು ಮಾಡಲಾಗಿದೆ. ಇಲ್ಲಿಯವರೆವಿಗೆ ಖರ್ಚಾಗಿರುವ ಹಣ ರೂ.3003.08 ಲಕ್ಷ ರೂ.ಗಳು.

ಈ) ಸಂಗ್ರಹವಾಗಿರುವ ಶುಲ್ಕ ರೂ.2038.58 ಲಕ್ಷ ರೂ.ಗಳು.

ಅನುಬಂಧ - 1

ಜಿಲ್ಲಾವಾರು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಇರುವ ಸ್ಥಳ

ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ	ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ
ಬೆಂಗಳೂರು	1) ಬಾಗಲೂರು	ಮಂಡ್ಯ	1) ಮಂಡ್ಯ
	2) ಕನಕಪುರ		2) ಮಳವಳ್ಳಿ
	3) ಚನ್ನಪಟ್ಟಣ		3) ಶ್ರೀರಂಗಪಟ್ಟಣ
	4) ರಾಮನಗರಂ		4) ಕೆ.ಆರ್.ಪೇಟೆ
	5) ವಿಜಯಪುರ		

ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ
	6) ಬೆಂಗಳೂರು
	7) ಅತ್ತಿಬೆಲೆ
	8) ಸರ್ಜಾಪುರ
	9) ಮಾಗಡಿ
	10) ವೀರೇಗೌಡನದೊಡ್ಡಿ
	11) ಕುದೂರು
ಮೈಸೂರು	1) ಚಾಮರಾಜನಗರ
	2) ಕೊಳ್ಳೇಗಾಲ
	3) ನಂಜನಗೂಡು
	4) ಸಂತೇಮಾರನಹಳ್ಳಿ
	5) ಟಿ.ನರಸೀಪುರ
	6) ಹರವೆ
	7) ಹನೂರು
	8) ಹುಣಸೂರು
ಕೋಲಾರ	1) ಚಿಕ್ಕಬಳ್ಳಾಪುರ
	2) ಚಿಂತಾಮಣಿ
	3) ಹೆಚ್. ಕ್ರಾಸ್
	4) ಕ್ಯಾಲನೂರು
	5) ಕೋಲಾರ
	6) ಗೌರಿಬದನೂರು
	7) ಶಿಡ್ಲಘಟ್ಟ
	8) ಮುಳಬಾಗಿಲು
	9) ಶ್ರೀನಿವಾಸಪುರ
ತುಮಕೂರು	1) ತುಮಕೂರು
	2) ಕುಣಿಗಲ್
	3) ಹುಲಿಯೂರುದುರ್ಗ
	4) ಹೆಬ್ಬೂರು
	5) ಕೆಂಪನಹಳ್ಳಿ
	6) ಸಂತೇಮಾವತ್ತೂರು.

ಜಿಲ್ಲೆ	ಮಾರುಕಟ್ಟೆ ಇರುವ ಸ್ಥಳ
ಉತ್ತರ ಕನ್ನಡ	1) ಸಿರ್ಸಿ
ಹಾಸನ	1) ಹಾಸನ
	2) ರಾಮನಾಥಪುರ
ಬೀದರ್	1) ಹುಮ್ನಾಬಾದ್
ಬಿಜಾಪುರ	1) ಬಿಜಾಪುರ
	2) ಮುಧೋಳ್
ದಕ್ಷಿಣ ಕನ್ನಡ	1) ಬಿ.ಸಿ. ರಸ್ತೆ
ಧಾರವಾಡ	1) ಧಾರವಾಡ
	2) ಮುಂಡರಗಿ
	3) ಹಾವೇರಿ
	4) ಶಿರಹಟ್ಟಿ
ಚಿಕ್ಕಮಗಳೂರು	1)ಕಡೂರು
ಚಿತ್ರದುರ್ಗ	1) ಚಿತ್ರದುರ್ಗ
	2) ದಾವಣಗೆರೆ
ಗುಲ್ಬರ್ಗಾ	1) ಜೀವರ್ಗಿ
ಶಿವಮೊಗ್ಗ	1) ಶಿವಮೊಗ್ಗ
ಬೆಳಗಾಂ	1) ಬೆಳಗಾಂ
	2) ಗೋಕಾಕ್
	3) ಅಥಣಿ
ಬಳ್ಳಾರಿ	1) ಬಳ್ಳಾರಿ
	2) ಕೂಡ್ಲಿಗಿ
ರಾಯಚೂರು	1) ಲಿಂಗಸೂಗೂರು
ಮಡಿಕೇರಿ	1) ಕುಶಾಲನಗರ

ಅನುಬಂಧ - 2

Statement showing the Market Fee collected from the date of inception of the Cocon Markets i.e. 1969 – 70.

ವರ್ಷ	Market fee collected (Rs. in lakhs)
1969–70	4.57
1970–71	8.15
1971–72	9.92
1972–73	15.76
1973–74	22.68
1974–75	26.32
1975–76	29.65
1976–77	45.06
1977–78	43.81
1978–79	57.95
1979–80	73.00
1980–81	168.06
1981–82	214.55
1982–83	226.46
1983–84	221.23
1984–85	272.23
1985–86	336.15
1986–87	345.77
1987–88	430.93
1988–89	571.36
1989–90	685.41
1990–91	741.41
1991–92	796.04
U.D.M. Jan 92	
Total	5346.92

ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ಯೋಜನೆ

1259. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಹಿಂದಿನ ವಿಧಾನಸಭೆಯಲ್ಲಿ ತಿಳಿಸಿದ ಮೇರೆಗೆ ಚನ್ನಪಟ್ಟಣ ತಾಲ್ಲೂಕ್‌ನಲ್ಲಿ ಕೈಗಾರಿಕಾ ಮಳಿಗೆಗಳನ್ನು ಕೈಗಾರಿಕಾ ವಿಧಾನದ ಯೋಜನೆಯಲ್ಲಿ ತೆಗೆದುಕೊಳ್ಳಲಾಗುತ್ತಿದೆಯೇ ;

ಆ) ಹಾಗಿದ್ದರೆ, ಈ ತಾಲ್ಲೂಕಿನಲ್ಲಿ ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸಲು ವಿಳಂಬವಾಗಿರುವುದಕ್ಕೆ ಕಾರಣವೇನು?

ಇ) ಈ ವಿಧಾನಪವನ್ನು ಕ್ರಮಬದ್ಧಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಈ) ಕೈಗಾರಿಕಾ ಮಳಿಗೆಗಳು ಪ್ರಾರಂಭಿಸಲ್ಪಡುವ ದಿನಾಂಕ :

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) –

ಅ) ಹೌದು

ಆ) ಸೂಕ್ತವಾದ ಜಮೀನು ದೊರಕದಿದ್ದ ಕಾರಣ.

ಇ) 22.37 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ತಗಚಗೆರೆಯಲ್ಲಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದ ಉದ್ದೇಶದ ಮೇರೆಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಸಂಖ್ಯೆ

1261. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) 1989 ರಿಂದ ರಾಜ್ಯದಲ್ಲಿ ಎಷ್ಟು ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಮತ್ತು ಈ ಕಾರ್ಖಾನೆಗಳನ್ನು ಮುಚ್ಚಿರುವುದರಿಂದ ಎಷ್ಟು ಜನ ಕಾರ್ಮಿಕರು ನೌಕರಿ ಕಳೆದುಕೊಂಡಿದ್ದಾರೆ ;

ಆ) ರಾಜ್ಯದಲ್ಲಿರುವ ಒಟ್ಟು ಕಾರ್ಖಾನೆಗಳೆಷ್ಟು, ಮತ್ತು ಈ ಕಾರ್ಖಾನೆಗಳಲ್ಲಿನ ಕಾರ್ಮಿಕರೆಷ್ಟು ;

ಇ) ಈ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) ಮುಚ್ಚಿರುವ ಕಾರ್ಖಾನೆಗಳು - 6, ನೌಕರಿ ಕಳೆದುಕೊಂಡ ಕಾರ್ಮಿಕರು - 2550

ಆ) 7,451 (ದಿನಾಂಕ 31.12.91 ರವರೆಗೆ) ಕಾರ್ಖಾನೆಗಳು, 7,70,586 ಕಾರ್ಮಿಕರು.

ಇ) ಈ ಕಾರ್ಖಾನೆಗಳ ಮುಚ್ಚುವಿಕೆ ಮತ್ತು ಇತರೆ ಕೆಲವು ವಿಷಯಗಳ ಕಾರ್ಮಿಕ ವಿವಾದಗಳಿದ್ದು ಅವುಗಳನ್ನು ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಗಳಿಗೆ ಈಗಾಗಲೇ ಒಪ್ಪಿಸಲಾಗಿದೆ. ಈ ಕಾರ್ಖಾನೆಗಳ ಪುನರಾರಂಭದ ವಿಷಯವು ನವದೆಹಲಿಯ ಬಿ.ಐ.ಎಫ್.ಆರ್. ಮುಂದೆ ಇದ್ದು ಅವರ ತೀರ್ಮಾನವನ್ನು ನಿರೀಕ್ಷಿಸಲಾಗಿದೆ.

ಮಹಿಳೆಯರಿಗೆ ಉದ್ಯೋಗ ಯೋಜನೆಗಳ ಸಂಖ್ಯೆ

1262. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಲ್ಲಿ ಮಹಿಳಾ ಕಲ್ಯಾಣ ಉದ್ಯೋಗ ಯೋಜನೆಗಳ ಸಂಖ್ಯೆ ಎಷ್ಟು? ವಿವರಗಳನ್ನು ಒದಗಿಸುವುದು ;

ಆ) ರಾಜ್ಯದಲ್ಲಿರುವ ಗ್ರಾಮೀಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳು ಮತ್ತು ಕೇಂದ್ರ ಸರ್ಕಾರದ ಮಾದರಿ ಕೈಗಾರಿಕಾ ಕೇಂದ್ರಗಳ ಬಗ್ಗೆ ವಿವರ ಒದಗಿಸುವುದು.

ಇ) ಸ್ತ್ರೀ ಶಕ್ತಿಯನ್ನು ಉಪಯೋಗಿಸಿಕೊಂಡು ಗೃಹೋಪಯೋಗಿ ಸಾಮಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮಹಿಳೆಯರಿಗೆ ಬೇರೆ ಉದ್ಯೋಗ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆಯೇ? ಹಾಗಿದ್ದಲ್ಲಿ, ವಿವರಗಳನ್ನು ಒದಗಿಸಿ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಮೂರು ಯೋಜನೆಗಳು

1. ಕೇಂದ್ರ ಪುರಸ್ಕೃತ ಯೋಜನೆಯಾದ ಸಂಕಷ್ಟದಲ್ಲಿರುವ ಮಹಿಳೆಯರ ಪುನರ್ವಸತಿಗಾಗಿ ಮಹಿಳಾ ತರಬೇತಿ ಕೇಂದ್ರ.
2. ರಾಜ್ಯ ವಲಯದ ಯೋಜನೆಯಾದ ಮಹಿಳೆಯರಿಗೆ ಸಹಾಯ ಒದಗಿಸಲು ತರಬೇತಿ ಮತ್ತು ಉತ್ಪಾದನಾ ಘಟಕ ಇರುತ್ತದೆ.
3. ಅರ್ಹ ಮಹಿಳೆಯರಿಗೆ ಆರ್ಥಿಕ ಸಹಾಯ ಒದಗಿಸುವ ಯೋಜನೆ.

ಆ) ಅನ್ವಯಿಸುವುದಿಲ್ಲ

ಇ) ಹೌದು. ಈ ಕೆಳಕಂಡ ಹೊಸ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

1. ಮಹಿಳೆಯರಿಗೆ ಜಾಬ್ ಓರಿಯನ್‌ಟೇಷನ್ ಕೋರ್ಸ್.
2. ಗ್ರಾಮಾಂತರ ಪ್ರದೇಶದಲ್ಲಿ ಐ.ಟಿ.ಐ. ಪ್ರಾರಂಭಿಸುವುದು.
3. ಮಹಿಳೆಯರಿಗೆ ಕಾಂಪಿಟೀಷನ್ ಪರೀಕ್ಷೆಗೆ ಕೋಚಿಂಗ್ ತರಬೇತಿ ಪ್ರಾರಂಭಿಸುವುದು.
4. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿ ವೇತನ ಕೊಡುವುದು.
5. ದೇವದಾಸಿಯರು ಪರಿಶಿಷ್ಟ ಜನಾಂಗದ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಹಾಗೂ ಬಡತನದ ಅಂಚಿನಲ್ಲಿರುವ ಮಹಿಳೆಯರ ಪ್ರಗತಿಗಾಗಿ ಕೆಲವು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಕಪ್ಪು ಶಿಲೆ ಹಾಗೂ ಗುಡ್ಡಗಳ ಸಂಖ್ಯೆ

1258. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಕಪ್ಪುಶಿಲೆ ಹಾಗೂ ಗುಡ್ಡಗಳಿವೆ?

ಆ) ಕಪ್ಪು ಶಿಲೆಯನ್ನು ಪಡೆದು ರಫ್ತು ಮಾಡಲು ಎಷ್ಟು ಜನರು ಲೈಸೆನ್ಸ್ ಹೊಂದಿದ್ದಾರೆ ;

ಇ) ಇದರಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು ;

ಈ) ಕಪ್ಪು ಶಿಲೆಯನ್ನು ಸರ್ಕಾರದ ಗಮನಕ್ಕೆ ತರದಂತೆ ರಫ್ತು ಮಾಡುತ್ತಿದ್ದು ಅದರಿಂದ ಕೋಟ್ಯಾಂತರ ರೂಪಾಯಿಗಳ ವರಮಾನ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಕಪ್ಪು ಶಿಲೆಯನ್ನು ಅನಧಿಕೃತವಾಗಿ ಮಾರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) –

ಅ) ರಾಜ್ಯದ 22 ತಾಲ್ಲೂಕುಗಳಲ್ಲಿ.

ಆ) ರಫ್ತು ಮಾಡುವ ಲೈಸನ್ಸ್‌ನ್ನು ರಾಜ್ಯ ಸರ್ಕಾರ ನೀಡುವುದಿಲ್ಲ.

ಇ) ಗ್ರಾನೈಟ್ ಗಣಿಗಾರಿಕೆ ಹಾಗೂ ರಫ್ತಿನಿಂದಾಗಿ 91–92ನೇ ಸಾಲಿನ ಜನವರಿ ಮಾಸಾಂತ್ಯದವರೆಗೆ (ಎಲ್ಲಾ ತರಹದ ಗ್ರಾನೈಟ್ ನಿಂದ) ರೂ. 214.80 ಲಕ್ಷ ರಾಜಧನದ ರೂಪದಲ್ಲಿ ಬಂದಿರುತ್ತದೆ.

ಈ) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ಉ) ಮಂಗಳೂರಿನ ಬಳಿ 4 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು ಖನಿಜ ರವಾನೆಯ ಮೇಲೆ ನಿಗಾ ಇಡಲಾಗಿದೆ. ಕಾರವಾರದ ಬಂದರಿನಲ್ಲಿ ಪ್ರತಿ ಗ್ರಾನೈಟ್ ಬ್ಲಾಕ್‌ಗಳನ್ನು ಚೆಕ್ ಮಾಡಲಾಗುತ್ತಿದೆ. ಖನಿಜ ರವಾನೆ ಪರ್ಮಿಟ್ ಇಲ್ಲದ ಗ್ರಾನೈಟ್ ಬ್ಲಾಕ್‌ಗಳಿಗೆ, ರಾಜಧನ ಹಾಗೂ ದಂಡವನ್ನು ವಸೂಲಿ ಮಾಡುವ ಕ್ರಮಗಳಿಂದ ಅನಧಿಕೃತ ಸಾಗಣೆಯನ್ನು ತಡೆಗಟ್ಟಲಾಗುತ್ತಿದೆ.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯಕ್ಕೆ ದಾಖಲಾದ ಪ್ರಕರಣಗಳು.

1287. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ಪ್ರಕರಣಗಳು ಇದುವರೆಗೆ ಎಷ್ಟು ದಾಖಲಾಗಿವೆ ;

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಜಮೀನುಗಳನ್ನು ಬಲಾಢ್ಯರು ಒತ್ತುವರಿಮಾಡಿ ದೌರ್ಜನ್ಯದಿಂದ ಸಾಗುವಳಿ ಮಾಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಅಂತಹ ಪ್ರಕರಣಗಳಲ್ಲಿ ದುರ್ಬಲ ವರ್ಗದವರಿಗೆ ನ್ಯಾಯ ದೊರಕಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲಾಗುವುದು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ ಇದುವರೆವಿಗೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

1989	1990	1991	1992 (ಈ ದಿನಾಂಕದವರೆಗೆ)
974	785	787	63

ಆ) ಹೌದು

ಇ) ಇಂತಹ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ (ದೌರ್ಜನ್ಯ ನಿವಾರಣಾ) ಕಾಯ್ದೆ 1989ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.
ಈ ಕಾಯ್ದೆಯ ಕಲಂ 3.1 (4), (5) ರ ಪ್ರಕಾರ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರನ್ನು ಅವರುಗಳ ಜಮೀನಿನಿಂದ ಬಿಡಿಸುವುದು ಘೋರ ಅಪರಾಧವೆಂದು ಪರಿಗಣಿಸಲಾಗಿದೆ. ಈ ಅಪರಾಧಕ್ಕೆ ಜಾಮೀನು ಬಿಡುಗಡೆ ಇರುವುದಿಲ್ಲ, ಹಾಗೂ ಈ ಪ್ರಕರಣಗಳನ್ನು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗುವುದು. ನಿರೀಕ್ಷಣಾ ಜಾಮೀನು ಸಹ ಈ ಪ್ರಕರಣದಲ್ಲಿ ನೀಡಲು ಬರುವುದಿಲ್ಲ.

ಕಲ್ಲೂರು ಗ್ರಾಮದಲ್ಲಿ ಪ್ರಸೂತಿ ಕೇಂದ್ರಕ್ಕೆ ಸಿಬ್ಬಂದಿಯ ಮಂಜೂರಾತಿ.

1284. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಗುಬ್ಬಿ ತಾಲ್ಲೂಕು ಕಲ್ಲೂರು ಗ್ರಾಮದಲ್ಲಿ ಪ್ರಸೂತಿ ಕೇಂದ್ರಕ್ಕೆ ಮಂಜೂರಾತಿ ನೀಡಿದ್ದು ಇದಕ್ಕೆ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲಾಗಿದೆಯೇ ;

ಆ) ಇಲ್ಲಿದಿದ್ದಲ್ಲಿ ಅದರಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದರೆ, ಸಿಬ್ಬಂದಿ ವರ್ಗದವರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಕಲ್ಲೂರು ಗ್ರಾಮಕ್ಕೆ ಪ್ರಸೂತಿ ಗೃಹ ಮಂಜೂರಾಗಿರುವುದಿಲ್ಲ.

ಆ) ಹೌದು

ಇ) ಪ್ರಸೂತಿ ಗೃಹ ಮಂಜೂರಾತಿ ಕಟ್ಟಡದ ಕೆಲಸ ಸಂಪೂರ್ಣವಾದ ನಂತರ.

ಕಡಬಾ ಹಾಗೂ ನಿಟ್ಟೂರು ಗ್ರಾಮಕ್ಕೆ ಪಿ.ಹೆಚ್. ಸಿ. ಕೇಂದ್ರಕ್ಕೆ ಕಟ್ಟಡ ಹಾಗೂ ಸಿಬ್ಬಂದಿ ನೇಮಕ.

1286. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಗುಬ್ಬಿ ತಾಲ್ಲೂಕು ಕಡಬಾ ಮತ್ತು ನಿಟ್ಟೂರು ಗ್ರಾಮಗಳು ಹೋಬಳಿ ಕೇಂದ್ರಗಳಾಗಿದ್ದು, ಸದರಿ ಗ್ರಾಮಗಳಲ್ಲಿದ್ದ ಪಿ.ಹೆಚ್.ಯು. ವನ್ನು ಪಿ.ಹೆಚ್. ಸಿ. ಯಾಗಿ ಪರಿವರ್ತನೆ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೇಂದ್ರಕ್ಕೆ ಕಟ್ಟಡವನ್ನು ಕಟ್ಟಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ಹಾಗೂ ಅದಕ್ಕೆ ಬೇಕಾಗುವ ಸಿಬ್ಬಂದಿ ವರ್ಗದವರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಹೌದು

ಆ) ಕಟ್ಟಡದ ಕಾಮಗಾರಿಯನ್ನು ಯೋಜನೆ ಅಂದಾಜು ಪಟ್ಟಿಗಳು ಬಂದು ಇವಕ್ಕೆ ಮಂಜೂರಾತಿ ನೀಡಿದ ನಂತರ ತೆಗೆದುಕೊಳ್ಳಲಾಗುವುದು. ಕಟ್ಟಡದ ಕೆಲಸ ಪೂರ್ತಿಯಾದ ಕೂಡಲೇ ಅಗತ್ಯವಿರುವ ಸಿಬ್ಬಂದಿಯನ್ನು ನೇಮಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ

54. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1991ನೇ ಡಿಸೆಂಬರ್ ಆಖೈರುದವರೆಗೆ ಇರುವ ಬೀಡಿ ಮಾಲೀಕರು, ಬೀಡಿ ಕಂಟ್ರಾಕ್ಟರುಗಳು ಮತ್ತು ಬೀಡಿ ಕಾರ್ಮಿಕರುಗಳ ಸಂಖ್ಯೆ ಎಷ್ಟು ;

ಆ) ದಕ್ಷಿಣ ಕನ್ನಡದಲ್ಲಿ ಈಗ ಚಾಲ್ತಿಯಲ್ಲಿರುವ ಬೀಡಿ ಮಜೂರಿ ಎಷ್ಟು ; ಹಾಗೂ ಈಗಿರುವ ಮಜೂರಿಯನ್ನು ಹೆಚ್ಚಿಸಲು ಸರ್ಕಾರದವರು ಆಲೋಚಿಸಿರುವರೇ ;

ಇ) ಬೀಡಿ ಮಜೂರರಿಗೆ ಈಗ ಇರುವ ಸವಲತ್ತುಗಳಾವುವು ;

ಈ) ಬೀಡಿ ಮಜೂರರಿಗೆ ಮಾಲೀಕರಿಂದ, ಕಂಟ್ರಾಕ್ಟರುಗಳಿಂದ ಅನ್ಯಾಯಗಳು ಆಗುತ್ತಿವೆಯೇ ; ಹಾಗೂ ಆ ಕುರಿತು ದೂರುಗಳು ಸರ್ಕಾರಕ್ಕೆ ಬಂದಿವೆಯೇ (ವಿವರಗಳನ್ನು ಒದಗಿಸುವುದು) ;

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) 1991ನೇ ಡಿಸೆಂಬರ್ ಆಖೈರುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 26 ಜನ ಬೀಡಿ ಮಾಲೀಕರು, 1994 ಜನ ಬೀಡಿ ಕಂಟ್ರಾಕ್ಟರುಗಳು ಮತ್ತು 1,84,981 ಬೀಡಿ ಕಾರ್ಮಿಕರು ಇರುತ್ತಾರೆ.

ಆ) ರಾಜ್ಯದಲ್ಲಿರುವ ಬೀಡಿ ಕಾರ್ಮಿಕರಿಗೆ ದಿನಾಂಕ 1.11.1991 ರಿಂದ ಅನ್ವಯಿಸುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ. ಅದರಂತೆ 1000 ಬೀಡಿ ಸುತ್ತಲು ರೂ.19.65 ದರ ಚಾಲ್ತಿಯಲ್ಲಿದೆ.

ಇ) ಕಾನೂನು ಪ್ರಕಾರ ದೊರಕಬೇಕಾದ ಸೌಲಭ್ಯಗಳು ಅಂದರೆ ಸಂಬಳ ಸಹಿತ ರಜೆ, ಬೋನಸ್, ಹೆರಿಗೆಭತ್ಯೆ ರಜೆ, ಮುಂತಾದವುಗಳ ಜೊತೆಗೆ ವಸತಿ ಸೌಲಭ್ಯ, ವೈದ್ಯಕೀಯ ಸೌಲಭ್ಯಗಳು, ವಿದ್ಯಾರ್ಥಿವೇತನ ಮುಂತಾದ ಸೌಲಭ್ಯಗಳು ಕೇಂದ್ರ ಸರ್ಕಾರದ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಒದಗಿಸಲಾಗುತ್ತಿದೆ.

ಈ) ಇಲ್ಲ.

ಆಂಗ್ಲೋ ಇಂಡಿಯನ್ ಜನಾಂಗದ ವಿದ್ಯಾರ್ಥಿಗಳಿಗೆ ಸೌಲಭ್ಯ.

1082. ಶ್ರೀ ಡೆರಿಕ್ ಎಂ. ಬಿ. ಪುಲಿನ್‌ಪಾ (ನಾಮನಿರ್ದೇಶನ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಆಂಗ್ಲೋ ಇಂಡಿಯನ್ ಜನಾಂಗದವರಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ವಾರ್ಷಿಕ ಆದಾಯ ರೂ. 6,000 ಗಳಿಗೆ ಕಡಿಮೆ ಇದ್ದಲ್ಲಿ ಶೈಕ್ಷಣಿಕ ಮತ್ತು ಉದ್ಯೋಗ ಸೌಲಭ್ಯಗಳನ್ನು ನೀಡುತ್ತಿರುವುದಾಗಿ ಕಳೆದ ಅಧಿವೇಶನದಲ್ಲಿ ತೀಳಿಕೆ ನೀಡಿರುವುದು ನಿಜವೇ ;

ಆ) ಈ ಆದಾಯ ಮಿತಿಯಿಂದಾಗಿ ಬಹಳಷ್ಟು ಕುಟುಂಬಗಳು ಈ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಆಂಗ್ಲೋ ಇಂಡಿಯನ್ ಜನಾಂಗದವರನ್ನು ಮೇಲೆತ್ತಲು ಏನಾದರೂ ಬದಲೀ ವ್ಯವಸ್ಥೆಯನ್ನು ಮಾಡಲಾಗಿದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಆಂಗ್ಲೋ ಇಂಡಿಯನ್ ಜನಾಂಗದವರಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ವಾರ್ಷಿಕ ಆದಾಯ ರೂ. 6,000–00 ಗಳಿಗೆ ಕಡಿಮೆ ಇದ್ದಲ್ಲಿ ಉದ್ಯೋಗ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಎಂದು ಹೇಳಿರುವುದು ನಿಜ.

ಆ) ಹೌದು

ಇ) ಇಂಥ ಫಲಾನುಭವಿಗಳ ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಉಪಾಧ್ಯಕ್ಷೀಣೆಯವರು – ಸದನದ ಮುಂದೆ ಮಂಡಿಸಲಾಗಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು) :– ಮಾನ್ಯ ಉಪಾಧ್ಯಕ್ಷೀಣೆಯವರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

1) 1988 – 89 ನೇ ಸಾಲಿನ ಧನ ವಿನಿಯೋಗ ಲೆಕ್ಕಪತ್ರಗಳು.
2) 1988 –89 ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ
3) 1989ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ನಂ.3 ಸಿವಿಲ್)

ಉಪಾಧ್ಯಕ್ಷೀಣೆಯವರು – ಕಾಗದ ಪತ್ರಗಳನ್ನು ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು.

ಉಪಾಧ್ಯಕ್ಷೀಣೆಯವರು :– ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 2ನೇ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ನಿಯಮ 334 ರ ಮೇರೆಗೆ

1 ಮುಳವಾಡ ಏತನೀರಾವರಿ ಯೋಜನೆ :–

ಶ್ರೀ. ಎಂ.ಬಿ. ಪಾಟೀಲ್ (ತ್ರಿಕ್ಕೋಟಾ) – 1. ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಪತ್ರಿಕಾ ಹೇಳಿಕೆಗಳು ಮತ್ತು ಇತ್ತೀಚೆಗೆ ಮುಖ್ಯಾಧೀಶರೊಬ್ಬರು ಜನಾಂಧೋಲನ ಪ್ರಾರಂಭಿಸಿ, ನಿರಶನ ಕಾರ್ಯಕ್ರಮ ಕೈಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ;

2. ಈ ಬಗ್ಗೆ ಸರ್ಕಾರದ ನಿಶ್ಚಿತ ನಿಲುವನ್ನು ಮತ್ತು ಕೈಗೊಂಡ ಕೆಲಸದ ಪ್ರಗತಿಯನ್ನು ತಿಳಿಸಬಹುದೆ ;
3. ಬಿಜಾಪುರ ಜಿಲ್ಲೆಯ ಜನತೆಯಲ್ಲಿ ಈ ಯೋಜನೆಯ ಅನುಷ್ಠಾನದ ಬಗ್ಗೆ ವಿಶ್ವಾಸ ಮೂಡಿಸಲು ಮತ್ತು ಮಠಾಧೀಶರು ನಿರಶನ ನಡೆಸಲಿರುವುದನ್ನು ನಿಲ್ಲಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): - ಮಾನ್ಯ ಉಪಾಧ್ಯಕ್ಷೀಣಿಯವರೆ, ವಿವರವಾದ ಹೇಳಿಕೆಯ ಪ್ರತಿಯನ್ನು ಮಾನ್ಯ ಸದಸ್ಯರ ಕಡೆ ಕೊಟ್ಟಿದ್ದೇನೆ. ಹಾಗೂ ಸಭೆಯ ಮುಂದಿಟ್ಟಿರುತ್ತೇನೆ.

1. ವಿಜಾಪುರ ಸ್ವಾತಂತ್ರ್ಯ ಯೋಧರ ಸಮಿತಿ ಹಾಗೂ ಇತರರು, ಮುಳವಾಡ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಬಹಳ ದಿನಗಳಿಂದ ಒತ್ತಾಯಿಸುತ್ತಿದ್ದಾರೆ.
2. ಈ ಮುಳವಾಡ ಏತ ನೀರಾವರಿ ಯೋಜನೆಯು, ಕೃಷ್ಣ ಮೇಲ್ದಂಡೆ ಯೋಜನೆಯ ಒಂದು ಭಾಗವಾಗಿದ್ದು, ಅದರ ಹೆಡ್ ವರ್ಕ್ಸ್ ಕಾಮಗಾರಿಗಳನ್ನು, ಈಗ ಕಾರ್ಯಗತಗೊಳ್ಳುತ್ತಿರುವ ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದಲ್ಲಿ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರ ರೈಜಿಂಗ್ ಮೈನ್ ಮತ್ತು ಕಾಲುವೆ ನಿರ್ಮಾಣವನ್ನು, ಇನ್ನೂ ಅನ್ವೇಷಣಾ ಹಂತದಲ್ಲಿರುವ ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟದಲ್ಲಿ ಕೈಗೆತ್ತಿಕೊಳ್ಳಲಾಗುವುದು.
3. ಈ ಏತ ನೀರಾವರಿ ಯೋಜನೆಯನ್ನು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಯೋಜಿಸಲಾಗಿದ್ದು, ಅದರ ಮುಖ್ಯಾಂಶಗಳು ಈ ರೀತಿ ಇವೆ :-

ಮುಳವಾಡ ಏತ ನೀರಾವರಿ ಯೋಜನೆಯ ಸ್ಥೂಲಾಂಶಗಳು	ಕೃಷ್ಣ ಮೇಲ್ದಂಡೆ ಯೋಜನೆಯ 173 ಟಿ.ಎಂ.ಸಿ. ನೀರಿನ ಬಳಕೆಯಲ್ಲಿ (ಅಂದರೆ ಬಚಾವತ್ ಮಂಡಳಿ ತೀರ್ಪಿನ ಸ್ಕೀಮ್ ಎ ಪ್ರಕಾರ)	ಕೃಷ್ಣ ಮೇಲ್ದಂಡೆ ಯೋಜನೆಯ 302. ಟಿ.ಎಂ.ಸಿ. ನೀರಿನ ಬಳಕೆಯಲ್ಲಿ (ಅಂದರೆ ಬಚಾವತ್ ಮಂಡಳಿ ತೀರ್ಪಿನ ಸ್ಕೀಮ್ ಬಿ ಪ್ರಕಾರ)
ಅ) ನೀರಾವರಿ ಆಗುವ ಪ್ರದೇಶ	29,500 ಹೆಕ್ಟೇರುಗಳು	2,12,000 ಹೆಕ್ಟೇರುಗಳು
ಆ) ಹೆಡ್ ವರ್ಕ್ಸ್ ಕಾಮಗಾರಿಗಳ ಅಂದಾಜು ವೆಚ್ಚ	32.50 ಕೋಟಿ ರೂ.ಗಳು	305 ಕೋಟಿ ರೂ.ಗಳು
ಇ) ಸಮಗ್ರ ಯೋಜನೆಯ ಅಂದಾಜು ವೆಚ್ಚ	181.50 ಕೋಟಿ ರೂ.ಗಳು	1163.50 ಕೋಟಿ ರೂ.ಗಳು
ಈ) ಬೇಕಾದ ಅಶ್ವಶಕ್ತಿ	20,000 ಹೆಚ್.ಪಿ.	2,69,000 ಹೆಚ್.ಪಿ.
ಉ) ಬೇಕಾದ ವಿದ್ಯುತ್ ಪ್ರಮಾಣ	38.85 ಮಿಲಿಯನ್ ಕೆ.ಡಬ್ಲ್ಯೂ.ಹೆಚ್	419.49 ಮಿಲಿಯನ್ ಕೆ.ಡಬ್ಲ್ಯೂ.ಹೆಚ್.

4. ಈ ಏತ ನೀರಾವರಿ ಯೋಜನೆಯ ಇಸ್ಟೇಕ್ ಕಾಲುವೆ ಮತ್ತು ಜ್ಯಾಕ್‌ವೆಲ್ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕೆಂದು ದಿನಾಂಕ :2.2.1992 ರಂದು ಆಲಮಟ್ಟಿಯ ಮುಖ್ಯ ಇಂಜಿನಿಯರ್‌ರವರಿಗೆ ನಿರ್ದೇಶನ ನೀಡಲಾಗಿದ್ದು, ಅದರಂತೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಈ ದಿಕ್ಕಿನಲ್ಲಿ, ಈಗಾಗಲೇ 150 ಲಕ್ಷ ರೂ.ಗಳ ಹಣವನ್ನೂ ಸಹ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.
5. ಈ ಏತ ನೀರಾವರಿ ಯೋಜನೆಯ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಹಣವನ್ನೂ ಸಹ ಬಿಡುಗಡೆ ಮಾಡಿರುವುದರಿಂದ, ಆ ಪ್ರದೇಶದ ಜನರಿಂದ ಇದ್ದ ಬಹಳ ದಿನಗಳ ಬೇಡಿಕೆಯು ಈಡೇರಿದಂತಾಗಿದೆ.

ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಯೋಜನೆಗೆ ಎಷ್ಟು ಸಾಧ್ಯವಿದೆ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಕೆಲವೊಂದು ಜನ ರಾಜಕೀಯ ಉದ್ದೇಶ ಇಟ್ಟುಕೊಂಡು ಏನು ಪ್ರತಿಭಟನೆ ಮಾಡತಕ್ಕ ಕಾರ್ಯಕ್ರಮ ಮಾಡುತ್ತಿದ್ದಾರೆ ಅದು ಸರಿಯಲ್ಲ. ಸರ್ಕಾರ ಈ ಯೋಜನೆ ಬಗ್ಗೆ ವಿಚಾರ ಮಾಡಿ 2 ಸಾವಿರ ಇಸವಿಯೊಳಗೆ ಯೋಜನೆಯನ್ನು ಪೂರ್ಣ ಮಾಡಬೇಕೆಂದು ಇದೆ. ಸಾಮಾನ್ಯ ರೈತರ ವರ್ಗಕ್ಕೆ ಆ ಭಾಗದ ಜನರಿಗೆ, ಬರಗಾಲ ಪ್ರದೇಶದ ಅಭಿವೃದ್ಧಿಗಾಗಿ ಸರ್ವ ರೀತಿಯಲ್ಲಿ ಕಾರ್ಯಕ್ರಮ ಮಾಡಿಕೊಡುತ್ತೇವೆಂಬ ಆಶ್ವಾಸನೆಯನ್ನು ಆ ಭಾಗದ ಜನರಿಗೆ ಕೊಡುತ್ತಿದ್ದೇನೆ. ಈಗಾಗಲೇ ಯಾರು ಅಲ್ಲಿ ಮಠಾಧೀಶರಾಗಲಿ ಇನ್ನಿತರ ಮಹಾನುಭಾವರು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅದನ್ನು ದಯವಿಟ್ಟು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

2. Subsidy amount In respect of Sugar and Levy paddy to TAPCMS

Sri Sadath Alikhan (Channapatna): Will the Minister of State for Co–operation please to state that :

The subsidy amount of Bills relating to Sugar and Levy Paddy mountingto Rs. 6,89,208–10 is due from the Government to the T.A.P.C.M.S. Limited, Channapatna and S.L.N. Society, also, since February 1990. The Societies are put into great hard–ship for nonpayment of subsidy amount in time. There is no funds in T.A.P.C.M.S. Ltd. Channapatna to lift the foodgrains (monthly allotment) due to the surplus amount due by the Government.

a) Why the subsidy amount has not been released by the Government as and when the bill has been submitted by the socieities.
b) What action has been taken by the Government to clear the subsidy amount to the socieities which is due by the Government in Channapatna Town.
c) The date on which the amount will be cleared to them,
d) Is there any separate shceme in the Government for Financial Assistance to the Taluk Marketing Co–operative Societies in Rural areas for working capital rather than the Co–operative Schedule Banks?
e) If so, which are they; the details may be furnished?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) –

ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಮತ್ತು ಎಸ್.ಎಲ್.ಎನ್. ಸಹಕಾರ ಸಂಘಕ್ಕೆ ಫೆಬ್ರವರಿ 1990 ರಿಂದ ಜುಲೈ 1991 ರ ವರೆಗೆ ಸಕ್ಕರೆ ದರ ವ್ಯತ್ಯಾಸದ ಬಾಕಿ ಬಾಬತ್ತು ಈ ಕೆಳಕಂಡ ಮೊಬಲಗು ಸರ್ಕಾರದಿಂದ ಪಾವತಿ ಮಾಡಬೇಕಾಗಿರುತ್ತದೆ.

1. ತಾಲ್ಲೂಕು ವ್ಯವಸಾಯ ಮಾರಾಟ ಸಹಕಾರ ಸಂಘ, ಚನ್ನಪಟ್ಟಣ . . 2,86,014–00
2. ಎಸ್.ಎಲ್.ಎಸ್. ಸಹಕಾರ ಸಂಘ ನಿ. ಚನ್ನಪಟ್ಟಣ 3,89,712–00

. . . . . ಒಟ್ಟು 6,75,726–00

ಬತ್ತವನ್ನು ಲೆವಿ ಪದ್ಧತಿಯ ಪ್ರಕಾರ ಈಗ ಶೇಖರಣೆ ಮಾಡುತ್ತಿಲ್ಲವಾಗಿ ಈ ಬಾಬತ್ತು ಸರ್ಕಾರದಿಂದ ಯಾವ ಮೊಬಲಗನ್ನು ಈ ಸಂಘಗಳಿಗೆ ಕೊಡಲು ಬಾಕಿ ಇರುವುದಿಲ್ಲ. ಸರ್ಕಾರದಿಂದ ಲೆವಿ ಸಕ್ಕರೆ ದರದ ವ್ಯತ್ಯಾಸದ ಬಗ್ಗೆ ಬರಬೇಕಾದ ಹಣ ಸಕಾಲಕ್ಕೆ ಬರದಿರುವುದರಿಂದ ಈ ಸಂಘಗಳು ಅವರಿಗೆ ಹಂಚಿಕೆಯಾದ ಆಹಾರ ಪದಾರ್ಥಗಳನ್ನು ಎತ್ತುವಳಿ ಮಾಡಲು ತೊಂದರೆಯಾಗಿರುತ್ತದೆ.

ಈ ಮೇಲೆ ತಿಳಿಸಿದ ಲೆವಿ ಸಕ್ಕರೆ ದರ ವ್ಯತ್ಯಾಸದ ಹಣವನ್ನು ಆಹಾರ ಮತ್ತು ಸಾರಿಗೆ ಇಲಾಖೆಯು ಬಿಡುಗಡೆ ಮಾಡಬೇಕಾಗಿದ್ದು ಸದರಿ ಬಾಕಿ ಹಣವನ್ನು ಮೇಲ್ಕಂಡ ಸಹಕಾರ ಸಂಘಗಳಿಗೆ ಕೂಡಲೇ ಬಿಡುಗಡೆ ಮಾಡಲು ತೀವ್ರ ಕ್ರಮ ತೆಗೆದುಕೊಳ್ಳುವಂತೆ ಆ ಇಲಾಖೆಗೆ ತಿಳಿಸಲಾಗುವುದು.

ರಾಜ್ಯ ಸರ್ಕಾರವು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಿಗೆ ಅವುಗಳ ಷೇರು ಬಂಡವಾಳವನ್ನು ಬಲಪಡಿಸಲು ಷೇರು ಬಂಡವಾಳ ಮಂಜೂರು ಮಾಡುವ ಯೋಜನೆ ಬಂದಿದೆ. ಈ ಯೋಜನೆಯಡಿಯಲ್ಲಿ ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ರೂ.2 ಲಕ್ಷಗಳನ್ನು ಸರ್ಕಾರ ಮಂಜೂರು ಮಾಡಿದೆ.

1.05 ಪಿ.ಎಂ.

3) ಜಯನಗರ ಬಸ್ ನಿಲ್ದಾಣದಿಂದ ಮೈಸೂರಿಗೆ ಬಸ್ ಸೌಕರ್ಯ ಒದಗಿಸುವುದು

ಶ್ರೀ ರಾಮಲಿಂಗರೆಡ್ಡಿ (ಜಯನಗರ) – ಬೆಂಗಳೂರು ಜಯನಗರ ಬಸ್ ನಿಲ್ದಾಣದಿಂದ ಈಗ ಪ್ರತಿದಿನ ಬೆಳಗ್ಗೆ 6.30 ಕ್ಕೆ ಒಂದು ತಡೆರಹಿತ ಬಸ್ಸನ್ನು ಬೆಂಗಳೂರು - ಮೈಸೂರು ನಡುವೆ ಓಡಿಸಲಾಗುತ್ತಿದೆ. ಇದರ ಜೊತೆಗೆ ಬೆಳಗ್ಗೆ 9 ಘಂಟೆಗೆ ಹಾಗೂ ಸಂಜೆ 6 ಘಂಟೆಗೆ ಒಂದೊಂದು ತಡೆರಹಿತ ಬಸ್ಸನ್ನು ಬೆಂಗಳೂರು-ಮೈಸೂರು ನಡುವೆ ಓಡಿಸಬೇಕು. ಈ ಬಸ್‌ಗಳಲ್ಲಿ ಜಾಗವಿದ್ದರೆ ಜಯನಗರ ಬಸ್ ನಿಲ್ದಾಣದಿಂದ ಬೆಂಗಳೂರು ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಪ್ರಯಾಣಿಕರನ್ನು ತುಂಬಿಸಿಕೊಂಡು ಮೈಸೂರಿಗೆ ಹೋಗುವ ವ್ಯವಸ್ಥೆ ಮಾಡಬೇಕು. ಇದರಿಂದ ಜಯನಗರ, ಬನಶಂಕರಿ, ಬಸವನಗುಡಿ, ಹನುಮಂತನಗರ ಮುಂತಾದ ಭಾಗಗಳಲ್ಲಿರುವ ನಾಗರೀಕರಿಗೆ ಅನುಕೂಲವಾಗುವುದು. ಇದರ ಜೊತೆಗೆ ರಾತ್ರಿ 9 ಘಂಟೆಯ ನಂತರ ಮೈಸೂರಿನಿಂದ ಬೆಂಗಳೂರನ್ನು ತಲುಪುವ ಎಲ್ಲಾ ತಡೆರಹಿತ ಬಸ್‌ಗಳನ್ನು ಬೆಂಗಳೂರು ಬಸ್ ನಿಲ್ದಾಣದಿಂದ ಜಯನಗರದವರೆಗೂ ಹೋಗುವಂತೆ ಕ್ರಮ ಕೈಗೊಂಡರೆ ಅದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗುತ್ತದೆ. ಸನ್ಮಾನ್ಯ ಸಾರಿಗೆ ಸಚಿವರು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

SRI AJIJ SAIT (*Transport Minister*) :–At present, the K.S.R.T.C. is operating 32 non–stop schedules between Bangalore and Mysore performing 128 single trips daily. In addition 8 Delux Schedules perform 32 single trips. Out of these services, one trip (Ordinary Coach) is being operated from Jayanagar Bus Station departing at 0645 hours to Mysore via Bangalore Bus Station. The service was introduced with effect from 29.10.1984.

An average of 22 passengers have boarded the bus at Jayanagar Bus Station for the period from 8th Feb. 1992 to 5th March 1992, whereas the carrying capacity of the bus is 54 seats. This works out to only 41% load factor. This clearly indicates that there is no need for operation of additional services from Jayanagar for the present.

The KSRTC has provided City services from Bangalore Bus Station to Jayanagar Bus stand and Jayanagar 9th Block. the last departure from Bangalore Bus Station is at 2315 hours. Intending passengers may avail these services from Bangalore Bus Station to Jayanagar. There is therefore no need to extend Mysroe – Bangalore non–stop services upto Jayanagar after 2100 hours.

4) ಕುಂಠಿಶಾಮನಹಳ್ಳಿ ಗ್ರಾಮದ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿರುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಕುಂಠಿ ಶಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 2:2ರಲ್ಲಿ 20 ಕುಂಟೆ ಜಮೀನನ್ನು ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿದ್ದು ಮತ್ತು ಸದರಿ ವಿಚಾರವನ್ನು ಉಚ್ಚ ನ್ಯಾಯಾಲಯದಲ್ಲಿ 2403 :92 ರಲ್ಲಿ ಭೂಮಾಲೀಕರು ಪ್ರಶ್ನಿಸಿದ್ದು ಸರ್ಕಾರದ ಅಧಿನಿಯಮವನ್ನು ಉಚ್ಚ ನ್ಯಾಯಾಲಯ ಸ್ವಾಧೀನ ಪಡಿಸಿಕೊಂಡಿರುವುದನ್ನು ಎತ್ತಿ ಹಿಡಿದಿರುತ್ತದೆ. ಆದರೆ ನಿವೇಶನ ಹಂಚಿಕೆಯಾಗಿರುವ ಹಿನ್ನೆಲೆಯಲ್ಲಿ ಈ ಮಧ್ಯೆ ಮತ್ತೊಮ್ಮೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಸ್ಥಗಿತಗೊಳಿಸಲಾಗಿದೆ. ಇಂಥ ವಿಚಾರದಲ್ಲಿ ಸರ್ಕಾರ ಕೂಡಲೇ ನ್ಯಾಯಾಲಯಕ್ಕೆ ಒದಗಿಸಬೇಕಾಗಿರುವ ದಾಖಲಾತಿಗಳನ್ನು ಒದಗಿಸಿ ಇಂಥ ತಪಾಸಣೆಯನ್ನು ಆದಷ್ಟು ಬೇಗನೆ ಇತ್ಯರ್ಥಗೊಳಿಸಲು ವಿಫಲವಾಗಿರುವ ಬಗ್ಗೆ ಸದನದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತರಲಾಗುವುದು.

5) ಪುತ್ತೂರು ತಾಲ್ಲೂಕಿನಲ್ಲಿ ಒಂದು ಹೊಸ ಕಂದಾಯ ಸರ್ವೆ ಫಿರ್ಕಾದ ಸ್ಥಾಪನೆ.

ಶ್ರೀ ವಿನಯ ಕುಮಾರ್ ಸೊರಕೆ :- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಈಗಾಗಲೇ ಮೂರು ಕಂದಾಯ ಇಲಾಖಾ ಫಿರ್ಕಗಳಿದ್ದು ಸಾರ್ವಜನಿಕರ ಕೆಲಸ ಕಾರ್ಯಕ್ಕೆ ಹಾಗೂ ಸಂಚಾರಕ್ಕೆ ಹೆಚ್ಚು ತೊಂದರೆಗಳು ಇರುವುದರಿಂದ ಕಳೆದು ಎರಡು ವರ್ಷಗಳ ಹಿಂದೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಹೊಸ ಸರ್ವೆ ಫಿರ್ಕಾದ ಪ್ರಪೋಸಲ್ ಕಳುಹಿಸಿದ್ದು ಇದರ ಬಗ್ಗೆ ಯಾವ ತೀರ್ಮಾನವನ್ನೂ ಕೂಡ ಸರ್ಕಾರ ಕೈಗೊಂಡಿಲ್ಲ. ಆದುದರಿಂದ ಸಾರ್ವಜನಿಕ ಅನುಕೂಲಕರವಾದ ಹೊಸ ಒಂದು ಸರ್ವೆ ಫಿರ್ಕವನ್ನು ಕೂಡಲೆ ರಚನೆ ಮಾಡುವಂತೆ ಮಾನ್ಯ ಕಂದಾಯ ಸಚಿವರನ್ನು ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ.

ಶ್ರೀ. ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಾಂಸದಿಕ ವ್ಯವಹಾರಗಳ ಮಂತ್ರಿಗಳು) - ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ಓದುತ್ತಿದ್ದೇನೆ.

ಮಾನ್ಯ ಸದಸ್ಯರಾದ ಶ್ರೀವಿನಯ ಕುಮಾರ್ ಸೊರಕೆರವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಹಾಲಿ ಮೂರು ಕಂದಾಯ ಇಲಾಖಾ ಫಿರ್ಕಗಳಿದ್ದು ಸಾರ್ವಜನಿಕರ ಕೆಲಸಕಾರ್ಯಕ್ಕೆ ಹಾಗೂ ಸಂಚಾರಕ್ಕೆ ಹೆಚ್ಚು ತೊಂದರೆಯಾಗಿರುವುದರಿಂದ ಮತ್ತೊಂದು ಫಿರ್ಕವನ್ನು ತೆರೆಯುವ ಬಗ್ಗೆ ಕೋರಿರುವುದಾಗಿಯೂ, ಕೂಡಲೇ ಫಿರ್ಕಾವನ್ನು ತೆರೆಯಬೇಕೆಂದು ಕೋರಿರುವರು.

ಸರ್ವೆ ಎಂಬ ಗ್ರಾಮದಲ್ಲಿ ಹೊಸದಾಗಿ ಒಂದು ಫಿರ್ಕಾ ತೆರೆಯಬೇಕೆಂದು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಿದ್ದು ಸರಿ ಅಷ್ಟೆ. ಆದರೆ 1991 ರ ಜನಗಣತಿ ಸಂದರ್ಭದಲ್ಲಿ ಯಾವುದೇ ರೀತಿಯ ಗ್ರಾಮ, ಹೋಬಳಿ, ತಾಲ್ಲೂಕುಗಳ ಎಲ್ಲೆಯಲ್ಲಿ ಬದಲಾವಣೆಯನ್ನು ಮಾಡಬಾರದೆಂದು ಸೂಚನೆ ಕೇಂದ್ರ ಸರ್ಕಾರದಿಂದ ನೀಡಿದ್ದರಿಂದ ಈ ಅಂಶವನ್ನು ತಡೆಹಿಡಿಯಲಾಯಿತು. 1991 ರ ಜನಗಣತಿ ಕಾರ್ಯ ಈಗ ಮುಗಿದಿದೆ. ಈ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಅಗತ್ಯವಿದ್ದಲ್ಲಿ ಸರ್ವೆ ಎಂಬ ಗ್ರಾಮದಲ್ಲಿ ಹೊಸ ಫಿರ್ಕಾವನ್ನು ತೆರೆಯುವ ಕ್ರಮಕ್ಕೆಗೊಳ್ಳಲಾಗುವುದು.

ವಿರೋಧ ಪಕ್ಷದವರಿಂದ ಸಭೆಯ ಬಹಿಷ್ಕಾರದ ಪ್ರಸ್ತಾವನೆ

ಶ್ರೀ ಎಸ್. ಆರ್ ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ವಿರೋಧಪಕ್ಷದ ಸದಸ್ಯರ್ಯಾರೂ ಸದನದಲ್ಲಿ ಇಲ್ಲ. ಬಡ್ಜೆಟ್ ಬಗ್ಗೆ ಚರ್ಚೆ ನಡೆವಾಗ ವಿರೋಧಪಕ್ಷದವರು ಸಲಹೆ ಸೂಚನೆ ಕೊಡತಕ್ಕದ್ದು ಬಹಳ ಮುಖ್ಯ. ತಮ್ಮ ಕೊಠಡಿಯಲ್ಲಿ ವಿರೋಧ ಪಕ್ಷದ ನಾಯಕರನ್ನು ಕರೆಯಿಸಿ ಅವರ ಜೊತೆ ಸರ್ಕಾರ ಮಾತುಕತೆ ನಡೆಸಲಿ ಎಂದು ನಾನು ವಿನಂತಿ ಮಾಡಿತ್ತೇನೆ. ಈ

ಸದನದಲ್ಲಿ ಇರುವ ಮುಖ್ಯಮಂತ್ರಿಗಳು ನನ್ನ ಸಲಹೆಯನ್ನು ಒಪ್ಪುತ್ತಾರೆಂದು ತಿಳಿದು ನಾನು ಅವರಿಗೆ ಈ ಬಗ್ಗೆ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ :- ಮಾನ್ಯ ಅಧ್ಯಕ್ಷೆಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಷಯದ ಬಗ್ಗೆ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದ ನಾಯಕರು ಹಾಗೂ ಆ ಭಾಗದಲ್ಲಿನ ಇತರೇ ವಿರೋಧ ಪಕ್ಷಗಳ ಧುರೀಣರು ಮತ್ತು ಸದಸ್ಯರು ಬಹುಶಃ ಯಾವ ವಿಚಾರದ ಬಗ್ಗೆ ಹೊರಗುಳಿದಿದ್ದಾರೆಂದು ನಮ್ಮ ಹತ್ತಿರ ಮಾತನಾಡಬಹುದಿತ್ತು. ಬಹುಶಃ ಅವರು ಸದನದಲ್ಲಿ ಪ್ರಸ್ತಾಪ ಮಾಡಬಹುದಾಗಿತ್ತು. ಅವರು ಸದನದಲ್ಲಿ ಪ್ರಸ್ತಾಪ ಮಾಡದೇ ಹೊರಗಡೆ ಹೋಗಿ ಪತ್ರಿಕೆಗಳ ಮೂಲಕ ಹೇಳಿದ್ದಾರೆ. ಆ ವಿಷಯ ಕೂಡಾ ನಮಗೆ ಪತ್ರಿಕೆಗಳ ಮೂಲಕ ಗೊತ್ತಾಯಿತು. ವಿರೋಧಿ ಪಕ್ಷದ ಮಾನ್ಯ ಸದಸ್ಯರು ಇಲ್ಲಿ ತಮ್ಮ ಅನುಮತಿ ಪಡೆದು ಇಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ಬರುತ್ತಾ ಇತ್ತು. ಅವರು ಏನು ಬಡ್ಜೆಟ್ ಬಗ್ಗೆ ಮಾತನಾಡಿದ್ದಾರೆ ಆ ವಿಷಯವಾಗಿ ಅವರು ಇಲ್ಲಿಯೂ ಕೂಡ ಮೋಷನ್ ಮೂವ್ ಮಾಡಿದ್ದು ಅದನ್ನು ಸದನ ತಿರಸ್ಕರಿಸಿತು. ಅದಾದ ಮೇಲೂ ಮತ್ತೆ ಏನು ಉಳಿದಿದೆಯೋ ಗೊತ್ತಿಲ್ಲ, ರಾಜ್ಯದ ಜನತೆಗೆ ಇದು ಗೊತ್ತಾಗುವುದು ಒಳ್ಳೆಯದು. ಅವರ ಜೊತೆ ಮಾತುಕತೆ ನಡೆದು ಯಾವ ರೀತಿ ಏನು ಎಂದು ಗೊತ್ತಾಗಿದ್ದರೆ ನಾವು ಏನಾದರೂ ಹೇಳಬಹುದಾಗಿತ್ತು. ಯಾವ ವಿವರ ಏನೂ ಗೊತ್ತಾಗದೇ ನಾವು ಬಹಿಷ್ಕಾರ ಹಾಕಿದ್ದೇವೆ ಎಂದರೆ ಅದು ನಮಗೆ ಅರ್ಥವಾಗುವುದಿಲ್ಲ, ಇವತ್ತು ಬಹಿಷ್ಕಾರ ಹಾಕಿ ಏನೊಂದು ವಿಚಾರ ಪತ್ರಿಕೆ ಜೊತೆ ಎನ್‌ಕ್ವಯರಿ ಆಗಬೇಕೆಂದೂ ಏನೋ ಚರ್ಚಿಸಿದ್ದಾರೆ. ಅದನ್ನಾದ್ರೂ ಕೂಡ ಸದನದಲ್ಲಿ ತಮ್ಮ ಅನುಮತಿ ಪಡೆದು ಹೇಳಬಹುದಾಗಿತ್ತು. ಆ ವಿಚಾರವನ್ನು ಹೇಳತಕ್ಕ ಪ್ರಯತ್ನ ಮಾಡಿಲ್ಲ ಹೊರಗಡೆ ಸುಮ್ಮನೆ ಕುಳಿತಿದ್ದಾರೆ. ಬಡ್ಜೆಟ್ ಮೇಲೆ ಚರ್ಚೆ ನಿನ್ನೆ ಸದನದಲ್ಲಿ ಪ್ರಾರಂಭವಾಗಿದೆ. ಇದು ನನಗೆ ಗೊತ್ತಿರಲಿಲ್ಲ, ನಿನ್ನೆ ವಿಧಾನಪರಿಷತ್ತಿನಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳು ಹೆಚ್ಚು ಇದ್ದಿದ್ದರಿಂದ ನಾನು ಅಲ್ಲಿದ್ದೆ. ಪ್ರಾರಂಭವಾದ ಮೇಲೆ ನಮಗೆ ಅದು ಗೊತ್ತಾಯಿತು. ನಾನು ಅಲ್ಲಿದ್ದಾಗಲೇ ಗೊತ್ತಾಯಿತು. ಇಲ್ಲಿ ಆಯವ್ಯಯ ಪತ್ರವನ್ನು ಏನು 1992–93ನೇ ಸಾಲಿಗೆ ಮಂಡನೆ ಮಾಡಿದ್ದೆವೋ ಅದರ ಮೇಲೆ ಚರ್ಚೆ ಪ್ರಾರಂಭವಾಗಿದೆ. ಇದರ ಬಗ್ಗೆ ಮಾನ್ಯ ಇದಿನಬ್ಬನವರು ಮಾತನಾಡುತ್ತಿದ್ದಾರೆ ಎಂದು ನನಗೆ ಗೊತ್ತಾಯಿತು. ಕನ್‌ವೆನ್‌ಷನ್ ಪ್ರಕಾರ ಯಾವಾಗಲೂ ಆಯವ್ಯಯ ಪತ್ರದ ಮೇಲಿನ ಚರ್ಚೆಯನ್ನು ವಿರೋಧಪಕ್ಷದ ನಾಯಕರು ಮಾಡತಕ್ಕಂಥ ಒಂದು ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ನಾವೂ ಅಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ಇದನ್ನು ಅವರು ಕೂಡ ತಿಳಿದುಕೊಳ್ಳಬೇಕಾಗಿತ್ತು. ಆಯವ್ಯಯ ಬಹಳ ಮುಖ್ಯವಾದುದು. ಈ ಲೀಕೇಜ್ ವಿಚಾರ ಹೊಸದೇನು ಅಲ್ಲ, ಪಾರ್ಲಿಮೆಂಟಿನಲ್ಲೆಲ್ಲಾ ಆಗಿದೆ. ಅದರ ಪ್ರಮುಖ್ಯತೆಯನ್ನು ಅರಿತು ಆಯವ್ಯಯದ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬಹುದಿತ್ತು. ಅದನ್ನು ಬಿಟ್ಟು ಅದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡದೆ ಲೀಕೇಜ್ ಆಗಿದೆ ಎಂದು ಹೇಳುವಂಥದ್ದು ಸರಿಯಲ್ಲ, ನನ್ನ ಪ್ರಕಾರ ಲೀಕೇಜ್ ಆಗಿಲ್ಲ, ಅದನ್ನು ಪದೇ ಪದೇ ಹೇಳುತ್ತಿದ್ದೇನೆ. ಅವರು ಚರ್ಚೆ ಪ್ರಾರಂಭ ಮಾಡುವುದನ್ನು ಬಿಟ್ಟು, ವಿಷಯವನ್ನು ಏನೂ ಸದನಕ್ಕೆ ಹೇಳದೆ, ಪತ್ರಿಕೆಗೆ ಹೇಳತಕ್ಕಂಥದ್ದು ಮುಖ್ಯ ಎಂದು ವಿರೋಧ ಪಕ್ಷದ ಮಿತ್ರರು ತೀರ್ಮಾನ ಮಾಡಿದ್ದಾರೆ. ನನಗೆ ಅನಿಸುತ್ತದೆ, ಅವರು ಈ ಸದನದ ವೇದಿಕೆಯನ್ನು ಯಾವ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಬಹುದಾಗಿತ್ತು, ಅದನ್ನು ಮಾಡಿಕೊಳ್ಳುವುದಕ್ಕೆ ಸರಿಯಾಗಿ ವಿಚಾರ ಮಾಡಲಿಲ್ಲ, ಈ ವಿಚಾರವನ್ನು ನಾನು ಅಷ್ಟಕ್ಕೆ ಬಿಡುತ್ತೇನೆ. ಈ ಸಂದರ್ಭದಲ್ಲಿ ಅವರು ಆಯವ್ಯಯದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಅವರೇ ಚರ್ಚೆಯನ್ನು ಪ್ರಾರಂಭಮಾಡಿ ಹೆಚ್ಚಿನ ವೇಳೆಯನ್ನು ತೆಗೆದುಕೊಂಡು ಅಂಕಿಸಂಶಗಳನ್ನು ಕೊಡುವ ಮೂಲಕ ಅವರ ಸರ್ಕಾರ ಇದ್ದಾಗ ಏನೇನು ಮಾಡಿದೆ, ನಮ್ಮ ಸರ್ಕಾರ ಇದ್ದಾಗ ನಾವು ಏನೇನು ಮಾಡಿದ್ದೇವೆಂದು ತಿಳಿಸಬೇಕಾಗಿತ್ತು. ಕಳೆದ ಒಂದೆರಡು ವರ್ಷಗಳಲ್ಲಿ ನಾವು ಬಜೆಟ್‌ನಲ್ಲಿ ಇಟ್ಟರ್ತಕ್ಕಂಥ ವಿಚಾರ ಏನೇನು, ಯಾವ ಯಾವ ರೈತ ಸಮುದಾಯಕ್ಕೆ ಏನು ಮಾಡಿದ್ದೇವೆ, ಕೂಲಿ ಮಾಡತಕ್ಕಂಥವರಿಗೆ ಏನು ಕಾರ್ಯಕ್ರಮ ಮಾಡಿದ್ದೇವೆ, ನೀರಾವರಿ ಬಗ್ಗೆ, ವಿದ್ಯುಚ್ಛಕ್ತಿ ಉತ್ಪಾದನೆ ಏನು ಮಾಡಿದ್ದೇವೆ ಇತ್ಯಾದಿ, ಇತ್ಯಾದಿ ವಿಚಾರಗಳನ್ನು ತೆಗೆದುಕೊಂಡು ಹೇಳಬಹುದಾಗಿತ್ತು, ಮೊನ್ನೆ ಅವರು ಮೋಷನ್ ಮೂವ್ ಮಾಡಿ ಮಾತನಾಡತಕ್ಕಂಥ ಕಾಲದಲ್ಲಿ ಅವರು ಎಷ್ಟೇ ಟೀಕೆ ಮಾಡಿದರೂ

ಆವರು ಮಾಡತಕ್ಕ ಟೀಕೆ, ಹೆಲ್ತ್ ಕ್ರಿಟಿಸಿಸಮ್ ಆಗಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆಂದು ಹೇಳಿದೆ. ಸರ್ಕಾರ ಅದನ್ನು ಸರಿಪಡಿಸಲಿಕ್ಕೆ ಸಿದ್ಧ ಇದೆ ಎನ್ನುವ ಮಾತನ್ನು ಹೇಳಿದೆ. ಬಜೆಟ್ ಭಾಷಣಕ್ಕಿಂತ ಹೆಚ್ಚಾಗಿ ಲೀಕೇಜ್‌ನ್ನೇ ದೊಡ್ಡದಾಗಿ ಮಾಡಿಕೊಂಡು ಅವರು ಹೊರಗೆ ಹೋಗಿ ಇರತಕ್ಕಂಥದ್ದು ಸರಿಯಲ್ಲ ಎಂದು ನನ್ನ ಅನಿಸಿಕೆ, ನಾನು ಅವರನ್ನು ಟೀಕೆ ಮಾಡುತ್ತಾ ಇಲ್ಲ, ಆಯವ್ಯಯ ಪತ್ರ ಅಂದರೆ ಏನು, ಅದರ ಪ್ರಾಮುಖ್ಯತೆ ಅಂದರೆ ಏನು, ಅದರ ಬಗ್ಗೆ ಹೆಚ್ಚಿನ ಗಮನಹರಿಸುವುದು ಒಳ್ಳೆಯದು ಇತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದೂ ಕೂಡ ಜನರಿಗೆ ಗೊತ್ತಾಗಲಿ ಎಂದು ಈ ಸದನದಲ್ಲಿ ಮಾತನಾಡುತ್ತಿದ್ದೇನೆ. ಅವರ ಬಗ್ಗೆ ಟೀಕೆ ಮಾಡಬೇಕೆಂದು ಮಾತನಾಡುತ್ತಿಲ್ಲ, ದೇಶದ ಜನರಿಗೆ ಕೂಡ ಸ್ವಲ್ಪ ಗೊತ್ತಾಗಲಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಸನ್ಮಾನ್ಯ ಸದಸ್ಯರಾದ ಇದಿನಬ್ಬರವರು ಮಾತನಾಡಿದ್ದಾರೆ. ನಾಲ್ಕೈದು ಜನ ಸದಸ್ಯರು ಕೂಡ ಮಾತನಾಡಿದ್ದಾರೆ. ಆಯವ್ಯಯ ಪತ್ರದ ಮೇಲೆ ಅವರಿಗೂ ಕೂಡ ಮಾತನಾಡುವ ಹಕ್ಕಿದೆ, ಆದ್ದರಿಂದ ಅವರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಈಗಲೂ ನಾನು ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಬೇರೆ ಪಕ್ಷದ ನಾಯಕರೂ, ಮಾನ್ಯ ಸದಸ್ಯರು ಯಾರ್ಯಾರು ಬಹಿಷ್ಕಾರ ಹಾಕಿ ಹೊರಗೆ ಹೋಗಿದ್ದಾರೆ ಅವರೆಲ್ಲರೂ ಸರಿಯಾಗಿ ಅರ್ಥ ಮಾಡಿಕೊಂಡು ಆಯವ್ಯಯ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು. ನಾವು ಇಟ್ಟಿರತಕ್ಕಂಥ ಬಜೆಟ್ ಏನಿದೆ ಇದರ ಬಗ್ಗೆ ಅವರು ಬಂದು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿ, ಬೆಳಕು ಚೆಲ್ಲತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರು ತಮ್ಮ ಬಹಿಷ್ಕಾರವನ್ನು ಹಿಂದಕ್ಕೆ ತೆಗೆದುಕೊಂಡು ಇಲ್ಲಿಗೆ ಬಂದು ಚರ್ಚೆಯಲ್ಲಿ ಪಾಲ್ಗೊಳ್ಳಬೇಕು. ಇವತ್ತು ಅವರು ಅನ್ಯಾಯ ಆಗಿದೆ ಎಂದು ಏನು ಕೂಗುತ್ತಿದ್ದಾರೆ, ಅದು ಹೇಳುವುದರ ಬದಲು, ರಾಜ್ಯದಲ್ಲಿ ಇರತಕ್ಕಂಥ ಜನರ ಬಗ್ಗೆ ಸಮಸ್ಯೆ ಬಗ್ಗೆ ಇಲ್ಲಿಗೆ ಬಂದು ಬೆಳಕು ಚೆಲ್ಲತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದರೆ ನಿಜವಾಗಿಯೂ ಜನರು ಅವರನ್ನು ಒಪ್ಪಿಯಾರು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ, ಮಾನ್ಯ ಡಿ.ಬಿ. ಚಂದ್ರೇಗೌಡರು ಮತ್ತು ಅವರ ನಾಯಕತ್ವದಲ್ಲಿ ಯಾರ್ಯಾರು ಬಹಿಷ್ಕಾರ ಹಾಕಿ ಹೊರಗೆ ಹೋಗಿದ್ದಾರೆ ಅವರೆಲ್ಲರೂ ಬಹಿಷ್ಕಾರವನ್ನು ಹಿಂದಕ್ಕೆ ತೆಗೆದುಕೊಂಡು ಈ ಸದನದಲ್ಲಿ ಬಂದು ಕುಳಿತು ಶಾಂತಿಯುತವಾಗಿ ಚರ್ಚೆ ಮಾಡಲಿ. ಯಾವ ರೀತಿಯಾಗಿ ಈ ಆಯವ್ಯಯ ಪತ್ರದ ಬಗ್ಗೆ ಬೆಳಕನ್ನು ಚೆಲ್ಲಬೇಕು ಅದನ್ನು ಮಾಡಲಿ, ಒಂದು ವೇಳೆ ಬಹಿಷ್ಕಾರ ಹಾಕಿರತಕ್ಕಂಥ ವಿಚಾರ ಬಜೆಟ್‌ಗಿಂತ ಬಹಳ ಪ್ರಾಮುಖ್ಯವಾದಂಥದ್ದು ಎಂದು ಅವರಿಗೇನಾದರೂ ಇದ್ದರೆ ಆಲ್ ರೈಟ್ ಅದರ ಬಗ್ಗೆಯೂ ಕೂಡ ಕುಳಿತುಕೊಂಡು ಮಾತನಾಡೋಣ. ನನಗೆ ಇಷ್ಟು ಬಿಟ್ಟು ಬೇರೇನು ಅರ್ಥವಾಗುತ್ತಿಲ್ಲ, ನಾನು ಇಷ್ಟು ಮಾತ್ರ ಹೇಳಬಲ್ಲೆ, ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅವರು ದಯಮಾಡಿ ಸದನಕ್ಕೆ ಬರಬೇಕೆಂದು ನಮ್ಮ ಆಸೆ. ಸದನಕ್ಕೆ ಆಗದೇ ಇದ್ದರೆ ಇಲ್ಲಿ ಬಂದು ಬಹಿಷ್ಕಾರ ಹಾಕುವ ಅಭಿಪ್ರಾಯವನ್ನು ಅಮೇನಾದರೂ ಇಟ್ಟುಕೊಳ್ಳುವ ಹಾಗಿದ್ದರೆ ತಮ್ಮ ಕೊಠಡಿಗೆ ಬರಲಿ. ಇಲ್ಲಿ ಕುಳಿತುಕೊಂಡು ಮಾತನಾಡುವುದಕ್ಕೆ ಒಂದು ಒಳ್ಳೆಯ ವಾತಾವರಣವನ್ನು ರೂಪಿಸಲು ಯಾವರೀತಿ ಹೋಗಬೇಕು ಎನ್ನುವುದಕ್ಕೆ ನಾವು ಇಲ್ಲಿ ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಆಳುವಾಗ, ನೀವು ಆಳುವಾಗ ಆ ಸಂದರ್ಭದಲ್ಲಿ ಈ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದ್ದರಿಂದ ಮಾತುಕತೆ ಮುಖಾಂತರ ದಾರಿ ಹುಡುವುದಕ್ಕೆ, ಸರ್ಕಾರ ಸಿದ್ಧವಿದೆ. ತಮ್ಮ ಮೂಲಕ ಇಷ್ಟು ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಈಗ ಸಲಹೆ ಕೊಟ್ಟಿದ್ದಾರೆ, ಅದನ್ನು ನಾನು ಸಮರ್ಥಿಸುತ್ತೇನೆ. ಏಕೆಂದರೆ, ವಿರೋಧಪಕ್ಷ ಇಲ್ಲದೆ ಸದನ ನಡೆಸುವುದು ಅಷ್ಟು ಸಾಧು ಅಲ್ಲ. ನಾಳೆ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ. ಅವರು ಒಂದು ತೀರ್ಮಾನಕ್ಕೆ ಬಂದು ಚರ್ಚೆಯಲ್ಲಿ ಪಾಲ್ಗೊಳ್ಳುವಂತಾಗಲು ನಾಳೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಒಂದು ತೀರ್ಮಾನಕ್ಕೆ ಬರಬಹುದು.

ಉಪಾಧ್ಯಕ್ಷರು:– ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನ್ನು ಸೋಮವಾರ ಇಟ್ಟುಕೊಳ್ಳಬೇಕೆಂದು ಇದ್ದೇವೆ.

ಶ್ರೀ ಬಿ.ಕೆ. ಶಿವಕುಮಾರ್ :- ನಾಳೆಯವರೆಗೆ ಚರ್ಚೆಸಕ್ಕೆಗಬಹುದು..ಬಜಟ್..ದಿನಾಂಕ.....

ಶ್ರೀ ಟಿ.ಡಿ. ಜಯಚಂದ್ರ :- ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಸ್ವಾಗತಿಸುವುದರ ಜೊತೆಗೆ ಅವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಬಹುಶಃ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಪ್ರಕಾರ ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಅದನ್ನು ಇನಿಶಿಯೇಟ್ ಮಾಡುವುದಕ್ಕೆ ವಿರೋಧ ಪಕ್ಷದವರಿಗೆ ಅವಕಾಶ ಕೊಡದೆ ಆಡಳಿತ ಪಕ್ಷದವರು ಮಾಡಿದ್ದಾರೆ. ಇದರಿಂದ ವಿರೋಧಪಕ್ಷದವರಿಗೆ ಇದ್ದ ಅವಕಾಶವನ್ನು ಕಿತ್ತುಕೊಂಡಿದ್ದಾರೆ ಎನ್ನತಕ್ಕಂಥ ಗುಮಾನಿ ಏನು ಎದ್ದಿದೆ, ಈ ಹಿನ್ನಲೆಯಲ್ಲಿ ಬಹಿಷ್ಕಾರ ಹಾಕಿದ್ದಾರೆ ಎನ್ನುವ ಭಾವನೆಗೆ ಇದು ಕಾರಣವಾಗಿದೆ ಎಂದು ನನ್ನ ಅಭಿಪ್ರಾಯ ಸರ್ಕಾರದವರು ಘೋರವಾದ ಅಪರಾಧ ಮಾಡಿದ್ದಾರೆ ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದಾಗ, ಸರ್ಕಾರದಿಂದ ಯಾವುದೇ ರೀತಿಯ ತಪ್ಪು ಆಗಿಲ್ಲವೆಂದು ಪ್ರಚುರ ಪಡಿಸಬೇಕಾಗುತ್ತದೆ. ಇದು ಬಹಳ ಅವಶ್ಯಕವಾಗಿದೆ. ಈ ದಿಸೆಯಲ್ಲಿ ಅವರಿಗೆ ಏನು ಆಹ್ವಾನ ಕೊಡಲಾಗಿದೆ, ಅದರಂತೆ ಅವರನ್ನು ತಮ್ಮ ಕಛೇರಿಯಲ್ಲಿ ಇವತ್ತೇ ಕರೆಸಿ ಯಾವುದಕ್ಕೋಸ್ಕರ, ಯಾವ ದೃಷ್ಟಿಯಿಂದ ಸದನಕ್ಕೆ ಬಹಿಷ್ಕಾರ ಹಾಕಿದ್ದಾರೆ ಎಂಬುದನ್ನು ತಿಳಿದು ಸದನದಲ್ಲಿ ಗೊತ್ತುಪಡಿಸಿದರೆ ಒಳ್ಳೆಯದಾಗುತ್ತದೆ ಎನ್ನುವ ಸಲಹೆಯನ್ನು ಕೊಡುವುದರ ಜೊತೆಗೆ ಈಗ ಎಲ್ಲಾ ಸದಸ್ಯರೂ ಇದ್ದಾರೆ. ಇಂತಹ ಸಂದರ್ಭದಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡಿ ಇವತ್ತೇ ಇತ್ಯರ್ಥ ಮಾಡುವುದು ಸೂಕ್ತವೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ :- ನಾನು ಬೇರೆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ನಾನು ತಮ್ಮ ಮುಖಾಂತರ ಆಹ್ವಾನ ಕೊಟ್ಟಮೇಲೆ, ಬೇರೆ ವಿಷಯ ಪ್ರಸ್ತಾಪ ಮಾಡಬಾರದು. ಈಗ ಕರೆಸತಕ್ಕಂಥ ಸಲಹೆ ಇದ್ದರೆ, ಕರೆಸತಕ್ಕಂಥ ವಿಚಾರ ತಾವು ಮಾಡಬಹುದು. ತಮ್ಮ ಸಲಹೆಯನ್ನು ನಾವು ಒಪ್ಪುತ್ತೇವೆ. ೩೦,೬೪

ಉಪಾಧ್ಯಕ್ಷಣಿಯವರು :- ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಸೋಮವಾರಕ್ಕೆ ಪೋಸ್ಟ್ ಫೋನ್ ಆಗಿದೆ.

ಒಬ್ಬರು ಮಾನ್ಯ ಸದಸ್ಯರು :- ಸಭೆಯನ್ನು ಅರ್ಧಗಂಟೆ ಮುಂದೂಡಿ.

ಶ್ರೀ ಎಸ್. ಬಂಗಾರಪ್ಪ :- ಈಗ ಅರ್ಧಗಂಟೆ ಸಭೆಯನ್ನು ಮುಂದೆ ಹಾಕುವ ಅವಕಾಶ ಬರಲಾರದು. ಸಭೆಯೊಳಗೆ ಆಗತಕ್ಕಂಥ ಕೆಲಸ ಕೂಡ ಜೊತೆಜೊತೆಯಾಗಿ ಮಾಡಿಕೊಳ್ಳೋಣ. ಆನಂತರ ಕೂಡ ಮುಂದೂಡಬೇಕಾಗಿಲ್ಲ. ಅಂತೂ ಚರ್ಚೆ ಪ್ರಾರಂಭವಾಗಿದೆ. ತಾವು ಅವರಿಗೆ ಹೇಳಿಕಳಿಸಬಹುದು. ನಾವೆಲ್ಲರೂ ತಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಭಾನಾಯಕರು ಹೇಳಿದ ಪ್ರಕಾರ, ಈ ಬಜೆಟ್ ಮೇಲೆ ಮುಕ್ತ ಚರ್ಚೆಯಾಗಬೇಕೆಂಬುದೇ ನಮ್ಮ ಉದ್ದೇಶ. ವಿರೋಧಪಕ್ಷದವರನ್ನು ಹೊರಗಡೆ ಇಟ್ಟು ಚರ್ಚೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ, ನಿನ್ನೆಯೂ ಕೂಡ ಏಕಸ್ಮಾತ್ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಸದನದಲ್ಲಿ ಇದ್ದರು, ಇಲ್ಲಿ ಬಜೆಟ್ ಮೇಲೆ ವಿರೋಧಪಕ್ಷದ ನಾಯಕರು ಭಾಷಣ ಮಾಡುತ್ತಾರೆಂದೂ ತಿಳಿದಿದ್ದರು. ಆದರೆ, ಇಲ್ಲಿ ವಿರೋಧಪಕ್ಷದವರು ಸದನಕ್ಕೆ ಬರಲಿಲ್ಲ, ಕೊನೆಗೆ ನಮ್ಮ ಆಡಳಿತ ಪಕ್ಷದ ಸದಸ್ಯರೇ ಮಾತನಾಡುವಂಥ ಪರಿಸ್ಥಿತಿ ಬಂತು. ಉದ್ದೇಶಪೂರ್ವಕವಾಗಿ, ಟ್ರಜರಿಬೆಂಚ್‌ನವರು ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿಲ್ಲ, ಅವರ ಕಡೆಯಿಂದಲೇ ಪ್ರಾರಂಭಿಸಬೇಕಾಗಿತ್ತು. ಆದರೆ, ಆ ಕಡೆಯವರು ಸದನದಲ್ಲಿ ಇರಲಿಲ್ಲ, ಅವರಿಂದ ಪ್ರಾರಂಭಿಸಬಾರದು ಎಂಬ ಉದ್ದೇಶ ನಮ್ಮದಲ್ಲ, ಏನೋ ಸ್ವಲ್ಪ ಆಧಾರರಹಿತ ಭಿನ್ನಾಭಿಪ್ರಾಯ ಬಂದಿರುವುದರಿಂದ ಅವರನ್ನು ಕರೆಸಿ, ಮುಖ್ಯಮಂತ್ರಿಗಳು ಹಾಗೂ ನಾವೆಲ್ಲರೂ ಬರುತ್ತೇವೆ, ಚರ್ಚೆ ಮಾಡಿ ತೀರ್ಮಾನ ಮಾಡಿಕೊಳ್ಳೋಣ. ಪ್ರಜಾಪ್ರಭುತ್ವದ ಸಂಸದೀಯ ಪರಂಪರೆ ಪ್ರಕಾರ ವಿರೋಧ ಪಕ್ಷ ಮತ್ತು ಟ್ರಜರಿ ಬೆಂಚ್ ಎರಡು ಇದ್ದಾಗ ಮಾತ್ರ ಈ ಸಭೆಗೆ ಶೋಭೆ ಬರುತ್ತದೆ. ಹಿಂದೆ ನಾವು ವಿರೋಧಪಕ್ಷದಲ್ಲಿದ್ದಾಗ ಕೂಡ ಏನಾದರೂ ಭಿನ್ನಾಭಿಪ್ರಾಯ ಬಂದಾಗ ಬಗೆ ಹರಿಸಿದ್ದಾರೆ, ಬಗೆ ಹರಿಸುವುದಕ್ಕಾಗುವುದಿಲ್ಲ ಎನ್ನುವ ಪ್ರಶ್ನೆಯೇ ಇಲ್ಲ, ಮತ್ತು ಬಜೆಟ್ ಮೇಲಿನ ಚರ್ಚೆಯನ್ನು ನಾವು ಪ್ರಾರಂಭ ಮಾಡಬೇಕಾಗಿತ್ತು, ಅವರೇ ಪ್ರಾರಂಭ ಮಾಡಿದ್ದಾರೆಂಬ ಬಗ್ಗೆ ಆಗಲೀ ಅಥವಾ ಬೇರೆ ಯಾವುದೇ ವಿಚಾರವಾಗಲಿ, ಕುಳಿತು ಚರ್ಚೆ

ಮಾಡೋಣ. ಅದಕ್ಕಾಗಿ ತಾವು ಈಗ ಸದನವನ್ನು ಮುಂದೂಡಿ, ಅವರನ್ನು ಮಾತುಕತೆಗೆ ಆಹ್ವಾನಿಸಿ, ನಮ್ಮನ್ನೂ ಕರೆಯಿರಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು :- ಈಗ ಸಭೆಯನ್ನು ಮುಂದೂಡಲಾಗಿದೆ, ಮತ್ತೆ ಮಧ್ಯಾಹ್ನ ಎರಡೂವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(The House re-assembled at 3.50 p.m.)

(Smt. Nagamma Keshavamurthy, Hon'ble Deputy Speaker in the Chair)

+ Sri Qumarul Islam : Madam Deputy Speaker, On 3rd March, i was present when the Budget was to be presented at 2' O Clock. But there was a leakage in the Budget. We had a Dharna as a protest and on that day, I was also a party and we pressed for boycotting and all that. Then subsequently, on 4th and 5th, as I was busy in the Court in view of some Election Petition, I was not present here. But through the Press I came to know that the Opposition Leader Sri D.B. Chandregowda, pressed for a Resolution that the Chief Minister has to resign on the issue of the leakage of Budget. I am not a party for that resolution and I am not a signatory for that resolution also. Through the Press, I came to know that the offer was given to the Opposition that if they do not press for the Resolution, the Hon'ble Chief Minister was ready to conduct an enquiry on behalf of the Government or by the House Committee as desired by the Hon'ble Speaker. I came to know through the Press that even though the Opposition Leader pressed for the resolution, it was defeated. Today, we are seeing very thin strength in the House. We are in democracy and this House is representing the entire four crore people of the State of Karnataka and the people expect that there should be a proper debate on the Budget. So, my feeling is, even now, I press or I demand the Government that there should be an enquiry on this leakage of Budget and how this leakage has happened? At the same time, I request through you that the Hon'ble Chief Minister and the Government should offer or call the Opposition Leader to the Chambe of the Speaker and discuss this issue, because once the offer is given and the resolution is passed, the chapter ends. I want to begin another chapter by demanding that either there should be an enquiry by the House Committee or by the Hon'ble Speaker regarding this leakage and at the same time, I also request the Hon'ble Speaker to call the Hon'bler Chief Minister and the Opposition Leaders so that there should be a debate on the budget in the interest of democracy. With these few words, I conclude my speech.

+ ಶ್ರೀ ಎಂ. ವೀರಪ್ಪಮೊಯಿಲಿ :- ಮಾನ್ಯ ಉಪಾಧ್ಯಕ್ಷೆಯವರೆ, ಇವತ್ತು ಬೆಳಿಗ್ಗೆ ನಮ್ಮ ವಿಧಾನ ಸಭೆ ಸೇರಿದಾಗ ಪ್ರಶ್ನೋತ್ತರ ವೇಳೆ ಎನ್ನುವುದು ಯಾವುದೇ ಒಂದು ಸದನದ ಅತ್ಯಂತ ಪ್ರಾಮುಖ್ಯವಾದ ಅಂಗ ಮತ್ತು ಕರ್ತವ್ಯವಾದ್ದರಿಂದ ಈ ಪ್ರಶ್ನೋತ್ತರ ವೇಳೆಯನ್ನು ವಿಸರ್ಜಿಸುವುದು ಬೇಡ, ಇದು ಹಾಗೆಯೇ ನಡೆದುಕೊಂಡು ಹೋಗಲಿ ಎಂದು ನಾವು ನಡೆಸಿದ್ದೇವೆ ಆದರೆ ಆಯವ್ಯಯದಮೇಲೆ ಚರ್ಚೆ ಏನಿದೆ ಅದು ಮಾನ್ಯ ವಿರೋಧಪಕ್ಷದವರು ಇರುವಾಗಲೇ ಆಗಬೇಕು. ಅವರು ಈ ಚರ್ಚೆಯಲ್ಲಿ ಸಕ್ರೀಯವಾಗಿ ಭಾಗವಹಿಸಿದರೆ ಮಾತ್ರ ಚರ್ಚೆ ಅರ್ಥಪೂರ್ಣವಾಗುತ್ತದೆಂದು ಮಾನ್ಯ ಸಭಾ ನಾಯಕರು, ಮಾನ್ಯ ಮುಖ್ಯಮಂತ್ರಿಗಳು, ಹಾಗೂ ನಾನೂ ಕೂಡ ಪ್ರಸ್ತಾಪ

ಮಾಡಿದೆವು. ಈ ಸದನದಲ್ಲಿ ಕೂಡ . ವಿಚಾರ ಪ್ರಸ್ತಾಪಕ್ಕೆ ಬಂತು. . ಆದುದರಿಂದ ಸಭೆಯನ್ನು ಸ್ವಲ್ಪ ಹೊತ್ತು ಮುಂದೂಡಿ ಮಾನ್ಯ . ವಿರೋಧಪಕ್ಷದ ನಾಯಕರು ಮತ್ತು ಉಳಿದ ಬೇರೆ ಬೇರೆ ಪಕ್ಷಗಳ ಫ್ಲೋರ್ ಲೀಡರ್ಸ್ ಯಾರಿದಾರೆ ಅವರನ್ನೆಲ್ಲಾ ತಾವು ಕರೆದು ನಾವೂ ಕೂಡ ಸಹಕರಿಸುತ್ತೇವೆ, ನಮ್ಮ ಉದ್ದೇಶ ಇಲ್ಲಿ ಸರಿಯಾದ ರೀತಿಯಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ಚರ್ಚೆ ಆದಾಗ ಸರ್ಕಾರಕ್ಕೂ ಆದರಿಂದ ಪ್ರಯೋಜನ ಆಗುತ್ತದೆ, ಈ ರಾಜ್ಯದ ಜನತೆಗೂ ಇದರಿಂದ . ಪ್ರಯೋಜನವಾಗುತ್ತದೆಂಬ ಉದ್ದೇಶದಿಂದ ತಾವು ಬೆಳಿಗ್ಗೆ ಪ್ರಶ್ನೋತ್ತರ ಕಾಲದ ನಂತರ ಅವರೆಲ್ಲರನ್ನೂ ಮಾತುಕತೆಗೆ ಕರೆಯತಕ್ಕ ಪ್ರಯತ್ನವನ್ನು ಮಾಡಿದಿರಿ. ನಾವೂ, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಕಾಯುತ್ತಿದ್ದೆವು. ನಮ್ಮ ವಿರೋಧಪಕ್ಷದ ನಾಯಕರು, ಆದೇರೀತಿ ಉಳಿದ ಬೇರೆ ಬೇರೆ ಪಕ್ಷಗಳ ನಾಯಕರು ಮಾತುಕತೆಗೆ ಬರುತ್ತಾರೆಂದು ಅಂದುಕೊಂಡಿದ್ದೇವು. ಆದರೆ ಮಾನ್ಯ ಕಮರುಲ್ ಇಸ್ಲಾಂರವರು ಒಬ್ಬರು ಮಾತ್ರ ಬಂದರು. ಉಳಿದ ವಿರೋಧಪಕ್ಷದ ನಾಯಕರು ಬಾರದೇ ಇದ್ದುದರಿಂದ ಮಾತುಕತೆಯನ್ನು ನಡೆಸಲು ಸಾಧ್ಯವಾಗಲಿಲ್ಲ, ಇಲ್ಲಿ ಪ್ರಶ್ನೆ ಏನೆಂದರೆ ಈ ಶಾಸಕಾಂಗ ಏನಿದೆ ಇದು ಬಹಳ ಪ್ರಾಮುಖ್ಯವಾದುದು. ಅವರು ಹೇಳಿದ ಪ್ರಕಾರ 4 ಕೋಟಿ ಜನತೆ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿದೆ. ಎಲ್ಲಾ ಸದಸ್ಯರೂ ಕೂಡ ಅಧಿಕಾರವನ್ನು ಜನತೆಯಿಂದ ಪಡೆದು ಇವತ್ತು ನಾವು ಶಾಸಕರು ಎಂದು ಹೇಳಿಕೊಳ್ಳುತ್ತಿದ್ದೇವೆ. ಅಂದರೆ ಈ ಶಾಸನ ಸಭೆಗೆ ನಮ್ಮಿಂದ ಶಕ್ತಿ, ಜನತೆಯಿಂದ ನಮಗೆ ಶಕ್ತಿ ಬರುತ್ತದೆ. ಅದು ಲೋಕಸಭೆ ಇರಬಹುದು, ಅಥವಾ ಬೇರೆ ಬೇರೆ ರಾಜ್ಯಗಳ ವಿಧಾನ ಸಭೆಗಳು ಇರಬಹುದು. ನಾವು ಶಾಸಕರಾದವರು, ಮಂತ್ರಿಗಳಾದವರು ಅಥವಾ ಸರ್ಕಾರದಲ್ಲಿರತಕ್ಕ ಎಲ್ಲಾ ಶಕ್ತಿಕೂಡ ಇಲ್ಲಿಂದಲೇ ಹೊರಹೊಮ್ಮಬೇಕಾಗುತ್ತದೆ. ನಾವು ಈ ಸದನಕ್ಕೆ . ಜವಾಬ್ದಾರರಾಗಿರುತ್ತೇವೆ. ಈ ಸದನ ಇಡೀ ಜನತೆಗೆ ಜವಾಬ್ದಾರಿಯಾಗಿರುತ್ತದೆ. ಆದರೆ ಇದರಲ್ಲಿ ಯಾವುದೇ ಒಂದು ಕೊಂಡಿಯನ್ನಾಗಲಿ ನಾವು ಶಿಥಿಲಗೊಳಿಸುವುದಕ್ಕೆ ಹೋದರೆ ಜನತೆ ನಮಗೆ . ಕೊಟ್ಟಿರತಕ್ಕ ಜವಾಬ್ದಾರಿಗೆ ನಾವು ಚ್ಯುತಿಯನ್ನು ಮಾಡಿದಂತಾಗುತ್ತದೆಂಬುದನ್ನು . ನಾವೂ ಮರೆಯುವುದಕ್ಕಾಗುವುದಿಲ್ಲ, ನೀವೂ ಮರೆಯುವುದಕ್ಕಾಗುವುದಿಲ್ಲ, ಆದೇರೀತಿ ಯಾರೂ ಕೂಡ ಇದನ್ನು ಮರೆಯುವಂತಿಲ್ಲ, ಈ ಕೊಂಡಿಯನ್ನು ಶಿಥಿಲಗೊಳಿಸುವುದು ಬೇಡ. ಈ ಕೊಂಡಿಯನ್ನು ಶಿಥಿಲಗೊಳಿಸಿದರೆ . ನಾವೆಲ್ಲರೂ ಕಳೆದ 4 ದಶಕಗಳಕಾಲದಿಂದ ನಂಬಿಕೊಂಡು ಬಂದಿರತಕ್ಕ ವಿಶ್ವಾಸವನ್ನೇ ಶಿಥಿಲಗೊಳಿಸಿದಂತಾಗುತ್ತದೆ. ಯಾವಾಗಲೂ ಪ್ರಜಾಪ್ರಭುತ್ವದ ತಳಹದಿಯಮೇಲೆ ನಾವು ಇಲ್ಲಿ ಕೆಲವು ನಿಯಮಗಳನ್ನು ಮಾಡಿಕೊಂಡು ನಾವು ಯಾವರೀತಿ ನಡೆದುಕೊಳ್ಳಬೇಕು, ಯಾವರೀತಿ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಅನೇಕ ವರ್ಷಗಳ ಕಾಲದ ಅನುಭವದ ಆಧಾರದಮೇಲೆ, . ಪರಂಪರೆಗಳ ಮೇಲೆ ರೂಪಿಸಿಕೊಂಡಿದ್ದೇವೆ. ನಾವು ವಿಧಿವಿಧಾನಗಳನ್ನು ನೆಚ್ಚಿಕೊಂಡಿರುತ್ತೇವೆ. ಆ ವ್ಯವಸ್ಥೆ . ಸರಿಯಾಗಿ ನಡೆಯದೆ ಹೋದರೆ ಅವ್ಯವಸ್ಥೆ ಆಗುತ್ತದೆ, ಅರಾಜಕತೆ ಆಗುತ್ತದೆ. ವ್ಯವಸ್ಥೆಯ ಪ್ಯಾರಾಮೀಟರ್‌ನಲ್ಲಿ ನಾವು ಕೆಲಸಮಾಡಿದರೆ ಮಾತ್ರ ನಾವು ವಿಧಿ ವಿದಾನಗಳನ್ನು, ವ್ಯವಸ್ಥೆಗಳನ್ನು ನೆಚ್ಚಿಕೊಂಡ ಪ್ರಜಾಪ್ರಭುತ್ವದ ತತ್ವಗಳನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆ ತತ್ವಗಳನ್ನು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ. ಡೆಮಾಕ್ರೆಟಿಕ್ ಫೈಬರ್ ಎಂದು ನಾವು ಏನು ಹೇಳುತ್ತೇವೆ ಅದರಲ್ಲಿ ಶಕ್ತಿ ಕುಂದಿದೆ ಎಂದು ತಿಳಿದುಕೊಳ್ಳತಕ್ಕದ್ದು, ಅಥವಾ ಶಕ್ತಿ ಇಲ್ಲವೆಂದು ತಿಳಿದುಕೊಳ್ಳತಕ್ಕದ್ದು ಈ ಪ್ರಜಾಪ್ರಭುತ್ವದ . ವ್ಯವಸ್ಥೆಗೇ ಅಪಚಾರ ಮಾಡಿದಂತಾಗುತ್ತದೆ. ಏಕೆಂದರೆ ಈ ಸದನಕ್ಕೆ ಪರಮೋಚ್ಚ ಅಧಿಕಾರವಿದೆ. ಯಾವುದೇ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ, ಯಾವುದೇ ಗ್ರಿವೆನ್ಸಸ್ ಅಥವಾ ನಮ್ಮಲ್ಲಿ ವ್ಯಥೆ, ದೂರು ಏನಾದರೂ ಇದ್ದರೆ ಅದಕ್ಕೆ ನಮಗೆ ಪರಿಹಾರ ಬೇಕಾದರೆ, ಪ್ರಜಾಪ್ರಭುತ್ವದ ವಿಧಿ ವಿಧಾನಗಳ . ಪ್ರಕಾರ ಮುಕ್ತಿ ಸಿಕ್ಕಬೇಕಾದರೆ ಆ ಮುಕ್ತಿಯ ಸ್ಥಾನ ಕೂಡ ಇಲ್ಲಿದೆ. This is the House which can give us the salvation. ಕೊನೆಯ ಪರಿಹಾರವಾಗಿಯೂ ಕೂಡ ಇದೇ ಸದನಕ್ಕೆ ಅಂಥ ಶಕ್ತಿಯನ್ನು . ಕೊಡಲಿಕ್ಕೂ ಸಾಕು. ಆ ಅಭಿಪ್ರಾಯ, ಆ ನಂಬಿಕೆ, ಆ ವಿಶ್ವಾಸಕ್ಕೆ . ಕರ್ನಾಟಕ ವಿಧಾನಸಭೆಯಲ್ಲಿ ಚ್ಯುತಿ ಬರಬಾರದು. ವಿರೋಧಪಕ್ಷದ ನಾಯಕರಿಗೆ ನನ್ನ ವಿನಂತಿ ಏನೆಂದರೆ ಸನ್ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ . ಈ ಸದನದ ಮೂಲಕ ಹೇಳುವೆನೆಂದರೆ this democratic fibre which has been strengthened after a process, tests – fitness and so many other, which has been applied to this kind of system, should not be shaken. ಅವರಿಗೂ ವಿಶ್ವಾಸವಿರಬೇಕು, ನಮಗೂ ವಿಶ್ವಾಸವಿರಬೇಕು.

ಆಕಡೆಯವರಿಗೂ ವಿಶ್ವಾಸವಿರಬೇಕು. ಅದನ್ನು ಎಕ್ಸಾಸ್ಟ್ ಮಾಡುವುದಕ್ಕೆ ಇಲ್ಲಿ ಈ ಸದನದಲ್ಲಿ ನಮಗೆ ನ್ಯಾಯ ಸಿಗುವುದಿಲ್ಲವೆಂದು ಹೇಳಿದರೆ, ಅದು ಬರಿ ಸರ್ಕಾರದಿಂದ ಸಿಗುವುದಿಲ್ಲವೆಂದು ಹೇಳಿದರೆ ಆಗುವುದಿಲ್ಲ. ಈ ವ್ಯವಸ್ಥೆಯಿಂದ ನ್ಯಾಯಸಿಗುವುದಿಲ್ಲ. ಈ ವಿಧಾನ ಸಭೆಯ ವ್ಯವಸ್ಥೆಯಲ್ಲಿ ಅದು ನಿವಾರಣೆಯಾಗುವುದಿಲ್ಲ ಎನ್ನುವ ಅರ್ಥ ಮೆಸೇಜ್ ಆ ಸಂದೇಶ ಇವತ್ತು ಸದನದ ಹೊರಗೆ ಹೋಗಬಾರದು. ಅದು ಬರುವಂತೆಯೂ ಮಾಡಬಾರದು. ಬಹಳ ಪ್ರಾಮುಖ್ಯವಾಗಿ ಇವತ್ತು ಅದಕ್ಕೆ ಇರತಕ್ಕಂಥ ವಿಧಿವಿಧಾನಗಳನ್ನು ಉಪಯೋಗ ಮಾಡಿಕೊಂಡು ಜನತೆಯ ಆಶೋತ್ತರಗಳನ್ನು ನಿವಾರಿಸುವಲ್ಲಿ ತಾಂತ್ರಿಕತೆ ಅಡ್ಡಿ ಬರಬಾರದು. ಅದಕ್ಕೆ ಅನೇಕಸಲ ನಾವು ಹೇಳುತ್ತೇವೆ, ಈ ವಿಧಿವಿಧಾನದಲ್ಲಿ ವ್ಯತ್ಯಾಸವಿದ್ದರೂ ಕೂಡ ತಮ್ಮ ಅಧಿಕಾರಕ್ಕೆ ಬಿಟ್ಟುಕೊಡುತ್ತೇವೆಂದು ಅನೇಕ ಬಾರಿ ಹೇಳುತ್ತೇವೆ ಅದನ್ನು ಸಸ್‌ಪೆಂಡ್ ಮಾಡಿ ಇದನ್ನು ಮಾಡಿ ಎಂದು. ಏತಕ್ಕೆಂದರೆ ಈ ವಿಧಿವಿಧಾನದ ವ್ಯವಸ್ಥೆಯ ರಿಜಿಡಿಟಿಯನ್ನೇ ಕೆಲವುಸಾರಿ ನಾವು ಜನತೆಯ ಅಥವಾ ಶಾಸಕರ ಆಶೋತ್ತರಗಳನ್ನು ಈಡೇರಿಸುವುದಕ್ಕೆ It has to bend in favour of the people, in favour of the whole system, for which it is intended to. ಅದನ್ನು ಯಾವಾಗಲೂ ಕೂಡ ಮರೆಯುವುದಕ್ಕಾಗುವುದಿಲ್ಲ. ಅದಕ್ಕೆ ನಾವು ಕೂಡ ತಲೆ ಬಾಗಬೇಕಾಗುತ್ತದೆ. ಆಕಡೆಯವರೂ ಕೂಡ ತಲೆಬಾಗಬೇಕಾಗುತ್ತದೆ. ಆದರೆ ವಿಧಿವಿಧಾನಗಳು ಮಾತ್ರ ನಮ್ಮ ವೈಯಕ್ತಿಕವಾದ ಸ್ವಾರ್ಥದ ಒಂದು ಆಶೋತ್ತರಗಳಿಗೆ ತಲೆಬಾಗಬೇಕೆಂದು ಹೇಳಿದಾಗ ಸಂಘರ್ಷಣೆಯಾಗುತ್ತದೆ. ಪ್ರಜಾಪ್ರಭುತ್ವದ ವಿಧಿವಿಧಾನ ಮತ್ತು ನಮ್ಮಲ್ಲಿ ಸಂಘರ್ಷಣೆಯಾಗಬಾರದು. ಸಂಘರ್ಷಣೆ ನಮ್ಮ ಮತ್ತು ನಮ್ಮ ಸಿದ್ಧಾಂತಗಳ ಬಗ್ಗೆ ಅಥವಾ ವಿಧಿವಿಧಾನಗಳ ಬಗ್ಗೆ ನಾವು ಬೇಕಾದರೆ ಸಂಘರ್ಷಣೆ ಮಾಡೋಣ. ಆದರೆ ಪ್ರಜಾ ಪ್ರಭುತ್ವದಲ್ಲಿ ವಿಧಾನ ಸಭೆ, ವಿಧಾನಪರಿಷತ್ತುಗಳ ವಿಧಿವಿಧಾನಗಳು ಮತ್ತು ನಮ್ಮ ಮಧ್ಯೆ ಮಾತ್ರ ಯಾವಾಗಲೂ ಸಂಘರ್ಷಣೆ ಆಗಬಾರದು. ಸಂಘರ್ಷಣೆಯಿಂದ ನಾವು ಸೋತೆವು ಎಂದು ಆಗಬಾರದು. ಆ ಒಂದು ವ್ಯವಸ್ಥೆಯಿಂದ ನಾವು ಸೋತೆವು ಎಂದಾಗಬಾರದು. ಇದು ಅದರಸಲುವಾಗಿ ಇರತಕ್ಕಂಥ ವ್ಯವಸ್ಥೆಯಲ್ಲ, ಸದಾ ಗೆಲ್ಲತಕ್ಕಂಥ, ಯಶಸ್ವಿಯಾಗತಕ್ಕಂಥ ವ್ಯವಧಾನಗಳು ಅದನ್ನು ಯಾವಾಗಲೂ ಮರೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನನ್ನ ಒಬ್ಬನ ಪ್ರತಿಷ್ಠೆಗಾಗಿ ಅಥವಾ ಕೆಲವು ಗುಂಪಿನ ಜನರ ಪ್ರತಿಷ್ಠೆಗಾಗಿ ಈ ಸದನ ಇರುವುದಿಲ್ಲ, ಇರಲೂಬಾರದು. ಯಾವುದೋ ಒಂದು ಸಣ್ಣದಾದಂಥ ತಾಂತ್ರಿಕ ವ್ಯವಸ್ಥೆಯ ಒಂದು ವ್ಯವಧಾನಕ್ಕಾಗಿ ಯಾವುದೇ ಒಂದು ಅಡ್ಡಿ ಈ ಸದನದಲ್ಲಿ ಖಂಡಿತವಾಗಿಯೂ ಬರಬಾರದು. ಏತಕ್ಕೆಂದರೆ ಬಜೆಟ್ ಸೆಷನ್ ಅಂದರೆ ಬಹಳ ಮುಖ್ಯವಾದ ಅಧಿವೇಶನ. ಇದು ನಿಜವಾಗಿಯೂ ಇಡೀ ಒಂದು ಅಧಿವೇಶನದ ಒಂದು ವ್ಯವಸ್ಥೆಯಲ್ಲಿ ಪ್ರಾಮುಖ್ಯವಾದಂಥದ್ದು. ಇದನ್ನು ನಾವು ಬೀದಿಯಲ್ಲಿ ನಿಂತು ಚರ್ಚೆ ಮಾಡುವುದಕ್ಕಾಗುವುದಿಲ್ಲ ಅಥವಾ ಯಾವುದೇ ಒಂದು ಸೆಮಿನಾರ್‌ನಲ್ಲಿ ಕುರಿತು ಚರ್ಚೆ ಮಾಡುವುದುಕ್ಕಾಗುವುದಿಲ್ಲ, ಯಾವುದೇ ಕಾನ್ ಫರೆನ್ಸ್‌ನಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಅದರಿಂದ ನಮಗೆ ಬೆಲೆ ಸಿಗುವುದಿಲ್ಲ. ಈ ವಿಧಾನ ಸಭೆಯ ವೇದಿಕೆ ಏನಿದೆ ಅದರ ಪಾವಿತ್ರತೆಯ ಒಂದು ಧರ್ಮಛತ್ರದ ಅಡಿಯಲ್ಲಿ ನಿಂತು ಅದನ್ನು ಚರ್ಚೆಮಾಡಿದಾಗ ಮಾತ್ರ ಜನತೆಗೆ ಸರಿಯಾದ ಒಂದು ನ್ಯಾಯ ಒಂದು ಸರಿಯಾದ ಪರಿಹಾರ ಕೊಡಲಿಕ್ಕೆ ಸಾಧ್ಯವೇ ಹೊರತು ಅನ್ಯಥಾ ಅಲ್ಲ. ಅಂಥ ವೇದಿಕೆಯಿಂದ ನಾವು ತಪ್ಪಿಸಿಕೊಳ್ಳುವುದಕ್ಕೂ ಕೂಡ ಆಗುವುದಿಲ್ಲ, ಅಥವಾ ನಾವು ಹೊರಗೆ ಹೋದಾಗ ನಮ್ಮಿಂದ ಕರ್ತವ್ಯಚ್ಯುತಿಯಾಗುತ್ತದೆ. ಇದು ಯಾರ ಇಚ್ಛೆಯೂ ಅಲ್ಲ, ನಾನು ವಿರೋಧಪಕ್ಷದ ನಾಯಕನಾಗಿ ಆ ಕಡೆ ಇದ್ದಾಗ ಕೆಲಸ ಮಾಡಿದ್ದೇನೆ. ವಿರೋಧಪಕ್ಷದಲ್ಲಿ ನಾವು 6–7 ವರ್ಷಗಳ ಕಾಲ ಆಕಡೆಯಿಂದ ಕೆಲಸ ಮಾಡಿದ್ದೇನೆ. ಆದರೆ ಇಂಥ ವ್ಯವಸ್ಥೆಯಿಂದ ಇಂಥ ಒಂದು ಇರತಕ್ಕಂಥ ವೇದಿಕೆಯನ್ನು ಬಿಟ್ಟು ನಾನು ಬೇರೆ ವೇದಿಕೆಯನ್ನು ಯಾವಾಗಲೂ ಆಯ್ಕೆ ಮಾಡಿಕೊಳ್ಳಲಿಲ್ಲ, ಏತಕ್ಕೆಂದರೆ ಇದು ನಮ್ಮ ಮಾತೃ ವೇದಿಕೆ. ಮಾತೃ ವೇದಿಕೆಯನ್ನು ಬಿಟ್ಟು ನಾವು ಬೇರೆ ಕಡೆಗೆ ಹೋದರೆ ಅದು ಸದನಕ್ಕೆ ಶೋಭೆ ತರುವುದಿಲ್ಲ, ಮತ್ತೆ ನಮಗೂ ಶೋಭೆ ಬರುವುದಿಲ್ಲ, ಶಾಸಕರಾಗಿ ನಮಗೆ ಒಂದು ವ್ಯಕ್ತಿತ್ವವನ್ನು ಕೂಡ ಕೊಡುವುದಿಲ್ಲ. I am making this earnest appeal to all the Leaders of Opposition and floor leaders ಇವತ್ತು ಅವರು ಈ ವೇದಿಕೆಯನ್ನು ಬಿಟ್ಟು ಹೊರಹೋಗಿರುವುದರಿಂದ ನಮಗೆ ಕಾರ್ಯ ಕಲಾಪಗಳನ್ನು ನಡೆಸಲು ಇಷ್ಟವಾಗುವುದಿಲ್ಲ, ಚರ್ಚೆಯಾಗದೆ ಬೇಡಿಕೆಗಳಾಗಲಿ ಅಪ್ರೋಪ್ರಿಯೇಷನ್ ಬಿಲ್ ಆಗಲಿ ಪಾಸ್ ಆಗತಕ್ಕದ್ದು it will hurt, not the Government but the whole system, the soul of four crores of people of the State. ಈ ದೃಷ್ಟಿಯಿಂದ ಅವರು

ಚರ್ಚೆಗೆ ಬರಬೇಕು. ಬಡ್ಜೆಟ್ ಲೀಕೇಜ್ ಬಗ್ಗೆ In fact the other side has exhausted all the ----------. ಮುಖ್ಯ ಮಂತ್ರಿಗಳು ಹೇಳಿದರು. ಅವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ನನಗೆ ಬಿಟ್ಟರೆ ನಾನು ವಿಚಾರಣೆ ಮಾಡುತ್ತೇನೆ, ಅಥವಾ ಸಭಾಧ್ಯಕ್ಷರಿಗೆ ಬಿಡುವುದು ಇದ್ದರೆ ಅವರೇ ವಿಚಾರ ಮಾಡಲಿ ಎಂದು ಹೇಳಿದ್ದಾರೆ. He gave the offer. These two offers were given to them. ರೆಸಲ್ಯೂಷನ್ ಪ್ರೆಸ್ ಮಾಡಬೇಡಿ ಅಂದರೂ ರೆಸಲ್ಯೂಷನ್ ಪ್ರೆಸ್ ಮಾಡಿದರು, ಅದು ರಿಜೆಕ್ಟ್ ಆಯಿತು. ರೆಸಲ್ಯೂಷನ್ ಅಷ್ಟೇ ರಿಜೆಕ್ಟ್ ಆಗಲಿಲ್ಲ, ಸಭಾನಾಯಕರು ಕೊಟ್ಟ ಆಫರ್ಸ್ ಕೂಡ ರಿಜೆಕ್ಟ್ ಆಯಿತು. ಲೀಕೇಜ್ ಬಗ್ಗೆ ನಾನು ವಿಶೇಷವಾಗಿ ಮಾತನಾಡುವುದಿಲ್ಲ. This is what has happened. ಅದರಿಂದ ಯಾರಿಗೆ ಲಾಭವಾಗಿದೆ? ಯಾವುದೇ ವ್ಯಕ್ತಿಗಳಿಗೆ, ಗುಂಪಿಗೆ ಲಾಭವಾಯಿತು ಎಂದರೆ ಸರ್ಕಾರಕ್ಕೆ ಅದರಿಂದ ನಷ್ಟವಾಗುತ್ತದೆ, ಜನತೆಗೆ ನಷ್ಟವಾಗುತ್ತದೆ. What is the repercussion on the people. ವಿಧಾನಸಭೆಯ ಪರಿಸರದಲ್ಲಿ ಒಂದಂ ಕಾಫಿ ಯಾರದ್ದೋ ಅಚಾತುರ್ಯದಿಂದ ಈ ಮನೆಯ ಹಿರಿಯ ಸದಸ್ಯರ ಕೈಸಿರಿದೆ. ಅದರ ಬಗ್ಗೆ ಮುಖ್ಯ ಮಂತ್ರಿಗಳಾಗಲಿ ಅಥವಾ ಸಭಾಧ್ಯಕ್ಷರಾಗಲಿ ವಿಚಾರಕ್ಕೆ ಮಾಡಬಹುದು. ಆದರೆ ಅದರಿಂದ ನೆಟ್ ರಿಸಲ್ಟ್ ಏನಾಗಬಹುದೆಂದು ತಮಗೆ ಗೊತ್ತಿದೆ. ಲೀಕೇಜ್ ಆಗಿದ್ದರೆ consequent events, that is very important in terms of leakage in the precincts of vidana sabha. What is the net result? If there was a leakage our press friends would not have left us like this. They would have grilled us. There was no copy available except copies coming in the hands of one responsible legislator. That is all. That senior legislator say I have not gone through it'. He did not say that. He also said, that means the contents of it is not known to anybody. That is the net result of the so-called leakage. ಆದುದರಿಂದ ಈ ಬಗ್ಗೆ ನಾವು ಹೆಚ್ಚು ಪ್ರತಿಷ್ಠೆ ಅಥವಾ ತಾಂತ್ರಿಕ ಕಾರಣಗಳನ್ನು ಮುಂದೊಡ್ಡದೆ ಏನು ಜವಾಬ್ದಾರಿಯನ್ನು ಜನತೆ ನಮ್ಮ ಶಾಸನ ಸಭೆಗೆ ಕೊಟ್ಟಿದೆ. ಅದನ್ನು ನಿರ್ವಹಿಸೋಣ. ಇದು ಏನಾದರೂ ಮಾತುಕತೆ ಆಗುವುದಿದ್ದರೆ ಮಾತುಕತೆ ಆಡೋಣವೆಂದು ಬೆಳಿಗ್ಗೆ ಕೂಡ ಹೇಳಿದ್ದೇವೆ. ನಾವು ಮಾತುಕತೆಗೆ ಸಿದ್ಧರಾಗಿದ್ದೇವೆಂದು ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. We dc not wat to hurry up even today. 9:೫ ತಾರೀಖು ಮಾನ್ಯ ಮುಖ್ಯ ಮಂತ್ರಿಯವರು ಆಯವ್ಯಯದ ಸಾಮಾನ್ಯ ಚರ್ಚೆಗೆ ಉತ್ತರ ಕೊಡಬೇಕಾಗಿದೆ ಈಗಿರತಕ್ಕ ಬಿಸಿನೆಸ್ ಪ್ರಕಾರ. ಆ ಬಗ್ಗೆ ಬಿ.ಎಸಿ.ಯಲ್ಲಿ ಕೊಟ್ಟಂಥ ನಿರ್ಣಯ ಇದೆ. ಮಾನ್ಯ ಸಭಾಧ್ಯಕ್ಷರು ಇಂದು ಸಂಜೆ ಬರುವವರಿದ್ದಾರೆ. ಅವರ ಜೊತೆಯಲ್ಲಿ ನಾನು ಮಾತನಾಡುತ್ತೇನೆ. ತಾವು ಮಧ್ಯಸ್ಥಿಕೆ ವಹಿಸಬೇಕೆಂದು ಸಂಜೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತಿದ್ದೇನೆ. ನಾಳೆ ಬೆಳಿಗ್ಗೆ ಪುನಃ 9.30 ಗಂಟೆಗೆ ಸಭೆ ಸೇರಿಸಿ ಚರ್ಚೆ ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ವಿರೋಧ ಪಕ್ಷದ ಮಿತ್ರರು ಚರ್ಚೆಗೆ ಬರಲಿ. ಚರ್ಚೆ ಬರುವುದಿಲ್ಲವೆಂದು ಯಾರೂ ಹೇಳಲಿಲ್ಲ, ಏನೋ ಕಾರಣದಿಂದ ಬಾರದೆ ಇರಬಹುದು. ಆದುದರಿಂದ ನಾಳೆ ಎಲ್ಲಾ ಕೂಡಿ ಸಮಾಲೋಚನೆ ಮಾಡೋಣ. After all life is a sum total or compromises. Political life is more of compromises. Even your life, my life or the personal life is a bundle of compromises. Political life is of more of compromises than personal life. ಹಾಗಿರುವಾಗ ಅಂಥ ಒಂದು ಪರಿಸ್ಥಿತಿಯಿಂದ, ವ್ಯವಸ್ಥೆಯಿಂದ ದೂರ ನಾವು ಹೋಗುವುದು ಬೇಡ. ಚರ್ಚೆ ಈ ಸದನದಲ್ಲೇ ಮಾಡೋಣ. ಎಷ್ಟು ಅವಕಾಶ ಬೇಕೋ ಅಷ್ಟು ಕೊಡತಕ್ಕ ಅಧಿಕಾರ ಕೂಡ ತಮಗಿದೆ. ಆದ್ದರಿಂದ ಇವತ್ತು ಅಥವಾ ನಾಳೆ ಇದರ ಬಗ್ಗೆ ನಾವು ಸಮಾಲೋಚನೆ ಮಾಡೋಣ. ಆದರೂ ಭಿನ್ನಾಭಿಪ್ರಾಯ ಇದ್ದರೆ... ಏಕೆಂದರೆ one small hitch, of course, ನಮ್ಮ ಕಡೆಯವರು ಬಜೆಟ್ ಭಾಷಣ ಪ್ರಾರಂಭ ಮಾಡಿದರು ಎಂದು. ಅದೂ ಕೂಡ ತಾಂತ್ರಿಕ ಕಾರಣದಿಂದ ಆಗಿಹೋಯಿತು. ತಾವು ಇಲ್ಲಿ ಕರೆದಾಗ ಆ ಕಡೆಯವರು ಇರಲಿಲ್ಲ, Automatically you have alled this side. By the time we realised the mistake, it was late. It was our mistake. We coulde have told our people ndot to continue. After all, ಅದನ್ನೇ ನಾವು ಪ್ರತಿಷ್ಠೆ ಮಾಡಿ ನಮ್ಮ ಪ್ರಜಾಪ್ರಭುತ್ವದ

ಒಂದು ಪ್ರೊಸೆಸ್‌ಗೆ ತಡೆಗೋಡೆ ಆಗಬಾರದು. ವೈಯುಕ್ತಿಕ ಪ್ರತಿಷ್ಠೆಯಾಗಲೀ ಅಥವಾ ಒಂದು ಸಾಮೂಹಿಕ ಪ್ರತಿಷ್ಠೆಯಾಗಲೀ ಇದು ಯಾವಾಗಲೂ ತಡೆಗೋಡೆ ಆಗಬಾರದು. ಆದ್ದರಿಂದ ಅಧ್ಯಕ್ಷರೆ, ನಾಳೆ ಬೆಳಗ್ಗೆ 9.30ಕ್ಕೆ ನಾವು ಸೇರೋಣ. On behalf of the Government, on behalf of the Hon. Chief Minister I again make an appeal earnest appeal – to them to come to the House and participate in the discussion. This is an important sanctified forum and let us not run away from this sanctified forum, which has got to be responsive to the aspirations of the people of this State. Particularly an important discussion like the Budget discussion, ನಾವು ಸರ್ಕಾರ ಇದಕ್ಕೆ ಬುಲ್ಡೋಜ್ ಮಾಡತಕ್ಕದ್ದು ಸರಿಯಲ್ಲ, we don't believe in bulldozing this. We believe in open discussion on the all Demands. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಸಂಜೆ ತಾವು, ಸಭಾಧ್ಯಕ್ಷರು ನಮ್ಮನ್ನು ಕರೆಯಿಸಿ. ಅವರನ್ನೂ ಕರೆಯಿಸಿ. ಅಥವಾ ನಾಳೆ ಬೆಳಗ್ಗೆ ಕರೆಯಿಸಿ. ಪುನಃ ನಾಳೆ ಸೇರೋಣ. ಸೇರಿ ಈ ಒಂದು ಅಧಿವೇಶನವನ್ನು ಮುಂದುವರೆಸಿಕೊಂಡು ಹೋಗೋಣ. ಈ ಅಧಿವೇಶನ not only meant for the Government, but it is meant for the people of this State.

ಜನತೆಯ ಕಡೆಗೆ ದೃಷ್ಟಿ ಇಟ್ಟುಕೊಂಡು ಇದನ್ನು ಮುಂದುವರೆಸೋಣ. ತಮ್ಮ ಮುಖೇನ ನಮ್ಮ ವಿರೋಧಪಕ್ಷದ ಸನ್ಮಾನ್ಯ ನಾಯಕರಿಗೆ ಮತ್ತು ಸದಸ್ಯರಿಗೆ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. SRI Qumurul Islam : I also request Hon. Deputy Speaker that till tomorrow the Session may be adjourned and call all the floor Leaders to your Chamber for discussion.

ಉಪಾಧ್ಯಕ್ಷರು :– ಈಗ ಮಾನ್ಯ ವಿದ್ಯಾಮಂತ್ರಿಗಳು ಹಾಗೂ ಮಾನ್ಯ ಸದಸ್ಯರಾದ ಶ್ರೀಯುತ ಕಮರುಲ್ ಇಸ್ಲಾಂ ಅವರು ಹೇಳಿದಂಥ ಮಾತುಗಳಿಗೆ ನನ್ನ ಧ್ವನಿಯನ್ನೂ ಕೂಡಿಸುತ್ತಾ ಈ ಸಭೆಯ ಕಾರ್ಯಕಲಾಪಗಳಲ್ಲಿ ಎರಡೂ ಕಡೆಯವರು ಆಳುವ ಪಕ್ಷ ಮತ್ತು ವಿರೋಧಪಕ್ಷ ಇಬ್ಬರೂ ಭಾಗವಹಿಸಿದರೆ ಮಾತ್ರ ಚರ್ಚೆಗೆ ಒಂದು ಮಹತ್ವ ಮತ್ತು ಅರ್ಥಪೂರ್ಣವಾಗುತ್ತದೆ ಎಂದು ಹೇಳಿ ಈ ಹಿನ್ನೆಲೆಯಲ್ಲಿ ಈಗಲಾದರೂ ವಿರೋಧ ಪಕ್ಷದವರು ನಾಳೆಯ ಸಭೆಯಲ್ಲಿ ಭಾಗವಹಿಸಬೇಕೆಂದು ಈ ಸಭೆಯ ಮೂಲಕ ಅವರನ್ನು ನಾನು ಕೇಳಿಕೊಳ್ಳುತ್ತೇನೆ: ಮತ್ತು ಪೂರ್ವಭಾವಿಯಾಗಿ ಅವರೆಲ್ಲರೂ ಒಟ್ಟಿಗೆ ಸೇರಿ ಏನು ಈ ಒಂದು ಸನ್ನಿವೇಶ ಬಂದಿದೆ ಇದನ್ನು ಇತ್ಯರ್ಥ ಮಾಡಿಕೊಳ್ಳುವುದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡಿಕೊಳ್ಳೋಣ ಎಂದು ನಾನು ವಿರೋಧ ಪಕ್ಷದವರನ್ನು ಕೇಳಿಕೊಳ್ಳುತ್ತೇನೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಗ್ಗೆ 9.30 ಕ್ಕೆ ಸಮಾವೇಶಗೊಳ್ಳೋಣ.

(ಸದನವು ಸಂಜೆ 4 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 7.3.1992 ರಂದು ಶನಿವಾರ ಬೆಳಗ್ಗೆ 9 ಘಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತೆ)

ಕರ್ನಾಟಕ ವಿಧಾನ ಸಭೆ

ಶನಿವಾರ 7ನೇ ಮಾರ್ಚ್ 1992, ಫಾಲ್ಗುಣ 17, 1913 ಶಕ.
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 10–12 ಗಂಟೆಗೆ ಸಮಾವೇಶಗೊಂಡಿತು.
[ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಪೀಠವನ್ನು ಅಲಂಕರಿಸಿದರು]

ಗಮನ ಸೆಳೆಯುವ ಸೂಚನೆ

ವಿಷಯ :-ಬೆಂಗಳೂರಿನ ಅನುದಾನಿತ ಮತ್ತು ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಮತ್ತು ಒಂದನೇ ತರಗತಿಗಳಿಗೆ ಅತಿ ಹೆಚ್ಚು ಡೊನೇಷನ್ ತೆಗೆದುಕೊಳ್ಳುತ್ತಿರುವ ಬಗ್ಗೆ -

ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಉಪಾಧ್ಯಕ್ಷೀಣಿಯವರೆ, ಬೆಂಗಳೂರಿನ ಅನುದಾನಿತ ಮತ್ತು ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ಮತ್ತು ಒಂದನೇ ತರಗತಿಗಳಿಗೆ ಅತಿ ಹೆಚ್ಚು ಡೊನೇಷನ್ ತೆಗೆದುಕೊಳ್ಳುತ್ತಿರುವ ಬಗ್ಗೆ ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಉಪಾಧ್ಯಕ್ಷೀಣಿಯವರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸದಸ್ಯರು ಪ್ರಸ್ತಾಪಿಸಿರುವಂತೆ ದುಬಾರಿ ವಂತಿಗೆ ವಸೂಲಿ ಮಾಡುತ್ತಿರುವ ಬಗ್ಗೆ ಲಿಖಿತವಾಗಿ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ. ಲಿಖಿತ ದೂರುಗಳು ಬಂದಲ್ಲಿ ಅಂತಹ ಸಂಸ್ಥೆಗಳಿಗೆ ಶಾಲೆಯನ್ನು ನಡೆಯಿಸಲು ನೀಡಿರುವ ಮಾನ್ಯತೆ ಹಿಂತೆಗೆದುಕೊಳ್ಳುವುದು ಅಥವಾ ವೇತನಾನುದಾನ ನಿಲ್ಲಿಸುವುದು ಇತ್ಯಾದಿ ಕ್ರಮಗಳನ್ನು ಪ್ರಾಥಮಿಕ ಶಾಲಾ ಅನುದಾನ ಸಂಹಿತೆ ನಿಯಮಗಳ ಪ್ರಕಾರ ಕೈಗೊಳ್ಳಲಾಗುವುದು.

1985ನೇ ಸಾಲಿನಲ್ಲಿ ಸರ್ಕಾರವು ಖಾಸಗಿ ಶಾಲೆಗಳಲ್ಲಿ ಡೊನೇಷನ್ ನಿಷೇಧ ಕಾಯ್ದೆ 1984 ರನ್ವಯ ಪೋಷಕರಿಂದ ವಂತಿಗೆ ವಸೂಲಿ ಮಾಡುವುದನ್ನು ನಿಷೇಧಿಸುವ ಉದ್ದೇಶದಿಂದ ಆದೇಶ ಸಂಖ್ಯೆ ಇಡಿ 27 ಟಿಗಸಿ 85 ದಿನಾಂಕ 15.6.1985 ರಲ್ಲಿ ಸರ್ಕಾರವು ಬೋಧನಾ ಶುಲ್ಕಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿತು. ದಿನಾಂಕ 15.5.1985 ರ ಸರ್ಕಾರದ ಆಜ್ಞೆಯ ಬಗ್ಗೆ ಖಾಸಗಿ ಶಾಲಾ ಆಡಳಿತ ಮಂಡಳಿಯವರು ರಿಟ್ ಅರ್ಜಿ ಸಂಖ್ಯೆ : 8186 : 85 ನ್ನು ದಿನಾಂಕ 3.6.1985 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿ ಆಜ್ಞೆಗೆ ತಡೆಯಾಜ್ಞೆ ತಂದಿದ್ದಾರೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿದೆ.

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಪ್ರಶ್ನೆ ಇದ್ದರೆ ಕೇಳುತ್ತೀರಾ, ಕೇಳಿ.

ಶ್ರೀ ರಾಮಲಿಂಗ ರೆಡ್ಡಿ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ಸದನದ ಸದಸ್ಯರೆಲ್ಲರಿಗೂ ತಿಳಿದಿರತಕ್ಕ ವಿಚಾರ. ಬೆಂಗಳೂರಿನಲ್ಲಿ ಬಿಷಪ್ ಕಾಟನ್, ಬಾಲ್ಡ್ವಿನ್, ಸೋಫಿಯಾ, ಜಯನಗರದಲ್ಲಿರತಕ್ಕ ಸುದರ್ಶನ ವಿದ್ಯಾಮಂದಿರ, ರಾಜಾಜಿನಗರದಲ್ಲಿರತಕ್ಕ ನ್ಯಾಷನಲ್ ಇಂಗ್ಲಿಷ್ ಸ್ಕೂಲ್ - ಈ ತರಹ ಸ್ಕೂಲ್‌ಗಳಲ್ಲಿ ಮಿನಿಮಮ್ 3 ಸಾವಿರದಿಂದ ಶುರು ಮಾಡುತ್ತಾರೆ. 15 ಸಾವಿರ 20 ಸಾವಿರ ರೂಪಾಯಿಗಳನ್ನು ಡೊನೇಷನ್ ತೆಗೆದುಕೊಳ್ಳುತ್ತಾರೆ. ಇದು ಪ್ರತಿಯೊಬ್ಬರಿಗೂ ತಿಳಿದಿರತಕ್ಕದ್ದು. ಅವರನ್ನು ಕಾನೂನಿನ ಚೌಕಟ್ಟಿನಲ್ಲಿ ಏತಕ್ಕೆ ತರಬಾರದೆಂದು ನನ್ನ ಪ್ರಶ್ನೆ. ಮುಂದಿನ ಜೂನ್ ತಿಂಗಳಿನಲ್ಲಿ ಶಾಲೆಗಳು ಪ್ರಾರಂಭವಾಗುತ್ತವೆ. ಈಗಲೇ ಮಕ್ಕಳುಗಳಿಗೆ ಇಂಟರ್‌ವ್ಯೂ ಮಾಡುತ್ತಾರೆ. ಅವರ ಜೊತೆಯಲ್ಲಿ ಪೇರೆಂಟ್ಸನ್ನು ಸಹ ಕರೆಯುತ್ತಾರೆ. ಕರೆದು ಓರಲ್ ಇಂಟರ್‌ವ್ಯೂ

ಮಾಡಿ 15 ಸಾವಿರ ಕೊಡಿ, 20 ಸಾವಿರ ಕೊಡಿಯೆಂದು ಕೇಳುತ್ತಾರೆ. ನೀವು ಕೊಡದಿದ್ದರೆ ಇಲ್ಲಿ ಸೀಟು ಕೊಡುವುದಿಲ್ಲವೆಂದು ಹೇಳಿ, ಒಂದು ರೀತಿಯಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಹಗಲು ದರೋಡೆ ಮಾಡುತ್ತಿದ್ದಾರೆ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಏನು ನಮ್ಮ ಕಟುಕರಿದ್ದಾರೆ ಅವರಿಗಿಂತ ಕಡೆಯಾಗಿದ್ದಾರೆ. ಈಗ ನೋಡಿ, ನ್ಯಾಷನಲ್ ಇಂಗ್ಲೀಷ್ ಸ್ಕೂಲಿನಲ್ಲಿ ಪ್ರತಿವರ್ಷವೂ ಡೊನೇಷನ್ ಅಲ್ಲದೇನೆ ಪ್ರತಿಯೊಬ್ಬ ವಿದ್ಯಾರ್ಥಿಯೂ 750 ರೂಪಾಯಿಗಳನ್ನು ಕೊಡಬೇಕಂತೆ. ಏಕೆಂದರೆ, ಕಂಪ್ಯೂಟರ್ ಇಂಟ್ರೊಡಕ್ಷನ್ ಮಾಡುತ್ತೇವೆ ಎನ್ನುತ್ತಾರೆ. ಎಷ್ಟು ಮಕ್ಕಳು ಇದ್ದಾರೆ, ಅಷ್ಟು ಜನವೂ ಕೊಡಬೇಕು. ಅದೇ ರೀತಿ ಬಸವನಗುಡಿ ಮಹಿಳಾ ಮಂಡಳಿ ಶಾಲೆಯಲ್ಲಿ ಪ್ರತಿವರ್ಷ ಮೂರು ಸಾವಿರ ಕೊಡಬೇಕೆಂದು ಒಂದು ಸರ್ಕ್ಯುಲರನ್ನೇ ಹೊರಡಿಸಿದ್ದಾರೆ. ಶಾಲೆಯ ಎಲ್ಲಾ ಮಕ್ಕಳು ಕಂಪ್ಯೂಟರ್ ಕೋರ್ಸನ್ನು ತೆಗೆದುಕೊಳ್ಳಬೇಕು, ಅದಕ್ಕಾಗಿ ಎಲ್.ಕೆ.ಜಿ., ಯು.ಕೆ.ಜಿ. ಅಷ್ಟೇ ಅಲ್ಲ ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ವರೆಗೆ ಪ್ರತಿಯೊಬ್ಬರೂ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಶ್ರೀ ಮುನಿಸ್ವಾಮಿಯವರ ಮಗನಿಗೂ ಒಂಬೈನೂರು ರೂಪಾಯಿ ಡೊನೇಷನ್ ಕೊಟ್ಟಿದ್ದಾರೆ. ಇದಕ್ಕೆ ಅಕೌಂಟ್ಸ್ ಇಲ್ಲ. ಅವರು ನನಗೆ ಹೇಳಿದರು. ಈಗ ಇದನ್ನು ಶ್ರೀ ಮುನಿಸ್ವಾಮಿಯವರೇ ಹೇಳುತ್ತಾರೆ.

ಶ್ರೀ ಎಂ. ಮುನಿಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ರಾಮುಲಿಂಗರೆಡ್ಡಿಯವರು ಎತ್ತಿರುವ ವಿಷಯ ಬಹಳ ಪ್ರಮುಖವಾದುದು.

ಉಪಾಧ್ಯಕ್ಷಿಣಿಯವರು :- ಇದು ಗಮನ ಸೆಳೆಯುವ ಸೂಚನೆ. ನೀವು ಸಿಗ್ನಟರಿ ಅಲ್ಲ.

ಶ್ರೀ ಎಂ. ಮುನಿಸ್ವಾಮಿ :- ಪ್ರತಿಯೊಂದು ಶಾಲೆಯಲ್ಲೂ ಈ ತೊಂದರೆ ಇದೆ. ಎಷ್ಟೋ ಶಾಲೆಗಳಲ್ಲಿ, ಬಾಲ್ಡ್‌ವಿನ್ ಆಗಲಿ, ಮತ್ತೊಂದು ಆಗಲಿ, ಏನಾಗಿದೆ ಎಂದರೆ, ಪ್ರತಿವರ್ಷ ಡೊನೇಷನ್, ಬಿಲ್ಡಿಂಗ್ ಫಂಡ್ ಎಂದು ತೆಗೆದುಕೊಳ್ಳುತ್ತಿದ್ದಾರೆ. ಈಗ ಮತ್ತೊಂದು ಹೊಸದಾಗಿ ಕಂಪ್ಯೂಟರ್ ಇಂಟ್ರೊಡಕ್ಷನ್ ಎಂದು ಹೇಳಿ ಸಾವಿರಾರು ರೂಪಾಯಿಗಳನ್ನು ಮಕ್ಕಳಿಂದ ತೆಗೆದುಕೊಳ್ಳುತ್ತಾರೆ. ಎಲ್ಲರಿಗೂ ಕೊಡುವ ವಿದ್ಯಾಭ್ಯಾಸ ಒಂದೇ ರೀತಿಯದ್ದು.

ಉಪಾಧ್ಯಕ್ಷಿಣಿಯವರು :- ಈಗ ಮಂತ್ರಿಗಳು.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷರೇ, ತಾವು ಹಿಂದೆ ಶಿಕ್ಷಣ ಸಚಿವರಾಗಿದ್ದಿರಿ. ಇದು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಅಥವಾ ಎಲ್.ಕೆ.ಜಿ., ಯು.ಕೆ.ಜಿ. ಮತ್ತು ಎಲ್ಲ ಕೆ.ಜಿ.ಗಳೂ ಸೇರಿ, ಇಂಜಿನಿಯರಿಂಗ್ ಕಾಲೇಜಿನಿಂದ ಮೆಡಿಕಲ್ ಕಾಲೇಜಿನವರೆಗೆ ಈ ಒಂದು ಪಿಡುಗು ಸಾರ್ವತ್ರಿಕವಾಗಿ ನಡೆದಿದೆ. ಕೆಲವು ಸಂಸ್ಥೆಗಳು ಒಳ್ಳೆಯ ಶಿಕ್ಷಣ ಕೊಡುತ್ತವೆ. ಇಲ್ಲ ಎಂದು ಅಲ್ಲ. ಆದರೆ ಇದು ಒಂದು ರೀತಿಯ ಪಿಡುಗು. ಶಿಕ್ಷಣ ವ್ಯವಸ್ಥೆಯಲ್ಲಿ ಇದು ಒಂದು ತರಹ ಕ್ಯಾನ್ಸರು ಸ್ಟ್ರೋಕ್ ಇದ್ದಹಾಗಿದೆ. ಅದಕ್ಕೆ 1985ರಲ್ಲಿ ಒಂದು ಕಾನೂನು ಮಾಡಿದ್ದರು. ಖಾಸಗಿ ಶಾಲೆಗಳಲ್ಲಿ ಡೊನೇಷನ್ ನಿಷೇಧ ಮಾಡುವುದು ಎಂದು. ಆಗ ಒಳ್ಳೆಯ ಪ್ರಚಾರ ವಿಧಾನಸಭೆಗೆ, ಸರ್ಕಾರಕ್ಕೆ ಸಿಕ್ಕಿತು. ಇದರ ಬಗ್ಗೆ ಯಾರನ್ನೂ ದೂರುವುದಲ್ಲ, ಒಳ್ಳೆಯ ಉದ್ದೇಶದಿಂದ ಮಾಡಿರಬಹುದು. ಆದರೆ ಶಾಲೆಗಳಿಗೆ ಪ್ರೀಮಿಯಂ ಜಾಸ್ತಿಯಾಯಿತು. ಇದನ್ನು ಮಾಡಿದ್ದರಿಂದ ಸ್ವಲ್ಪ ಇದ್ದದ್ದು ಜಾಸ್ತಿಯಾಗಿ ಹೋಯಿತು. ಕಾನೂನು ಅಡಿಯಲ್ಲಿ ನಾವು ಫೀಸ್ ಸ್ಟ್ರಕ್ಚರ್ ಬದಲಾವಣೆ ಮಾಡುವುದಕ್ಕೆ ಹೋದಾಗ, ಈ ಉದ್ದೇಶ ಏನಿತ್ತು ಎಂದರೆ, ಫೀಸ್ ಸರಿಯಾಗಿ ಕೊಟ್ಟರೆ ಕ್ಯಾಪಿಟೇಶನ್ ಫೀಸ್ ವಸೂಲು ಮಾಡಬಾರದು ಎಂದು. ಆ ಉದ್ದೇಶ ಇದ್ದರೆ ಕ್ಯಾಪಿಟೇಶನ್ ಫೀಸ್ ಪ್ರಮಾಣ ಕೂಡ ಜಾಸ್ತಿಯಾಯಿತು. ಮತ್ತೊಂದು ಕಡೆ ಫೀಸ್ ಕೂಡ ಜಾಸ್ತಿಯಾಯಿತು. ಇವೆರಡನ್ನೂ ಕೂಡ ಸರ್ಕಾರ ಮಾಡಿಕೊಟ್ಟಹಾಗೆ ಆಗಿದೆ. ನಾವು ಈ ಬಗ್ಗೆ ಆದೇಶ ಕೊಟ್ಟರೆ ಅದಕ್ಕೆ ಹೈಕೋರ್ಟು ತಡೆ ಮಾಡಿದೆ. ಸಾಮಾಜಿಕ ನ್ಯಾಯ, ಸಾಮಾಜಿಕ ನೀತಿ - ಇದನ್ನೆಲ್ಲ ಸಾಧನೆ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಕೆಲವು ಸಾರಿ ಕಾನೂನು ಮಾಡಿದಾಗ, ಅದನ್ನು ಯಾವ ಉದ್ದೇಶದಿಂದ ಮಾಡಿರುತ್ತೇವೆ, ಅದಕ್ಕೆ ವಿರುದ್ಧವಾದಂಥ ಪರಿಣಾಮ ಕಾನೂನಿನ ಮೂಲಕ ಕೂಡ ಆಗುತ್ತದೆ. ಇದನ್ನೆಲ್ಲಾ ಮನಗಂಡಾಗ ಬಹಳ ಕಹಿ ಅನುಭವ ಈ ಶಿಕ್ಷಣ ಕ್ಷೇತ್ರದಲ್ಲಿದೆ ಎಂದು ತಿಳಿಯುತ್ತದೆ. ಎಲ್ಲಿಯವರೆಗೆ ಈ ಪಿಡುಗು ಶಿಕ್ಷಣ ಕ್ಷೇತ್ರದಲ್ಲಿ ಇರುತ್ತದೆ, ಅಲ್ಲಿಯವರೆಗೆ ಇದು ನಿಲ್ಲುವುದಿಲ್ಲ. ಈ ಪರಿಸ್ಥಿತಿಯಲ್ಲಿ ಶಿಕ್ಷಣ ಪಡೆದವರು ವಿದ್ಯಾವಂತರು ಸಮಾಜದ ಬೇರೆ ಬೇರೆ ಕ್ಷೇತ್ರಗಳಿಗೆ ಹೋದಾಗ ಅಲ್ಲಿ ಇವರು ಇದಕ್ಕೆ ದ್ವಿಗುಣವಾಗಿ, ನೂರು ಪಟ್ಟು ಜಾಸ್ತಿಯಾಗಿ ಸಮಾಜವನ್ನು

ಶೋಷಣೆ ಮಾಡತಕ್ಕಂಥ ರೀತಿಯಲ್ಲಿ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದನ್ನು ನಾವು ಸ್ವಲ್ಪ ಕಠಿಣವಾಗಿ ನಿಲ್ಲಿಸಬೇಕು. ಬರಿ ಕಠಿಣವಾಗಿದ್ದರೆ ಸಾಲದು, ಉಪಾಯವಾಗಿ ಇದರ ಬೇರನ್ನೂ ಕಿತ್ತು ಬಿಸಾಡಬೇಕು. ಇದರ ಬೇರಿನ ತುದಿಯನ್ನು ಚಿವುಟಿದರೆ ಅಥವಾ ಗೆಲ್ಲನ್ನು ತೆಗೆದರೆ ಆಗುವುದಿಲ್ಲ, ಕೆಲವೊಮ್ಮೆ ಬೇರನ್ನೇ ಕಿತ್ತು ಬಿಸಾಡಬೇಕಾಗುತ್ತದೆ. ಏಕೆಂದರೆ ಈ ಬೇರು ಅಷ್ಟು ಆಳವಾಗಿದೆ. ಬೇರನ್ನು ತೆಗೆದು ಬಿಸಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ನಾವು ಈಗ ಒಂದು ಪ್ರಯತ್ನ ಮಾಡುತ್ತಿದ್ದೇವೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದು ಆ ಕೆಂಪು ಕಟ್ಟಡಕ್ಕೆ ಕೂಡ ಹೊಂದಿಕೊಂಡಿರುತ್ತದೆ.

ಉಪಾಧ್ಯಕ್ಷರು :- ಲಿಖಿತ ದೂರನ್ನು ಕೊಟ್ಟರೆ ...

ಶ್ರೀ ಎಂ. ವೀರಪ್ಪ ಮೊಯಿಲಿ :- ಲಿಖಿತ ದೂರು ಬಂದಿಲ್ಲವೆಂದು ನಾವು ಸುಲಭವಾಗಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಹುದು. ಪಾಪಾ ; ಪೇರೆಂಟ್ಸ್ ದೂರು ಕೊಡಬೇಕು. ಆದರೆ ಅವರ ಮಕ್ಕಳು ಅಲ್ಲಿ ಕಲಿಯಬೇಕಾಗುತ್ತದೆ. ಇದು, ನಾವು ನಿರೀಕ್ಷೆ ಮಾಡುವುದಕ್ಕೂ ಆಗುವುದಿಲ್ಲ; ನಮ್ಮ ಸರ್ಕಾರದ ಜವಾಬ್ದಾರಿಯನ್ನು ತಪ್ಪಿಸುವುದಕ್ಕೆ ಈ ರೀತಿಯ ಉತ್ತರ ಕೊಡುತ್ತೇವೆ, ಇದು ಒಂದು ರೀತಿಯ ಆಶಾಡಭೂತಿತನ. ಈ ಕೆಲಸ ನಾನು ಕೂಡ ಮಾಡುತ್ತೇನೆ. ಸರಿಯಾದ ಮಾರ್ಗ ಹುಡುಕಬೇಕಾದರೆ, ನಾವು ಈಗಾಗಲೇ ಡ್ರಾಫ್ಟ್ ರೂಲ್ಸ್ ತಯಾರು ಮಾಡಿದ್ದೇವೆ. ನಾವು, ಶಿಕ್ಷಣ ಇಲಾಖೆಯವರು ಬಹಳ ಆಲೋಚನೆ ಮಾಡಿ, ತಯಾರು ಮಾಡಿದ್ದೇವೆ. ಸಂಬಂಧಪಟ್ಟ ಉಚ್ಚ ನ್ಯಾಯಾಲಯಗಳ ನಿರ್ಣಯಗಳು, ನಮಗೆ ಬಂದಂಥ ಎಲ್ಲಾ ಅನುಭವಗಳು ಇವುಗಳೆಲ್ಲವನ್ನೂ ಕ್ರೋಡೀಕರಿಸಿ, ಭಟ್ಟಿ ಇಳಿಸಿ, ಒಂದು ಡ್ರಾಫ್ಟ್ ರೂಲ್ಸ್ ತಯಾರು ಮಾಡಿದ್ದೇವೆ. ಈ ಕ್ಯಾಪಿಟೇಷನ್ ಅಬಾಲಿಷನ್ ಆಕ್ಟ್ ಒಳಗಡೆ ಈಗಾಗಲೇ ಒಂದು ಡ್ರಾಫ್ಟ್ ರೂಲ್ಸ್ ತಯಾರು ಮಾಡಿದ್ದೇವೆ. ತಯಾರು ಮಾಡಿ, ಈಗಾಗಲೇ ಕಾನೂನು ಇಲಾಖೆಗೆ ಕಳುಹಿಸಿದ್ದೇವೆ. Within a couple of days, ಈ ಅಧಿವೇಶನ ಇರುವಾಗಲೇ ಇದನ್ನು ಫೈನಲೈಸ್ ಮಾಡುತ್ತೇವೆ, ನೋಟಿಫೈ ಮಾಡಬೇಕೆಂದು ಹೇಳಿದ್ದೇವೆ. ತಾವು ಕೂಡ, ಯಾರಾದರೂ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಸುವಂತಿದ್ದರೆ, I would like to call a meeting of the Hon. Members of this House and that House who are interested in this ಇಬ್ಬರನ್ನೂ ಕರೆದು ಇದಕ್ಕೆ ಅಂತಿಮ ಸ್ವರೂಪ ಕೊಡಬೇಕು. ಈ ಅಧಿವೇಶನ ಮುಗಿಯುವ ಮೊದಲು ಇದಕ್ಕೆ ಅಂತಿಮ ಸ್ವರೂಪ ಕೊಡಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ. ಈಗಾಗಲೇ ಸಂಬಂಧಪಟ್ಟ ಕಾನೂನು ಇಲಾಖೆ, ಆರೋಗ್ಯ ಇಲಾಖೆ ಮತ್ತು ನಮ್ಮ ಇಲಾಖೆಯವರೆಲ್ಲರೂ ಸೇರಿ ಒಂದು ರೂಪ ಕೊಟ್ಟಿದ್ದೇವೆ. ಇದಕ್ಕೆ ಅಂತಿಮ ಸ್ವರೂಪ ಕೊಡುವ ಮೊದಲು, ಪುನಃ ತಮ್ಮ ಜೊತೆಯಲ್ಲೂ ಮಾತನಾಡಿ, ಮುಂದೆ ಬರತಕ್ಕ ಅಕಾಡೆಮಿಕ್ ವರ್ಷ ಏನಿದೆ, ಅಲ್ಲಿ ಎಲ್.ಕೆ.ಜಿ.ಯಿಂದ ಹಿಡಿದು ಉನ್ನತ ವಿದ್ಯಾಭ್ಯಾಸದವರೆಗೆ, ಇದನ್ನು ಹತೋಟಿಗೆ ತರತಕ್ಕಂಥ, ಮುಖ್ಯವಾಗಿ ಬುಡಸಹಿತ, ಈ ಪಿಡುಗನ್ನು ಹೋಗಲಾಡಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಎಂ. ಮುನಿಸ್ವಾಮಿ :- ತಾವು ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಇದು ಯಾವುದೇ ರಾಜ್ಯಸರ್ಕಾರಕ್ಕೂ ಹತೋಟಿ ಇಲ್ಲದಿರುವ ಕಾರಣ ಈ ರೀತಿ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು.

2. ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ, 1992.

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, 1992ನೇ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು

ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯ್ತಿ ಸಮಿತಿಗಳು, ಮಂಡಲ ಪಂಚಾಯ್ತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, 1992 ರ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯ್ತಿ ಸಮಿತಿಗಳು, ಮಂಡಲ ಪಂಚಾಯ್ತಿಗಳು ಮತ್ತು ನ್ಯಾಯ ಪಂಚಾಯ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - I

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992
(1992ರ ವಿಧಾನಸಭಾ ವಿಧೇಯಕ, ಸಂಖ್ಯೆ - 4)

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ 20)ನ್ನು ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತೊರ್ನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. **ಚಿಕ್ಕ ಹೆಸರು ಮತ್ತು ಪ್ರಾರಂಭ** :- ಈ ಅಧಿನಿಯಮವನ್ನು ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

   2. ಇದು 1992ನೇ ಜನವರಿ ಎಂಟನೇ ದಿನಾಂಕದಿಂದ ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು.

2. 8ನೇ ಪ್ರಕರಣದ ತಿದ್ದುಪಡಿ :- ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 (1985 ರ ಕರ್ನಾಟಕ ಅಧಿನಿಯಮ 20) (ಇದರಲ್ಲಿ ಇನ್ನು ಮುಂದೆ ಮೂಲ

ಅಧಿನಿಯಮವೆಂದು ಉಲ್ಲಿಖಿತವಾದ) ರ (1) ನೇ ಉಪಪ್ರಕರಣದಲ್ಲಿ, (ii) ಖಂಡದಲ್ಲಿ "ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಂಡಲ ಪಂಚಾಯಿತಿಗೆ ಸಾರ್ವತ್ರಿಕ ಚುನಾವಣೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲದಿದ್ದರೆ" ಎಂಬ ಪದಗಳಿಗೆ "ಹೊಸ ಮಂಡಲ ಪಂಚಾಯಿತಿಯನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ರಚಿಸಲಾಗಿರದಿದ್ದರೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕುದು.

3. **44ನೇ ಪ್ರಕರಣದ ತಿದ್ದುಪಡಿ** :- ಮೂಲ ಅಧಿನಿಯಮದ 44ನೇ ಪ್ರಕರಣದಲ್ಲಿ (2) ನೇ ಉಪ-ಪ್ರಕರಣವನ್ನು ಲೋಪಿಸತಕ್ಕುದು.

4. **160ನೇ ಪ್ರಕರಣದ ತಿದ್ದುಪಡಿ** :- ಮೂಲ ಅಧಿನಿಯಮದ 160ನೇ ಪ್ರಕರಣದಲ್ಲಿ -

(i) ಮೊದಲನೇ ಪರಂತುಕವನ್ನು ಲೋಪಿಸತಕ್ಕುದ್ದು ;

(ii) ಎರಡನೇ ಪರಂತುಕದಲ್ಲಿ, "ಮತ್ತು ಪರಂತು" ಎಂಬ ಪದಗಳಿಗೆ "ಪರಂತು" ಎಂಬ ಪದವನ್ನು ಪ್ರತಿಸ್ಥಾಪಿಸತಕ್ಕುದು.

5. **272 ಬಿ. ಹೊಸ ಪ್ರಕರಣ ಸೇರ್ಪಡೆ** :- ಮೂಲ ಅಧಿನಿಯಮದ 272ಎ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕುದು ಎಂದರೆ :-

"272 ಬಿ. ಜಿಲ್ಲಾ ಪರಿಷತ್ತಿನ ಸದಸ್ಯರ ಪದಾವಧಿಯ ಮುಕ್ತಾಯದ ತರುವಾಯ ಆಡಳಿತಗಾರನ ನೇಮಕಾತಿ. – (1) ಜಿಲ್ಲಾ ಪರಿಷತ್ತಿನ ಹೊರ ಹೋಗುವ ಸದಸ್ಯರ ಪದಾವಧಿಯು ಮುಕ್ತಾಯವಾಗಿದ್ದರೆ ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಹೊಸ ಜಿಲ್ಲಾ ಪರಿಷತ್ತನ್ನು ರಚಿಸಲಾಗಿರದಿದ್ದರೆ, ಸರ್ಕಾರವು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗೆ ಒಬ್ಬ ಆಡಳಿತಗಾರರನ್ನು ನೇಮಕ ಮಾಡತಕ್ಕುದು ಮತ್ತು ಅಂಥದೇ ಅಧಿಸೂಚನೆಯ ಮೂಲಕ ಅಂಥ ನೇಮಕಾತಿಯ ಅವಧಿಯನ್ನು ಮೊಟಕುಗೊಳಿಸಬಹುದು ಅಥವಾ ವಿಸ್ತರಿಸಬಹುದು.

(2) (1) ನೇ ಉಪ-ಪ್ರಕರಣದ ಅಡಿಯಲ್ಲಿ ಆಡಳಿತಗಾರನನ್ನು ನೇಮಕ ಮಾಡದ ಮೇಲೆ ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಮತ್ತು ಜಿಲ್ಲಾ ಪರಿಷತ್ತು ಮತ್ತು ಅದರ ಸಮಿತಿಗಳ ಎಲ್ಲ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಅಂಥ ಆಡಳಿತಗಾರನು ಚಲಾಯಿಸತಕ್ಕುದು ಮತ್ತು ನೆರವೇರಿಸತಕ್ಕದು"

6. **ನಿರಸನ ಮತ್ತು ಉಳಿಸುವಿಕೆಗಳು** :- (1) ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ಅಧ್ಯಾದೇಶ, 1992 (1992 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 1) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನಗೊಳಿಸಿದಾಗ್ಯೂ ಸದರಿ ಅಧ್ಯಾದೇಶದಿಂದ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದನ್ನೂ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದಿಂದ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲ್ಪಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಿಗೆ ಸಂಬಂಧಪಟ್ಟ ಶಾಸನದ ವಿಷಯದಲ್ಲಿ ಉದ್ದೇಶಿಸಲಾದ ಮಾರ್ಪಾಟುಗಳನ್ನು ಮಾಡಿ ಅಧಿನಿಯಮಿಸಿದ ತರುವಾಯ ಜಿಲ್ಲಾ ಪರಿಷತ್ತುಗಳಿಗೆ ಆಡಳಿತಗಾರರನ್ನು ನೇಮಿಸುವುದು ಮತ್ತು ಚುನಾವಣೆಗಳನ್ನು ನಡೆಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ತದನುಸಾರವಾಗಿ, ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ಅಧ್ಯಾದೇಶ, 1992ನ್ನು ಪ್ರಖ್ಯಾಪಿಸಲಾಯಿತು.

ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ತರಲು ಪ್ರಸ್ತಾವಿಸಲಾಗಿದೆ,

ಆದ್ದರಿಂದ ವಿಧೇಯಕ.

ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ.

+ ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಸನ್ಮಾನ್ಯ ಉಪಾಧ್ಯಕ್ಷರೇ, ಸೋಮವಾರ ಆಯವ್ಯಯದ ಸಾಮಾನ್ಯ ಚರ್ಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿತ್ತು ಮತ್ತು ಸೋಮವಾರವೇ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಈಗಾಗಲೇ ತಮಗೆ ತಿಳಿದ ಪ್ರಕಾರ, ಕಳೆದ ವರ್ಷ ಆಯವ್ಯಯದ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಲಿಲ್ಲವೆಂದು ದೂರುಗಳು ಬಂದಮೇಲೆ, ನಾವು ಮಾರ್ಚಿಯಲ್ಲಿ ಆಯವ್ಯಯದ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕು, ಏನಾದರೂ ಬಿಲ್ಲುಗಳು, ಮಸೂದೆಗಳು ಬಂದರೆ, ಅವುಗಳನ್ನು ಏಪ್ರಿಲ್ ತಿಂಗಳಲ್ಲಿ ಮಾಡಬೇಕೆಂಬ ಅಂದಾಜಿನಲ್ಲಿ ಎರಡು ಕಡೆಯವರಿಗೂ ಅವಕಾಶ ಕೊಡಬೇಕೆಂದು ನಿಗದಿಗೊಳಿಸಲಾಗಿತ್ತು. ಆದರೆ ಈಗ ನಮ್ಮ ಕಾರ್ಯಕ್ರಮವೆಲ್ಲಾ ಅಡಿಮೇಲಾಗುತ್ತಿದೆ. ಏಕೆಂದರೆ ಮೊನ್ನೆ ಈ ಬಗ್ಗೆ ಬಜೆಟ್ ಲೀಕೇಜ್ ಆಗಿದೆ ಎಂಬ ಒಂದು ನೆಪ ಇದೆ. ಬಜೆಟ್ ಲೀಕೇಜ್ ಬಗ್ಗೆ ಎವಿಡೆನ್ಸ್ ಇಲ್ಲದಿದ್ದರೂ ಕೂಡ, ಬಹಳ ಎಕ್‌ಸ್ಟ್ರಾರ್ಡಿನರಿ ಪವರ್‌ನ್ನು ಅಧ್ಯಕ್ಷರು ಉಪಯೋಗ ಮಾಡಿ ಸದನದ ಇತಿಹಾಸದಲ್ಲೇ ಇದು ಇಲ್ಲ, ಅದನ್ನು ಉಪಯೋಗ ಮಾಡಿ, ಒಂದು ರೆಸಲ್ಯೂಷನ್ ಅಲೋ ಮಾಡಬೇಕೆಂದು ಚರ್ಚೆ ಮಾಡಿ, ಅದನ್ನು ಮಾಡಿದ್ದಾರೆ. It is most extraordinary in the history of Legislature in the Country. I have to verify some of the proceedings. ಇದನ್ನು ಮಾಡತಕ್ಕದ್ದು ಕೂಡಾ, ವಿರೋಧ ಪಕ್ಷದ ನಾಯಕರು ಈ ಸದನದ ಕಾರ್ಯ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಹೇಳಿ, ಈ ಸದನ ಅವಕಾಶ ಮಾಡಿಕೊಟ್ಟಿದೆ. ಸಬೆಯನ್ನು ಅಡ್ಜರ್ನ್ ಮಾಡಿದರೂ ಪರವಾಗಿಲ್ಲ, ಮಧ್ಯಾಹ್ನ ಸೇರೋಣ, ಏತನ್ಮಧ್ಯೆ ನಾವು ಚರ್ಚೆ ಮಾಡೋಣ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಏತನ್ಮಧ್ಯೆ ತಾವೂ ಬಹಳ ಪ್ರಯತ್ನ ಮಾಡಿದಿರಿ, ಅವರನ್ನು ಕರೆಸಬೇಕು, ಸಮಾಲೋಚನೆ ಮಾಡಿಸಬೇಕು, ಏನು ವಿಚಾರ ಇದೆ ಕೇಳಬೇಕು, ತಮ್ಮ ಚೇಂಬರ್‌ನಲ್ಲಿ ಇದನ್ನು ಮಾಡಬೇಕೆಂದು ಬಹಳ ಪ್ರಯತ್ನ ನಡೆಯಿತು. ಆದರೂ ಕೂಡ ನಿನ್ನೆ ಅವರು ಬರಲಿಲ್ಲ, ನಿನ್ನೆ ಸಂಜೆ ನಿನ್ನೆ ರಾತ್ರಿ ಕೂಡ ನಾವೆಲ್ಲ ಇದಕ್ಕೆ ಸಿದ್ಧರಿದ್ದೆವು. ಇವತ್ತೂ ಕೂಡ ಬೆಳಿಗ್ಗೆ 9 ಗಂಟೆಗೆ ಬರಬೇಕೆಂದು ಎಲ್ಲರಿಗೂ ತಿಳಿಸಿದ್ದೆವು. ಇವತ್ತು ಶನಿವಾರ ಅಧಿವೇಶನ ನಡೆಯಬೇಕೆಂಬ ನಿರ್ಣಯವನ್ನು ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾಡಿದ್ದು. ಅದು ಎಲ್ಲರ ಗಮನಕ್ಕೂ ಬಂದ ವಿಚಾರ. ಇವತ್ತು ಸಭೆ ಸೇರುವುದು ಇದೆ, ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ನಡೆಯಬೇಕಾಗಿತ್ತು. ಈ ಒಂದು ಭೇಡಿಕೆಯನ್ನು ವಿರೋಧ ಪಕ್ಷದ ಸನ್ಮಾನ್ಯ ನಾಯಕರು ಉಪಯೋಗ ಮಾಡಿಕೊಂಡು ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸತಕ್ಕಂಥ ಒಂದು ಸದವಕಾಶ ಅವರಿಗೆ ಇತ್ತು. ಇವತ್ತೂ ಕೂಡ ಎಂದಿನಂತೆ ಎಲ್ಲರೂ 9 ಗಂಟೆಗೆ ಬಂದು ಕಾದು ನಿಂತಿದ್ದೆವು. ನೀವೆಲ್ಲಾ ಕಾಯುತ್ತಿದ್ದೀರಿ. ಇವತ್ತೂ ಕೂಡ ಅವರು ಬರಲಿಲ್ಲ. ಒಂದು ದಿವಸಕ್ಕೆ ಒಂದೊಂದು ನಿಮಷಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಇಮ್ಮ ಸಾರ್ವಜನಿಕ ಸಂಪನ್ಮೂಲವನ್ನು ಉಪಯೋಗ ಮಾಡಿಕೊಂಡು ನಾವು ಇಲ್ಲಿ ಕುಳಿತುಕೊಳ್ಳತಕ್ಕದ್ದು ತಮಗೆ ಗೊತ್ತಿದೆ. ಎಷ್ಟು ಖರ್ಚಾಗುತ್ತದೆ ಎಂಬುದು ತಮಗೆ ಗೊತ್ತಿದೆ, ಎಷ್ಟು ಜನರ ಸಮಯ, ಅವರ ಒಂದು ಅಮೂಲ್ಯವಾದ ಸಂಪನ್ಮೂಲವನ್ನು ನಾವು ವೆಚ್ಚ ಮಾಡುತ್ತಿದ್ದೇವೆ. ಇಲ್ಲಿ ನಿಮಿಷ ನಿಮಿಷಕ್ಕೂ ಕೂಡಾ ಬೆಲೆ ಇದೆ. That kind of a public sensitivity will have to be maintained as representatives of public. ಆದರೂ ಕೂಡ ನಮ್ಮ ಉದ್ದೇಶ ಏನೆಂದರೆ, ಆಯವ್ಯಯದ ಸಾಮಾನ್ಯ ಚರ್ಚೆಯನ್ನು ಬುಲ್ ಡೋಜ್ ಮಾಡುತ್ತಿದ್ದೇವೆ, ಬೇಡಿಕೆಗಳ ಮೇಲಿನ ಚರ್ಚೆಯನ್ನು ಬುಲ್‌ಡೋಜ್ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯ ಲವಲೇಶವೂ ಕೂಡ ಬರಬಾರದು ಎಂದು ಹೇಳಿ ನಿನ್ನೆ ಕೂಡ ಕಾದಿದ್ದೆವು, ಇವತ್ತೂ ಕೂಡ ಕಾದಿದ್ದೇವೆ. ಸನ್ಮಾನ್ಯ ಮುಖ್ಯಮುಂತ್ರಿಗಳೂ ಕೂಡ ಇವತ್ತು ಕಾಯುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡಬೇಕು, ಅವರ ವಿಚಾರ ಏನೆಂದು ತಿಳಿದುಕೊಳ್ಳಬೇಕು ಮತ್ತು ಸಾಮಾನ್ಯ ಚರ್ಚೆಯನ್ನು ಮುಂದುವರಿಸಬೇಕೆಂಬ ಸದಿಚ್ಛೆಯಿಂದ ನಿನ್ನೆ ಇಡೀ ದಿವಸ ಕಾದಿದ್ದರು. ಈ ದಿವಸ ಸುಮಾರು 10 ಘಂಟೆಯವರೆಗೆ ಕಾದಿದ್ದೇವೆ. ಆದರೆ ಇನ್ನೂ ಬರಲಿಲ್ಲ. ಆದುದರಿಂದ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯವನ್ನು ತಿಳಿದುಕೊಂಡು ಸಭೆಯನ್ನು ಮುಂದುವರಿಸಬೇಕೆಂದು ನಾನು ತಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ.

SRI QUMARUL ISLAM (Gulbarga) :– Madam Deputy Speaker, I have already given a suggestion that all the Floor Leaders may be called to your Chamber to discuss regarding participation of the Janata Dal Members in the Budget discussion. I wanted to know what has happended and what efforts have been made by the Government, and after that only I will speak.

+ ಶ್ರೀ. ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು):- ಮಾನ್ಯ ಸಭಾಧ್ಯಕ್ಷರೇ, ನಾನು ಹೊಸದಾಗಿ ಮತ್ತೇನೂ ಹೇಳುವುದಿಲ್ಲ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಮೊಯಿಲಿಯವರು ಏನು ಹೇಳಿದ್ದಾರೆ ಅದನ್ನು ಬಿಟ್ಟು ಹೊಸ ವಿಚಾರಗಳನ್ನು ನಾನು ಏನೂ ಹೇಳುತ್ತಿಲ್ಲ. ಆದರೆ ಸಭಾ ನಾಯಕನಾಗಿ ಮತ್ತೊಂದು ಸಾರಿ ನಾನು ವಿರೋಧ ಪಕ್ಷದ ನಾಯಕರು, ಬೇರೆ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರುಗಳು ಯಾರು ಯಾರು ಬಹಿಷ್ಕಾರದ ಹೆಸರಿನಲ್ಲಿ ಹೊರಗೆ ಉಳಿದಿದ್ದಾರೆ ಅವರಿಗೆ ವಿನಂತಿ ಮಾಡುವ ಕರ್ತವ್ಯ ಇದೆ ಎಂಬ ದೃಷ್ಟಿಯಿಂದ ಎದ್ದು ನಿಂತಿದ್ದೇನೆ. ನಾವು ಮೊನ್ನೆಯಿಂದಲೂ ಕಾಯುತ್ತಿದ್ದೇವೆ. ನಿನ್ನೆಯೂ ಕಾದಿದ್ದೆವು. ನಿನ್ನೆ ನಾವು ತಮಗೆಲ್ಲಾ ತಿಳಿಸಿ, ಅದೇ ರೀತಿ ಸದನದಲ್ಲೂ ಕೂಡ ವಿನಂತಿ ಮಾಡಿಕೊಂಡಿದ್ದವು, ತಾವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡಿರುತ್ತೀರಿ. ಅವರಿಗೆಲ್ಲಾ ತಿಳಿಸಿ ಕರೆಯತಕ್ಕಂಥ ಏರ್ಪಾಡು ಮಾಡತಕ್ಕದ್ದು, ಮತ್ತು ಮಾತುಕತೆಗೆ ನಾವು ಸಿದ್ಧವಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಮಾನ್ಯ ಮೊಯ್ಲಿಯವರು ಬಂದ ಮೇಲೂ ಕೂಡ ಮಾತುಕತೆಗೆ ಅವರೂ ಕಾದಿದ್ದರು, ನಾನೂ ಕಾದಿದ್ದೆ. ಸಂಬಂಧಪಟ್ಟವರಷ್ಟೂ ನಾವು ಸರ್ಕಾರದವತಿಯಿಂದ ಕಾದಿದ್ದೆವು. ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡತಕ್ಕಂಥ ಸಿದ್ಧತೆಯನ್ನು ಮಾಡಿಕೊಂಡು ಕಾದು ಕಾದು ನಾವು ಬೇಸತ್ತಿದ್ದೇವೆ. ಆದರೂ ಕೂಡ ಇವತ್ತು ಸಂಸದೀಯ ವ್ಯವಹಾರದಲ್ಲಿ ಹೋಗಲಿ, ನಮಗೆ ಈ ತೊಂದರೆ ಇದೆ, ನಮಗೆ ಬರುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ವಿಚಾರವನ್ನು ಅವರು ತಮ್ಮ ಗಮನಕ್ಕೆ ತಂದಿದ್ದರೆ ಆ ವಿಚಾರ ಪ್ರತ್ಯೇಕ. ಆದರೆ ತಮ್ಮ ಗಮನಕ್ಕೂ ತಂದಿಲ್ಲ ಎನ್ನತಕ್ಕಂಥ ವಿಚಾರ ನಮಗೆ ಗೊತ್ತಾಗಿರತಕ್ಕಂಥಾದ್ದು. ಹೋಗಲಿ, ನಮಗಾದರೂ ಹೇಳಬೇಕಾಗಿತ್ತು. ಏಕೆಂದರೆ, ಎಷ್ಟೋ ಸಾರಿ ಸಂಸದೀಯ ವ್ಯವಹಾರದಲ್ಲಿ ಇವೆಲ್ಲಾ ನಡೆವಳಿಕೆಗಳು ಬರುತ್ತವೆ. ಸರ್ಕಾರಕ್ಕೆ ಸಂಪರ್ಕ ಬೆಳೆಸಿ ನಮಗೆ ಈ ರೀತಿ ತೊಂದರೆಯಾಗಿದೆಯೆಂದು ಅಥವಾ ತಮಗಾದರೂ ಸಂಪರ್ಕ ಬೆಳಸಿ ಈ ರೀತಿ ಇದೆ, ನಮಗೆ ಬರುವುದಕ್ಕೆ ತೊಂದರೆ ಇದೆ, ಎನ್ನತಕ್ಕಂಥ ಮಾತನ್ನು ಹೇಳಿದ್ದರೆ ಅವರು ಹೇಳಿದ್ದರಲ್ಲಿ ಸಕಾರಣವಾಗಿದ್ದರೆ, ನಿಜವಾಗಿಯೂ ಒಪ್ಪತಕ್ಕಂಥ ಕಾರಣ ಅಲ್ಲಿ ಏನಾದರೂ ಇದ್ದರೆ ಅದನ್ನು ಕೂಡ ಒಪ್ಪಬಹುದಾಗಿತ್ತು. ಇವತ್ತು ಅವರು ತೆಗೆದುಕೊಂಡಿರತಕ್ಕಂಥ ನಿಲುವು ಏನಿದೆ ಆ ನಿಲುವು ಸರಿಯಾಗಿರತಕ್ಕಂಥಾದ್ದೇ? ಇವತ್ತು ಅವರೇ ವಿಚಾರ ಮಾಡಲಿ ಅವರನ್ನು ಬಿಟ್ಟು ನಾವು ವ್ಯವಹಾರ ಮಾಡಬೇಕು, ನಡೆವಳಿಕೆಗಳನ್ನು ತೆಗೆದುಕೊಂಡು ಮುಂದಕ್ಕೆ ಹೋಗಬೇಕು ಎನ್ನತಕ್ಕಂಥ ವಿಚಾರ ಏನೂ ನಾವು ಮಾತನಾಡಿಲ್ಲ. ಅವರಲ್ಲಿ ನಾವು ವಿನಂತಿ ಮಾಡಿ ಮಾಡಿ, ಅವರು ಬರಬೇಕು ಎಂದು ಆಹ್ವಾನ ಕೊಟ್ಟರೂ ಕೂಡ ಅವರು ಬರುವುದಕ್ಕೆ ಸಿದ್ಧವಾಗಿಲ್ಲ ಎಂದರೆ, ಹಾಗಾದರೆ ಅವರ ಗುರಿ ಏನು ಎನ್ನತಕ್ಕಂಥಾದ್ದು ಕರ್ನಾಟಕ ರಾಜ್ಯದ ಜನತೆಗೂ ಸ್ವಲ್ಪ ಗೊತ್ತಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಕೂಡ ನಾನು ಈ ಮಾತನ್ನು ಹೇಳುತ್ತೇನೆ. ವಿರೋಧಪಕ್ಷದ ಮಿತ್ರರು ಒಂದು ಕಾರಣ ಕೊಟ್ಟಿದ್ದಾರೆ, ಬಜೆಟ್ ಭಾಷಣ ವಿರೋಧ ಪಕ್ಷದವರ ಹಕ್ಕು, ಯಾರು ಬೇಡ ಎಂದು ಹೇಳಿದರು? ನಾನು ನಿನ್ನೆಯ ದಿವಸವೇ ಹೇಳಿದ್ದೇನೆ. ಅವರಿಗಾಗಿ ನಾವು ಕಾದಿದ್ದೇವೆ, ಇಡೀ ಸದನ ಕಾದಿದೆ, ತಾವೂ ಕಾದಿದ್ದೀರಿ. ಇನ್ನೂ ಬರಲಿಲ್ಲ ಎಂದರೆ ನಾವೇನು ಮಾಡಬೇಕು ? ಈ ಸದನ ಏನು ಮಾಡಬೇಕು? ಮತ್ತು ತಾವೇನು ಮಾಡಬೇಕು? ಅದು ಅಲ್ಲದೆ ಸುಮ್ಮ ಸುಮ್ಮನೇ ನಮಗೋಸ್ಕರ ಇಡೀ ಸದನ ಕಾಯುತ್ತಿರಬೇಕಾದರೆ ಅದರ ಅರ್ಥವೇನು ಆಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ಅದೇನೇ ಇರಲಿ, ಎಷ್ಟೇ ವಿಚಾರ ಇದ್ದರೂ ಕೂಡ ಈ ಸದನದ ಹಲವಾರು ಭಾಗಗಳಲ್ಲಿ ನಾವು ಕೂಡ ಒಂದು ಭಾಗವಾಗಿದ್ದೇವೆ, ಎನ್ನತಕ್ಕಂಥ ಮೂಲ ನಂಬಿಕೆಯನ್ನು ಕಳೆದುಕೊಂಡರೆ ಬಹಳ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರಲ್ಲಿ ಪುನಃ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಇಷ್ಟರೊಳಗೆ ಬರಬೇಕಾಗಿತ್ತು, ಬಂದು ಮಾತುಕತೆ ಆಡಿ, ವಿಚಾರ ವಿನಿಮಯ ಮಾಡಿಕೊಂಡು ಯಾವ ರೀತಿಯಾಗಿ ಇರಬೇಕು

ಎನ್ನತಕ್ಕಂಥ ವಿಚಾರದಲ್ಲಿ, ಯಾವ ತೀರ್ಮಾನ ಮಾಡಬೇಕು ಎನ್ನತಕ್ಕಂಥಾದ್ದರ ಮುಖಾಂತರ ಈ ವಿಚಾರದಲ್ಲಿ ಸ್ಪಷ್ಟವಾಗಿ ಇರತಕ್ಕಂಥ ನಿಲುವು ನಮ್ಮ ಮುಂದೆ ನಿಮ್ಮ ಮುಂದೆ ಸದನದ ಮುಂದೆ ಇದೆ. ಆಲ್ ರೈಟ್ ಇವತ್ತು ನಮ್ಮನ್ನು ಕಂಡು ಮಾತನಾಡುವುದಕ್ಕೆ ಅವರಿಗೆ ಮನಸ್ಸಿಲ್ಲ ಎನ್ನುವುದಾದರೆ ಪಕ್ಷ ತಮ್ಮನ್ನಾದರೂ ಕಾಣಬೇಕಾಗಿತ್ತಲ್ಲ, ಏಕೆಂದರೆ ತಾವು ಇವತ್ತು ಪಕ್ಕಾತೀತವಾಗಿ ಅಲ್ಲಿ ಕುಳಿತುಕೊಂಡಿದ್ದೀರಿ. ಕೊನೆಯ ಪಕ್ಷ ಈ ಸದನಕ್ಕಾದರೂ ಬಂದು ತಮ್ಮ ನಿಲುವನ್ನು ಹೇಳಬಹುದಾಗಿತ್ತಲ್ಲ. ಆಲ್‌ರೈಟ್ ನಮ್ಮನ್ನು ಕಾಣುವುದಕ್ಕೆ ಮನಸ್ಸು ಇಲ್ಲ ಅಥವಾ ನಿಮ್ಮನ್ನು ಕಾಣುವುದಕ್ಕೆ ಮನಸ್ಸು ಇಲ್ಲವೆಂದರೆ, ಈ ಸದನಕ್ಕೆ ಬಂದು ಹೇಳತಕ್ಕಂಥ ಹಕ್ಕು ಮಾನ್ಯ ಸದಸ್ಯರಿಗೆ ಇದೆ. ಅದನ್ನಾದರೂ ಕೂಡ ಅವರು ಪ್ರಾಯೋಗಿಕವಾಗಿ ಮಾಡುವುದಕ್ಕೆ ತಯಾರು ಇಲ್ಲ. ಇದು ಯಾವುದೂ ನಮಗೆ ಅರ್ಥವಾಗದೆ ಇರತಕ್ಕಂಥ ವಿಚಾರ. ಇವತ್ತು ಏನಾಗಿದೆ? ಆಲ್ ರೈಟ್ ನಾವು ಕಾಯುತ್ತಿರುವುದರ ಅರ್ಥ ಏನು? ಪ್ರಜಾಪ್ರಭುತ್ವದಲ್ಲಿ ನಡೆವಳಿಕೆಗಳು ನಡೆಯುತ್ತಿರುತ್ತವೆ. ಒಂದು ಕಾಯ್ದೆಯ ಇತಿಮಿತಿಯಲ್ಲಿ ಏನಿದೆ ಎನ್ನತಕ್ಕಂಥಾದ್ದು ಗಮನಕ್ಕೆ ಬಂದಾಗ ಇವೆಲ್ಲಾ ನಡೆಯುತ್ತವೆ. ಅಷ್ಟಾದರೂ ಕೂಡ ಕಾಯತಕ್ಕಂಥ ಸಹನೆ ನಮ್ಮದು ದೊಡ್ಡದಾಗಿದೆ. ಆ ಸಹನೆ ನಾವು ಇನ್ನೂ ಇಟ್ಟುಕೊಂಡಿದ್ದೇವೆ. ಏಕೆಂದರೆ, ವಿರೋಧ ಪಕ್ಷಗಳು ಈ ಸದನದ : ಅವಿಭಾಜ್ಯ ಅಂಗ. ಅದರ ಪಾತ್ರ ಬಲು ದೊಡ್ಡದು. ನಾವು ಸದಾಕಾಲ ಅವರಿಗೆ ಗೌರವ ಕೊಟ್ಟಿದ್ದೇವೆ. ನಾವು ಅಲ್ಲಿದ್ದಾಗ ಅದನ್ನೇ ಪಡೆದಿದ್ದೇವೆ. ನಾವು ಅಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೇವೆ. ನಾವು ಕೂಡ ಬಹಿಷ್ಕಾರ ಹಾಕಿದ್ದೇವೆ. ಆದರೆ ಕರೆದಾಗ ಮಾತುಕತೆಗೆ ಬಂದಿದ್ದೇವೆ. ನಾವು ಮಾತುಕತೆಗೆ ಬರುವುದಿಲ್ಲ ಎನ್ನತಕ್ಕಂಥ ನಿಲುವನ್ನು ತೆಗೆದುಕೊಂಡಿರತಕ್ಕಂಥಾದ್ದನ್ನು ಕಳೆದ 25 ವರ್ಷಗಳ ಸದನದ ಅನುಭವದಲ್ಲಿ ನಾನು ಒಂದು ಸಾರಿಯೂ ಕೂಡ ಕಂಡಿಲ್ಲ. ನಾವು ಏನೋ ಬರುವುದಿಲ್ಲ ಎಂದು ಹೇಳಿರಬಹುದು. ಆದರೆ ಮಾರನೇ ದಿವಸ ಮಾತುಕತೆ ಮಾಡತಕ್ಕಂಥಾದ್ದರಲ್ಲಿ ವಿಧಿವಿಧಾನಗಳ ಚೌಕಟ್ಟಿನಲ್ಲಿ ಮಾತುಕತೆಗೆ ಉಭಯ ಮಾತುಕತೆಗೆ ಬಂದಿದ್ದೇವೆ. ಇವೆಲ್ಲಾ ನಡೆಯತಕ್ಕಂಥ ಸಂದರ್ಭಗಳಿವು. ನಾವು ಇತ್ತಲಾಗಿ ದೂರವಾಣಿ ಮೂಲಕ ಹೇಳಿದರೂ ಬರುವುದಿಲ್ಲ, ಹೇಳಿ ಕಳುಹಿಸಿದರೂ ಬರುವುದಿಲ್ಲ, ಅಥವಾ ಸದನಕ್ಕೆ ಬರುವುದಿಲ್ಲ ಏನೂ ಇಲ್ಲ, ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ವಿರೋಧಪಕ್ಷಗಳ ಬಗ್ಗೆ ಮತ್ತು ಅವರ ಪಾತ್ರದ ಬಗ್ಗೆ ಗೌರವ ಕೊಟ್ಟಿರತಕ್ಕಂಥವರು ನಾವು. ಅವರು ವಿಚಾರ ಮಾಡಿ ಈಗಲೂ ಕೂಡ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದು, ಮಾನಸಿಕವಾಗಿ ನಮ್ಮನ್ನು ಸಂಪರ್ಕ ಮಾಡಬಹುದು, ನಿಮ್ಮನ್ನಾದರೂ ಸಂಪರ್ಕ ಮಾಡಬಹುದು. ಮಾನ್ಯ ಅಧ್ಯಕ್ಷರೇ, ತಮ್ಮ ಸಂಪರ್ಕ ಬೆಳೆಸಿ ನಾವೆಲ್ಲ ಮಾತುಕತೆಗೆ ಬರುತ್ತೇವೆ. ಅವರ ಷರತ್ತುಗಳು ಏನೇನು? ಬಹಿಷ್ಕಾರ ಹಾಕುವುದಕ್ಕೆ ಏನು ಕಾರಣ? ಅವರು ಬಾರದೇ ಇರುವುದಕ್ಕೆ ಏನು ಕಾರಣ? ಏನು ಷರತ್ತುಗಳು, ಏನು ವಿಚಾರ ಎನ್ನತಕ್ಕಂಥಾದ್ದನ್ನು ಕೂಡ ಈ ದೇಶದ ಜನಗಳಿಗೆ ಗೊತ್ತಾಗಲಿ. ಅದು ಕೂಡ ಗೊತ್ತಾದರೆ, ಈ ರೀತಿಯಾಗಿ ಇರತಕ್ಕಂಥಾದ್ದನ್ನು ಏನಾದರೂ ಮಾಡದಿದ್ದರೆ ಇದು ಶೋಭಾಯಮಾನವಾಗಲಾರದು. ಇಷ್ಟಾದರೂ ಕೂಡ ಇವತ್ತು ಅವರು ಸದನಕ್ಕೆ ಬೇಕು. ವಿರೋಧ ಪಕ್ಷಗಳು ಸದನದ ಒಂದು ಅವಿಭಾಜ್ಯ ಅಂಗ ಎಂದು ಆಗಲೇ ನಾನು ಮಾತನಾಡಿದ್ದೇನೆ. ಅವರು ಅವಿಭಾಜ್ಯ ಅಂಗ: ಸದನಕ್ಕೆ ಬರಬೇಕು. ಆಯವ್ಯಯ ಪತ್ರ ಎನ್ನತಕ್ಕಂಥಾದ್ದು ಬಹಳ ದೊಡ್ಡ ವಿಚಾರ. ಇಡೀ ರಾಜ್ಯದ ಮುಂದಿನ ಆರ್ಥಿಕ ವರ್ಷದ ದಿಕ್ಸೂಚಿಯನ್ನು ಸೂಚಿಸತಕ್ಕಂಥ ವಿಚಾರ. ನಿನ್ನೆ ನಾನು ಹೇಳಿದ ಹಾಗೆ, ಹಲವಾರು ವಿಷಯಗಳ ಮೇಲೆ ಬೆಳಕನ್ನು ಚೆಲ್ಲತಕ್ಕಂಥ, ಒಂದು ಹಿರಿಮೆಗಳಿಸತಕ್ಕಂಥ, ಆದ್ಯ ಕರ್ತವ್ಯ, ಮೂಲಭೂತ ವಿಚಾರ, ಹಕ್ಕಿನ ಪ್ರಶ್ನೆ, ಅದರ ಚಲಾವಣೆ, ಇದೆಲ್ಲಾ ಅದರಲ್ಲಿ ಅಡಗಿದೆ. ಆದ್ದರಿಂದ ಇದನ್ನು ಅವರು ಸಂಪೂರ್ಣ ಮಾಡಬೇಕು ಎಂದು ನಾನು ಕಳಕಳಿಯ ವಿನಂತಿಯನ್ನು ಮಾಡುತ್ತಿದ್ದೇನೆ. ಇವತ್ತು ತಾವು ಅವರನ್ನು ಪುನಃ ಕರೆಸತಕ್ಕಂಥ ಪ್ರಯತ್ನವನ್ನು ಮಾಡಿ. ಅವರಿಗೆ ತಾವು ಎಲ್ಲಾ ಇನ್‌ಫರ್ಮೇಷನ್‌ಗಳನ್ನು ಕಳುಹಿಸಿಕೊಡಿ. ನಾವು ಕೂಡ ಅವರ ಸಂಪರ್ಕವನ್ನು ಬೆಳೆಸತಕ್ಕಂಥ ಪ್ರಯತ್ನ ಮಾಡುತ್ತೇವೆ. ಬರೀ ನಿಮ್ಮ ತಲೆ ಮೇಲೆ ಜವಾಬ್ದಾರಿಯನ್ನು ಹೊರಿಸುವುದಕ್ಕೆ ನಾವು ಕೂಡ ತಯಾರಾಗಿಲ್ಲ. ನಾವು ಕೂಡ ಅವರ ಸಂಪರ್ಕವನ್ನು ಬೆಳೆಸತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಸಂಸದೀಯ ವ್ಯವಹಾರಗಳ ಸಚಿವರು ಆ ಕೆಲಸ ಮಾಡುತ್ತಾರೆ. ದಯವಿಟ್ಟು ಅವರು ಮಾತುಕತೆಗೆ ಬರಬೇಕು ಎನ್ನತಕ್ಕಂಥ ಮಾತನ್ನು ನಾನು ಆಡುತ್ತೇನೆ. ಅದನ್ನು ಅವರಿಗೆ ತಿಳಿಸುತ್ತೇನೆ. ಅವರು ಈಗಲಾದರೂ ಬಂದರೆ ಮಾತುಕತೆ ಮುಖಾಂತರ ಬಗೆಹರಿಸೋಣ. ಅವರು ಬಂದು ಕಾರ್ಯಕಲಾಪಗಳನ್ನು ನಡೆಸಲಿ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಅವರು

ಬರಬಾರದು ಎನ್ನತಕ್ಕಂಥ ಅಭಿಪ್ರಾಯ ನಮ್ಮದಲ್ಲ, ಅವರು ಬಂದು ವಿಚಾರ ಹೇಳಬಾರದು ಎನ್ನತಕ್ಕಂಥ ಅಭಿಪ್ರಾಯ ನಮ್ಮದಲ್ಲ, ಅವರು ಬಂದು ಏನು ಹೇಳಬೇಕಾದರೂ ಹೇಳುವುದಕ್ಕೆ ಹಕ್ಕಿದೆ. ಆ ಹಕ್ಕು ಪ್ರತಿಪಾದನೆಯಲ್ಲಿ ನಡೆದರೆ, ಆ ಸಂತೋಷದಲ್ಲಿ ಅವರು ಭಾಗಿಯಾದರೆ, ಅಷ್ಟೇ ಹೆಚ್ಚಿನ ಸಂತೋಷದಿಂದ ನಾವೂ ಭಾಗಿಯಾಗುತ್ತೇವೆ. ಹೇಳತಕ್ಕಂಥ ವಿಚಾರ, ನಮಗೆ ಆಪ್ಯಾಯಮಾನ ಆಗಬಹುದು ಅಥವಾ ಆಗದೇ ಇರಬಹುದು. ಅದು ಪ್ರತ್ಯೇಕ ವಿಚಾರ. ಹಾಗೆ ಹೇಳತಕ್ಕಂಥ ಮೂಲಭೂತ ಹಕ್ಕು ಏನಿದೆಯಲ್ಲಾ, on the eve of French Revolution ವಾಲ್ಟೇರ್ ಒಂದು ಮಾತನ್ನು ಹೇಳಿದ. ಅದು ನನಗೆ ನೆನಪು ಬರುತ್ತಿದೆ. ಅವನು ಏನು ಹೇಳಿದ ಅಂದರೆ, ನನ್ನ ಅಭಿಪ್ರಾಯ ಭಿನ್ನವಾಗಿರಬಹುದು, ನೀವು ಹೇಳತಕ್ಕಂಥ ಅಭಿಪ್ರಾಯ ಭಿನ್ನವಾಗಿರಬಹುದು. ಆದರೆ ನಿಮಗೆ ಹೇಳತಕ್ಕಂಥ ಹಕ್ಕು ಇದೆ ಎನ್ನತಕ್ಕಂಥಾದ್ದನ್ನು ನಾನು ಮಾನ್ಯತೆ ಮಾಡುತ್ತೇನೆ ಎನ್ನತಕ್ಕಂಥ ಮಾತು ಉದ್ಭವವಾಗಿದ್ದೇ ವಾಲ್ಟೇರ್ ಕಾಲದಿಂದಲೇ. ಇದು ಫ್ರೆಂಚ್ ರೆವೆಲ್ಯೂಷನ್ ಆಗುವುದಕ್ಕಿಂತ ಮುಂಚೆ ನಡೆದಿರತಕ್ಕಂಥ ವಿಚಾರ. ಆದ್ದರಿಂದ ಅವರ ಅಭಿಪ್ರಾಯ ಒಪ್ಪುವುದು ಬಿಡುವುದು ಸದಸದ ಮಾನ್ಯ ಸದಸ್ಯರಿಗೆ, ಸರ್ಕಾರಕ್ಕೆ ಬಿಟ್ಟಿರತಕ್ಕಂಥ ವಿಚಾರ. ನಾವು ಎಷ್ಟೋಸಾರಿ ಅವರ ಅಭಿಪ್ರಾಯವನ್ನು ಒಪ್ಪಿಕೊಂಡದ್ದೇವೆ ; ಒಪ್ಪಿಕೊಂಡು ಮುಂದಕ್ಕೆ ಹೋಗಿದ್ದೇವೆ. ಆದರೆ, ಒಪ್ಪಲಿ ಬಿಡಲಿ, ಆ ಹಕ್ಕು ಇದೆಯಲ್ಲ ಆ ಹಕ್ಕನ್ನು ನಾವು ಮಾನ್ಯತೆ ಮಾಡುತ್ತೇವೆ. ಇದು ಸಂಸದೀಯ ವ್ಯವಹಾರದ ಲಕ್ಷಣ. ಇದನ್ನು ಮನಗಂಡು ಅವರೆಲ್ಲಾ ಸದನಕ್ಕೆ ಬರಬೇಕು, ಬಂದು ಹಕ್ಕನ್ನು ಚಲಾವಣೆ ಮಾಡಬೇಕು, ಇಲ್ಲಿಯ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎನ್ನತಕ್ಕಂಥ ಒಂದು ಸದಾ ವಿನಂತಿಯನ್ನು ನಾನು ಮಾಡುತ್ತೇನೆ. ಇದಕ್ಕಿಂತ ಹೆಚ್ಚಿನ ವಿನಂತಿಯನ್ನು ಮಾಡುವುದಕ್ಕೆ ನಮ್ಮಿಂದಲೂ ಆಗುವುದಿಲ್ಲ. ಈ ವಿನಂತಿಯನ್ನು ತಮ್ಮ ಮುಖಾಂತರ ಮಾಡುತ್ತೇವೆ. ಅವರೆಲ್ಲಾ ಬರಬೇಕು ಎನ್ನತಕ್ಕಂಥ ವಿನಂತಿಯನ್ನು ನಾವು ಮತ್ತೊಮ್ಮೆ ಮಾಡುತ್ತೇವೆ. ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮ್ಮನ್ನು ನಾನು ಅಭಿನಂದಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :- ಮಾನ್ಯ ಉಪಾಧ್ಯಕ್ಷಣಿಯವರೆ, ಪ್ರಜಾಪ್ರಭುತ್ವದಲ್ಲಿ ಮತ್ತು ಸಂಸದೀಯ ವ್ಯವಹಾರಗಳಲ್ಲಿ ಇಂಥ ಪ್ರಸಂಗಗಳು ಅನಿವಾರ್ಯ. ಲೋಕಸಭೆಯಲ್ಲಾಗಲೀ, ರಾಜ್ಯ ಸಭೆಯಲ್ಲಾಗಲೀ, ಭಾರತದ ಇತರೆ ಯಾವುದೇ ರಾಜ್ಯಗಳ ವಿಧಾನಸಭೆಗಳಲ್ಲಾಗಲೀ ಇಂಥ ಪ್ರಸಂಗಗಳು ಅನೇಕ ಸಲ ಬರುತ್ತವೆ. ನಮ್ಮ ವಿಧಾನಸಭೆಯಲ್ಲೂ ಸಹಾ ಅನೇಕ ಸಲ ನಮ್ಮ ವಿರೋಧ ಪಕ್ಷದ ಸದಸ್ಯರು ಧರಣಿ ಮಾಡಿದ್ದಾರೆ ಅಥವಾ ಜಗಳ ಆಡಿದ್ದಾರೆ. ನಮ್ಮ ಆಡಳಿತ ಪಕ್ಷದ ಸದಸ್ಯರಿಗೂ ಅವರಿಗೂ ಚಕಮಕಿ ನಡೆದಿದೆ. ಈ ರೀತಿ ಅನೇಕ ಸಲ ನಡೆದಿದೆ. ಆದರೆ, ಈ ಸಲ ಇವರು ಇಷ್ಟು ಕಠಿಣವಾಗಿ ಏಕೆ ವರ್ತಿಸುತ್ತಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಇದರ ಜೊತೆಗೆ ಅವರ ಒಂದು ಹಕ್ಕು ಇದೆ. ಅವರು ಜನತೆಯ ಪರವಾಗಿ ಸದನದಲ್ಲಿ ಬಂದು ಮಾತನಾಡುವುದು ಅವರ ಹಕ್ಕು. ಏಕೆಂದರೆ, ಮುಂದಿನ ಆರ್ಥಿಕ ವರ್ಷಗಳಲ್ಲಿ ಈ ಆಗುಹೋಗುಗಳು ಅಥವಾ ಸರ್ಕಾರದವರು ಮಾಡಿರುವ ತಪ್ಪುನೆಪ್ಪುಗಳನ್ನು ಅವರು ಎತ್ತಿ ತೋರಿಸಿದರೆ ಅವುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರು ಎತ್ತಿ ತೋರಿಸದಿದ್ದರೆ ಅವರ ಕರ್ತವ್ಯ ಲೋಪವಾಗಿದೆ ಎನ್ನುವುದರಲ್ಲಿ ಯಾವ ಒಂದು ಸಂಶಯ ಇಲ್ಲ, ಅದಕ್ಕೋಸ್ಕರ ನನ್ನ ಮನವಿ ಸಹಾ ಇಷ್ಟೆ. ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ತಾವು ಅಧ್ಯಕ್ಷರು ಹೇಳಿಕಳುಹಿಸಿ. ಏಕೆಂದರೆ, ಸಾಮಾನ್ಯವಾಗಿ ಇಂಥ ಪ್ರಸಂಗಗಳು ರಾಜ್ಯಸಭೆಯಲ್ಲಿ ಮತ್ತು ಲೋಕಸಭೆಯಲ್ಲಿ ಬಂದಾಗ ಅಧ್ಯಕ್ಷರುಗಳು ಆಡಳಿತ ಪಕ್ಷದವರಿಗೆ ಮತ್ತು ವಿರೋಧ ಪಕ್ಷದ ನಾಯಕರುಗಳಿಗೂ ಕರೆ ಕಳುಹಿಸಿ, ಏನಾದರೂ ವ್ಯತ್ಯಾಸಗಳಿದ್ದರೆ ಅವುಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಇವತ್ತು ಜನತೆ ವಾಚ್ ಮಾಡುತ್ತಿದ್ದಾರೆ. ಪಂಚೈರ್ ಸ್ಟೇಟ್‌ನಲ್ಲಿ ಜನ ಇವರು ಏಕಪ್ಪಾ ಹೋಗಿಲ್ಲ ಎನ್ನುತ್ತಿದ್ದಾರೆ. ಏಕೆಂದರೆ ಈಗ ಇವರು ಒಂದು ಫಟ್ಟ ಮುಟ್ಟಿದ್ದಾರೆ. ಇಲ್ಲಿ ಧರಣ ಆಯಿತು, ವಾಕ್‌ಔಟ್ ಆಯಿತು. ರಾಜಭವನಕ್ಕೆ ಹೋದರು. ರಾಜ್ಯಪಾಲರ ಹತ್ತಿರ ಅವರು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಯಾವ ಯಾವ ಲೆವೆಲ್‌ನಲ್ಲಿ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಇನ್ನೇನು ಮಾಡುವುದಿದೆ? ಅವರು ಪುನಃ ಬಂದು ಸರ್ಕಾರದವರು ಮಾಡಿರುವ ತಪ್ಪುನೆಪ್ಪುಗಳನ್ನು ಅಥವಾ ಬಜೆಟ್‌ನಲ್ಲಿ ಏನೇನು ತಪ್ಪು ನೆಪ್ಪುಗಳು ಇವೆ, ಆ ಲೋಪದೋಷಗಳನ್ನು ತೋರ್ಪಡಿಸದಿದ್ದರೆ ಜನತೆಗೆ ಅವರು ತಮ್ಮ ಕರ್ತವ್ಯವನ್ನು ಮಾಡಿದಂತೆ ತೋರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವರಲ್ಲಿ ಏನು ಒಂದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ ಅದಕ್ಕೆ ನಾನೂ ಕೂಡ

ದನಿಗೂಡಿಸುತ್ತಾ ತಾವು ಅದಕ್ಕೆ ಇನಿಷಿಯೇಟೀವ್ ತೆಗೆದುಕೊಂಡು, ಅವರನ್ನು ಕರೆಸಿ ಮಾತನಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷೀಣಿಯವರು :- ಮಾನ್ಯಶ್ರೀ ಕಮರುಲ್ ಇಸ್ಲಾಂರವರು ನಿನ್ನೆ ಈ ಸಭೆ ಮುಗಿದ ಮೇಲೆ ಏನು ನಡೆಯಿತು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಂಡಿದ್ದಾರೆ. ನಿನ್ನೆಯ ದಿನ ಸಭೆಯಲ್ಲಿ ಪಡೆದ ಅಭಿಪ್ರಾಯದ ಹಿನ್ನಲೆಯಲ್ಲಿ ನಮ್ಮ ಕಚೇರಿಯಿಂದ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸಂಪರ್ಕಿಸಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಈ ದಿನ ಬೆಳಿಗ್ಗೆ 9.00 ಗಂಟೆಗೆ ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಅವರೆಲ್ಲರೊಂದಿಗೆ ಮೀಟಿಂಗ್ ಇದೆ ಎಂಬುದನ್ನು ಅವರೆಲ್ಲರಿಗೂ ತಿಳಿಸಬೇಕೆಂದು ಪ್ರಯತ್ನ ಮಾಡಿದ್ದೇವೆ. ಆದರೆ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ. ಬಿ. ಚಂದ್ರೇಗೌಡರು ಮಾತ್ರ ಸಿಕ್ಕಿದರು. ಮತ್ತೆ ಯಾರೂ ನಮಗೆ ಸಿಗಲಿಲ್ಲ. ಆದರೆ ಅವರವರ ಮನೆಯಲ್ಲಿ, ಅವರವರ ಆಫೀಸಿನಲ್ಲಿ ಅವರಿಗೆ ಸಂದೇಶವನ್ನು ಇಡಲಾಯಿತು. ಮಾನ್ಯ ಚಂದ್ರೇಗೌಡರು ಮಾತ್ರ ನನಗೆ ಬೇರೆ ಕಡೆಗೆ ಹೋಗುವ ಕಾರ್ಯಕ್ರಮವಿದೆ, ಮಾನ್ಯ ಬಸವರಾಜ್ ರಾಯರೆಡ್ಡಿಯವರ ಕ್ಷೇತ್ರದಲ್ಲಿ ಯಾವುದೋ ಒಂದು ಕಾರ್ಯಕ್ರಮಕ್ಕೆ ಹಾಜರಿರುತ್ತೇನೆ ಎಂದು ಒಪ್ಪಿಕೊಂಡಿದ್ದೇನೆ, ಅಲ್ಲಿಗೆ ಹೋದರೆ ನಾನು ಇವೊತ್ತು ಬರುವುದಿಲ್ಲ, ಹೋಗದಿದ್ದರೆ ಬರುತ್ತೇನೆ ಎಂದು ಅವರು ಹೇಳಿದರು ಎಂಬ ವಿಷಯ ನನಗೆ ತಿಳಿದಿದೆ. ಇವತ್ತು ಬೆಳಿಗ್ಗೆ 9.00 ಗಂಟೆಯಿಂದ 10.15 ಗಂಟೆಯ ತನಕ ನಾನು, ಮಾನ್ಯ ಮುಖ್ಯಮಂತ್ರಿಯವರು ಮತ್ತು ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ಅವರಿಗೋಸ್ಕರ ಕಾಯುತ್ತಾ ಇದ್ದೆವು. ಆದರೆ ಅವರು ಬಾರದಿದ್ದ ಕಾರಣ ನಾವು ಈಗ ಸಭೆ ಕರೆದು ನಡೆಸುತ್ತಾ ಇದ್ದೇವೆ. ಇಷ್ಟು ನಿನ್ನೆಯಿಂದ ನಡೆದ ಸಮಾಚಾರ. ಈಗ ಮಾನ್ಯ ಕಮರುಲ್ ಇಸ್ಲಾಂರವರು ಏನು ಹೇಳಬೇಕೆಂದಿದ್ದರೋ, ಅದನ್ನು ಹೇಳಬಹುದು.

SRI QUMURUL ISLAM :– Madam, Deputy Speakar you were able to contact only the opposition leader, and others were not available for other floor leaders the message has not gone to them.

SRI S. BANGARAPPA :– You were also not there in your residence. But there was a message for you regarding the meeting at 9.00 a.m. ತಾವುಗಳು ಮನೆಯಲ್ಲಿ ಇರಲಿಲ್ಲ, ಆದರೂ ಕೂಡ ತಮಗೆ ಸಂದೇಶವನ್ನು ತಲುಪಿಸಲಾಗಿತ್ತು. ಆದರಿಂದಾಗಿ ತಾನೇ ತಾವುಗಳು ಈಗ 9.00 ಗಂಟೆಗೆ ಮೀಟಿಂಗ್‌ಗೆ ಬಂದಿರುವುದು? ಹಾಗೆಯೇ ಬೇರೆಯವರಿಗೂ ಕೂಡ ಈ ಬಗ್ಗೆ ಸಂದೇಶವನ್ನು ತಲುಪಿಸಲಾಗಿತ್ತು. ತಾವುಗಳು ಬಂದ ಹಾಗೆ ಅವರೂ ಕೂಡ ಬರಬೇಕಾಗಿತ್ತು.

SRI QUMURUL ISLAM :– Just request once again that efforts may be made and till Monday this session may be adjourned.

ಶ್ರೀ ಎಂ. ವೀರಪ್ಪಮೊಯಿಲಿ :- ಮಾನ್ಯ ಉಪಾಧ್ಯಕ್ಷೀಣಿಯವರೆ, ನಿಜವಾಗಿ ನನಗೂ ಕೂಡ ಇವತ್ತು ಬಳ್ಳಾರಿಯಲ್ಲಿ ಒಂದು ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸುವ ಕಾರ್ಯಕ್ರಮವಿತ್ತು. ಹಾಗೆಯೇ ಯಲಬುರ್ಗದಲ್ಲಿ ಕೂಡ ಒಂದು ಕಾರ್ಯಕ್ರಮ ಇತ್ತು. ಆದರೆ ಕೆಲವು ಸಾರಿ ಜೀವನದಲ್ಲಿ ಸಾರ್ವಜನಿಕರ ಹಿತದೃಷ್ಟಿಯ ಬಗ್ಗೆ ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ.

ಎರಡನೇಯದಾಗಿ, ನಮ್ಮ ಒಂದು ವಿಚಾರ ಏನೆಂದರೆ, ಚರ್ಚೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡೂ ಭಾಗವಹಿಸಬೇಕು. ಈ ಮಾತನ್ನು ನಾನು ಕೂಡ ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಯವರು ಕೂಡ ಹೇಳಿದ್ದಾರೆ. ಈ ಒಂದು ಸದನದ ಕಾರ್ಯಕಲಾಪಗಳಲ್ಲಿ ವಿರೋಧಪಕ್ಷದವರು ಸಕ್ರಿಯವಾಗಿ ಭಾಗವಹಿಸಬೇಕು ; ಪಾಲ್ಗೊಳ್ಳಬೇಕು. ಅವರ ಸಲಹೆ ಸೂಚನೆಗಳು ಸರಕಾರದ ಕಾರ್ಯಕ್ರಮಗಳ ಮೇಲೆ ಹೆಚ್ಚಿನ ಬೆಳಕನ್ನು ಬೀರಬೇಕು. ಇಂಥ ಒಂದು ಸತ್ ಪರಂಪರೆಯಲ್ಲಿ ನಾವು ಪೂರ್ಣ ವಿಶ್ವಾಸ ಮತ್ತು ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಆ ಒಂದು ಪರಂಪರೆಯನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಮತ್ತು ಇಂಥ ಗೈರುಹಾಜರಿಯು ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಲ್ಪ ಆಘಾತವಾಗುತ್ತದೆ ಎಂಬ ದೃಷ್ಟಿಯಿಂದ ನಾವು ಆ ಒಂದು ತಿಳುವಳಿಕೆಯಿಂದ ಈ ದಿನ ಸದನವನ್ನು ಪ್ರಿಡ್ಜರ್ನ್ ಮಾಡಲು ವಿನಂತಿಸಿದ್ದೇವೆ. ಆದ್ದರಿಂದ ಕೆಲವೊಂದು ಪರಂಪರೆಗಳನ್ನು

ಎತ್ತಿ ಹಿಡಿಯತಕ್ಕಂಥ ದೃಷ್ಟಿಯಲ್ಲಿ ಇವ್ಹೊತ್ತು ಕೂಡ ಸದನದ ಸಭೆಯನ್ನು ಮುಂದೂಡಬೇಕೆನ್ನುವ ಅಭಿಪ್ರಾಯಕ್ಕೆ ಬಂದಿದೆ. ಆದರೆ ನಮಗೆ ಮಾತನಾಡುವ ಹಕ್ಕು ಇದೆ, ಸಭೆಯಲ್ಲಿ ಕೋರಂ ಕೂಡ ಇದೆ. ಆದರೆ ಸರಕಾರದ ಪರವಾಗಿ ವಿರೋಧ ಪಕ್ಷದವರ ಆ ಸ್ಥಾನಕ್ಕೆ ಹೆಚ್ಚಿನ ಗೌರವವನ್ನು ಕೊಡಬೇಕು, ಅವರು ಇಲ್ಲಿ ಉಪಸ್ಥಿತರಿರಬೇಕು ಎಂಬ ಸದಿಚ್ಛೆಯಿಂದ ಅವರನ್ನು ಬರುವಂತೆ ಕೇಳಿಕೊಂಡು, ಸಭೆಯನ್ನು ಸೋಮವಾರದವರೆಗೆ ಮುಂದೂಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷೆಯವರು :- ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಎಲ್ಲಾ ಸದಸ್ಯರು ಈ ಸಭೆಗೆ ಬರಬೇಕು, ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆನ್ನುವ ಮಾತನ್ನು ಸದನದ ಮಾನ್ಯ ಸದಸ್ಯರುಗಳು ಮತ್ತು ಸಭಾನಾಯಕರು ವ್ಯಕ್ತಮಾಡಿದ್ದಾರೆ. ಆದರ ಹಿನ್ನೆಲೆಯಲ್ಲಿ ನಾನು ಈಗ ಈ ಸಭೆಯನ್ನು ಮುಂದೂಡಿ ಸೋಮವಾರ ಬೆಳಿಗ್ಗೆ ಮತ್ತೆ 11.00 ಗಂಟೆಗೆ ಇದು ಸಮಾವೇಶಗೊಳ್ಳುತ್ತದೆ.

(ಸದನವು 10 ಗಂಟೆ 45 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 9ನೇ ಮಾರ್ಚ್ ಮಾಹೆ 1992 ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಧರಿಸಿತು).

ಕರ್ನಾಟಕ ವಿಧಾನ ಸಭೆ

ಸೋಮವಾರ 9ನೇ ಮಾರ್ಚ್ 1992, ಪಾಲ್ಗುಣ 19, 1913 ಶಕ.
ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11–20 ಗಂಟೆಗೆ ಸಮಾವೇಶಗೊಂಡಿತು.
[ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ ಅವರು) ಪೀಠವನ್ನು ಅಲಂಕರಿಸಿದ್ದರು.)]

ಸಂತಾಪ ಸೂಚನೆ

(ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ನಿಧನದ ಬಗ್ಗೆ)

ಅಧ್ಯಕ್ಷರು :- ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪ, ಮಾಜಿ ಸಚಿವರಾಗಿದ್ದ ಶ್ರೀ ಕೆ.ಟಿ. ರಾಥೋಡ್, ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎಲ್. ಹನಿಯಾ ನಾಯಕ್ ಅವರುಗಳು ನಿಧನರಾದ ಸುದ್ದಿಯನ್ನು ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

ರಾಜ್ಯದ ಮಾಜಿ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾರ್ಚ್ 8 ರಂದು ದೈವಾಧೀನರಾದರು.

ಶ್ರೀ ಕಡಿದಾಳ್ ಮಂಜಪ್ಪನವರು ಪ್ರಜಾಪ್ರತಿನಿಧಿ ಸಭೆ ಹಾಗೂ ವಿಧಾನ ಸಭೆಗಳ ಸದಸ್ಯರಾಗಿ, ಮಂತ್ರಿಗಳಾಗಿ, ಮುಖ್ಯ ಮಂತ್ರಿಗಳಾಗಿ ರಾಜ್ಯದ ಏಳಿಗೆಗಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದವರು. ಸಕ್ರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಅನೇಕ ಬಾರಿ ಜೈಲು ಶಿಕ್ಷೆಗೊಳಗಾಗಿದ್ದರು. ಅದಮ್ಯ ಉತ್ಸಾಹದಿಂದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ಧವಳ ಕೀರ್ತಿಯ ಕಾಂಗ್ರೆಸ್ಸಿಗರಲ್ಲೊಬ್ಬರು. ಅಪ್ಪಟ ಗಾಂಧೀವಾದಿಗಳಾಗಿದ್ದ ಅವರು ಸರಳ ಸಜ್ಜನಿಕೆಗೆ ಮತ್ತೊಂದೇ ಹೆಸರಾಗಿದ್ದರು. ಸಮಾನಾಂತರ ರಾಜಕೀಯಕ್ಕೆ ಅಪವಾದವೇ ಆಗಿದ್ದ ಅವರು ನೈತಿಕ ಮೌಲ್ಯಗಳಿಗಾಗಿ ಹೋರಾಟವನ್ನೇ ಮಾಡಿದವರು. ತಮ್ಮ ನೇರ ನಡೆನುಡಿಯ ನಿಷ್ಠೂರವಾದದಿಂದಾಗಿ ಅಧಿಕಾರವನ್ನು ಕಳೆದುಕೊಂಡರೂ ವಿಚಲಿತರಾಗದಿದ್ದ ಅಪರೂಪದ ವ್ಯಕ್ತಿ. ನಿಷ್ಠಾವಂತ ರಾಜಕಾರಣಿ ಮಾತ್ರವಲ್ಲದೆ ಖ್ಯಾತ ನ್ಯಾಯವಾದಿಗಳು ಆಗಿದ್ದ ಶ್ರೀ ಕಡಿದಾಳರು ಕಲುಷಿತಗೊಳ್ಳುತ್ತಿದ್ದ ರಾಜಕೀಯ ರಂಗದಿಂದ ಬೇಸತ್ತು ದೂರ ಸರಿದು ಸಾಹಿತ್ಯ ಕೃಷಿಗಿಳಿದು ಸಾಕಷ್ಟು ಸಾಫಲ್ಯವನ್ನು ಹೊಂದಿದ್ದರು. ಕರ್ನಾಟಕದ ರಚನೆಯಲ್ಲಿ ಅವರದು ಮರೆಯಲಾಗದ ಪಾತ್ರ. ರಾಜ್ಯ ಭೂ ಸುಧಾರಣಾ ಕಾಯಿದೆಯ ರೂವಾರಿಯಾಗಿದ್ದ ಅವರಿಗೆ ಜನ ಸಾಮಾನ್ಯರ ಬಗ್ಗೆ ಎಣೆಯಿಲ್ಲದ ಕಾಳಜಿ ; ಸಹ್ಯವಲ್ಲದ ಅನೇಕ ಚಟುವಟಿಕೆಗಳು ಸಾರ್ವಜನಿಕ ಜೀವನ ರಂಗವನ್ನು ಕಲುಷಿತಗೊಳಿಸುತ್ತಿದ್ದುದನ್ನು ಕಂಡು ರೊಚ್ಚಿಗೆದ್ದು, ಅವುಗಳ ನಿವಾರಣೆಗಾಗಿ ಅವಿಶ್ರಾಂತವಾಗಿ ಶ್ರಮಿಸಿದವರು. ಸೌಜನ್ಯದ ಸಾಕಾರ ಮೂರ್ತಿಗಳಾಗಿ ಸದಾ ಹಸನ್ಮುಖಿಯಾಗಿದ್ದ ಕಡಿದಾಳ್ ಮಂಜಪ್ಪನವರ ಅಗಲುವಿಕೆಯಿಂದ ಮರೆಯಾಗುತ್ತಿರುವ ಗಾಂಧೀ ಯುಗದ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರನ್ನು ರಾಜ್ಯ ಕಳೆದುಕೊಂಡಿದೆ. ವೈಯುಕ್ತಿಕವಾಗಿ ಕಡಿದಾಳರ ಮತ್ತು ನನ್ನ ಸಂಬಂಧ ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಕೂಡಿ ಬಂದಿತ್ತು. ನನ್ನ ತಂದೆ, ಅವರ ಜೊತೆಯಲ್ಲಿ ಪ್ರಜಾ ಪ್ರತಿನಿಧಿ ಸಭಾ ಸದಸ್ಯರಾಗಿದ್ದಾಗಲೂ ನಾನು ಅವರನ್ನು ನೋಡಿದ್ದೆ. 1962 ರಲ್ಲಿ ನಾನು ಈ ಸದನಕ್ಕೆ ಮೊಟ್ಟಮೊದಲ ಬಾರಿಗೆ ಸದಸ್ಯನಾಗಿ ಬಂದಾಗ ಅವರು ಆಡಳಿತ ಪಕ್ಷದ ಸದಸ್ಯರಾಗಿದ್ದರು ಮತ್ತು ಅವರ ಜೊತೆಯಲ್ಲಿ ಈ ಸದನದಲ್ಲಿ ಇರುವ ಸೌಭಾಗ್ಯ ನನ್ನದಾಗಿತ್ತು. ಶ್ರೀ ಮಂಜಪ್ಪನವರ ನಿಧನದಿಂದ ನಮ್ಮ ರಾಜ್ಯ ಒಂದೇ ಅಲ್ಲ, ರಾಷ್ಟ್ರದ ಒಬ್ಬ ಅತೀ ಎತ್ತರದ ಮಹಾಪುರುಷರನ್ನು ನಾವು ಕಳೆದುಕೊಂಡಂತಾಗಿದೆ.

ವಿಧಾನಸಭೆಯ ಮಾಜಿ ಸದಸ್ಯರು, ಸಚಿವರೂ ಆಗಿದ್ದ ಶ್ರೀ ಕೆ.ಟಿ. ರಾಥೋಡ್ ಅವರು ದಿನಾಂಕ 7.3.1992ರಂದು ನಿಧನರಾದರು. 1972ರಿಂದ 1977 ರವರೆಗೆ ವಿಧಾನಸಭೆಯಲ್ಲಿ ಬಿಜಾಪುರ

ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀ ರಾಥೋಡ್ ಅವರು ಮೀನುಗಾರಿಕೆಯ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ, ಸಹಕಾರ ಹಾಗೂ ಗ್ರಾಮೀಣ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸತತವಾಗಿ ಶ್ರಮಿಸಿ, ಹಿಂದುಳಿದವರ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರ ಏಳಿಗೆಗಾಗಿ ಸುಮಾರು 12 ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದ ಶ್ರೀಯುತರು ಸಮಾಜ ಸುಧಾರಕರಾಗಿ, ಅಖಿಲ ಭಾರತ ಬಣಜಾರ ಸೇವಾ ಸಂಘದ ಜಂಟಿ ಕಾರ್ಯದರ್ಶಿಗಳಾಗಿ, ಬಿಜಾಪುರ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನ ಸಾಮಾನ್ಯ ಕಾರ್ಯದರ್ಶಿಯಾಗಿ ನಂತರ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಪ್ರಶಂಸನೀಯ ಸೇವೆ ಸಲ್ಲಿಸಿದ್ದಾರೆ. ನಾನು 1972ನೇ ಇಸವಿಯಲ್ಲಿ ಈ ಮನೆಯಲ್ಲಿ ಈ ರಾಜ್ಯದಲ್ಲಿ ಸಚಿವನಾಗಿದ್ದಾಗ ಆ ಸಚಿವ ಸಂಪುಟದಲ್ಲಿ ಶ್ರೀ ರಾಥೋಡ್ ಅವರೂ ಕೂಡ ನಮ್ಮ ಜೊತೆಯಲ್ಲಿ ಇದ್ದುದನ್ನು ಇಂದು ನಾನು ನೆನೆದುಕೊಳ್ಳಬೇಕಾಗಿದೆ. ಅತ್ಯಂತ ಸರಳ ಸ್ವಭಾವ, ಅತ್ಯಂತ ಸ್ನೇಹಪರ ವ್ಯಕ್ತಿ ಮತ್ತು ಬಡವರ, ಸಮಾಜದಲ್ಲಿ ಹಿಂದುಳಿದವರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸತಕ್ಕ ಅತ್ಯಂತ ಹೆಚ್ಚಿನ ಕಳಕಳಿಯನ್ನು ನಾನು ಕೆ.ಟಿ.ರಾಥೋಡ್ ಅವರಲ್ಲಿ ಕಂಡಿದ್ದೆ. ಅವರ ನಿಧನದಿಂದ ನಮ್ಮ ರಾಜ್ಯದ ಸಾರ್ವಜನಿಕ ಜೀವನ ಬಡವಾಗಿದೆ. ನನಗೆ ಒಬ್ಬ ಪ್ರೀತಿಯ ಸ್ನೇಹಿತರೊಬ್ಬರು ಮರೆಯಾಗಿದ್ದಾರೆ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದ ಶ್ರೀ ಎಲ್. ಹನಿಯಾ ನಾಯಕ್ ಅವರು ದಿನಾಂಕ 30.1.1992 ರಂದು ನಿಧನರಾದರು. 1941 ರಿಂದ 1945 ರವರೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶತಾಯು ಶ್ರೀ ಹನಿಯಾ ನಾಯಕ್ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಹಿಂದುಳಿದವರ ಪುರೋಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದವರು.

ಈ ಗತಿಸಿ ಹೋಗಿರುವ ಮಹನೀಯರಿಗೆ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುವ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಸಭಾಧ್ಯಕ್ಷರೆ, ಒಬ್ಬ ಒಳ್ಳೆಯ ರಾಜಕಾರಣಿ ಹಾಗೂ ಮುತ್ಸದ್ದಿ, ಕ್ರಿಯಾಶೀಲ ಹೋರಾಟಗಾರರು, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿರತಕ್ಕ ಕಡಿದಾಳ್ ರವರ ಜೀವನ ಹಲವಾರು ವರ್ಷಗಳಿಂದ ನೋಡಿರತಕ್ಕ ಜೀವನ. ಅದು ಶಿವಮೊಗ್ಗದಲ್ಲಿ ಅವರು ವಕೀಲರಾಗಿದ್ದಂಥ ಕಾಲ, ಯಾವಾಗಲೂ ಬಡವರು ಅವರ ಹತ್ತಿರ ಹೋಗಿ ತುಂಬತಕ್ಕದ್ದು ನಾವು ಕಣ್ಣಾರೆ ಕಂಡಿರತಕ್ಕ ವಿಷಯ. ಸಕ್ರಿಯ ರಾಜಕೀಯದಲ್ಲಿ ಅವರು ಬಂದಮೇಲೆ ಸಚಿವರಾದರು. ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳೂ ಕೂಡ ಆಗಿ ಮಹತ್ತರ ಸೇವೆಯನ್ನು ಪ್ರಶಂಸನೀಯವಾಗಿ ಸಲ್ಲಿಸಿದ್ದಾರೆ. ಜನಮನದಲ್ಲಿ ಉಳಿದಿದ್ದಾರೆ. ಆದರಲ್ಲೂ ಬಡವರ, ದೀನದಲಿತರ, ಗೇಣಿದಾರರ ಮನಸ್ಸಿನಲ್ಲಂತೂ ಅಚ್ಚಳಿಯದೆ ಉಳಿದಿದ್ದಾರೆ. ತಾವು ಹೇಳಿರುವಹಾಗೆ, ಕರ್ನಾಟಕ ರಾಜ್ಯದಲ್ಲಿ ಭೂಸುಧಾರಣಾ ಕಾನೂನು ತರಬೇಕೆ ಬಿಡಬೇಕೆ, ಯಾವುದು ತರಬೇಕು ಎಂದು ಚರ್ಚೆ ಮಾಡುವ ಕಾಲ ಅದು. ನಾವಿನ್ನೂ ಈ ಶಾಸನಸಭೆಗೆ ಬಂದಿರಲಿಲ್ಲ, ಅವರ ವಿಷಯವನ್ನು ತಿಳಿದುಕೊಳ್ಳುತ್ತಿದ್ದೆವು. ಆ ಕಾಲದಲ್ಲಿ ಎಳಡನೇ ಅಕ್ಟೋಬರ್ 1965 ರಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಕೊಡಬೇಕು ಎನ್ನುವ ವಿಚಾರ ಬಂತು. ಗೇಣಿದಾರರನ್ನು ಜಮೀನುದಾರರು ಒಕ್ಕಲೆಬ್ಬಿಸುತ್ತಾರೆ ಎಂಬುದನ್ನು ಅವರು ಅರಿತು ಒಂದು ಕಾನೂನನ್ನು ಕರ್ನಾಟಕ ರಾಜ್ಯದಲ್ಲಿ ತಂದರು. ಅದಕ್ಕೆ Protection for Tenants from viction Act ಎಂದು ಹೆಸರು ಇದೆ. ಗೇಣಿದಾರರನ್ನು ಒಕ್ಕಲೆಬ್ಬಿಸದ ಹಾಗೆ ನೋಡಿಕೊಳ್ಳತಕ್ಕ ಒಂದು ಕಾನೂನು ತಂದು, ಕರ್ನಾಟಕ ರಾಜ್ಯದಲ್ಲಿ ಮುಂದೆ ಜಾರಿಗೆತರತಕ್ಕ ಭೂಸುಧಾರಣೆ ಕಾನೂನು ಯಾವುದೇ ರೀತಿ ಬರಬಹುದು, ಅಲ್ಲಿ ಉಳುವವನೇ ಹೊಲದೊಡೆಯ ಆಗಬೇಕು. The tiller should become the owner of the land, ಎನ್ನತಕ್ಕ ನೀತಿ ಏನು ಇತ್ತು, ವಿಚಾರತನ ಏನಿತ್ತು ಅದಕ್ಕೆ ಪೂರಕವಾಗಿ ಅವರು ಗೇಣಿದಾರರಿಗೆ ರಕ್ಷಣೆ ಕೊಡುವ ಕೆಲಸಕ್ಕೆ ಕೈ ಹಾಕಿದರು. ಅದು ಸುಮಾರಾಗಿ ಶಿವಮೊಗ್ಗ ಜಿಲ್ಲೆಯ ಕಾಗೋಡು ಸತ್ಯಾಗ್ರಹ. ಕಾಗೋಡು ತಿಮ್ಮಪ್ಪನವರ ಊರಿನಲ್ಲಿ ಆ ಹೆಸರಿನಲ್ಲಿ ಗೇಣಿದಾರರ ಪರವಾಗಿ ನಡೆದ ಸತ್ಯಾಗ್ರಹ. ಅದು ಶಾಂತವೇರಿ ಗೋಪಾಲಗೌಡರು ಮುಖಂಡತ್ವ ವಹಿಸಿರತಕ್ಕ ಸತ್ಯಾಗ್ರಹ. ಇದರ ಪ್ರಭಾವ ಕೂಡಾ ಅವರ ಮೇಲೆ ಬಿದ್ದಿರಬೇಕೆಂದು ನನ್ನ ಅನಿಸಿಕೆ. ಆದರೆ ಯಾರೊಬ್ಬರು ಕಾನೂನು ಚೌಕಟ್ಟಿನಲ್ಲಿ ರಕ್ಷಣೆ ಕೊಡುವ ಜವಾಬ್ದಾರಿ ಹೊರಬೇಕಾಗಿತ್ತು. ಶ್ರೀ ಕಡಿದಾಳ್ ಅವರು ಆ ಧೀಮಂತ

ಸಾಹಸಕ್ಕೆ ಕೈ ಹಾಕಿ, ಎಷ್ಟೇ ವಿರೋಧ ಇದ್ದರೂ ಕೂಡ ಗೇಣಿದಾರರ ರಕ್ಷಣೆಗೆ ಅಧಿಕಾರ ಚೌಕ್ಟಿನಲ್ಲಿ ಸ್ಪಷ್ಟವಾಗಿ ಹೋಗಿರತಕ್ಕ ಮಹಾನ್ ವ್ಯಕ್ತಿಯಾಗಿದ್ದರು.. ಆ ಸಂದರ್ಭದಲ್ಲಿ ಮನೆ ಮನೆಯಲ್ಲೂ ಕೂಡ ಅವರ ಬಗ್ಗೆ ಆಡಿರತಕ್ಕ ಮಾತುಗಳು ಮತ್ತು ನಾವೆಲ್ಲರೂ ಆಡಿರತಕ್ಕ ಮಾತುಗಳು, ನನಗೆ ಇವತ್ತು ನೆನಪಿಗೆ ಬರುತ್ತವೆ. ಅನಂತರ ಹಲವಾರು ಬಾರಿ ನಾವು ಸೇರಿದಾಗ ಭೂಸುಧಾರಣೆ ಕಾನೂನು ಬಗ್ಗೆ ಮಾತನಾಡುತ್ತಿದ್ದೆವು; 1.3.74ರಲ್ಲಿ ಅಮೆಂಡ್‌ಮೆಂಟ್ ಆಕ್ಟ್ ಏನು ಬಂತು, ಅದು ಬಂದಮೇಲೆ ಏನಾಗುತ್ತದೆ, ಹೇಗಾಗುತ್ತದೆ, ಟ್ರಿಬ್ಯುನಲ್ ಮುಂದೆ ಅದು ಬಂದಾಗ ಹೇಗಿರುತ್ತದೆ - ಇತ್ಯಾದಿಗಳನ್ನು ಅವರು ಕೇಳುತ್ತಿದ್ದರು. ಇತ್ತೀಚೆಗೆ ಅವರು ಸ್ಲಿಪ್ ಡಿಸ್ಕ್ ತೊಂದರೆಯಿಂದ ಮಾರ್ಫಾಸ್ ಆಸ್ಪತ್ರೆಯಲ್ಲಿ ಇದ್ದ ಕಾಲದಲ್ಲಿ ನಾನು ಅವರನ್ನು ಅಲ್ಲಿ ಕಂಡ ಸಂದರ್ಭದಲ್ಲಿ, ಅವರಲ್ಲಿ ಮಾತನಾಡುವ ಶಕ್ತಿ ಅಷ್ಟು ಇಲ್ಲದೇ ಇದ್ದರೂ ಕೂಡ ಅವರು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಹೇಗೆ ಹೋಗುತ್ತಾ ಇದೆ, ಏನು ಆಗುತ್ತದೆ ಎಂದು ಒಳ್ಳೆಯ ಮಾತನ್ನು ಕೇಳಿದರು. ಅವರದು ಸದಾ ನಗುನಗುತ್ತಾ ಮಾತನಾಡತಕ್ಕ ಸ್ವಭಾವ. ಅವರ ಮುಖದ ಚಿತ್ರ ಇನ್ನೂ ಕೂಡ ಹಾಗೆಯೇ ಉಳಿದಿದೆ. ಅವರು ಯಾವಾಗಲೂ ನೀತಿ ಬಗ್ಗೆ ಮಾತನಾಡುತ್ತಿದ್ದರು. ಯಾವಾಗಲೂ ಹೋರಾಟವನ್ನು ಕುರಿತು ಮಾತನಾಡುತ್ತಿದ್ದರು. ಒಳ್ಳೆಯ ಬರಹಗಾರರೂ ಆಗಿದ್ದರು. ರಾಜಕೀಯದ ಬಗ್ಗೆ ಹಾಗೂ ಮತ್ತೊಂದು ವಿಷಯದ ಬಗ್ಗೆ ಅವರು ಹಲವಾರು ಲೇಖನಗಳನ್ನು ಬರೆದಿದ್ದನ್ನು ನಾನು ಪತ್ರಿಕೆಗಳಲ್ಲಿ ಕಂಡಿದ್ದೇನೆ. ಅವರು ಒಬ್ಬ ಅಚ್ಚುಮೆಚ್ಚಿನ ವ್ಯಕ್ತಿಯಾಗಿ ಕರ್ನಾಟಕದ ಜನಮನದಲ್ಲಿ ಉಳಿದುಹೋಗಿರತಕ್ಕವರು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ನೆನೆಸಿಕೊಳ್ಳುತ್ತಿದ್ದೇನೆ. ಅವರು ಇವತ್ತು ನಿಧನರಾಗಿದ್ದಾರೆ. ಅವರಿಗೆ ತೊಂದರೆಯಾಗಿ ಆಸ್ಪತ್ರೆಯಲ್ಲಿ ಇದ್ದ ಕಾಲದಲ್ಲಿ ನಾವು ಹೋಗಿ ಭೇಟಿ ಮಾಡಿ ಬಂದಮೇಲೆ ನಾವು ಸರ್ಕಾರದವರು ಒಂದು ತೀರ್ಮಾನ ಮಾಡಿದೆವು. ಅವರ ಖರ್ಚುವೆಚ್ಚವನ್ನು ನಾವು ನೋಡಿಕೊಳ್ಳಬೇಕೆನ್ನುವ ವಿಚಾರವನ್ನು ಅವರಿಗೆ ಗೌರವ ಕೊಡತಕ್ಕ ಒಂದು ವಿಧಾನವನ್ನು ನಾವು ಹುಡುಕಿ ನಾವು ಆ ಖರ್ಚು ವೆಚ್ಚವನ್ನು ವಹಿಸಿಕೊಳ್ಳುವ ಬಗ್ಗೆ ಸರ್ಕಾರಿ ಆಜ್ಞೆ ಮಾಡಿ ಅದನ್ನು ಅವರಿಗೆ ತಿಳಿಸಿದ್ದೇವೆ ; ನಮ್ಮ ಪಾಲಿನ ಕರ್ತವ್ಯ ಎನ್ನುವ ದೃಷ್ಟಿಯಿಂದ ಅದನ್ನು ನಾವು ಮಾಡಿದ್ದೇವೆ. ಅವರು ಈಗ ನಮ್ಮ ಮಧ್ಯೆ ಇಲ್ಲ. ನಾನು ನಿನ್ನೆ ಪ್ರವಾಸದಲ್ಲಿ ಇದ್ದಾಗ ಈ ವಿಷಯ ಗೊತ್ತಾಯಿತು. ನಾವು ಅಲ್ಲಿಂದಲೇ ವಿಚಾರ ತಿಳಿಸಿ, ರಜ (ಘೋಷಣೆ ಮಾಡಿ, ಸರ್ಕಾರಿ ಮರ್ಯಾದೆಯೊಡನೆ ಅವರ ಅಂತ್ಯಕ್ರಿಯೆ ಮಾಡಿಸತಕ್ಕ ವಿಚಾರದಲ್ಲಿ ಸರ್ಕಾರ ಈಗಾಗಲೇ ಜವಾಬ್ದಾರಿಯನ್ನು ವಹಿಸಿದೆ. ನಾವು ಬಂದಮೇಲೆ ಇವತ್ತು ಅವರ ಮನೆಗೆ ಭೇಟಿ ಕೊಟ್ಟು ಬರತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಆ ಕಾರ್ಯವನ್ನು ಕೂಡ ಮಾಡಿದ್ದೇವೆ. ಈ ಸಂದರ್ಭದಲ್ಲಿ ಆ ಕಾಲವನ್ನು ನೆನೆಸಿಕೊಂಡು ನಮ್ಮ ಅಭಿಪ್ರಾಯ ಏನಿದೆಯೋ ಅದನ್ನು ಮನಸೊಂದು ಆಡತಕ್ಕ ವಿಚಾರವಾಗಿದೆ. ಅವರಿಗೆ ಗೌರವ ಕೊಡುವ ಸಂದರ್ಭದಲ್ಲಿ, ಜನಸಾಮಾನ್ಯರು, ಕಡುಬಡವರು ಹಾಗೂ ದೀನದಲಿತರು ಏನಿದ್ದಾರೆ ಅವರಿಗೆ ಮಿಡಿದಂತಹ ಮನ. ಅವರ ಮನಸ್ಸು ನನಗೆ ಗೊತ್ತು. ಆ ಮನ ಇವತ್ತು ದೂರವಾಗಿದೆ. ಈ ಸಂದರ್ಭದಲ್ಲಿ ನಾನು ಏನು ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡದೇ, ಗೋಪಾಲಗೌಡರನ್ನು ಕಳೆದುಕೊಂಡ ಕಾಲದಲ್ಲಿ ಕೂಡ ನಾವು ಇದೇ ಶೋಕದಲ್ಲಿದ್ದೆವು. ಇವತ್ತು ಇವರನ್ನು ಕಳೆದುಕೊಂಡಿದ್ದೇವೆ. ಇವರೂ ಕೂಡ ಅದೇ ವಿಚಾರದ ಬಗ್ಗೆ ಇರತಕ್ಕಂಥ ವ್ಯಕ್ತಿ. ಆದ್ದರಿಂದ ಅದೇ ಶೋಕ ನಮಗಂತೂ ಸ್ಪಷ್ಟವಾಗಿ ಬಂದಿದೆ. ಇವತ್ತು ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ನಿಧನದಿಂದ ನಷ್ಟ ಏನಾಗಿದೆ ಅದನ್ನು ಭರಿಸತಕ್ಕಂಥ ತಡೆದುಕೊಳ್ಳತಕ್ಕಂಥ ಶಕ್ತಿ ಇವತ್ತು ಅವರ ಕುಟುಂಬವರ್ಗಕ್ಕೆ ಬರಲಿ. ಈ ಒಂದು ನಷ್ಟ ಇವತ್ತು ಕರ್ನಾಟಕ ರಾಜ್ಯಕ್ಕೆ ದೇಶಕ್ಕೆ ಆಗಿದೆ. ಅತ್ಯಂತ ಜನಮೆಚ್ಚುಗೆಯನ್ನು ಪಡೆದಿರತಕ್ಕಂಥ ಒಬ್ಬ ನಾಯಕನನ್ನು ಇವತ್ತು ನಮ್ಮ ರಾಜ್ಯ ಕಳೆದುಕೊಂಡಿದೆ. ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ತಿಳಿಸಿ, ನಿರ್ಣಯವನ್ನು ತಾವೇನು ಇಟ್ಟಿದ್ದೀರಿ, ಅದಕ್ಕೆ ನಮ್ಮ ಸರ್ಕಾರದ ಮತ್ತು ಸದನದ ಪರವಾಗಿ ಬೆಂಬಲವನ್ನು ಸೂಚಿಸಿ ತಮ್ಮ ಅಭಿಪ್ರಾಯದ ಜೊತೆಗೆ ಇವತ್ತು ಮನನೊಂದು ನಾವು ಕೂಡ ಇದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಅದೇ ರೀತಿಯಾಗಿ ಶ್ರೀಮಾನ್ ಕೆ.ಟಿ. ರಾಘೋಡ್‌ರವರು ದೀರ್ಘಕಾಲದಿಂದ ಹಾಸಿಗೆ ಹಿಡಿದಿದ್ದರು. ಈ ಮಧ್ಯೆ ನಾನು ಅವರ ಮನೆಗೆ ಕೂಡ ಹೋಗಿ ಬಂದಿದ್ದೆ. ಅನೇಕ ಜನ ಮಿತ್ರರೂ ಕೂಡ ಹೋಗಿ ಬಂದಿದ್ದರು. ನಿನ್ನೆ ಕೂಡ ಇವರು ನಿಧನರಾದಮೇಲೆ ಹೋಗಿ ಬಂದಿದ್ದೇನೆ. ಮನುಷ್ಯ

ಅಷ್ಟೊಂದು ದೀರ್ಘಕಾಲದವರೆಗೆ ಹಾಸಿಗೆ ಹಿಡಿದರೆ ಅದು ಬಹಳ ದೊಡ್ಡ ಹೋರಾಟ ಆಗಿಬಿಡುತ್ತದೆ. ಅದನ್ನು ನೋಡಿದ ಯಾರಿಗಾದರೂ ಕೂಡ ಮನಸ್ಸು ಮಿಡಿಯುತ್ತದೆ. ಅವರನ್ನು ಯಾರು ನೋಡಿದರೂ ಕೂಡ ಅದು ಗೊತ್ತಾಗುತ್ತಿತ್ತು. ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೂಡ ಸೇವೆಸಲ್ಲಿಸಿದ್ದರು. ಅವರು ಈ ಸದನದ ಸದಸ್ಯರಾಗಿ, ಸಚಿವರಾಗಿ ಕರ್ನಾಟಕ ರಾಜ್ಯಕ್ಕೆ ಸೇವೆಸಲ್ಲಿಸಿದ್ದಾರೆ. ಹುಟ್ಟಿನಿಂದ ಅವರು ಲಂಬಾಣಿ ಜನಾಂಗದ ಒಬ್ಬ ವ್ಯಕ್ತಿಯಾಗಿ ಅತ್ಯಂತ ಹಿಂದುಳಿದ ಪ್ರದೇಶವಾದ ಬಿಜಾಪುರ ಜಿಲ್ಲೆಯ ಒಂದು ಕ್ಷೇತ್ರವನ್ನು ಕೂಡ ಪ್ರತಿನಿಧಿಸಿ, ತಾವೂ ಕೂಡ ವಿನಯಶೀಲರಾಗಿ, ಒಳ್ಳೆಯ ವ್ಯಕ್ತಿಯಾಗಿ ಬಂದಿರತಕ್ಕವರು. ಅವರ ನಿಧನದಿಂದ ಕೂಡ ಇವತ್ತು ಕರ್ನಾಟಕ ರಾಜ್ಯಕ್ಕೆ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬಕ್ಕೆ ಅವರ ನಿಧನದಿಂದ ಉಂಟಾದ ನಷ್ಟವನ್ನು ತಡೆದುಕೊಳ್ಳತಕ್ಕಂಥ ಸ್ಥೈರ್ಯ, ಶಕ್ತಿ ಬರಲಿ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಲ್. ಹನಿಯಾ ನಾಯಕ್ ಅವರು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ಕ್ಷೇತ್ರದವರು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು, ಎನ್ನುವ ವಿಚಾರವನ್ನು ನಾವು ಕೇಳಿದ್ದೇವೆ. ಆದರೆ ನಾವು ಇತ್ತೀಚಿನವರು. ಅವರು ಒಂದುನೂರು ವರ್ಷದ ಮೇಲೆ 103–104 ವರ್ಷ ವಯಸ್ಸಿನ ದೀರ್ಘಕಾಲ ಕಳೆದಿರತಕ್ಕಂಥವರು. ಆದ್ದರಿಂದ ಅವರಿಗೂ ನಮಗೂ ಅಷ್ಟೊಂದು ಸಂಪರ್ಕ ಇಲ್ಲ, ಆದರೆ ಅವರೂ ಕೂಡ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಆತ್ಮಕ್ಕೆ ಕೂಡ ಶಾಂತಿ ಸಿಗಲಿ. ಅವರ ಕುಟುಂಬವರ್ಗದವರಿಗೆ ಆಗಿರತಕ್ಕಂಥ ನಷ್ಟವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಬರಲಿ ಎನ್ನತಕ್ಕಂಥ ಮಾತನ್ನು ಹೇಳಿ ಈ ಸಂತಾಪ ಸೂಚಕ ನಿರ್ಣಯಕ್ಕೆ ಈ ಸಂದರ್ಭದಲ್ಲಿ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ತಾವು ಮತ್ತು ಮಾನ್ಯ ಸಭಾನಾಯಕರು ವ್ಯಕ್ತ ಮಾಡಿದ ಅಭಿಪ್ರಾಯಕ್ಕೆ ನನ್ನ ಧ್ವನಿಯನ್ನೂ ಕೂಡಿಸುತ್ತಾರೆ, ಶ್ರೀ ಕಡ್ಡಿದಾಳ್ ಮಂಜಪ್ಪನವರು ಕಾಲಗರ್ಭದಲ್ಲಿ ಲೀನವಾಗಿದ್ದಾರೆ. ಆದರೆ ಅವರ ನೆನಪು ಸದಾ ಹಸಿರಾಗಿರುವಂಥ ಬದುಕನ್ನು ಬದುಕಿದ್ದರು ಎನ್ನುವುದು ನಮ್ಮೆಲ್ಲರಿಗೂ ಒಂದು ಮಾರ್ಗದರ್ಶನ. ಗಾಂಧಿ ಯುಗದ ಮತ್ತೊಂದು ಕೊಂಡಿ ಈಗ ಕಳಚಿಹೋಗಿದೆ. ತೀರಾ ಭೂರಹಿತ ಗೇಣಿದಾರರ ಕುಟುಂಬದಲ್ಲಿ ಹುಟ್ಟಿ ರಾಜ್ಯದ ಭೂಶಾಸನ ಮಸೂದೆಯನ್ನು ಮಾಡಿದಂಥ ರೂವಾರಿಯ ಎತ್ತರಕ್ಕೆ ಏರಿದ ಒಬ್ಬ ಮಹಾನ್ ವ್ಯಕ್ತಿ, ಅನ್ಯಾಯದ ವಿರುದ್ಧ ಅಧರ್ಮದ ವಿರುದ್ಧ ಅಧಿಕಾರವಾಣಿಯಿಂದ ಮಾತನಾಡತಕ್ಕಂಥ ಒಬ್ಬ ಮುತ್ಸದ್ದಿಯನ್ನು ನಾವು ಕಳೆದುಕೊಂಡಿದ್ದೇವೆ.

ಅವರು ರಾಜ್ಯದ ಹಳೆಯ ಮೈಸೂರಿನ ಕೊನೆಯ ಮುಖ್ಯಮಂತ್ರಿ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿದವರು. ಕಂದಾಯ, ಬೋಕೋಪಯೋಗಿ, ವಿದ್ಯಾಮಂತ್ರಿಯಾಗಿ, ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು. ತಾವು ಹೇಳಿದ ಹಾಗೆ, ಖ್ಯಾತ ನ್ಯಾಯವಾದಿ. ಇಷ್ಟೆಲ್ಲಾ ಅಧಿಕಾರದ ಎತ್ತರಗಳನ್ನು ಏರಿದರೂ ಬದುಕಿಗಾಗಿ ನ್ಯಾಯಾಲಯದ ಮೊರೆಹೊಕ್ಕಿದ್ದರು. ನ್ಯಾಯಾಲಯದಲ್ಲಿ ಅಭ್ಯಾಸ ಮಾಡತಕ್ಕಂಥ ಕೊನೆಯ ದಿನಗಳಿರುವವರೆಗೆ ಅದರಲ್ಲಿಯೇ ಬದುಕಿದ್ದರು ಎನ್ನತಕ್ಕಂಥಾದ್ದು ಒಂದು ವಿಶಿಷ್ಟವಾದ ವ್ಯಕ್ತಿತ್ವದ ಅಭಿವ್ಯಕ್ತ. ಭೂ ಶಾಸನದ ಮಸೂದೆಗೆ , 1962 ರಲ್ಲಿಯೇ ಒಂದು ಭೂಮಿಕೆಯನ್ನು ಸಿದ್ಧ ಮಾಡಿದರು. ಆ ಭೂಮಿಕೆ 1974 ಕ್ಕೆ ಒಂದು ಶಾಸನವಾಗಿ, ರಾಜ್ಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗೆ ನಾಂದಿಯಾಯಿತು ಎನ್ನುವುದನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕು. ಶ್ರೀಮಾನ್ ಮಂಜಪ್ಪನವರು ರಾಜಕಾರಣಿ ಮತ್ತು ನ್ಯಾಯವಾದಿ ಮಾತ್ರವಲ್ಲ, ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡ, ಕೈ ಆಡಿಸಿದವರು. ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಆತ್ಮಕತೆಯನ್ನು ಕೂಡ ಬರೆದು, ಇತ್ತೀಚೆಗೆ ತಾನೆ ಮುಗಿಸಿದ್ದರು. ನಾನು ಬಹಳ ದಿವಸಗಳಿಂದ ಅವರನ್ನು ಬಲ್ಲೆ, ನನ್ನ ಮತ್ತು ಅವರ ಸಂಬಂಧ ಒಂದು ದೃಷ್ಟಿಯಿಂದ ತಂದೆ ಮಕ್ಕಳ ಸಂಬಂಧ. ರಾಜಕೀಯದ ಕ್ಲಿಷ್ಟವಾದ ಸಮಸ್ಯೆಗಳು ಬಂದಾಗಲ್ಲೆಲ್ಲಾ ನಾನು ತೀರಾ ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೆ. ಅವರು ಪ್ರತಿನಿಧಿಸಿದ ಕ್ಷೇತ್ರದ ಒಬ್ಬ ಪ್ರತಿನಿಧಿಯಾಗಿ, ನಾನು ಅವರ ಬದುಕಿನ ಇತಿಮಿತಿಗಳನ್ನು ಬಲ್ಲವನಾಗಿದ್ದೆನು. ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ ಹಾಗೂ ಶ್ರೀಮಾನ್ ಮಂಜಪ್ಪನವರು, ಕೊನೆಯ ದಿನಗಳಲ್ಲಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಹಣವನ್ನು ಪಾವತಿಸಲಾರದಂಥ ಸ್ಥಿತಿಯಲ್ಲಿದ್ದಾಗ ನಾನು ಮುಖ್ಯ ಮಂತ್ರಿಗಳನ್ನು ಸಂಪರ್ಕಿಸಿದೆ. ಸರ್ಕಾರ ಅವರ

ನೆರವಿಗೆ ಬಂತು ಅಥವಾ ತನ್ನ ಕರ್ತವ್ಯವನ್ನು ಮಾಡಿತು ಎಂದು ನಾನು ಭಾವನೆ ಮಾಡಿದ್ದೇನೆ. ಇಷ್ಟೊಂದು ದೊಡ್ಡ ಮೌಲ್ಯಗಳನ್ನು ಇಟ್ಟುಕೊಂಡಿದ್ದ ಮತ್ತೊಬ್ಬ ರಾಜಕಾರಣಿಯನ್ನು ಹುಡುಕುವುದು ಬಹಳ ಕಷ್ಟ. ಶ್ರೀಮಾನ್ ಮಂಜಪ್ಪನವರ ಬದುಕು, ಸಾರ್ವಜನಿಕ ಜೀವನ, ಅವರ ಸಾಹಿತ್ಯ ಕ್ಷೇತ್ರ, ಎಲ್ಲದಕ್ಕಿಂತ ಹೆಚ್ಚಾಗಿ ಅವರು ಆಯ್ದುಕೊಂಡ ಮೌಲ್ಯ ನಮಗೆ ಮತ್ತು ಭವಿಷ್ಯದ ಎಲ್ಲಾ ಸಾರ್ವಜನಿಕ ಜೀವನಗಳಿಗೆ ಒಂದು ಮಾರ್ಗಸೂಚಿ ಮತ್ತು ಮಾರ್ಗದರ್ಶನ ಎಂದು ಭಾವನೆ ಮಾಡಿ, ಅವರ ನೆನಪಿಗಾಗಿ ತೀರ್ಥಹಳ್ಳಿ ಕ್ಷೇತ್ರದಲ್ಲಿ ಹಲವು, ಹತ್ತು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದೇನೆ. ಈ ಕಾರ್ಯಕ್ರಮಗಳಿಗೆ ಸರ್ಕಾರ ಹೆಚ್ಚು ಸಹಾಯ ಮಾಡುವುದರ ಮೂಲಕ ಅದಕ್ಕೆ ಒಂದು ಆಯಾಮ ಕೊಡಬೇಕೆಂದು ನಾನು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಯುತರು ಬಿಟ್ಟುಹೋಗಿರತಕ್ಕ ಅತ್ಯಂತ ದೊಡ್ಡ ಆಸ್ತಿ ಏನಿದೆ, ಅದಕ್ಕೆ ನಾವೆಲ್ಲರೂ ವಾರಸುದಾರರು. ಆದರೆ, ಈ ನೋವಿನಲ್ಲೂ ಕೂಡ ನಾವೆಲ್ಲರೂ ಪಾಲುದಾರರು. ಆದರೂ, ಅವರು ಸೀಮಿತವಾಗಿ ಬಿಟ್ಟುಹೋಗಿರತಕ್ಕ ಕುಟುಂಬಕ್ಕೆ ಆಗಿರತಕ್ಕ ಭಾರಿ ನಷ್ಟವನ್ನು ಭರಿಸತಕ್ಕ ಶಕ್ತಿಯನ್ನು ದಯಾಮಯನು ಕರುಣಿಸಲಿ, ಅವರ ಆತಕ್ಕೆ ಚಿರಶಾಂತಿಯನ್ನು ದಯಪಾಲಿಸಲಿ ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥನೆ ಮಾಡಿ, ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ಶ್ರೀಮಾನ್ ಕೆ.ಟಿ. ರಾಥೋಡ್‌ರವರು 1972 ರಲ್ಲಿ ಶಾಸನ ಸಭೆಗೆ ಬಂದರು ನಾನು 1971 ರಲ್ಲಿ ಸಂಸತ್ತನ್ನು ಪ್ರವೇಶ ಮಾಡಿದೆನು. ಅಲ್ಲಿಂದ ಸುಮಾರು 20 ವರ್ಷಗಳ ಕಾಲ, ಅವರ ಜೊತೆಗೆ ನಿಕಟವಾದ ಸಂಪರ್ಕವನ್ನು ಹಾಗೂ ಸ್ನೇಹವನ್ನು ಇಟ್ಟುಕೊಂಡಿದ್ದೆನು. ಇತ್ತೀಚಿನ ದಿನಗಳಲ್ಲಿ ಅವರ ಅನಾರೋಗ್ಯದ ಅರಿವು ನನಗೆ ಗೊತ್ತಾಗಲಿಲ್ಲ. ಹಾಗಾಗಿ, ನಾನು ಅವರನ್ನು ಸಂದರ್ಶನ ಮಾಡುವುದು ಕಷ್ಟವಾಯಿತು. ಅವರು ಒಳ್ಳೆಯ ಸ್ನೇಹಿತರಾಗಿದ್ದರು. ನೇಲಾಗಿ ಅತ್ಯಂತ ಹಿಂದುಳಿದ ಸಮಾಜದ ಒಬ್ಬ ಗಣ್ಯ ಪ್ರತಿನಿಧಿಯಾಗಿ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದರು. ಅವರ ಕುಟುಂಬಕ್ಕೆ ಆದಂಥ ಈ ಅನ್ಯಾಯವನ್ನು ಸಹಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಶ್ರೀಮಾನ್ ಹನಿಯಾ ನಾಯಕ್ ಅವರನ್ನು ಒಂದೇ ಒಂದು ಬಾರಿ ನಾನು ಸಂದರ್ಶನ ಮಾಡಿದ್ದೆ. ಅವರು ಆ ಒಂದು ಪೀಳಿಗೆಗೆ ಸೇರಿದಂಥವರು. ಸುಮಾರು 104 ವರ್ಷಗಳ ಕಾಲ ಬದುಕಿದ್ದರು ಎಂದು ಕೇಳಿ ತಿಳಿದಿದ್ದೇನೆ. ಅವರು ಪ್ರಜಾ ಪ್ರತಿನಿಧಿ ಸಭೆಯ ಪ್ರತಿನಿಧಿಯಾಗಿ ಶಿವಮೊಗ್ಗ ಜಿಲ್ಲೆಯ ಒಂದು ಭಾಗವನ್ನು ಪ್ರತಿನಿಧಿಸಿದ್ದರು. ಅವರ ನಿಧನಕ್ಕೂ ಕೂಡ ನನ್ನ ಸಂತಾಪವನ್ನು ವ್ಯಕ್ತಮಾಡಿ, ನನ್ನ ಹಾಗೂ ನನ್ನ ಪಕ್ಷದ ಪರವಾಗಿ ಎಲ್ಲಾ ಅಗಲಿದ ನಾಯಕರಿಗೆ ಅನನ್ಯ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಮರ್ಪಣೆ ಮಾಡಿ, ತಾವಿಬ್ಬರೂ ಹೇಳಿದಂಥ ಮಾತುಗಳಿಗೆ ನನ್ನ ಧ್ವನಿಯನ್ನೂ ಸೇರಿಸುವುದಕ್ಕೆ ತಮ್ಮ ಅಪ್ಪಣೆ ಕೇಳಿ, ಈ ಒಂದು ಸಂತಾಪವನ್ನು ಅವರ ಕುಟುಂಬವರ್ಗದವರಿಗೆ ಕಳುಹಿಸಿಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :- ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯ ಇವತ್ತು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ನಾಯಕರನ್ನು ಕಳೆದು ಕೊಂಡಿದೆ. ಮಾನ್ಯ ಕಡಿದಾಳ್ ಮಂಜಪ್ಪನವರು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾಗಿದ್ದುಕೊಂಡು ನಮ್ಮ ರಾಜ್ಯಕ್ಕೆ ತುಂಬಾ ಸೇವೆಯನ್ನು ಮಾಡಿರುತ್ತಾರೆ. ಅವರು ಶ್ರೀಮಾನ್ ಬಿ.ಡಿ. ಜತ್ತಿಯವರ ಮತ್ತು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಮತ್ತು ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಚಿವರಾಗಿ ಸೇವೆಯನ್ನು ಮಾಡಿರುತ್ತಾರೆ. ಅದಕ್ಕಿಂತಲೂ ಮುಖ್ಯವಾಗಿ ಅವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ಬಹುಶಃ ಯಾವುದೇ ಒಂದು ಕಳಂಕವಿಲ್ಲದೆ ಅಂದರೆ ಕಳಂಕರಹಿತವಾದ ಜೀವನವನ್ನು ನಡೆಸಿದ್ದಾರೆ. ಅವರ ಬಗ್ಗೆ ಯಾವುದೇ ಆಪಾದನೆ ಇಲ್ಲ. ಅಂತಹ ಒಬ್ಬ ಸಚಿವರಾಗಿದ್ದುಕೊಂಡು ನಮ್ಮ ರಾಜ್ಯಕ್ಕೆ ತುಂಬಾ ಸೇವೆಯನ್ನು ಮಾಡಿರುತ್ತಾರೆ. ಮತ್ತು ಸಂಪೂರ್ಣ ಪಾನ ನಿರೋಧವನ್ನು ಮಾಡಬೇಕೆಂಬುದರ ಕಡೆಗೆ ಕೂಡ ಅವರ ಒತ್ತಾಯ ಇತ್ತು. ಅಂತಹ ಒಬ್ಬ ಸಚ್ಚಾರಿತ್ರ್ಯವಂತ ಪ್ರಾಮಾಣಿಕ ನಾಯಕರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅಂತಹ ಒಂದು ಮಹಾನ್ ಚೇತನದ ಆತಕ್ಕೆ ಚಿರಶಾಂತಿ ಸಿಗಲಿ ಎಂದು ವೈಯಕ್ತಿಕವಾಗಿ ಹಾಗೂ ನನ್ನ ಪಕ್ಷದ ವತಿಯಿಂದ ಕೋರುತ್ತೇನೆ. ನಮ್ಮ ರಾಜ್ಯದ ಮಾಜಿ ಸಚಿವರಾದ ಶ್ರೀಮಾನ್ ಕೆ.ಟಿ. ರಾಥೋಡ್ ರವರೂ ಕೂಡ ದಿನಾಂಕ 7.3.92ರಂದು ನಿಧನರಾಗಿದ್ದಾರೆ ಹಾಗೂ ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದಂಥ ಶ್ರೀ ಹನಿಯಾ ನಾಯಕ್‌ರವರೂ ಕೂಡ ದಿನಾಂಕ 31.1.92 ರಂದು ನಿಧನರಾಗಿದ್ದಾರೆ.

ಇವರುಗಳ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದೂ ಅವರು ನಿಧನರಾಗಿರತಕ್ಕಂಥ ಈ ಸಂದರ್ಭದಲ್ಲಿ ಅವರ ಕುಟುಂಬವರ್ಗದವರಿಗೆ ಈ ನಷ್ಟವನ್ನು ಹಾಗೂ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತನು ನೀಡಲಿ, ಎಂದೂ ಹಾರೈಕೆ ಮಾಡಿ, ಮಾನ್ಯ ಸಭಾಧ್ಯಕ್ಷರು ಏನು ನಿರ್ಣಯವನ್ನು ,ಮಂಡನೆ ಮಾಡಿರುತ್ತಾರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಮತ್ತೊಮ್ಮೆ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

11–50 ಎ.ಎಂ.

ಶ್ರೀ ರಾಮಕೃಷ್ಣ ಹೆಗಡೆ (ಬಸವನಗುಡಿ) :- ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹಿರಿಯರೆಲ್ಲ ಒಬ್ಬೊಬ್ಬರಾಗಿ ನಮ್ಮನ್ನು ಅಗಲಿ ಹೋಗುತ್ತಿದ್ದಾರೆ. ಇನ್ನೇನು ಒಂದೆರಡು, ವರ್ಷಗಳಲ್ಲೇ ನಾಲ್ಕು ವರ್ಷಗಳಲ್ಲೋ ಇನ್ನುಳಿದವರೂ ಹೋಗಬಹುದು. ಅವರ ನಂತರ ಸ್ವಾತಂತ್ರ್ಯ ಹೋರಾಟವೆಂದರೇನು, ಅದರಲ್ಲಿ ಯಾರು ಯಾರು ಭಾಗವಹಿಸಿದ್ದರು, ಅವರು ಪಟ್ಟಂಥ ಕಷ್ಟ ಮಾಡಿದಂಥ ತ್ಯಾಗ ಏನು - ಅದನ್ನೆಲ್ಲಾ ನಾವು ಪುಸ್ತಕದಲ್ಲಿ ಓದಬೇಕಾಗುತ್ತದೆ ಅಥವಾ ಇತಿಹಾಸವನ್ನು ಓದಬೇಕಾಗುತ್ತದೆ. ಕೇವಲ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಂಥವರು ನಮ್ಮನ್ನು ಅಗಲಿ ಹೋಗುತ್ತಿದ್ದಾರೆ ಎಂಬುದಷ್ಟೇ ವಿಚಾರ ಅಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ಒಂದು ಮೌಲ್ಯವನ್ನು ನಾವು ಅನುಷ್ಠಾನಕ್ಕೆ ತಂದೆವು, ಈ ದೇಶದ ರಾಜಕೀಯ ಜೀವನದಲ್ಲಿ ಅದಕ್ಕೆ ಬದ್ಧರಾದವರು ಕೂಡ ನಮ್ಮನ್ನು ಅಗಲಿ ಹೋಗುತ್ತಿದ್ದಾರೆ. ಮಾನ್ಯ ಕಡಿದಾಳ್ ಮಂಜಪ್ಪನವರು ಅಂತಹವರಲ್ಲಿ ಒಬ್ಬರು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ನಮ್ಮಿಂದ ದೂರ ಹೋದ ಮೇಲೆ ನಾವು ಅವರಲ್ಲಿದ್ದ ಗುಣಗಳನ್ನು ಕಾಣುತ್ತೇವೆ. ಕೆಲವು ಸಂದರ್ಭದಲ್ಲಿ ಇಲ್ಲದೆ ಇರತಕ್ಕಂಥ ಗುಣಗಳನ್ನು ಕೂಡ ಕಾಣುತ್ತೇವೆ. ಆದರೆ ಕಡಿದಾಳ್ ಮಂಜಪ್ಪನವರ ವಿಚಾರದಲ್ಲಿ ಅವರ ಜೀವನದ ಬಗ್ಗೆ ತಾವು ಏನೊಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದಿರಿ, ಕೆಲವು ಮಾತುಗಳನ್ನು ಹೇಳಿದಿರಿ ಅದು ಅಕ್ಷರಶಹಃ ನಿಜ ಮತ್ತು ಅತ್ಯಂತ ಅರ್ಥ ಪೂರ್ಣವಾದಂತಹ ಮಾತುಗಳು. ಮಾನ್ಯ ಕಡಿದಾಳ್ ಮಂಜಪ್ಪನವರು ಅಧಿಕಾರದ ಬೆನ್ನುಹಿಂದೆ ಓಡಿ ಹೋದವರಲ್ಲ. ಇಂದು ನಾವು ಯಾವ ಕಾಲದಲ್ಲಿ ಇದ್ದೇವೆಂದರೆ, ಅಧಿಕಾರವೇ ಸರ್ವಸ್ವ, ಅಧಿಕಾರ ಬಿಟ್ಟು ಜೀವನ ಇಲ್ಲ ಎನ್ನತಕ್ಕಂಥ ಕಾಲದಲ್ಲಿ ನಾವು ವಾಸ ಮಾಡುತ್ತಿದ್ದೇವೆ. ಕಡಿದಾಳ್ ಮಂಜಪ್ಪನವರು ರಾಜಕೀಯ ಬಿಟ್ಟು ತಾವಾಗಿಯೇ ಸ್ವೇಚ್ಛೆಯಿಂದ ಸನ್ಯಾಸ ಸ್ವೀಕಾರ ಪಡೆಯುತ್ತಿರಲಿಲ್ಲ, ಅವರೊಬ್ಬ ಅತ್ಯಂತ ಅಪ್ಪಟವಾದಂತಹ ಗಾಂಧಿವಾದಿಗಳಾಗಿದುದ್ದರಿಂದ, ಗಾಂಧೀಜಿಯವರು ಹೇಳಿದಂತಹ, ಅವರು ಹಾಕಿಕೊಟ್ಟಂತಹ ಮಾರ್ಗದಿಂದ ನಾವು ಇವತ್ತು ದೂರ ಸರಿಯುತ್ತಿದ್ದೇವೆ ಎನ್ನತಕ್ಕಂಥ ಚಿಂತನೆ ಒಂದೇ ಅವರು ರಾಜಕೀಯ ಬಿಡಲು ಕಾರಣವಾಯಿತು. ನನ್ನ ಮತ್ತು ಅವರ ನಿಕಟ ಪರಿಚಯ ಮತ್ತು ಸಂಬಂಧ ಬಂದಿದ್ದು ಲ್ಯಾಂಡ್ ರಿಫಾರ್ಮ್ಸ್ ಬಿಲ್ ಬಗ್ಗೆ ಡಿಸ್‌ಕಷನ್ ಮಾಡುವಾಗ ನಾನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಒಬ್ಬ ಮೆಂಬರ್ ಆಗಿದ್ದೆ. ಭೂಸುಧಾರಣಾ ವಿಚಾರದಲ್ಲಿ ನನಗೆ ಆಸೆ ಇದೆ ಎಂದು ತಿಳಿದುಕೊಂಡ ಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮೀಟಿಂಗ್‌ಗಿಂತ ಮೊದಲು ಆ ದಿವಸ ಯಾವ ಯಾವ ವಿಚಾರ ಚರ್ಚೆಗೆ ಬರುತ್ತದೋ ಆ ವಿಚಾರದಲ್ಲಿ ನನ್ನನ್ನು ಕರೆದು ಖಾಸಗಿಯಾಗಿ ಚರ್ಚೆ ಮಾಡಿದಂತಹ ಉದಾಹರಣೆಗಳು ಇವೆ. ಅವರು ತಮ್ಮ ಮೌಲ್ಯಗಳನ್ನು ಕೇವಲ ಪುಸ್ತಕದಲ್ಲಿ ಅಥವಾ ಮಾತಿನಲ್ಲಿ ಅದಕ್ಕೆ ನಿಷ್ಠೆ ತೋರಿಸದೆ ತಮ್ಮ ಜೀವನದಲ್ಲಿ ಅದನ್ನು ನನಗೆ ಆಚರಿಸಿ ತೋರಿಸಿದ್ದಾರೆ. ಅದೇ ಅವರ ಹೆಚ್ಚಿನ ಕೀರ್ತಿ ಮತ್ತು ಅವರಿಗೆ ನಾವು ಕೊಡತಕ್ಕಂಥ ಗೌರವ. ಈ ಸರ್ಕಾರ ಅವರ ಖಾಯಿಲೆ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಸಹಾಯವನ್ನು ಮಾಡಿತು ಎಂದು ನನಗೆ ಸಂತೋಷ. ನಾವು ಅವರಿಗೆ ಶ್ರದ್ಧಾಂಜಲಿಯನ್ನು ಕೋರುವ ಅತ್ಯಂತ ಉತ್ತಮವಾದ ರೀತಿ ಯಾವುದೆಂದರೆ, ಯಾವ ರೀತಿ ಅವರು ತಮ್ಮ ಜೀವನದಲ್ಲಿ ನಡೆದುಕೊಂಡರೋ ಅದರಲ್ಲಿ ನೂರರಲ್ಲಿ ಒಂದು ಪಾಲು ನಮ್ಮ ಜೀವನದಲ್ಲಿ ನಾವು ಆಚರಣೆ ಮಾಡಿದರೆ ಅದು ಒಂದೇ ಸಾಕೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಕಡಿದಾಳ್ ಮಂಜಪ್ಪನವರ ಒಂದೇ ಒಂದು ಆಸೆ ಏನಾಗಿತ್ತು ಎಂದರೆ, ನಮ್ಮ ಜೀವನದಲ್ಲಿರತಕ್ಕಂಥ ಅಸಮಾನತೆ ಅದು ಆರ್ಥಿಕವಾಗಿರಬಹುದು, ಅಥವಾ ಸಾಮಾಜಿಕ ವಾಗಿರಬಹುದು, ಒಂದು ಕಡುಬಡವರು ಇವೆರಡು ಹೋಗಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ಕೊನೆ ಘಳಿಗೆವರೆಗೂ ವ್ಯಕ್ತಪಡಿಸುತ್ತಿದ್ದರು. ಅದನ್ನು ನಾವು ಇವತ್ತು ನೆನಪಿಸಿ

LA. Vol - III

ಕೊಳ್ಳಬೇಕು, ಅವರಿಗೆ ನನ್ನ ವೈಯಕ್ತಿಕವಾದಂತಹ ಶ್ರದ್ಧಾಂಜಲಿಯನ್ನು ವ್ಯಕ್ತ ಮಾಡಲಿಕ್ಕೆ ಬಯಸುತ್ತೇನೆ. ಮತ್ತು ತಾವು ಅವರ ಬಗ್ಗೆ ಹೇಳಿದ ಪ್ರತಿಯೊಂದು ಮಾತನ್ನು ನಾನು ಅನುಮೋದಿಸ ಬಯಸುತ್ತೇನೆ. ಅದೇ ರೀತಿ ದಿವಂಗತ ರಾಥೋಡ್‌ರವರು ಕೆಲವು ಸಮಯ ನಮ್ಮ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೆ. ಅದೇ ರೀತಿ ದಿವಂಗತ ಹನಿಯಾ ನಾಯಕ್‌ರವರು ಕೂಡ ಸೇವೆ ಸಲ್ಲಿಸಿದ್ದಾರೆ. ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸತಕ್ಕಂಥಾದ್ದು ನಮ್ಮ ಕರ್ತವ್ಯ ಆ ರೀತಿ ನಾವು ಮಾಡ್ತಿದ್ದೇವೆ.

+ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಹಳೆಯ ಮೈಸೂರು ಮತ್ತು ಕರ್ನಾಟಕ, - ಎರಡೂ ಹಂತಗಳಲ್ಲಿ ಈ ರಾಜ್ಯದ ರಾಜಕೀಯದಲ್ಲಿ ತನ್ನದೇ ಆದಂಥ ಪ್ರಭಾವವನ್ನು ಬೀರಿದಂಥ ಮಾನ್ಯ ಕಡಿದಾಳ್ ಮಂಜಪ್ಪನವರು ಇಂದು ನಮ್ಮ ಮುಂದೆ ಇಲ್ಲ. ಅವರ ಬಗ್ಗೆ ಮಾತನಾಡತಕ್ಕಂಥ ಅರ್ಹತೆ ಇಂದಿನ ಪರಿಸ್ಥಿತಿಯಲ್ಲಿ ಅನೇಕ ರಾಜಕಾರಣಿಗಳಿಗೆ ಇಲ್ಲ. ಏಕೆಂದರೆ, ಅವರು ಬಹಳ ಎತ್ತರಕ್ಕೆ ತಮ್ಮ ರಾಜಕೀಯ ಜೀವನವನ್ನು ತೆಗೆದುಕೊಂಡು ಹೋಗಿದ್ದಂಥವರು. ನಾನು ಅವರನ್ನು ಅನೇಕ ಸಾರಿ ಭೇಟಿಯಾದಾಗ ನಮ್ಮನ್ನೆಲ್ಲಾ ಅವರು ಬಹುವಚನದಿಂದ ಕರೆಯುತ್ತಿರಲಿಲ್ಲ, ಏಕವಚನದಿಂದಲೇ ಅವರು ಕರೆಯುತ್ತಿದ್ದರು. "ಬೈರೇಗೌಡಾ ಬಾರೋ ಇಲ್ಲಿ" ಎಂದೇ ಉಪಯೋಗಿಸುತ್ತಿದ್ದರು. ಮಾತನಾಡುವಾಗಲೂ ಅದೇ ಸ್ವಾತಂತ್ರ್ಯವನ್ನು ಪಡೆದು ಮಾತನಾಡುತ್ತಿದ್ದರು. ಅನೇಕ ವಿಚಾರಗಳಲ್ಲೂ ಅದರಲ್ಲೂ ರಾಜಕೀಯ ಜೀವನದ ಬಗ್ಗೆ ಅನೇಕ ರಾಜಕಾರಣಿಗಳು ಬೆಳೆಸಿಕೊಂಡಿರುವ ನೀತಿ ಬಗ್ಗೆ ಹಾಗೂ ರಾಜಕೀಯದಲ್ಲಿ ತುಂಬಿ ತುಳುಕಾಡುತ್ತಿರುವ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದರು. ಅವರಿಗೆ ಅದಕ್ಕೋಸ್ಕರ ಬಹಳ ಬೇಜಾರಾಗಿತ್ತು. ಅವರ ಮನಸ್ಸು ಅದರ ಬಗ್ಗೆ ಹೆಚ್ಚಿಗೆ ಚಿಂತನೆ ಮಾಡುತ್ತಿತ್ತು. ಇದು ಇತ್ತೀಚಿನದು. ಇವತ್ತು ರಾಜ್ಯದಲ್ಲಿ ಲಕ್ಷ ಲಕ್ಷ ಬಡವರಾಗಿರತಕ್ಕಂಥವರು ಗೇಣಿದಾರರಾಗಿರತಕ್ಕಂಥರು ಯಾವಾಗಲೂ ಮರೆಯದೇ ಇರತಕ್ಕಂಥ ಕೆಲಸವನ್ನು ಮಾಡಿದ್ದಾರೆಂದರೆ, ಅವರು ಕಡಿದಾಳ್ ಮಂಜಪ್ಪನವರು. ನಾನೂ ಸಹ ಒಬ್ಬ ಗೇಣಿದಾರನ ಮಗ. ಗೇಣಿದಾರರಾಗಿರತಕ್ಕಂಥವರ ಕಷ್ಟ ಪರಿಸ್ಥಿತಿ ಏನು ಎಂದು ನನಗೆ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆ ಕಡೆ ಗೇಣಿದಾರರ ಸಮಸ್ಯೆ ಇತ್ತು. ನಮ್ಮ ಜಿಲ್ಲೆ ಮತ್ತು ಇನ್ನಿತರ ನಾಲ್ಕೈದು ಜಿಲ್ಲೆಗಳಲ್ಲಿ ಜೋಡಿ ಇನಾಂತಿ ರದ್ದತಿ ಸಮಸ್ಯೆ ಇತ್ತು. ಈ ಎರಡೂ ಸಮಸ್ಯೆಗಳಿಗೆ ಟೆನೆನ್ಸಿ ಆಯಕ್ಟ್ ಜಾರಿಗೆ ಕೊಟ್ಟಿರತಕ್ಕಂಥ ಮತ್ತು ಇನಾಂತಿ ರದ್ದತಿ ಕಾನೂನನ್ನು ಜಾರಿಗೆ ಕೊಟ್ಟಿರತಕ್ಕಂಥ ಕೀರ್ತಿ ಸಲ್ಲಬೇಕಾದರೆ ಅದು ಪ್ರಥಮವಾಗಿ ಕಡಿದಾಳ್ ಮಂಜಪ್ಪನವರಿಗೆ ಸಲ್ಲುಬೇಕು. ಆ ಕಡೆ ಮಾನ್ಯ ಶಾಂತವೇರಿ ಗೋಪಾಲ ಗೌಡರ ಮುಖಂಡತ್ವದಲ್ಲಿ ಕಾಗೋಡು ಸತ್ಯಾಗ್ರಹ ಹೋರಾಟ ನಡೆದರೆ ನಮ್ಮ ಭಾಗದಲ್ಲಿ ಜೋಡಿ ಇನಾಂತಿ ರದ್ದತಿ ಚಳುವಳಿ ನಡೆಯಿತು. ಅಲ್ಲಿ ಶಾಂತವೇರಿ ಗೋಪಾಲ ಗೌಡರು ಪ್ರಭಾವವನ್ನು ಬೀರಿ ಅಂದರೆ ಅವರ ಪ್ರಭಾವದಿಂದ ಟೆನೆನ್ಸಿ ಕಾನೂನು ಮತ್ತು ಭೂ ಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಯಿತು. ಅದೇ ರೀತಿ ನಮ್ಮ ಭಾಗದಲ್ಲಿ ಜೋಡಿ ಇನಾಂತಿ ರದ್ದತಿ ಬರಬೇಕಾದರೆ ವಿಧಾನಪರಿಷತ್ತಿನಲ್ಲಿ ಸದಸ್ಯರಾಗಿರತಕ್ಕಂಥ ವೆಂಕಟಗಿರಿಯಪ್ಪನವರ ಮುಖಂಡತ್ವದಲ್ಲಿ ಹೋರಾಟ ನಡೆಯಿತು. ಇವರೆಲ್ಲರ ಪ್ರತಿಫಲವಾಗಿ ಇವತ್ತು ರಾಜ್ಯಾದ್ಯಂಥ ಲಕ್ಷಾಂತರ ಗೇಣಿದಾರರಿಗೆ ರಕ್ಷಣೆ ಸಿಕ್ಕಿದೆ. ಉಳುವವನೇ ಭೂಮಿಯ ಒಡೆಯನಾಗಿ ಇಂದು ಅನೇಕ ಜನ ಗೇಣಿದಾರರು ಸುಖದ ಜೀವನವನ್ನು ನಡೆಸುತ್ತಿದ್ದಾರೆ. ಇಂತಹ ಮಹತ್ತರವಾದ ಕೆಲಸವನ್ನು ಮಾಡಿರತಕ್ಕಂಥವರು ಕಡಿದಾಳ್ ಮಂಜಪ್ಪನವರು. ಇವರು ಉತ್ತರದಲ್ಲಿ ಪಠಮೋತ್ತಮರು. ಅವರು ಬಿಟ್ಟು ಹೋಗಿರತಕ್ಕಂಥ ಆದರ್ಶ ಏನಿದೆ ಅದರಲ್ಲಿ ಕಿಂಚಿತ್ತಾದರೂ ರಾಜಕೀಯದಲ್ಲಿರುವವರು ಪಾಲಿಸಿದರೆ ದೇಶ ಎಷ್ಟೋ ಮುಂದುವರಿಯುತ್ತದೆ. ಆದರೆ ಅಂಥ ಪರಿಸ್ಥಿತಿಯನ್ನು ದುರ್ದೈವದಿಂದ ಇವೊತ್ತಿನ ದಿವಸಗಳಲ್ಲಿ ನಾವು ಕಾಣುತ್ತಾ ಇಲ್ಲ. ಅವರು ಬಿಟ್ಟುಹೋಗಿರತಕ್ಕಂಥ ದೈಯಧೋರಣೆಗಳನ್ನು ನಾವುಗಳೆಲ್ಲರೂ ಅನುಸರಿಸೋಣ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಿವಂಗತರಾದ ಶ್ರೀ ಕೆ.ಚಿ. ರಾಥೋಡ್‌ರವರು ಪ್ರಥಮ ಬಾರಿಗೆ 1972ರಲ್ಲಿ ಚುನಾಯಿತರಾಗಿ ಈ ಸಭೆಗೆ ಬಂದರು. ಅವರು ಸಚಿವರಾಗಿ ಈ ರಾಜ್ಯಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಸೇವೆ ಸಲ್ಲಿಸಿದಂಥ ಇಲಾಖೆಯಲ್ಲಿಯೇ ನಾನೂ ಕೂಡ ಸೇವೆ ಸಲ್ಲಿಸುವ ಅವಕಾಶ ಬಂದಿತ್ತು. ಮಾನ್ಯಶ್ರೀ ರಾಥೋಡ್‌ರವರು ಸಮಾಜದ ದುರ್ಬಲ ವರ್ಗದವರು ಮತ್ತು ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟವರ ಬಗ್ಗೆತುಂಬಾ ಚಿಂತನೆ ಮಾಡತಕ್ಕಂಥವರಾಗಿದ್ದರು. ಅವರಿಗೆ ಈ ಸಂದರ್ಭದಲ್ಲಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ದಿವಂಗತ ಶ್ರೀ ಹನಿಯಾ ನಾಯಕ್‌ರವರ ಬಗ್ಗೆ ನಾನು ಆಷ್ಟಾಗಿ ಬಲ್ಲವನಲ್ಲ, ಅವರು ಸಹ ಈ ರಾಜ್ಯಕ್ಕೆ ತಮ್ಮ ಅಪಾರವಾದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಆಶಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಪ್ರೊ : ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) :- ಮಾನ್ಯ ಸಭಾಧ್ಯಕ್ಷರೆ, ದಿವಂಗತ ಮಾನ್ಯ ಕಡಿದಾಳ್ ಮಂಜಪ್ಪನವರ ಬಗ್ಗೆ, ಅವರ ವ್ಯಕ್ತಿತ್ವದ ಬಗ್ಗೆ ಹೆಚ್ಚಿಗೆ ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ. ನನಗೆ ಅವರ ಜೊತೆಗೆ 70 ರ ದಶಕದಲ್ಲಿ ಸಂಪರ್ಕವಾಗಿತ್ತು. ಶ್ರೀ ಜಯಪ್ರಕಾಶ ನಾರಾಯಣ್‌ರವರು ದೇಶದ ಯುವ ಶಕ್ತಿಯನ್ನು ಸಂಘಟನೆ ಮಾಡಿ, ರಾಷ್ಟ್ರದ ನವನಿರ್ಮಾಣ ಮಾಡುವಂಥ ಪ್ರಯತ್ನದ ಸಂಬಂಧ ರಾಜ್ಯದಲ್ಲಿ ಕಡಿದಾಳ್ ಮಂಜಪ್ಪನವರು ನಾಯಕತ್ವ ವಹಿಸಿದಾಗ, 2–3 ವರ್ಷಗಳ ಕಾಲ ಅತ್ಯಂತ ನಿಕಟವಾಗಿ ಅವರ ಜೊತೆಯಲ್ಲಿ ಕೆಲಸ ಮಾಡುವಂಥ ಅವಕಾಶ ನನಗೆ ಸಿಕ್ಕಿತ್ತು. ಅವರು ಪ್ರಾಮಾಣಿಕತೆ ಮತ್ತು ಶಿಸ್ತಿನ ಪ್ರತೀಕವಾಗಿದ್ದರು. ಜಯಪ್ರಕಾಶ್ ನಾರಾಯಣ್‌ರವರ ಕ್ರಾಂತಿ ಚಳುವಳಿಯ ಜೊತೆಗೆ ಬೇರೆ ರಾಜಕೀಯ ಪಕ್ಷಗಳ ಸಂಬಂಧವನ್ನು ಬೆಳೆಸಿದ ಕೂಡಲೇ ಕಡಿದಾಳ್‌ರವರ ಜೊತೆಗೆ ನಾನೂ ಕೂಡ ಈ ಚಳುವಳಿಯಿಂದ ದೂರವಾಗಿ ಉಳಿದವನು. ಆ ಕಾರಣವೇ ರಾಜಕಾರಣದ ಬಗ್ಗೆ ಇದ್ದಂಥ ಧೋರಣೆ, ಪ್ರಾಮಾಣಿಕತೆ ಮತ್ತು ಶಿಸ್ತು ಇದನ್ನು ಮೆಚ್ಚಿದಂಥ ವ್ಯಕ್ತಿಗಳಲ್ಲಿ ನಾನೂ ಒಬ್ಬ. ಅವರು ನನ್ನಂಥವರೆಲ್ಲರಿಗೂ ಸ್ಫೂರ್ತಿ ಆಗಿದ್ದವರು. ಅಂಥ ಒಬ್ಬ ಮಹಾನ್ ವ್ಯಕ್ತಿ ಇವೊತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ನನ್ನ ವೈಯಕ್ತಿಕ ಪ್ರೀತಿ ಮತ್ತು ಗೌರವಗಳನ್ನು ಹಾಗೂ ರಾಜ್ಯ ರೈತಸಂಘದ ಪ್ರೀತಿಗೌರವಗಳನ್ನು ಅವರ ಕುಟುಂಬವರ್ಗದವರಿಗೆ ತಮ್ಮ ಮೂಲಕ ಸಲ್ಲಿಸುತ್ತೇನೆ.

ಹಾಗೆಯೇ ದಿವಂಗತ ಶ್ರೀ ಕೆ.ಟಿ. ರಾಥೋಡ್‌ರವರು ಮತ್ತು ಶ್ರೀ ಹನಿಯಾ ನಾಯಕ್‌ರವರು ಕೂಡ ಈ ರಾಜ್ಯಕ್ಕೆ ತಮ್ಮ ಅಪಾರ ಸೇವೆಯಲ್ಲಿ ಸಲ್ಲಿಸಿದವರಾಗಿದ್ದು ಅವರು ಕೂಡ ನಮ್ಮೆಲ್ಲರನ್ನೂ ಅಗಲಿ ಹೋಗಿದ್ದಾರೆ. ಅವರ ಆತ್ಮಗಳಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ಕುಟುಂಬವರ್ಗದವರಿಗೆ ನನ್ನ ಸಂತಾಪ ಸೂಚನೆಯನ್ನು ತಮ್ಮ ಮೂಲಕ ಸಲ್ಲಿಸ ಬಯಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ) :- ಮಾನ್ಯ ಅಧ್ಯಕ್ಷರೇ, ತಾವು ಹೇಳಿರುವ ಪ್ರತಿಯೊಂದು ಮಾತೂ ಸಹ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೆ ಅನ್ವಯಿಸುವುದು ಎಂಬುದರಲ್ಲಿ ಎಳ್ಳಷ್ಟೂ ಭಿನ್ನಾಭಿಪ್ರಾಯವಿಲ್ಲ. ಅವರ ಜೀವನ ಬಹಳ ಸರಳವಾದದ್ದು ಮತ್ತು ಸ್ವಚ್ಛವಾದದ್ದು. ಭ್ರಷ್ಟ ಆಡಳಿತವನ್ನು ನೋಡಿದಾಗ ಅವರು ಎಷ್ಟರಮಟ್ಟಿಗೆ ಕಿಡಿಕಿಡಿ ಆಗುತ್ತಿದ್ದರು ಎನ್ನುವುದನ್ನು ಸ್ವತಃ ಅವರ ಜೊತೆಯಲ್ಲಿ ಮಾತನಾಡಿದವರಿಗೇ ಗೊತ್ತು. ಈ ರೀತಿ ಆಡಳಿತ ನಡೆಸಿದ್ದು ಮಾತ್ರವಲ್ಲ, ಅವರ ಪ್ರತಿ ದಿವಸದ ಜೀವನದಲ್ಲೂ ಕೂಡ ಸಾಮಾನ್ಯ ಜನರ ಹಿತ ಸಾಧಿಸುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಆಲೋಚನೆ ಮಾಡುತ್ತಾ ಇದ್ದವರು. ಅವರು ಮೊಟ್ಟಮೊದಲು ಅಧಿಕಾರವನ್ನು ವಹಿಸಿಕೊಂಡಾಗ ಜೋಡಿ ಗ್ರಾಮಗಳನ್ನು ಮಜಾ ಮಾಡಬೇಕು, ಅಲ್ಲಿದ್ದಂಥಾ ರೈತರಿಗೆ ಯಾವ ರೀತಿ ತೊಂದರೆ ಆಗುತ್ತಿದೆ ಎನ್ನುವುದನ್ನು ನೋಡಿದಾಗ ಅವರ ಎದುರಿಗೆ ಸಿಕ್ಕಿದವರು ಗ್ರಾಮಾಧಿಕಾರಿಗಳು. ಅದಕ್ಕಾಗಿ ಅವರ ಆಡಳಿತವನ್ನು ತಪ್ಪಿಸುವುದಕ್ಕೆ ಅವರು ಸರ್ವ ಪ್ರಯತ್ನವನ್ನೂ ಮಾಡಿದವರು. ಆದರೆ ಅವರ ಉದ್ದೇಶ ಎಷ್ಟು ಸರಿಯೆನ್ನುವ ರೀತಿ ಇತ್ತೋ, ಅದಕ್ಕೆ ತಕ್ಕಂತೆ ಗ್ರಾಮಾಧಿಕಾರಿಗಳನ್ನು ಮಜಾ ಮಾಡಿದ ಮೇಲೆ ಗ್ರಾಮದ ಆಡಳಿತ ಅನುಕೂಲವಾಗಲಿಲ್ಲ ಎನ್ನುವುದನ್ನು ನಾವು ಇವತ್ತು ಕಾಣಬಹುದು. ಆದರೆ ಅವತ್ತು ಅವರು ಕೈಗೊಂಡ ಕಾರ್ಯಕ್ರಮ ಬಹಳ ಅವಶ್ಯಕವಾಗಿತ್ತು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರು ಎಷ್ಟು ಸ್ವಚ್ಛವಾದ, ಸರಳವಾದ ಜೀವನ ನಡೆಸುತ್ತಿದ್ದರು ಎನ್ನುವುದು ಅವರನ್ನು ಹತ್ತಿರದಿಂದ ನೋಡಿದವರಿಗೆ ಕಾಣುತ್ತಾ ಇತ್ತು. ಸಂಪಾದನೆ ಕಡಿಮೆ ಇರಬಹುದು, ಖರ್ಚನ್ನು ತಡೆದುಕೊಳ್ಳುವ ಶಕ್ತಿ ಇಲ್ಲದೇ ಇರಬಹುದು. ಆದರೆ ಅವರ ಸಂಪಾದನೆ ಎಷ್ಟೋ ಅದಕ್ಕೆ ತಕ್ಕ ಜೀವನದ ಮಟ್ಟವನ್ನೇ ಕೆಳಗಿಳಿಸಿಕೊಂಡು ಜೀವನ ಮಾಡುವುದು ಅವಶ್ಯಕ ಎಂದುಕೊಂಡು ಜೀವಿಸಿದವರು ಮತ್ತು ಅದರಂತೆಯ ನಡೆದುಕೊಂಡವರು. ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಎದುರು ಕುಳಿತಿರುವ ನಾಯಕರ ಮಾತಿನಿಂದಲೂ ಕೂಡ ಕಡಿದಾಳ್ ಮಂಜಪ್ಪನವರು ಎಷ್ಟು ದೊಡ್ಡವರು, ಅವರ ಜೀವನ ಎಷ್ಟು ಪರಿಶುಭ್ರವಾದದ್ದು ಎನ್ನುವುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಭಗವಂತನ ಕೃಪೆಯಿಂದ ನನಗೆ ಅವರ ಸಮೀಪದಲ್ಲಿದ್ದು, ಅವರ ಜೊತೆಯಲ್ಲಿ ಕೆಲಸ ಮಾಡುವ ಭಾಗ್ಯ ಇದ್ದುದರಿಂದ ಅವರ ಜೀವನವನ್ನು ಬೇರೆಯವರಿಗೆ ಹೋಲಿಸಿದಾಗ ಅವರೆಷ್ಟು ದೊಡ್ಡವರು ಎನ್ನುವುದು ಕಣ್ಣಿಗೆ ಕಾಣುವ ರೀತಿ ಇತ್ತು ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ನಮ್ಮ ಮುಖ್ಯಮಂತ್ರಿಗಳೂ ಕೂಡ ಅವರ ವಿಷಯದಲ್ಲಿ ಒಂದು ಸ್ಪಷ್ಟವಾದ ಚಿತ್ರವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಈ ಬಗ್ಗೆ ಹೆಚ್ಚಿಗೆ ಹೇಳುವುದಕ್ಕಿಂತ ನಾವು ದೇವರನ್ನು

ಪ್ರಾರ್ಥನೆ ಮಾಡಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಅನುಗ್ರಹಿಸಬೇಕೆಂದು ಕೇಳಿಕೊಳ್ಳುವುದೊಂದೇ ನಮ್ಮ ಮುಂದೆ ಇರುವ ಮಾರ್ಗ ಎಂದು ನಾನು ಭಾವಿಸುತ್ತೇನೆ. ಅಂಥ ಸರಳ ಜೀವನ, ಪರಿಶುದ್ಧ ಜೀವನ ನಡೆಸಿದವರು . ನಮಗೆ ಸ್ಫೂರ್ತಿಯಾಗಲಿ. ನಮ್ಮ ಜೀವನವನ್ನು ಪರಿಶುದ್ಧ ಮಾಡಿಕೊಳ್ಳಲು ಪ್ರಯತ್ನಿಸುವುದಕ್ಕೆ ಅರ್ಹವಾದದ್ದು . ಅವರ ಜೀವನ ಎಂದು ನಾನು ಸಭೆಗೆ ತಿಳಿಸಿ, ನಾವೆಲ್ಲರೂ ಅವರ ಕುಟುಂಬವರ್ಗದವರಿಗೆ ದುಃಖ ಸಹಿಸಿಕೊಳ್ಳುವ ಶಕ್ತಿಯನ್ನು ಅನುಗ್ರಹಿಸಲಿ ಎಂದು ದೇವರನ್ನು ಪ್ರಾರ್ಥನೆ ಮಾಡೋಣ. ಹಾಗೆಯೇ ಶ್ರೀ ರಾಥೋಡ್‌ರನ್ನೂ ನಾನು ಬಲ್ಲೆ. ಅವರು ಮಂತ್ರಿಯಾಗಿ ಕೆಲಸ ಮಾಡಿದಾಗ ನಾನು ಆ ಮಂತ್ರಿಮಂಡಲದಲ್ಲಿ ಕೆಲಸ ಮಾಡಿದವನು. ಸಾಮಾನ್ಯ ಜನರ ಬಗ್ಗೆ, ಅದರಲ್ಲೂ ಹಿಂದುಳಿದ ವರ್ಗಗಳ ಬಗ್ಗೆ ಅವರ ಜೀವನಕ್ಕೆ ನಾವು ಯಾವರೀತಿ ಕೆಲಸ ಮಾಡಿದರೆ ಅವರಿಗೆ ಸಹಾಯವಾಗುತ್ತದೆ ಎನ್ನುವುದನ್ನು ತಿಳಿದು ಆ ರೀತಿ ಕೆಲಸ ಮಾಡಿದವರು. ಅನೇಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿ ಬಡವರ ಮಕ್ಕಳಿಗೆ ಆಶ್ರಯ ಕೊಡಬೇಕು, ಆ ಮುಖಾಂತರ ಬಡವರ ಸೇವೆ ಮಾಡಬೇಕೆಂದು ಒಂದೇ ಸಮನೆ ಪ್ರಯತ್ನ ಮಾಡುತ್ತಿದ್ದವರು. ಅವರ ಆತ್ಮಕ್ಕೂ ಚಿರಶಾಂತಿಯನ್ನು ಅನುಗ್ರಹಿಸಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಶ್ರೀಮಾನ್ ಹನಿಯಾ ನಾಯಕ್‌ರ ಪರಿಚಯ ನನಗಿಲ್ಲ, ಏಕೆಂದರೆ, ಅವರು ಬಹಳ ಹಿಂದೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲಸ ಮಾಡಿದವರು. ಆದ್ದರಿಂದ ನನಗೆ ಪರಿಚಯ ಇಲ್ಲದಿದ್ದರೂ ಕೂಡ ಒಳ್ಳೆಯ ಕೆಲಸ ಮಾಡಿದವರು, ಈ ರಾಜ್ಯದ ಸೇವೆ ಮಾಡಿದವರು ಎಂದು ಹೇಳಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಬೇಕೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಕಡಿದಾಳ್ ಮಂಜಪ್ಪನವರು ನಿಧನ ಹೊಂದಿರುವುದರಿಂದ ಈ ರಾಜ್ಯದ ಒಂದು ದೊಡ್ಡ ಶಕ್ತಿಯನ್ನು ಕಳೆದುಕೊಂಡಂತಾಗಿದೆ. ಈ ಸದನದ ಮೊದಲನೆಯ ಮುಖ್ಯಮಂತ್ರಿಯಾಗಿ, ಈ ವಿಧಾನಸೌಧವನ್ನು ಕಟ್ಟಿದ ಹೊಸದರಲ್ಲಿ ಪ್ರಥಮವಾಗಿ ಮುಖ್ಯಮಂತ್ರಿಗಳಾಗಿ ಭಾಗವಹಿಸಿದಂತಹ ಅವೊಂದು ದಿನಗಳಲ್ಲಿ ನಡೆದ ರಾಜಕೀಯ ಹೋರಾಟಗಳು ಕಡಿದಾಳ್ ಮಂಜಪ್ಪನವರಿಗೂ ಮತ್ತು ಕೆಂಗಲ್ ಹನುಮಂತಯ್ಯನವರಿಗೂ ಎಷ್ಟು ಸ್ನೇಹವಿತ್ತು, ಕೊನೆಯಲ್ಲಿ ಅವರು ಯಾವ ರೀತಿಯಾಗಿ ಬೇರೆಯಾದರು ಎನ್ನುವುದೆಲ್ಲವನ್ನು ನೆನೆದಾಗ ಅದೊಂದು ದೊಡ್ಡ ಇತಿಹಾಸ. ಅವರು ಒಬ್ಬ ಯುಗ ಪುರುಷ ಎಂದು ಹೇಳಿದರೂ ತಪ್ಪಾಗಲಾರದು. ಇಂತಹ ಮಹತ್ತರವಾದ ವಿಚಾರವೆತ್ತ, ಮಹಾದೊಡ್ಡ ವ್ಯಕ್ತಿತ್ವವುಳ್ಳಂತಹ ಅವರು ಈ ದೇಶದ ಒಂದು ದೊಡ್ಡ ಆಸ್ತಿ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ನಡೆದಿರತಕ್ಕ ಇತ್ತೀಚಿನ ರಾಜಕಾರಣಿಗಳನ್ನು ಕಂಡು ಅಪಾರವಾದ ನೋವನ್ನು ಅನುಭವಿಸಿದ್ದಾರೆ. ಈ ಭ್ರಷ್ಟಾಚಾರದ ಬಗ್ಗೆ, ರಾಜಕಾರಣದ ಬಗ್ಗೆ ಅವರು ಪುಸ್ತಕಗಳನ್ನು ಬರೆದಿದ್ದಾರೆ. 'ಪಂಜರವಳ್ಳಿಯ ಪಂಜು' ಎನ್ನುವ ಪುಸ್ತಕ ಬರೆದಿದ್ದಾರೆ. ನಾನು 1967ನೇ ಇಸವಿಯಲ್ಲಿ ಬೆಂಗಳೂರು ನಗರದಲ್ಲಿ ಚುನಾವಣೆಗೆ ನಿಂತಾಗ ಪ್ರತಿ ಸಭೆಯಲ್ಲೂ ಅವರು ಬರೆದಂತಹ ಪುಸ್ತಕದ ವಿಚಾರಗಳನ್ನು ಜನಗಳ ಮುಂದೆ ಹೇಳುತ್ತಾ ಇದ್ದೆ.ಕಡಿದಾಳ್ ಮಂಜಪ್ಪನವರು ರಾಜಕೀಯದ ಬಗ್ಗೆ ಬಹಳ ಒಳ್ಳೆಯ ಪುಸ್ತಕವನ್ನು ಬರೆದಿದ್ದರು. ಅವರು ಬರೀ ರಾಜಕಾರಣಿ ಆಗಿರಲಿಲ್ಲ, ಸಾಹಿತಿಯೂ ಕೂಡ ಆಗಿದ್ದರು. ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು. ನಾನು ಅನೇಕ ಬಾರಿ ಅವರ ಜೊತೆಯಲ್ಲಿ ಮಾತನಾಡಿರುವುದುಂಟು. ಅವರನ್ನು ಅನೇಕ ಸಭೆ ಸಮಾರಂಭಗಳಿಗೆ ಕರೆದಿರುವುದುಂಟು.ಅವರು ಚೈತನ್ಯ ಮೂರ್ತಿಯಾಗಿ, ಈ ನಾಡಿಗೆ ಅಪಾರವಾದಂತಹ ಸೇವೆಯನ್ನು ಮಾಡಿ, ಒಬ್ಬ ದೊಡ್ಡ ಆದರ್ಶ ರಾಜಕಾರಣಿಯಾಗಿ ಕೀರ್ತಿವಂತರಾದ ಅವರು ನಮ್ಮನ್ನು ಅಗಲಿದ್ದಾರೆ. ನಾನು ಹಿಂದಿನ ಸಭೆಯಲ್ಲಿ ಹೇಳಿದ ರೀತಿಯಲ್ಲಿ ಇಂತಹ ಮಹಾನೀಯರುಗಳ ನೆನಪು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಮತ್ತೊಮ್ಮೆ ನಾನು ಇಲ್ಲಿ ದನಿಗೂಡಿಸುತ್ತೇನೆ ; ಒಂದು ಸ್ಮಾರಕಭವನ ಅತಿ ಮುಖ್ಯ. ಅಂತಹ ಸ್ಮಾರಕಭವನದಲ್ಲಿ ಈ ನಾಡಿಗಾಗಿ ದುಡಿದಂತಹ ಶ್ರೇಷ್ಠ ಹಿರಿಯ ರಾಜಕಾರಣಿಗಳ ವಸ್ತುಗಳನ್ನು, ಬರಹಗಳನ್ನು ಅವರ ನೆನಪಿಗಾಗಿ ಇಡುವುದರ ಜೊತೆಗೆ ಅವು ಮುಂದಿನ ಪೀಳಿಗೆಗೆ ಒಂದು ಮಾರ್ಗದರ್ಶನವಾಗುತ್ತವೆ. ಸಮಾಜವಾದಿ ಸಿದ್ಧಾಂತದಲ್ಲಿ ಅಪಾರವಾದ ನಿಷ್ಠೆಯುಳ್ಳಂತಹ ಶಿವಮೊಗ್ಗ ಜಿಲ್ಲೆಯ ಶ್ರೀಮಾನ್ ಶಾಂತವೇರಿ ಗೋಪಾಲಗೌಡರು ಈ ನಾಡಿನಾದ್ಯಂತ ಭೂಸುಧಾರಣಾ ಕಾನೂನನ್ನು ಜಾರಿಗೆ ಕೊಡುವುದರ ಬಗ್ಗೆ ನಿರಂತರವಾಗಿ ಹೋರಾಟ ನಡೆಸಿದವರು. ಆ ಹೋರಾಟದ ಪ್ರೇರಣೆ ಕಡಿದಾಳ್ ಮಂಜಪ್ಪನವರಲ್ಲಿ ನಾಟಿ ಅವರು ಭೂಸುಧಾರಣೆಗೆ ಒಂದು ಹೊಸ ಚೈತನ್ಯವನ್ನು ಕೊಟ್ಟಂತಹ ಮಹಾ ವ್ಯಕ್ತಿ. ಕಡಿದಾಳ್ ಮಂಜಪ್ಪನವರು ನಿಜವಾಗಿಯೂ ಈ ನಾಡಿನ ಒಬ್ಬ ಧೀಮಂತ ಶಕ್ತಿ. ಅವರ

ಅಗಲಿಕೆಯಿಂದ ನಮಗೆ ಅಪಾರವಾದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿಯೆಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀಮಾನ್ ಕೆ.ಟಿ. ರಾಥೋಡ್‌ರವರು ಯಾವಾಗಲೂ ಬಹಳ ನಗುಮುಖದಿಂದ ಇರುತ್ತಿದ್ದರು. ಅವರು ಹಿಂದುಳಿದ ವರ್ಗದ ನಾಯಕರಾಗಿ ಅಪಾರವಾದ ಸೇವೆಯನ್ನು ಮಾಡಿರತಕ್ಕವರು. ಅವರ ಅಗಲಿಕೆಯಿಂದ ನಮಗೆ ಅತ್ಯಂತ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಭಗವಂತನತಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶತಮಾನವನ್ನು ಕಳೆದು ಬದುಕಿ ಈ ನಾಡಿನ ಉದ್ದಗಲಕ್ಕೂ ಈ ನಾಡಿನ ಸಂಪೂರ್ಣ ಅನುಭವವನ್ನು ಪಡೆದಂತಹ ಶ್ರೀಮಾನ್ ಹನಿಯಾ ನಾಯಕ್‌ರವರ ನಿಧನವು ಈ ನಾಡಿಗೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿಯೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :- ಮಾನ್ಯ ಅಧ್ಯಕ್ಷರೇ, ತಾವು ವ್ಯಕ್ತಪಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ಮತ್ತು ತಾವು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯಗಳಿಗೆ ನಾನು ಭಾಗಿಯಾಗಿದ್ದೇನೆ. ಅದರಲ್ಲಿಯೂ ಶ್ರೀಮಾನ್ ಬಂಗಾರಪ್ಪನವರು ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯಕ್ಕೂ ನಾನು ಧ್ವನಿಗೂಡಿಸುತ್ತೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ಮಾತನ್ನು ಆಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿರತಕ್ಕಂಥ ಮಹನೀಯರು ಒಬ್ಬೊಬ್ಬರಾಗಿ ಕಳಚಿ ಹೋಗುತ್ತಿದ್ದಾರೆ ಎಂದು ಹೇಳಿದರು. ಅದೇ ರೀತಿಯಾಗಿ ಇವತ್ತಿನ ದಿವಸ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಕಳಚಿ ಹೋಗಿದ್ದು ನಮಗೆಲ್ಲರಿಗೂ ಕೂಡ ಒಂದು ತಾಳಲಾರದೆ ಇರತಕ್ಕಂಥ ಅಗಲಿಕೆ. ನಾನು ಅವರ ಜೊತೆಯಲ್ಲಿ ಬಹಳ ವರ್ಷಗಳಿಂದ ವೈಯಕ್ತಿಕವಾಗಿ ಸಂಬಂಧವನ್ನು ಇಟ್ಟುಕೊಂಡಿದ್ದೇನೆ. ಅವರ ಬಗ್ಗೆ ಗುಣಗಾನ ಮಾಡತಕ್ಕಂಥ ಯೋಗ್ಯತೆ ಇಲ್ಲದೆ ಹೋದರೂ ಕೂಡ ಅವರ ಗುಣಗಳು ನಮಗೆಲ್ಲರಿಗೂ ಮಾದರಿಯಾಗಿವೆ. ಇವತ್ತು ಅವರು ಇಲ್ಲ. ಆದರೆ ಇವತ್ತಿನವರೆಗೂ ಸಾಯುವವರೆಗೂ ಕೂಡ ಅವರು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯಗಳು ನಮಗೆ ಮಾರ್ಗದರ್ಶಕಗಳಾಗಿವೆ. ಅಚಲವಾಗಿರತಕ್ಕಂಥ ರಾಜಕಾರಣದಲ್ಲಿ ಬೇಸತ್ತು ಬಹಳ ದೂರ ಸರಿದಿದ್ದರೂ ಕೂಡ ಅವರು ಒಂದು ಪುಸ್ತಕವನ್ನು ಬರೆದು, ಮತ್ತೆ ಲಾಯರ್ ಕೆಲಸವನ್ನು ಮಾಡಿ ಜೀವನವನ್ನು ಮಾಡಬೇಕು ಎಂದು ಹೇಳಿ ಜೀವನವನ್ನು ಪ್ರಾರಂಭ ಮಾಡಿದರು. ಅವರು ನಮಗೆಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದರು. ವೈಯಕ್ತಿಕವಾಗಿ ನನಗೆ ತಿಳಿದಿರತಕ್ಕಂಥದ್ದು ಏನೆಂದರೆ, ಇವತ್ತಿನ ದಿವಸ ಈ ರಾಜಕಾರಣದಲ್ಲಿ ನಾವು ಯಾರ್ಯಾರು ಕೆಲಸವನ್ನು ಮಾಡುತ್ತಿದ್ದೇವೆ, ನಮಗೆ ಈ ಪ್ರಜಾಪ್ರಭುತ್ವದಲ್ಲಿ ಯಾವ ರೀತಿಯಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು ಎನ್ನುವ ಬಗ್ಗೆ ಅವರು ದಾರಿದೀಪವಾಗಿದ್ದರು. ಯಾವ ರೀತಿಯಾಗಿ ರಾಜ್ಯಭಾರವನ್ನು ಮಾಡಬೇಕು, ಯಾವ ರೀತಿಯಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು, ಅಧಿಕಾರದಲ್ಲಿ ಇರತಕ್ಕಂಥವರು ಹೇಗೆ ನಿಷ್ಪ್ರಹರಾಗಿರಬೇಕು, ನಿಷ್ಠುರವಾಗಿರಬೇಕು, ನಿರಾಡಂಬರವಾಗಿರಬೇಕು ಎನ್ನುವುದರ ಬಗ್ಗೆ ಅವರು ಆದರ್ಶಪುರುಷರಾಗಿದ್ದರು. ಅವರು ಸತ್ಯ ವಾರ್ತೆಯನ್ನು ಕೇಳಿ ನನಗೆ ಯಾರೊಬ್ಬರು ಇದುವರೆಗೂ ಬುದ್ಧಿವಾದವನ್ನು ಹೇಳುತ್ತಿದ್ದರು, ನನಗೆ ವಾರಿ ದೀಪವಾಗಿದ್ದರೋ ಅಂಥವರು ಇಲ್ಲವಾಗಿದ್ದಾರೆ ಎನಿಸಿತು. ಆದುದರಿಂದ ನಾನು ಮನಸ್ಸಿನಲ್ಲಿ ಏನು ಇಟ್ಟುಕೊಳ್ಳಬೇಕು ಎಂದು ಹೇಳಿದರೆ, ಯಾವ ಕಾರಣಕ್ಕೋಸ್ಕರ ಅವರು ಜೀವನ ಮಾಡಿ, ಹೋರಾಟ ಮಾಡಿ ನಮ್ಮೆಲ್ಲರ ಗಮನವನ್ನು ಸೆಳೆದರೋ ಇವತ್ತು ಯಾರ್ಯಾರು ಅಧಿಕಾರದಲ್ಲಿ ಇದ್ದಾರೆ, ಅಂಥವರೆಲ್ಲ ಅವರ ನಡೆನುಡಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅವರು ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು, ಆ ಅಭಿಪ್ರಾಯಗಳನ್ನು ಕೂಡ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅಂಥ ವ್ಯಕ್ತಿ ಇವತ್ತಿನ ದಿವಸ ಇಲ್ಲವಾಗಿದ್ದಾರೆ. ಆದರೆ ಅವರು ಯಾವ ಒಂದು ಧ್ಯೇಯ ಧೋರಣೆಗಳಿಗೋಸ್ಕರ ಬಾಳಿ ಬದುಕಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ, ಅವರ ಆದರ್ಶಗಳು ನಮ್ಮಲ್ಲಿ ಎಷ್ಟಿದ್ದರೂ ಈ ದೇಶಕ್ಕಾಗಿ ಸೇವೆಯನ್ನು ಸಲ್ಲಿಸುವಾಗ ಕಠಿಣಹೃದಯದಿಂದ ನಿಷ್ಠುರವಾಗಿ ಮಾಡಿದಾಗ ಮಾತ್ರ ರಾಜ್ಯಭಾರ ಮಾಡಲಿಕ್ಕೆ ಅನುಕೂಲವಾದೀತು ಎಂದು ನನ್ನ ಭಾವನೆ. ನಾವು ಸತ್ಯವಾಗಿ, ನಿಸ್ಪಹತೆಯಿಂದ, ನಿಷ್ಠುರವಾಗಿ ಅಧಿಕಾರದಲ್ಲಿ ಮುಂದುವರಿದು ಈ ಕೆಲಸವನ್ನು ಮಾಡದೇ ಹೋದರೆ ಸಾಮಾನ್ಯ ಜನರಿಗೆ ಸುಖ ದೊರೆಯುವುದಿಲ್ಲ, ಅನುಕೂಲವಾಗುವುದಿಲ್ಲ. ಆದುದರಿಂದ ಸ್ಪಷ್ಟವಾಗಿ ಈ ಸದನದಲ್ಲಿ ಹೇಳುತ್ತಿದ್ದೇನೆ. ಯಾರೇ ಅಧಿಕಾರಕ್ಕೆ ಬರಲಿ, ಯಾರೇ ರಾಜ್ಯಭಾರವನ್ನು ಮಾಡಲಿ, ಯಾರೇ

ಸರ್ಕಾರವನ್ನು ನಡೆಸಲಿ, ಅವರು ಹೇಳಿಕೊಟ್ಟ ಒಂದು ಮಾತು ಏನು ಇದೆ, ಅವರು ಏನು ನೀತಿ ನಿಲುವನ್ನು ತಾಳಿದ್ದರು, ಮತ್ತೆ ಅವರೇನು ನಮಗೆ ಕೈಗಂಬವಾಗಿ ನಿಂತುಕೊಂಡಿದ್ದರು, ಆ ವ್ಯಕ್ತಿ ಇವೆಲ್ಲಕ್ಕೂ, ನಮಗೆಲ್ಲರಿಗೂ ಮಾರ್ಗದರ್ಶನವಾಗಲಿ ಎಂದು ಹಾರೈಸಿ, ನಾನು ನನ್ನ ಅಭಿಪ್ರಾಯಗಳನ್ನು ತಮ್ಮ ಜೊತೆಯಲ್ಲಿ ಧ್ವನಿಗೂಡಿಸುತ್ತೇನೆ. ಅದೇ ರೀತಿಯಾಗಿ ಶ್ರೀಮಾನ್ ಕೆ.ಟಿ. ರಾಥೋಡ್ ರವರು ಮತ್ತು ಶ್ರೀಮಾನ್ ಹನಿಯಾ ನಾಯಕರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಹಿಂದುಳಿದ ವರ್ಗದ ನಾಯಕರು. ಅವರು ಈ ದೇಶದಲ್ಲಿ ಯಾರೂ ಇಲ್ಲದವರು ಏನಿದ್ದಾರೆ, ಅವರ ಪ್ರತಿನಿಧಿಯಾಗಿ ಕೆಲಸವನ್ನು ಮಾಡಿರತಕ್ಕಂಥವರು. ಅವರುಗಳು ಅಗಲಿ ಹೋದರೆ ಬಹಳ ಸಂಕಟ. ಯೊರೊಬ್ಬರು ಇಲ್ಲದವರ 'ಬಗ್ಗೆ ಧ್ವನಿಯನ್ನು ಎತ್ತಿ ಮಾತನಾಡುತ್ತಿದ್ದರೋ ಅಂಥವರನ್ನು ಕಂಡರೆ ನಮಗೆ ಅಭಿಮಾನ. ಅವರು ಇಲ್ಲದಾಗ ನಮಗೆ ಸಂಕಟ. ಆದರೆ ಈ ರಾಜ್ಯದಲ್ಲಿ ಅಂಥವರು ಬಹಳ ವಿರಳ ಇದ್ದಾರೆ. ಇಲ್ಲದವರ ಬಗ್ಗೆ ಧ್ವನಿ ಎತ್ತಿ ಮಾತನಾಡತಕ್ಕಂಥವರು ಬಹಳ ವಿರಳ. ಇದು ಅಂತಹ ಒಬ್ಬಿಬ್ಬರು ಕಳಚಿ ಹೋದಾಗಿನ ಸಂದರ್ಭ. ಇದುವರೆಗೂ ಇಬ್ಬರು ಮಹನೀಯರು ನಮ್ಮನ್ನು ಅಗಲಿ ಹೋಗಿದ್ದಾರೆ. ಅಂಥವರುಗಳ ಬಗ್ಗೆ ತಾವು ಏನು ಸಂತಾಪವನ್ನು ವ್ಯಕ್ತಪಡಿಸಿದ್ದೀರಿ, ಅದರಲ್ಲಿ ನಾನು ಕೂಡ ಭಾಗಿಯಾಗಿದ್ದೇನೆ. ನಮಸ್ಕಾರ.

12–20 ಪಿ.ಎಂ.

SRI QUAMARUL ISLAM (Gulbarga) : – Sir, Sri Kadidal Manjappa is no more to–day. He was a freedom fighter. He was a true Gandhian. He was the Chief Minister for a short period of 74 days during the year 1956. He was the cabinet colleague of Sri B.D. Jatti, Sri Nijalingappa and late Sri Kengal Hanumanthaiah. He was an honest man. The people of the State cannot forget the services he rendered in different capacities for the people of this State. I pray Almighty on behalf of myself and my party, to keep his soul in peace and also give courage to his family members to bear the loss. In the same manner, Sri K.T. Rathod was a Minister when I was elected in 1978 for the first time to the Assembly, in the then Devaraj Urs ministry and he fought for the cause of backward classes and more particularly for the cause of Lambanis. I pray Almighty to keep his soul in peace and give courage to his family members to bear the loss. In the same way, I also pray for the death of Sri Hania Naik.

SRI B.I. PATIL (Uchagaon) : – Mr. Speaker Sir, it was really a sad news to hear the passing away of Sri Kadidal Manjappa, former Chief Minister and veteran freedom fighter and true follower of Gandhian principles. He was known for simplicity honesty and integrity. he has done tremendous service in social, cultural, educational and political field. On behalf of Maharashtra Ekikaran Samithi, I express my heart–felt condolences to the bereaved family members of the departed leadder. We also express our heart–felt condolences on the demise of Sri K.T. Rathod and Sri Hania Naik.

ಅಧ್ಯಕ್ಷರು :- ಈಗ ಮೃತರ ಗೌರವಾರ್ಥ ಸಭೆಯು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕು.

(ಸದನವು ಎದ್ದುನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು).

ಅಧ್ಯಕ್ಷರು :- ಸದನವು ಈಗ ಮುಕ್ತಾಯವಾಗಿ ಪುನಃ ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುತ್ತದೆ.

(ಸದನವು 12 ಗಂಟೆ 24 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 10.3.1992 ರ ಮಂಗಳವಾರ ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಕರ್ನಾಟಕ ವಿಧಾನ ಸಭೆ

ಮಂಗಳವಾರ, 10ನೇ ಮಾರ್ಚ್, 1992, ಫಾಲ್ಗುಣ 20 ಶಕವರ್ಷ 1913
ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11–20 ಗಂಟೆಗೆ ಸಮಾವೇಶಗೊಂಡಿತ್ತು.
ಉಪಾಧ್ಯಕ್ಷರು : ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು,
ಪೀಠವನ್ನು ಅಲಂಕರಿಸಿದರು.

ಉಪಾಧ್ಯಕ್ಷರು :- ಮಾದಾನಾಯಕ್ ಅವರ, ಇಂದು ತಮ್ಮ 54ನೇ ಜನ್ಮದಿನ. ಸದನದ ಎಲ್ಲಾ ಸದಸ್ಯರ ಪರವಾಗಿ ಹಾಗೂ ನಾನು ವೈಯುಕ್ತಿಕವಾಗಿ ಶ್ರೀ ಚಿಕ್ಕಮಾದ ನಾಯಕ್ ಅವರಿಗೆ ಶುಭವನ್ನು ಕೋರುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಉಪಾಧ್ಯಕ್ಷರು :- ಈ ಪ್ರಶ್ನೆ (1204) ಹೆಲ್ಡ್ ಓವರ್ ಆಗಿದೆ. ಮತ್ತೊಂದು ದಿವಸ ತೆಗೆದು ಕೊಳ್ಳುತ್ತೇನೆ.

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ.

1207. ಶ್ರೀ ಮಲ್ಲಿಕಾರ್ಜುನ ದಿವಟರ (ಕೊಪ್ಪಳ) :- ಶ್ರೀ ಬಸವನಗೌಡ ಪಾಟೀಲ್ (ಮಾನ್ವಿ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಕಾಮಗಾರಿಗಳು ಕಳಪೆ ಗುಣಮಟ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಗಿಣಿಗೇರಿ - ರಾಯಚೂರು ರಸ್ತೆಯ ಕಾಮಗಾರಿಗಳನ್ನು ಮಾಡಿಸುತ್ತಿರುವವರು ಯಾರು; ಈ ಕಾಮಗಾರಿಗಳ ಗುಣಮಟ್ಟವು ಕಳಪೆಯಾಗಿರುವುದು ನಿಜವೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು):–

ಅ) ಕಾಮಗಾರಿಗಳನ್ನು ಮಂಜೂರಾದ ಅಂದಾಜಿನಲ್ಲಿ ನಿರ್ದಿಷ್ಟಪಡಿಸಿರುವ ವ್ಯವಸ್ಥೆಯಂತೆ ಹಾಗೂ ಅನುಮೋದಿತವಾಗಿರುವ ವಿಶಿಷ್ಟ ವಿವರಗಳನುಸಾರವಾಗಿ ಮಾಡಿಸಲಾಗುತ್ತಿದೆ. ಆದ್ದರಿಂದ ಕಾಮಗಾರಿಗಳು ಕಳಪೆಗುಣಮಟ್ಟದಲ್ಲಿ ನಡೆಯುತ್ತಿದೆ ಎನ್ನುವುದು ಸರಿಯಲ್ಲ.

ಆ) ಗಿಣಿಗೇರಿ ರಾಯಚೂರು ರಸ್ತೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿ ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ರಾಜ್ಯದ ನಿರ್ಮಾಣ ನಿಗಮದವರಿಂದ ಮಾಡಿಸಲಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ದೀವಟರ್ :- ಸನ್ಮಾನ್ಯ ಸಭಾಧ್ಯಕ್ಷರೆ, ಈ ರಾಯಚೂರು ಗಿಣಿಗೇರಿ ರೋಡ್ ಕೆಲಸವನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ಕೊಟ್ಟಿದ್ದೀರಿ. ಆದರೆ ಅವರು ನಮ್ಮಲ್ಲಿರತಕ್ಕ ಸಬ್ ಏಜೆನ್ಸಿಗಳಿಗೆ ಕೆಲಸ ಕೊಟ್ಟು ಮಾಡಿಸುತ್ತಿದ್ದಾರೆ. ಪಕ್ಕದಲ್ಲಿ ಮರದ ಕೇಸಿಂಗ್ ಕೊಡತಕ್ಕ ಕೆಲಸ ಇದೆ. ಆದರೆ ಅಲ್ಲಿ ಒಂದು ಫುಟ್ ಮರ ಕೊಟ್ಟರೆ ಮೂರು ನಾಲ್ಕು ಇಂಚು ಕಳಪೆ ಮಟ್ಟದಲ್ಲಿ ಕೆಲಸ ಆಗುತ್ತಿದೆ. ನಂತರ ಅಲ್ಲಿ ಆಗುತ್ತಿರುವ ರೀಮೆಟಲಿಂಗ್ ರೋಡ್ ಕಿತ್ತು ಮರ ಹಾಕಿ ಮೊದಲು ಮಾಡಿರತಕ್ಕ ಕೆಲಸದಲ್ಲಿ ಕೂಡ ತೊಂದರೆ ಕಾಣುತ್ತಿದೆ. ಅದರ ಬಗ್ಗೆ ಪಿ.ಡಬ್ಲ್ಯೂ.ಡಿ. ಸಚಿವರ ಗಮನಕ್ಕೆ

ತಂದಿದ್ದೇವೆ. ತಮಗೆ ತಿಳಿಸಿದರೂ ಇವತ್ತಿನವರೆಗೆ ಸುಧಾರಿಸತಕ್ಕ ಲಕ್ಷಣ ಕಾಣುತ್ತಿಲ್ಲ. ಆದಕಾರಣ ಆದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :- ಅಧ್ಯಕ್ಷರೆ, ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ನವರು ಪಿ.ಡಬ್ಲ್ಯೂಡಿ. ಯವರ ಸೂಪರ್ ವಿಷನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಮಾಡುತ್ತಾ ಇರುವುದರಿಂದ ಅದು ಕಳಪೆ ಕೆಲಸ ಎಂದು ಏಕ್ ದಮ್ ತಳ್ಳಿಹಾಕುವುದಕ್ಕಾಗುವುದಿಲ್ಲ. ಈಗ ಹೇಳಿದ್ದೀರಿ ಇಂಥಿಂಥ ಕೆಲಸಗಳು ಸರಿಯಾಗಿ ನಡೆದಿಲ್ಲ ಎಂದು. ನನಗೆ ಒಂದು ಕಾಗದ ಬರೆಯಿರಿ. ಎಗ್ಸಾಮಿನ್ ಮಾಡಿಸಿ ಯಾವ ತರಹ ಮಾಡಬೇಕು ಎಂಬುದನ್ನು ನೋಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ದಿವೆಟರ್ :- ಇದುವರೆವಿಗೂ ಜನರು ಸಾಕಷ್ಟು ಕಂಪ್ಲೇಂಟ್ ಮಾಡಿದ್ದಾರೆ. ಆದರೆ ಅಲ್ಲಿ ಏನೂ ಕ್ರಮ ತೆಗೆದುಕೊಂಡಿಲ್ಲ. ಅದೇ ರೀತಿ ಕೆಲಸ ಮುಂದುವರಿಯುತ್ತಿದೆ. ಹೀಗೇ ಪತ್ರವ್ಯವಹಾರಗಳು ನಡೆಯುತ್ತಾ ಹೋದರೆ ಅಲ್ಲಿ ಎಲ್ಲಾ ಕೆಲಸಗಳು ಮುಗಿದು ಬಿಲ್ ಕೂಡ ಆಗಿ ಹೋಗುತ್ತದೆ. ಆದರೆ ಮುಂದೆ ತೊಂದರೆ ಆಗುವುದು ಜನರಿಗೆ. ಆದ್ದರಿಂದ ಈ ಬಗ್ಗೆ ಶೀಘ್ರವಾಗಿ ಏನಾದರೂ ಕ್ರಮ ತೆಗೆದುಕೊಂಡರೆ ಮಾತ್ರ ಆಗುತ್ತದೆ. ತಕ್ಷಣ ಅಲ್ಲಿ ಕೆಲಸ ನಿಲ್ಲಿಸಿ ಇನ್ಸ್‌ಪೆಕ್ಷನ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :- ಈಗತಾನೇ ತಾವು ಫ್ಲೋರ್‌ನಲ್ಲಿ ಕಂಪ್ಲೇಂಟ್ ಹೇಳಿದ್ದೀರಿ. ಇವತ್ತೇ ಒಂದು ಕಾಗದವನ್ನು ಬರೆಯಿಸಿ ಕಳುಹಿಸಿ ನಾನು ಅದನ್ನು ಎಕ್ಸಾಮಿನ್ ಮಾಡಿಸಿ ಮುಂದೆ ಏನು ಮಾಡಬೇಕೋ ಆ ವಿಚಾರಣೆಯನ್ನು ಮಾಡಿಸುತ್ತೇನೆ.

ಉಪಾಧ್ಯಕ್ಷರು :- ಡಾ. ಮಲಕರೆಡ್ಡಿಯವರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲದ್ದರಿಂದ ತಮ್ಮ ಪ್ರಶ್ನೆಯನ್ನು ಹೆಲ್ಡೋವರ್ ಮಾಡುತ್ತಿದ್ದೇನೆ. ಮುಂದಿನ ಪ್ರಶ್ನೆ ಶ್ರೀ ಚೌಡಾರೆಡ್ಡಿಯವರದ್ದು. ಈ ಪ್ರಶ್ನೆ ಕೇಳಲು ಶ್ರೀ ಕೆ.ಹೆಚ್. ಹನುಮೇಗೌಡರಿಗೆ ಅವಕಾಶ ಕೊಡುತ್ತೇನೆ.

ಕೋಲಾರದ ಜಿಲ್ಲೆಯಲ್ಲಿ ಅಬಕಾರಿ ಗುತ್ತಿಗೆದಾರರಿಂದ ಬಾಕಿ.

1469. ಶ್ರೀ ಚೌಡಾ ರೆಡ್ಡಿ (ಚಿಂತಾಮಣಿ) ರವರ ಪರವಾಗಿ - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) :- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

1) ಚಿಂತಾಮಣಿ ತಾಲ್ಲೂಕು ಕೋಲಾರ ಜಿಲ್ಲೆಯಲ್ಲಿ 1983–84, 1984–85 ಮತ್ತು 1985–86 ರ ಸಾಲಿಗೆ ಅಬಕಾರಿ ಗುತ್ತಿಗೆದಾರರಿಂದ ರೂ.16,32,956–25 ಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2) ನಿಯಮಗಳು ಮತ್ತು ಷರತ್ತು, ಷರತ್ತುಗಳು ಸವಾಲನ್ನು ಸ್ಥಿರೀಕರಣ ಮಾಡುವುದಕ್ಕೆ ಮುನ್ನ ವಿಧಿಸಲಾಗಿದ್ದು ಯಾವುವು ?
3) ಸರ್ಕಾರವು ಸವಾಲನ್ನು ಸ್ಥಿರಪಡಿಸುವ ಮುನ್ನ ಗುತ್ತಿಗೆದಾರರುಗಳಿಂದ ಭದ್ರತೆ ಅಥವಾ ಜಾಮೀನುಗಳನ್ನು ಪಡೆದುಕೊಂಡಿದೆಯೇ?
4) ಹಿಗಿದ್ದಲ್ಲಿ ಯಾವ ಕಾರಣದಿಂದ ಇಷ್ಟು ಭಾರಿ ಮೊತ್ತದ ಹಣ ಬಾಕಿ ಉಳಿದುಕೊಂಡಿತ್ತು ?
5) ಈ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಧರಮ್‌ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

1) ಹೌದು
2) ಕರ್ನಾಟಕ ಅಬಕಾರಿ ಕಾಯಿದೆ (ಚಿಲ್ಲರೆ ಮಧ್ಯ ಮಾರಾಟ) ನಿಯಮಗಳು ಮತ್ತು ಸಾಮಾನ್ಯ ನಿಯಮ ಹಾಗೂ ಗುತ್ತಿಗೆ ಕರಾರು ಒಪ್ಪಂದ ಇವುಗಳ ಪ್ರಕಾರ ಸವಾಲನ್ನು ಸ್ಥಿಕರಣ ಮಾಡಲಾಯಿತು.
3) ನಿಯಮದ ಪ್ರಕಾರ ಸವಾಲುದಾರರು ಹರಾಜಿನಲ್ಲಿ ಭಾಗವಹಿಸುವ ಮೊದಲು ಒಂದು ತಿಂಗಳ ಕಿಸ್ತನ್ನು ಭದ್ರತೆಯ ರೂಪದಲ್ಲಿ ಪಡೆದುಕೊಳ್ಳಲಾಗುತ್ತದೆ. ಸವಾಲು ಸ್ಥಿರೀಕರಣದ ಆಜ್ಞೆಯನ್ನು

ಗುತ್ತಿಗೆದಾರರಿಗೆ ತಿಳಿಸಿದ 15 ದಿನಗಳೊಳಗಾಗಿ 3 1/10 ತಿಂಗಳ ಬಾಡಿಗೆ ಮೊತ್ತಕ್ಕೆ ಸಮವಾದ ಬ್ಯಾಂಕ್ ಗ್ಯಾರಂಟಿಯನ್ನು ಅಥವಾ ನಗದು ಠೇವಣಿ ಅಥವಾ ಸರ್ಕಾರದಿಂದ ಅಧಿಕೃತಗೊಳಿಸಿರುವಂತಹ ಇತರೆ ಸುರಕ್ಷಣಾ ಮುಚ್ಚಳಿಕೆ ಪತ್ರವನ್ನು ಪಡೆದು ಕೊಳ್ಳಲಾಗುತ್ತದೆ.

4) ನ್ಯಾಯಾಲಯದಿಂದ ತಡೆಯಾಜ್ಞೆಗಳಿಂದಾಗಿ ಮತ್ತು ಗುತ್ತಿಗೆದಾರರು ಹಣ ಪಾವತಿ ಮಾಡದೇ ಇರುವುದಕ್ಕಾಗಿ.

5) ಒಟ್ಟಾರೆ 16,32,956.25 ರೂಪಾಯಿಗಳ ಪೈಕಿ 9,11,756–25 ಗಳನ್ನು ಕೆ.ಎಲ್.ಆರ್. ನಿಯಮದ ಪ್ರಕಾರ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ. ಉಳಿದ ರೂ. 7,21,200 ಗಳು ಇನ್ನೂ ನ್ಯಾಯಾಲಯದ ತಡೆಯಾಜ್ಞೆಯಲ್ಲಿರುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ (ಶ್ರೀ ಬೌಡರೆಡ್ಡಿಯವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು 16,32,956 ರೂಪಾಯಿ ಬಾಕಿ ಉಳಿದಿದೆ ಎಂದು ತಿಳಿಸಿದ್ದಾರೆ. ನಾನು ಕೇಳುವುದು ಏನೆಂದರೆ, ಆ ಕಂಟ್ರಾಕ್ಟರಿಂದ ಒಂದು ತಿಂಗಳಿಗೆ ಕಿಸ್ತು ಎಷ್ಟು? ಪ್ರತಿ ತಿಂಗಳು ಅವರು ಕಟ್ಟಬೇಕಾದ ಹಣ ಎಷ್ಟು?

ಶ್ರೀ ಧರ್ಮಸಿಂಗ್ :- ಒಟ್ಟು 16 ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿದೆ. ಅದರಲ್ಲಿ 8 ಲಕ್ಷ ರೂಪಾಯಿಗಳಿಗೆ ಅವರು ಕೋರ್ಟಿಗೆ ಹೋಗಿದ್ದಾರೆ. ಉಳಿದ 7 ಲಕ್ಷ ರೂಪಾಯಿಗಳನ್ನು ರಿಕವರ್ ಮಾಡಬೇಕಾಗಿದೆ. ಈ ವರ್ಷದಲ್ಲಿ ಅದನ್ನು ಮಾಡುತ್ತಿದ್ದೇವೆ. ಕೆಲವು ಭಾಗವನ್ನು ಅವರು ಕೊಟ್ಟಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಅವರಿಂದ 16 ಲಕ್ಷ ರೂಪಾಯಿಗಳ ಬಾಕಿ ಇದೆ. ನಾನು ಕೇಳಿದ್ದು 1 ತಿಂಗಳ ಕಿಸ್ತು ಎಷ್ಟು ಎಂದು. ಈ ಕಿಸ್ತನ್ನು ಹರಾಜು ಕೂಗುವಾಗ 1 ತಿಂಗಳು ಅಡ್ವಾನ್ಸ್ ತೆಗೆದುಕೊಂಡಿರುತ್ತೀರಿ. ದೃಢೀಕರಣ ಪತ್ರ ಕೊಡುವಾಗ 3 ತಿಂಗಳ ಅಡ್ವಾನ್ಸ್‌ನ್ನೋ, ಬ್ಯಾಂಕ್ ಗ್ಯಾರಂಟಿಯನ್ನೋ ತೆಗೆದುಕೊಂಡಿರುತ್ತೀರಿ. ಹೀಗಿದ್ದರೂ ಕೂಡ 16 ಲಕ್ಷ ರೂಪಾಯಿ ಬಾಕಿ ಆಗುವವರೆಗೂ ಕೂಡ ಏಕೆ ವಸೂಲಾತಿಯನ್ನು ಮಾಡಿಲ್ಲ? ಅಕಸ್ಮಾತ್ 3 ತಿಂಗಳ ಒಳಗೆ ಅವರ ಕಿಸ್ತು ಕಟ್ಟದಿದ್ದರೆ ಅವರು ಕೊಟ್ಟಿರತಕ್ಕ ಬ್ಯಾಂಕ್ ಗ್ಯಾರಂಟಿಯನ್ನೊ, ಡಿಪಾಸಿಟ್‌ನ್ನೋ ಹುತ್ತಾರ್ ಹಾಕಿ ಬೇರೆಯವರಿಗೆ ಹರಾಜು ಮಾಡಿ ಕೊಡುವುದಕ್ಕೆ ಏಕೆ ವ್ಯವಸ್ಥೆ ಮಾಡಿಲ್ಲ?

ಶ್ರೀ ಧರ್ಮಸಿಂಗ್ :- ನಾನು ಈಗಾಗಲೇ ವಿವರ ಕೊಟ್ಟಿದ್ದೇನೆ. 1983–84, 1984–85, 1985–86ನೇ ಸಾಲಿನ ಬಗ್ಗೆ ಕೋರ್ಟಿಗೆ ಹೋದಮೇಲೆ ಎಲ್ಲಾ ಕೂಡ ಹೋಗಿ ಮೊತ್ತ 16 ಲಕ್ಷಕ್ಕೆ ನಿಂತಿದೆ. ಕೋರ್ಟ್ ಡಿಸಿಷನ್ ಆದಮೇಲೆ ಇದು ರಿಕವರಿ ಆಗುತ್ತದೆ. ಮತ್ತೆ ಯಾರು ಹಣ ಕಟ್ಟಿಲ್ಲವೋ ಬಾಕಿದಾರರಿದ್ದಾರೆ ಅವರಿಗೂ ಆಕ್ಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಲು ಅವಕಾಶ ಕೊಟ್ಟಿದ್ದೇವೆನ್ನುವ ಮಾತನ್ನು ಕೇಳುತ್ತಿದ್ದಾರೆ. ಅವರು/ಡಿಫಾಲ್ಟರ್ಸ್ ಅಲ್ಲ, ಅವರು ಕೋರ್ಟಿಗೆ ಹೋಗಿದ್ದರಿಂದ ಅದು ಉಳಿದಿದೆ. ಉಳಿದ ಹಣ ಕೂಡ ಬರುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಏನು 16 ಲಕ್ಷ ಬಾಕಿ ಇದೆಯೋ ಅದರಲ್ಲಿ ಬಡ್ಡಿಯೂ ಸೇರಿದೆಯೋ ಕೇವಲ ಕಿಸ್ತು ಮಾತ್ರವೇ?

ಶ್ರೀ ಧರ್ಮಸಿಂಗ್ :- ಎಲ್ಲಾ ಸೇರಿ ಆಗಿದೆ 16 ಲಕ್ಷ ರೂಪಾಯಿಗಳು.

ಶ್ರೀ ಕೆ.ಹೆಚ್. ಹನುಮೇಗೌಡ :- ಅವರು ಕೋರ್ಟಿಗೆ ಹೋಗುವವರೆಗೆ ತಾವು ಸುಮ್ಮನೆ ಏತಕ್ಕೆ ಇದ್ದಿರೀ ? 3 ತಿಂಗಳ ಒಳಗೆ ಪ್ರತಿ ತಿಂಗಳೂ ಹಣ ಕಟ್ಟದಿರುವಾಗ ತಾವು ಕ್ರಮ ತೆಗೆದುಕೊಂಡಿದ್ದರೆ ತಾವು ಹಣವನ್ನು ವಸೂಲು ಮಾಡಬಹುದಾಗಿತ್ತು. ಲಕ್ಷಗಟ್ಟಲೆ ಹಣ ಬಾಕಿ ಆಗುವವರೆವಿಗೂ ಬಿಟ್ಟುಬಿಟ್ಟು ಆ ಮೇಲೆ ಕೋರ್ಟಿಗೆ ಹೋದರು ಎಂದರೆ ವಸೂಲು ಮಾಡುವುದು ಹೇಗೆ? ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು? 1 ತಿಂಗಳು ತಪ್ಪಿದ ತಕ್ಷಣವೇ ಡಿಪಾಸಿಟ್ ಫೋರ್ಫಿಟ್ ಮಾಡಿ ಬೇರೆಯವರಿಗೆ ಹರಾಜು ಮಾಡಬೇಕಾಗಿತ್ತು. 16 ಲಕ್ಷ ರೂಪಾಯಿಗಳಾಗುವವರೆಗೆ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು?

ಶ್ರೀ ಧರ್ಮಸಿಂಗ್ :- ಎಲ್ಲರಿಗೂ ಕೂಡಾ ಕೋರ್ಟಿಗೆ ಹೋಗುವ ಹಕ್ಕು ಇದದೆ ಎಂದು ಮಾನ್ಯ ಸದಸ್ಯರಿಗೂ ಸಹಾ ಗೊತ್ತುಂಟು. ಕೋರ್ಟಿಗೆ ಹೋಗಲು ಅವಕಾಶ ಕೊಟ್ಟರಿ ಎಂದರೆ ಹೇಗೆ? ಅವರು ಕೋರ್ಟಿಗೆ ಹೋಗಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಒಂದು ತಿಂಗಳ ಅಡ್ವಾನ್ಸ್ ನಿಮ್ಮ ಹತ್ತಿರ ಇರುತ್ತದೆ. ಅನಂತರ 3 ತಿಂಗಳ ಕಿಸ್ತಿನ ಬ್ಯಾಂಕ್ ಗ್ಯಾರಂಟಿ ಅಥವಾ ಡಿಪಾಸಿಟ್ ಇರುತ್ತದೆ. ಅವರು ಬಾಕಿ ಉಳಿದಾಗ ಅಷ್ಟರೊಳಗೆ ಹಣವನ್ನು ಪ್ರೋಫೀಟ್ ಮಾಡಿಕೊಂಡು ಬೇರೆ ಟೆಂಡರ್ ಕರೆಯಬೇಕಾಗಿತ್ತು. 16 ಲಕ್ಷ ರೂಪಾಯಿಗಳು ಆಗುವವರೆಗೆ ಬೇಕು ಎಂದು ಬಿಟ್ಟಿದ್ದು ಆ ನಂತರ ಕೋರ್ಟಿಗೆ ಹೋದರು ಎನ್ನುವುದಾದರೆ ಅಲ್ಲಿಯವರೆಗೆ ಏಕೆ ಅವಕಾಶ ಕೊಟ್ಟಿರಿ? ಈಗ 38 ಕೋಟಿ ರೂಪಾಯಿ ಮಾಫಿ ಬಿಟ್ಟಿರಿ. ಇವರೂ ಬಿಲೋ ಪಾವರ್ಟಿ ಲೈನ್ ಇದ್ದರೇ? ಯಾವ ಕಾರಣಕ್ಕೆ ಒಟ್ಟಿದ್ದೀರಿ ಸ್ವಾಮಿ? ಹೀಗೆ ಎಲ್ಲವನ್ನು ಬೇಕು ಬೇಕಂತಲೇ ಬಿಟ್ಟುಕೊಂಡು ಹೋಗಿಬಿಟ್ಟು ಯಾವತ್ತೊ ಒಂದು ದಿವಸ ದೊಡ್ಡ ಮನಸ್ಸು ಮಾಡಿ ವಜಾ ಆಗಿದೆಯೆಂದು ಹೇಳಿದರೆ ಈ ದೇಶಕ್ಕೆ ಬರತಕ್ಕ ಉತ್ಪಾದನೆ ಸಿಗುತ್ತದೆಯೆ? ಏತಕ್ಕೆ ಬಿಟ್ಟಿದ್ದೀರಿ? ಬಿಡಬೇಕಾದರೆ ಕಾರಣವೇನು ? ಏತಕ್ಕೆ ಕೋಟಿಗಟ್ಟಲೇ ಹಣ ಬಾಕಿ ಆಗುವವರೆಗೆ ಏತಕ್ಕೆ ಆಲೋ ಮಾಡಿದ್ದೀರಿ?

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರತಕ್ಕದ್ದು ಮಾನ್ಯ ಚೌಡರೆಡ್ಡಿಯವರ ಪರವಾಗಿ. ಇದು ಚೌಡರೆಡ್ಡಿಯವರ ಕ್ಷೇತ್ರದಲ್ಲಿ ನಡೆದಿದೆ. 16 ಲಕ್ಷ ರೂಪಾಯಿ ದೊಡ್ಡ ಮೊತ್ತ ಏಕೆ ಬಿಟ್ಟಿದ್ದೀರಿ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. 8 ಲಕ್ಷ ರೂಪಾಯಿ ಬಾಕಿಯ ಬಗ್ಗೆ ಅವರು ಕೋರ್ಟಿಗೆ ಹೋಗಿದ್ದಾರೆ. ಉಳಿದ ಬಾಕಿ ಹಣವನ್ನು ವಸೂಲಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಈಗೇನು ಅರಿಯರ್ಸ್ ಉಳಿದಿದೆ ಅದು ಅವರು ಕೋರ್ಟಿಗೆ ಹೋಗಿರುವುದರಿಂದ ಅಷ್ಟು ಉಳಿದಿದೆ. ಕೋರ್ಟ್‌ನಲ್ಲಿ ಏನು ಕೇಸುಗಳನ್ನು ಹಾಕಿದ್ದಾರೆ ಅಷ್ಟು ಮೊತ್ತವನ್ನು ಬಿಟ್ಟಿದ್ದೇವೆ. ಉಳಿದ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುತ್ತಿದ್ದೇವೆ. ಗುತ್ತಿಗೆದಾರರಿಂದ ಬರತಕ್ಕ ಹಣವನ್ನು ಎಲ್ಲೂ ಕೂಡ ಬಿಟ್ಟಿಲ್ಲ. ಹಣ ವಸೂಲಿ ಮಾಡುವುದಕ್ಕೆ ಸ್ಪೆಕ್ಸ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ಎಲ್ಲಾ ಕಡೆಗೂ ಕೆಳಗಡೆ ಇರತಕ್ಕ ಅಧಿಕಾರಿಗಳಿಗೆ ಮೇಲಿನಧಿಕಾರಿಗಳಿಗೂ ಕೂಡ ಹಣವನ್ನು ವಸೂಲಿ ಮಾಡಬೇಕೆಂದು ಹೇಳಿದ್ದೇವೆ. ಎಲ್ಲೂ ಕೂಡ ಯಾರಿಗೂ ರಿಯಾಯಿತಿ ತೋರಿಸತಕ್ಕದ್ದು ಇಲ್ಲ. ಒಂದು ವಿಷಯವನ್ನು ಮಾನ್ಯ ಸದಸ್ಯರುಗಳಿಗೆ ಹೇಳಬಯಸುತ್ತೇನೆ, 7 ಲಕ್ಷ ರೂಪಾಯಿಗಳ ಏನು ಬಾಕಿ ಬರಬೇಕಾಗಿದೆ ಅದನ್ನು ನಿರ್ದಾಕ್ಷಿಣ್ಯವಾಗಿ ಈ ವರ್ಷದಲ್ಲಿ ವಸೂಲಿ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಎಕ್ಸಮ್‌ಷನ್ ಕೊಟ್ಟಿದ್ದೀರಲ್ಲ ಅವರಿಗೂ ಇದು ಅನ್ವಯಿಸುತ್ತದೆಯೆ? ತಾವೇನು 38 ಕೋಟಿ ರೂಪಾಯಿ ಬಡ್ಡಿ ರಿಯಾಯಿತಿ ಕೊಟ್ಟಿದ್ದೀರಲ್ಲ ಅದು ಚಿಂತಾಮಣಿಯವರಿಗೂ ಅನ್ವಯಿಸುತ್ತದೆಯೇ ಸ್ವಾಮಿ? ಇವರಿಗೆ ಯಾವ ಕಾರಣದಿಂದ ಅಪ್ಲೈಯಾಗುತ್ತದೆ ಎನ್ನುವುದನ್ನು ದಯವಿಟ್ಟು ಹೇಳಿ?

ಶ್ರೀ ಧರ್ಮಸಿಂಗ್ :- ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿ. ಈಗಾಗಲೇ ವಿಧಾನಪರಿಷತ್‌ನಲ್ಲಿ ಬಹಳ ವಿವರವನ್ನು ಕೊಟ್ಟಿದ್ದೇನೆ. 38 ಕೋಟಿ ರೂಪಾಯಿ ಇಂಟರೆಸ್ಟ್ ವೇವ್ ಮಾಡತಕ್ಕದ್ದು ಅದು ಪ್ರತ್ಯೇಕ ಪ್ರಶ್ನೆಯಿದೆ. ಇದುವರೆಗೆ ಯಾರಿಗೂ ಕೂಡ ರಿಯಾಯಿತಿ ಕೊಟ್ಟಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

DACOITIES IN BANGALORE CITY

1169. SRI RAMALINGA REDDY (Jayanagar) :– Will the Minister of Home and Excise be pleased to state –

a) The number of dacoities taken place in and around : Bangalore City from January 1991 to the end of December 1991;
b) The Number of cases detected?
c) The steps taken by the Government to prevent dacoities in Bangalore City ;

d) Whether night patrolling has been intensified ;
e) If so, the areas where the night patrolling has been intensified.

SRI DHARM SINGH (Home Minister) :–

a) 7 Professional
4 Technical another
11 Technical dacoity cases occurred during the Karnataka Bundh (all are under investigation.
b) 8 cases detected.
c) Necessary steps have been taken which are mentioned in the enclosed sheet.
d) Yes.
e) Out skirts of Bangalore City and also in the limits of concerned Police Stations.

ANNEXURE

Measures taken to contain the Dacoity :

The City Police have intensified day and night patrolling to cover the entire city. Every night one Dy. Commissioner of Police is supervising the night rounds. 10 Inspectors of Police /Asst. Commrs. of Police are supervising the night round arrangements in respect of each A.C.P.'s Division. The working of the beat Police is supervised every night by one PSI/ASI. Beat PCs have been provided with rifles with instructions to use force to prevent dacoities and apprehend dacoits. Lurking patrols are also posted in vulnerable areas to keep a watch over the movement of suspicious persons.

Outskirts of the City is specially manned by Inspectors of Police/Asst. Commrs. of Police with sufficient supporting staff who are provided with vehicles and wireless sets to keep a watch exclusively on the outskirts. In addition to existing Control Room, 16 Sub–Controles have been opened in the outskirts of Bangalore City to monitor information relating to movement of dacoits and suspicious persons. For about 15 days in a month during the dark nights, the services of Home Guards are being utilised for beat patrolling, in addition to regular Police Beats.

Sub–Inspectors of Police of outskirts Police Stations have been provided with jeeps and wireless sets for quick movement in night. Armed Police are also utilised in the outskirts for patrolling as well as for combing the area in the event of dacoity. Bus Stations, Railway Stations and Railway Tracks are being patrolled by Policemen to look for strangers and wandering gangs. Public are also assisting night patrolling Police Staff in their areas.

228 no. of more gun licences have been issued by the Commissioner of Police to the residents of the outskirts in the City. Those having weapons have also been given Civilian Rifle training in handling the weapons.

Brochures are also issued to the public about the precautionary measures to be taken by them in the event of dacoity, robberies, etc. Burglar alarms were got fixed to lonely houses on the out skirts of Bangalore City.

Every day, vehicles are checked till 1 AM by the traffic Police. In addition, during the dark nights all the major roads leading to the city are barricaded by the Traffic Police and all the vehicles are checked by them to look for dacoits and suspicious characters.

Recently, about 1303 people have been enlisted as Special Police Officers under Section 19 of Karnataka Police Act and the services of village Delapathies are also being utilised to assist the Police during night rounds.

The services of HAM Radio operators have been drawn to disseminate quick passage of information/message regarding clues/incidents of dacoities / robberies.

Frequent meetings with the Anti–Dacoity Cells of border States of Andhra Pradesh, Tamil Nadu and Kerala are being held and their assistance is taken regarding apprehending dacoits.

ಶ್ರೀ ರಾಮಲಿಂಗರೆಡ್ಡಿ :- ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರು ನಗರದಲ್ಲಿ ನಡೆಯುವ ಡಕಾಯಿತಿಯ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದಾರೆ. ಆದರೂ ಬೆಂಗಳೂರು ನಗರದಲ್ಲಿ ಏನು ಡಕಾಯಿತಿಗಳು ಆಗುತ್ತಿವೆ ಅವು ಪ್ರತಿದಿನವೂ ಜಾಸ್ತಿಯಾಗುತ್ತಿವೆ. ಸಣ್ಣಪುಟ್ಟ ಕಳ್ಳತನಗಳಂತೂ ಕೇಳುವ ಹಾಗೆಯೇ ಇಲ್ಲ. ಗ್ಯಾರೇಜು ಇಲ್ಲದೆ ಏನಾದರೂ ಕಾರನ್ನು ನಿಲ್ಲಿಸಿದರೆ ಕಾರಿನೊಳಗಡೆ ಇರತಕ್ಕ ಟೇಪ್ ರೆಕಾರ್ಡರ್ ಇತರೆ ವಸ್ತುಗಳು ಒಂದೂ ಇರುವುದಿಲ್ಲ. ಅದೇ ಒಂದು ದೊಡ್ಡ ಗ್ಯಾಂಗ್ ಇದೆ. ಟೇಪರೆಕಾರ್ಡರ್ ಕದಿಯುವ ಒಂದು ಗ್ಯಾಂಗ್ ಇದೆ. ಅವುಗಳನ್ನು ಗುಜರಿಯಲ್ಲಿ ಯಾರು ತೆಗೆದುಕೊಳ್ಳುತ್ತಾರೆನ್ನುವುದು ನಮ್ಮ ಪೋಲೀಸ್‌ನವರಿಗೆ ಗೊತ್ತು. ತಾವು ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲವೆನ್ನುವುದು ನನ್ನ ಮೊದಲನೆಯ ಪ್ರಶ್ನೆ. ಸಣ್ಣ ಪುಟ್ಟ ಕಳ್ಳತನಗಳು ಹಗಲು ಹೊತ್ತಿನಲ್ಲಿ ನ್ಯೂ ಎಕ್ಸ್ ಟೆನ್ಷನ್ ಏರಿಯಾಗಳಲ್ಲಿ ನಡೆಯುತ್ತಿರುತ್ತವೆ. 15 ದಿವಸಗಳ ಹಿಂದೆ ನಾನು ಒಂದು ವರದಿಯನ್ನು ಪತ್ರಿಕೆಯಲ್ಲಿ ಓದಿದೆ. ಪತ್ರಿಕೋದ್ಯಮಿಯೊಬ್ಬರು ಮನೆಯಲ್ಲಿ ಗಂಡಹೆಂಡತಿ 6 ಗಂಟೆಗೆ ಮನೆಗೆ ಹೋಗುವಷ್ಟರಲ್ಲಿ ಮನೆಯನ್ನು ದೋಚಿ ಮೂಟೆ ಕಟ್ಟಿಕೊಂಡು ಟೆಂಪೋನಲ್ಲಿ ತೆಗೆದುಕೊಂಡು ಹೋಗುತ್ತಿದ್ದರಂತೆ. ಈ ಬಗ್ಗೆ ಮಾನ್ಯಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು.

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರು ನಗರದಲ್ಲಿ ಮತ್ತು ಬೆಂಗಳೂರಿನ ಹೊರವಲಯಗಳಲ್ಲಿ ಡಕಾಯಿತಿಗಳು ಆಗುತ್ತಾ ಇವೆ. ಹೋದವರ್ಷ ಅನೇಕ ಕಡೆ ಕಳ್ಳತನಗಳು ಆಗಿರುವುದು ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಬೆಂಗಳೂರಿನಲ್ಲಿ 1989 ರಲ್ಲಿ ಏನು ಡಕಾಯಿತಿ ಪ್ರಕರಣಗಳು ಆದವು ಅವುಗಳನ್ನು 1991 ಕ್ಕೆ ಕಂಪೇರ್ ಮಾಡಿದರೆ ಈ ಸಾರಿ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಬೆಂಗಳೂರಿನ ಜನಸಂಖ್ಯೆ ನಗರ ಮತ್ತು ಹೊರವಲಯದಲ್ಲಿ ಹೆಚ್ಚುತ್ತಾ ಇದೆ. ನಾವು ಸುಮಾರು 300 ಗನ್ ಲೈಸೆನ್ಸ್ ಗಳನ್ನು ಕೊಟ್ಟಿದ್ದೇವೆ. ಫಾರಂ ಹೌಸ್‌ಗಳಲ್ಲಿ ಈ ವರ್ಷ ಎಲ್ಲೂ ಡಕಾಯಿತಿ ಆಗಿಲ್ಲ. ಕೇವಲ 7 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಐದು ಪ್ರಕರಣಗಳಲ್ಲಿ ನಮ್ಮ ಪೋಲೀಸ್‌ನವರು ಅಧಿಕಾರಿಗಳು ಹೈದರಾಬಾದ್‌ಗೆ ಹೋಗಿ ಡಿಟೆಕ್ಟ್ ಮಾಡಿದ್ದಾರೆ. ಮುಂದೆ ಎಲ್ಲಾ ಕಡೆಗೂ ಬೆಂಗಳೂರು ನಗರದಲ್ಲಿ ಗಸ್ತು ಹಾಕಬೇಕೆಂದು ಡಿಸಿಪಿಯವರಿಗೆ ವಹಿಸಿದ್ದೇವೆ. ಬೆಂಗಳೂರು ನಗರಕ್ಕೆ 80 ವಾಹನಗಳನ್ನು ಕೊಟ್ಟು, ನಗರದ ಎಲ್ಲಾ ಕಡೆಗೂ ಬಹಳ ಪರಿಣಾಮಕಾರಿಯಾಗಿ ಕೆಲಸವಾಗಬೇಕು, ಆ ಕೆಲಸ ಇವತ್ತು ಆಗಿದೆ.

ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡಿದೆ. ಡಕಾಯಿತಿಗಳು ಸಣ್ಣಪುಟ್ಟವು ಆಗಿರಬಹುದು ಆಗಿದ್ದರೆ ಅದೂ ಸಹ ನಮ್ಮ ಗಮನಕ್ಕೆ ಬಂದಿದೆ. ಪೋಲೀಸ್ ಕಮೀಷನರ್ ಜೊತೆ ಮಾತನಾಡಿ ಎಲ್ಲಾ ಕಡೆ ಎಫೆಕ್ಟೀವ್ ಆಗಿ ಬಂದೋಬಸ್ತ್ ಕ್ರಮ ತೆಗೆದುಕೊಂಡಿದ್ದೇವೆ. ಗಸ್ತು ಆಗುತ್ತಾ ಇದೆ. 1992 ರಲ್ಲಿ ಎಫೆಕ್ಟೀವ್ ಆಗಿ ಡಕಾಯಿತಿಯನ್ನು ಕಂಟ್ರೋಲ್ ಮಾಡಿದ್ದೇವೆ.

ಶ್ರೀ ವಿಜಯಕುಮಾರ ಶೆಟ್ಟಿ :- ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಸುಮಾರು ನಾಲ್ಕೈದು ತಿಂಗಳುಗಳಲ್ಲಿ ...

ಉಪಾಧ್ಯಕ್ಷರೆಯವರು :- ಇದು ಬೆಂಗಳೂರು ನಗರದಲ್ಲಿ ಡಕಾಯಿತಿಗಳ ನಡೆಯುವ ಬಗ್ಗೆ ಕೇಳಿರುವ ಪ್ರಶ್ನೆ ಇದು.

ಶ್ರೀ ಧರ್ಮಸಿಂಗ್ :- ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂಥ ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದ್ದು, ಮಂಗಳೂರಿನದ್ದು ಮತ್ತೊಂದು ಪ್ರಶ್ನೆ ಅಂದರೆ ಬೇರೆ ಉತ್ತರ ತರಿಸಿಕೊಡುತ್ತೇನೆ.

ಉಪಾಧ್ಯಕ್ಷರು:- ಬೆಂಗಳೂರಿನ ಬಗ್ಗೆ ಏನಾದರೂ ಇದ್ದರೆ ಕೇಳಿ.

ಶ್ರೀ ರಾಮಲಿಂಗರೆಡ್ಡಿ :- ಬೆಂಗಳೂರು ನಗರದಲ್ಲಿ ಪೋಲೀಸರ ಸಂಖ್ಯೆ ಬಹಳ ಕಡಿಮೆ ಇದೆ. 15–20 ಸಾವಿರ ಜನಸಂಖ್ಯೆ ಇರತಕ್ಕಂಥ ಪ್ರದೇಶಗಳಲ್ಲಿ ಯಾರೋ ಒಬ್ಬರೋ ಇಬ್ಬರೋ ಇರುತ್ತಾರೆ. ಇದು ಬಹಳ ಕಡಿಮೆ ಇದೆ. ಇದನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :- ಈಗ ಇದಲ್ಲದೆ ನಾವು ಕೆ.ಎಸ್.ಆರ್.ಪಿ. 15 ಪ್ಲಾಟೂನ್ಸ್ ಮತ್ತು 200 ಹೋಮ್ ಗಾರ್ಡ್ಸ್‌ನ್ನು ತೆಗೆದುಕೊಂಡಿದ್ದೇವೆ. ಎಲ್ಲಿ ಕಡಿಮೆ ಇದೆ ಎಂದು ಸದಸ್ಯರ ಮನಸ್ಸಿನಲ್ಲಿದೆ, ನಾನು ಅಧಿಕಾರಿಗಳಿಗೆ ಹೇಳಿ ಹೆಚ್ಚಿಗೆ ಪೋಲೀಸ್ ಏರ್ಪಾಡು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಸನ್ಮಾನ್ಯ ಶಾಸಕರಿಗೆ ಮಂತ್ರಿಗಳ ಮಾತಿನಿಂದ ಸಮಾಧಾನ ಆಗಿಲ್ಲ, ಪ್ರಶ್ನೆ ಇರತಕ್ಕದ್ದು, ಅವರದ್ದೇ ಕಾಲಿನಲ್ಲಿದ್ದಂಥ ಹೊಸ ಕ್ಯಾಸೆಟ್‌ನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆ. ಅದನ್ನು ಕೊಡಿಸುವ ಪ್ರಯತ್ನವನ್ನು ನೀವು ಮಾಡುತ್ತೀರಾ?

ಶ್ರೀ ಧರ್ಮಸಿಂಗ್ :- ಅವರು ಬೆಂಗಳೂರಿನ ಶಾಸಕರು ಆಗಿದ್ದಾರೆ. ಕಮೀಷನರ್, ಡಿ.ಜಿ.ಪಿ. ಅವರನ್ನ ಭೇಟಿಯಾಗಿದ್ದರೆ, ಅಥವಾ ನನ್ನನ್ನು ಖುದ್ದಾಗಿ ಭೇಟಿಯಾಗಿದ್ದರೆ ತರಿಸಿಕೊಡತಕ್ಕಂಥ ಪ್ರಯತ್ನ ಮಾಡುತ್ತಿದ್ದರು.

ಶ್ರೀ ಟಿ.ಬಿ. ಜಯಚಂದ್ರ :- ತಮ್ಮನ್ನೆ ನೋಡಿದರೆ ಹೊಸ ಕ್ಯಾಸೆಟ್ ಸಿಗುತ್ತದಲ್ಲ ?

ಬಳ್ಳಾರಿ ಜಿಲ್ಲೆಯ ಪೋಲೀಸ್ ಔಟ್ ಪೋಸ್ಟ್ ಠಾಣೆಗಳನ್ನು ಮೇಲ್ದರ್ಜೆಗೇರಿಸುವುದು

1385. ಶ್ರೀ ಬಿ.ಹೆಚ್. ಎಂಕಾ ನಾಯ್ಕ (ಹರಪ್ಪನಹಳ್ಳಿ) :- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪೋಲೀಸ್ ಔಟ್ ಪೋಸ್ಟ್‌ಗಳಿವೆ ;

ಆ) ಇದರಲ್ಲಿ ಎಷ್ಟು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್‌ಗಳನ್ನು ಮೇಲ್ದರ್ಜೆಗೆ ಪರಿವರ್ತಿಸಲಾಗಿದೆ ;

ಇ) ಹರಪನಹಳ್ಳಿ ತಾಲ್ಲೂಕು ತೆಲಗಿ ಔಟ್ ಪೋಸ್ಟ್‌ನ್ನು ಪೋಲೀಸ್ ಸ್ಟೇಷನ್ ಆಗಿ ಪರಿವರ್ತಿಸಲು ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ ;

ಈ) ಜಿಲ್ಲೆಯಲ್ಲಿ ಬೇರೆ ಕಡೆಯ ಔಟ್‌ಪೋಸ್ಟ್‌ಗಳನ್ನು ಮೇಲ್ದರ್ಜೆಗೇರಿಸಲಾಗಿದೆ, ತಲಗಿ ಔಟ್‌ಪೋಸ್ಟ್‌ನ್ನು ಮೇಲ್ದರ್ಜೆಗೆ ಏರಿಸದಿರುವುದಕ್ಕೆ ಕಾರಣವೇನು ;

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) ಒಂದು.

ಆ) ಇಲ್ಲ.

ಇ) ಆ ರೀತಿಯ ಪ್ರಸ್ತಾವನೆ ಸದ್ಯದಲ್ಲಿ ಸರ್ಕಾರದ ಮುಂದಿರುವುದಿಲ್ಲ.

ಈ) ಈ ಪ್ರಸ್ತಾವನೆಯನ್ನೂ ಸಹ ಮುಂದಿನ ವರ್ಷಗಳಲ್ಲಿ, ಸಂಪನ್ಮೂಲಗಳ ಅಗತ್ಯತೆ ಮತ್ತು ಆದ್ಯತೆಯನ್ನು ಆಧರಿಸಿ ಪರಿಗಣಿಸಲಾಗುವುದು.

ಶ್ರೀ ಬಿ.ಎಚ್. ಯಂಕಾನಾಯಕ್ :- ಹರಪನಹಳ್ಳಿ ತಾಲ್ಲೂಕು ತೆಲಗಿಯಲ್ಲಿ ಒಂದು ಪೋಲೀಸ್ ಸ್ಟೇಷನ್ ಮಾಡಬೇಕೆಂದು ಎಸ್.ಪಿ. ಯವರು ಸರ್ಕಾರಕ್ಕೆ ರೆಕಮಂಡ್ ಮಾಡಿ ಕಳಿಸಿದ್ದಾರೆ. ಇದೇ ರೀತಿಯಾಗಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಟೌನ್ ಪೋಲೀಸ್ ಸ್ಟೇಷನ್ ಮಾಡಬೇಕೆಂದು ಆಗಿದೆ. ಆದರೆ ತಮ್ಮ ಉತ್ತರದಲ್ಲಿ ಪರಿಶೀಲಿಸಲಾಗುವುದು' ಎಂದು ಉತ್ತರ ಬಂದಿದೆ. ಈ ವರ್ಷ ಏನಾದರೂ ಅದನ್ನು ಪ್ರಾರಂಭ ಮಾಡುತ್ತೀರಾ ? ಅಥವಾ ಇದೇ ರೀತಿಯಾಗಿ ಮುಂದುವರೆಸುತ್ತೀರಾ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಧರ್ಮಸಿಂಗ್ :- 1992-93 ರ ಸಾಲಿನಲ್ಲಿ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಒಂದು ಕಾರ್ಯಕ್ರಮ ಪಟ್ಟಿಯಲ್ಲಿದೆ. ಹೈಲೆವಲ್ ಕಮಿಟಿಯಲ್ಲಿಯೂ ಕೂಡ, ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಪೋಲೀಸ್ ಸ್ಟೇಷನ್‌ಗಳು ಬೇಕು ಎಂದು ನಮಗೆ ಮನವರಿಕೆ ಮಾಡಿದ್ದಾರೆ. ಅಲ್ಲಿ ಔಟ್‌ಪೋಸ್ಟ್ ಮಾಡುವ ಬಗ್ಗೆ ಏನು ಮಾನ್ಯಸದಸ್ಯರ ಬೇಡಿಕೆ ಇದೆ, ಅದರ ಬಗ್ಗೆ 1992-93ನೇ ಸಾಲಿನಲ್ಲಿ ಪರಿಶೀಲನೆ ಮಾಡುತ್ತೇವೆ.

ಡಾ : ವೈ. ನಾಗಪ್ಪ:- ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ಗೃಹಮಂತ್ರಿಗಳು ಅವರ ಖಾತೆಯನ್ನು ವಹಿಸಿಕೊಂಡಾಗಿನಿಂದ ಔಟ್‌ಪೋಸ್ಟ್‌ಗಳನ್ನು ಹೆಚ್ಚಿಗೆ ಮಾಡುತ್ತೇವೆ, ಹೆಚ್ಚಿಗೆ ಪೋಲೀಸ್ ದಳ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದುವರೆಗೆ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇನ್ನು ಎರಡು-ಮೂರು ವರ್ಷಗಳಲ್ಲಿ ಅವರ ಅವಧಿ ಕಳೆದುಹೋಗುತ್ತದೆ. ಈ ರೀತಿ ಅವರು ಹೇಳುತ್ತಾ ಹೋದರೆ ನಮ್ಮ ಪರಿಶೀಲಿಸುವ ಖಾತಾ ಮಂತ್ರಿಗಳಾದ ಶ್ರೀ ಶಿವಣ್ಣ ಅವರನ್ನು ಕೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ :- ಶ್ರೀ ನಾಗಪ್ಪನವರಿಗೆ ಗೊತ್ತಿರಬಹುದು. 1991-92ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ 15 ಪೋಲೀಸ್ ಠಾಣೆಗಳು, 10 ಔಟ್ ಪೋಸ್ಟ್‌ಗಳನ್ನು ತೆಗೆಯತಕ್ಕಂಥ ಕಾರ್ಯಕ್ರಮ ಇತ್ತು. ಈಗಾಗಲೇ ಸರ್ಕಾರ ನಿರ್ಧಾರ ತೆಗೆದುಕೊಂಡು ಅವುಗಳನ್ನು ಪ್ರಾರಂಭ ಮಾಡಿದ್ದೇವೆ. 1992-93ನೇ ಸಾಲಿನಲ್ಲಿ ಕೂಡ 40 ಹೊಸ ಪೋಲೀಸ್ ಠಾಣೆಗಳನ್ನು ತೆಗೆಯಬೇಕೆಂಬ ಕಾರ್ಯಕ್ರಮ ಇದೆ. ಅದನ್ನು ಮಾಡುತ್ತಿದ್ದೇವೆ. ಆದ್ದರಿಂದ ಪರೀಶೀಲನೆ ಎನ್ನತಕ್ಕದ್ದು ಇಲ್ಲ. ಪ್ರಪ್ರಥಮವಾಗಿ ಇದು ನಾನ್ ಪ್ಲಾನ್ ಎಕ್ಸಪೆಂಡಿಚರ್ ಆದರೂ ಕೂಡ...

ಉಪಾಧ್ಯಕ್ಷಣೆಯವರು :- ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ, ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ :- ಎಲ್ಲಾ ಕಡೆಗೂ ಹೆಚ್ಚಿಗೆ ದುಡ್ಡು ಕೊಟ್ಟಿದ್ದೇವೆ. 1992-93ನೇ ಸಾಲಿನಲ್ಲಿ ಕೂಡ ಮಾಡುತ್ತಿದ್ದೇವೆ. ಎಲ್ಲಿ ಕೊಡಬೇಕೆಂದು ಶಾಸಕರ ಬೇಡಿಕೆ ಇದೆ ಮತ್ತು ನಮ್ಮಲ್ಲಿ ಕೂಡ ಒಂದು ಪಟ್ಟಿ ಇದೆ. ಈ ಪಟ್ಟಿ ಆಧಾರದ ಮೇಲೆ ಎಲ್ಲಾ ಕಡೆಗೆ ಪೋಲೀಸ್ ಠಾಣೆಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಇದೆ.

ಡಾ: ವೈ. ನಾಗಪ್ಪ :- ನಿರ್ದಿಷ್ಟವಾಗಿ ಇದು ಯಾವಾಗ ಇಂಪ್ಲಿಮೆಂಟ್ ಆಗುತ್ತದೆ ಎಂದು ನಾನು ತಿಳಿಯುವುದಕ್ಕೆ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ :- ನೋಡೋಣ. 40 ಪೋಲೀಸ್ ಠಾಣೆಗಳನ್ನು 1992-93ನೇ ಸಾಲಿನಲ್ಲಿ ಕೊಡತಕ್ಕಂಥಾದ್ದು ಏನಿದೆ, ಇದರ ಜೊತೆಗೆ ಡಿಪಾರ್ಟ್‌ಮೆಂಟಲ್ ಪ್ರಪೋಸಲ್ ಕೂಡ ಬರುತ್ತದೆ. ನೀವು ಕೂಡ ನಮಗೆ ಕೊಟ್ಟರೆ ಅದರ ಬಗ್ಗೆ ನೋಡಿ ಮಾಡೋಣ.

ಡಾ : ವೈ. ನಾಗಪ್ಪ :- ತಾವು ಮಾಡುತ್ತೀರ ಎಂದು ನಂಬಿಕೆ ನಮಗೆ ಇದೆ, ಬೇಗ ಮಾಡಿಕೊಡಿ ಸ್ವಾಮಿ.,

ಶ್ರೀ ಧರ್ಮಸಿಂಗ್ :- ಮಾಡಿಕೊಡೋಣ.

ಉಪಾಧ್ಯಕ್ಷಣೆಯವರು :- ಶ್ರೀ ಯಂಕಾನಾಯಕ್‌ರವರೇ, ನೀವು ಇನ್ನೇನಾದರೂ ಕೇಳುವುದು ಇದೆಯೇ ?

ಶ್ರೀ ಬಿ.ಎಚ್. ಯಂಕಾನಾಯಕ್ :- ಬೇರೆನೂ ಇಲ್ಲ, ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಏನು ಸಮಸ್ಯೆ ಇದೆ, ಅದನ್ನು ಆದಷ್ಟು ಬೇಗ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :- ಇದಕ್ಕೆ ಮುಂಚೆ ಕೂಡ ತಾವು ಪ್ರಶ್ನೆ ಕೇಳಿದ್ದೀರಿ. ಈಗ 1991-92ರಲ್ಲಿ ಆಗಲಿಲ್ಲ, 1992-93ನೇ ಸಾಲಿನಲ್ಲಿ ಮಾಡಿಸಿಕೊಡುತ್ತೇನೆ.

ಉಪಾಧ್ಯಕ್ಷೆಯವರು :- ಶ್ರೀ ಹೆಚ್. ವಿಶ್ವನಾಥ್ ರವರೇ, ನಿಮ್ಮ ಪ್ರಶ್ನೆ 209 (1387) ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಆ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ. ಮುಂದೆ ಅದನ್ನು ತೆಗೆದುಕೊಳ್ಳೋಣ.

SRI QUAMARUL ISLAM : – Madam, I am authorised to ask the question.

Madam Dy. Speaker : You can put the question.

SRI QUAMARUL ISLAM : – (On behalf of Sri Basavaraja Rayareddy) :– Madam, B.D.A. has denotified several lands meant for the formation of the layouts in Bangalore city during 1990–91 and 91–92. So, the list has not been supplied. It had been asked to supply the list and the reasons for denotification, and whom it has been denotified.

SRI DHARM SINGH (Home Minister : I want some time. We will give next time.

MADAM DEPUTY SPEAKER : Minister wants time. We will take it up later.

SRI QUAMARUL ISLAM : – Agreed.

ಸರ್ಕಾರಿ ಆದೇಶಗಳನ್ನು ಉರ್ದುಭಾಷೆಯಲ್ಲಿ ಹೊರಡಿಸುವುದು

1150. ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ) :– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಸರ್ಕಾರದ ಎಲ್ಲಾ ಪ್ರಕಟಣೆಗಳು, ನಾಮ ಫಲಕಗಳು ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ನು ಯಾವ ಪ್ರದೇಶದಲ್ಲಿ ಶೇಕಡಾ 15ಕ್ಕಿಂತ ಹೆಚ್ಚು ಉರ್ದು ಭಾಷೆಯನ್ನು ಬಲ್ಲ ಜನರು ವಾಸಿಸುತ್ತಾರೆಯೋ ಅಂತಹ ಪ್ರದೇಶಗಳಲ್ಲಿ ಉರ್ದು ಭಾಷೆಯಲ್ಲಿ ಪ್ರಕಟಿಸುವ ಕುರಿತಾಗಿ ಸರ್ಕಾರದಿಂದ ಸೂಚನೆಯನ್ನು ಹೊರಡಿಸಲಾಗಿದೆಯೇ ;

ಆ) ಹಾಗಿದ್ದರೆ, ಇದನ್ನು ಅನುಷ್ಠಾನಕ್ಕೆ ತರಲಾಗಿದೆಯೇ ;

ಇ) ಇಲ್ಲದಿದ್ದರೆ, ಅದನ್ನು ಅನುಷ್ಠಾನಕರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮ ;

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಹೌದು. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ:26:ಎಲ್.ಎಂ.ಎಲ್.:90 ದಿನಾಂಕ 16.11.1990. ಈ ಆದೇಶ– ಸರ್ಕಾರಿ ಆದೇಶ ಮತ್ತು ಅಧಿಸೂಚನೆಗಳ ಬಗ್ಗೆ ಮಾತ್ರ ನಾಮಫಲಕಗಳ ಬಗ್ಗೆ ಅಲ್ಲ.

ಆ) ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಸ್ಥಳೀಯ ಭಾಷಾ ಪರಿಜ್ಞಾನವಿರುವ ಅಧಿಕಾರಿಯನ್ನು ಗುರುತಿಸಿ, ಆ ಅಧಿಕಾರಿಯ ಸಹಾಯದಿಂದ ಜಿಲ್ಲಾಧಿಕಾರಿಗಳು ಅಲ್ಪಸಂಖ್ಯಾತರಿಗೆ ಅನುಕೂಲವೆಂದು ಗುರುತಿಸುವ ನಿಯಮಾವಳಿ : ಆಜ್ಞೆಗಳು ಸ್ಥಳೀಯ ಪ್ರಕಟಣೆಗಳನ್ನು ಭಾಷಾಂತರಿಸಿ ಮುದ್ರಿಸಿ ಪ್ರಕಟಿಸುವ ಏರ್ಪಾಡು ಮಾಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

SRI QUAMARUL ISLAM : – Madam, Deputy Speaker, there is a Government order dated 16.11.1990 which states that wherever there are more than 15 per cent of Urdu knowing people in the district, the Govt. orders and the notifications to be issued in the Urdu also. This has not been followed in more than 12 districts where more than 15 per cent Urdu knowing people are residing and also the sign boards should be in urdu. What I insist is that the sign boards also should be there is Urdu. This has not been taken seriously. Urdu knowing people area demanding it because they do not know any other

language and it will be very difficult to know the Government functioning and the government popular schemes and the programmes. Popular schemes and programmes of the Government is for the people and 15% of the people of those districts are not aware of these programmes and policies. It will be very difficult for them to get something. So, I wanted to know from the hon. Minister why this has not been implemented. It is only stated that steps have been taken. I want to know what steps have been taken. It is also stated that the Government have given instructions to all the Deputy Commissioners. If the instructions have been given what are the Government orders. What is that Government order through which instructions have been given to the Deputy Commissioner, whether it is a written instruction or it is only an oral instruction?

SRI DHARMA SINGH : – Madam, Speaker, based on 1981 census, on 16th of November, 1991 Government has issue instructions to all the officers. Subsequently also on 20th May, 1991 we have issued one notification and we have told all the Deputy Commissioners to identify the officers who will translate Kannada to Urdu and English to Urdu like that . yesterday I had a talk with the Chief Secretary and I had told him that this is very important, and there is already a Government of India circular in this regard. We have to follow that circular and we have to safeguard the interest of the minorities. Again we will taken up. We have already given instructions. With all that, the hon'ble member is telling that they have not followed. We have also given written instructions.

SRI QUAMARUL ISLAM : Will you kindly give that written instructions?

SRI DHARM SINGH : That we will give.

ಉಪಾಧ್ಯಕ್ಷರು :- ಪೆರಿಕಲ್ ಎಂ. ಮಲ್ಲಪ್ಪನವರೆ, ತಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಮಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಊರಿನಲ್ಲಿ ಇಲ್ಲದೇ ಇರುವುದರಿಂದ ಮುಂದಕ್ಕೆ ಹಾಕಲಾಗಿದೆ.

ಸೇಂದಿ ಪರವಾನಗಿ.

1199. ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) :- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಪುಣೆ : ಸೇಂದಿ ಮಾರಾಟ ಪರವಾನಗಿ (ಟಾಡಿ ಲೈಸನ್ಸ್) ನೀಡಲಾಗಿದ್ದು, ಆದರೆ, ಸಕಲೇಶಪುರ ತಾಲ್ಲೂಕಿಗೆ ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ಪರವಾನಗಿಯನ್ನು ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) ಹೌದು

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಆರ್. ಗುರುದೇವ್ :- ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಗೆ ಸೇಂದಿ ಮಾರಾಟ ಪರವಾನಗಿ ನೀಡಲಾಗಿದ್ದು, ಸಕಲೇಶಪುರ ತಾಲ್ಲೂಕಿಗೆ ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದಾರೆ. ಸಕಲೇಶಪುರ ತಾಲ್ಲೂಕಿನಲ್ಲಿ ಈ ಉದ್ಯೋಗವನ್ನೇ ನಂಬಿ ಸುಮಾರು 7 ಸಾವಿರ ಜನ ಬೀದಿ ಪಾಲಾಗಿದ್ದಾರೆ. ಸಕಲೇಶಪುರದಲ್ಲಿ ಏತಕ್ಕೆ ಲೈಸೆನ್ಸ್ ಕೊಡಬಾರದು ಎಂದು ಕೇಳಿದ್ದಕ್ಕೆ, ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನಾನು ತಮ್ಮ ಮುಖಾಂತರ ಮಾನ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ದೃಷ್ಟಿಯಿಂದ ಯಾವ ಪರವಾನಗಿಯನ್ನು ನೀಡಿದ್ದೀರಿ ಅದೇ ರೀತಿಯಲ್ಲಿ ಸಕಲೇಶಪುರ ತಾಲ್ಲೂಕಿನ 7 ಸಾವಿರ ಜನಕ್ಕೆ ಲೈಸೆನ್ಸ್ ಕೊಟ್ಟು, ಅವರ ಜೀವನಕ್ಕೆ ದಾರಿ ಮಾಡಿಕೊಡಬೇಕು. ಈ ಬಗ್ಗೆ ಸದನದಲ್ಲಿ ಭರವಸೆ ನೀಡಬೇಕೆಂದು ತಮ್ಮ ಮುಖಾಂತರ ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಧರ್ಮಸಿಂಗ್ :- ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ ಅವಕಾಶ ಕೊಡತಕ್ಕಂಥ ಕಾರಣಗಳು ಬೇರೆ, ಅಲ್ಲಿರತಕ್ಕಂಥ ಮೂರ್ತೆದಾರರಿಗೆ ತೊಂದರೆ ಆಗಿದೆ, ಅಲ್ಲಿ ಸಾಕಷ್ಟು ಮರಗಳು ಇವೆ ಎಂದು ಅಲ್ಲಿನ ಶಾಸಕರೂ ಕೂಡಾ ಸರಕಾರಕ್ಕೆ ಮನವಿ ಮಾಡಿದ ಮೇಲೆ ಸರಕಾರ ಇದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಮರಗಳು ಇವೆ, ಇದಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಹಾಸನ ಜಿಲ್ಲೆಯಲ್ಲಿ ಎಷ್ಟು ಮರಗಳು ಇವೆ, ಅದರಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಬರುತ್ತವೆ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಈ ತಿಂಗಳಲ್ಲಿ ನೋಡಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಆರ್. ಗುರುದೇವ್ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ 7 ಸಾವಿರ ಜನ ಈ ಒಂದು ಉದ್ಯೋಗದಲ್ಲಿದ್ದಾರೆ 7 ಸಾವಿರ ಜನ ಎಂದರೆ ಮರಗಳು ಜಾಸ್ತಿ ಇವೆ ಎಂದು ಗೊತ್ತಾಗುತ್ತದೆ. ಇವತ್ತು ಅವರೆಲ್ಲರೂ ಬೀದಿ ಪಾಲಾಗಿದ್ದಾರೆ. ಆದುದರಿಂದ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್ :- ನಾನು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೇನೆ.

ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು

1551. ಶ್ರೀ ಬಾಬುರಾವ್ ಚವ್ಹಾಣ್(ಶಹಾಬಾದ್):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಲಂಬಾಣಿ ತಾಂಡಾಗಳಲ್ಲಿ ಶರಾಯಿ ಅಂಗಡಿಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಲಂಬಾಣಿ ತಾಂಡಾಗಳಲ್ಲಿ ಇರುವ ಶರಾಯಿ ಅಂಗಡಿಗಳ ಸಂಖ್ಯೆ ಎಷ್ಟು ;

ಇ) ಹರಿಜನ ಗಿರಿಜನ ಸಮುದಾಯಕ್ಕೆ ಸೇರಿರುವ ಲಂಬಾಣಿ ತಾಂಡಾಗಳಲ್ಲಿ ಶರಾಯಿ ಅಂಗಡಿ ನಡೆಸಬಾರದೆಂದು ಅಬಕಾರಿ ಕಾಯಿದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಲಂಬಾಣಿ ತಾಂಡಾಗಳಲ್ಲಿ ಇರುವ ಶರಾಯಿ ಅಂಗಡಿ ತೆಗೆದು ಹಾಕುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) ಇಲ್ಲ.

ಆ) ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇರುವುದಿಲ್ಲ.

ಇ) ಬಂದಿದೆ.

ಈ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ, ಈ ಸಂಬಂಧ ಕೆಲವು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

11.	Providing Boundary Stones and road side drains in KM ch: 0 to 6900 M of Hassan – Chikkamagalur deviation road.	1.32
12.	Constn. of depressed culvert at ch: 29813 M in 30th KM of YLBC	2.20
13.	– do – ch: 31923 M in 32nd KM of YLBC	2.00
14.	Providing boundary stones and bench mark stones in KM No.28th of YLBC	0.01
15.	– do – KM No.34th of YLBC	0.01
16.	– do – KM No. 36th of YLBC	0.02
17.	Taking trial bores from ch: 31688 to 31738 in 32nd KM of YLBC	0.02
18.	– do – from ch: 24113 to 24160 M in 25th KM of YLBC	0.01
19.	Taking trial pits in KM 25th of YLBC	0.01
20.	Improvements to I.B. including water supply and providing grill to Waranda at Dam site	0.56
21.	Estimate for levelling the ground alround I.B. Machinery Shed & Field Office at dam site.	0.01
22.	Estimate for improvements to machineries shed near dam site.	0.06
23.	Constn. of Kitchen block for the temporary I.B. at YP Dam site	0.94
24.	Improvement to approach road to stilling basin from HC road including protective works to the road.	0.43
25.	Improvement to approach road to dam site connecting from HC deviation road passing in front of I.B.	0.09
26.	AME of IB at dam site	0.12
27.	AME of New Kudlur channel	0.24
28.	Estimate for construction of Ornamental garden infront of IB at dam site	0.04
29.	Improvement to approach road and providing guard stone to R-S connecting Belur – Mudigere road to Surapura village.	0.54
30.	Construction of Type – Vth Block8 Res. Quarters at YP Colony, Belur.	0.93
31.	– do – Type Vth Block – 8 – do –	0.63

1	2	3	
32. – do –	Type–VIth Block–10	– do –	0.28
33. – do –	Type–Vth Block–10	– do –	1.16
34. – do –	type–VIth Block–11	– do –	1.17
35. – do –	Type–VIth Block–6	– do –	1.08
36. – do –	Type–VIIth Block–5	– do –	0.68
37. – do –	Type–VIth Block –7	– do –	0.08
38. – do –	Type–VIth Block–9	– do –	0.66
39. – do –	Type–Vth Block–4	– do –	0.17
40. – do –	Type–Vth Block–7	– do –	0.98
		Total	30.78

ಗ್ರಾನೈಟ್ ಬಂಡೆಗಳನ್ನು ತುಂಬಿರುವ ಲಾರಿಗಳ ಸಂಚಾರದಿಂದ ರಸ್ತೆ ಮತ್ತು ಸೇತುವೆಗಳು ಹಾಳಾಗಿರುವುದು.

129. ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀ ರಂಗಪಟ್ಟಣ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗ್ರಾನೈಟ್ ಬಂಡೆಗಳನ್ನು ತುಂಬಿರುವ ಲಾರಿಗಳ ಸಂಚಾರದಿಂದ ರಸ್ತೆಗಳು ಮತ್ತು ಸೇತುವೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

ಇ) ಸರ್ಕಾರವು ರಾಜ್ಯ ಹೆದ್ದಾರಿಗಳ ಮೇಲೆ ಗ್ರಾನೈಟ್ ಸಾಗಣೆಯನ್ನು ತಡೆಗಟ್ಟುವುದೇ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಲಾರಿಗಳಲ್ಲಿ ಕಾನೂನಿನ ನಿಯಮಗಳಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ತೂಕದ ವಸ್ತುಗಳನ್ನು ಸಾಗಿಸುತ್ತಿರುವುದರಿಂದ ರಸ್ತೆ ಮತ್ತು ಸೇತುವೆಗಳಿಗೆ ಹಾನಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಾನೂನಿನ ವಿರುದ್ಧ ಅಧಿಕ ತೂಕದ ಸಾಗಣೆ ಮಾಡುವ ಲಾರಿಗಳ ಬಗ್ಗೆ ಸಾರಿಗೆ ಇಲಾಖೆಯವರು ಹಾಗೂ ಪೋಲೀಸ್ ಇಲಾಖೆಯವರು ಕ್ರಮ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ತೀವ್ರ ಪರಿಶೀಲನೆಯನ್ನು ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಲಾಗಿದೆ.

ಇ) ಇಂತಹ ಪ್ರಸ್ತಾಪವು ಸರ್ಕಾರದ ಮುಂದೆ ಇರುವುದಿಲ್ಲ.

ಬೆಳ್ತಂಗಡಿ ತಾಲ್ಲೂಕು ಜಮಾಲಾಬಾದ್ ಮತ್ತು ವೇಣೂರಿನ ಗೊಮ್ಮಟೇಶ್ವರ ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

1216. ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳ್ತಂಗಡಿ ತಾಲ್ಲೂಕು ಜಮಾಲಾಬಾದ್ ಮತ್ತು ವೇಣೂರಿನ ಗೋಮ್ಮಟೇಶ್ವರ ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಇದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ಹೌದು.

ಆ) ಜಮಾಲಾಬಾದ್ ಅಭಿವೃದ್ಧಿಗೆ ಕೇಂದ್ರದ ನೆರವು ಅಗತ್ಯ ಎಂದು ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಗಮನಕ್ಕೆ ತರಲಾಗಿದೆ.

MINOR IRRIGATION WORKS REGARDING IN BIJAPUR DISTRICT.

859. Dr. R.B. CHOUDHARY (Siridhagi) :– Will the Minister of State for Minor Irrigation be pleased to state –

The number of Minor Irrigation works completed and to be completed in Bijapur District: (Taluk wise information be furnished) ?

SRI K.S. MALLIKARJUNA PRASANNA (Minister of State for Minor Irrigation)–

There are 251 completed Minor Irrigation Schemes and 16 on going Minor Irrigation Schemes in Bijapur District. Taluk wise information furnished below :

Taluk	No. of completed M.I. Schemes	No. of M.I. Schemes to be completed.
Bijapur	39	2
Indi	33	1
B. Bagewadi	24	1
Jamakhandi	10	2
Sindagi	18.	1
Muddebihal	20	1
Bagalkote	23	–
Badami	36	3
Hungund	24	2
Mudhol	16	3
Bilgi	8	–
Total	251	16

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಪ್ರವಾಸೋದ್ಯಮ ಇಲಾಖೆಯಿಂದ ನಡೆಸಲಾದ ಹೋಟೆಲ್, ಮೋಟೆಲ್ ಮತ್ತು ಕಾಟೇಜುಗಳ ಸ್ಥಿತಿಗತಿಗಳು ಬಗ್ಗೆ

8. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ವತಿಯಿಂದ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಹೋಟೆಲ್, ಮೋಟೆಲ್, ಕಾಟೇಜು ಮುಂತಾದವುಗಳ ಸಂಖ್ಯೆ ಎಷ್ಟು ; (ಹೆಸರು, ಸ್ಥಳ ಮುಂತಾದವುಗಳ ವಿವರಗಳನ್ನು ನೀಡುವುದು) ;

ಆ) ಅವುಗಳ ಮೇಲ್ವಿಚಾರಣೆ ಸಮರ್ಪಕವಾಗಿಲ್ಲದಿರುವುದು ನಿಜವೆ ;

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ;

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು) –

ಅ) ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಹೋಟೆಲ್, ಮೋಟೆಲ್, ಕಾಟೇಜುಗಳು ಒಂಭತ್ತು, ಅವುಗಳು :

1. ಶರಾವತಿ ಮತ್ತು ತುಂಗಾ ಪ್ರವಾಸಿ ಗೃಹ, ಜೋಗ್ ಜಲಪಾತ.
2. ಪ್ರವಾಸಿ ಕುಟೀರ, ಕಾರ್ಕಳ.
3. ಪ್ರವಾಸಿ ಕುಟೀರ, ಮೂಡಬಿದ್ರೆ.
4. ಪ್ರವಾಸಿ ಕುಟೀರ, ಹಳೇಬೀಡು
5. ಪ್ರವಾಸಿ ಕುಟೀರ, ಗೋಕರ್ಣ.
6. ಪ್ರವಾಸಿ ಗೃಹ, ದೇವರಾಯನದುರ್ಗ
7. ಪ್ರವಾಸಿ ಗೃಹ, ತಲಕಾವೇರಿ
8. ಪ್ರವಾಸಿ ಗೃಹ, ಐಹೊಳೆ
9. ಹೆದ್ದಾರಿ ಸೌಲಭ್ಯ, ಎಡಿಯೂರು

ಆ) ಇವುಗಳನ್ನು ಇನ್ನೂ ಉತ್ತಮಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಸಂಪನ್ಮೂಲಗಳು ಸೀಮಿತವಾಗಿರುವುದರಿಂದ ಈ ರೀತಿ ನಿರ್ಮಿಸಲಾಗಿರುವ ಸೌಲಭ್ಯಗಳನ್ನು ಗುತ್ತಿಗೆ ಮತ್ತು ಲೈಸನ್ಸ್ ಆಧಾರದ ಮೇಲೆ ಖಾಸಗಿಯವರಿಗೆ ನೀಡಲು ಅಥವಾ ಈ ಎಲ್ಲಾ ಸೌಲಭ್ಯಗಳನ್ನು ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಖಾಸಗೀಯವರಿಗೆ ಮಹಿಸುವ ಬಗ್ಗೆ

928. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ –

ಅ) ಪ್ರವಾಸಿಗರಿಗೆ ಹೆಚ್ಚು ಸೌಲಭ್ಯ ಕಲ್ಪಿಸಲು ಮತ್ತು ಹೆಚ್ಚು ವಿದೇಶಿ ವಿನಿಮಯವನ್ನು ಗಳಿಸಲು ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಖಾಸಗಿಯವರಿಗೆ ಮಹಿಸಬೇಕೆಂಬ ಇಚ್ಛೆ ಸರ್ಕಾರಕ್ಕೆ ಇದೆಯೇ?

ಆ) ಜಪಾನಿನ ಸಾಗರೋತ್ತರ ಸಹಕಾರಿ ಬ್ಯಾಂಕಿನಿಂದ ನೆರವು ಪಡೆಯಲು ಪರಿಷ್ಕೃತ ಯೋಜನೆ ಯೊಂದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಇ) ಈ ಬಗ್ಗೆ ಸರ್ಕಾರವು ಎಷ್ಟು ಪ್ರಗತಿ ಸಾಧಿಸಿದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ಪ್ರವಾಸೋದ್ಯಮ ಇಲಾಖೆ ನಿರ್ಮಿಸಿರುವ ಕೆಲವು ಸೌಲಭ್ಯಗಳನ್ನು ಖಾಸಗೀ ಕರಣಗೊಳಿಸುವ ಅಥವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹೌದು

ಇ) ಕೇಂದ್ರಕ್ಕೆ ಸಲ್ಲಿಸಲಾಗಿರುವ ಈ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವಾಲಯ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಗೆ ಶಿಫಾರಸ್ಸು ಮಾಡಿದೆ. ಮುಂಬರುವ ಆರ್ಥಿಕ ವರ್ಷದಲ್ಲಿ ಈ ಯೋಜನೆಗೆ ಹಣ ಒದಗಿಸುವ ಬಗ್ಗೆ ಜಪಾನಿನ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ. ಈ ಬಗ್ಗೆ ನಿರ್ಧಾರವನ್ನು ಇಷ್ಟರಲ್ಲೇ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ರಾಷ್ಟ್ರೀಯ ಹೆದ್ದಾರಿಗಳ ಯೋಜನೆಗಳು.

930. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳ ರಚನೆಗೆ ಸರ್ಕಾರವು ಯೋಜನೆ ತಯಾರು ಮಾಡಿದೆ; ಅವುಗಳು ಯಾವುವು;

ಆ) ಇವುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಎಂದು ಮುಗಿಸಲಾಗುವುದು, ಹಾಗೂ ಇವುಗಳ ಎಷ್ಟು ಕಿಲೋಮೀಟರ್ ಉದ್ದ ಇರುತ್ತದೆ;

ಇ) ರಾಜ್ಯದಲ್ಲಿ ಎಷ್ಟು ಹಳ್ಳಿಗಳಿಗೆ ರಸ್ತೆ ಸಂಪರ್ಕ ಇಲ್ಲವಾಗಿದೆ;

ಈ) ಇವುಗಳ ಸಂಪರ್ಕವನ್ನು ಎಂದಿನಿಂದ ಕಲ್ಪಿಸಲಾಗುವುದು;

ಶ್ರೀ ಜಿ. ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) 13
ಪಟ್ಟಿ ಲಗತ್ತಿಸಲಾಗಿದೆ.

ಆ) ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲವಾದ್ದರಿಂದ ಕಾಲಸಮನ್ನು ಪ್ರಾರಂಭಿಸುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.
ಪಟ್ಟಿಯಲ್ಲಿ ಹೇಳಲಾದ 13 ರಸ್ತೆಗಳ ಒಟ್ಟು ಉದ್ದ 4400 ಕಿ. ಮೀಟರ್‌ಗಳು.

ಇ) ಕರ್ನಾಟಕ ರಾಜ್ಯದಲ್ಲಿ 27,023 ಹಳ್ಳಿಗಳಿದ್ದು, ಇವುಗಳ ಪೈಕಿ 209 ಹಳ್ಳಿಗಳಿಗೆ ರಸ್ತೆ ಸಂಪರ್ಕ ಇರುವುದಿಲ್ಲ.

ಈ) ಏನೇ ಪಂಚವಾರ್ಷಿಕ ಯೋಜನೆ (1992–93 ರಿಂದ 1997–98) ಯಲ್ಲಿ ಈ ಹಳ್ಳಿಗಳಿಗೆ ರಸ್ತೆಗಳನ್ನು ಹಂತ ಹಂತವಾಗಿ ನಿರ್ಮಿಸಲಾಗುವುದು. ಈ ಯೋಜನೆ ಮುಗಿಯುವ, ಅಂದರೆ 1997–98 ರ ವೇಳೆಗೆ ಎಲ್ಲಾ ಹಳ್ಳಿಗಳಿಗೂ ಸಂಪರ್ಕವನ್ನು ಕಲ್ಪಿಸಲಾಗುವುದು.

ಪಟ್ಟಿ

ಕ್ರಮ ಸಂಖ್ಯೆ	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು	ಉದ್ದ (ಕಿ.ಮೀ.)
1.	ಆಂಧ್ರ ಪ್ರದೇಶದ ಕೂಟಿಯಿಂದ ಗುಂಟಕಲ್ - ಬಳ್ಳಾರಿ - ಹೊಸಪೇಟೆ - ಕೊಪ್ಪಳ - ಗದಗ್ - ಹುಬ್ಬಳ್ಳಿ - ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 17)	422

ಕ್ರಮ ಸಂಖ್ಯೆ	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು	ಉದ್ದ (ಕಿ.ಮೀ.)
2.	ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲಪೇಟೆ - ಊಟಿ -ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 47 ನ್ನು ತಮಿಳುನಾಡಿನಲ್ಲಿ ಸೇರುವಂತೆ)	220
3.	ಮೈಸೂರು - ಶ್ರೀ ರಂಗಪಟ್ಟಣ - ನಾಗಮಂಗಲ - ಚಿಕ್ಕನಾಯಕನ ಹಳ್ಳಿ - ಹುಳಿಯಾರ್ - ಹಿರಿಯೂರ್ - ಬಳ್ಳಾರಿ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	678
4.	ತುಮಕೂರು - ಅರಸಿಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	332
5.	ಬೆಂಗಳೂರು - ಮೈಸೂರು - ಮಡಿಕೇರಿ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	385
6.	ಬೆಳಗಾಂ - ಬಿಜಾಪುರ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	364
7.	ಬೆಳಗಾಂ - ಬಾಗಲ್ ಕೋಟ್ - ರಾಯಚೂರು - ಮೆಹಬೂಬ್ ನಗರ (ಆಂಧ್ರಪ್ರದೇಶದಲ್ಲಿ)	336
8.	ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	283
9.	ಧಾರವಾಡ - ಲೋಂಡಾ - ಅನ್‌ಮೋದ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	95
10.	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಶಿಕಾರಿಪುರ - ಶಿರಾಳ್ ಕೊಪ್ಪ - ಹುಬ್ಬಳ್ಳಿ - ಬಾಗಲ್ ಕೋಟ್ - ಹುನಗುಂದ .	550
11.	ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ ನಂ.4) ಮಧುಗಿರಿ - ಗೌರಿಬಿದನೂರು - ಚಿಕ್ಕಬಳ್ಳಾಪುರ - ಚಿಂತಾಮಣಿ - ಶ್ರೀನಿವಾಸಪುರ - ಮುಳಬಾಗಿಲು (ಬೆಂಗಳೂರು - ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ.4)	160
12.	ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ	325
13.	ಬೆಂಗಳೂರು - ಕನಕಪುರ - ಮಳವಳ್ಳಿ - ಮೈಸೂರು - ನಂಜನಗೂಡು - ಸುಲ್ತಾನ್ ಬತ್ತೇರಿ ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ	250
	ಒಟ್ಟು ಉದ್ದ	4400 ಕಿ. ಮೀ.

ರಾಜ್ಯದಲ್ಲಿ ಸಣ್ಣ ನೀರಾವರಿಯಡಿಯಲ್ಲಿ ಬಳಸಲಾದ ನೀರಿನ ಪ್ರಮಾಣ.

862. ಶ್ರೀ ಜಿ. ರಾಜುಗೌಡ (ಹನೂರು) :- ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಸಣ್ಣ ನೀರಾವರಿಗಾಗಿ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಿಸುತ್ತಿದ್ದೇವೆ ;
ಆ) ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಿನ ಅನುಕೂಲವಾಗುತ್ತಿದೆ ;

ಇ) ಗುರ್ತಿಸಿರುವ ಎಲ್ಲಾ ಹಳ್ಳಿಗಳ ನೀರನ್ನು ಉಪಯೋಗಿಸಿಕೊಂಡಾಗ ಇನ್ನು ಎಷ್ಟು ನೀರನ್ನು ಪಡೆಯಬಹುಈಗಿ ಅದರಿಂದ ಎಷ್ಟು ಎಕರೆ ಪ್ರದೇಶವನ್ನು ಅಚ್ಚುಕಟ್ಟಿಗೆ ತರಬಹದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ರಾಜ್ಯದಲ್ಲಿ ಸಣ್ಣ ನೀರಾವರಿಗಾಗಿ 240.93 ಟಿ.ಎಂ.ಸಿ. ನೀರನ್ನು ಉಪಯೋಗಿಸುತ್ತಿದ್ದೇವೆ.
ಬ) ಇದರಿಂದ 22,28,264 ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ.
ಇ) ಗುರ್ತಿಸಿರುವ ಎಲ್ಲಾ ಹಳ್ಳಗಳನ್ನು ಉಪಯೋಗಿಸಿಕೊಂಡಲ್ಲಿ 39.91 ಟಿ.ಎಂ.ಸಿ. ನೀರನ್ನು ಪಡೆಯಬಹುದು. ಇದರಿಂದ 2,41,733 ಎಕರೆ ಪ್ರದೇಶವನ್ನು ಅಚ್ಚು ಕಟ್ಟಿಗೆ ತರಬಹುದು.

ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸುವುದು

931. ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ. 1992–93 ರಲ್ಲಿ ಅಭಿವೃದ್ಧಿಪಡಿಸುವುದಕ್ಕಾಗಿ ಯಾವ ಯಾವ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ ;
ಬ) ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು ಕೇಂದ್ರದ ಪಾಲು ಹಾಗೂ ರಾಜ್ಯದ ಪಾಲು ಎಷ್ಟು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ರಾಜ್ಯದಲ್ಲಿ 200 ಕ್ಕೂ ಹೆಚ್ಚು ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಇಲಾಖೆ ಈವರೆವಿಗೆ ಗುರುತಿಸಿದೆ.
1992–93ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲು ಕೇಂದ್ರಗಳನ್ನು ಆಯ್ಕೆ ಮಾಡಬೇಕಾಗಿದೆ.
ಬ) ಪ್ರಸ್ತುತ ಜಾರಿಯಲ್ಲಿರುವ ಕೇಂದ್ರ ಪುರಸ್ಕೃತ ಯೋಜನೆ ರೀತ್ಯ ಅನುಮೋದಿತ ಯೋಜನೆಗಳಿಗೆ ಕೇಂದ್ರದ ಪಾಲು ಶೇಕಡ 80, ರಾಜ್ಯದ ಪಾಲು ಶೇಕಡ 20.

ಹೊಸದುರ್ಗ ತಾಲ್ಲೂಕಿನಲ್ಲಿರುವ ಮೈನರ್ ಕೆರೆಗಳ ಸಂಖ್ಯೆ

20. ಶ್ರೀ ಇಳ್ಳುಲ್ ವಿಜಯಕುಮಾರ್ (ಹೊಸದುರ್ಗ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನಲ್ಲಿರುವ ಮೈನರ್ ಕೆರೆಗಳ ಸಂಖ್ಯೆ ಎಷ್ಟು;
ಬ) ಈ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆಯೇ;
ಇ) ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ಕಟ್ಟದಹಳ್ಳಿ ಕೆರೆಯ ಅಭಿವೃದ್ಧಿಗೆ ಖರ್ಚಾಗಿರುವ ಹಣವೆಷ್ಟು ;
ಈ) ಸದರಿ ಕೆರೆಯ ವ್ಯಾಪ್ತಿಗೆ ಬರುವ ಅಚಕಟ್ಟು ಪ್ರದೇಶದ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು) –

ಅ) 49 ಕೆರೆಗಳು
ಬ) ಹೌದು ಪ್ರತಿ ಸಾಲಿನಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಯೋಜನೇತರ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನಕ್ಕೆ ಸೀಮಿತಗೊಳಿಸಿ, ಅತ್ಯಾವಶ್ಯಕವಾಗಿ ಆಗಬೇಕಾದ ಕೆರೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತಿದೆ.

ಇ) ಕೆರೆ ಕಾಮಗಾರಿಯೂ ಪೂರ್ಣಗೊಂಡಿರುವುದಿಲ್ಲವಾದ್ದರಿಂದ ಅದನ್ನು ಅಭಿವೃದ್ಧಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಚಿಕ್ಕಬಿದನೂರ ಹತ್ತಿರ ನೀರಾವರಿ ಕೆರೆ.

1375. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಚಿಕ್ಕಬಿದನೂರ ಹತ್ತಿರ ನೀರಾವರಿ ಕೆರೆ ಕಟ್ಟುವ ಸಲುವಾಗಿ ತಯಾರಿಸಿರುವ ಪುನರ್‌ವಿಮರ್ಶಿತ ಅಂದಾಜು ಪಟ್ಟಿಯನ್ನು ಮಾಡಿ ಸರ್ಕಾರಕ್ಕೆ ಒಪ್ಪಿಗೆ ನೀಡುವ ಸಲುವಾಗಿ ಮುಖ್ಯ ಇಂಜಿನಿಯರು ಸರ್ಕಾರಕ್ಕೆ ಎಂದು ಕಳುಹಿಸಲಾಗಿದೆ ;

ಆ) ಈ ನೀರಾವರಿ ಕೆರೆಯಿಂದ ಉಪಯೋಗವಾಗುವ ಜಮೀನೆಷ್ಟು; ಎಷ್ಟು ಗ್ರಾಮಗಳಿಗೆ ಈ ಅನುಕೂಲ ದೊರಕಲಿದೆ ;

ಇ) ಈ ಕೆಲಸವನ್ನು ಆಶ್ವಾಸನೆ ನೀಡಿದ ಪ್ರಕಾರ ಕೆಲಸವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಿಗೊಂಡಿರುವರು ; ಇನ್ನೂ ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಈ) 1991–92ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಹಣವನ್ನು ಪೂರ್ಣವಾಗಿ ಖರ್ಚು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ. ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಸವದತ್ತಿ ತಾಲ್ಲೂಕು ಚಿಕ್ಕಬಿದನೂರು ಹತ್ತಿರ ಹೊಸಕೆರೆ ನಿರ್ಮಿಸುವ ಅಂದಾಜಿಗೆ ಈ ಹಿಂದೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಆದರೆ ಭೂಸ್ವಾಧೀನ ತೊಂದರೆಯ ಕಾರಣ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗದೇ ಇರುವುದರಿಂದ ಬದಲಿ ಸ್ಥಳದಲ್ಲಿ ಕೆರೆ ನಿರ್ಮಿಸಲು ಪುನರ್ ವಿಮರ್ಶಿತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿಯವರು ದಿನಾಂಕ 26.12.91 ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಪುನರ್ ವಿಮರ್ಶಿತ ಅಂದಾಜನ್ನು ಕೆಲವು ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಅಂದಾಜಿಗೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಲು ದಿನಾಂಕ 22.1.92 ರಂದು ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿಯವರಿಗೆ ಹಿಂದಿರುಗಿಸಲಾಗಿದೆ.

ಆ) ಈ ಕೆರೆಯಿಂದ 1186 ಎಕರೆ ಜಮೀನಿಗೆ ಉಪಯೋಗವಾಗುವುದು. ಈ ಯೋಜನೆಯಿಂದ ಚಿಕ್ಕಬುದನೂರು, ಹಿರೇಬುದನೂರು ಮತ್ತು ಕುತ್ತನಹಟ್ಟಿ ಗ್ರಾಮಗಳಿಗೆ ಅನುಕೂಲ ದೊರಕಲಿದೆ.

ಇ) ಅಂದಾಜಿನಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಈ ಯೋಜನೆಗೆ ಆಡಳಿತಾತ್ಮಕ ಒಪ್ಪಿಗೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಪರಿಶೀಲಿಸಲಾಗುವುದು

ಬಡ್ಡಿ ಕಾತ್ರಳು ನೀರಾವರಿ ಯೋಜನೆ.

1377. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾವ್ ಜಿಲ್ಲೆಯ ಸೌದತ್ತಿ ತಾಲ್ಲೂಕು ಬಡ್ಡಿ ಕಾತ್ರಾಳ್ ನೀರಾವರಿ ಯೋಜನೆಯು ಯಾವ ಸಾಲಿನ ಆಯವ್ಯಯದಲ್ಲಿ ಸೇರಿದೆ ?

ಅ) ಈ ಯೋಜನೆಗಾಗಿ ಬೇಕಾಗುವ ಹಣವೆಷ್ಟು; ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ದೊರೆತಿದೆ; ಅನುಕೂಲ ಪಡೆಯುವ ಗ್ರಾಮಗಳೆಷ್ಟು?

ಆ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಈ) 1992–93ನೇ ಸಾಲಿನಲ್ಲಿ ಬೇಕಾಗುವ ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗುವುದೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) –

ಅ) ಬಡ್ಡಿ ಕಾತ್ರಾಳ ಏತ ನೀರಾವರಿ ಯೋಜನೆಯು ಮಲಪ್ರಭಾ ಯೋಜನೆಯ ಭಾಗವಾಗಿದ್ದು, ಅದನ್ನು ಪ್ರತ್ಯೇಕವಾಗಿ ಆಯವ್ಯಯದಲ್ಲಿ ಸೇರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಈ ಯೋಜನೆಯ ಅಂದಾಜು ವೆಚ್ಚ 1991–92ನೇ ಸಾಲಿನ ದರಗಳ ಪ್ರಕಾರ 96.695 ಲಕ್ಷ ರೂ.ಗಳಾಗಿದ್ದು, ಇದರಿಂದ ಎರಡು ಗ್ರಾಮಗಳ (ಬಡ್ಡಿ ಮತ್ತು ಕಾತ್ರಾಳ) 1254 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ.

ಇ) ಯೋಜನಾ ವರದಿಯು ತಯಾರಾಗಿದ್ದು, ಅದು ಪರಿಶೀಲನೆಯಲ್ಲಿದೆ.

ಈ) (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯದ ಕಡಲ ತಡಿಯಲ್ಲಿ ಸಮುದ್ರದ ಹೂಳೆತ್ತುವ ಕಾರ್ಯಕ್ಕೆ ಖರ್ಚು ಮಾಡಲಾದ ಹಣ

1091. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) :– ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದ ಕಡಲ ತಡಿಯಲ್ಲಿ ಸಮುದ್ರದ ಹೂಳೆತ್ತಲು ಸರಕಾರ ಖರ್ಚು ಮಾಡಿದ ಹಣದ ಮೊತ್ತವೆಷ್ಟು ;

ಆ) ರಾಜ್ಯ ಸರ್ಕಾರ ಸಮುದ್ರದ ಹೂಳೆತ್ತಲು ಡ್ರೆಜ್ಜರನ್ನು ಖರೀದಿಸಿದೆಯೇ ;

ಇ) ಮೇಲ್ಕಂಡ ಹೂಳಿನಿಂದ ಮೀನುಗಾರರಿಗೆ ತೊಂದರೆ ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ.ಎಂ. ಬೆಳ್ಳಿಯಪ್ಪ (ಬಂದರು ಮತ್ತು ಮೀನುಗಾರಿಕೆ ಸಚಿವರು) –

ಅ) 1978 ರಿಂದ ಇದುವರೆಗೆ ರೂ.10,31,16,000–00

ಆ) ಸಣ್ಣ ಪ್ರಮಾಣದಲ್ಲಿ ಹೂಳೆತ್ತಲು ಡ್ರೆಜ್ಜರ್ ಮಹಾಬಲ ಎಂಬ ಅತಿ ಸಣ್ಣ ಗ್ರಾಬ್ ಡ್ರೆಜ್ಜರನ್ನು ಸುಮಾರು 25 ವರ್ಷಗಳ ಹಿಂದೆ ಸರ್ಕಾರವು ಖರೀದಿಸಿದೆ.

ಇ) ಹೌದು

ಮಂಗಳೂರು ವಿಮಾನ ನಿಲ್ದಾಣ ಬಜೆಟ್‌ನ ವಿಸ್ತರಣೆ

1282. ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) :– ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮಂಗಳೂರು ವಿಮಾನ ನಿಲ್ದಾಣ ಬಜೆಟ್‌ನ ವಿಸ್ತರಣಾ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರವು ಒತ್ತಡವನ್ನು ತಂದಿದೆಯೇ;

ಆ) ಮೇಲ್ಕಂಡ ವಿಸ್ತರಣಾ ಕಾರ್ಯಕ್ಕಾಗಿ ಅಂದಾಜು ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ ;

ಇ) ಮೇಲ್ಕಂಡ ವಿಮಾನ ನಿಲ್ದಾಣದ ವಿಸ್ತರಣಾ ಕಾರ್ಯವನ್ನು ಶೀಘ್ರಗೊಳಿಸಲು ರಾಜ್ಯ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) –

ಅ) ಹೌದು

ಆ) ಇಲ್ಲ. ಇದು ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಇವರ ವ್ಯಾಪ್ತಿಗೆ ಬರುತ್ತದೆ.

ಇ) ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವನ್ನು ಒತ್ತಾಯಿಸಲಾಗುತ್ತಿದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡ ಕ್ರಮ

1225. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ –

ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :–

1. ಕೇಂದ್ರ ಹಾಗೂ ರಾಜ್ಯ ಯೋಜನೆಯಡಿಯಲ್ಲಿ ಪ್ರವಾಸಿ ಸೌಲಭ್ಯಗಳ ನಿರ್ಮಾಣ.
2. ಪ್ರೇಕ್ಷಣೀಯ ಸ್ಥಳಗಳು ಹಾಗೂ ಸೌಕರ್ಯಗಳ ಬಗ್ಗೆ ಪ್ರಚಾರ
3. ಪ್ರವಾಸಿ ಮಾಹಿತಿ ಕಛೇರಿಗಳ ಮೂಲಕ ಪ್ರವಾಸಿಗರಿಗೆ ಮಾಹಿತಿ ಒದಗಿಸುವುದು.
4. ವಸ್ತುಪ್ರದರ್ಶನ : ಮೇಳ ಹಾಗೂ ಉತ್ಸವಗಳಲ್ಲಿ ಭಾಗವಹಿಸುವುದು.
5. ಮೃಮಷ್ಟಿತ ಪ್ರವಾಸಗಳು.
6. ಪ್ರವಾಸಿ ಗೃಹಗಳು : ಉಪಹಾರ ಗೃಹಗಳ ನಿರ್ವಹಣೆ
7. ಪ್ರವಾಸಿ ಮಾರ್ಗದರ್ಶಿಗಳಿಗೆ ತರಬೇತಿ ಮತ್ತು ಪರವಾನಗಿ ನೀಡುವುದು.
8. ಖಾಸಗಿ ಹೋಟೆಲ್ ಉದ್ಯಮಿಗಳಿಗೆ ಉತ್ತೇಜನ
9. ಪ್ರವಾಸಿ ಮಡಿಕೆಗಳ ಪ್ರಕಟಣೆ

ಈ ಕೆಳಗಿನ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

10. ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ನೀತಿ ನಿಯಮ ನಿರೂಪಣೆ.
11. ಪ್ರವಾಸೋದ್ಯಮವನ್ನು ಕೈಗಾರಿಕೆ ಎಂದು ಘೋಷಿಸಿರುವುದರಿಂದ ಈ ಉದ್ಯಮಕ್ಕೆ ನೀಡಬೇಕಾದ ಉತ್ತೇಜನ ಹಾಗೂ ರಿಯಾಯಿತಿಗಳ ಬಗ್ಗೆ ಪ್ರಕಟಣೆ.
12. ಬೆಂಗಳೂರು - ಗೋವಾ ನಡುವೆ ಬರುವ ಪ್ರವಾಸಿ ಸ್ಥಳಗಳನ್ನು ಸಂದರ್ಶಿಸಲು "ಗಾಲಿ ಅರಮನೆ" ಎಂಬ ಪ್ರವಾಸಿ ರೈಲನ್ನು ಪ್ರಾರಂಭಿಸುವುದು.
13. ಇಲಾಖೆ ನಿರ್ಮಿಸಿದ ಕೆಲವು ಪ್ರವಾಸಿ ಸೌಲಭ್ಯಗಳನ್ನು ಖಾಸಗಿಯವರಿಗೆ ಅಥವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಹಿಸುವುದು.
14. ಇಲಾಖೆಯ ಪುನರ್ ವಿಂಗಡನೆ ಮಾಡುವುದು.
15. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗೆ ಜಪಾನಿನ ಒ.ಇ.ಸಿ.ಎಫ್. ನೆರವು ಪಡೆಯಲು ಕೇಂದ್ರಕ್ಕೆ 1992–93 ನೇ ಸಾಲಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಕನ್ನಡ ಅಭಿವೃದ್ಧಿಯ ಪ್ರಾಧಿಕಾರಕ್ಕೆ ವಹಿಸಲಾದ ಕೆಲಸಗಳು

1224. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಯಾವ ಯಾವ ಕೆಲಸಗಳನ್ನು ವಹಿಸಿದ್ದೀರಿ ?
ಆ) ಅಕಾಡೆಮಿಗಳಿಗೆ ಸದಸ್ಯರುಗಳ ನೇಮಕ ಯಾವಾಗ ಮಾಡಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಆಡಳಿತದಲ್ಲಿ ಕನ್ನಡ ಅನುಷ್ಠಾನ ಹಾಗೂ ಸರೋಜಿನಿ ಮಹಿಷಿ ವರದಿ ಶಿಫಾರಸ್ಸು ಜಾರಿಗೊಳಿಸುವ ವಿಷಯಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಲಾಗಿದೆ.
ಆ) ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಇದೀಗ ಸದಸ್ಯರ ನಾಮನಿರ್ದೇಶನ ಆಗಿದ್ದು, ಉಳಿದ ೬ ಅಕಾಡೆಮಿಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಬೆಂಗಳೂರು - ಮೈಸೂರು ರಸ್ತೆಯಲ್ಲಿ ಜೋಡಿ ರಸ್ತೆಯಾಗಿ ಪರಿವರ್ತನೆ

1227. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ –

ಅ) ಮೈಸೂರು - ಬೆಂಗಳೂರು ರಸ್ತೆಯಲ್ಲಿ ಅತಿ ಹೆಚ್ಚಿನ ವಾಹನಗಳು ಓಡಾಡುತ್ತಿರುವುದರಿಂದ ಜೋಡಿ ರಸ್ತೆಯಾಗಿ ಪರಿವರ್ತಿಸಲು ಸರ್ಕಾರ ಆಲೋಚಿಸಿದೆಯೆ?

ಶ್ರೀ ಜಿ.ಹೆಚ್. ಅಚ್ಚಪ್ಪ ರೆಡ್ಡಿ (ಲೋಕೋಪಯೋಗಿ ಸಚಿವರು) –

ಆ) ಇಲ್ಲ ಆದರೆ ಬೆಂಗಳೂರು - ಮೈಸೂರು ಮಧ್ಯೆ ಒಂದು (ಎಕ್ಸ್‌ಪ್ರೆಸ್ ವೇ) ವೇಗದ ಹೆದ್ದಾರಿಯನ್ನು ನಿರ್ಮಿಸುವ ಉದ್ದೇಶವಿದೆ.

ಕೊಡಗು ಜಿಲ್ಲೆಯಲ್ಲಿ ಜವಾಹರ ಯೋಜನೆಗೆ ಬಿಡುಗಡೆ ಮಾಡಿದ ಹಣ

1005. ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕೊಡಗು ಜಿಲ್ಲೆಯಲ್ಲಿ ಜವಾಹರ್ ರೋಜ್‌ಗಾರ್ ಯೋಜನೆ ಕಾರ್ಯಕ್ರಮಕ್ಕಾಗಿ ಬಿಡುಗಡೆಯಾದ ಹಣವೆಷ್ಟು ; (ತಾಲ್ಲೂಕುವಾರು, ಮಂಡಲವಾರು ಮಾಹಿತಿ ನೀಡುವುದು) ;

ಆ) ಜವಾಹರ್ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಹಣದಲ್ಲಿ ಇಲ್ಲಿಯತನಕ ಖರ್ಚಾದ ಹಣವೆಷ್ಟು; (ತಾಲ್ಲೂಕುವಾರು, ಮಂಡಲವಾರು ಮಾಹಿತಿ ಒದಗಿಸಿ) ;

ಇ) ಈ ಯೋಜನೆಯಲ್ಲಿ ಕೈಗೊಂಡ ಕಾರ್ಯಕ್ರಮಗಳಾವುವು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ)

ಕ್ರಮ ಸಂಖ್ಯೆ	ತಾಲ್ಲೂಕು	ಶೇಕಡಾ 80 ಮಂಡಲ ಪಂಚಾಯತ್ ಭಾಗ (ಹಿಂದಿನ ಬಾಕಿ ಸೇರಿ)	ಶೇಕಡಾ 20 ಜಿಲ್ಲಾ ಪರಿಷತ್ ಭಾಗ
1.	ಮಡಿಕೇರಿ	14.595	4.167
2.	ವೀರಾಜಪೇಟೆ	40.837	13.136
3.	ಸೋಮವಾರಪೇಟೆ	31.073	5.353

ತಾಲ್ಲೂಕುವಾರು, ಮಂಡಲವಾರು ವಿವರಗಳನ್ನು ತಖ್ತೆ :1 ಮತ್ತು 2 ರಲ್ಲಿ ಲಗತ್ತಿಸಿದೆ.

ಆ) (ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	ಶೇಕಡಾ 80 ಮಂಡಲ ಪಂಚಾಯತ್ ಭಾಗದಲ್ಲಿ ಆದ ವೆಚ್ಚ	ಶೇಕಡಾ 20 ಜಿಲ್ಲಾ ಪರಿಷತ್ತಿನಲ್ಲಿ ಆದ ವೆಚ್ಚ
1.	ಮಡಿಕೇರಿ	10.271	2.755
2.	ವೀರಾಜಪೇಟೆ	30.374	7.734
3.	ಸೋಮವಾರಪೇಟೆ	20.802 (31–1–92 ರವರೆಗೆ)	5.352 (31–1–92 ರವರೆಗೆ)

ವಿವರಗಳನ್ನು ತಖ್ತೆ :1 ಮತ್ತು 2 ರಲ್ಲಿ ಲಗತ್ತಿಸಿದೆ.

ಇ) ಜವಾಹರ್ ರೋಜ್ ಗಾರ್ ಯೋಜನೆಯಲ್ಲಿ ಕೈಗೊಂಡ ಕಾರ್ಯಕ್ರಮಗಳ ವಿವರಗಳನ್ನು ಲಗತ್ತಿಸಿದ ತಖ್ತೆ :1 ರ ಅಂಕಣ 8 ಮತ್ತು 2 ರ ಅಂಕಣ 7 ರಲ್ಲಿ ಒದಗಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಾಗಿ ಬಿಡುಗಡೆಯಾದ ಹಣ

1125. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1989–90, 1990–91, 91–92ನೇ ಸಾಲುಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಏತ ನೀರಾವರಿಗಾಗಿ ಬಿಡುಗಡೆ ಮಾಡಿದ ಹಣವೆಷ್ಟು?

ಆ) ಅಲ್ಲಿ ಎಷ್ಟು ಏತ ನೀರಾವರಿ ಯೋಜನೆ ಮಂಜೂರು ಮಾಡಬೇಕೆಂದು ಕೋರಲಾಗಿದ್ದಿತು; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸಬೇಕಾಗಿ ವಿನಂತಿ)?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) 1989–90ನೇ ಸಾಲಿನಲ್ಲಿ ರೂ.4.72 ಲಕ್ಷ
1990–91ನೇ ಸಾಲಿನಲ್ಲಿ ರೂ.7.73 ಲಕ್ಷ
1991–92ನೇ ಸಾಲಿನಲ್ಲಿ ರೂ.2.54 ಲಕ್ಷ

ಆ) ಈವರೆಗೆ 15 (ಹದಿನೈದು) ಏತ ನೀರಾವರಿ ಯೋಜನೆಗಳಿಗೆ ಮನವಿ ಬಂದಿದ್ದು ಯೋಜನೆಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ತಾಲ್ಲೂಕು	ಅಂದಾಜು ವೆಚ್ಚ ಲಕ್ಷ ರೂಗಳಲ್ಲಿ	ಅಚ್ಚುಕಟ್ಟು ಹೆಕ್ಟೇರ್ ಗಳಲ್ಲಿ
1.	ಕೊಟ್ಟಗೆರೆ	ವಿರಾಜಪೇಟೆ	19.00	81.20
2.	ಚಿಕ್ಕತ್ತೂರು ದೊಡ್ಡತ್ತೂರು	ಸೋಮವಾರ ಪೇಟೆ	38.00	167.10
3.	ವಾಲ್ನೂರು ತ್ಯಾಗತ್ತೂರು	ಸೋಮವಾರ ಪೇಟೆ	36.00	168.00
4.	ಬಸವನಹಳ್ಳಿ	ಸೋಮವಾರ ಪೇಟೆ	36.00	83.00
5.	ಕಡಿಯತ್ತೂರು	ಮಡಿಕೇರಿ	21.60	87.00
6.	ಹೆರೂರು	ಸೋಮವಾರ ಪೇಟೆ	25.95	40.50
7.	ಎಡವನಾಡು	ಸೋಮವಾರ ಪೇಟೆ	105.20	485.20
8.	ಬೇಗೂರು	ವಿರಾಜಪೇಟೆ	87.70	404.80
9.	ದೇವನೂರು	ವಿರಾಜಪೇಟೆ	ಯೋಜನೆಯ ಸರ್ವೆ ಕಾರ್ಯ ಕೈಗೊಳ್ಳಬೇಕಾಗಿದೆ.	
10.	ಅಡಿನಾಡೂರು	ಸೋಮವಾರ ಪೇಟೆ	- " -	
11.	ದೊಡ್ಡಭಂಡಾರ	- " -	- " -	
12.	ಆಲೂರು ಸಿದ್ದಾಪುರ	- " -	- " -	
13.	ಶ್ರೀ ರಂಗಾಲ	- " -	- " -	
14.	ಹೆಬ್ಬಾಲೆ	- " -	- " -	
15.	ಬಸಿರುಗುಪ್ಪೆ	- " -	- " -	

ತಖ್ತೆ : 1

ಕೊಡಗು ಜಿಲ್ಲೆಗೆ ನೀಡಿದ ಜವಾಹರ್ ರೋಜಗಾರ್ ಯೋಜನೆಯ ಶೇಕಡಾ 80 ಪಂಚಾಯತ್ ಭಾಗ.

ಕ್ರಮ ಸಂಖ್ಯೆ	ತಾಲ್ಲೂಕು	ಮಂಡಲ ಪಂಚಾಯ್ತಿ	1991-92ರಲ್ಲಿ ಬಿಡುಗಡೆ	ಹಿಂದಿನ ಬಾಕಿ	ಒಟ್ಟು	ವಿನಿಯೋಗಿಸಿದ ಹಣ	ಯೋಜನೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು.
1	2	3	4	5	6	7	8
1.	ಮಡಿಕೇರಿ	1. ಗಾಳಿಬೀಡು	67500	8724	76224	59057	1. ಮಡಿಕೇರಿ ತಾಲ್ಲೂಕು
		2. ಮಕ್ಕಂದೂರು	101745	15737	117482	75028	1. ರಸ್ತೆ ನಿರ್ಮಾಣ ಮತ್ತು ದುರಸ್ತಿ
		3. ಹಾಕತ್ತೂರು	61468	9728	71196	64888	2. ಕಾಲು ಸೇತುವೆ ನಿರ್ಮಾಣ
		4. ಮರಗೋಡು	82820	23052	105872	71897	3. ಕೆರೆ ನಿರ್ಮಾಣ ಮತ್ತು ಅಭಿವೃದ್ಧಿ
		5. ಕಾಂತೂರು	115002	32146	147148	107597	4. ಹರಿಜನ ಕಾಲೋನಿ ದೇವಸ್ಥಾನಗಳ ನಿರ್ಮಾಣ ಮತ್ತು ದುರಸ್ತಿ.
		6. ಸಂಪಾಜೆ	95821	18035	113856	89109	5. ಹರಿಜನ ಕಾಲೋನಿಗೆ ನೀರು ಸರಬರಾಜು.
		7. ವೆರಾಜೆ	95503	50211	145714	114998	6. ಹರಿಜನ ಗಿರಿಜನ ಮನೆ ನಿರ್ಮಾಣ.
		8. ಬೆಟ್ಟಗೇರಿ	81157	16182	97339	62928	7. ಮಂಡಲ ಪಂಚಾಯ್ತಿ ಕಟ್ಟಡಗಳು ಮಾರು ಕಟ್ಟೆ ನಿರ್ಮಾಣ ವಗೈರೆ.
		9. ಬೇಂಗೂರು	38786	1709	40495	27189	8. ಚರಂಡಿ ಕೆಲಸ ಮತ್ತು ದುರಸ್ತಿ
		10. ಭಾಗಮಂಡಲ	86996	11530	98526	4118	9. ಬಸ್ಸು ತಂಗುದಾಣಗಳ ನಿರ್ಮಾಣ
		11. ಕರಿಕೆ	92787	44490	137277	102993	10. ಅಂಗಡಿ ಮಳಿಗೆಗಳ ನಿರ್ಮಾಣ
		12. ನಾಪೋಕ್ಲು	56515	2960	59475	18219	11. ಮೋರಿಗಳ ನಿರ್ಮಾಣ
		13. ಬಲ್ಲಮಾವಟ್ಟಿ	48613	6939	55552	34111	
		14. ಕೋಣಂಜಗೇರಿ	94506	12221	106727	82765	
		15. ಕುಂಜಿಲ	76086	10692	86778	73204	
		ತಾಲ್ಲೂಕು ಜುಮ್ಲಾ	1195305	264256	1459561	1027191	

1	2	3	4	5	6	7	8
2.	ವೀರಾಜಪೇಟೆ	1. ಸಿದ್ದಾಪುರ	142408	21864	164272	87863	ವೀರಾಜಪೇಟೆ ತಾಲ್ಲೂಕು
		2. ಮಾಲ್ದಾರೆ	155057	54092	209149	175698	1. ರಸ್ತೆ ನಿರ್ಮಾಣ ಮತ್ತು ದುರಸ್ತಿ
		3. ಪಾಲಿಬೆಟ್ಟ	157306	49049	206355	119849	2. ಕಾಲು ಸೇತುವೆ ನಿರ್ಮಾಣ
		4. ಕಣ್ಣಂಗಾಲ	94668	47736	142404	119514	3.ಮೋರಿಗಳ ನಿರ್ಮಾಣ
		5. ಕದನೂರು	85773	13375	99148	79310	4. ಹರಿಜನ : ಗಿರಿಜನ ಮನೆಗಳ ನಿರ್ಮಾಣ
		6. ಚೆಂಬೆಬೆಳ್ಳೂರು	73351	40252	113603	81389	5.ಪೂಜಾ ಮಂದಿರಗಳ ನಿರ್ಮಾಣ
		7. ಕಾರ್ಮಾಡು	84405	11773	96178	79406	6. ಬಸ್ಸು ತಂಗುದಾಣ ನಿರ್ಮಾಣ
		8. ಅಮ್ಮತ್ತಿ	158705	23340	182045	143468	7. ಅಂಗಡಿ ಮಳಿಗೆಗಳ ನಿರ್ಮಾಣ
		9. ದೇವರಪುರ	198072	105600	303672	237509	8. ಮಾರುಕಟ್ಟೆ ನಿರ್ಮಾಣ
		10. ತಿತಿಮತಿ	219546	147235	366781	277802	9. ಕೆರೆಗಳ ನಿರ್ಮಾಣ ಮತ್ತು ದುರಸ್ತಿ
		11. ಬಾಳೆಲೆ	186634	7521	194155	145512	10. ನೀರಾವರಿ ಬಾವಿಗಳ ನಿರ್ಮಾಣ.
		12. ಕಿರುಗೂರು	105290	63439	168728	128629	
		13. ಹಾತೂರು	77401	43189	120590	103572	
		14. ಅರವತ್ತೋಕ್ಲು	137476	7097	144573	119301	
		15. ಬೆಟ್ಟಗಾಲ	102483	69584	172067	141802	
		16. ಬೇಟೋಳಿ	73071	9881	82952	67799	
		17. ಕದಂಗಮರೂರು	93550	64916	158466	124222	
		18. ಚಿರುನಾಣಿ	61306	7759	69065	58816	
		19. ಹುದಿಕೇರಿ	93318	12004	105322	42277	
		20. ಕಾನೂರು	128736	32688	161424	127332	
		21. ನಾಲ್ಕೇರಿ	201996	9329	210324	194624	
		22. ಶ್ರೀಮಂಗಲ	149069	19406	168475	116023	
		23. ಕುಟ್ಟ	121962	62367	184329	155480	
		24. ವಿರಾಜ ಪೇಟೆ	125563	22325	147888	117698	
		25. ಪೊನ್ನಂಪೇಟೆ	56124	7072	63196	53997	
		26. ಗೋಣಿಕೊಪ್ಪ	41344	5102	46446	35710	
		ತಾಲ್ಲೂಕು ಜುಮ್ಲಾ	3124614	959147	4083761	3037452	

1	2		3	4	5	6	7		8
3.	ಸೋಮವಾರ ಪೇಟೆ	1.	ಬೆಸೂರು	121091	54575	175666	150250		ಸೋಮವಾರಪೇಟೆ ತಾಲ್ಲೂಕು.
		2.	ನಿಡ್ತ	109659	35962	145621	76843	1.	ರಸ್ತೆ ನಿರ್ಮಾಣ ಮತ್ತು ದುರಸ್ತಿ
		3.	ಗೌಡಳ್ಳಿ	117483	45519	163002	131186	2.	ಬಸ್ ತಂಗುದಾಣ ನಿರ್ಮಾಣ.
		4.	ಅಬ್ಬೂರುಕಟ್ಟೆ	111793	51174	162967	109373	3.	ತೆರೆದ ಬಾವಿ ನಿರ್ಮಾಣ
		5.	ಶಾಂತಳ್ಳಿ	65954	9102	75056	53094	4.	ಸೇತು ನಿರ್ಮಾಣ.
		6.	ತೋಳೂರು ಶೆಟ್ಟಳ್ಳಿ	60548	27234	87762	45669	5.	ಶೌಚ ಗೃಹ ನಿರ್ಮಾಣ.
		7.	ಹಾನಗಲ್ಲು	100394	25779	126173	106386	6.	ತೋಡಿಗೆ ಕಟ್ಟೆ ನಿರ್ಮಾಣ
		8.	ಐಗೂರು	84407	32298	116705	92758	7.	ಹರಿಜನ:ಗಿರಿಜನರಿಗೆ ಮನೆಗಳ ನಿರ್ಮಾಣ
		9.	ಕಿರ್ಗಂದೂರು	68842	42706	111548	57927	8.	ಕೆರೆ ಹೂಳು ದುರಸ್ತಿ
		10.	ಹೆಬ್ಬಾಲೆ	135938	32732	168670	84086	9.	ಮೋರಿಗಳ ನಿರ್ಮಾಣ
		11.	ಕೊಡಿಗೆ	113467	15245	128712	106330	10.	ಚರಂಡಿ ನಿರ್ಮಾಣ
		12.	ಗುಡ್ಡೆಹೊಸೂರು	139625	84588	224213	119411	11.	ಅಂಗಡಿ ಮಳಿಗೆ ನಿರ್ಮಾಣ
		13.	ಬಾಳ್ಳೂರು ತ್ಯಾಗತ್ತೂರು	107253	39581	116834	74211		
		14.	ಕಂಬಿಬಾಣೆ	83285	24708	107993	35144		
		15.	ಕೊಡಗರಹಳ್ಳಿ	111851	57231	169082	121684		
		16.	ಮಾದಾಪುರ	89121	28027	117148	95121		
		17.	ಗರ್ವಾಲೆ	26197	8031	34228	18240		
		18.	ಕದಕಲ್	95731	51252	146983	88659		
		19.	ಶೆಟ್ಟಳ್ಳಿ	85185	25384	110569	108762		
		20.	ಶನಿವಾರಸಂತೆ	102382	46146	148528	107012		
		21.	ಸುಂಟಿಕೊಪ್ಪ	98371	20843	119214	69558		
		22.	ಕೊಡ್ಲಿಪೇಟೆ	110561	22259	132820	110125		
		23.	ಸೋಮವಾರ ಪೇಟೆ	63228	21977	85205	57084		
		24.	ಕುಶಾಲನಗರ	90569	25177	115746	89052		
			ತಾಲ್ಲೂಕು ಮಟ್ಟ	2282635	814389	3107324	2080269		

ತಖ್ತೆ : 2

ಹೊಸಗು ಬಿಳ್ಳೆಗೆ ನೀಡಿದ ಜವಾಹರ್ ರೋಜ್ ಗಾರ್ ಯೋಜನೆಯ 20 ಕೆಳಹಾ ಜಿಲ್ಲಾ ಪರಿಷತ್ ಭಾಗ (ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	1991-92ರ ಬಿಡುಗಡೆ	ಹಿಂದಿನ ಬಾಕಿ	ಒಟ್ಟು	ಖರ್ಚಾದ ಹಣ (31.1.92 ರವರೆಗೆ)	ಜವಾಹರ್ ರೋಜ್ ಗಾರ್ ಯೋಜನೆಯಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳು
1.	ಮುಡಿಕೇರಿ	3.627	0.540	4.167	2.755	1. ರಸ್ತೆಗಳು 2. ಶಾಲಾ ಕಟ್ಟಡಗಳು 3. ಆರೋಗ್ಯ ಕೇಂದ್ರಗಳು ದುರಸ್ತಿ 4. 4 ಹೆಕ್ಟೇರು ನೆಡು ತೋಪು ಬೆಳೆಸಿದ್ದು.
2.	ವೀರಾಜಪೇಟೆ	7.892	5.244	13.136	7.734	1. ಅಣೆಕಟ್ಟು ಮತ್ತು ಪಿಕಪ್ ರಿಪೇರಿ 2. ರಸ್ತೆಗಳು 3.ಬಸ್ ಶೆಲ್ಟರ್ 4. ತೆರೆದ ಬಾವಿಗಳು 5. 5 ಕಿ.ಮೀ. ಅನೆ ಕಂದಕ ತೋಡುವಿಕೆ.
3.	ಸೋಮವಾರಪೇಟೆ	5.016	0.336	5.352	5.352	1. ಬಸ್ ಶೆಲ್ಟರ್ 2. ರಸ್ತೆಗಳು 3. ತೆರೆದ ಬಾವಿಗಳು 4. ಶಾಲಾ ಕಟ್ಟಡಗಳು 5. 4 ಹೆಕ್ಟೇರ್ ನೆಡು ತೋಪು ಬೆಳೆಸಿದ್ದು 6. 2 ಕಿ.ಮೀ. ಅನೆ ಕಂದಕ ತೋಡುವಿಕೆ.

ಬೆದ್ಮತ ಕಟ್ಟೆ ಏತ ನೀರಾವರಿ ಕಾಮಗಾರಿ.

864. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಾಪುರ ತಾಲ್ಲೂಕಿನ ಬೆದ್ಮತಕಟುಮಟೆ ಏತ ನೀರಾವರಿ ಕಾಮಗಾರಿಗೆ ಮಂಜೂರಾತಿ ದೊರೆತಿದ್ದರೂ ಈ ತನಕ ಟೆಂಡರು ಕರೆಯದಿರಲು ಕಾರಣವೇನು;

ಆ) ಎಂದು ಈ ಟೆಂಡರನ್ನು ಕರೆಯಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಕುಂದಾಪುರ ತಾಲ್ಲೂಕಿನಲ್ಲಿ ಬೆದ್ಮತಕಟ್ಟೆ ಏತ ನೀರಾವರಿ ಕಾಮಗಾರಿ ಯಾವುದೂ ಇಲ್ಲ. ಆದರೆ ಬಿಡ್ಕಲ್‌ಕಟ್ಟೆ ಏತ ನೀರಾವರಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈಗಿನ ನಬಾರ್ಡ್ ನಿಯಮಾವಳಿಗಳ ಪ್ರಕಾರ ಸದರಿ ಯೋಜನೆಯ ಅಂದಾಜನ್ನು ಮಾರ್ಪಡಿಸಲಾಗುತ್ತಿದೆ. ಯೋಜನೆ ಅಂದಾಜು ತಯಾರಾದ ನಂತರ ನಬಾರ್ಡ್‌ಗೆ ಆರ್ಥಿಕ ನೆರವಿಗಾಗಿ ಸಲ್ಲಿಸಲಾಗುವುದು. ಆರ್ಥಿಕ ನೆರವು ದೊರೆತ ನಂತರ ಟೆಂಡರ್ ಕರೆಯಲಾಗುವುದು.

ಆ) ನಬಾರ್ಡ್‌ನಿಂದ ಆರ್ಥಿಕ ನೆರವು ದೊರೆತ ನಂತರ ಟೆಂಡರ್ ಕರೆಯಲಾಗುವುದು.

ಕುಂದಗೋಳ ತಾಲ್ಲೂಕ್ ಪೂರ್ವಭಾಗದಲ್ಲಿರುವ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ

105. ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಗೋಳ ತಾಲ್ಲೂಕು ಪೂರ್ವ ಭಾಗದಲ್ಲಿ ಇರುವ ಹಳ್ಳಿಗಳಾದ ಯರಿಗುಪ್ಪ ಯರಿನಾರಾಯಣಪುರ, ಹಿರೇನರ್ತಿ, ಯರಿಭೂದಿಹಾಳ ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಇ) ಶಾಶ್ವತವಾಗಿ ಕುಡಿಯುವ ನೀರು ಸಿಗುವ ವ್ಯವಸ್ಥೆ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) –

ಅ) ಬಂದಿದೆ

ಆ) ಕ್ರಮ ತೆಗೆದುಕೊಂಡ ವಿವರಗಳು ಈ ಕೆಳಕಂಡಂತಿವೆ :

1. ಸಣ್ಣ ನೀರು ಸರಬರಾಜು ಮಾಡಲು 1991–92ನೇ ಸಾಲಿನ ಅನುಬಂಧ 'ಇ' ಯಲ್ಲಿ ಈ ಗ್ರಾಮಗಳನ್ನು ಒಪ್ಪಲಾಗಿದ್ದು ಸೂಕ್ತ ಅನುದಾನವನ್ನು ನೀಡಲಾಗಿದೆ.

(ರೂಪಾಯಿ ಲಕ್ಷ ಗಳಲ್ಲಿ)

ಕ್ರಮ ಸಂಖ್ಯೆ	ಹೆಸರು	ಅಂದಾಜು ಮೊತ್ತ	ಅನುದಾನ
1.	ಯರಿನಾರಾಯಣಪುರ ಮತ್ತು ಇತರ ಗ್ರಾಮಗಳು	7.63	2.54
2.	ಭರದ್ವಾಜ	3.07	1.07
3.	ಕಡಪಟ್ಟಿ ಮತ್ತು ಇತರ ಗ್ರಾಮಗಳು	23.49	7.83

2. ಯರಿಗುಂಡಿಪಾಳ್ಯ ಮತ್ತು ಇತರ ಗ್ರಾಮಗಳ ಸಂಯುಕ್ತ ನೀರು ಸರಬರಾಜು ಯೋಜನೆ :

ಈ ಯೋಜನೆಯ ಜಲಮೂಲವಾದ ಕೊಳವೆ ಬಾವಿಯು ಕುಸಿದಿದ್ದ ಕಾರಣ ಹೊಸ ಜಲ ಮೂಲವನ್ನು ನಿರ್ಧರಿಸಲು ಕ್ರಮ ಕೈಗೊಳ್ಳಲಾಗಿದೆ.

3. ಹಿರೇನರ್ತಿಗ್ರಾಮದ ನಳ ನೀರು ಸರಬರಾಜು ಯೋಜನೆ :

ಈ ಯೋಜನೆಯ ಜನಮೂಲವು ನೀರಿನ ಪ್ರಮಾಣ ಇಳುವರಿಯಾಗಿರುವುದರಿಂದ ಹೊಸ ಜಲಮೂಲವನ್ನು ನಿರ್ಧರಿಸಲು ಕ್ರಮಕೈಗೊಳ್ಳಲಾಗಿದೆ.

ಇ) ಕುಂದಗೋಳ ತಾಲ್ಲೂಕಿನಲ್ಲಿ ಬರುವ ಗ್ರಾಮಗಳು ಅತೀ ಹೆಚ್ಚಿನ ಫ್ಲೋರೈಡ್ ಜೋನ್ ನಲ್ಲಿರುವುದರಿಂದ ಶುದ್ಧವಾದ ನೀರಿನ ಜಲಮೂಲವನ್ನು ನಿಗಧಿಪಡಿಸಿಕೊಡಲು ಕೇಂದ್ರ ಅಂತರ್ಜಲ ಸಂಸ್ಥೆಗೆ ಕೋರಲಾಗಿದೆ. ಶುದ್ಧವಾದ ನೀರಿನ ಜಲಮೂಲವನ್ನು ಸ್ಥಾಪಿಸಿದ ನಂತರ ವಿವಿಧ ಯೋಜನೆಯ ಅಡಿಯಲ್ಲಿ ಶಾಶ್ವತ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದು. ಮತ್ತು ಕುಂದಗೋಳ ತಾಲ್ಲೂಕಿನ ನೆಳಗುದ್ದ, ಬುಂಕೂರು, ಜಗಳೂರು, ಹೊಸಕಟ್ಟಿ, ಕಲ್ಲಲ್ಲಿ, ಯರಿಗುಪ್ಪ, ಯರಿನಾರಾಯಣಪುರ ಮುಂತಾದ ಗ್ರಾಮಗಳಿಗೆ ಶಾಶ್ವತ ನೀರು ಸರಬರಾಜು ಯೋಜನೆಗೆ ನೆದರ್‌ಲ್ಯಾಂಡ್ ಸಹಾಯದಿಂದ ತೆಗೆದುಕೊಳ್ಳುವ ಯೋಜನೆಗಳಲ್ಲಿ ಪ್ರಸ್ತಾಪಿಸಲು ಪ್ರಯತ್ನಿಸಲಾಗುತ್ತಿದೆ. ಈ ಗ್ರಾಮಗಳಿಗೆ ಮಲಪ್ರಭಾ ಬಲದಂಡೆ ಕಾಲುವೆಯಿಂದ ನೀರು ಪಡೆದು ಸಂಯುಕ್ತ ನೀರು ಸರಬರಾಜು ಯೋಜನೆಯ ಬಗ್ಗೆ ಸಹಾ ಪರಿಶೀಲಿಸಲಾಗುತ್ತಿದೆ.

ಸೂಳೆಕೋಟೆ ಸೇತುವೆ ಕಟ್ಟುವ ವಿಚಾರ

76. ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟೆ ಸೇತುವೆಯ ಅಂದಾಜು ವೆಚ್ಚವೆಷ್ಟು ; ಹಾಗೂ ಇದುವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ ;

ಆ) ಅದರ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ? ಹಾಗೂ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಈ ಕಾಮಗಾರಿಯ ಅಂದಾಜು ವೆಚ್ಚ 42.00 ಲಕ್ಷ ರೂ.ಗಳಾಗಿದ್ದು ಇದುವರೆವಿಗೂ 20.57 ಲಕ್ಷ ರೂ. ಗಳು ಖರ್ಚಾಗಿರುತ್ತದೆ.

ಆ) ಈ ಸೇತುವೆಯ ಅಬಟ್‌ಮೆಂಟ್ ಕೆಲಸ 2 ಸ್ಪಾನ್‌ಗಳಿಗೆ ಡೆಕ್‌ಸ್ಲಾಬ್ ಹಾಕಿದ್ದು 5 ಕಂಬಗಳನ್ನು ಕ್ಯಾಸ್ಟ್ ಮಾಡಲಾಗಿದೆ.

ಈಗ ಉಳಿಕೆ ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮದವರಿಗೆ ವಹಿಸಿಕೊಡಲು ಪರಿಶೀಲಿಸಲಾಗುತ್ತಿದೆ, ಮತ್ತು ಇದನ್ನು ನಿಗಮದವರಿಗೆ ವಹಿಸಿಕೊಟ್ಟು ಆದಷ್ಟು ಬೇಗ ಈ ಕಾಮಗಾರಿಯನ್ನು ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿ

1113. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ;

ಆ) ಈ ತಾಣಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಇದುವರೆವಿಗೂ ಆ ಪ್ರವಾಸಿ ತಾಣಗಳು ಅಭಿವೃದ್ಧಿಗಾಗಿ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :–

ಅ)

1)	ಉಳವಿ	14)	ಕುಮುಟ
2)	ಕಾರವಾರ	15)	ಕುರ್ಮಗೋಡ
3)	ಮಾಗೋಡು ಜಲಪಾತ	16)	ಅಂಜದೇವ ದ್ವೀಪ
4)	ಧಾಂಡೇಲಿ	17)	ಜಗ್ಗಾರ್ ವ್ಯಾಲಿ
5)	ಸೋಂಡ	18)	ಕ್ಯಾಸಲ್ ರಾಕ್
6)	ಹಳಿಯಾಲ	19)	ಶಿರ್ಸಿ
7)	ಯಾಣ	20)	ಧಾರೇಶ್ವರ
8)	ಗೋಕರ್ಣ	21)	ಮುರುಡೇಶ್ವರ
9)	ಉಂಚೋಳಿ ಜಲಪಾತ	22)	ಬಟ್ಕಲ್
10)	ಲಾಲ್‌ಗುಳಿ ಜಲಪಾತ	23)	ಸಿದ್ದಾಪುರ
11)	ಬನವಾಸಿ	24)	ಯಲ್ಲಾಪುರ
12)	ಸೂಪಾ (ರಾಮನಗರ)	25)	ದೇವಘಡ್
13)	ಅಂಕೋಲ	26)	ಇಡುಗುಂಜಿ

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಗುರುತಿಸಿರುವ ಪ್ರೇಕ್ಷಣೆಯ ಸ್ಥಳಗಳ ಪೈಕಿ ಈ ಕೆಳಕಂಡ ತಾಣಗಳಲ್ಲಿ ಪ್ರವಾಸಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

1) ಸೂಪ ಬಳಿ ಇರುವ ರಾಮನಗರದಲ್ಲಿ ಹೆದ್ದಾರಿ ಸೌಲಭ್ಯ ಪೂರ್ಣಗೊಂಡಿದೆ.
2) ಮುರುಡೇಶ್ವರದ ಬಳಿ ಇರುವ ಮಾವಳ್ಳಿ ಗ್ರಾಮದಲ್ಲಿ ಇಲಾಖೆ ವಶಪಡಿಸಿಕೊಂಡಿರುವ ಜಮೀನಿಗೆ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ.
3) ಗೋಕರ್ಣದಲ್ಲಿರುವ ಪ್ರವಾಸಿ ಗೃಹದ ಗ್ಯಾರೇಜನ್ನು ಡಾರ್ಮಿಟರಿ ಆಗಿ ಪರಿವರ್ತಿಸಲಾಗಿದೆ.
4) ಶಿರ್ಸಿ ಕಡೆಯಿಂದ ಯಾಣ ಕ್ಷೇತ್ರಕ್ಕೆ ಹೋಗುವ ಭಾಗಶಃ ಕೂಡು ರಸ್ತೆ ನಿರ್ಮಾಣ

ಈ ಕೆಳಕಂಡ ತಾಣಗಳ ಅಭಿವೃದ್ಧಿಗಾಗಿ ಇಷ್ಟರಲ್ಲಿ ಕ್ರಮ ಕೈಗೊಳ್ಳಲಾಗುವುದು.

ಅ) ಅನ್ಸೋಡ್‌ನಲ್ಲಿ ಹೆದ್ದಾರಿ ಸೌಲಭ್ಯ ನಿರ್ಮಾಣ.
ಆ) ಬನವಾಸಿಯಲ್ಲಿ ಪ್ರವಾಸಿ ಸೌಲಭ್ಯ ಒದಗಿಸುವುದು.
ಇ) ಕಾರವಾರದ ಬಳಿ ಕೋಡಿಬಾಗ್ ಸರ್ವೆ ನಂ.292 ನಲ್ಲಿ ವಶಪಡಿಸಿಕೊಂಡಿರುವ 0.5 ಎಕರೆ ಜಮೀನಿಗೆ ತಂತಿ ಬೇಲಿ ನಿರ್ಮಾಣ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೇಲೆ ತಿಳಿಸಿದ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಇದುವರೆಗೆ ಒಟ್ಟು 12.90 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗಿದೆ.

ಹಳಿಯಾಳದಲ್ಲಿ ಕುಸ್ತಿ ಆಖಾಡವನ್ನು ನಿರ್ಮಿಸುವುದು.

1112. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಕುಸ್ತಿ ಆಖಾಡವನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೆ;

ಆ) ಇದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು ಹಾಗೂ ಅದಕ್ಕೆ ಮಂಜೂರಾತಿ ನೀಡಲಾಗಿದೆಯೇ?

ಇ) ಕುಸ್ತಿ ಆಖಾಡದ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಪ್ರಸ್ತಾವನೆ ಇದೆ

ಆ) ಅಂದಾಜು ವೆಚ್ಚ ರೂ.18,72,500–00 ಗಳು ಕೇಂದ್ರ ಸರ್ಕಾರದ ಧನ ಸಹಾಯ ದೊರೆತ ನಂತರ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು.

ಇ) ಕುಸ್ತಿ ಆಖಾಡದ ನಿರ್ಮಾಣ ಕಾರ್ಯವನ್ನು ಕೇಂದ್ರ ಸರ್ಕಾರದ ಧನ ಸಹಾಯ ದೊರೆತ ನಂತರ ಮತ್ತು ಉಳಿದ ಹಣವನ್ನು ಸಾರ್ವಜನಿಕ ಮತಿಕ್ಷೆಯ ಮೂಲಕ ಸಂಗ್ರಹಿಸಿದ ನಂತರ ಪ್ರಾರಂಭಿಸಲಾಗುವುದು.

ತ್ಯಾಮಗೊಂಡ್ಲು ಹತ್ತಿರ ಪೋರಿ ನಿರ್ಮಾಣ

981. ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಕಳಲುಘಟ್ಟ ಹತ್ತಿರ ಪೋರಿ ಶಿಥಿಲವಾಗಿದ್ದು ವಾಹನಗಳು ಮತ್ತು ಜನರು ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಬಂದಿದ್ದಲ್ಲಿ ಸೇತುವೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ.ಪಿಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಬಂದಿದೆ.

ಆ) ಈ ಸೇತುವೆ ನಿರ್ಮಾಣಕ್ಕಾಗಿ 14.00 ಲಕ್ಷ ರೂ.ಗಳನ್ನು 1992–93 ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಪರಿಶೀಲಿಸಲಾಗುತ್ತಿದೆ.

ಕೊರಟಗೆರೆ ತಾಲ್ಲೂಕು ಹೂಲೀಕುಂಟೆ ಬಳಿ ನದಿಗೆ ಅಡ್ಡವಾಗಿ ಸೇತುವೆ

980. ಶ್ರೀ ಕೆ.ಸಿ. ವೀರಭದ್ರಯ್ಯ (ಕೊರಟಗೆರೆ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕೊರಟಗೆರೆಯಿಂದ ಗೌರಿಬಿದನೂರಿಗೆ ಹೋಗುವ ರಸ್ತೆಯಲ್ಲಿ ಸುವರ್ಣಮುಖಿ ನದಿಗೆ ಕಟ್ಟಿರುವ ಸೇತುವೆ ನದಿಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗಿದ್ದು ಸಾರ್ವಜನಿಕರು ಮತ್ತು ವಾಹನಕ್ಕೆ ಓಡಾಡಲು ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಅ) ಹಾಗಿದ್ದಲ್ಲಿ, ಈ ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ತೆಗೆದುಕೊಳ್ಳಲು ಸರ್ಕಾರವು ಕೈಗೊಳ್ಳು ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಬಂದಿದೆ

ಆ) ಸೇತುವೆ ದುರಸ್ತಿಗೆ ಅಂದಾಜು ಪಟ್ಟಿಯು ಮಂಜೂರಾಗಿದ್ದು ಈಗಾಗಲೇ ಪೂರ್ವಭಾವಿ ಕೆಲಸಗಳನ್ನು ಕೈಗೊಂಡಿದ್ದು, ದುರಸ್ತಿ ಕಾರ್ಯವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

ತೀತದ ಬಳಿ ನದಿಗೆ ಅಡ್ಡವಾಗಿ ಸೇತುವೆ ನಿರ್ಮಾಣ

978. ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) :– ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕೊರಟಗೆರೆ ತಾಲ್ಲೂಕು ತೀತಮಾವತ್ತೂರು ರಸ್ತೆಯಲ್ಲಿ (ತೀತದ ಬಳಿ) ನದಿಯ ಪ್ರವಾಹ ಜಾಸ್ತಿಯಾಗಿ ಕ್ರಾಸ್‌ವೇ ಕೊಚ್ಚಿ ಹೋಗಿ ವಾಹನಗಳು ಮತ್ತು ಜನಗಳು ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ನದಿಗೆ ಅಡ್ಡವಾಗಿ ಸೇತುವೆಯನ್ನು ನಿರ್ಮಾಣ ಮಾಡಲು ಸರಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಜಿ. ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) –

ಅ) ಬಂದಿದೆ

ಆ) ಸದ್ಯಕ್ಕೆ ರಿಪೇರಿ ಮಾಡಿ ವಾಹನ ಸಂಚಾರಕ್ಕೆ ಅನುಕೂಲ ಮಾಡಲಾಗಿದೆ. ಹಾಗೂ ಈ ಸ್ಥಳದಲ್ಲಿ ಸೇತುವೆ ನಿರ್ಮಿಸಲು ಮಧ್ಯಮ ನೀರಾವರಿ ಇಲಾಖೆಯವರು ಕ್ರಮ ತೆಗೆದುಕೊಳ್ಳುವುದು.

ರಾಜ್ಯ ನಿರ್ಮಾಣ ಯೋಜನೆಯಡಿಯಲ್ಲಿ ಕಾಲುವೆಗಳ ಅಭಿವೃದ್ಧಿ

1012. ಶ್ರೀ ಬಿ. ಹಂಪನಗೌಡ (ಸಿಂಧನೂರು) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯ ನಿರ್ಮಾಣ ಯೋಜನೆಯ ಅಡಿಯಲ್ಲಿ ಎಡದಂಡೆ ಕಾಲುವೆ 40 ಮತ್ತು 38ನೇ ಡಿಸ್ಟ್ರಿಬ್ಯೂಟರಿಗಳನ್ನು ತೆಗೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಕಾರ್ಯಾರಂಭ ಮಾಡಲು ಬೇಕಾಗಿರುವ ಸಮಯವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) –

ಅ) ಯಾವ ಎಡದಂಡೆ ಕಾಲುವೆ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ

1009. ಶ್ರೀ ಬಿ. ಹಂಪನ ಗೌಡ (ಸಿಂಧನೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯು ದೊರೆತಿರುವ ಜಿಲ್ಲೆಗಳೆಷ್ಟು?
(ತಾಲ್ಲುಕುವಾರು ಹೆಸರು ತಿಳಿಸುವುದು)

ಆ) ಹಾಗಿದ್ದಲ್ಲಿ ರಾಯಚೂರು ಜಿಲ್ಲೆಯ ಎಷ್ಟು ತಾಲ್ಲೂಕುಗಳಿಗೆ ಮಂಜೂರಾತಿ ದೊರಕಿದೆ?
(ಯಾವುವು ತಿಳಿಸುವುದು)

ಇ) ಈ ಯೋಜನೆಯ ಕಾಮಗಾರಿಗಳು ಯಾವ ಹಂತದಲ್ಲಿವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಗುಲ್ಬರ್ಗ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಸೇರಿಕೊಂಡಿವೆ.

ಆ) ಎಲ್ಲಾ ತಾಲ್ಲೂಕುಗಳು ಸೇರಿವೆ.

ಇ) ಭಾರತ ಸರ್ಕಾರದಿಂದ ಅನುಮೋದಿಸಿರುವ 215 ಹಳ್ಳಿಗಳ ಪೈಕಿ 125 ಹಳ್ಳಿಗಳನ್ನು ಮಿನಿ ಮಿಷನ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಇದರ ಅಂದಾಜು ವೆಚ್ಚ ರೂ. 400.00 ಲಕ್ಷಗಳಾಗಿರುತ್ತದೆ. ಜನವರಿ 92ರ ಅಂತ್ಯದವರೆಗೆ ಒಟ್ಟು 89 ಹಳ್ಳಿಗಳಿಗೆ ನೀರು ಪೂರೈಕೆ ಆಗಿದೆ. ಮಿಕ್ಕ ಕಾಮಗಾರಿಗಳು ವಿವಿಧ ಹಂತದಲ್ಲಿವೆ.

ತುಂಗಭದ್ರಾ ಜಲಾಶಯದಿಂದ ಎಡದಂಡೆ ನಾಲೆಗೆ ಬಿಡುವ ನೀರಿನ ಪ್ರಮಾಣ

1010. ಶ್ರೀ ಬಿ. ಹಂಪನಗೌಡ (ಸಿಂಧನೂರು) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ತುಂಗಭದ್ರಾ ಜಲಾಶಯದಿಂದ ಪ್ರತಿ ನಿಮಿಷಕ್ಕೆ ಎಡದಂಡೆ ನಾಲೆಗೆ ನೀಡುವ ಪ್ರಮಾಣವೆಷ್ಟು?
2) ತುಂಗಭದ್ರಾ ಜಲಾಶಯದಲ್ಲಿರತಕ್ಕ ನೀರಿನ ಸಂಗ್ರಹಣೆ ಎಷ್ಟು?
3) ಈ ನೀರಿನಲ್ಲಿ ಎಡದಂಡೆ ನಾಲೆಗೆ ದೊರಕುವ ಪ್ರಮಾಣವೆಷ್ಟು?
4) ಎಡದಂಡೆ ನಾಲೆಯಲ್ಲಿ ನೀರಿನ ಪೂರ್ಣ ಪ್ರಮಾಣವನ್ನು ಬಳಸಲಾಗಿದೆಯೇ?
5) ಈ ವರ್ಷದಲ್ಲಿ ಎಡದಂಡೆ ನಾಲೆಯನ್ನು ಸಂಪೂರ್ಣ ದುರಸ್ತಿ ಮಾಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) –

1) ಸಾಮಾನ್ಯವಾಗಿ 3500 ಕ್ಯೂಸೆಕ್ಸ್ ನೀರನ್ನು ಬಿಡಲಾಗುತ್ತಿದೆ. ಈ ನೀರಿನ ಪ್ರಮಾಣವು ಬೆಳೆಗಳ ಬೇಡಿಕೆಗೆ ಅನುಸಾರವಾಗಿರುತ್ತದೆ.
2) ಜಲಾಶಯದಲ್ಲಿ ಉಪಯುಕ್ತವಾದ ನೀರಿನ ಪ್ರಮಾಣವು 116.84 ಟಿ.ಎಂ.ಸಿ.
3) ತುಂಗಭದ್ರಾ ಎಡದಂಡೆ ಕಾಲುವೆ ಹಾಗೂ ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆಗಳಿಗೆ 1991–92ನೇ ಸಾಲಿನಲ್ಲಿ ಸೇರಿದಂತೆ ಒಟ್ಟು ನೀರಿನ ಪಾಲು 76.746 ಟಿ.ಎಂ.ಸಿ.ಯಷ್ಟು ಎಂದು ನಿಗದಿಪಡಿಸಲಾಗಿದೆ.
4) ತುಂಗಭದ್ರಾ ಎಡದಂಡೆ ಹಾಗೂ ಎಡದಂಡೆ ಮೇಲ್ಮಟ್ಟದ ಕಾಲುವೆಯಲ್ಲಿ ಫೆಬ್ರವರಿ ತಿಂಗಳು ಅಂತ್ಯದವರೆಗೆ 63.293 ಟಿ.ಎಂ.ಸಿ. ಯಷ್ಟು ನೀರನ್ನು ಬಳಸಲಾಗಿದೆ.
5) ಲಭ್ಯವಾಗುವ ಕಾಲಾವಕಾಶ ಹಾಗೂ ಅನುದಾನವನ್ನನುಸರಿಸಿ ಸಾಧ್ಯವಾದಷ್ಟು ಮಾಡಲಾಗುವುದು.

ಕಾಪು ಸಮೀಪದ ಲೈಟ್ ಹೌಸ್ ಬೀಟಿನ ಅಭಿವೃದ್ಧಿ

969. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಪ್ರಕೃತಿದತ್ತವಾದ ನೈಸರ್ಗಿಕ ಸೌಂದರ್ಯದಿಂದ ಕೂಡಿದ ಕಾಪು ಸಮೀಪದ ಲೈಟ್ ಹೌಸ್ ಬೀಟನ್ನು (ಸಮುದ್ರತೀರ) ಅಭಿವೃದ್ಧಿ ಪಡಿಸುವ ಯೋಜನೆಯಯ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು;

ಆ) ಜಿಲ್ಲೆಯಲ್ಲಿ ಯಾವ ಯಾವ ಸಮುದ್ರ ತೀರದ ಬೀಟನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಸರ್ಕಾರವು ಕೈಗೊಂಡಿದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ಕಾಪುವನ್ನು ಸರ್ಕಾರವು ಈಗಾಗಲೇ ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿದೆ. ಈ ಸ್ಥಳವನ್ನು ಅಭಿವೃದ್ಧಿಪಡಿಸುವ ಬಗ್ಗೆ ಸದ್ಯಕ್ಕೆ ಯಾವ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ.

ಆ) ಮರವಂತೆ ಕಡಲತೀರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕೇಂದ್ರದ ನೆರವಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಯೋಜನೆ ಕೇಂದ್ರದ ನೆರವಿನ 1991–92ರ ಆದ್ಯತೆ ಪಟ್ಟಿಯಲ್ಲಿದೆ.

ಶಿವ್ ಧರ್ಮೆಟ್ಟು ಬಳಿ ಸೇತುವೆಯ ನಿರ್ಮಾಣ

964. ಶ್ರೀ ವಸಂತ ವಿ. ಸಾಲಿಯಾನ (ಕಾಪು) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಕಾಪು ಕ್ಷೇತ್ರದ ಶಿವ್ ಧರ್ಮೆಟ್ಟು ಬಳಿ ಹೊಳೆಗೆ ನಿರ್ಮಿಸಲುದ್ದೇಶಿಸಿದ ಸೇತುವೆಯು ಎಂದು ಮಂಜೂರಾಗಿದೆ;
2) ಕಾಮಗಾರಿಯು ಯಾವ ಹಂತದಲ್ಲಿದೆ ;
3) ಅದಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ಮತ್ತು ಅದು ಸಂಪೂರ್ಣಗೊಳ್ಳಲು ಬೇಕಾಗಿರುವ ಕಾಲಾವಕಾಶವೆಷ್ಟು?

ಶ್ರೀ ಜೆ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು) –

1) ಅಂದಾಜು ಪಟ್ಟಿ ಮಂಜೂರಾಗಿರುವುದಿಲ್ಲ.
2) ಉದ್ಭವಿಸುವುದಿಲ್ಲ
3) ಉದ್ಭವಿಸುವುದಿಲ್ಲ

ಜಕ್ಕೂರು ವಿಮಾನ ಹಾರಾಟ ತರಬೇತಿಯ ಬಗ್ಗೆ

1277. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಯುವಜನ ಸೇವಾ ಕ್ರೀಡಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಜಕ್ಕೂರಿನ ಫ್ಲೈಯಿಂಗ್ ಶಾಲೆಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ಹಣವೆಷ್ಟು ; (ವಾರ್ಷಿಕ ವಿವರ ನೀಡುವುದು) ;

ಆ) ಇಲ್ಲಿಯ ತರಬೇತಿಯ ವಿಮಾನಗಳು ಹಾಗೂ ತರಬೇತಿದಾರರ ಸಂಖ್ಯೆ ಎಷ್ಟು ;

ಇ) ಹಾರಾಟ ತರಬೇತಿಯನ್ನು ಎಷ್ಟು ಗಂಟೆಗಳ ಕಾಲ ನೀಡಲಾಗುತ್ತಿದೆ ಹಾಗೂ ಈ ತರಬೇತಿಯ ಅನುಕೂಲ ಪಡೆಯುತ್ತಿರುವ ಜನರೆಷ್ಟು (ವರ್ಷವಾರು ವಿವರ ನೀಡುವುದು);

ಈ) ಹೆಚ್ಚುವರಿ ತರಬೇತಿಗಾಗಿ ಡಿ.ಜಿ.ಸಿ.ಎ. ಅನುಮತಿಯನ್ನು ರಾಜ್ಯ ಸರ್ಕಾರ ಕೋರಿದೆಯೇ ;

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ, ಸಾಂಸ್ಕೃತಿಕ ಸಚಿವರು)

ಅ)

(ರೂ. ಲಕ್ಷಗಳಲ್ಲಿ)

	ಖರ್ಚು	ಆದಾಯ
1987 – 88	19.59	7.44
1988 – 89	24.33	9.44
1989 – 90	23.63	8.86
1990 – 91	22.52	13.72
1991 – 92 (ಫೆಬ್ರುವರಿ 1992 ರವರೆಗೆ)	28.83	12.73

ಆ) ಆರು ವಿಮಾನಗಳು
ಮೂರು ತರಬೇತಿದಾರರು
(ಒಬ್ಬರು ಮುಖ್ಯ ವೈಮಾನಿಕ ತರಬೇತಿದಾರರು)
(ಎರಡು ಸಹಾಯಕ ವೈಮಾನಿಕ ತರಬೇತಿದಾರರು)

ಇ) ಖಾಸಗಿ ವಿಮಾನ ಚಾಲಕ ಲೈಸೆನ್ಸ್ 60 ಗಂಟೆಗಳು ನಿಗಧಿತ
ಪಡೆಯಲು ವೈಮಾನಿಕ ತರಬೇತಿ
ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆಯಲು ಅಗತ್ಯವಾದ ತರಬೇತಿಗೆ 250 ಗಂಟೆಗಳು ಕಡ್ಡಾಯ ಇದರ ಜೊತೆಗೆ ತಾಂತ್ರಿಕ ಪರೀಕ್ಷೆಗಳನ್ನು ಸಹ ಪಾಸು ಮಾಡಬೇಕು.

ತರಬೇತಿಯ ಅನುಕೂಲ ಪಡೆಯುತ್ತಿರುವ ಜನರು

ವರ್ಷ	ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು	ಲೈಸೆನ್ಸ್ ಪಡೆದಿರುವವರು
1987 – 88	104	35
1988 – 89	137	33
1989 – 90	108	31
1990 – 91	121	42
1991 – 92	98	18

ಈ) ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆಯಲು ಈಗಾಗಲೇ ಹೆಚ್ಚುವರಿ ತರಬೇತಿ ನೀಡಲಾಗುತ್ತಿದೆ. ಆದರೂ ಸಹ ಈ ತರಬೇತಿಯನ್ನು ನವೀಕರಿಸಲು ಹಾಗೂ ಎರಡು ಇಂಜೀನ್‌ಗಳ ತರಬೇತಿ ಸಹ ಕೊಡುವ ಬಗ್ಗೆ ಯೋಜನೆಗೂ ಕೇಂದ್ರ (ಡಿ.ಜಿ.ಸಿ.ಎ) ಸರಕಾರದ ಒಪ್ಪಿಗೆಯನ್ನು ಕೋರಲಾಗಿದೆ.

ಗುಬ್ಬಿ ಕ್ಷೇತ್ರದ ಕೆರೆಗಳ ಒತ್ತುವರಿ ಬಗ್ಗೆ

1292. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಬ್ಬಿ ಕ್ಷೇತ್ರದ ನಿಟ್ಟೂರು, ಕಡಬಾ ಹಾಗೂ ಗುಬ್ಬಿ ಕೆರೆಗಳು ತುಂಬಿ ಎಷ್ಟು ವರ್ಷಗಳಾದವು;

ಆ) ಈ ಕೆರೆಗಳ ಅಂಗಳಗಳು ಒತ್ತುವರಿ ಆಗಿರುವುದು ನಿಜವಲ್ಲವೇ; ಹಾಗಾದರೆ ಒತ್ತುವರಿಯನ್ನು ಖಾಲಿ ಮಾಡಿಸಲು ತೆಗೆದುಕೊಂಡ ಕ್ರಮಗಳೇನು;

ಇ) ಈ ಮೇಲ್ಕಂಡ ಮೂರು ಕೆರೆಗಳಲ್ಲಿ 10 ಅಡಿ ಊಳು ತುಂಬಿದ್ದು ನೀರು ಸಾಕಷ್ಟು ಶೇಖರಣೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

1) ಈ ಕೆರೆಗಳ ಹೂಳು ತೆಗೆಯಲು ರೈತರು ಸರ್ಕಾರವನ್ನು ಒತ್ತಾಯಿಸುತ್ತಿರುವುದು ನಿಜವೆ;

2) ಹಾಗಾದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಸದರಿ ಕೆರೆಗಳು 1987 ನೇ ಇಸವಿಯಲ್ಲಿ ಅಂದರೆ 5 ವರ್ಷಗಳ ಹಿಂದೆ ತುಂಬಿದ್ದವು.

ಆ) ಹೌದು ಒತ್ತುವರಿಯಾದ ಜಮೀನನ್ನು ಖಾಲಿ ಮಾಡಿಸಲು ಸಂಬಂಧಿಸಿದವರಿಗೆ ನೋಟಿಸುಗಳನ್ನು ಕೊಡಲಾಗಿದೆ. ಹಾಗೂ ಈ ಕೆರೆಗಳ ಅಂಗಳವನ್ನು ಗುರುತಿಸಲು ರೆವಿನ್ಯೂ ಇಲಾಖೆಯವರಿಗೆ ತಿಳಿಸಲಾಗಿದೆ.

ಇ) ಬಂದಿದೆ

1) ಹೌದು

2) ಹಣಕಾಸಿನ ಲಭ್ಯತೆಯನ್ನು ಅವಲಂಭಿಸಿ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳಲ್ಲಿ ನಾಮಕರಣ ಸದಸ್ಯರನ್ನು ನೇಮಿಸುವ ಬಗ್ಗೆ

1291. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಆಡಳಿತಾವಧಿ ಕೊನೆಗೊಂಡಿದ್ದು ಇವುಗಳಲ್ಲಿ ಕಾರ್ಯನಿರ್ವಹಿಸಲು ಸಲಹಾ ಸಮಿತಿಗೆ ಸದಸ್ಯರನ್ನು ನಾಮಕರಣ ಮಾಡಲು ತೀರ್ಮಾನಿಸಲಾಗಿದೆಯೇ;

ಆ) ಹಾಗಿದ್ದರೆ ಸದಸ್ಯರನ್ನು ಯಾರು ನಾಮಕರಣ ಮಾಡುವರು, ಯಾವ ಆಧಾರದ ಮೇಲೆ ನಾಮಕರಣ ಮಾಡಲಾಗುವುದು;

ಇ) ಆಯಾ ಕ್ಷೇತ್ರದ ಶಾಸಕರು ಅನುಮೋದಿಸಲ್ಪಟ್ಟ ಸದಸ್ಯರನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಲಾಗುವುದೆ;

ಈ) ಬೇರೆ ಯಾವ ರೀತಿಯ ವ್ಯವಸ್ಥೆ ಮಾಡಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು) –

ಅ) ಪರಿಶೀಲಿಸಲಾಗುವುದು.

ಆ) ಪರಿಶೀಲಿಸಲಾಗುವುದು.

ಇ) ಪರಿಗಣಿಸಲಾಗುವುದು.

ಈ) ಒಂದು ವರ್ಷದ ಅವಧಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ.

ಹಾಸನ ಜಿಲ್ಲೆಯಲ್ಲಿ ನ್ಯಾಷನಲ್ ಹೈವೆಯವರು ವ್ಯಯ ಮಾಡಿದ ಹಣ

1122. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣ ರಾಷ್ಟ್ರೀಯ ಹೆದ್ದಾರಿಯವರು ಖರ್ಚು ಮಾಡಿದ್ದಾರೆ: (ವಿವರ ಕೊಡುವುದು);

ಆ) ಪ್ರತಿ ವರ್ಷ ಖರ್ಚು ಮಾಡಿದ ಹಣ ಎಷ್ಟು (ವಿವರ ಕೊಡುವುದು);

ಇ) ಒಟ್ಟು ಖರ್ಚಾಗಿರುವ ಹಣದಲ್ಲಿ ಎಷ್ಟು ಮೊತ್ತದ ಕೆಲಸಕ್ಕೆ ಟೆಂಡರ್ ಕರೆದು ಕೆಲಸ ಮಾಡಿಸಲಾಗಿದೆ (ವಿವರ ಕೊಡುವುದು) ;

ಈ) 25,000 ರೂ.ಗಳಿಗೆ ಒಂದೊಂದು ಎಸ್ಟಿಮೇಟ್ ಮಾಡಿ ಇಲಾಖೆಯವರೇ ಕೆಲಸ ಮಾಡಿಸಿರುವುದು ನಿಜವೇ ;

ಉ) ಟೆಂಡರ್ ಕರೆಯದೇ ಈ ರೀತಿ ಇಲಾಖೆಯವರು ಕೆಲಸ ಮಾಡಿರುವುದು ಕ್ರಮ ಬದ್ಧವಾಗಿದೆಯೇ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಕಳೆದ ಮೂರು ವರ್ಷಗಳಲ್ಲಿ :-

1. ಮೂಲ ಕಾಮಗಾರಿಗಳಿಗೆ ರೂ. 299.30 ಲಕ್ಷಗಳು
2. ನಿಯಮಿತಕಾಲಿಕ ನವೀಕರಣಕ್ಕೆ ರೂ. 53.79 ಲಕ್ಷಗಳು
3. ಪ್ರವಾಹ ಹಾನಿ ದುರಸ್ತಿಗೆ ರೂ. 7.62 ಲಕ್ಷಗಳು ಖರ್ಚು ಮಾಡಲಾಗಿದೆ.

ಆ) ..... (ರೂ. ಲಕ್ಷಗಳಲ್ಲಿ)

	ಮೂಲಕಾಮಗಾರಿಗಳು	ನಿಯತಕಾಲಿಕ ನವೀಕರಣ	ಪ್ರವಾಸ ಹಾನಿ ದುರಸ್ತಿ
1988 – 89	55.26	04.93	4.21
1989 – 90	40.92	20.17	–
1990 – 91	203.00	28,69	3.41

ಇ) 1) ಮೂಲ ಕಾಮಗಾರಿಗಳು : 68.72 ಲಕ್ಷಗಳು 88–89 ಹಾಗೂ 89–90 ರಲ್ಲಿ ಬಹುತೇಕ ಕೆಲಸಗಳನ್ನು ಟೆಂಡರ್ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ. 90–91ರಲ್ಲಿ ಮಂಗಳೂರು ವಿಭಾಗಕ್ಕೆ ರಸ್ತೆ ಬಲಪಡಿಸಲು ಎರಡು ಕೆಲಸಗಳು ಮಾತ್ರ ಮಂಜೂರಾಗಿ ಕೇಂದ್ರ ಸರ್ಕಾರದ ಯಂತ್ರೋಪಕರಣಗಳನ್ನು ಬಳಸಲು ಇಲಾಖಾಮತಿಯಿಂದ ತೆಗೆದುಕೊಳ್ಳಲಾಯಿತು.

2) ನಿಯತಕಾಲಿಕ ನವೀಕರಣ : ರೂ. 47.39 ಲಕ್ಷಗಳು

3) ಪ್ರವಾಹ ಹಾನಿ ದುರಸ್ತಿ : ರೂ. 7.62 ಲಕ್ಷಗಳು

ಈ) ಇಲ್ಲ .

ಉ) ಕ್ರಮ ಬದ್ಧವಾಗಿದೆ.

ಇಂಜನಿಯರ್‌ಗಳ ವರ್ಗಾವಣೆ

1485 (ಎ) :- ಶ್ರೀ ಚಿಕ್ಕಮಾದು (ಹುಣಸೂರು) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಕೆಲವು ಕಿರಿಯ ಇಂಜನಿಯರ್, ಸಹಾಯಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜನಿಯರ್‌ಗಳು ಒಂದೇ ಸ್ಥಳದಲ್ಲಿ 4 ರಿಂದ 5 ವರ್ಷದವರೆಗೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) –

ಬಂದಿದೆ.

ಬಾದಾಮಿ ತಾಲ್ಲೂಕಿನಲ್ಲಿ ಬ್ಯಾರೇಜುಗಳ ನಿರ್ಮಾಣ.

1111. ಶ್ರೀ ಎಂ. ಕೆ. ಪಟ್ಟಣಶೆಟ್ಟಿ (ಬಾದಾಮಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಾದಾಮಿ ತಾಲ್ಲೂಕಿನಲ್ಲಿ ಎಷ್ಟು ಬ್ಯಾರೇಜುಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ ;
ಆ) ಆ ಬ್ಯಾರೇಜುಗಳ ನಿರ್ಮಾಣದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು). –

ಅ) 1991–92ನೇ ಸಾಲಿನ ಸಣ್ಣನೀರಾವರಿಯ ಹಾಗೂ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಬಾದಾಮಿ ತಾಲ್ಲೂಕು ಅಸಂಗಿ ಬ್ಯಾರೇಜ್ ಮತ್ತು ಪಟ್ಟದಕಲ್ಲು ಬ್ಯಾರೇಜ್ ನಿರ್ಮಾಣದ ಕಾಮಗಾರಿಗಳು ಸೇರಿವೆ. ಅಸಂಗಿ ಬ್ಯಾರೇಜಿನ ಹೈಡ್ರಾಲಜಿ ಮತ್ತು ವಿನ್ಯಾಸಗಳಿಗೆ ಒಪ್ಪಿಗೆ ನೀಡಲಾಗಿದ್ದು ಅಂದಾಜು ಪತ್ರಿಕೆ ತಯಾರಿಸಬೇಕಾಗಿದೆ. ಪಟ್ಟದಕಲ್ಲು ಬ್ಯಾರೇಜಿನ ಅಂದಾಜಿನ ಕೆಲವು ನ್ಯೂನತೆಗಳನ್ನು ಸರಿಪಡಿಸಲು ಜಿಲ್ಲಾ ಪರಿಷತ್ ಇಂಜಿನಿಯರ್ ವಿಭಾಗಕ್ಕೆ ಹಿಂದಿರುಗಿಸಲಾಗಿದೆ. ಇವುಗಳಿಗೆ ಇನ್ನೂ ಆಡಳಿತಾತ್ಮಕ ಒಪ್ಪಿಗೆ ನೀಡಿಲ್ಲ.
ಆ) ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ ನಂತರ ಕೆಲಸ ಪ್ರಾರಂಭಿಸಲಾಗುವುದು.

ವಯಸ್ಸಾದ ಕಲಾವಿದರಿಗೆ ಮಾಸಾಶನದ ಮಂಜೂರು

1032. ಶ್ರೀ ಮನೋಹರ ಐನಾಪುರ (ಬಳ್ಳಿಗಿ) :– ಮಾನ್ಯ ಯುವಜನಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಈ ವರ್ಷವಾದರೂ ವಯಸ್ಸಾದ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರ ಯೋಚಿಸಿದೆಯೇ ;
ಆ) ಹಾಗಿದ್ದಲ್ಲಿ ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ;

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)–

ಅ) ಕಲಾವಿದರಿಗೆ ಮಾಸಾಶನ ಕೊಡಲಾಗುತ್ತಿದೆ.
ಆ) ರೂ. 50,00,000–00 ಗಳನ್ನು ಒದಗಿಸಲಾಗಿದೆ.

ಆಥರ್ಗ ನಾಲಾ ಕೆಳಗೆ ಬ್ಯಾರೇಜು ಕೆಲಸಗಳನ್ನು ಇಲಾಖೆಯಿಂದ ನಿರ್ವಹಣೆ.

1033. ಶ್ರೀ ಮನೋಹರ ಐನಾಪುರ (ಬಳ್ಳಿಗಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಥರ್ಗಾ ನಾಲಾ, ಹತ್ತಳ್ಳಿ ನಾಲಾ ಮತ್ತು ಶಿರಾಡೋಣ ನಾಲಾಗಳ ಮೇಲೆ ಬ್ಯಾರೇಜು ಕೆಲಸಗಳನ್ನು ಇಲಾಖೆಯು ಕೈಗೊಳ್ಳುವುದೇ ;
ಆ) ಹಾಗಿದ್ದಲ್ಲಿ, ಈ ಕೆಲಸಗಳು ಎಂದು ಮಂಜೂರಾಗುವುವು ಮತ್ತು ಎಷ್ಟು ಹಣವನ್ನು ಈ ಯೋಜನೆಗಳಿಗೆ ಸರ್ಕಾರವು ಕಾದಿರಿಸುವುದು ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) –

ಅ) ಮತ್ತು ಆ) ಈ ಯೋಜನೆಗಳ ಬಗ್ಗೆ ವಿವರವಾದ ಸಮೀಕ್ಷೆ ನಡೆಸಿ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಶಕ್ಯವಿದ್ದಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ

ಬಸವಕಲ್ಯಾಣ ತಾಲ್ಲೂಕಿನಲ್ಲಿ ರಸ್ತೆ ದೀಪಗಳಿಲ್ಲದಿರುವ ಬಗ್ಗೆ

991. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ ರಸ್ತೆ ದೀಪಗಳಿಲ್ಲದಿರುವ ಗ್ರಾಮಗಳು ಎಷ್ಟು ;
ಆ) ದೀಪಗಳನ್ನು ಹಾಕಿಸದಿರಲು ಕಾರಣಗಳೇನು ;
ಇ) ಹಾಗಿದ್ದಲ್ಲಿ ಎಂದಿನಿಂದ ದೀಪಗಳನ್ನು ಹಾಕಿಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಇಲ್ಲ.
ಎಲ್ಲಾ ಗ್ರಾಮಗಳ ಮುಖ್ಯ ಬೀದಿಗಳು ಬೀದಿ ದೀಪಗಳ ಸೌಲಭ್ಯ ಹೊಂದಿರುತ್ತವೆ.
ಆ) ಪ್ರಶ್ನೆ 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.
ಇ) ನಿರ್ವಹಣೆ ಮತ್ತು ಸುಧಾರಣೆಗಳು ಸತತವಾಗಿ ನಡೆಯುತ್ತಿರುವ ಕಾರ್ಯಕ್ರಮಗಳು.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ

992. ಶ್ರೀ ಬಸವರಾಜಪಾಟೀಲ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಸವಕಲ್ಯಾಣ 1987 ರಿಂದ 1992 ರವರೆಗೆ ಕುಡಿಯುವ ನೀರಿನ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಇನ್ನೂ ಎಷ್ಟು ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗಿದೆ;
ಆ) ಹಾಗಿದ್ದಲ್ಲಿ, ಎಂದಿನಿಂದ ಕೊರೆಯಿಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ 1987 ರಿಂದ 1992 ರವರೆಗೆ 213 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದ್ದು, ಅದರಲ್ಲಿ 185 ಕೊಳವೆ ಬಾವಿಗಳು ಸಫಲವಾಗಿರುತ್ತವೆ.
ಇನ್ನೂ 30 ಗ್ರಾಮಗಳಲ್ಲಿ 32 ಕೊಳವೆ ಬಾವಿಗಳನ್ನು ಕೊರೆಯಬೇಕಾಗಿದೆ.
ಆ) ಈಗಾಗಲೇ ಕೆಲಸವು ಪ್ರಗತಿಯಲ್ಲಿದೆ.

ಬೀದರ್ ಜಿಲ್ಲೆಯ ಕಾರಂಜಾ ಯೋಜನೆಗೆ ಕಾಡಾ ರಚನೆ

993. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯ ಕಾರಂಜ ನೀರಾವರಿ ಯೋಜನೆಗೆ ಕಾಡಾ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೆ;
ಆ) ಇದ್ದಲ್ಲಿ ಎಂದಿನಿಂದ ರಚಿಸಲಾಗುವುದು ಹಾಗೂ ಅದರ ಉದ್ದೇಶವೇನು ;
ಇ) ಪ್ರಸ್ತುತ ಆಯವ್ಯಯದಲ್ಲಿ ಯೋಜನೆಗೆ ಅನುದಾನ ದೊರೆತಿದೆಯೇ? ಹಾಗಿದ್ದಲ್ಲಿ ಎಷ್ಟು ಹಣವನ್ನು ನಿಗದಿ ಮಾಡಲಾಗಿದೆ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭೂರಿ ಮತ್ತು ಮಧ್ಯಮ ನೀರಾವರಿ ಸಚಿವರು) : –

ಅ) ಕಾರಂಜ ನೀರಾವರಿ ಯೋಜನೆಗೆ ಮಾತ್ರ ಕಾಡಾ ರಚಿಸುವ ಉದ್ದೇಶ ಇಲ್ಲ, ಆದರೆ, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ನೀರಾವರಿ ಯೋಜನೆಗಳ ಬಗ್ಗೆ ಕಾಡಾ ಪ್ರಾಧಿಕಾರ ರಚಿಸುವ ಉದ್ದೇಶ ಇದೆ.

ಆ) ಯೋಜನೆಗಳು ಪೂರ್ಣಗೊಂಡು ನೀರಾವರಿ ಸೌಲಭ್ಯವನ್ನು ಒದಗಿಸಿದ ಮೇಲೆ ಕಾಡಾ ಪ್ರಾಧಿಕಾರ ರಚಿಸಲಾಗುವುದು. ಸಮರ್ಪಕ ನೀರು ವಿತರಣೆ, ಹೊಲಗಾಲುವೆ, ಡ್ರೈನೇಜ್, ವಾರಾಬಂದಿ ಮತ್ತು ಆಯಕಟ್ಟು ರಸ್ತೆ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು?

ಇ) ಪ್ರಸ್ತುತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯ ಏತ ನೀರಾವರಿ ಸಂಖ್ಯೆ

995. - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :– ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಪ್ರಾರಂಭಿಸಿದೆ; (ತಾಲ್ಲೂಕು ವಿವರ)

ಆ) ಬೀದರ್ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆಯಾದುದರಿಂದ ಪ್ರಸ್ತುತ ವರ್ಷ ಏತ ನೀರಾವರಿ ಪ್ರಾರಂಭಿಸುವ ಇಚ್ಛೆ ಸರ್ಕಾರಕ್ಕಿದೆಯೇ ; ಇದ್ದರೆ ಎಷ್ಟು, ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಇಲ್ಲ.

ಆ) ಬೀದರ್ ಜಿಲ್ಲೆಯಲ್ಲಿ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ 1991–92ನೇ ಸಾಲಿನ ಕಾರ್ಯ ಯೋಜನೆಯಲ್ಲಿ 3 ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಅವುಗಳ ಯೋಜನಾ ವರದಿಗಳನ್ನು ನಬಾರ್ಡ್ ಸೂತ್ರಕ್ಕೆ ತಯಾರಿಸಿ ಮಂಜೂರಾತಿ ಪಡೆದುಕೊಂಡು ಪ್ರಾರಂಭಿಸಲಾಗುವುದು.

ನೆಲಮಂಗಲ - ತುಮಕೂರು ವಿಭಾಗದ ರಾಷ್ಟ್ರೀಯ ಹೆದ್ದಾರಿ ನಂ.4 ರ ರಸ್ತೆ ನಾಲ್ಕು ಪಥಗಳಾಗಿ ಪರಿವರ್ತನೆ.

18. ಶ್ರೀ ಎಸ್. ಶಫಿ ಅಹಮದ್ (ತುಮಕೂರು) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ –

ರಾಷ್ಟ್ರೀಯ ಹೆದ್ದಾರಿ ನಂ.4 ರ ನೆಲಮಂಗಲ - ತುಮಕೂರು ವಿಭಾಗದ ರಸ್ತೆಯನ್ನು ನಾಲ್ಕು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು? ಮತ್ತು ಅದು ಯಾವ ಹಂತದಲ್ಲಿ ಇದೆ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ರಾಷ್ಟ್ರೀಯ ಹೆದ್ದಾರಿ ನಂ.4ರ ನೆಲಮಂಗಲ - ತುಮಕೂರುವರೆಗೆ ನಾಲ್ಕು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿ ಕೇಂದ್ರ

ಸರ್ಕಾರಕ್ಕೆ ಕಳುಹಿಸಲಾಗಿದೆ. ಇದರ ಅಲೈನ್‌ಮೆಂಟ್ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿದ್ದು ಅವರ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ.

ಬಾಕಿ ಉಳಿದಿರುವ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಹೊಸ ವಿಧೇಯಕ.

47. ಶ್ರೀ ಎಸ್. ಷಫಿ ಅಹಮದ್ (ತುಮಕೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಕಾರ್ಯರೂಪಗೊಳ್ಳದೆ ಬಾಕಿ ಉಳಿದಿರುವ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಹೊಸ ವಿಧೇಯಕವು ಯಾವ ಹಂತದಲ್ಲಿದೆ ಮತ್ತು ಯಾವಾಗ ಇದು ಕಾರ್ಯರೂಪಕ್ಕೆ ಬರುವುದು?

ಆ) ಸರ್ಕಾರವು ಕ್ಷೇತ್ರ ವಿಂಗಡಣೆಯ ಕಾರ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಮತ ಕ್ಷೇತ್ರಗಳನ್ನು ಗಣನೆಗೆ ತೆಗೆದುಕೊಂಡು ವಿಂಗಡಿಸುವುದೇ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) :–

ಅ) ಈಗಿರುವ ಕಾಯಿದೆಯಲ್ಲಿನ ನಿಯಮಗಳನ್ನು ಕಾರ್ಯರೂಪಕ್ಕೆ ತರುವಾಗ ಹೊಂದಿದ ಅನುಭವದ ಆಧಾರದ ಮೇಲೆ ಮತ್ತು 72ನೇ ತಿದ್ದುಪಡಿ ಕಾಯಿದೆಯ ಮುಖ್ಯಾಂಶಗಳ ಹಿನ್ನೆಲೆಯಲ್ಲಿ ಹೊಸ ಕರ್ನಾಟಕ ಪಂಚಾಯತ್ ರಾಜ್ ಮಸೂದೆಯು ಕಾನೂನು ಇಲಾಖೆಯಲ್ಲಿ ಕೊನೆಯ ಹಂತದಲ್ಲಿದೆ. ಈ ಮಸೂದೆಯನ್ನು ರಾಜ್ಯದ ವಿಧಾನ ಮಂಡಲದ ಮುಂದೆ ಮಂಡಿಸಲಾಗುವುದು.

ಆ) ಹೌದು

ಹೊಸ ವಿಧೇಯಕದಲ್ಲಿ ತರಲಾಗುವ ನಿಯಮದಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಮಲಪ್ರಭ ಬಲದಂಡೆ ಕಾಲುವೆ ಪ್ರಾರಂಭ

856. ಶ್ರೀ ಹೆಚ್. ವೈ. ಮೇಟಿ (ಗುಳ್ಳೇದಗುಡ್ಡ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮಲಪ್ರಭಾ ಬಲದಂಡೆ ಕಾಲುವೆಯ ಯೋಜನೆಯನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೆ;

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಇದರ ಅಂದಾಜು ವೆಚ್ಚವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :–

ಅ) ಮಲಪ್ರಭಾ ಬಲದಂಡೆ ಕಾಲುವೆ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿವೆ.

ಆ) ಉದ್ಭವಿಸುವುದಿಲ್ಲ.

ಇ) 183.74 ಕೋಟಿ ರೂ. ಗಳು (1987 – 88ರ ದರಗಳ ಪ್ರಕಾರ)

ಸೇಡಂ ತಾಲ್ಲೂಕಿನಲ್ಲಿ ಸಾಮೂಹಿಕ ಭವನಗಳ ನಿರ್ಮಾಣ

980. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಿಷ್ಟಾಪುರ ಹರಿಜನವಾಡದಲ್ಲಿ ಎರಡು ಸಾಮೂಹಿಕ ಭವನಗಳ ಕಟ್ಟಡವು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇವುಗಳನ್ನು ಯಾವ ವರ್ಷದಲ್ಲಿ ನಿರ್ಮಾಣ ಮಾಡಲಾಗಿದೆ;

ಇ) ಈ ಕಟ್ಟಡಗಳಿಗೆ ಪೂರ್ಣ ಹಣವನ್ನು ಪಾವತಿ ಮಾಡಿ ಹಣವನ್ನು ದುರುಪಯೋಗ ಮಾಡಿರುವುದು ನಿಜವೇ;

ಈ) ಹಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮವೇನು ;

ಉ) ಇವುಗಳ ಕಟ್ಟಡಕ್ಕೆ ಖರ್ಚು ಮಾಡಲಾದ ಹಣವೆಷ್ಟು ;

ಊ) ಇವುಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂಪಾಯ ಸಚಿವರು) –

ಅ) ಕಿಷ್ಟಾಪುರ ಗ್ರಾಮದ ಹರಿಜನವಾಡದ ಸಾಮೂಹಿಕ ಭವನಗಳ ಕಟ್ಟಡ ಪೂರ್ಣಗೊಂಡಿರುತ್ತದೆ.

ಆ) 1987 ರಲ್ಲಿ

ಇ) ಹಣವು ದುರುಪಯೋಗವಾಗಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ರೂ. 10,000–00 ಖರ್ಚಾಗಿವೆ.

ಊ) ಈಗಾಗಲೇ ಪೂರ್ಣಗೊಳಿಸಲಾಗಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಮುಗ್ರವಳ್ಳಿ ಹಾಗೂ ಗೌರಿಹಳ್ಳದ ಸೇತುವೆ ನಿರ್ಮಾಣ ಕೆಲಸ ಅಪೂರ್ಣ

745. - ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಮೂಡಿಗೆರೆ ತಾಲ್ಲೂಕಿನಲ್ಲಿ, ಮುಗ್ರಹಳ್ಳಿ ಸೇತುವೆ, ಹಾಗೂ ಗೌರಿಹಳ್ಳದ ಸೇತುವೆ ಮಂಜೂರಾದದ್ದೂ, ಯಾವಾಗ ಇವುಗಳ ಅಂದಾಜು ವೆಚ್ಚವೇನು ;

2) ಈ ಸೇತುವೆಗಳ ಕಾಮಗಾರಿಗಳ ಕೆಲಸ ಅಪೂರ್ಣವಾಗಿರಲು ಕಾರಣವೇನು ; ಈ ಸೇತುವೆಗಳ ಕಾರ್ಯವನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಕಾಶವೆಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

1) ಮೂಡಿಗೆರೆ ತಾಲ್ಲೂಕಿನಲ್ಲಿ ಮುಗ್ಗರವಳ್ಳಿ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ಕಾಮಗಾರಿ ಮತ್ತು ಗೌಡಹಳ್ಳಿ ಬಳಿ, ಹೊಸಹಳ್ಳಿ ರಸ್ತೆಯಲ್ಲಿ ಗೌರಿಹಳ್ಳಕ್ಕೆ ಅಡ್ಡಲಾಗಿ ಸೇತುವೆ ಕಾಮಗಾರಿಗಳು ಚಿಕ್ಕಮಗಳೂರು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿದ್ದು, 1988–89ನೇ ಸಾಲಿನಲ್ಲಿ ಮಂಜೂರಾಗಿವೆ ಮತ್ತು ಈ ಎರಡು ಕಾಮಗಾರಿಗಳಿಗೆ ಕ್ರಮವಾಗಿ ತಲಾ 10.00 ಲಕ್ಷ ರೂ.ಗಳನ್ನು ಮತ್ತು 4.30 ಲಕ್ಷ ರೂ. ಗಳ ಅಂದಾಜು ವೆಚ್ಚ ತಗಲುತ್ತವೆ.

2) ಸದರಿ ಸೇತುವೆಗಳ ಕಾಮಗಾರಿಗಳಿಗೆ ಸಾಕಷ್ಟು ಅನುದಾನದ ಲಭ್ಯತೆಯಿಲ್ಲದ ಕಾರಣ ಅಪೂರ್ಣವಾಗಿವೆ. ಈ ಸೇತುವೆಗಳಿಗೆ ಪೂರ್ಣ ಅನುದಾನ ನೀಡಿ ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಜಿಲ್ಲಾ ಪರಿಷತ್‌ರವರಿಗೆ ಸೂಚಿಸಲಾಗುವುದು.

ಚಿಕ್ಕಮಗಳೂರು ಜಿಲ್ಲಾ ಪರಿಷತ್ ಮೂಲಕ ಹೊಸದಾಗಿ ನೌಕರರನ್ನು ನೇಮಕ.

946. ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ ಪ್ರಾರಂಭವಾದಲ್ಲಿಂದ ಎಷ್ಟು ಜನರಿಗೆ ಹೊಸದಾಗಿ ನೌಕರಿಗೆ ನೇಮಕ ಮಾಡಲಾಗಿದೆ ;

ಆ) ಇದಕ್ಕೆ ಸರ್ಕಾರವು ಅನುಮತಿ ನೀಡಲಾಗಿತ್ತೆ ;

ಇ) ಜಿಲ್ಲಾ ಪರಿಷತ್ತಿಗೆ ಹೊಸದಾಗಿ ನೌಕರರನ್ನು ನೇಮಕ ಮಾಡುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸಲಾಗಿದೆಯೇ? ಹಾಗಿದ್ದಲ್ಲಿ ಪೂರ್ಣ ಪಟ್ಟಿಯನ್ನು ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 10 ಜನರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಲಾಗಿದೆ.

ಆ) ಸರ್ಕಾರವು ಸುತ್ತೋಲೆ ಸಂಖ್ಯೆ :ಆರ್.ಡಿ.ಪಿ. 198 ಜಡ್.ಪಿ.ಜಡ್. 87, ದಿನಾಂಕ 9.7.1987 ರಲ್ಲಿ ಜಿಲ್ಲಾ ಪರಿಷತ್ತಿಗೆ ತಾತ್ಕಾಲಿಕವಾಗಿ ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರನ್ನು 120 ದಿನಗಳಿಗೆ ಮಾತ್ರ ಮಂಜೂರಾದ ಹುದ್ದೆಗಳ ಶೇಕಡ 50ಕ್ಕೆ ಮೀರದಂತೆ ಉದ್ಯೋಗ ಮತ್ತು ವಿನಿಮಯ ಕೇಂದ್ರದಿಂದ ಹೆಸರುಗಳನ್ನು ಪಡೆದು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಹೊರಡಿಸಿರುವ ಸೂಚನೆಗಳನ್ನು ಅನುಸರಿಸಿ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು. ವಾಹನ ಚಾಲಕರ ಹುದ್ದೆಗೆ ಸಂಬಂಧಿಸಿದಂತೆ ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರುಗಳನ್ನು ಪಡೆದು ಜಿಲ್ಲಾ ಪರಿಷತ್ತುಗಳೇ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಖಾಯಂ ನೇಮಕಾತಿ ಮಾಡಬಹುದಾಗಿದೆ.

ಇ) ಜಿಲ್ಲಾ ಪರಿಷತ್ತು ಚಿಕ್ಕಮಗಳೂರಿನಲ್ಲಿ ದಿನಗೂಲಿ ಆಧಾರದ ಮೇಲೆ ಈ ಕೆಳಗಿನಂತೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ;

5 ಶೀಘ್ರಲಿಪಿಗಾರರು
4 ಬೆರಳಚ್ಚುಗಾರರು
1 ವಾಹನ ಚಾಲಕ

ಈ ನೇಮಕಾತಿ ಮಾಡುವಾಗ ಮೀಸಲಾತಿ ಪದ್ಧತಿಯನ್ನು ಪಾಲಿಸಿರುವುದಿಲ್ಲ.

ಕುಂಟರಾಮನಹಳ್ಳಿ ಬಳಿ ಇರುವ ಗಂಡಿಕೆರೆಯ ಬಗ್ಗೆ

960. ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಬ್ಬಿ ತಾಲ್ಲೂಕು ಕಂಟರಾಮನಹಳ್ಳಿಯ ಹತ್ತಿರ ಬರುವ ಗಂಡಿಕೆರೆಗೆ ಚಾನಲ್ ಇಲ್ಲದೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ ;

ಆ) ಈ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಬಗ್ಗೆ ಅನೇಕ ಮನವಿಗಳು ಶಾಸಕರಿಂದ ಬಂದಿದ್ದು ಮತ್ತು ವಿಧಾನಸಭೆಯಲ್ಲಿಯೂ ಸಹ ಪ್ರಸ್ತಾವನೆಯಾಗಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಕೆಲಸವನ್ನು ಕೈಗೆತ್ತಿಕೊಂಡಿರುವುದಿಲ್ಲವೆಂಬುದು ನಿಜವೆ;

ಈ) ಕೆಲಸವನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿಯೆಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) ಹೌದು.
ಆ) ಬಂದಿದೆ.
ಇ) ಕಾಲುವೆಗಳ ಉಳಿದ ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ನೀಡಲಾಗಿದ್ದು ಕೆಲಸವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.
ಈ) ಅನುದಾನದ ಲಭ್ಯತೆಯನ್ನವಲಂಬಿಸಿ ಕೆಲಸವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಹುಳಿಯಾರು ಮತ್ತು ಹಿರಿಯೂರು ರಸ್ತೆ ದುರಸ್ತಿ

956. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹುಳಿಯೂರು ಮತ್ತು ಹಿರಿಯೂರು ರಸ್ತೆಯು ತುಂಬಾ ಹದಗೆಟ್ಟಿದ್ದು ಅದನ್ನು ಸರಿಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳದೆ ಇರುವುದು ನಿಜವೆ;
ಆ) ಹಾಗಿದ್ದಲ್ಲಿ ರಸ್ತೆಯನ್ನು ದುರಸ್ತಿ ಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಈ ರಸ್ತೆಯನ್ನು ನಿರ್ವಹಣೆ ಮಾಡಲಾಗಿದೆ.
ಆ) ಲಭ್ಯವಿರುವ ನಿರ್ವಹಣೆ ಅನುದಾನದಲ್ಲಿ ಈ ರಸ್ತೆಯನ್ನು ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ. ರಸ್ತೆಯಲ್ಲಿದ್ದ ಗುಂಡಿಗಳನ್ನು ಮುಚ್ಚಲಾಗಿದೆ. ರಸ್ತೆಯ ಬದಿಗಳನ್ನು ಶಕ್ತಿಯುತವನ್ನಾಗಿ ಮಾಡಲು ಜಲ್ಲಿ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅಧಿಕಾರಿಗಳನ್ನು ನೇಮಿಸುವ ಬಗ್ಗೆ

959. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಆಡಳಿತಾಧಿಕಾರಿಗಳ ವಶಕ್ಕೆ ಬಂದಿರುವುದು ಸರ್ಕಾರಕ್ಕೆ ತಿಳಿದಿದೆಯೇ;
ಆ) ಆಡಳಿತಾಧಿಕಾರಿಗಳ ನೇಮಕ ಪಂಚಾಯತಿ ಕಾರ್ಯ ವ್ಯವಸ್ಥೆಗೆ ವಿರುದ್ಧವಲ್ಲವೆ;
ಇ) ಹಾಗಿದ್ದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರವು ಆಲೋಚಿಸಿದೆಯೇ;
ಈ) ಹಾಗಿದ್ದಲ್ಲಿ ಎಂದಿನಿಂದ ನೇಮಕಾತಿ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಹೌದು.
ಆ) ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಕಾರ್ಯ ನಿರ್ವಹಣೆ ಅವುಗಳ ಸಾಮರ್ಥ್ಯ ಹಾಗೂ ನ್ಯೂನತೆಗಳನ್ನು ಹೊರತಂದಿದೆ. ಹೀಗೆ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಲು ಮತ್ತು 72ನೇ ಸಂವಿಧಾನ ತಿದ್ದುಪಡಿಯ ವಿಧೇಯಕದ ಒತ್ತಿನೆಯಲ್ಲಿ ಸರ್ಕಾರವು ಈಗಿರುವ ಪಂಚಾಯತ್ ರಾಜ್ ಕಾಯಿದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರಲು ಉದ್ದೇಶಿಸಿದೆ. ತಿದ್ದುಪಡಿಯ ಮಸೂದೆಯು ಜಾರಿಗೆ ಬಂದ ನಂತರ ಆದಷ್ಟು ಬೇಗನೆ ಚುನಾವಣೆ ನಡೆಸಲಾಗುವುದು. ಅಲ್ಲಿಯವರೆಗೆ ತಾತ್ಕಾಲಿಕವಾಗಿ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ.

೧) ಮತ್ತು (೫) ಎಲ್ಲಾ ಜಿಲ್ಲಾ ಪರಿಷತ್ತುಗಳ ಅವಧಿಯು ದಿನಾಂಕ 13.1.1992 ಕ್ಕೆ ಅಂತ್ಯಗೊಂಡಿದ್ದರಿಂದ ಬೀದರ್ ಜಿಲ್ಲಾ ಪರಿಷತ್ತು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ದಿನಾಂಕ 14.1.92 ರಿಂದ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಬೀದರ್ ಜಿಲ್ಲಾ ಪರಿಷತ್‌ಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಿದೆ. ಮಂಡಲ ಪಂಚಾಯತಿಗಳ ಅವಧಿಯು ಕೊನೆಗೊಳ್ಳುವ ದಿನಾಂಕವನ್ನು ಅನುಬಂಧ-1 ರಲ್ಲಿ ತೋರಿಸಲಾಗಿದೆ. ಅವಧಿ ಮುಗಿಯುತ್ತಿರುವ ಮಂಡಲ ಪಂಚಾಯತಿಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅವರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆಡಳಿತಾಧಿಕಾರಿಗಳನ್ನು ನೇಮಿಸುತ್ತಿದ್ದಾರೆ.

ANNEXURE --1

LIST SHOWING THE TENURE OF ELECTED MEMBERS OF MANDAL PANCHAYATS IN THE STATE.

Sl. No.	Name of the District	Date of list published by Deputy Commissioner concerned.	Date of Expiry
1.	Bangalore	9.2.1987	8.2.1992
2.	Kolar	7.2.1987	6.2.1992
3.	Tumkur	6.2.1987	5.2.1992
4.	Chitradurga	9.2.1987	8.2.1992
5.	Shimoga	13.2.1987	12.2.1992
6.	Mysore	12.2.1987	11.2.1992
7.	Mandya	23.2.1987	22.2.1992
8.	Coorg	7.2.1987	6.2.1992
9.	Dakshina Kannada	9.2.1987	8.2.1992
10.	Chickmagalur	9.2.1987	8.2.1992
11.	Hassan	16.2.1987	15.2.1992
12.	Belgaum	23.2.1987	22.2.1992
13.	Dharwad	4.4.1987	3.4.1992
14.	Bijapur	31.3.1987	30.3.1992
15.	Karwar	30.3.1987	29.3.1992
16.	Gulbarga	4.4.1987	3.4.1992
17.	Bidar	7.2.1987	6.2.1992
18.	Raichur	27.1.1987	26.1.1992
19.	Bellary	11.2.1987	10.2.1992

NOTE : The dates of Notification constituting the Mandal Panchayats should however be verified once again.

ಮಲಪ್ರಭಾ ಅಣೆಕಟ್ಟು ಯೋಜನೆ.

1107. ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮಲಪ್ರಭಾ ಅಣೆಕಟ್ಟು ಯೋಜನೆ ಯಾವಾಗ ಪ್ರಾರಂಭವಾಯಿತು;
ಆ) ಮಲಪ್ರಭಾ ಎಡದಂಡೆಯ ಕಾಲುವೆಯ ಉದ್ದವೆಷ್ಟು ;
ಇ) ಮಲಪ್ರಭಾ ಎಡದಂಡೆ ಕೆಲಸವು ಎಲ್ಲಿಯವರೆಗೆ ಮುಗಿದಿದೆ ಹಾಗೂ ಉಳಿದಿರುವ ಕೆಲಸ ಎಷ್ಟು ಅವಧಿಯಲ್ಲಿ ಮುಗಿಯುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) –

ಅ) 1960 ನೇ ಇಸವಿಯಲ್ಲಿ.
ಆ) 168 ಕಿ.ಮೀ.
ಇ) 125 ಕಿ.ಮೀ. ವರೆಗೆ ಕಾಮಗಾರಿಗಳು ಮುಗಿದ್ದಿದ್ದು, ಬಾಕಿ ಕಾಮಗಾರಿಗಳನ್ನು 1996–97ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮುಳಬಾಗಿಲು ಪಟ್ಟಣದಲ್ಲಿ ಸ್ಟೇಡಿಯಂ ನಿರ್ಮಾಣ

983. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮುಳಬಾಗಿಲು ಪಟ್ಟಣದಲ್ಲಿ ವಿದ್ಯಾರ್ಥಿಗಳ ಆಟ ಪಾಠಗಳಲ್ಲಿ ಅನುಕೂಲವಾಗಲು ಸ್ಟೇಡಿಯಂ ನಿರ್ಮಾಣದ ಬಗ್ಗೆ ಸರ್ಕಾರವು ಆಲೋಚಿಸಿದೆಯೇ ;
ಆ) ಹಾಗಿದ್ದಲ್ಲಿ, ಯಾವಾಗ ಇದನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು;
ಇ) ಅದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಹೌದು.
ಆ) ಸೂಕ್ತವಾದ ನಿವೇಶನ ದೊರೆತ ನಂತರ ಮುಳಬಾಗಿಲು ಕ್ರೀಡಾಂಗಣದ ನಿರ್ಮಾಣದ ಕಾರ್ಯವನ್ನು ಪ್ರಾರಂಭಿಸಲಾಗುವುದು.
ಇ) ಅಂದಾಜು ವೆಚ್ಚ ರೂ.15.75 ಲಕ್ಷಗಳು.

ಬಸವನ ಹೊಳೆಗೆ ಸೇತುವೆ ನಿರ್ಮಾಣ

961. ಶ್ರೀ ಉಮೇಶ್ ಭಟ್ (ಅಂಕೋಲ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ –

ಶಿರಸಿ ತಾಲ್ಲೂಕು ನಾಲ್ಕಣ ಮಂಡಲ ಪಂಚಾಯತ್ ವ್ಯಾಪ್ತಿಯ ಮಣದೂರ ಕುದ್ರಗೋಡ ರಸ್ತೆಯಲ್ಲಿ ಬಸವನ ಹೊಳೆಗೆ ಸೇತುವೆ ನಿರ್ಮಾಣದ ಬಗ್ಗೆ ಮುಂಬರುವ ಮುಂಗಡ ಪತ್ರದಲ್ಲಿ ಸೇರ್ಪಡೆ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಈ ಕಾಮಗಾರಿಯು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತಿದ್ದು 1992–93ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ಇದನ್ನು ಆದ್ಯತೆಯ ಮೇಲೆ ಸೇರ್ಪಡಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ಜಿಲ್ಲಾಪರಿಷತ್ ಕಾರವಾರ ಇವರಿಗೆ ಕಳುಹಿಸಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳು

1399. ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು ;

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಬಂದಿದೆ.

ಆ) 1) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಪ್ರಸ್ತುತ ವರ್ಷದಲ್ಲಿ ಮಂಗಳೂರು ತಾಲ್ಲೂಕಿನಲ್ಲಿರುವ ಗುರುಪುರ ಅಣೆಕಟ್ಟಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1992–93ನೇ ಸಾಲಿನಲ್ಲಿ 4 (ನಾಲ್ಕು) ಕಾಮಗಾರಿಗಳನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಕೈಗೊಳ್ಳುವ ಉದ್ದೇಶವಿದೆ.

2) ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲು ಉದ್ದೇಶಿಸಿರುವ ಏತ ನೀರಾವರಿ ಯೋಜನೆಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಏತ ನೀರಾವರಿ ಯೋಜನೆ	ತಾಲ್ಲೂಕು
1.	ಕರಮರಗುಂಡಿ	ಬಂಟ್ವಾಳ
2.	ಜಡ್ಕಲ್	ಕುಂದಾಪುರ
3.	ಬಿಡ್ಕಲ್ ಕಟ್ಟೆ	ಕುಂದಾಪುರ
4.	ಗೋಳಿಹೊಳೆ	ಕುಂದಾಪುರ
5.	ಎಳ್ಳಂಜೆ	ಮಂಗಳೂರು
6.	ಬಲ್ಲುಂಜೆ	ಮಂಗಳೂರು.
7.	ಬಿಳಿಯೂರು	ಬಂಟ್ವಾಳ
8	ಸೂರಿಂಜೆ	ಮಂಗಳೂರು
9.	ಜಂಗರಗುಂಡಿ	ಕಾರ್ಕಳ
10.	ಆಲಂಗಾರ	ಪುತ್ತೂರು
11.	ಇಚ್ಚಲುಂಪಾಡಿ	ಪುತ್ತೂರು
12.	ಹಿರೇಬಂಡಾಡಿ	ಪುತ್ತೂರು
13.	ಶಾಂತಿಗೋಡು	ಪುತ್ತೂರು
14.	ಕಡಬಕೋಡಿಂಬಾಡ	ಪುತ್ತೂರು
15.	ಕೋಯಿಲಾ	ಪುತ್ತೂರು
16.	ಕುಕ್ಕಾಡಿ	ಪುತ್ತೂರು
17.	ಕುಕ್ಕುಜೆ	ಕಾರ್ಕಳ

ಮೇಲ್ಕಂಡ ಏತ ನೀರಾವರಿ ಯೋಜನೆಗಳಲ್ಲಿ ಕರಮರಗುಂಡಿ ಏತ ನೀರಾವರಿ ಯೋಜನೆಯ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ.

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯಂ,
ವಿಧಾನ ಸೌಧ, ಬೆಂಗಳೂರು,
ದಿನಾಂಕ.....

ಮರವಂತೆ ಕಡಲ ತೀರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದು.

888. ಶ್ರೀ ಜಿ.ಎಸ್. ಆಚಾರ್ (ಬೈಂದೂರು) :- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸ-ಮರವಂತೆ ಕಡಲ ತೀರವು ಚೇತೋಹಾರಿಯಾದ ಪ್ರೇಕ್ಷಣೀಯ ಸ್ಥಳವಾಗಿದ್ದು, ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವ ರೀತಿಯ ಅಭಿವೃದ್ಧಿಯನ್ನು ಎಷ್ಟು ವೆಚ್ಚದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) -

ಅ) ಹೌದು.

ಆ) ಮರವಂತೆ ಕಡಲ ತೀರದ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರ 1991-92ನೇ ಸಾಲಿನಲ್ಲಿ ಯೋಜನೆಗಳ ಅದ್ಯತೆ ಪಟ್ಟಿಯಲ್ಲಿ ಸೇರಿಸಿದೆ. ಪ್ರವಾಸೋದ್ಯಮ ಇಲಾಖೆ ನಕ್ಷೆ ಮತ್ತು ರೂ.49.69 ಲಕ್ಷದ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರದ ಮಂಜೂರಾತಿಗಾಗಿ ಸಲ್ಲಿಸಿದೆ.

ಹಗಲಹಟ್ಟಿ ಬಳಿ ಸೇತುವೆ ನಿರ್ಮಾಣ

1021. ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) :- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

1) ಸಕಲೇಶಪುರ - ಮೂಡಿಗೆರೆ ರಸ್ತೆಯಲ್ಲಿ ಹಗಲಹಟ್ಟಿ ಬಳಿ ಇರುವ ಸೇತುವೆಯು ಸಕಲೇಶಪುರದಿಂದ ಚಿಕ್ಕಮಗಳೂರಿಗೆ ಸಂಪರ್ಕ ಕಲ್ಪಿಸುವ ಬಹು ಮುಖ್ಯ ರಸ್ತೆಯಾಗಿದ್ದು ಹಾಲಿ ಸೇತುವೆಯು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

3) ಈ ಸೇತುವೆಯ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :-

1) ಬಂದಿದೆ.

2) ಈ ಕಾಮಗಾರಿಯನ್ನು 1992-93ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

3) ಈ ಕಾಮಗಾರಿಯನ್ನು 1992-93ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾದರೆ, ಅದೇ ವರ್ಷದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಜಮ್ಮನಹಳ್ಳಿ ಬಳಿ ಇರುವ ಸೇತುವೆ ನಿರ್ಮಾಣ

1020. ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) :- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

1) ಸಕಲೇಶಪುರ- ಕೂಡ್ಲಿಪೇಟೆ ರಸ್ತೆಯಲ್ಲಿ ಜಮ್ಮನಹಳ್ಳಿ ಬಳಿ ಇರುವ ಸೇತುವೆಯು ಸಕಲೇಶಪುರದಿಂದ ಕೊಡಗಿಗೆ ಸಂಪರ್ಕ ಕಲ್ಪಿಸುವ ಬಹು ಮುಖ್ಯವಾದ ರಸ್ತೆಯಾಗಿದ್ದು, ಹಾಲಿ ಸೇತುವೆಯು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳಾವುವು ?
3) ಈ ಸೇತುವೆಯ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

1) ಬಂದಿದೆ.
2) ಈ ಕಾಮಗಾರಿಯನ್ನು 1992–93ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.
3) ಈ ಕಾಮಗಾರಿಯನ್ನು 1992–93ನೇ ಸಾಲಿನ ಆಯವ್ಯಯವನ್ನು ಅನುಸರಿಸಿ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ನಿಯಮಾನುಸಾರವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

1991–92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

120. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1991–92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು? ಹಾಗೂ ಆ ಪೈಕಿ ಬಿಡುಗಡೆ ಮಾಡಲಾದ ಹಣವೆಷ್ಟು ;
ಆ) 1991–92ನೇ ಸಾಲಿನ ಆಯವ್ಯಯದಲ್ಲಿ ಧಾರವಾಡ ಜಿಲ್ಲಾ ಪರಿಷತ್ತಿಗೆ ವಿವಿಧ ಇಲಾಖೆಗಳ ಕಾರ್ಯಗಳಿಗೆ ಇಲಾಖಾವಾರು ಒದಗಿಸಿದ ಹಣವೆಷ್ಟು? ಹಾಗೂ ಇದರಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) 1991–92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಒದಗಿಸಲಾದ ಹಣ 1556.65 ಕೋಟಿ ರೂ.ಗಳು ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಆರ್ಥಿಕ ಇಲಾಖೆಗಳಿಂದ 1005 ಕೋಟಿ ರೂ. ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಇದಲ್ಲದೆ ಕೇಂದ್ರೀಯ ಪುರಸ್ಕೃತ ಯೋಜನೆಯಡಿಯಲ್ಲಿ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳೇ ಹಣವನ್ನೂ ನೇರವಾಗಿ ಜಿಲ್ಲಾಪರಿಷತ್ತುಗಳಿಗೆ ಬಿಡುಗಡೆ ಮಾಡಿರುತ್ತಾರೆ.
ಆ) ಧಾರವಾಡ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ANNEXURE

STATEMENT INDICATING THE TOTAL AMOUNT PROVIDED DURING 1991–92 FOR DHARWAD ZILLA PARISHAD AND RELEASES MADE UP TO 31.1.1992(Rs. in Lakhs)

Sl. No.	HEAD OF ACCOUNT		BUDGET PROVISION FOR 1991–92	AMOUNT RELEASED UP TO 31.1.92
1.	2059 –	P.W.D.	180.00	161.10
2.	2202 –	General Education Primary Education	4976.27	2616.70

Sl. No.	HEAD OF ACCOUNT	BUDGET PROVISION FOR 1991–92	AMOUNT RELEASED UP TO 31.1.92
3.	2202 –02 – Secondary Education	–	1256.90
4.	2202–04 – Adult Education	39.60	10.47
5.	2202–05 – Language Development	–	21.00
6.	2202–80 – General Education	–	2.46
7.	2204 – Sports & Youth Service	18.19	13.40
8.	2210 – Health & Family Welfare	744.05	544.14
9.	2211 – Family Welfare	284.30	137.77
10.	2215 – Water Supply & Drainage	395.32	217.73
11.	2216 – Hudco & House Sites	61.05	3.08
12.	2225 – Social Welfare	720–51	534.33
13.	2230 – Labour & Training	53.80	44.80
14.	2235 – Women & Child Welfare	231.08	149.21
15.	2236 – Food	123.64	61.74
16.	2401 – Agriculture	383.18	272.06
17.	2402 – Horticulture	67.47	36.70
18.	2402 – Soil Conservation	183.80	055.38
19.	2403 – Animal Husbandry	264.51	197.56
20.	2405 – Fisheries	33.52	24.09
21.	2406 – Forest	109.81	63.72
22.	2425 – Co–operation	41.69	22.55
23.	2501 – M.P. Salaries	0.24	35.00
24.	2501 – I.R.D.P.	381.04	150.15
25.	2501 – DWCRA	11.00	2.55
26.	2501 – D.P.A.P.	290.21	174.124
27.	2501 – I.R.E.P.	6.95	3.090
28.	2505 – Jawahar Rojgar Yojana (including OBA Non – JRY)	1336.20	812.788
29.	2506 – Land Reforms	11.12	1.12
30.	2515 – 100 Wells	26.20	6.30
31.	2515 – Talanudan	290.88	144.00
32.	2515 – Dist.	40.00	67.50
33.	2515 – Sub Plan	–	20.00
34.	2515 – Anthoyodaya	7.76	–
35.	2551 – Western Ghat	22.387	13.44
36.	2702 – Small Irrigation (Minor)	75.77	6.14
37.	2702 – Small Irrigation	–	84.42
38.	2851 – Small Industries–Commercial	86.23	46.38
39.	2851 – Resme	89.91	57.30
40.	2851 – Industries – 80 General	–	7.64

Sl. No.	HEAD OF ACCOUNT	BUDGET Provision FOR 1991–92	AMOUNT Released UP TO 31.1.92
41.	3054 – 5054 Roads & Bridges	427..18	213.54
42.	3451 – Finance & Secretariat	7.11	6.22
43.	2810 – Energy Sector	4.75	9.55
44.	2225 – Special Component	190.50	13.88
	Total	10,997.22	8,322.22

ಏತ ನೀರಾವರಿ ಯೋಜನೆಗಳ ನೌಕರರ ಬಗ್ಗೆ

34. ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದ ಕೆಲವು ಏತ ನೀರಾವರಿ ಯೋಜನೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದರೂ, ನೌಕರವರ್ಗದವರು ಮಾತ್ರ ಅಲ್ಲಿಯೆ ಮುಂದುವರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ;

ಆ) ಸ್ಥಗಿತಗೊಂಡಿರುವ ಯೋಜನೆಗಳ ಮೆಷಿನರಿಗಳನ್ನು ಬೇರೆಡೆಗೂ ಉಪಯೋಗಿಸಿಲ್ಲದಿರುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿಲ್ಲವೆ;

ಇ) ಒಟ್ಟು ಎಷ್ಟು ಅಂತಹ ಯೋಜನೆಗಳು ಸ್ಥಗಿತಗೊಂಡಿರುತ್ತವೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) ಇಲ್ಲ. ಸ್ಥಗಿತಗೊಂಡಿರುವ ಏತ ನೀರಾವರಿ ಯೋಜನೆಗಳ ಪೈಕಿ ಅವಶ್ಯವಿರುವ ಕೆಲವು ಕಾಮಗಾರರನ್ನು ಬಿಟ್ಟು ಉಳಿದ ಸಿಬ್ಬಂದಿಯನ್ನು ಕೆಲಸವಿರುವ ಕಡೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಆ) ಶಾಶ್ವತವಾಗಿ ಸ್ಥಗಿತಗೊಳಿಸಲಾದ ಏತ ನೀರಾವರಿ ಯೋಜನೆಗಳ ಮೆಷಿನರಿಗಳಲ್ಲಿ ಸುಸ್ಥಿತಿಯಲ್ಲಿರುವುದನ್ನು ಬೇರೆ ಯೋಜನೆಗಳಿಗೆ ಬಳಸಲಾಗುತ್ತಿದೆ. ಇನ್ನೂ ಕೆಲವು ಮೆಷಿನರಿಗಳನ್ನು ಬೇರೆ ಯೋಜನೆಗಳಿಗೆ ಬಳಸಲು ಉದ್ದೇಶಿಲಾಗಿದೆ. ಕೆಲವು ಯೋಜನೆಗಳ ಮೆಷಿನರಿಗಳು ತುಂಬಾ ಹಳೆಯದಾಗಿರುವುದರಿಂದ ಇವುಗಳನ್ನು ಬೇರೆ ಕಡೆ ಉಪಯೋಗ ಮಾಡಲಾಗಿಲ್ಲ. ಕೆಲವು ಏತ ನೀರಾವರಿ ಯೋಜನೆಗಳು ಮೆಷಿನರಿ ದುರಸ್ತಿಯಲ್ಲಿರುವುದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು ಇವುಗಳನ್ನು ದುರಸ್ತಿಪಡಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಇ) ಒಟ್ಟು 74 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿದೆ.

ಉಚ್ಚಂಗಿದುರ್ಗ ಹಾಗೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ

858. ಶ್ರೀ ಬಿ.ಹೆಚ್. ಯಂಕನಾಯ್ಕ (ಹರಪನಹಳ್ಳಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಉಚ್ಚಂಗಿದುರ್ಗ ಹಾಗೂ ಪೂನಭಘಟ್ಟ ಹಾಗೂ ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಕಾರ್ಯಗಳನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕುಂದಾಯ ಸಚಿವರು) –

ಅ) ಮತ್ತು ಆ) ಹೌದು ಪ್ರಸ್ತುತ ಈ ಗ್ರಾಮ : ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿವೆ. ಮುಂದಿನ ವರ್ಷಗಳಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಕುಡಿಯುವ ನೀರಿನ ಯೋಜನೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮತೆಗೆದುಕೊಳ್ಳಲಾಗುವುದು.

ಇ) ಕಾರ್ಯವನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿಯ ವಿವರಗಳು ಈ ಕೆಳಗಿನಂತಿವೆ.

ನಳ ಸರಬರಾಜು ಯೋಜನೆಗೆ ..... 3 ವರ್ಷಗಳು

ಕಿರು ನೀರು ಸರಬರಾಜು ಯೋಜನೆ ಮತ್ತು ಕೈಪಂಪು ಕೊಳವೆ ಬಾವಿ ಯೋಜನೆಗೆ 1 ವರ್ಷ

ಹಳ್ಳಿಗಳಲ್ಲಿ ಯುವಕ ಮಂಡಲಿಗಳ ಸ್ಥಾಪನೆ

950. ಶ್ರೀ ಬಾಬುರಾವ್ ಚವ್ಹಾಣ (ಶಹಾಬಾದ್) :– ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹಳ್ಳಿಗಳಲ್ಲಿ ಯುವಕರು ಯುವಕ ಮಂಡಳ ಕಟ್ಟಡ ಮಂಜೂರು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ ;

ಆ) ಹಾಗಿದ್ದಲ್ಲಿ, ಯುವಕ ಮಂಡಳದ ಕಟ್ಟಡವನ್ನು ಪ್ರತಿಯೊಂದು ಹಳ್ಳಿಗಳಲ್ಲಿ ಕಟ್ಟಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಇ) ಶಹಬಾದ್ ಮತ ಕ್ಷೇತ್ರದ ನಂದರೂ ಗ್ರಾಮಕ್ಕೆ ಯುವಕ ಮಂಡಳದ ಅವಶ್ಯಕತೆ ಇದ್ದು ಸದರಿ ಅವಶ್ಯಕತೆಯನ್ನು ಪೂರೈಸಲಾಗುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಹೌದು

ಆ) ಸ್ವಂತ ನಿವೇಶನವನ್ನು ಹೊಂದಿರುವ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವ ಯುವಕ ಮಂಡಳಿಗೆ ಕಟ್ಟಡ ನಿರ್ಮಾಣ ಮಾಡಲು ಧನ ಸಹಾಯವನ್ನು ನೀಡಲಾಗುತ್ತಿದೆ.

ಇ) ನಂದರೂ ಗ್ರಾಮದ ಯುವಕ ಸಂಘವು ಸ್ವಂತ ನಿವೇಶನ ಹೊಂದಿ ಪ್ರಸ್ತಾವನೆ ಕಳುಹಿಸಿದಲ್ಲಿ, ಧನಸಹಾಯ ಮಂಜೂರು ಮಾಡುವುದನ್ನು ಪರಿಗಣಿಸಲಾಗುವುದು.

ಡಾ. ಬಿ.ಆರ್. ಅಂಬೇಡ್ಕರ್ ಯುವಕ ಸಂಘಗಳ ಸಂಖ್ಯೆ

1015. ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) :– ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕರ್ನಾಟಕ ರಾಜ್ಯದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಯುವಕ ಸಂಘಗಳ ಸಂಖ್ಯೆ ಎಷ್ಟು;

ಆ) ಮೈಸೂರು ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಸಂಘಗಳ ಸಂಖ್ಯೆ ಹಾಗೂ ವಿವರ ನೀಡುವುದು;

ಇ) ಕಾರ್ಯನಿರ್ವಹಿಸುವ ಮತ್ತು ಕಾರ್ಯ ನಿರ್ವಹಿಸದೆ ಇರುವ ಸಂಘಗಳ ಸಂಖ್ಯೆ ಎಷ್ಟು ;
ಈ) ಈ ಸಂಘಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳೇನು ;
ಉ) ಸ್ವಂತ ಕಟ್ಟಡ ಇಲ್ಲದೆ ಇರುವ ಸಂಘ ಸಂಸ್ಥೆಗಳಿಗೆ ಕಟ್ಟಡ ಸೌಲಭ್ಯ ಒದಗಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಾಂಸ್ಕೃತಿಕ ಸಚಿವರು) –

ಅ) 801
ಆ) ಮೈಸೂರು ಜಿಲ್ಲೆಯಲ್ಲಿರುವ ಸಂಘಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

	ತಾಲ್ಲೂಕುಗಳು	ಸಂಘಗಳು
1.	ಟಿ. ನರಸೀಪುರ	10
2.	ಹುಣಸೂರು	13
3.	ಯಳಂದೂರು	22
4.	ಗುಂಡ್ಲುಪೇಟೆ	31
5.	ಕೆ.ಆರ್. ನಗರ	24
6.	ಮೈಸೂರು	32
7.	ಕೊಳ್ಳೇಗಾಲ	11
8.	ಪಿರಿಯಾಪಟ್ಟಣ	5
9.	ಹೆಗ್ಗಡದೇವನಕೋಟೆ	9
10.	ನಂಜನಗೂಡು	18
11.	ಚಾಮರಾಜನಗರ	18
	ಒಟ್ಟು	193

ಇ) ಎಲ್ಲಾ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.
ಈ) ಕ್ರೀಡಾ ಸಲಕರಣೆ ಹಾಗೂ ಸಾಂಸ್ಕೃತಿಕ ಸಲಕರಣೆಗಳನ್ನು ಖರೀದಿಸಲು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ಧನಸಹಾಯವನ್ನು ನೀಡಲಾಗುತ್ತಿದೆ.
ಉ) ಕಟ್ಟಡ ನಿರ್ಮಾಣಕ್ಕಾಗಿ ಧನಸಹಾಯವನ್ನು ನೀಡಲಾಗುತ್ತಿದೆ.

ದೇವರ ಹೊನ್ನಾಳಿ ಹತ್ತಿರ ಇರುವ ಏತ ನೀರಾವರಿ ಯೋಜನೆ

1104. ಶ್ರೀ ಡಿ. ಬಿ. ಗಂಗಪ್ಪ (ಹೊನ್ನಾಳಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿ ಹತ್ತಿರ ನಿರ್ಮಾಣ ಮಾಡಬೇಕಾಗಿರುವ ಏತ ನೀರಾವರಿ ಯೋಜನೆಯನ್ನು ಸರ್ಕಾರ ಪ್ರಸ್ತುತ ವರ್ಷ ಕೈಗೆತ್ತಿಕೊಳ್ಳುವುದೆ ;
ಆ) ಹಾಗಿದ್ದರೆ ಅದೇ ನಿರ್ಮಾಣ ಯಾವ ಹಂತದಲ್ಲಿದೆ; (ತಿಳಿಸುವುದು) ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಇಲ್ಲ.
ಆ) ಉದ್ಭವಿಸುವುದಿಲ್ಲ .

ಸರ್ಕಾರವು ಡಾ|| ಕೆ.ವಿ. ಪುಟ್ಟಪ್ಪನವರಿಗೆ ಭಾರತ ರತ್ನ ಪ್ರಶಸ್ತಿ

999. ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರವು ಡಾ: ಕೆ. ವಿ. ಪುಟ್ಟಪ್ಪನವರಿಗೆ ಭಾರತ ರತ್ನ ಪ್ರಶಸ್ತಿ ಪ್ರಧಾನಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರವು ಡಾ : ಕೆ.ವಿ. ಪುಟ್ಟಪ್ಪನವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಪ್ರಧಾನಿಸಿದೆಯೆ;

ಇ) ಹಾಗಿಲ್ಲದಿದ್ದಲ್ಲಿ ರಾಜ್ಯಸರ್ಕಾರವು ಕೇಂದ್ರ ಸರ್ಕಾರಕ್ಕೆ ಡಾ: ಕೆ. ವಿ. ಪುಟ್ಟಪ್ಪನವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಮಾಡವಲ್ಲಿ ಏನು ಕ್ರಮಕ್ಕೆಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಹೌದು.
ಆ) ಇಲ್ಲ.
ಇ) ಈ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಸೇತುವೆ ದುರಸ್ತಿ

985. ಶ್ರೀ ಆರ್. ಎನ್. ನಾಯ್ಕ (ಭಟ್ಕಳ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹೊನ್ನಾವರದಲ್ಲಿ ರಾಷ್ಟ್ರೀಯ ಹೆದ್ದಾರಿ ಸೇತುವೆ ಕಿಟ್ಟುಹೋಗಿದ್ದು ಅದರ ದುರಸ್ತಿಗಾಗಲಿ ಅಥವಾ ಹೊಸ ಸೇತುವೆ ಕಟ್ಟುವುದಕ್ಕಾಗಲಿ ಸರ್ಕಾರವು ಕ್ರಮ ಕೈಗೊಳ್ಳುವುದೇ;

ಆ) ಸದರಿ ಸೇತುವೆ ಕಟ್ಟಿರುವುದರಿಂದ ವಾಹನಗಳ ಚಾಲನೆಗಾಗಿ ಪರ್ಯಾಯ ವ್ಯವಸ್ಥೆಯ ಉದ್ದೇಶದಿಂದ ಇಡಗುಂಜಿ ಬಳ್ಳೂರ, ಹೆಗ್ಗಾರ ನಗರ ಬಸ್ಸಿಕೇರಿ ರಸ್ತೆಯನ್ನು ಶರಾವತಿ ಟೇಲ್‌ರೇಸ್ ಯೋಜನೆಯ ಸೇತುವೆವರೆಗೆ ದುರಸ್ತಿ ಗೊಳಿಸಿ ಯೋಗ್ಯ ರಸ್ತೆಯನ್ನಾಗಿ ಮಾಡಲು ಸರ್ಕಾರ ಆದೇಶ ಮಾಡಿರುವುದು ನಿಜವಲ್ಲವೆ ;

ಇ) ಹಾಗಿದ್ದಲ್ಲಿ, ಈ ಕೆಲಸ ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :–

ಅ) ಹೌದು
ಆ) ಆದೇಶ ಮಾಡಿಲ್ಲ.
ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ ನಿಂದ ಲೋಕೋಪಯೋಗಿ ಇಲಾಖೆ ವಾಪಸ್ ಪಡೆದ ರಸ್ತೆಗಳ ಬಗ್ಗೆ

1029. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಳ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಎಷ್ಟು ಸಾವಿರ ಕಿಲೋ ಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್‌ನಿಂದ ಸರ್ಕಾರ ವಾಪಸ್ ಪಡೆದಿದೆ ಹಾಗೂ ಇದರ ಉದ್ದೇಶವೇನು;

ಆ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಕಿಲೋ ಮೀಟರ್ ರಸ್ತೆ ವಾಪಸ್ ಪಡೆದಿದೆ;

ಇ) ಕೋಲಾರ ಜಿಲ್ಲೆಯ ಬಂಗಾರು ಪೇಟೆ ತಾಲ್ಲೂಕಿಗೆ ಎಷ್ಟು ಕಿಲೋಮೀಟರ್ ರಸ್ತೆ ವಾಪಸ್ ಪಡೆದಿದೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ 10000 ಕಿ.ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ 50 ಕಿ.ಮೀ ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿ ಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ 18.2.1992 ರಂದು ಹೊರಡಿಸಲಾಗಿದೆ.

ಆ) ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಇ) ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಮೂಡಬಿದ್ರೆ ಕ್ಷೇತ್ರದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು.

955. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮೂಡಬಿದರೆ ಕ್ಷೇತ್ರದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳಿಂದ ನೀರಾವರಿ ಪ್ರಯೋಜನ ಪಡೆಯುವ ಜಮೀನೆಷ್ಟು;

ಇ) ಇದಕ್ಕಾಗಿ ತಗಲುವ ವೆಚ್ಚವೆಷ್ಟು;

ಈ) ಈ ಯೋಜನೆಯ ಕೆಲಸವನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಓ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) 1) ಎಳ್ಳಂಜೆ, ಮಂಗಳೂರು, ತಾಲ್ಲೂಕು
2) ಬಳಕುಂಜೆ, ಮಂಗಳೂರು, ತಾಲ್ಲೂಕು
3) ಜಂಹರಗುಂಡಿ, ಕಾರ್ಕಳ ತಾಲ್ಲೂಕು
4) ಸುರಿಂಜೆ. . . . . (ಮಂಗಳೂರು ತಾಲ್ಲೂಕು)

ಆ) . . . ಯೋಜನೆ . . . . . ಅಚ್ಚುಕಟ್ಟು ಎಕರೆಗಳಲ್ಲಿ

1) ಎಳ್ಳಂಜೆ	200
2) ಬಳಕಂಜೆ	351
3) ಜುಂಹರ ಗುಂಡಿ	225
4) ಸುರಂಜೆ	247
. . ಒಟ್ಟು	1023 ಎಕರೆಗಳು.

ಇ)

1)	ಎಳ್ಳಂಜೆ	ರೂ. 18.60 ಲಕ್ಷ
2)	ಬಳಕುಂಜೆ	ರೂ. 26.57 ಲಕ್ಷ
3)	ಜಂಚರ ಗುಂಡಿ	ರೂ. 24.00 ಲಕ್ಷ
4)	ಸುರಂಜೆ	ರೂ. 26.20 ಲಕ್ಷ
	ಒಟ್ಟು	ರೂ. 95.37 ಲಕ್ಷ

ಈ) ಈ ಯೋಜನೆಗಳು ಏತ ನೀರಾವರಿ ವ್ಯಾಪ್ತಿಯಲ್ಲಿ ಬರುವುದರಿಂದ ನಬಾರ್ಡ್‌ನಿಂದ ಹಣಕಾಸಿನ ನೆರವು ದೊರೆತ ಕೂಡಲೇ ಪ್ರಾರಂಭಿಸಲಾಗುವುದು.

ಕುಣಿಮಳ್ಳಿ ಹಳ್ಳಿ ಬಾಂದರವನ್ನು ವರದಾ ನದಿಗೆ ಕಟ್ಟಲು ಪ್ರಾರಂಭಿಸುವ ಬಗ್ಗೆ

1314. ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಬೇಕು –

ಅ) ಸವಣೂರು ತಾಲ್ಲೂಕು ಕುಣಿಮಳ್ಳಿ ಹಳ್ಳಿ ಬಾಂದಾರವನ್ನು ವರದಾ ನದಿಗೆ ಕಟ್ಟಲು ಎಂದಿನಿಂದ ಪ್ರಾರಂಭಿಸಲಾಯಿತು;

ಆ) ಸದರಿ ಬಾಂದಾರ ಕಟ್ಟಲು ಎಷ್ಟು ಹಣ ಖರ್ಚು ಮಾಡಲಾಗಿದೆ;

ಇ) ಸದರೀ ಬಾಂದಾರವನ್ನು ಇನ್ನು ಎಷ್ಟು ಅವಧಿಯಲ್ಲಿ ಮುಗಿಸಲಾಗುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) 1988 ರಲ್ಲಿ

ಆ) ರೂ. 24.51 ಲಕ್ಷ ಖರ್ಚು ಮಾಡಲಾಗಿದೆ.

ಇ) ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಮುಗಿಸಲಾಗುವುದು.

ಬ್ಯಾಡಗಿ ತಾಲ್ಲೂಕಿನ ಕಾಗಿ ನೆಲೆಯಲ್ಲಿ ಕನಕಪೀಠ ಸ್ಥಾಪನೆಗೆ ಖರ್ಚಾದ ಹಣ

1315. ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) :– ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯಲ್ಲಿ ದಿನಾಂಕ 9.2.92 ರಂದು ಈ ಕನಕಪೀಠ ಸ್ಥಾಪನೆ ಮಾಡಲು ಕರ್ನಾಟಕ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ ;

ಆ) ಸಂತ ಕನಕದಾಸರು ಜನ್ಮಿತ್ತ ಸ್ಥಳ ಶಿಗ್ಗಾಂವ್ ತಾಲ್ಲೂಕ್ ಬಾಡ ಗ್ರಾಮವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಬಾಡ ಗ್ರಾಮದಲ್ಲಿ ಕನಕದಾಸರ ಜನ್ಮಿತ್ತ ಸ್ಥಳದಲ್ಲಿ ಅಭಿವೃದ್ಧಿಪಡಿಸಲು ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು ಮತ್ತು ಅದನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವೆಂದು ಪರಿಗಣಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) ಕನಕ ಪೀಠ ಸ್ಥಾಪನೆಯ ಸಂದರ್ಭದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳಿಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ರೂ. 2.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಹೌದು.

ಇ) ಬಾಡ ಗ್ರಾಮವನ್ನು ಪ್ರವಾಸಿ ಸ್ಥಳವೆಂದು ಗುರುತಿಸಲಾಗಿದ್ದು, ಇದನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು.

ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿ

1001. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯಲ್ಲಿ ಪ್ರವಾಸಿ ತಾಣಗಳನ್ನು ಸರ್ಕಾರ ಗುರುತಿಸಿದೆಯೆ ;

ಆ) ಹಾಗಿದ್ದಲ್ಲಿ ಈ ಪ್ರವಾಸಿ ತಾಣಗಳು ಯಾವುವು; ಮತ್ತು ಎಲ್ಲೆಲ್ಲಿ ಇವೆ ;

ಇ) ಇವುಗಳ ಅಭಿವೃದ್ಧಿಗಾಗಿ ಸರ್ಕಾರ ಕಳೆದ 3 ವರ್ಷಗಳಲ್ಲಿ ಪ್ರತಿವರ್ಷ ಖರ್ಚು ಮಾಡಿರುವ ಹಣವೆಷ್ಟು ;

ಈ) ಈ ಜಿಲ್ಲೆಯಲ್ಲಿ ಹೊಸದಾಗಿ ಪ್ರವಾಸಿ ತಾಣಗಳನ್ನು ಗುರುತಿಸಿರುವ ಬಗ್ಗೆ ಸರ್ಕಾರವು ಯೋಜನೆಯನ್ನೇನಾದರೂ ರೂಪಿಸಿದೆಯೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ಹೌದು.

ಆ) ಬೀದರ್ ಜಿಲ್ಲೆಯಲ್ಲಿ ಗುರುತಿಸಿದ ನಾಲ್ಕು ತಾಣಗಳು, ಅವುಗಳೆಂದರೆ :
1) ಬೀದರ್
2) ಜಲಸಂಪಿ
3) ಬಸವಕಲ್ಯಾಣ
4) ಹುಮ್ನಾಬಾದ್

ಇ) ಇದುವರೆಗೆ ಹುಮ್ನಾಬಾದಿನಲ್ಲಿ ಒಟ್ಟು 3.40 ಲಕ್ಷ ರೂ. ವೆಚ್ಚದಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಮಾಡಿರುವ ವೆಚ್ಚದ ವಿವರ ಕೆಳಕಂಡಂತಿದೆ

1988 – 89	ರೂ. 1.87 ಲಕ್ಷ
1989 – 90	ರೂ. 1.13 ಲಕ್ಷ
1990 – 91	ರೂ. 0.22 ಲಕ್ಷ
1991 – 92	ರೂ. 0.18 ಲಕ್ಷ
	ರೂ. 3.40 ಲಕ್ಷ

ಈ) ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಈಗಾಗಲೇ ಗುರುತಿಸಿರುವ 4 ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಿದ ನಂತರ ಹೊಸ ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದು ಗುರುತಿಸಲು ಕ್ರಮ ಕೈಗೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ಕ್ರೀಡಾ ಇಲಾಖೆಯಿಂದ ಸ್ಟೇಡಿಯಂ ನಿರ್ಮಾಣ

1115. ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) :– ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಬೀದರ್ ಜಿಲ್ಲೆಯಲ್ಲಿ ಕ್ರೀಡಾ ಇಲಾಖೆಯಿಂದ ನಿರ್ಮಿಸಲಾಗಿರುವ ಸ್ಟೇಡಿಯಂಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು) ;

2) ಜಿಲ್ಲೆಯಲ್ಲಿ ಹೊಸದಾಗಿ ಸ್ಟೇಡಿಯಂ ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

3) ಇದ್ದಲ್ಲಿ, ಎಲ್ಲೆಲ್ಲಿ ಸ್ಟೇಡಿಯಂ ನಿರ್ಮಿಸಲಾಗುವುದು ಹಾಗೂ ಅದಕ್ಕೆ ತಗುಲಲಿರುವ ಅಂದಾಜು ವೆಚ್ಚವೆಷ್ಟು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

1) ಬೀದರ್‌ನಲ್ಲಿ ಒಂದು ಜಿಲ್ಲಾ ಕ್ರೀಡಾಂಗಣ ಮಾತ್ರ.
2) ಹೌದು.
3) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯ ಆಶ್ರಯದಲ್ಲಿ ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಯೋಚಿಸಲಾಗಿದೆ. ಪ್ರತಿ ತಾಲ್ಲೂಕು ಕ್ರೀಡಾಂಗಣದ ಅಂದಾಜು ವೆಚ್ಚ ರೂ.15.75 ಲಕ್ಷಗಳು.

ಕಲಾವಿದರು ಹಾಗೂ ಸಾಹಿತಿಗಳಿಗೆ ನೀಡುವ ಮಾಸಾಶನದ ಪ್ರಮಾಣವನ್ನು ಜಾಸ್ತಿ ಮಾಡುವುದು

1116. ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) ಮತ್ತು ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಯುವಜನ ಸೇವಾ, ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಕಲಾವಿದರು ಹಾಗೂ ಸಾಹಿತಿಗಳಿಗೆ ಪ್ರತಿ ತಿಂಗಳು ಎಷ್ಟು ಮಾಸಾಶನವನ್ನು ಸರ್ಕಾರ ನೀಡುತ್ತಿದೆ;
ಆ) ಕಳೆದ ವರ್ಷದಿಂದ ಜನವರಿ 31 ರ ವರೆಗೆ ಇದಕ್ಕಾಗಿ ಖರ್ಚಾದ ಹಣವೆಷ್ಟು ;
ಇ) ಕಲಾವಿದರು ಹಾಗೂ ಸಾಹಿತಿಗಳು ಬಹುತೇಕ ತೊಂದರೆಯಲ್ಲಿದ್ದು ಅವರಿಗೆ ಸರ್ಕಾರ ಈಗ ನೀಡುತ್ತಿರುವ ಮಾಸಾಶನ ಸಾಲುತ್ತಿಲ್ಲವಾದ್ದರಿಂದ ಮಾಸಾಶನವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ;
ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) –

ಅ) 3869 ಜನರಿಗೆ ತಲಾ ರೂ.150.00 ರಂತೆ ತಿಂಗಳಿಗೆ ಒಟ್ಟು ರೂ.5,80,350.00 ಮಾಸಾಶನವನ್ನು ನೀಡಲಾಗುತ್ತಿದೆ.
ಆ) ದಿನಾಂಕ 1.1.91 ರಿಂದ 31.1.92 ರ ವರೆಗೆ ರೂ.75,44,550.00 ಖರ್ಚಾಗಿರುತ್ತದೆ.
ಇ) ಇಲ್ಲ
ಈ) ಆರ್ಥಿಕ ತೊಂದರೆಯಿರುವುದರಿಂದ.

ಬೀದರ್ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸುವುದು

1118. ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಸರ್ಕಾರ ರೂಪಿಸಿದೆ ಹಾಗೂ ಇವುಗಳ ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತಿದೆಯೇ; (ತಾಲ್ಲೂಕುವಾರು ವಿವರಗಳನ್ನು ನೀಡುವುದು) ;
ಆ) ಹಾಗಿದ್ದಲ್ಲಿ, ಪ್ರಸಕ್ತ ಮುಂಗಡಪತ್ರದಲ್ಲಿ ಈ ಎಲ್ಲಾ ಏತ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ಸೇರ್ಪಡೆ ಮಾಡಿ ಅಗತ್ಯವಿರುವ ಹಣವನ್ನು ಬಿಡುಗಡೆ ಮಾಡಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ಕೈ ಗೊಂಡಿದೆ;

ಇ) ಜಿಲ್ಲೆಯಲ್ಲಿ ಏತ ನೀರಾವರಿ ಸೌಲಭ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲದಿರುವುದರಿಂದ ಸರ್ಕಾರ ಆದಷ್ಟು ಬೇಗ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ ಮುಖಾಂತರ ಬೀದರ್ ಜಿಲ್ಲೆಯಲ್ಲಿ 3 ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

1. ಸೈಗಾಂವ್ ಏತ ನೀರಾವರಿ ಯೋಜನೆ - ಭಾಲ್ಕಿ ತಾಲ್ಲೂಕು.
2. ಕೋಹಿನೂರವಾಡಿ ಏತ ನೀರಾವರಿ ಯೋಜನೆ - ಬಸವ ಕಲ್ಯಾಣ ತಾಲ್ಲೂಕು
3. ಗಿಲಿಗಿಲಿ ಏತ ನೀರಾವರಿ ಯೋಜನೆ - ಬಸವಕಲ್ಯಾಣ ತಾಲ್ಲೂಕು.

ಈ ಮೇಲಿನ ಯೋಜನೆಗಳ ಅಂದಾಜಿಗೆ ಮಂಜೂರಾತಿ ದೊರೆತಿರುವುದಿಲ್ಲ.

ಆ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲಾಗುವ ಏತ ನೀರಾವರಿ ಯೋಜನೆಗಳನ್ನು ಮುಂಗಡ ಪತ್ರದಲ್ಲಿ ಸೇರಿಸುವ ಅವಶ್ಯಕತೆ ಬರುವುದಿಲ್ಲ, ಏಕೆಂದರೆ ಯೋಜನಾ ವರದಿಗಳನ್ನು ತಯಾರಿಸಿದೆ. ಬ್ಯಾಂಕ್ ಮುಖಾಂತಾರ ಸಾಲ ಮಂಜೂರಾತಿ ಪಡೆದುಕೊಂಡ ನಂತರ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಹೌದು.

ಯುವಕ -ಯುವತಿ ಮಂಡಲಿಗಳ ಸಂಖ್ಯೆ

231. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಒಟ್ಟು ಅಸ್ತಿತ್ವದಲ್ಲಿರುವ ಯುವಕ ಯುವತಿ ಮಂಡಲಿಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಸರ್ಕಾರವು 1990–91, 91–92ನೇ ಸಾಲಿನಲ್ಲಿ ನಡೆಸಿರುವ ವಿವಿಧ ಹಂತಗಳ ಯುವಜನ ಮೇಳಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು;

ಇ) ಇಂತಹ ಮೇಳದಲ್ಲಿ ಪಾಲ್ಗೊಳ್ಳುವ ಯುವಕರಿಗೆ ಸರ್ಕಾರವು ನೀಡುವ ನೆರವುಗಳೇನು;

ಈ) ಇಂತಹ ನೆರವು ಯುವಕರ ಕೈಸೇರದೆ ದುರುಪಯೋಗವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು) –

ಅ) 14048 ಮಂಡಲಿಗಳು, ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ.

ಜಿಲ್ಲೆಗಳು	ಮಂಡಲಿಗಳು	
	ಯುವಕ	ಯುವತಿ
1. ಉತ್ತರ ಕನ್ನಡ	716	252
2. ದಕ್ಷಿಣ ಕನ್ನಡ	453	78
3. ಚಿತ್ರದುರ್ಗ	702	68
4. ಬೆಂಗಳೂರು ನಗರ	493	10
5. ಬೆಳಗಾಂ	240	28
6. ಗುಲ್ಬರ್ಗಾ	960	28

7.	ಬಳ್ಳಾರಿ	83	14
8.	ಮಂಡ್ಯ	900	114
9.	ಕೊಡಗು	154	29
10.	ಮೈಸೂರು	211	5
11.	ಧಾರವಾಡ	825	55
12.	ಶಿವಮೊಗ್ಗ	962	103
13.	ಚಿಕ್ಕಮಗಳೂರು	800	25
14.	ತುಮಕೂರು	1100	13
15.	ಹಾಸನ	1200	56
16.	ಬೆಂಗಳೂರು ಗ್ರಾಮಾಂತರ	472	30
17.	ರಾಯಚೂರು	900	48
18.	ಬಿಜಾಪುರ	1000	72
19.	ಕೋಲಾರ	1100	75
20.	ಬೀದರ್	530	25
		12,928	1,120

ಅ) ಒಟ್ಟು ರೂ.10.73 ಲಕ್ಷಗಳು.

ಆ) ಯುವಜನ ಮೇಳದಲ್ಲಿ ಭಾಗವಹಿಸುವ ಯುವಕ - ಯುವತಿಯರಿಗೆ ಪ್ರಯಾಣ ಭತ್ಯೆ, ಉಚಿತವಾಗಿ ಊಟ ಮತ್ತು ವಸತಿ ಸೌಕರ್ಯವನ್ನು ನೀಡಲಾಗುತ್ತಿದೆ. ಹಾಗೂ ಭಾಗವಹಿಸಿದ ಬಗ್ಗೆ ದೃಢೀಕೃತ ಪತ್ರ ಮತ್ತು ವಿಜೇತರಿಗೆ ಬಹುಮಾನವನ್ನು ಕೊಡಲಾಗುತ್ತಿದೆ.

ಇ) ಇಲ್ಲ

ಮಂಡ್ಯ ಜಿಲ್ಲೆಯಲ್ಲಿರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳು

232. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮಂಡ್ಯ ಜಿಲ್ಲೆಯಲ್ಲಿರುವ ಸಣ್ಣ ಮತ್ತು ದೊಡ್ಡ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆಯೇ;

ಇ) ನಾಗಮಂಗಲ ತಾಲ್ಲೂಕು ಕೆರೆಗಳ ಅಭಿವೃದ್ಧಿಗೆ ಖರ್ಚಾಗಿರುವ ಹಣವೆಷ್ಟು;

ಈ) ಈ ಕೆರೆಗಳ ಅಂಗಳಗಳನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದರೆ ಸರ್ಕಾರ ಒತ್ತುವರಿ ಮಾಡಿರುವವರ ವಿರುದ್ಧ ಕ್ರಮ ಜರುಗಿಸುವುದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) ಸಣ್ಣ ಮತ್ತು ದೊಡ್ಡ ಕೆರೆಗಳ ಒಟ್ಟು ಸಂಖ್ಯೆ 1028

ಆ) ಅನುದಾನದ ಲಭ್ಯತೆಯ ಮೇಲೆ ಅಗತ್ಯವಿರುವ ಕೆರೆಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶವಿದೆ.

ಇ) ರೂ.8.35 ಲಕ್ಷ.

ಈ) ಬಂದಿದೆ

ಉ) ಒತ್ತುವರಿ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಉಪಾಧ್ಯಕ್ಷರು ಮಂಡಿಸಲಾಯಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :– ದಿನಾಂಕ 10.3.92 ರ ಲಿಖಿತ ಮೂಲಕ ಉತ್ತರಿಸುವ 11ನೇ ಪಟ್ಟಿಯಲ್ಲಿರುವ 88 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳನ್ನು ಹೊರತು ಪಡಿಸಿ, ಇನ್ನುಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ

1478. ಡಾ : ಖ.ಬಿ. ಮಲ್ಕಾರೆಡ್ಡಿ (ಯಾದಗಿರಿ) :– ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಲಾಗಿದೆ ಎನ್ನುವುದು ನಿಜವೇ ? ಹಾಗಿದ್ದಲ್ಲಿ ಯಾವಾಗ ರಚಿಸಲಾಗಿದೆ;

ಆ) ಮಂಡಳಿಯ ಕಾರ್ಯಕರ್ತರು ಮತ್ತು ಸದಸ್ಯರುಗಳಾರು;

ಇ) ಮಂಡಳಿಯು ಅಸ್ತಿತ್ವಕ್ಕೆ ಬಂದಲಾಗಾಯ್ತು ಇಲ್ಲಿಯವರೆಗೆ ಒದಗಿಸಲಾದ ಹಣವೆಷ್ಟು; (ವರ್ಷವಾರು ಸಂಖ್ಯೆಗಳನ್ನು ಒದಗಿಸುವುದು) ;

ಈ) ಮಂಡಳಿಯು ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು; (ವರ್ಷವಾರು ಸಂಖ್ಯೆಗಳನ್ನು ಒದಗಿಸುವುದು) ;

ಉ) ಮಂಡಳಿಯಿಂದ ಇಲ್ಲಿಯವರೆಗೆ ಕೈಗೊಳ್ಳಲಾದ ಕಾರ್ಯಕ್ರಮಗಳು (ಜಿಲ್ಲಾವಾರು ವಿವರಗಳನ್ನು ಕೊಡುವುದು) ;

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)–

ಅ) ಮತ್ತು (ಆ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ರಚನೆ ಬಗ್ಗೆ ಮಸೂದೆ ಅಂಗೀಕೃತವಾಗಿದ್ದು, ಕಾಯ್ದೆಯನ್ನು ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಮಂಡಳಿಯ ರಚನೆ ಮತ್ತು ಎಂದಿನಿಂದ ಕಾಯ್ದೆ ಜಾರಿಗೆ ಬರುತ್ತದೆ ಎಂಬುದರ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಇ) ಮತ್ತು (ಈ) ಒದಗಿಸಲಾದ ಮತ್ತು ಖರ್ಚು ಮಾಡಲಾದ ಹಣದ ವಿವರ :

ಹಣ (ಕೋಟಿ ರೂ.ಗಳಲ್ಲಿ)

	ಒದಗಿಸಲಾದ	ಖರ್ಚು ಮಾಡಿದ
1989–90	0.10	0.02
1990–91	50.00	50.09
1991–92	50.00	35.25

(ದಿನಾಂಕ 15.2.92 ರವರೆಗೆ)

ಉ) ಕಾರ್ಯಕ್ರಮಗಳಿಗೆ ಕೊಡಲಾದ ವರ್ಷವಾರು ಮತ್ತು ವಲಯವಾರು ಅನುದಾನಗಳನ್ನೊಳಗೊಂಡ ತಖ್ತೆಯನ್ನು ಲಗತ್ತಿಸಲಾಗಿದೆ.

1990–91 ಮತ್ತು 1991–92ರ ಸಾಲುಗಳಲ್ಲಿ ಹೈದ್ರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕಾಮಗಾರಿಗಳಿಗಾಗಿ ವಲಯವಾರು ಖರ್ಚು ಮಾಡಿರುವ ವಿವರದ ಪಟ್ಟಿ.

ಕ್ರಮ ಸಂಖ್ಯೆ	ವಲಯಗಳ ಹೆಸರು	ವೆಚ್ಚ (ಲಕ್ಷ ರೂ.ಗಳಲ್ಲಿ) 1990–91	1991–92 (15.2.92 ರ ವರೆಗೆ)
1.	ಶಿಕ್ಷಣ	642.043	521.51
2.	ಸಹಕಾರ	935.00	–
3.	ಜಿಲ್ಲಾ ಪರಿಷತ್ (ಶಾಸಕರ ಕ್ಷೇತ್ರಾವಾರು ಕಾಮಗಾರಿಗಳು)	600.00	635.20
4.	ಬಾರಿ ಮತ್ತು ಮಧ್ಯಮ ನೀರಾವರಿ	–	220.56
5.	ಸಣ್ಣ ನೀರಾವರಿ	156.79	121.84
6.	ರಸ್ತೆ ಮತ್ತು ಸೇತುವೆಗಳು	577.43	893.05
7.	ಗ್ರಾಮೀಣ ನೀರು ಸರಬರಾಜು ಯೋಜನೆ.	34.98	217.00
8.	ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ	966.49	589.73
9.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ	294.59	121.46
10.	ವಿದ್ಯುದ್ದೀಕರಣ ಕಾರ್ಯಕ್ರಮ	569.38	200.00
11.	ಸಿಬ್ಬಂದಿ	–	2.00
	ಒಟ್ಟು	5009.543	3522.35

1987 ರಿಂದ 92 ರವರೆಗೆ ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹಿಸಲಾದ ಹಣ.

1474. ಡಾ|| ಎ.ಬಿ. ಮಲಕರೆಡ್ಡಿ (ಯಾದಗಿರಿ) :– ಮಾನ್ಯ ಸಣ್ಣ ಉಳಿತಾಯ ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸಣ್ಣ ಉಳಿತಾಯ ಯೋಜನೆ ಮೂಲಕ 1987–88 ರಿಂದ 1991–92 ರವರೆಗೆ ಸಂಗ್ರಹಿಸಿದ ಹಣವೆಷ್ಟು (ವರ್ಷವಾರು ವಿವರಗಳನ್ನು ನೀಡುವುದು) ;

ಆ) ಮೇಲಿನ ವರ್ಷಗಳಲ್ಲಿ ರಾಜ್ಯ ಸರ್ಕಾರಕ್ಕೆ ವರ್ಗವಾಗಿರುವ ಹಣವೆಷ್ಟು ;

ಇ) ಮೇಲಿನ ವರ್ಷಗಳಲ್ಲಿ ಏಜೆಂಟರು : ಅಧಿಕಾರಿಗಳಿಗೆ ಕಮೀಷನ್ ಪ್ರೋತ್ಸಾಹಕ ಬಹುಮಾನ ಏನಾದರೂ ಇದ್ದರೆ ಅವುಗಳನ್ನು ನೀಡಿದುದರ ವಿವರ ?

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಸಚಿವರು) –

ಅ) ಸಣ್ಣ ಉಳಿತಾಯ ಯೋಜನೆಯಲ್ಲಿ 1987–88 ರಿಂದ 1991–92ರ ವರೆಗೆ ಸಂಗ್ರಹಿಸಿದ ಸಂಗ್ರಹಣಾ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ವರ್ಷ	ಒಟ್ಟು (ರೂ. ಕೋಟಿಗಳಲ್ಲಿ)
1987–88	603.03
1988–89	732.83
1989–90	972.69
1990–91	806.18
1991–92 (ದಿನಾಂಕ 31.1.92 ರವರೆಗೆ)	551.61

ಆ) ವರ್ಷ ಕೇಂದ್ರ ಸರ್ಕಾರದಿಂದ ಬಗರ್ವಾದ ಸಾಲ (ರೂ. ಕೋಟಿಗಳಲ್ಲಿ)

1987–88	142.99
1988–89	181.44
1989–90	372.76
1990–91	252.74
1991–92	205.77

(ದಿನಾಂಕ 30.11.91 ರವರೆಗೆ)

ಇ) ಏಜೆಂಟರುಗಳಿಗೆ : ಕೇಂದ್ರ ಸರ್ಕಾರದಿಂದ ಸಣ್ಣ ಉಳಿತಾಯದ ಅಧಿಕೃತ ಏಜೆಂಟರುಗಳು ಒಂದು ಆರ್ಥಿಕ ವರ್ಷದಲ್ಲಿ ಸಂಗ್ರಹಣೆಗನುಗುಣವಾಗಿ ಶೇ.0.5 ರಿಂದ 5 ರವರೆಗೆ ಕಮೀಷನ್ ನೀಡಲಾಗುತ್ತಿದೆ.

ಪ್ರೋತ್ಸಾಹ ಬಹುಮಾನದ ಬಗ್ಗೆ ಏಜೆಂಟರುಗಳಿಗೆ ನೀಡಿದ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

ವರ್ಷ	ಏಜೆಂಟರುಗಳಿಗೆ ನೀಡಿದ ಪ್ರೋತ್ಸಾಹ ಬಹುಮಾನದ ಮೊತ್ತ
1987–88	ರೂ. 1,01,00,000
1988–89	ರೂ. 1,42,50,000
1989–90	ರೂ. 1,40,00,000
1990–91	ರೂ. 1,19,00,000
1991–92	ರೂ. 1,62,00,000

ಅಧಿಕಾರಿ ಮತ್ತು ನೌಕರರುಗಳಿಗೆ

ಅಧಿಕಾರಿ ಮತ್ತು ನೌಕರರುಗಳು ಸಣ್ಣ ಉಳಿತಾಯ ಯೋಜನೆಯನ್ವಯ ಸಂಗ್ರಹಣೆಗನುಗುಣವಾಗಿ ರೂ.200 ರಿಂದ ರೂ.3,000 ವರೆಗಿನ ಪ್ರೋತ್ಸಾಹಕ ಬಹುಮಾನಗಳನ್ನು ಸಹ ಸರ್ಕಾರವು ಮಂಜೂರು ಮಾಡಲಾಗುವುದು ಅವುಗಳ ವಿವರ ಈ ಕೆಳಗಿನಂತಿದೆ.

ವರ್ಷ	ಅಧಿಕಾರಿ : ನೌಕರರುಗಳಿಗೆ ನೀಡಿದ ಪ್ರೋತ್ಸಾಹಕ ಬಹುಮಾನದ ಮೊತ್ತ
1987–88	ರೂ. 6,06,800
1988–89	ರೂ. 11,74,300
1989–90	ರೂ. 14,79,500
1990–91	ರೂ. 11,33,850
1991–92	ರೂ. 13,98,750

ಭ್ರಷ್ಟಾಚಾರವೆಸಗಿದ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ

1142. ಶ್ರೀ ಗುರುಪಾದಪ್ಪ ನಾಗಾರಪಳ್ಳಿ (ಔರಾದ್) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಭ್ರಷ್ಟಾಚಾರ ಅಥವಾ ಕರ್ತವ್ಯ ಲೋಪ ಮಾಡಿರುವ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು

ಆ) ಹಾಗಿದ್ದಲ್ಲಿ ಆ ಅಧಿಕಾರಿಗಳ ಹೆಸರುಗಳ ವಿವರ ನೀಡುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಭ್ರಷ್ಟಾಚಾರ ಆರೋಪಕ್ಕೊಳಗಾದ ಅಧಿಕಾರಿಗಳು - 2
ಕರ್ತವ್ಯಲೋಪ ಆರೋಪಕ್ಕೊಳಗಾದ ಅಧಿಕಾರಿಗಳು - 3

ಆ) ಭ್ರಷ್ಟಾಚಾರದ ಆಪಾದನೆಗಳಿಗಾದ ಅಧಿಕಾರಿಗಳ ಹೆಸರು

1) ಶ್ರೀ ಎನ್. ಅಚ್ಚುತರಾವ್
2) ಶ್ರೀ ಪದಮ್ ಕುಮಾರ್ ಗರ್ಗ್.

ಕರ್ತವ್ಯಲೋಪ ಆಪಾದನೆಗೊಳಗಾದ ಅಧಿಕಾರಿಗಳ ಹೆಸರು

1) ಶ್ರೀ ಸುಭಾಷ್ ಭರಣೆ
2) ಶ್ರೀ ಸುಭಾಷ್ ಚಂದ್ರ
3) ಶ್ರೀ ಬಿ.ಇ. ಉಮಾಪತಿ

ಬೆಂಗಳೂರು ನಗರ ಬಿಟ್ಟು ಬೇರೆ ಕಡೆ ಮಂತ್ರಿಮಂಡಲದ ಕ್ಯಾಬಿನೆಟ್ ಮೀಟಿಂಗ್ ನಡೆಸುವ ಬಗ್ಗೆ

1382. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಂಗಳೂರು ನಗರ ಬಿಟ್ಟು ರಾಜ್ಯದ ಬೇರೆ ಸ್ಥಳಗಳಲ್ಲಿ ಈ ಹಿಂದೆ ಮಂತ್ರಿ ಮಂಡಲದ ಸಚಿವ ಸಂಪುಟದ ಸಭೆಗಳನ್ನು ನಡೆಸಲಾಗುತ್ತಿತ್ತು ಎಂಬ ಸಂಗತಿ ನಿಜವೆ;

ಆ) ಹಾಗಿದ್ದಲ್ಲಿ ಸರ್ಕಾರದವರು ಬೆಂಗಳೂರು ನಗರವನ್ನು ಬಿಟ್ಟು ರಾಜ್ಯದಲ್ಲಿರುವ ಬೇರೆ ಸ್ಥಳಗಳಲ್ಲಿ ಮಂತ್ರಿ ಮಂಡಲದ ಸಭೆಗಳನ್ನು ನಡೆಸುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಹೌದು 1981 ಮತ್ತು 82ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಚಿವ ಸಂಪುಟದ ಸಭೆಗಳನ್ನು ನಡೆಸಲಾಯಿತು.

1) ದಿನಾಂಕ 21.9.1981 ರಂದು ಬೆಳಗಾವಿಯಲ್ಲಿ,
2) ದಿನಾಂಕ 22.10.1981 ರಂದು ಗುಲ್ಬರ್ಗಾದಲ್ಲಿ,
3) ದಿನಾಂಕ 27.11.1981 ರಂದು ಮೈಸೂರಿನಲ್ಲಿ,
4) ದಿನಾಂಕ 19.2.1982 ರಂದು ಶಿವಮೊಗ್ಗದಲ್ಲಿ,

ಆ) ಇಲ್ಲ .

ಬೆಂಗಳೂರು ನಗರ ಬಿಟ್ಟು ಉತ್ತರ ಕರ್ನಾಟಕ ಬೆಳಗಾವಿ ಅಥವಾ ಹುಬ್ಬಳ್ಳಿಯಲ್ಲಿ ವಿಧಾನ ಸಭೆ ಅಧಿವೇಶನವನ್ನು ನಡೆಸುವ ಬಗ್ಗೆ

1384. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಂಗಳೂರು ನಗರ ಬಿಟ್ಟು ರಾಜ್ಯದ ಬೇರೆ ಕಡೆಗೆ ಉತ್ತರ ಕರ್ನಾಟಕದ ಮುಖ್ಯ ಸ್ಥಳವಾದ ಬೆಳಗಾವಿ ಅಥವಾ ಹುಬ್ಬಳ್ಳಿಯಲ್ಲಿ ಕರ್ನಾಟಕ ವಿಧಾನಸಭೆಯ ಅಧಿವೇಶನವನ್ನು ನಡೆಸಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿವೆಯೇ;

ಬ) ಹಾಗಿದ್ದಲ್ಲಿ, ಸರ್ಕಾರದವರು ಬೆಂಗಳೂರು ನಗರ ಬಿಟ್ಟು ರಾಜ್ಯದ ಬೇರೆ ಜಿಲ್ಲಾ ಸ್ಥಳದಲ್ಲಿ ಕರ್ನಾಟಕ ವಿಧಾನಸಭೆ ಅಧಿವೇಶನ ನಡೆಸುವ ಕುರಿತು ಯಾವ ಕ್ರಮವನ್ನು ಕೈಗೊಂಡಿರುವರು ;

ಇ) ಬೇರೆ ರಾಜ್ಯಗಳಲ್ಲಿ ರಾಜಧಾನಿಯ ಹೊರತಾಗಿ ಬೇರೆ ಸ್ಥಳದಲ್ಲಿ ಯಾವ ಯಾವ ರಾಜ್ಯಗಳು ವಿಧಾನಸಭೆಯ ಅಧಿವೇಶನವನ್ನು ನಡೆಸುತ್ತಿರುವರು, (ಆಯಾ ರಾಜ್ಯಗಳ ಹೆಸರುಗಳನ್ನು ಹಾಗೂ ವಿವರಗಳನ್ನು ನೀಡುವುದು) ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಇಲ್ಲ.

ಆ) 'ಅ' ದಲ್ಲಿ ನೀಡಿರುವ ಉತ್ತರದ ಮೇರೆಗೆ ಉದ್ಭವಿಸುವುದಿಲ್ಲ.

ಇ) ಮಾಹಿತಿ ಬಂದಿರುವ ರಾಜ್ಯಗಳ ಪೈಕಿ ಮಹಾರಾಷ್ಟ್ರ ರಾಜ್ಯದ ನಾಗಪುರದಲ್ಲಿ ವಿಧಾನಸಭೆಯ ಒಂದು ಅಧಿವೇಶನವನ್ನು ನಡೆಸಲಾಗುತ್ತಿದೆ.

ಹೊಸದಾಗಿ ಕೊಂಡ ಕಾಂಟೇಸ್ಸ ಕಾರುಗಳ ಸಂಖ್ಯೆ

1166. ಶ್ರೀ ಬಸವರಾಜಪಾಟೀಲ್ ಆಟ್ಟೂರ್ (ಬಸವ ಕಲ್ಯಾಣ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ರಾಜ್ಯ ಸರ್ಕಾರ ಮಂತ್ರಿಗಳಿಗಾಗಿ ಕೊಂಡುಕೊಂಡ ಹೊಸ ಕಾಂಟೇಸ್ಸ ಕಾರುಗಳ ಸಂಖ್ಯೆ ಎಷ್ಟು ;

2) ಇವುಗಳಿಗಾದ ಖರ್ಚೆಷ್ಟು ;

3) ಇವುಗಳನ್ನು ತೆಗೆದುಕೊಂಡ ಅವಶ್ಯಕತೆ ಏನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

1) 33 (1990 – 91 19)
. . (1991 – 92 14)

2) ರೂ. 1,00,68,372.94

3) 1956ರ ಕರ್ನಾಟಕ ಸಚಿವರ ಸಂಬಳ ಮತ್ತು ಭತ್ಯೆಗಳ ಅಧಿನಿಯಮಾನುಸಾರ ಪ್ರತಿಯೊಬ್ಬ ಸಚಿವರು, ರಾಜ್ಯ ಸಚಿವರು ಹಾಗೂ ಉಪ ಸಚಿವರು ತಮ್ಮ ಬಳಕೆಗಾಗಿ ಒಂದು ಕಾರನ್ನು ಹೊಂದಲು ಅರ್ಹರಾಗಿರುತ್ತಾರೆ. ಅದರನ್ವಯ ಸಚಿವರುಗಳ ಉಪಯೋಗಕ್ಕಾಗಿ ಕಾಂಟೇಸ್ಸ ಕ್ಲಾಸಿಕ್ ಕಾರುಗಳನ್ನು ಖರೀದಿಸಲಾಗಿದೆ. ಈ ವಾಹನಗಳು ಪ್ರತಿ ಲೀಟರ್ ಪೆಟ್ರೋಲ್‌ಗೆ ಅಂಬಾಸಿಡರ್ ಕಾರಿಗಿಂತ ಉತ್ತಮ ಮೈಲೇಜ್ ನೀಡುತ್ತಿದ್ದು, ದೂರ ಪ್ರವಾಸಕ್ಕೆ ಅನುಕೂಲವೆಂದು ಕಂಡು ಬಂದಿರುವುದರಿಂದ ಈ ವಾಹನಗಳನ್ನು ಖರೀದಿಸಲಾಗಿದೆ.

ಬೆಂಗಳೂರು ಕೇಂದ್ರ ಕಾರಾಗೃಹದ ಸ್ಥಳಾಂತರ

1210. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ;– ಮಾನ್ಯ ಬಂಧಿಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಬೆಂಗಳೂರು ಕೇಂದ್ರ ಕಾರಾಗೃಹವನ್ನು ಬೇರೆಡೆಗೆ ಸ್ಥಳಾಂತರ ಮಾಡುವ ಕೆಲಸವು ಯಾವ ಹಂತದಲ್ಲಿದೆ ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) –

ಬೆಂಗಳೂರಿನ ದಕ್ಷಿಣ ತಾಲ್ಲೂಕಿನ ಹರಪ್ಪನ ಅಗ್ರಹಾರದಲ್ಲಿ ನೂತನ ಕಾರಾಗೃಹದ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ. ಪ್ರಸ್ತುತ ಕಾರಾಗೃಹದ ಮುಖ್ಯ ಗೋಡೆ ನಿರ್ಮಾಣ ಸಂಪರ್ಕ ರಸ್ತೆ, ಅಡುಗೆ ಮನೆಯ ಕಟ್ಟಡ, 9 ಬ್ಯಾರಾಕ್‌ಗಳು ಹಾಗೂ ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣ ಅಂತಿಮ ಮಟ್ಟದಲ್ಲಿದೆ.

ಇನ್ನೂ ಶಾಲಾ ಕಟ್ಟಡ, ಅಂಗಡಿ, ಮಳಿಗೆಗಳು, ಆಸ್ಪತ್ರೆ ಕಟ್ಟಡ, ಕ್ವಾರಂಟೇನ್ ಬ್ಯಾರಾಕ್ಕು, ಮಹಿಳಾ ಬ್ಯಾರಾಕ್ಕು, ಆಡಳಿತ ಕಛೇರಿ ಭದ್ರತಾ ಬಂಧಿಗಳ ವಿಭಾಗ ಗುಂಡುಗಳ ಕೊಠಡಿ ಪಹರೆ ಸಿಬ್ಬಂದಿ ಕೊಠಡಿ, ನೇಣುಗಂಬ ಮತ್ತು ಭದ್ರತೆ ವಿಭಾಗ, ವಾಚನಾಲಯ, ಭಯಲು ರಂಗ ಮಂದಿರ, ಕೇಂದ್ರ ವೀಕ್ಷಣಾ ಗೋಪುರ ಮತ್ತು ಮೇಲ್ಚಟ್ಟದ ನೀರಿನ ಸಂಗ್ರಹಾಲಯ ಮುಂತಾದ ಕಾಮಗಾರಿ ಕೈಗೊಳ್ಳಬೇಕಾಗಿದೆ.

ಈ ಕಟ್ಟಡ ಸಂಪೂರ್ಣವಾಗಿ ಪೂರ್ಣಗೊಂಡ ನಂತರ ಹಾಲಿ ಬೆಂಗಳೂರಿನಲ್ಲಿರುವ ಕೇಂದ್ರ ಕಾರಾಗೃಹವನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ರಾಜ್ಯ ಲಾಟರಿ ಬಗ್ಗೆ

1209. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ರಾಜ್ಯ ವಿಮಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಕರ್ನಾಟಕ ರಾಜ್ಯ ಲಾಟರಿಯನ್ನು ಸರ್ಕಾರ ನಿಲ್ಲಿಸುವುದು ಒಳ್ಳೆಯದಲ್ಲವೆ?

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ ರಾಜ್ಯ ಸಚಿವರು) :–

ಸದ್ಯದಲ್ಲಿ ಮಾರುಕಟ್ಟೆಯಲ್ಲಿ ಇತರ ರಾಜ್ಯಗಳ ಲಾಟರಿ ಟಿಕೇಟುಗಳ ಮಾರಾಟವಾಗುವ ಪರಿಸ್ಥಿತಿಯನ್ನು ಗಮನಿಸಿದಾಗ ಕರ್ನಾಟಕ ರಾಜ್ಯ, ಲಾಟರಿಯನ್ನು ನಿಲ್ಲಿಸುವುದು ಸೂಕ್ತವಲ್ಲವೆನಿಸುತ್ತದೆ.

ಸಂಪುಟದ ಸಚಿವರುಗಳು ಪಡೆದಿರುವ ಪ್ರವಾಸ ಭತ್ಯೆ

1211. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಮುಖ್ಯ ಮಂತ್ರಿಗಳು, ಮಂತ್ರಿಗಳು ರಾಜ್ಯ ಮಂತ್ರಿಗಳು ಇದುವರೆಗೆ ಪಡೆದಿರುವ ಪ್ರವಾಸ ಭತ್ಯೆ ಎಷ್ಟು ;
2) ಇವರುಗಳು ಮನೆಗಳಿಗೆ ಪಿಠೋಪಕರಣಗಳಿಗಾಗಿ ಮಾಡಿರುವ ಖರ್ಚೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

1) ರೂ.31,64,226.00 (1991–92ರ ಡಿಸೆಂಬರ್ 1991ರ ಅವಧಿಗೆ)
2) ರೂ. 49,14,290.00 (1991–92 ರ ಡಿಸೆಂಬರ್ 1991 ರ ಅವಧಿಗೆ)

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಆಯ್ಕೆಯ.

1172. ಶ್ರೀ ಬಸವರಾಯ ರಾಯರೆಡ್ಡಿ (ಯಲ್ಬುರ್ಗಿ) :– ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1989–90, 1990–91 ಮತ್ತು 1991–92 ನೇ ಸಾಲುಗಳಿಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಒದಗಿಸಿದ ಒಟ್ಟು ಹಣವೆಷ್ಟು ;
(ಜಿಲ್ಲಾವಾರು ಮತ್ತು ವಲಯವಾರು ವಿವರಗಳನ್ನು ನೀಡುವುದು) ;

ಆ) ಪ್ರತಿ ವಲಯದಲ್ಲಿ ಖರ್ಚು ಮಾಡಿದ ಹಣ (ಜಿಲ್ಲಾವಾರು ವರ್ಷಾವಾರು ಮಾಹಿತಿಯನ್ನು ಒದಗಿಸುವುದು) ;

ಇ) ಹಣ ಖರ್ಚು ಮಾಡದಿರಲು ಕಾರಣಗಳೇನು ;

ಈ) ಸಕಾಲದಲ್ಲಿ ಹಣ ವಿನಿಯೋಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) –

ಅ) ಒಟ್ಟು ಮಂತಿಗೆಯಾಗಿ ಆಯವ್ಯಯದಲ್ಲಿ ತೋರಿಸಿದ ವರ್ಷಾವಾರು ವಿವರಗಳನ್ನು ಕೆಳಗೆ ಕೊಡಲಾಗಿದೆ.

1989 – 90	0.10 ಕೋಟಿ ರೂ.ಗಳು
1990 – 91	50.09 ಕೋಟಿ ರೂ.ಗಳು
1991 – 92	50.00 ಕೋಟಿ ರೂ.ಗಳು.

ಆ) 1990–91 ಮತ್ತು 1991–92ನೇ ಸಾಲುಗಳಿಗೆ ಜಿಲ್ಲಾವಾರು ಮತ್ತು ವಲಯವಾರು ವಿವರಗಳನ್ನು ಲಗತ್ತಿಸಲಾಗಿದೆ.

ಇ) 1990–91 ರಲ್ಲಿ ಆಯವ್ಯಯದಲ್ಲಿ ಒದಗಿಸಿದ ಪೂರ್ತಿ ಹಣವನ್ನು ಖರ್ಚು ಮಾಡಲಾಗಿದೆ.

ಈ) 1991–92ರಲ್ಲೂ ಕೂಡ ಆಯವ್ಯಯದಲ್ಲಿ ಒದಗಿಸಿದ ಪೂರ್ತಿ ಹಣವನ್ನು ಖರ್ಚು ಮಾಡಲು ಉದ್ದೇಶಿಜಲಾಗಿದೆ.

ನಿವೇಶನಕ್ಕಾಗಿ ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ

157. ಶ್ರೀ ಅಂಜನಮೂರ್ತಿ (ನೆಲಮಂಗಲ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಮತ್ತು ಖಾಲಿ ನಿವೇಶನಗಳಿಗಾಗಿ ಸಾವಿರಾರು ಅರ್ಜಿಗಳು ಸಾರ್ವಜನಿಕರಿಂದ ಬಂದಿರುವುದು ಹಾಗೂ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬೆಂಗಳೂರು ಜಿಲ್ಲಾ ವ್ಯಾಪ್ತಿಗೆ ಸೇರಿದ ಎಷ್ಟು ಜಮೀನುಗಳನ್ನು ಸರ್ಕಾರ ಹಸಿರು ವಲಯ (ಗ್ರೀನ್ ಬೆಲ್ಟ್) ಎಂದು ಘೋಷಿಸಿದೆ ;

ಇ) ಹೀಗೆ ಘೋಷಿಸಿದ್ದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜಮೀನುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಾರದೆ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಹಸಿರು ವಲಯ ಪ್ರದೇಶದಲ್ಲಿ ಸುಲಭವಾಗಿ ಜಮೀನು ಪಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಹೌದು.
ಬ) 83,972 ಹೆಕ್ಟೇರುಗಳು ಅಥವಾ 839.72 ಚ. ಕಿ.ಮೀ.
ಇ) ಹೌದು.
ಈ) ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ ತಿದ್ದುಪಡಿ ಮಾಡಿರುವುದರಿಂದ ಭೂ ಉಪಯೋಗ ಬದಲಾವಣೆಗೆ ಅವಕಾಶವಿರುತ್ತದೆ. ಅದರಂತೆ ಎಲ್ಲಿ ಜಮೀನುಗಳು ವಸತಿ ಉಪಯೋಗಕ್ಕಾಗಿ ಸೂಕ್ತವಾಗಿದೆಯೋ ಅಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಅವಕಾಶವಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎರಡು ಬಡಾವಣೆಗಳಲ್ಲಿಯು ಹಸಿರು ಪಟ್ಟಿಯಲ್ಲಿರುವ ಭಾಗಗಳನ್ನು ವಸತಿ ವಲಯವನ್ನಾಗಿ ಬದಲಾವಣೆ ಮಾಡಲು ಪ್ರಾಧಿಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ

158. ಶ್ರೀ ಅಂಜನಾಮೂರ್ತಿ (ನೆಲಮಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದ್ಯಕ್ಕೆ ಎಷ್ಟು ಖಾಲಿ ನಿವೇಶನಗಳನ್ನು ಹೊಂದಿದೆ ? (1) ವಾಸದ ನಿವೇಶನಗಳು (2) ಕೈಗಾರಿಕಾ ನಿವೇಶನಗಳು ಹಾಗೂ (3) ಮೂಲೆ ನಿವೇಶನಗಳು (ವಿವರಗಳನ್ನು ನೀಡುವುದು)
ಬ) ಇವುಗಳ ವಿತರಣೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) 6,365

1)	ವಾಸದ ನಿವೇಶನಗಳು	3,167
2)	ಕೈಗಾರಿಕಾ ನಿವೇಶನಗಳು	11
3)	ಮೂಲೆ ನಿವೇಶನಗಳು	3,187
	ಒಟ್ಟು	6,365

ಬ) ಮನೆ ನಿವೇಶನಗಳಲ್ಲಿ ಎರಡು ಬಗೆ ಇರುತ್ತದೆ. (1) ಮಧ್ಯಮ ನಿವೇಶನಗಳು (2) ಬಿಡಿ ನಿವೇಶನಗಳು. ಸರ್ಕಾರದ ಮಾರ್ಗದರ್ಶನದಂತೆ ಶೇ.40 ಬಿಡಿ ನಿವೇಶನಗಳನ್ನು ಪರಿಶೀಲಿಸಿ ಸಾರ್ವಜನಿಕರ ಮುಂದೆ ಹರಾಜು ಮಾಡಲಾಗುತ್ತಿದೆ. ಉಳಿದ ಮಧ್ಯಮ ಶೇ.60 ನಿವೇಶನಗಳನ್ನು ಸರ್ಕಾರ ಹೊರಡಿಸಿರುವ ಅನುದೇಶಗಳ ಪ್ರಕಾರ ಹಂಚಿಕೆ ಮಾಡಲಾಗುತ್ತಿದೆ. ಕೈಗಾರಿಕಾ ನಿವೇಶನಗಳನ್ನು ನಿಯಮಾವಳಿಗಳ ರೀತ್ಯ ಅರ್ಹ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಪ್ರಾಧಿಕಾರದಿಂದ ಮೂಲೆ ನಿವೇಶನಗಳನ್ನು ನಿಯಮಾವಳಿಗಳ ರೀತ್ಯ ಸಾರ್ವಜನಿಕರ ಮುಂದೆ ಹರಾಜ ಮಾಡಬೇಕಾಗಿದೆ, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಉಪ-ಸಭಾಧ್ಯಕ್ಷಣೆಯವರು :- ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಂ. ವೀರಪ್ಪ ಮೊಯಿಲಿ ಶಿಕ್ಷಣ ಸಚಿವರು ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಅವರ ಪರವಾಗಿ :–

1964ನೇ ಸಾಲಿನ ಭೂ ಕಂದಾಯ ಅಧಿನಿಯಮದ 194 (2) ನೇ ಕಲಮಿನ ಮೇರೆಗೆ

ಅ) ಅಧಿಸೂಚನೆ ಸಂಖ್ಯೆ ಆರ್. ಡಿ. 91 ಟಿಆರ್‌ಎಂ 91 ದಿನಾಂಕ 24.7.1991

ಚಿತ್ರದುರ್ಗ ಜಿಲ್ಲೆ ಜಗಳೂರು ತಾಲ್ಲೂಕಿನ 170 ಗ್ರಾಮಗಳಿಗೆ 1990–91ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ;

ಆ) ಅಧಿಸೂಚನೆ ಸಂಖ್ಯೆ ಆರ್. ಡಿ. 136 ಟಿಆರ್‌ಎಂ 91 ದಿನಾಂಕ 24.7.1991

ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ 141 ಗ್ರಾಮಗಳಿಗೆ 1990–91ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ;

ಇ) ಅಧಿಸೂಚನೆ ಸಂಖ್ಯೆ ಆರ್. ಡಿ. 192 ಟಿಆರ್‌ಎಂ 91 ದಿನಾಂಕ 2.11.1991

ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ 29 ಗ್ರಾಮಗಳಿಗೆ 1990–91ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ;

ಈ) ಅಧಿಸೂಚನೆ ಸಂಖ್ಯೆ ಆರ್. ಡಿ. 163 ಟಿಆರ್‌ಎಂ 91 ದಿನಾಂಕ 17.1.1992

ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನ 395 ಗ್ರಾಮಗಳಿಗೆ 1990–91ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ;

ಉ) ಅಧಿಸೂಚನೆ ಸಂಖ್ಯೆ ಆರ್. ಡಿ. 109 ಟಿಆರ್‌ಎಂ 91 ದಿನಾಂಕ 2.12.1991

ಧಾರವಾಡ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ 3 ಗ್ರಾಮಗಳಿಗೆ 1988–89ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ;

ಊ) ಅಧಿಸೂಚನೆ ಸಂಖ್ಯೆ ಆರ್. ಡಿ. 99 ಟಿಆರ್‌ಎಂ 91 ದಿನಾಂಕ 24.8.1991

ಧಾರವಾಡ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ 33 ಗ್ರಾಮಗಳಿಗೆ 1987–88 ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಬಗೆಗಿನ ಅಧಿಸೂಚನೆಗಳನ್ನು ಸಭೆಯ ಮುಂದಿಡುವುದು.

1983 ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಅಧಿನಿಯಮದ 309(3)ನೇ ಕಲಮಿನ ಮೇರೆಗೆ :

1990–91ನೇ ಸಾಲಿನ ಬಳ್ಳಾರಿ ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಕ್ರಮ ಕೈಗೊಂಡಿರುವ ವಿವರಣೆಯನ್ನು ಸಭೆಯ ಮುಂದಿಡುವುದು.

ಉಪಾಧ್ಯಕ್ಷರೆಯವರು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ — (ಶಿಕ್ಷಣ ಸಚಿವರು) –

2. ಶ್ರೀಮತಿ ಮನೋರಮಾ ಮಧ್ವರಾಜ್ (ಸಣ್ಣ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು) ಅವರ ಪರವಾಗಿ

1956ನೇ ಸಾಲಿನ ಕಂಪನಿಗಳ ಅಧಿನಿಯಮದ 619(ಎ) ಕಲಮಿನ ಮೇರೆಗೆ:

ಅ) 1990–91ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ ಆರನೇ ವಾರ್ಷಿಕ ವರದಿ;

ಅ) 1990–91ನೇ ಸಾಲಿನ ಬಾಮುಂಡಿ ಮೆಷಿನ್ ಟೂಲ್ಸ್ ನಿಯಮಿತದ 15ನೇ ವಾರ್ಷಿಕ ವರದಿ ಹಾಗೂ

ಆ) 1990–91ನೇ ಸಾಲಿನ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 27ನೇ ವಾರ್ಷಿಕ ವರದಿ;

ಇ) 1989–90ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 14ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುವುದು.

3. ಶ್ರೀ ಎಂ. ವೀರಪ್ಪ ಮೊಯಿಲಿ - (ಶಿಕ್ಷಣ ಸಚಿವರು) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) ಅವರ ಪರವಾಗಿ.

1980 ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ಅಧಿನಿಯಮದ 25ನೇ ಕಲಮಿನ ಮೇರೆಗೆ ;

ಅ) 1990–91ನೇ ಸಾಲಿನ ಬೆಳಗಾವಿ ಜಿಲ್ಲೆಯ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ;

ಆ) 1990–91ನೇ ಸಾಲಿನ ಮುನಿರಾಬಾದ್ ತುಂಗಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುವುದು.

ಉಪಾಧ್ಯಕ್ಷಣೆಯವರು - ಮಂಡಿಸಲಾಯಿತು.

ಚುನಾವಣಾ ಪ್ರಸ್ತಾವಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ) :-

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೊರುತ್ತೇನೆ.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 271 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಈ) ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ 272(1) ನಿಯಮದ ಅನುಸಾರವಾಗಿ ಈ ಸಭೆ ಹಕ್ಕು ಭಾದ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಉ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 277(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 282(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 283(1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಋೂ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿ ನಿಯಮಗಳ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 353(2)ನೇ ನಿಯಮದ ಅನುಸಾರವಾಗಿ ಈ ಸಭೆ ಮಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಲು ಅನುಮತಿ ಕೋರುತ್ತೇನೆ ಮತ್ತು

ಐ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಐದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಉಪಸಭಾಪತಿಯವರು :- ಈಗ ಚುನಾವಣಾ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 271(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

ಈ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 272(1) ನಿಯಮದ ಅನುಸಾರವಾಗಿ ಈ ಸಭೆ ಹಕ್ಕು ಭಾದ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸವುದು.

ಉ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 277 (1)ನೇ ನಿಯಮದ ಅನುಸಾರವಾಗಿ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 282(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 283(1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸುವುದು.

ಖೂ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿ ನಿಯಮಗಳ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 353(2)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಐ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಐದು ಜನ ಸದಸ್ಯರನ್ನು ಚುನಾಯಿಸುವುದು.

(ಪ್ರಸ್ತಾವನೆಗೆ ಅನುಮೋದನೆ ದೊರಕಿದೆ)

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

1. ಬೆಂಗಳೂರಿನ ಬಾಗಲೂರು ಬಡಾವಣೆಯಲ್ಲಿ ಕಳ್ಳಭಟ್ಟಿ ಸೇವನೆಯಿಂದ ಮರಣ.

+ ಶ್ರೀ ಎಸ್.ಎಂ. ಯಾಹ್ಯಾ : ಅಧ್ಯಕ್ಷೀಣಿಯವರೇ ನಾನು ನಿಮಗೊಂದು ಕಾಗದ ಸಹ ಬರೆದಿದ್ದೇನೆ. ಕಳ್ಳಭಟ್ಟಿ ದುರಂತದಲ್ಲಿ ಹಲವಾರು ಜನ ಬಾಗಲೂರು ಬಡಾವಣೆ ಸ್ಲಂನಲ್ಲಿ ಸತ್ತು ಹೋಗಿದ್ದಾರೆ. ನಾನೂ ಸಹ ನಿನ್ನೆ ಆ ಏರಿಯಾಕ್ಕೆ ಹೋಗಿದ್ದೆ ಆ ಮೇಲೆ ಆಸ್ಪತ್ರೆಗೆ ಹೋಗಿದ್ದೆ. ಬಾಗಲೂರು ಬಡಾವಣೆ ಎಂದರೆ ಭಾರತದ ದೊಡ್ಡ ಒಂದು ಸ್ಲಂ. ಆದರ ವಿಚಾರ ನಾನು ಈ ಸಭೆಯಲ್ಲೇ ಹಲವಾರು ಬಾರಿ ಹೇಳಿದ್ದೇನೆ. ಅಲ್ಲಿರುವ ಜನರು ಯಾವ ರೀತಿಯಲ್ಲಿ ಇರುತ್ತಾರೋ ಎಂದು ಹೇಳುವುದೇ ಬಹಳ ಕಷ್ಟದ ಕೆಲಸ. ಇಂತಹ ಒಂದು ದುರಂತ 1981 ರಲ್ಲಿ ಜುಲೈನಲ್ಲಿ ಆಗಿತ್ತು, ಆಗ 336 ಜನ ಕಳ್ಳಭಟ್ಟಿ ಸರಾಯಿ ಕುಡಿದು ಸತ್ತುಹೋಗಿದ್ದರು. ಆನಂತರ ಪುನಃ ಅದೇ ಜಾಗದಲ್ಲಿ ಈ ಸಲ ಸಹ 10–12 ಜನ ಸತ್ತುಹೋಗಿದ್ದಾರೆ. ಹಲವಾರು ಜನ ಆಸ್ಪತ್ರೆಯಲ್ಲಿದ್ದಾರೆ, ನಾನು ನಿನ್ನೆ ಆಸ್ಪತ್ರೆಗೆ ಹೋಗಿ ನೋಡಿಬಂದೆ. ಒಬ್ಬೊಬ್ಬ ಅಧಾರಿಟಿ ಒಂದೊಂದು ಲೆಕ್ಕ ಕೊಡುತ್ತಾರೆ. ನಾನು ಅಲ್ಲಿ ಹೋದಾಗ ಹೇಳಿದರು, 18 ಜನ ಆಸ್ಪತ್ರೆಗೆ ಬಂದಿದ್ದರು 18 ರಲ್ಲಿ 6 ಜನ ಸತ್ತು 4 ಜನ ಓಡಿಹೋಗಿದ್ದಾರೆ, ಆ ಮೇಲೆ 8 ಜನರಲ್ಲಿ ಒಬ್ಬರು ಸೀರಿಯಸ್ ಇದ್ದಾರೆಯ ಆಸ್ಪತ್ರೆಯಲ್ಲಿ ಹೇಳಿದರು. ಈ ಪ್ರಶ್ನೆ ಏನೆಂದರೆ 4 ಜನರಲ್ಲಿ ಪ್ರಾಮುಖ್ಯವಾದವರು ವೇಲು ಅಂತ ಅವರು ಓಡಿಹೋಗಿದ್ದಾರೆ ಅವರು ಯಾವಾಗ ಓಡಿಹೋಗಿದ್ದಾರೆಂದರೆ ನಮ್ಮ ಸ್ನೇಹಿತ ಮಾನ್ಯ ಧರ್ಮಸಿಂಗರು ಹೋಂ ಮತ್ತು ಏಕ್ಸೈಜ್ ಮಿನಿಸ್ಟರ್, ಎರಡೂ ಜವಾಬ್ದಾರಿಕೆಯನ್ನು ಹೊಂದಿದವರು ಅಲ್ಲಿ ಹೋದ ನಂತರ, ಅದೇ 18ವರೆ ಗಂಟೆಗೆ ಅಲ್ಲಿದ್ದರು. In his presence itself he ran away from the hospital. It is a very serious matter. I don't demand that Shri Dharam Singh should resign. He is a good friend. He can always say when 336 people died in July 1981, none resigned. The question of resignation would not arise and I would not demand it also but why it is happening? Where is our administration? What is our efficiency? A man could run away in the presence of the Home Minister

and Excise Minister, that too the main culprit. This is causing concern to all of us here. I would like to know what the Government would do in this matter. Desai Commission, which was constituted in 1981, gave a very good report. Whether the Government has any time to look into the report and also the recommendations therein? Absolutely not. And if this is the way, there may be more and more tragedies taking place and Karnataka would get another bad name as we have already got into so many other things and in this again, we will get a very bad name.

Therefore, I would request my good friend the Home Minister and Excise Minister, a thorough enquiry should be made as to how he escaped. In future also, wherever such incident happens, we take out the reports and recommendations of the Commissions. About 100 recommendations were made. There was eight terms of reference in this commission and not a single one I could see. Of course, major recommendations are that nationalisation of distribution, sale and production of liquor also. I am not going into the very very serious things. But there are certain recommendations regarding officers, regarding equipments provided, and regarding various other aspects of detection of illicit liquor. Nothing has taken place. I will request at least this is the time that some of the recommendations which are useful should be implemented and lastly the compensation has been announced, to the victims. In those days of 1981 Hooch Tragedy the compensation was Rs.10,000 Now also you have announced Rs.10,000. I would feel equity and justice requires that it should be enhanced to at least Rs.20,000. There are very many people who have been suffering from stomach problems. They should be given proper treatment. Hereafter I would like the Government should taken steps to see that this kind of tragedy should not be repeated.

+ SRI QUAMARUL ISLAM (Gulbarga) : I wanted to raise the same subject. On Sunday in the old Bagalur Layout, by consuming illicit liquor, about 5 persons died and 20 persons hospitalised and more than 10 are serious. This is not the first incident in the State. This is repeatedly occurring. As pointed out rightly by Yahya Saheb, the State is getting very bad name. I demand here that there should be a judicial enquiry. I have gone through the newspapers that the Hon. Minister for Excise and Home has said that enquiry will be conducted in this regard. I am not satisfied and I hope the House will not be satisfied. Only a judicial enquiry should be held in this regard. This is not the first time this incident has taken place. I wanted Judicial Enquiry so that there can be an end to such incidents in our State and the compensation amount should be a minimum of Rs.50,000 for those who died and Rs.25,000 for the injured persons.

+ ಶ್ರೀ ಆರ್. ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಯಾಹ್ಯಾ ಅವರು ಮತ್ತು ಕಮರುಲ್ ಇಸ್ಲಾಂ ಅವರು ಇತ್ತೀಚೆಗೆ ಡಿಸೇಂಬರಿನ ದಿವಸ ಅದಂಥ ಘಟನೆಗಳ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ನಾನು ಕೂಡ ಈ ಸದನದಲ್ಲಿ ಘಟನೆಯ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದಿದ್ದೆ. ನಿನ್ನೆ ಕೂಡ ಸದನ ಸೇರಲಿಲ್ಲ, ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು ಎನ್ನತಕ್ಕಂಥ ನಿರ್ಧಾರವನ್ನು ಈಗಾಗಲೇ ಸರ್ಕಾರ ತೆಗೆದುಕೊಂಡಿದೆ. ಶ್ರೀಮಾನ್ ಯಾಹ್ಯಾ ಅವರು ಒಂದು ಮಾತನ್ನು ಹೇಳಿದರು. ನನ್ನ ಸಮ್ಮುಖದಲ್ಲಿ ವೇಲು ಅವರು ಪರಾರಿಯಾಗಿದ್ದಾರೆ ಎನ್ನತಕ್ಕಂಥ ಮಾತು ಸತ್ಯಕ್ಕೆ ದೂರವಾಗಿರತಕ್ಕಂಥದ್ದು. ನಾನು ಹೋದಾಗ ಎಸ್ಪೆಜ್ ಕಮೀಷನರ್, ಪೋಲೀಸ್ ಕಮೀಷನರ್ ಕೂಡ ನನ್ನ ಜೊತೆಯಲ್ಲಿದ್ದರು. ಸಿಬ್ಬಂದಿಯವರೂ ಕೂಡ ನನ್ನ ಜೊತೆಯಲ್ಲಿದ್ದರು. ಅಲ್ಲಿ ಇರತಕ್ಕಂಥ ಆರ್.ಎಂ.ಓ. ಅವರು ಕೂಡ ಇದ್ದರು. ನನಗೆ ಘಟನೆ ನಡೆದ ಮಧ್ಯಾಹ್ನಕ್ಕೆ ನಮ್ಮ ಕಮೀಷನರ್ ಅವರು ಹೇಳಿದಾಗ ಆ ಸ್ಥಳಕ್ಕೆ ಹೋಗಿ ಬರಲೇಬೇಕು ಎಂದು ತೀರ್ಮಾನಿಸಿದೆ. ಬಾಗಲೂರು ಲೇಔಟ್‌ನಲ್ಲಿ, ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ನಾನು ಅಧಿಕಾರಿಗಳಿಗೂ ಕೂಡ ಆದೇಶವನ್ನು ಕೊಟ್ಟಿದ್ದೇನೆ. ನಾನು ಕೂಡ ಖುದ್ದಾಗಿ ಅಲ್ಲಿಗೆ 6–40 ಗಂಟೆಗೆ ಹೋಗಿದ್ದೇನೆ. 6–40 ರಿಂದ 7–15 ರವರೆಗೆ ನಾನು ಇದ್ದೆ. ಕೌಸಲ್ಯಾದೇವಿ ಮತ್ತು ವೇಲು ಕೂಡ ಬಾಗಲೂರು ಲೇಔಟ್‌ನಲ್ಲಿ ಕಳ್ಳಭಟ್ಟಿಯನ್ನು ತಯಾರು ಮಾಡತಕ್ಕಂಥವರು. ವೇಲು ಎನ್ನತಕ್ಕಂಥವನು ಸಾರಾಯಿ ಮಾರತಕ್ಕಂಥ ವ್ಯಕ್ತಿ. ಆತನನ್ನು ಕೇಳಿದೆವು. ಅವನಿಗೆ ಹೊಟ್ಟೆ ನೋವು ಹೆಚ್ಚಾಗಿತ್ತು. ನಾನು ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ಮತ್ತು ಆಸ್ಪತ್ರೆಯಲ್ಲಿರತಕ್ಕಂಥ ಎಲ್ಲಾ ಡಾಕ್ಟರುಗಳಿಗೆ ಇನ್‌ಸ್ಟ್ರಕ್ಷನ್ನನ್ನು ಕೊಟ್ಟಿದ್ದೇನೆ. ಸರ್ಕಾರದ ಪರವಿಯಿಂದ ಅವರನ್ನು ಕಾಪಾಡತಕ್ಕಂಥದ್ದು ಮತ್ತು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳಿ ಬಂದಿದ್ದೇನೆ. ಇದು ಆಗಿದ್ದುದು 9 ಗಂಟೆಗೆ. ಅವನು ಅಲ್ಲಿಂದ ಹೋಗಿದ್ದಾನೆ. ಇಂಥ ಸಂದರ್ಭದಲ್ಲಿ ಯಾರಾದರೂ ಕೂಡ ಆಸ್ಪತ್ರೆಗೆ ದಾಖಲಾದ ಮೇಲೆ ಅವರನ್ನು ನೋಡಲು ಜನರು ಬರುತ್ತಾರೆ. ಬಂದಮೇಲೆ ಯಾರ ಜೊತೆಯಲ್ಲಿ ಇವನು ಹೋಗಿದ್ದಾನೆ ಏಕೆ ಹೋಗಿದ್ದಾನೆ? ಎನ್ನುವುದನ್ನು ತಿಳಿಯಲು ನಾನು ಪೋಲೀಸ್ ಕಮೀಷನರಿಗೂ ಕೂಡ ಹೇಳಿದ್ದೇನೆ. ಯಾರು ಸ್ಥಳದಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಯಾರು ಇದ್ದಾರೆ ಅವರನ್ನು ಈಗಾಗಲೇ we have suspended. We have taken action. We have deputed our D.C.P. Sri Kempaiah. ಡಿ.ಸಿ.ಪಿ. ಕೆಂಪಯ್ಯನವರಿಗೂ ಹೇಳಿದ್ದೇನೆ. ಮತ್ತು ಬಾಗಲೂರು ಲೇಔಟ್ ನಿಂದ ಯಾರು ಆಸ್ಪತ್ರೆಗೆ ಬಂದಿದ್ದಾರೆ ಅವರ ಬಗ್ಗೆ ಮಾತ್ರವಲ್ಲ, ಇನ್ನಿತರರು ಕೂಡ ಆಸ್ಪತ್ರೆಗೆ ಬರಲಾರದೆ ಮನೆಯಲ್ಲಿಯೇ ಕುಡಿದು ಸಾಯಬಹುದು ಅಂತಹವರ ಬಗ್ಗೆ ಹಾನೆಸ್ಟ್ ಎಫರ್ಟ್ ಮಾಡತಕ್ಕ ರೀತಿಯಲ್ಲಿ ನಾವು ಹೋಗಿ ಮಾಡಿದ್ದೇವೆ. 3 ಜನ ಸತ್ತು ಅಲ್ಲೂ ಕೂಡ ಬಿದ್ದಿದ್ದರು. ಅವರನ್ನು ಕೂಡ ಆಸ್ಪತ್ರೆಗೆ ಕರೆದುಕೊಂಡು ಬಂದು ಸರಿಯಾಗಿ ನೋಡಿದ್ದೇವೆ. ಈಗ 11 ಕೇಸು ಬಂದಿದೆ. ಇದರ ಬಗ್ಗೆ ಸರ್ಕಾರದ ಪರವಿಯಿಂದ ನಾವು ಉತ್ತರವನ್ನು ಕೊಡುತ್ತಿದ್ದೇವೆ. 1980–81ರಲ್ಲಿ ಇದೇ ತರಹ ಆಗಿ 346 ಜನ ಸತ್ತಿದ್ದಾರೆ. ಆದರೂ ಕೂಡ ಮತ್ತೇ ಅದೇ ಜಾಗದಲ್ಲಿ ಪದೇಪದೇ ಆಗುತ್ತಿದೆ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಾಗಲಿ, ಈ ದೇಶದಲ್ಲಾಗಲಿ, ಇದು ದಿನೇದಿನೇ ಬೆಳೆಯುತ್ತಿದೆ. ಇದನ್ನು ಎಫೆಕ್ಟೀವ್ ಆಗಿ ಕಂಟ್ರೋಲ್ ಮಾಡಬೇಕೆನ್ನುವ ದೃಷ್ಟಿಯಲ್ಲಿ ಇಲ್ಲಿಸಿಟ್ ಮಾರತಕ್ಕ ರೀತಿಯಲ್ಲಿ ಯಾರ್ಯಾರು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಾರೆ, ಎಲ್ಲಿ ಮಾರಾಟ ಮಾಡುತ್ತಾರೆ, ಅದು ಆರೋಗ್ಯಕ್ಕೆ ಹಾನಿಕರವಾಗಿರುವುದರಿಂದ ಪ್ರತಿಬಂಧ ಮಾಡಬೇಕು. ಇದನ್ನು ಮಾಡಬೇಕಾದರೆ ಕೇವಲ ಇವತ್ತು ನಾವು ಯಾರಾದರೂ ಸದಸ್ಯರು ಕೇಳಿದರೆ ಘಟನೆ ಆದಮೇಲೆ ಮಾಡತಕ್ಕದ್ದು ಅಲ್ಲ, ಇವತ್ತು ಘಟನೆ ಉದ್ಭವವಾಗಲಾರದಂತಹ ರೀತಿಯಲ್ಲಿ ನಾವು ಒಂದು ಪಾಯಿಂಟ್ ಆಪರೇಷನ್ ಮಾಡಬೇಕು. ಪೋಲೀಸ್ ಮತ್ತು ಎಕ್ಸೈಜ್‌ನವರು ಕೂಡಿ ಎಲ್ಲಾ ಕಡೆ ನಿಯಂತ್ರಣ ಮಾಡತಕ್ಕ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಆ ದಿವಸ ಕೂಡ ಸಮಾಲೋಚನೆ ಮಾಡಿದ್ದೇನೆ. ನಿನ್ನೆ ಕೂಡ ನಮ್ಮೆಲ್ಲಾ ಉನ್ನತಮಟ್ಟದ ಅಧಿಕಾರಿಗಳು ಅಬಕಾರಿ ಮತ್ತು ಪೋಲೀಸ್ ಅಧಿಕಾರಿಗಳಿಗೆ ಹೇಳಿ Already they are there. We have to create Psychological atmosphere. ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ.

ಮುಂದೆ ಈ ರೀತಿ ಘಟನೆ ನಡೆಯದೇ ಇರತಕ್ಕ ರೀತಿಯಲ್ಲಿ ಸರ್ಕಾರ ಇದರ ಬಗ್ಗೆ ತೀವ್ರ ತರವಾದ ತಮ್ಮ ದೃಷ್ಟಿಯನ್ನು ಹರಿಸುತ್ತದೆ. Already we have taken action. ಮಾನ್ಯ ಖಿಮರಲ್ ಇಸ್ಲಾಂರವರಿಗೆ ಹೇಳುತ್ತಾ ಇದ್ದೆ. ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕಾದರೂ ಎಷ್ಟೋ ದಿವಸಗಳು ಬೇಕಾಗುತ್ತದೆ. ಜ್ಯುಡಿಷಿಯಲ್ ಎನ್‌ಕ್ವೈರಿ ಬೇಡ ಯಾರ್ಯಾರು ಪರಾರಿಯಾಗಿದ್ದಾರೆ ಅವರನ್ನು ಎಲ್ಲಿ ನಾವು ಹಿಡಿಯಬೇಕಾಗಿದೆ, ಎಲ್ಲೆಲ್ಲಿ ಪತ್ತೆಹಚ್ಚಬೇಕಾಗಿದೆ, ಅದನ್ನೆಲ್ಲಾ ಮಾಡುತ್ತೇವೆ. ಈ ಸದನ ಇನ್ನು ಬಹಳ ದಿವಸದವರೆಗೆ ನಡೆಯುತ್ತದೆ. ಈ ಸದನ ಮುಗಿಯುವುದರೊಳಗೆ ಆ ಘಟನೆ ನಡೆದ ಹನ್ನೆಲೆಯಲ್ಲಿ ಎಫೆಕ್ಟೀವ್., ಆಗಿ ಸರ್ಕಾರ ಅದರ ಬಗ್ಗೆ ಕ್ರಮತೆಗೆದುಕೊಳ್ಳುತ್ತದೆ. ಮಾನ್ಯ ಯಾಹ್ಯಾರವರು ಏನು ಈ ತರಹ ದುರಂತದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ ಅದು ಮೇಲಿಂದ ಮೇಲೆ . ಆಗಬಾರದು. ಇದು ಸರ್ಕಾರಕ್ಕೆ ಕೂಡ ಒಳ್ಳೆಯದಲ್ಲ ಎನ್ನುವ ಮಾತನ್ನು . ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಈಗಾಗಲೇ ಸರ್ಕಾರ ಪ್ರಾಮಾಣಿಕ ಕ್ರಮ ತೆಗೆದುಕೊಂಡಿದೆ ಎಂದು ಹೇಳುತ್ತಾ . ಈ . ಸಭೆಯ ಮುಂದೆ, ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. .

There are two slums called Old Baglur Layout and New Baglur Layout in Kadugondanahalli Police Station limits. Both these Lay outs are within Bangalore City Corporation limits. There are about 8,000 houses in these Layouts, with a population of nearly 80,000. The people living in these areas are mainly manual labourers and petty vendors. They are living in small huts.

On 8.3.92 some of the residents of these areas who consumed spurious liquor started complaining of giddiness and vomitting. Their relatives brought them to Bowring Hospital for medical check up and treatment. One Sir Babu aged 35 years of New Lingarajapuram, and Sri Kannan aged 50 years of Baglur Layout, died on the way to the hospital. Three more persons – Sri Sham S/o. Sagai Mary died at the hospital and Smt. Unnamalai aged 50 years and Sri sagai Raj aged 30 years died at their houses and their bodies were taken to Victoria Hospital.

In this connection, a case in kadugondanahalli Police Station (Crime No.71/92) under Section 304 and 338 of I.P.C. read with 34 of the Karnataka Excise Act, has been taken up against Smt. Kausalya and others. The Circle Inspector of Police of Frazer Town Police Station, has taken up the investigation. Smt. Kausalya is absconding. During the course of the investigation, Police seized the remnants of liquor left over in the house of Smt. Kausalya and sent to the Forensic Science Laboratory for analysis.

On 9.3.92, the following persons died in the hopsital :

1) amalanathan 2) Antony 3) Lakhsmi
4) Balu 5) Subramani 6) Kuppa .

During the house–to–house search operation on 9.3.92, the Police found 3 sick persons and they were taken to the hospital late in the evening. In spite of the treatment, the following three persons died at the hospital.

1) Abdul Sattar aged 75 years.
2) Arul Das aged 60 years.
3) Das aged 50 years.

During the investigation, the Police have arrested 7 persons involved in the sale of spurious liquor. The local police have booked 14 cases against those who are involved in the sale of illicit liquor, during the last one year. There are 13 persons under treatment in Bowring Hospital today.

Immediately, on knowing the incident, I, accompanied by the Excise Commissioner, Police Commissioner and other officers from both the departments visited the hospital, and gave instructions to give all possible help to save the lives . The Government have made arrangements to immediately control the menace, and to nab the bootleggers. Teams were constituted headed by top Police Officers and top Excise Officers, to comb the entire areas. As a result of intensive raids in Baglur Layout, Tannery Road and Sakkare Mandi areas, the Excise Department has arrested one person by name Sri Ponnan aged about 58 years and seized 30 litres of I D from him. Apart from this, 580 litres of illicit liquor stored in 4 motor tubes and 15 containers used for manufacture and storage of such liquor were also seized. The Department has collected samples of arrack from all the Government Arrack Shops in and around this area Viscera of all the deceased persons has been collected and sent for further analysis and there ports are awaited. Thus, it is difficult to pin point the exact cause of deaths occurred on 8.3.1992 and 9.3.92. the Excise Deparment, during the night of 9th March, has nabbed 20 suspected bootleggers.

The Excise Department has been conducting regular raids, more particularly in Baglur Layout, Tannery Road and Sakkare Mandi area to contain the menace of illicit liquor. In these areas, from July 91 to February 92, the Department has organised 156 raids, seized 7707 litres of illicit liquor which was destroyed, registered 15 cases against suspected offenders and arrested 7 persons. Recently on 2.3.92, a lorry carrying illicit liquor of about 2000 litres was seized, 2 persons were arrested and cases registered against them and property seized is valued approximately Rs. 2 lakhs.

Meanwhile, the Government has made arrangements to disburse relief at the rate of Rs.10,000 each to the families of the victims of the tragic incident. The Deputy Commissioner, Bangalore Urban District, has been directed to disburse the relief amount to the nearest legal heirs immediately to meet the funeral and other expenses.

Government will take all possible steps to control the menace of illicit liquor manufacturing, distribution and consumption, and also nab all persons involved in such activities.

12.20 ಪಿ.ಎಂ.

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಉಪಾಧ್ಯಕ್ಷೀಣಿಯವರೆ, ನಾನು ಮಾನ್ಯ ಗೃಹ ಸಚಿವರು ಕೊಟ್ಟಿರತಕ್ಕಂಥ ಸ್ಟೇಟ್ ಮೆಂಟ್ ಮೇಲೆ ಮಾತನಾಡುವುದಿಲ್ಲ. ನಾನು ಮೊದಲಿನ ಅಂಶದ ಮೇಲೆ

ಮಾತನಾಡುತ್ತಿದ್ದೇನೆ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ನಾನು ಕೇಳಿಲಿಲ್ಲ. ಮಾನ್ಯ ಶ್ರೀ ಖಮರುಲ್ ಇಸ್ಲಾಂರವರು ಕೇಳಿದ್ದಾರೆ. ದೇಸಾಯಿ ಕಮೀಷನ್ ಅವರ ರಿಪೋರ್ಟ್ ಅನ್ನು ಮಾನ್ಯ ಸಚಿವರು ಸ್ವಲ್ಪ ಓದಿಕೊಳ್ಳಬೇಕು. ಸ್ಕೋರೇಜ್ ಯಾವ ರೀತಿ ಇರಬೇಕು? ಎನ್‌ಫೋರ್ಸ್‌ಮೆಂಟ್ ಯಾವ ರೀತಿ ಇರಬೇಕು? ಅನಂತರ ಸರ್ಕಾರದ ಪತ್ತಿರವಿರುವ ನೇಚರ್ ಸ್ಪಿರಿಟ್ ಆಗಲಿ, ಮಿಥೈಲ್ ಆಲ್ಕೋಹಾಲ್ ಆಗಲಿ ಅದನ್ನು ಯಾವ ರೀತಿ ಸ್ಕೋರ್ ಮಾಡಬೇಕು? ಫಿಲ್ಟರೇಜ್ ಸರ್ಕಾರದ ಸ್ಕೋರ್‌ನಿಂದಲೇ ಆಗುತ್ತದೆ. ಅದು ಪಿಲ್‌ಫರೇಜ್ ಆಗದಹಾಗೆ ಮಾಡಬೇಕೆಂದು ವರದಿಯಲ್ಲಿ ಶಿಫಾರಸ್ ಇದೆ. ಮಾನ್ಯ ಸಚಿವರು ಹೇಳಿದ ಹಾಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಎರಡು ವರ್ಷ ಹೋಗುತ್ತದೆ, ಆದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳಿದ್ದಾರೆ. ಆದುದರಿಂದ, ಈಗ ಇರುವ ರಿಪೋರ್ಟಿನ ರೆಕಮಂಡೇಶನ್ಸ್ ಪ್ರಕಾರ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI QUAMURUL ISLAM : Will the Minister enquire, as Sri S.M. Yahya said, taking into consideration the judicial report and the references? Will you assure that the enquiry will be conducted based on those references?

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಉಪಾಧ್ಯಕ್ಷೀಣಿಯವರೆ, ನಾನು ಇದರ ಬಗ್ಗೆ ಒಂದು ಸೂಚನೆ ಕೂಡ ಕಳುಹಿಸಿದ್ದೇನೆ. ಈಗ ತಮ್ಮ ಉತ್ತರದಿಂದ ನಮಗೆ ಅಂತಹ ತೃಪ್ತಿ ಆಗದೆ ಇದ್ದರೂ ಸಹ, 11 ಜನರು ಬಾಗಲೂರು ಲೇಔಟ್‌ನಲ್ಲಿ ಸತ್ತು ಹೋಗಿದ್ದಾರೆ. ಆಸ್ಪತ್ರೆಯಲ್ಲಿ ಸಾಕಷ್ಟು ಜನ ದಾಖಲಾಗಿದ್ದಾರೆ. ಇನ್ನು ಬಹಳಷ್ಟು ಜನ ಸಾಯಲೂಬಹುದು. ಆದರೆ, ಇದರ ಅರ್ಥ ಏನಾಗುತ್ತದೆ? ಈ ರೀತಿ ನಿರಂತರವಾಗಿ ಬಹಳ ದಿನಗಳಿಂದ ನಡೆದುಕೊಂಡು ಬಂದಿದೆ. ಅದಕ್ಕೆ ಸತ್ಯ ಪರಿಶೋಧನೆ ಮಾಡುವಂಥ ಅವಶ್ಯಕತೆಯಿಲ್ಲ, ಇದರ ಬಗ್ಗೆ ಇಲಾಖೆಯವರನ್ನು ಆನ್-ಆಫಿಷಿಯಲ್ ಆಗಿ ಕೇಳಿದರೂ ಕೂಡ ಹೇಳುತ್ತಾರೆ. ಈ ವಿಷಯ ಎಲ್ಲಾ ಇಲಾಖೆಯವರಿಗೆ ಗೊತ್ತಿರತಕ್ಕಂಥಾದ್ದು. ಗೊತ್ತಿದ್ದರೂ ಸಹ ನಡೆದಿರತಕ್ಕಂಥ ಕೃತ್ಯದಲ್ಲಿ ಯಾವ ತಪ್ಪಿತಸ್ಥ ಅಧಿಕಾರಿಗಳು ಶಾಮೀಲಾಗಿರತಕ್ಕಂಥವರು ಇದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದನ್ನು ಕೂಡ ತಾವು ತಿಳಿಸಿದಿರಿ. ಬಹುಶಃ ತಾವು ಮುಂದೆ ಈ ರೀತಿ ಆಗತಕ್ಕಂಥ ಮಟ್ಟಕ್ಕೆ ಬಿಡುವುದಿಲ್ಲವೆಂದು ಆಶ್ವಾಸನೆ ಕೊಟ್ಟು ಹೇಳಬಹುದು. ಇದಕ್ಕೆ ಪೂರಕವಾಗಿರುತ್ತದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ನಾವು ಒಪ್ಪಬೇಕಾಗುತ್ತದೆ. ನೀವು ಇವೊತ್ತು ಶಾಮೀಲಾಗಿರತಕ್ಕಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ದಯವಿಟ್ಟು ಈ ಸಭೆಗೆ ತಿಳಿಸಬೇಕು..

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಸದಸ್ಯರಾದ ಶ್ರೀ ಯಾಹ್ಯಾರವರು ಪ್ರಸ್ತಾಪ ಮಾಡಿದ ಹಾಗೆ ದೇಸಾಯಿ ಕಮೀಷನ್ ರಿಪೋರ್ಟ್ ಸರ್ಕಾರದ ಮುಂದಿದೆ. 1980–81ರಲ್ಲಿ ನಡೆದಿರತಕ್ಕ ಘಟನೆ ಮೇರೆಗೆ 346 ಜನರು ಸತ್ತ ಮೇಲೆ ದೇಸಾಯಿ ಕಮೀಷನ್ ನೇಮಕ ಮಾಡಿಗ, ಅದರ ಕೆಲವು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರಲ್ಲಿ ತಾವು ಹೇಳಿದ ಹಾಗೆ ಬಹಳಷ್ಟು ಪಾಲಿಸಿ ಮ್ಯಾಟರ್ಸ್ ಇದೆ. ದೇಸಾಯಿ ಕಮೀಷನ್ ರೆಕಮಂಡೇಶನ್ಸ್ ಇಂಪ್ಲಿಮೆಂಟ್ ಮಾಡತಕ್ಕಂಥ ದಿಸೆಯಲ್ಲಿ ನಾವು ಡೆಪ್ಯೂಟಿ ಕಮೀಷನರ್ಸ್ ಮತ್ತು ಎಕ್ಸೈಜ್ ಡಿಪಾರ್ಟ್‌ಮೆಂಟ್‌ಗೆ ಹೆಚ್ಚಿನ ಅಧಿಕಾರ ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಯಾವ ರೀತಿಯಲ್ಲಿ ಬಾಟಲಿಯಲ್ಲಿ ಮಾರತಕ್ಕಂಥಾದ್ದು, ಲೂಸ್‌ನಲ್ಲಿ ಏತಕ್ಕೆ ಕೊಡಬಾರದು? ಎನ್ನತಕ್ಕಂಥ ಒಂದು ಅನುಭವದ ಹಿನ್ನೆಲೆಯಲ್ಲಿ ದೇಸಾಯಿಯವರು ಪರ್‌ಫೆಕ್ಟ್ ರಿಪೋರ್ಟ್ ಸರ್ಕಾರದ ಮುಂದಿದೆ. ಶ್ರೀ ಯಾಹ್ಯಾರವರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಗಂಭೀರವಾಗಿ ವಿಚಾರ ಮಾಡುತ್ತೇವೆ. ದೇಸಾಯಿ ಕಮೀಷನ್ ರಿಪೋರ್ಟ್‌ನ ರೆಕಮಂಡೇಶನ್ ಪ್ರಕಾರ ಮಾಡಿದರೆ ಅನಾಹುತವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಈಗ ಏನೆಂದರೆ, ಜ್ಯುಡಿಷಿಯಲ್ ಎನ್‌ಕ್ವೈರಿ ಆಗುತ್ತದೆ. ದೇಸಾಯಿ ಕಮೀಷನ್ ರಿಪೋರ್ಟ್ ಮೇಲೆ ಎನ್‌ಕ್ವೈರಿಯಾಗಬೇಕೆಂದು ಇದ್ದರೂ ಸಹ ಘಟನೆ ಏನಾಗಿದೆ?. ಮಾನ್ಯ ಸದಸ್ಯರಾದ ಜಯಚಂದ್ರರವರೇ, ಬಾಗಲೂರು ಲೇಔಟ್‌ನಲ್ಲಿ ಈ ರೀತಿ ಪದೇ

ಪದೇ ಆಗುತ್ತದೆಯೆಂದು ಹೇಳಿದ್ದಾರೆ, ಆ ಒಂದು ಏರಿಯಾದಲ್ಲಿ ಈ ರೀತಿ ನಡೆದುಕೊಂಡು ಬಂದಿದೆ. ಮತ್ತು ಅಬ್ಯಾರಿ ಇಲಾಖೆಯವರು ಆ ಸ್ಥಳಕ್ಕೆ ಹೋದ ನಂತರ ಬಹಳಷ್ಟು ಲಾರಿಗಳಲ್ಲಿ ಸಿಕ್ಕಿದೆಯೆಂದು ಹೇಳಿದರಿ. ಯಾಹ್ಯಾರವರು ಹೇಳಿದಂತೆ that is the biggest slum in the Bangalore. ಇವೊತ್ತು 81 ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರತಕ್ಕಂಥ ರೀತಿಯಲ್ಲಿ ಬಹಳಷ್ಟು ಕೆಲಸ ಮಾಡತಕ್ಕಂಥವರು ಕೂಲಿಕಾರರು, ಬಡವರು ಇದ್ದಾರೆ. ಅಂತಹ ಒಂದು ಪ್ರದೇಶದಲ್ಲಿ ಪರಿಸ್ಥಿತಿಯನ್ನು ನಾವು ನಿಯಂತ್ರಣಕ್ಕೆ ತೆಗೆದುಕೊಂಡಿದ್ದೇವೆ. ನಿಯಂತ್ರಣ ತೆಗೆದುಕೊಂಡರೂ ಸಹ ಈ ರೀತಿ ಆಗುತ್ತದೆ. ನಾವು ವಾಸ್ತವಿಕವಾಗಿ ಹೇಳಬೇಕಾಗುತ್ತದೆ. ಇವೊತ್ತು ಎಲ್ಲೆಲ್ಲಿ ಇಂತಹ identified areas ಇದೆ, ಎಲ್ಲಿ ಈ ತರಹದ ಮಾರಾಟವಾಗತಕ್ಕಂಥ ಸ್ಥಳವಿದೆ, ಅಂತಹ ಸ್ಥಳಗಳ ಮೇಲೆ ನಾವು ಬಹಳ ಹತೋಟಿ ತರತಕ್ಕಂಥಾದ್ದು, ಅದಕ್ಕೊಂದು ಸ್ಟಾಡ್ ಮಾಡತಕ್ಕಂಥಾದ್ದು ಮಾಡಿ ಒಂದು ನಿಯಂತ್ರಣ ಮಾಡಿ, ಮುಂದೆ ಈ ರೀತಿ ಆಗಲಾರದ ರೀತಿಯಲ್ಲಿ atmosphere ಕ್ರಿಯೇಟ್ ಮಾಡುವುದಕ್ಕೆ ಕೂಡ ಕ್ರಮ ಕೈಗೊಳ್ಳಬೇಕಾಗಿದೆ, ಕ್ರಮ ತೆಗೆದುಕೊಳ್ಳುತ್ತೇವೆ. ಏನು ಒಂದು ಈ ಘಟನೆ ಜರುಗಿದೆ, ಇದರ ಬಗ್ಗೆ ನಾವು ಡಿವಿಜನಲ್ ಕಮೀಷನರ್ ರ್ಯಾಂಕ್‌ನಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ, ಇದರಲ್ಲಿ ಸ್ಥಳೀಯರು ಯಾರು ತಪ್ಪಿತಸ್ಥರಿದ್ದಾರೆ? ಇದು ಹೇಗಾಗಿದೆ? ಏತಕ್ಕೆ ಕ್ರಮ ಕೈಗೊಂಡಿಲ್ಲ ? ಏನೇನಾಗಿದೆ? ಎಂಬುದನ್ನೆಲ್ಲಾ ಪೂರ್ಣವಾಗಿ ಸರ್ಕಾರದ ವತಿಯಿಂದ ಪೂರ್ಣ ತನಿಖೆ ಮಾಡಿಸಿ, ಇದೇ ಸದನದಲ್ಲಿ ವರದಿ ಕೂಡ ಒಪ್ಪಿಸುತ್ತೇನೆ.

2. ಭದ್ರಾವತಿ - ಮೈಸೂರು ಕಾಗದ ಕಾರ್ಖಾನೆಯಲ್ಲಿ ತೆಗೆದುಹಾಕಿರುವ ನೌಕರರ ಪುನರ್ ನೇಮಕ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಸನ್ಮಾನ್ಯ ಉಪಾಧ್ಯಕ್ಷೆಯವರೆ, ನನ್ನದು ಈ ವಿಚಾರವಲ್ಲ, ಮೈಸೂರು ಪೇಪರ್ ಮಿಲ್ಸ್‌ಗೆ ಸಂಬಂಧಪಟ್ಟಿರತಕ್ಕಂಥ ವಿಚಾರ ಹೇಳುತ್ತೇನೆ. ಭದ್ರಾವತಿಯಲ್ಲಿರತಕ್ಕ ಮೈಸೂರು ಕಾಗದ ಕಾರ್ಖಾನೆಯಲ್ಲಿ 275 ಜನ ನೌಕರರು ಕಳೆದ 8 ವರ್ಷಗಳಿಂದ ಕ್ಯಾಶುಯಲ್ ಲೇಬರರ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಕ್ಯಾಶುಯಲ್ ಲೇಬರರ್‌ಗಳಿಗೆ ಸರಿಯಾದ ಸಂಬಳ ಕೊಡುತ್ತಿಲ್ಲ, ನಮಗೆ ಕೊಡತಕ್ಕಂಥ ಸಂಬಳ ಸಾಕಾಗುತ್ತಿಲ್ಲವೆಂದು, ಅವರು ಧರಣಿ ಕುಳಿತು ಮುಷ್ಕರ ಹೂಡಿದ್ದಕ್ಕೆ 272 ಜನರಲ್ಲಿ 242 ಜನ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡು, 30 ಜನ ನೌಕರರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಅವರನ್ನು ಎಂಟು ದಿವಸಗಳೊಳಗೆ ಕೆಲಸಕ್ಕೆ ತೆಗೆದುಕೊಳ್ಳದೆ ಹೋದರೆ 8 ವರ್ಷಗಳಿಂದ ಮಾಡಿರತಕ್ಕಂಥ ಕೆಲಸಕ್ಕೆ ಅವರ ಹಕ್ಕು ಹೊರಟು ಹೋಗುತ್ತದೆ. ಆದುದರಿಂದ, ಇದರ ಬಗ್ಗೆ ಸರ್ಕಾರ ಏನಾದರೂ ಒಂದು ನಿರ್ದೇಶನವಿತ್ತು, ಅವರು ಏನು ಇವೊತ್ತು ಸ್ಟೈಕ್ ಮಾಡಿದ್ದಾರೆ, ಆ ಸ್ಟೈಕ್ ಮಾಡಿರುವುದೇ ದೊಡ್ಡ ಅಪರಾಧವೆಂದು ಅವರನ್ನು ಕೆಲಸದಿಂದ ತೆಗೆದುಬಿಟ್ಟರೆ, ಅವರ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಆದುದರಿಂದ, ಸರ್ಕಾರ ಒಂದು ನಿರ್ದೇಶನ ಕೊಟ್ಟು, ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವ ರೀತಿಯಲ್ಲಿ ಒಂದು ಆದೇಶ ಮಾಡಬೇಕೆಂದು ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ :- ಈಗ 275 ಜನರಲ್ಲಿ 243 ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಕೇವಲ ಸಂಘದ ಪದಾಧಿಕಾರಿಗಳನ್ನು ಮಾತ್ರ ತೆಗೆದುಹಾಕಿದ್ದಾರೆ. ಎಲ್ಲರನ್ನೂ ತೆಗೆದುಕೊಂಡು, ಪದಾಧಿಕಾರಿಗಳನ್ನು ಮಾತ್ರ ತೆಗೆದುಹಾಕಿದ್ದಾರಲ್ಲಾ, ಇದು ಯಾವ ನಿಯಮ? ತಾವೇ ಹೇಳಿರಿ. ಒಂದು ಸಂಘವನ್ನು ರಚನೆ ಮಾಡಿಕೊಂಡು ಮುಷ್ಕರ ಹೂಡಿ ತಮ್ಮ ಹಕ್ಕಿಗಾಗಿ ಹೋರಾಟ ಮಾಡುವುದರಲ್ಲಿ ಸಂಘದ ಪದಾಧಿಕಾರಿಗಳನ್ನು ತೆಗೆದುಹಾಕಿ ಬೇರೆಯವರನ್ನು ತೆಗೆದುಕೊಂಡಿದ್ದಾರೆ. ಆದುದರಿಂದ, ದಯಮಾಡಿ 33 ಜನ ನೌಕರರನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಣೆಯರೆ, ಮಾನ್ಯ ಸದಸ್ಯರು ಭದ್ರಾವತಿ ಕಾಗದದ ಕಾರ್ಖಾನೆಯ ಬಗ್ಗೆ ಪ್ರಸ್ತಾಪವನ್ನು ಎತ್ತಿದ್ದಾರೆ. ಅದನ್ನು ಮಾನ್ಯ ಸಚಿವರಿಗೆ ತಿಳಿಸಿ ಏನು ಮಾಡಬೇಕೊ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕರಿಯಣ್ಣ :- ಉಪಾಧ್ಯಕ್ಷಣೆಯವರೆ ಅವರು ಮಂತ್ರಿಗಳಿಗೆ ಹೇಳುತ್ತೇವೆ ಅವರು ಏನು ಕ್ರಮತೆಗೆದುಕೊಳ್ಳುತ್ತಾರೋ ಅದನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದರು. ಆದರೆ ನಮಗೆ ಸರ್ಕಾರದಿಂದ ಗ್ಯಾರಂಟಿಯಾದ ಉತ್ತರ ಸಿಗಲಿಲ್ಲ. ದಯಮಾಡಿ ಆ 33 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷಣೆಯವರು :- ನೀವು ಯಾವುದೋ ಒಂದನ್ನು ಎತ್ತಿದಾಕ್ಷಣ ಅವರು ಉತ್ತರವನ್ನು ಹೇಗೆ ಕೊಡುತ್ತಾರೆ ಅದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಉಪಾಧ್ಯಕ್ಷಣೆಯವರೆ ಅವರ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ ಆದರೆ ಇದರ ಬಗ್ಗೆ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು.

(ಗೊಂದಲ)

ಉಪಾಧ್ಯಕ್ಷಣೆಯವರು :- ಅವರು ಅದನ್ನು ಪರಿಶೀಲನೆ ಮಾಡುತ್ತಾರೆ.

(ಗೊಂದಲ)

ದಿ. 11.3.92 ರಂದು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬಗ್ಗೆ .

ಶ್ರೀ ಚಿಕ್ಕಮಾದು :- ಉಪಾಧ್ಯಕ್ಷಣೆಯವರೇ ನಾಳೆ ಅಂದರೆ 11.3.1992 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬೆಂಗಳೂರಿನಲ್ಲಿರತಕ್ಕ ಸುಮಾರು 40–50 ಲಕ್ಷ ಜನರಿಗೆ ಈ ರೀತಿ ನಗರ ಸಾರಿಗೆ ಸಂಸ್ಥೆಯವರು ವಾಹನಗಳನ್ನು ಸ್ಥಗಿತಗೊಳಿಸಿದರೆ ಎಷ್ಟು ಜನರಿಗೆ ತೊಂದರೆಯಾಗುತ್ತದೆ? ಅದಕ್ಕೊಸ್ಕರ ಇಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಸರ್ಕಾರ ಏನು ಕ್ರಮತೆಗೆದುಕೊಂಡಿದೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಉಪಾಧ್ಯಕ್ಷರೇ, ಈ ವಿಚಾರವು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ಬಂದಿದೆ, ಈಗಾಗಲೇ ಅವರು ಒಂದು ಹೇಳಿಕೆಯನ್ನು ಕೂಡ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದು ಸಾರಿಗೆ ಸಚಿವರ ಗಮನಕ್ಕೆ ಬಂದಿರುವುದರಿಂದ ಈ ಬಗ್ಗೆ ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಾರೆ.

ದಿ. 07.03.92 ರುದು ಸುಳ್ಯ ಶಾಸಕರಾದ ಶ್ರೀ ಕೆ. ಕುಶಾಲ ಅವರ ಮೇಲೆ ಮಾಡಿರುವ ಹಲ್ಲೆ

ಶ್ರೀ ವಿ. ವಸಂತ ಸಾಲಿಯಾನ :- (ಕಾಪು) ಉಪಾಧ್ಯಕ್ಷಣೆಯರೆ, 7.3.92 ರಂದು ಸೂಳ್ಯ ತಾಲ್ಲೂಕಿನಲ್ಲಿ ಸೂಳ್ಯದ ಎಂ.ಎಲ್.ಎ.ರವರಾದ ಸನ್ಮಾನ್ಯ ಕುಶಾಲರವರು ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಸುಮಾರು 20–25 ಗೂಂಡಾಗಳು ಬಿ.ಜೆ.ಪಿ. ಕಾರ್ಯಕರ್ತರು ಬಂದು ಅವರ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷಣಿಯರೆ, ನಾನು ಮೊನ್ನೆ ಕೂಡ ಶ್ರೀಮಾನ್ ಕುಶಾಲರವರ ಜೊತೆ ಮಾತಿನಾಡಿದ್ದೇನೆ. ಮಾನ್ಯ ಸದಸ್ಯರು ಬೇರೆಯವರು ಮತ್ತು ಅಲ್ಲಿರತಕ್ಕ ಜಿಲ್ಲೆಯ ಹಿರಿಯರು ಎಲ್ಲರೂ ಕೂಡ ಕುಶಾಲರವರು ಶಾಲಾ ಅಭಿವೃದ್ಧಿ ಸಮಿತಿಗೆ ಬರುವಾಗ ಹಲ್ಲೆಯಾಗಿದೆ ಎಂದು ಹೇಳಿದ್ದಾರೆ. ನಾನು ಈಗಾಗಲೆ ಡಿ.ಐ.ಜಿ. ಮತ್ತು ಎಸ್.ಪಿ.ಯವರ ಜೊತೆ ಮಾತನಾಡಿದ್ದೇನೆ ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) :- ಉಪಾಧ್ಯಕ್ಷಣಿಯರೆ, ಸುಳ್ಯ ತಾಲ್ಲೂಕು ಯಾವಾಗಲೂ ಬಹಳ ಅಪಾಯ - ಮಟ್ಟದಲ್ಲಿದೆ. ಅಲ್ಲಿ ಯಾವಾಗಗಲೂ ಶಾಂತ ವಾತಾವರಣ ಇರುವುದಿಲ್ಲ. ಅಲ್ಲಿನ ಶಾಸಕರಿಗೆ ಈ ರೀತಿಯ ಪರಿಸ್ಥಿತಿ ಬಂದರೆ ಜನಸಾಮಾನ್ಯರಿಗೆ, ಪಾಪದವರಿಗೆ ವಾಸಿಸುವುದು ಕಷ್ಟವಾಗಿದೆ. ಹಿಂದೆ ಒಂದೆರಡು ಬಾರಿ ಈ ರೀತಿ ಪ್ರಕೋಪದ ಪರಿಸ್ಥಿತಿ ಬಂದಿರುವುದರಿಂದ ನಮ್ಮ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡು ಸುಳ್ಯದ ಶಾಸಕರ ರಕ್ಷಣೆ ಮಾತ್ರವಲ್ಲ ಪಾಪದವರಿಗೆ, ಜನಸಾಮಾನ್ಯರಿಗೆ ಕೂಡ ರಕ್ಷಣೆಯಾಗತಕ್ಕ ಕ್ರಮವನ್ನು ರೂಪಿಸಬೇಕೆಂದು ನಾನು ಸುಳ್ಯದ ಜನತೆಯ ಪರವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಕುಶಾಲ :- ಉಪಾಧ್ಯಕ್ಷಣಿಯರೆ, ಸುಮಾರು 25 ಜನ ಗೂಂಡಾಗಳು ನನ್ನ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ ಸಾಧಾರಣವಾಗಿ 10 ಜನರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆ, ಇನ್ನೂ ಉಳಿದ 15 ಮಂದಿ ಗೂಂಡಾಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದು ಮಾತ್ರವಲ್ಲದೆ ಅವರು ನನ್ನ ಬಗ್ಗೆ ಬೆದರಿಕೆಯನ್ನು ಕೂಡ ಹಾಕಿದ್ದಾರೆ ಇದರ ಬಗ್ಗೆ ಸರ್ಕಾರ ಹಾಗೂ ಇಲಾಖೆಯು ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

FILLING UP OF URDU LECTURERS ' POSTS

SRI QUAMRUL ISLAM (Gulbarga) : Madam Deputy Speaker, I want to draw the attention of the Hon'ble Minister for Education regarding one injustice which is going on in filling the posts of Urdu Lecturers. Today there is an interview by the KPSC for the posts of Urdu lecturers. There are 7 posts and about 36 candidates are appearing for the interview. Out of 7 posts, one is for SC, another for S.T., one each for 'A' group, 'B' group and General Merit, and then additional posts one each for SC and ST. So, only three posts are available for 'A' group, 'B' group and General Merit. The remaining four posts, which are meant for SC/STs cannot be filled up because out of 36 candidates who are appearing before the KPSC for interview, no SC and ST candidate is available. This is not the first time that such a thing is happening, but for the last seven years Urdu knowing SC/ST lecturers are not available and with authenticity I tell you, if you take the list of Urdu students in the six or seven universities which are there in Karnataka, not a single student is studying Urdu M.A. who can apply for these posts of Urdu lecturers in the near future or in another 10 to 15 years. That means, these posts will never be filled up at all. Earlier also for Arabic there were three posts– one for SC, one for ST and one for the General Merit. Out of this, only one post was filled up and the other two could not be filled for want of candidates. I raised this issue in the last session also. I came to know that some steps are being taken as far as the roster

system and exemption to be given regarding Urdu lecturers. I understand SCs/STs are available in other languages like Marathi, Telugu, Tamil and others. But, according to the information I have got, in Urdu none of the SCs/STs is available. There is no chance also because no student belonging to these groups is studying B.A., or M.A., in Urdu. Therefore, I request that exemption may be given for the recruitment of Urdu lecturers posts in KPSC and even in other posts like Professors and teachers so that justice can be done. Otherwise, these posts of Urdu lecturers will not be filled up and students who are studying will not have lecturers/professors. I request, through you Madam, the Hon'ble Minister to immediately take a decision and send a communication or order regarding exemption of filling up of Urdu posts reserved for SCs and STs.

SRI SADATH ALI KHAN : Last time the same question was raised by me regarding the appointment of Urdu teachers for middle and high schools. For the last thirty years Urdu teachers are not available from among SCs and STs. Every year the posts are going to be lapsed. I don't know why eventhough they knew that Urdu teachers are not available among SCs/STs these posts are reserved for them. The Government should take immediate steps to see that all the backlog of vacant Urdu teachers' posts are filled up by amending the rules.

SRI S.M. YAHYA : It is a very bigger issue and serious too. It is not question of just taking one or two in the coming KPSC interview. Urdu is a peculiar language as far as Karnataka is concerned. There were days when we used to get SC/ST candidates from Gulbarga, Bidar and Raichur. But, now absolutely the time has changed. There is not a single SC/ST candidate learning Urdu. Previously they used to learn. In a number of Government schools where there are no Urdu teachers, because of this reservation clause applicable to Urdu teachers posts, it is impracticable and impossible to get SCs/STs. Therefore, I would request the Minister for Education that rules have to be changed regarding Urdu teachers. If they don't get for one year, then reservation can be cancelled and it may be given to whoever is available. Since nobody is coming from SCs/STs there is no used in keeping these posts vacant. There are number of vacant posts in schools because of this impediment and this impediment will have to be removed. I am sure, our Education Minister, who knows how the administration works, will immediately find some solution. You can withhold reservation rules as far as the appointment of Urdu teachers and lecturers are concerned.

ಶ್ರೀ ಎಂ. ವೀರಪ್ಪಮೊಯಿಲಿ :- ಮಾನ್ಯ ಉಪಾಧ್ಯಕ್ಷೆಯವರೆ, 40 ವರ್ಷಗಳಿಂದ ಇದ್ದಂಥ ಸಮಸ್ಯೆಯನ್ನು ನಾವು ಒಂದೇ ವರ್ಷದಲ್ಲಿ ತೀರ್ಮಾನ ಮಾಡಿದ್ದೇವೆ.

ಶ್ರೀ ಖಮರುಲ್ ಇಸ್ಲಾಂ :- ದಯವಿಟ್ಟು ಇಂಗ್ಲೀಷ್‌ನಲ್ಲಿ ಹೇಳಿ. So that I can put supplementaries.

ಶ್ರೀ ಎಂ. ವೀರಪ್ಪಮೊಯಿಲಿ :- ನಾನು ಹೇಳುವುದು ಇಂಗ್ಲಿಷ್‌ನಲ್ಲಿ ಇಲ್ಲ, ಕನ್ನಡದಲ್ಲಿ ತಮಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಖಮರುಲ್ ಇಸ್ಲಾಂ :- ನನಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ. ಆದುದರಿಂದ ನಾನು ಕನ್ನಡದಲ್ಲಿ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ತಾವು ಈ ಉತ್ತರವನ್ನು ಇಂಗ್ಲೀಷ್‌ನಲ್ಲಿ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ :- ನಾನು ಕನ್ನಡದಲ್ಲಿ ಉತ್ತರವನ್ನು ಕೊಡುವಾಗ ತಮಗೆ ಅರ್ಥವಾಗತಕ್ಕ ಕನ್ನಡದಲ್ಲೇ ಉತ್ತರವನ್ನು ಕೊಡುತ್ತೇನೆ. ತಮಗೆ ಅರ್ಥವಾಗುವಂತೆ ಹೇಳುತ್ತೇನೆ. ಅದು ಅರ್ಥವಾಗದಿದ್ದರೆ, ಆಗ ಇಂಗ್ಲೀಷ್‌ನಲ್ಲಿ ಹೇಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ :- ಇಲ್ಲ ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲ, ಕನ್ನಡದಲ್ಲಿ ನಾನು ಭಾಷಣ ಮಾಡುತ್ತೇನೆ. ಆದರೆ; ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ನೀವು ಕನ್ನಡವನ್ನು ಕಲಿತರೆ ಚೆನ್ನಾಗಿರುತ್ತದೆ. ಕನ್ನಡದಷ್ಟು ಒಳ್ಳೆಯ ಸಂದರ, ಹಾಗೂ ಸರಳವಾದ ಭಾಷೆ ಬೇರೊಂದಿಲ್ಲ. ಇದು ಕಸ್ತೂರಿ ಕನ್ನಡ. ಇದೇ ದೇಶದಲ್ಲಿ ಇಡೀ ಜಗತ್ತಿನಲ್ಲಿ ಇಲ್ಲ. ಆದುದರಿಂದ ತಾವು ಕನ್ನಡವನ್ನು ಕಲಿಯಿರಿ. ಈ ಸಮಸ್ಯೆ ಇರುವುದರಿಂದ ಬಹಳ ತೊಂದರೆಯಾಗುತ್ತದೆಂದು ನಾನು ಈ ವಿಚಾರವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಹೋಗಿ ಎಲ್ಲೆಲ್ಲಿ ರಿಸರ್ವ್ ಕೆಟಗರಿಯಲ್ಲಿ ಉರ್ದು ಟೀಚರ್ಸ್ ಇಲ್ಲ ಅಂದ ಕಡೆ ಈ ರಿಸರ್ವೇಷನ್ ಇರುವುದನ್ನು ಡೀರಿಸರ್ವ್ ಮಾಡತಕ್ಕ ನಿರ್ಣಯವನ್ನು ನಾವು ಈಗಾಗಲೇ ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಿದ್ದೇವೆ.

ಶ್ರೀ ಖಮರುಲ್ ಇಸ್ಲಾಂ :- ಆಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ :- ಹೌದೂ ಆಗಿದೆ. I will have now to see that the decision of the Cabinet will be made applicable to Urdu lecturers also. ಪುನಃ ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೊನ್ನೆ ತೆಗೆದುಕೊಂಡಂಥ ನಿರ್ಣಯದ ಪ್ರಕಾರ ನಿಯಮಾವಳಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಇದು ಈ ತಕ್ಷಣದಿಂದಲೇ ಜಾರಿಗೆ ಬರುತ್ತದೆ. ಅಂದರೆ ಮುಂದಿನ ರಿಕ್ರೂಟ್‌ಮೆಂಟ್‌ಗೆ ಇದು ಅನ್ವಯವಾಗುತ್ತದೆ. ಲೋಕಸೇವಾ ಆಯೋಗದಲ್ಲಿ ಈ ನಿರ್ಣಯವನ್ನು ಅನ್ವಯಿಸಬೇಕಾಗುತ್ತದೆ. ಉರ್ದು ಅಥವಾ ಅರಾಬಿಕ್ ಉಪಾಧ್ಯಾಯರು ಮೀಸಲಾತಿ ವರ್ಗದಲ್ಲಿ ಸಿಕ್ಕದಿದ್ದರೆ ಆಗ ಇದನ್ನು ಸಡಲಿಸುವುದಕ್ಕೆ ತೊಂದರೆಯಾಗುವುದಿಲ್ಲ. ಮೊನ್ನೆ ತೆಗೆದುಕೊಂಡ ನಿರ್ಣಯದಲ್ಲಿ ಇದು ಅನ್ವಯವಾಗುವುದಾದರೆ ಅದು ಕ್ಯಾಬಿನೆಟ್‌ಗೆ ಹೋಗಬೇಕಾಗಿಲ್ಲ. ತಕ್ಷಣ ಜಾರಿ ಮಾಡುತ್ತೇವೆ. ಅದು ಅನ್ವಯವಾಗದಿದ್ದರೆ ಇದನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಸ್. ಎಂ. ಯಾಹ್ಯಾ :- ಮಾನ್ಯ ಮೊಯಿಲಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಇಂಟರ್‌ವ್ಯೂ ಬರಬೇಕಾದರೆ 2–3 ವರ್ಷಗಳಾಗುತ್ತವೆ. ಈಗ ನಡೆಯುತ್ತಿರುವ ಇಂಟರ್‌ವ್ಯೂನಲ್ಲಿ ಇದನ್ನು ನೀವು ಅನ್ವಯಿಸುವಂತೆ ಹೇಳಿದ್ದರೆ ಇನ್ನೂ 2–3 ವರ್ಷಗಳವರೆಗೂ ಈ ಪೋಸ್ಟ್‌ಗಳು ಖಾಲಿ ಇರುತ್ತವೆಂದು ಹೇಳಬಯಸುತ್ತೇನೆ. ಈ ಕಾರಣದಿಂದ ಈ ನೀತಿಯನ್ನು ಈಗಲೇ ಅನ್ವಯಿಸುವಂತೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷೆಯವರೆ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅದು ಈ ಸಾರಿಯ ರಿಕ್ರೂಟ್‌ಮೆಂಟ್‌ಗೇ ಅನ್ವಯವಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

3. ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಕಲ್ಕೇರಿ ಗ್ರಾಮದಲ್ಲಿ ಜಯಶ್ರೀ ನಾಯ್ಕರ್ ಎಂಬ ವಿದ್ಯಾರ್ಥಿನಿಯ ಬೆತ್ತಲೆ ಮೆರವಣಿಗೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ :- ಮಾನ್ಯ ಉಪಾಧ್ಯಕ್ಷೆಯವರೆ, ತಮ್ಮ ಮೂಲಕ ನಾನು ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ. ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಕಲ್ಕೇರಿ ಗ್ರಾಮದಲ್ಲಿ ಕೆಲವು ತಿಂಗಳ ಹಿಂದೆ ಒಂದು ಅಮಾನುಷ ಕೃತ್ಯ ನಡೆಯಿತು. ಜಯಶ್ರೀ ನಾಯ್ಕರ್

ಎನ್ನತಕ್ಕ ವಿದ್ಯಾರ್ಥಿನಿಯನ್ನು ಬೆತ್ತಲೆ ಮೆರವಣಿಗೆ ಮಾಡಿದರು. ಅದರ ದ್ಯೋತಕವಾಗಿ ಆಗಿರತಕ್ಕ ಅನ್ಯಾಯವನ್ನು ಪ್ರತಿಭಟನೆ ಮಾಡುವುದಕ್ಕೆ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಮಾಡಿದರೂ ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಈ ಶತಮಾನದಲ್ಲಿ ನಡೆದಿರಕ್ಕ ಈ ಘಟನೆ ಏನಿದೆ ಇದು ನಿಜಕ್ಕೂ ಒಂದು ನಾಚಿಕೆಗೇಡಿನ ಪ್ರಸಂಗ. ಏಕೆಂದರೆ ಒಬ್ಬ ವಿದ್ಯಾರ್ಥಿಯನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿ ಆಕೆಯ ಮರ್ಮಾಂಗದಲ್ಲಿ ಯೂರಿಯ ಗೊಬ್ಬರದ ಜೊತೆಗೆ ಇನ್ನೂ ಬೇರೆ ವಸ್ತುವನ್ನು ತುರುಕಿ ಅನೇಕ ಗಾಯಗಳನ್ನು ಮಾಡಿದ್ದಾರೆ. ಆದರೂ ಕೂಡ ಸರ್ಕಾರ ಇದರ ಬಗ್ಗೆ ತನ್ನ ಗಮನವನ್ನು ಹರಿಸಿಲ್ಲ.

ಆ ಹಳ್ಳಿಯಲ್ಲಿ ಹಿರಿಯರಿದ್ದಾರೋ ಇಲ್ಲವೋ ಗೊತ್ತಿಲ್ಲ. ಆ ಮುನ್ನೂರು ಜನರು ಆ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದಾರೆ. ಇವತ್ತು ಅವರ ಪರಿಸ್ಥಿತಿ ಏನಾಗಿದೆ ಎಂದರೆ ಅವರು ಅಲ್ಲಿ ವಾಸ ಮಾಡಲಿಕ್ಕೂ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಸರ್ಕಾರದವರು ಈ ಘಟನೆಗೆ ಒಳಗಾದವರ ಪೈಕಿ ಎಷ್ಟು ಜನರನ್ನು ಹಿಡಿದಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಸರ್ಕಾರ ಈ ಘಟನೆಯಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನನೊಂದು ಹೇಳುತ್ತಿದ್ದೇನೆ. ಮತ್ತೆ ಸರ್ಕಾರದವರು, ಮಾನ್ಯ ಗೃಹಮಂತ್ರಿಗಳೂ ಕೂಡಲೇ ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ನಾನು ಮನನೊಂದು ಹೇಳುತ್ತಿದ್ದೇನೆ. ಮತ್ತೆ ಸರ್ಕಾರದವರು, ಮಾನ್ಯ ಗೃಹಮಂತ್ರಿಗಳೂ ಕೂಡಲೇ ಆವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಥ ಘಟನೆಗಳು ರಾಜ್ಯದಲ್ಲಿ ಇನ್ನು ಮುಂದೆ ಎಲ್ಲೂ ನಡೆಯದಂತೆ ಸೂಕ್ತ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅವರಿಗೆ ಅಲ್ಲಿ ಇರಲಿಕ್ಕೆ, ವಾಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೇರೆ ಕಡೆ ವ್ಯವಸ್ಥೆಯನ್ನು ಮಾಡಬೇಕು, ಆ ವಿದ್ಯಾರ್ಥಿಗೆ ಕೆಲಸವನ್ನು ಕೊಡತಕ್ಕಂಥ ಕಾರ್ಯವನ್ನು ಮಾನ್ಯ ಗೃಹಮಂತ್ರಿಗಳು ಮಾಡುವುದರ ಜೊತೆಗೆ ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು. ಕೊಡದೆ ಹೋದರೆ ತಮ್ಮ ಮುಖೇನ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ ಮತ್ತು ಉಗ್ರವಾದ ಹೋರಾಟ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರಾದ ಜುಟ್ಟಲ್‌ರವರು ಬಹಳವಾಗಿ ಈ ಘಟನೆಯಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಾಲಕಿಯ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗೂ ಖಂಡನೆ ಮಾಡಿದ್ದಾರೆ. ಬಳ್ಳಾರಿಯ ನಾಯಕ ಜನಾಂಗದ ವಿದ್ಯಾರ್ಥಿಯ ಬಗ್ಗೆ ಜನರು ಬಂದು ಕ್ಷಮ ಕ್ಷಮ ಭೇಟಿ ಕೊಟ್ಟಿದ್ದಾರೆ. ಶಾಸಕರು ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿಗೆ ಹೋಗಿ ಹೇಳಿದಾಗ ಅವರು ನನಗೆ ಹೋಗಲಿಕ್ಕೆ ಆಗುವುದಿಲ್ಲವಾದ್ದರಿಂದ, ನನಗೆ ಸ್ಥಳಕ್ಕೆ ಹೋಗಲಿಕ್ಕೆ ಹೇಳಿದ್ದರು. ನಾನೂ ಕೂಡ ಖುದ್ದಾಗಿ ಅವರ ಜೊತೆಗೆ ಭೇಟಿಯಾಗಿದ್ದೇನೆ. ಇದರ ಬಗ್ಗೆ ಒಂದು ನಿಸ್ಪಕ್ಷಪಾತವಾದ ರೀತಿಯಲ್ಲಿ ತನಿಖೆಯಾಗಬೇಕೆಂದು ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿಬಂದಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ಮಾಡಿದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಮಾತನಾಡಿ ಈಗಾಗಲೇ ಸರ್ಕಾರ ಸಿ.ಓ.ಡಿ. ತನಿಖೆಗೆ ವಹಿಸಿಕೊಟ್ಟಿದೆ. ಪರೀಕರಪ್ಪ ಪಾಟೀಲ್ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಅವರನ್ನು ಬೇಲ್ ಮೇಲೆ ಬಿಟ್ಟಿದ್ದಾರೆ. ಈ ಸದನದಲ್ಲಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತಿದ್ದೇನೆ, ಅತ್ಯಾಚಾರ ನಡೆದ ಬಗ್ಗೆ ಸಿ.ಓ.ಡಿ. ತನಿಖೆಯ ವರದಿ ಬರುತ್ತದೆ. ತಪ್ಪಿತಸ್ಥರು ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಮಾನ್ಯ ಸದಸ್ಯರಾದ ಅವರ ಜುಟ್ಟಾಳ್‌ರವರು ರಿಹ್ಯಾಬಿಟೇಷನ್ ಮಾಡುವ ಬಗ್ಗೆ ಖುದ್ದಾಗಿ ಮಾತನಾಡಿದ್ದಾರೆ. ಅದನ್ನು ಕೂಡ ಮಾಡುತ್ತೇನೆಂದು ನಾನು ಸರ್ಕಾರದ ವತಿಯಿಂದ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ ಪೂರಕವಾಗಿ ಮಾನ್ಯ ಗೃಹ ಸಚಿವರು ಹೇಳಿರುತ್ತಾರೆ. ಯಾರು ವಿದ್ಯಾರ್ಥಿ ಇದ್ದಾರೋ ಅವರಿಗೆ ಕೆಲಸವನ್ನು ಕೊಡುವುದೇ ಅಲ್ಲ. ವಿದ್ಯಾರ್ಥಿನಿಯ ಮೇಲೆ ದೌರ್ಜನ್ಯ ನಡೆದ ವರ್ತಮಾನ ಬಂದಮೇಲೆ ನನ್ನ ಜೊತೆಯಲ್ಲಿ

ಮಾತನಾಡಿದ್ದಾರೆ. ದೌರ್ಜನ್ಯ ನಡೆದಂಥ ವಿದ್ಯಾರ್ಥಿಗೆ ಅವರು ಮೇಲ್ ಮಟ್ಟದಲ್ಲಿ ಎಲ್ಲಿಯವರೆಗೆ ಕಲಿಯಲಿದ್ದಾರೋ ಅಲ್ಲಿಯವರೆಗೆ ಆಗತಕ್ಕಂಥ ಖರ್ಚು, ಪಾಕೆಟ್ ಮನಿಯನ್ನು ಸರ್ಕಾರವೇ ಕೊಡಬೇಕೆಂದು ಶಿಕ್ಷಣ ಇಲಾಖೆಯವರು ನಿರ್ಣಯವನ್ನು ತೆಗೆದುಕೊಂಡು ಆಜ್ಞೆಯನ್ನೂ ಕೂಡ ಹೊರಡಿಸಲಿದ್ದಾರೆಂದು ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಜಿ.ಹೆಚ್. ಜುಟ್ಟಾಳ್ :- ಮಾನ್ಯ ಅಧ್ಯಕ್ಷರೇ ಸರ್ಕಾರ ಏನು ನಿರ್ಧಾರ ತೆಗೆದುಕೊಂಡಿದೆ, ನಾನು ಅದನ್ನು ಸ್ವಾಗತ ಮಾಡುತ್ತೇನೆ.

ನಿಯಮ - 334 ರ ಮೇರೆಗೆ

1. ಬೆಂಗಳೂರು ನಗರದ ಪ್ರಕಾಶನಗರದಲ್ಲಿ ರೌಡಿಗಳ ಗುಂಪು ಘರ್ಷಣೆಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ನಿವಾರಣೆ.

ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) :- ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ಬೆಂಗಳೂರು ನಗರದ ಪ್ರಕಾಶ್ ನಗರದಲ್ಲಿ ಇತ್ತೀಚೆಗೆ ರೌಡಿಗಳ ಗುಂಪು ಘರ್ಷಣೆಗಳು ಹೆಚ್ಚಿದ್ದು ಇದರಿಂದ ಈ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ರಾತ್ರಿಯ ಸಮಯದಲ್ಲಿ ನಡುರಸ್ತೆಯಲ್ಲೇ ಗುಂಪು ಘರ್ಷಣೆಗಳು ಪ್ರಾರಂಭವಾಗುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ತಿರುಗಾಡಲೂ ಸಹ ಆಗದ ಪರಿಸ್ಥಿತಿ ಇದೆ. ರಾತ್ರಿಯ ವೇಳೆಯಲ್ಲಿ ಭಯವಿಲ್ಲದೆ ನಿದ್ದೆ ಮಾಡಲೂ ಸಹ ಆಗುತ್ತಿಲ್ಲ. ಈ ಪ್ರದೇಶದಲ್ಲಿ ಪೋಲೀಸ್ ಗಸ್ತಿನ ವ್ಯವಸ್ಥೆಯನ್ನು ಹೆಚ್ಚಿಸಬೇಕು ಮತ್ತು ಪೋಲೀಸ್ ಮೊಬೈಲ್ ವಾಹನಗಳ ಓಡಾಟವನ್ನು ಹೆಚ್ಚಿಸಿ ಸಾರ್ವಜನಿಕರಿಗೆ ಉಂಟಾಗಿರುವ ಭಯ ಮತ್ತು ತೊಂದರೆಯನ್ನು ನಿವಾರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯಗೃಹ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರಿನ ಪ್ರಕಾಶ ನಗರ ರಾಜಾಜಿನಗರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುತ್ತದೆ.

ಇತ್ತೀಚೆಗೆ ಪ್ರಕಾಶ ನಗರದ ವ್ಯಾಪ್ತಿಯಲ್ಲಿ ಟಪ್ಪು ಮತ್ತು ಅತನ ಸಂಗಡಿಗರು ಎರಡು ಕೃತ್ಯಗಳಲ್ಲಿ ಭಾಗವಹಿಸಿರುತ್ತಾರೆ. ದಿನಾಂಕ 24.2.1992 ರಂದು ರಾತ್ರಿ 11.55 ಘಂಟೆಗೆ ಟಪ್ಪು ಹಾಗೂ ಸಂಗಡಿಗರು ಮುರಳಿ ಎಂಬ ವ್ಯಕ್ತಿಗೆ ಚಾಕುವಿನಿಂದ ಹೊಡೆದು ಪರಾರಿಯಾಗಿರುತ್ತಾನೆ. ಈ ಬಗ್ಗೆ ರಾಜಾಜಿನಗರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ 75.92 ಕಲಂ 324 ಭಾ.ದಂ.ಸಂ.ಪ್ರಕಾರ ದಾಖಲಾಗಿರುತ್ತದೆ. ಅದೇ ದಿವಸ ಸಿ.ಎಂ. ವೆಂಕಟೇಶ್ ಎಂಬ ವ್ಯಕ್ತಿಗೆ ಸಹಾ ಗಾಯ ಮಾಡಿರುತ್ತಾರೆ. ಈ ಬಗ್ಗೆ ಸಹಾ ರಾಜಾಜಿನಗರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ 77.92 ಕಲಂ 324 ಭಾ.ದಂ.ಸಂ. ರೆ: ವಿ 34 ಭಾ.ದಂ.ಸಂ. ಪ್ರಕಾರ ದಾಖಲಾಗಿರುತ್ತದೆ. ಈ ಎರಡೂ ಮೊಕದ್ದಮೆಗಳು ಪ್ರಕಾಶನಗರದಲ್ಲಿ ಇತ್ತೀಚೆಗೆ ನಡೆದಿರುತ್ತದೆ. ಈ ಗಲಾಟೆಗಳಿಗೆ ಕಾರಣರಾದ ವ್ಯಕ್ತಿಗಳನ್ನು ಈಗಾಗಲೇ ಗುರ್ತಿಸಿ ಬಂಧಿಸಲಾಗಿದೆ. ಈ ವ್ಯಕ್ತಿಗಳು ಇತ್ತೀಚೆಗೆ ಮಾತ್ರ ಇಂತಹ ಕೃತ್ಯಗಳಲ್ಲಿ ತೊಡಗಿದ್ದು, ಅವರುಗಳನ್ನು ಸಂಪೂರ್ಣವಾಗಿ ಕಾನೂನಿನ ಚೌಕಟ್ಟಿನಲ್ಲಿ ತಹಬಂದಿಗೆ ತರಲಾಗುತ್ತದೆ.

ಮೇಲೆ ತಿಳಿಸಿದ ಎರಡು ಕೃತ್ಯಗಳ ಹೊರತು ರೌಡಿ ಗುಂಪುಗಳ ನಡುವೆ ಯಾವುದೇ ಘರ್ಷಣೆ ಪ್ರಕಾಶ ನಗರ ವ್ಯಾಪ್ತಿಯಲ್ಲಿ ನಡೆದಿರುವುದಿಲ್ಲ.

ಪ್ರಕಾಶ ನಗರದಲ್ಲಿ ಸತತವಾಗಿ ಒಂದು ಸಿ.ಎ.ಆರ್. ತುಕಡಿ (ಸಶಸ್ತ್ರ ಪೋಲೀಸ್ ಪಡೆ) ಕರ್ತವ್ಯದ ಮೇಲಿರುತ್ತದೆ ಹಾಗೂ ಗಸ್ತು ವ್ಯವಸ್ಥೆಯನ್ನು ತೀವ್ರಗೊಳಿಸಲಾಗಿದ್ದು, ಪ್ರತಿಗಳಲ್ಲಿ ಹಾಗೂ ಬೀದಿಗಳಲ್ಲಿರುವ ಕೆಟ್ಟ ಚಾರಿತ್ರ್ಯ ಮತ್ತು ಸಂಶಯಾಸ್ಪದ ವ್ಯಕ್ತಿಗಳ ಪಟ್ಟಿ ಮಾಡಿ ಅವರ ಚಲನವಲನಗಳನ್ನು ಗಮನಿಸುವ ಕೆಲಸವನ್ನು ಸಹಾ ಮಾಡಲಾಗಿದೆ. ಸಮಯಕ್ಕೆ ಸರಿಯಾಗಿ ಮದ್ಯ ಹಾಗೂ ಇತರ ಅಂಗಡಿಗಳನ್ನು ಮುಚ್ಚಿಸಿ ರಾಜಾಜಿನಗರ ಪೋಲೀಸ್ ಇನ್‌ಸ್ಪೆಕ್ಟರ್ ಅವರ ನೇತೃತ್ವದಲ್ಲಿ ಸಿಬ್ಬಂದಿ ವರ್ಗ ಗಸ್ತು ತಿರುಗುತ್ತಿರುತ್ತಾರೆ.

ಮೇಲೆ ಕಾಣಿಸಿದ ಕೃತ್ಯಗಳ ಹೊರತು, ಜನ ಜೀವನಕ್ಕೆ ತೊಂದರೆಯಾಗತಕ್ಕ ಭಯದ ವಾತಾವರಣ ಸೃಷ್ಟಿಯಾಗುವ ಯಾವುದೇ ಕೃತ್ಯ ನಡೆದಿರುವುದಿಲ್ಲ. ಅಂತಹ ಯಾವುದೇ ಗುಂಪು ಘರ್ಷಣೆಗಳಿಗೆ ಅವಕಾಶ ನೀಡದಂತೆ ಪೋಲೀಸ್ ವ್ಯವಸ್ಥೆಯನ್ನು ಬಿಗಿಗೊಳಿಸಲಾಗಿದೆ.

2. ಬೆಂಗಳೂರು ಜಯನಗರದಲ್ಲಿರುವ ಸಂಜಯಗಾಂಧಿ ಆಪಘಾತ ಪುನರ್ವಸತಿ ಕೇಂದ್ರದಲ್ಲಿ ಧರ್ಮಶಾಲೆಯನ್ನು ಕಟ್ಟಿಸುವ ಬಗ್ಗೆ.

ಶ್ರೀ ರಾಮಲಿಂಗರೆಡ್ಡಿ (ಜಯನಗರ) :- ಮಾನ್ಯ ಉಪಾಧ್ಯಕ್ಷೆಣೆಯರೇ, ಬೆಂಗಳೂರಿನ ಜಯನಗರದಲ್ಲಿರುವ ಸಂಜಯಗಾಂಧಿ ಆಪಘಾತ ಪುನರ್ವಸತಿ ಕೇಂದ್ರದಲ್ಲಿ ಒಳರೋಗಿಗಳನ್ನು ನೋಡಿಕೊಳ್ಳಲು ಬರತಕ್ಕ ಸಂಬಂಧಿಕರಿಗೆ ಆಸ್ಪತ್ರೆಯ ಆವರಣದಲ್ಲಿ ಉಳಿದುಕೊಳ್ಳಲು ಜಾಗವಿರುವುದಿಲ್ಲ. ಕಿದ್ವಾಯ್ ಗ್ರಂಥಿ ಸಂಸ್ಥೆಯಲ್ಲಿರುವ ರೀತಿಯಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿಸಿದರೆ, ಅದರಿಂದ ಒಳರೋಗಿಗಳನ್ನು ನೋಡಿಕೊಳ್ಳಲು ಬರತಕ್ಕ ಸಂಬಂಧಿಕರಿಗೆ ಬಹಳ ಸಹಾಯಕವಾಗುವುದು. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿ ಗೌಡ (ಆರೋಗ್ಯ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷೆಣೆಯವರೆ, ಮಾನ್ಯ ಸದಸ್ಯರು ಸಂಜಯಗಾಂಧಿ ಆಪಘಾತ ಆಸ್ಪತ್ರೆಯಲ್ಲಿ ರೋಗಿಗಳನ್ನು ನೋಡಿಕೊಳ್ಳುವುದಕ್ಕೆ ಬರತಕ್ಕ ಜನತೆಗೆ ಧರ್ಮಶಾಲೆ ಕಟ್ಟಬೇಕೆಂಬ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಜಯನಗರ ಆಸ್ಪತ್ರೆ ಏನಿದೆ ಇದು ಹಂಗಾಮಿಯಾಗಿ ನಡೆಸತಕ್ಕ ಆಸ್ಪತ್ರೆ. ಅದಕ್ಕೆ ತನ್ನದೇ ಆದ ಕಟ್ಟಡವನ್ನು ಕಟ್ಟುತ್ತಿದ್ದೇವೆ. 150 ಹಾಸಿಗೆ ಇರತಕ್ಕ ಆಸ್ಪತ್ರೆಯನ್ನು ನಿಮಾನ್ಸ್ ಪಕ್ಕದಲ್ಲಿ ಕಟ್ಟುತ್ತಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಸಧ್ಯದಲ್ಲೇ ಆ ಆಸ್ಪತ್ರೆಯನ್ನು ಅಲ್ಲಿಗೆ ವರ್ಗಾವಣೆ ಮಾಡತಕ್ಕ ಒಂದು ತೀರ್ಮಾನ ಇರುವುದರಿಂದ ಮತ್ತು ಕಟ್ಟಡ ಕೂಡ ಮುಗಿಯುತ್ತ ಬಂದಿರುವುದರಿಂದ ಜಯನಗರ ಆಸ್ಪತ್ರೆಯ ಪಕ್ಕದಲ್ಲಿ ಧರ್ಮಶಾಲೆ ಕಟ್ಟತಕ್ಕ ಅಗತ್ಯ ಇಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯುಸುತ್ತೇನೆ. ಆಸ್ಪತ್ರೆ ಅಲ್ಲಿಗೆ ವರ್ಗಾವಣೆ ಆದನಂತರ ಅಲ್ಲಿಯ ಪರಿಸ್ಥಿತಿ ನೋಡಿ ನಂತರ ಸರ್ಕಾರ ಆ ವಿಷಯವನ್ನು ಪರಿಶೀಲಿಸುತ್ತಿದೆ.

3. ಕುಂದಗೋಳ ತಾಲ್ಲೂಕು, ಕಳಸ ಮಂಡಲ ಪ್ರಧಾನರಾದ ಶ್ರೀ ಫಕೀರ ಗೌಡ ಪಾಟೀಲ್, ಅವರು ಕಾಣೆಯಾಗಿರುವ ಬಗ್ಗೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ (ಕುಂದಗೋಳ) :- ಮಾನ್ಯ ಉಪಾಧ್ಯಕ್ಷೆಣೆಯವರೆ, ಕುಂದಗೋಳ ತಾಲ್ಲೂಕು ಕಳಸ ಗ್ರಾಮದ ಶ್ರೀ ಪಕ್ಕೀರಗೌಡ ಪಾಟೀಲ್ ಇವರು ಕಳಸ ಮಂಡಲದ ಪ್ರಧಾನರಾಗಿದ್ದು, ಒಳ್ಳೆಯ ಜನಾನುರಾಗಿಗಳಲ್ಲದೆ, ಪ್ರಗತಿಪರ ರೈತರಾಗಿದ್ದರು. ಇವರು ಇದ್ದಕ್ಕಿದ್ದ ಹಾಗೆ ನಾಪತ್ತೆಯಾಗಿದ್ದು ಸಂಶಯಕ್ಕೆ ಎಡೆ ಮಾಡಿಕೊಟ್ಟಿರುತ್ತದೆ. ಕರ್ನಾಟಕ ಸರ್ಕಾರ ಸಿ.ಒ.ಡಿ. ತನಿಖೆಗೆ ಆಜ್ಞೆ ಮಾಡಿದ್ದು, ತನಿಖೆ ಯಾವ ಹಂತದಲ್ಲಿ ಇರುವುದು ಅಲ್ಲದೆ ಸಿ.ಒ.ಡಿ ತನಿಖಾ ವರದಿಯ ಆಧಾರದ ಮೇಲೆ ಆಗಲಿ ಅಥವಾ ಪೋಲೀಸ್ ಮೂಲಗಳಿಂದ ಏನಾದರೂ ಕ್ರಮ ತೆಗೆದುಕೊಂಡು ಸರ್ಕಾರ ಈ ಮೂಲಕ ಕಾಣೆಯಾಗಿರುವ ಕಳಸ ಮಂಡಳ ಪ್ರಧಾನರ ಬಗ್ಗೆ ನಿರ್ದಿಷ್ಟವಾದ ಹೇಳಿಕೆಯನ್ನು ಸರ್ಕಾರದವರು ಕೊಡುವರೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :- ಮಾನ್ಯ ಉಪಾಧ್ಯಕ್ಷೆಣೆಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಫಕೀರಗೌಡ ಪಾಟೀಲ್, ಮಂಡಲ ಪ್ರಧಾನರು, ಕಳಸ ಮಂಡಲ, ಕುಂದಗೋಳ ತಾಲ್ಲೂಕು, ಇವರು ಕಾಣೆಯಾದ ಬಗ್ಗೆ ಈಗಾಗಲೇ ಸಿ.ಒ.ಡಿ. ತನಿಖೆಯನ್ನು ಸಿಂಧಗಿ ಕ್ಷೇತ್ರದ

ಶಾಸಕರಾದ ಡಾ || ಆರ್.ಬಿ. ಚೌಧುರಿಯವರ ಕೋರಿಕೆಯ ಮೇರೆಗೆ ದಿನಾಂಕ 24.7.91 ರಂದು ಸಿ.ಓ.ಡಿ. ತನಿಖೆಗೆ ವಹಿಸಿದ್ದು, ಸಿ.ಓ.ಡಿ. ತನಿಖಾ ವರದಿ ದಿನಾಂಕ 13–14.11.1991 ರಂತೆ ಶ್ರೀ ಫಕೀರ ಗೌಡ ಪಾಟೀಲ್ ಅವರು ದಿನಾಂಕ 24.7.1991ರಂದು ಕಾಣೆಯಾಗಿದ್ದು, ಇವರ ಶೋಧನೆಗಾಗಿ ಸಿ.ಓ.ಡಿ ಪೋಲೀಸರು ಸ್ಥಳೀಯ ಪತ್ರಿಕೆಗಳಲ್ಲಿ ಹಾಗೂ ದೂರದರ್ಶನದಲ್ಲಿ ಮನುಷ್ಯ ಕಾಣೆಯಾದ ಬಗ್ಗೆ ಪ್ರಚಾರ ಪಡಿಸಿದ್ದು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಆಸ್ಪತ್ರೆಗಳ ಶವಾಗಾರಗಳಲ್ಲಿ ಶೋಧನೆ ಮಾಡಲಾಗಿದೆ. ಕಾಣೆಯಾದ ವ್ಯಕ್ತಿಯ ಸಂಬಂಧಿಕರು ಹಾಗೂ ಜಿಲ್ಲೆಯ ಇನ್ನಿತರ ಪೋಲೀಸ್ ಠಾಣೆಗಳಲ್ಲೂ ವಿಚಾರಿಸಲಾಗಿದೆ. ಎಲ್ಲಾ ವಿಧವಾದ ಪ್ರಯತ್ನಗಳಿಂದಲೂ ಶ್ರೀ ಫಕೀರಗೌಡ ಪಾಟೀಲರ ಸುಳಿವು ದೊರೆತಿರುವುದಿಲ್ಲ. ಆದಾಗ್ಯೂ, ಕಾಣೆಯಾದ ವ್ಯಕ್ತಿಯು ಚುನಾವಣಾ ಸಂಬಂಧದಲ್ಲಿ ಸುಮಾರು ರೂ.50,000–00 ಗಳಷ್ಟು ಒಟ್ಟು ಸಾಲ ಮಾಡಿದ್ದುದೂ ಅಲ್ಲದೆ ಇವರು ಮಂಡಲ ಪ್ರಧಾನರಾಗಿದ್ದ ಅವಧಿಯಲ್ಲಿ ಈ ಮಂಡಲದಲ್ಲಿ ಸುಮಾರು ರೂ.70,023–25 ಹಣ ದುರುಪಯೋಗ ಆಡಿಟ್ ವರದಿಯಿಂದ ಹೊರಬಿದ್ದಿದೆಯೆಂದೂ ಗೊತ್ತಾಗಿದೆ. ಉಳಿದಂತೆ ಸದರಿ ವ್ಯಕ್ತಿಯ ಸುಳಿವು ಸಿಕ್ಕಿರುವುದಿಲ್ಲ, ಆದಾಗ್ಯೂ ಇವರ ಶೋಧನೆಗಾಗಿ ಸ್ಥಳೀಯ ಪೋಲೀಸರ ಪ್ರಯತ್ನಗಳು ಮುಂದುವರಿಯುತ್ತಿವೆ.

4. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ರಂಗಸ್ವಾಮಿ ಗುಡ್ಡದ ತೋಟಗಾರಿಕಾ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಪರಿಶಿಷ್ಟ ಜಾತಿಯ ಕಾರ್ಮಿಕರನ್ನು ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿಕಾರರನ್ನಾಗಿ ಮುಂದುವರಿಸುವ ಬಗ್ಗೆ.

ಶ್ರೀಮತಿ ಸುಮ ಮಸಂತ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, 1985 ರಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿ ಅಭಿವೃದ್ಧಿ ಸಹಕಾರ ಸಂಘವು ತುಮಕೂರು ಜಿಲ್ಲೆ ಕುಣಿಗಲ್‌ತಾಲ್ಲೂಕಿನ ರಂಗಸ್ವಾಮಿ ಗುಡ್ಡದಲ್ಲಿರುವ ತೋಟಗಾರಿಕಾ ಜಮೀನಿನಲ್ಲಿ 500 ಎಕರೆ ಜಮೀನನ್ನು ಗುತ್ತಿಗೆ ಪಡೆದು ಹೂವು, ಹಣ್ಣು ಮತ್ತು ತರಕಾರಿಯನ್ನು ಬೆಳೆದು ಅಂತರರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಮಾಡುವ ಯೋಜನೆಯೊಂದನ್ನು ಪ್ರಾರಂಭಿಸಿತ್ತು. ಈ ಯೋಜನೆಗೆ ಸುಮಾರು 42 ಕೋಟಿ ರೂಪಾಯಿಗಳ ಅಂದಾಜು ವೆಚ್ಚವಿದ್ದು 87 ಲಕ್ಷ ರೂಪಾಯಿಗಳನ್ನು ಈವರೆಗೆ ಖರ್ಚು ಮಾಡಲಾಗಿದೆ. ಈ ಪ್ರದೇಶದಲ್ಲಿ ಕೆಲಸ ಮಾಡಲು 97 ಮಂದಿ ಪರಿಶಿಷ್ಟ ಜಾತಿಯ ಕೆಲಸಗಾರರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ ಈಗ್ಗೆ ಎರಡು ವರ್ಷಗಳಿಂದ ಯೋಜನೆಯು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೂ ಸಹ ಆರೇಳು ತಿಂಗಳ ಸಂಬಳ ಕೊಟ್ಟಿರುವುದಿಲ್ಲ. ಯೋಜನೆ ಸಂಪೂರ್ಣ ವಿಫಲವಾಗಿರುವುದರಿಂದ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಗುತ್ತಿಗೆಗಾಗಿ ಪಡೆದಿದ್ದ 500 ಎಕರೆ ಜಮೀನನ್ನು ಸರ್ಕಾರ 'ಆಸ್‌ಪಾಸ್' ನಿಂದ ತಾರೀಖು 23.8.1990 ರಲ್ಲಿ ವಾಪಸ್ಸು ಪಡೆದು ಪುನಃ ತೋಟಗಾರಿಕಾ ಇಲಾಖೆಗೆ ವರ್ಗಾಯಿಸಿದೆ ಎಂಬುದಾಗಿ ತಿಳಿದುಬಂದಿದೆ. ಬೀದಿಪಾಲಾಗಿರುವ ಕಾರ್ಮಿಕರನ್ನು ತೋಟಗಾರಿಕಾ ಇಲಾಖೆಯಲ್ಲಿ (ಹಾಲಿ ರಂಗಸ್ವಾಮಿ ಗುಡ್ಡದ ತೋಟಗಾರಿಕಾ ಕ್ಷೇತ್ರದಲ್ಲಿ) ಮುಂದುವರೆಸುವಂತೆ ಅಥವಾ ತಲಾ ಐದು ಎಕರೆ ಜಮೀನನ್ನು ಮಂಜೂರು ಮಾಡಿಕೊಡುವಂತೆ ಕಾರ್ಮಿಕರು ಸರ್ಕಾರವನ್ನು ಕೋರಿದ್ದಾರೆ. ಇವರೆಲ್ಲರೂ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಕೂಲಿ ವಿನಹ ಜೀವನಕ್ಕೆ ಅನ್ಯಮಾರ್ಗವಿರುವುದಿಲ್ಲ. ಆದ್ದರಿಂದ ಇವರೆಲ್ಲರನ್ನೂ ತೋಟಗಾರಿಕಾ ಇಲಾಖೆಯಲ್ಲಿ ದಿನಗೂಲಿಕಾರರನ್ನಾಗಿ ಮುಂದುವರೆಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಅಖಿಲ ಭಾರತ ಪರಿಶಿಷ್ಟ ಜಾತಿ ಅಭಿವೃದ್ಧಿ ಸಹಕಾರ ಸಂಘವು ಭಾರತ ಸರ್ಕಾರದ 1984ರ (All India Schedule Caste Devt. Co–operative Society) ಬಹುರಾಜ್ಯ ಸಹಕಾರಿ ಸಂಘ ಕಾನೂನಿನ ವ್ಯಾಪ್ತಿಯಲ್ಲಿ ನೊಂದಣಿಯಾದ ಸಂಸ್ಥೆ. ಈ ಸಂಸ್ಥೆಯು ತನ್ನದೇ ಆದ ರಫ್ತು ಆಧಾರಿತ ತರಕಾರಿ, ಹೂಗಳನ್ನು ಬೆಳೆದು ನೆದರ್‌ಲ್ಯಾಂಡ್ ರಾಷ್ಟ್ರಕ್ಕೆ ರಫ್ತು ಮಾಡುವ ಯೋಜನೆಯನ್ನು ಜಾರಿಗೊಳಿಸಲು

ಕರ್ನಾಟಕ ಸರ್ಕಾರವನ್ನು ಕೋರಿಕೊಂಡಂತೆ ಕುಣಿಗಲ್ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ 500 ಎಕರೆ ಜಮೀನನ್ನು 1987 ರಲ್ಲಿ ಸದರಿ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತು. ತನ್ನ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸದರಿ ಸಂಸ್ಥೆಯು ಕಾರ್ಮಿಕರನ್ನು ನೇಮಿಸಿಕೊಂಡಿದೆ. ಈ ಸಂಸ್ಥೆಯ ಕಾರ್ಯಚಟುವಟಿಕೆಗೆ ರಾಜ್ಯ ಸರ್ಕಾರವು ಜಮೀನನ್ನು ಒದಗಿಸಿರುವುದೊಂದನ್ನು ಬಿಟ್ಟರೆ ಆರ್ಥಿಕ ಹೊರೆಯಾಗಲೀ ಅಥವಾ ಬೇರೆ ಯಾವುದೇ ವಿಷಯಗಳು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಇರುವುದಿಲ್ಲ. ಕಾರ್ಮಿಕರಿಗೆ ಸಂಬಳ ವಿತರಿಸುವುದು ಸಂಸ್ಥೆಯ ಹೊಣೆಯೂ ಆಗಿರುತ್ತದೆ.

ಈ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳು ಕ್ರಮೇಣ ರಾಜೀನಾಮೆ ಇತ್ತಿರುತ್ತಾರೆ. ಈ ಅಧಿಕಾರಿಗಳನ್ನು ಸದರಿ ಸಂಸ್ಥೆಯು ನೇಮಿಸಿಕೊಂಡಿದ್ದು ಇವರುಗಳು ನಿವೃತ್ತ ಅಧಿಕಾರಿಗಳಾಗಿದ್ದವರು. ಈ ಸಂಸ್ಥೆಯ ಕಾರ್ಯಕ್ರಮಗಳನ್ನು ಪರಿಶೀಲಿಸಲು ದಿನಾಂಕ 30.1.91 ಮತ್ತು 28.2.91 ರಂದು ಎರಡು ಬಾರಿ ಸಭೆ ಕರೆದಾಗ ಸಂಸ್ಥೆಯ ಅಧಿಕಾರಿಗಳು ಈ ಸಭೆಗೆ ಹಾಜರಾಗಿರುವುದಿಲ್ಲ. ಸಂಸ್ಥೆಯ ಮುಖ್ಯ ಕಛೇರಿ ನವ ದೇಹಲಿಯಲ್ಲಿದ್ದು ಇಲ್ಲಿನ ಕಾರ್ಯಗಳು ಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದಲೂ ಮತ್ತು ಗುತ್ತಿಗೆ ಆಧಾರದ ಮೇಲೆ ನೀಡಿದ ಜಮೀನನ್ನು ಸದುಪಯೋಗ ಪಡಿಸಿ ಕೊಳ್ಳಲಿಲ್ಲವಾದ್ದರಿಂದ ಸದರಿ 500 ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ವಾಪಸ್ಸು ಪಡೆಯಲು ತೀರ್ಮಾನಿಸಲಾಗಿದೆ.

ಕಾರ್ಮಿಕರ ಸಂಬಳಕ್ಕೆ ಸಂಬಂಧಿಸಿದಂತೆ ಈ ಕಾರ್ಮಿಕರು ಸಂಸ್ಥೆಯಿಂದಲೇ ನೇಮಿಸಲ್ಪಟ್ಟು ಈಗ ಆ ಸಂಸ್ಥೆಯು ನಿಷ್ಕ್ರಿಯವಾದಾಗ ಹಾಗೂ ಅಲ್ಲಿ ಕೆಲಸವೇ ನಡೆಯದಿರುವಾಗ ಸಂಬಳ ವಿತರಣೆ ಪ್ರಶ್ನೆ ಆ ಸಂಸ್ಥೆಗೆ ಸೇರಿದುದಾಗಿದೆ ಹಾಗೂ ಈ ಕಾರ್ಮಿಕರು ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿಯೂ ಬಾರದಿರುವುದರಿಂದ ಸರ್ಕಾರದ ವತಿಯಿಂದಲೂ ವೇತನ ಪಾವತಿ ಪ್ರಶ್ನೆ ಉದ್ಭವಿಸದು.

ಅರ್ಧಗಂಟೆ ಕಾಲಾವಧಿ ಚರ್ಚೆ

ತೋಟಗಾರಿಕೆ ಉತ್ಪಾದಕರ ಸಹಕಾರ ಮಾರಾಟ ಸಂಘ, ಲಾಲ್‌ಬಾಗ್, ಬೆಂಗಳೂರು, ಇದರ ವ್ಯವಹಾರಗಳಿಗೆ ಸಂಬಂಧಿಸಿದಂತೆ - ದಿನಾಂಕ 27ನೇ ಫೆಬ್ರವರಿ 1992ರ ನಾಲ್ಕನೇ ಪಟ್ಟಿಯ 69(455) ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಿದ ಉತ್ತರದಿಂದ ಉದ್ಭವಿಸಿದ ವಿಚಾರ.

+ ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :- ಮಾನ್ಯ ಅಧ್ಯಕ್ಷೆಯವರೆ, ಈಗ ರೈತನ ಬಹು ಉಪಯುಕ್ತ ಅಂಗವಾದ ತೋಟಗಾರಿಕೆಗೆ ಸಂಬಂಧಪಟ್ಟಂತೆ ನಾನು ಈ ಹಿಂದೆ ಸದನದಲ್ಲಿ ಉತ್ತರಿಸುವ ಪ್ರಶ್ನೆಯಾಗಿ ಕೇಳಿದಂಥ ಪ್ರಶ್ನೆಯ ಆಧಾರದಮೇಲೆ ಬೆಂಗಳೂರಿನಲ್ಲಿರತಕ್ಕ ತೋಟಗಾರಿಕೆ ತೋಟದ ಬೆಳೆಗಾರರ ಮಾರಾಟ ಹಾಗೂ ಸಂಸ್ಕರಣಾ ಸಹಕಾರ ಸಂಘ (ಹಾಪ್ ಕಾಂಸ್) ಅದರ ಇತ್ತೀಚಿನ ವಸ್ತುಸ್ಥಿತಿ ಬಗ್ಗೆ ತಮ್ಮ ಮೂಲಕ ಈ ಸದನದ ಗಮನಕ್ಕೆ ಕೆಲವಾರು ವಿಷಯಗಳನ್ನು ಹೇಳಬೇಕೆಂಬ ಉದ್ದೇಶದಿಂದ ಅದರಲ್ಲೂ ಸನ್ಮಾನ್ಯ ತೋಟಗಾರಿಕೆ ರಾಜ್ಯ ಸಚಿವರ ಗಮನಕ್ಕೆ ಕೆಲವಾರು ಸತ್ಯ ಸಂಗತಿಗಳನ್ನು ಇಡಬೇಕೆಂದು ತಮ್ಮನ್ನು ಕಾಲಾವಕಾಶ ಕೋರಿ ತಾವು ಕಾಲಾವಕಾಶ ಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮ್ಮನ್ನು ವಂದಿಸುತ್ತೇನೆ.

ರೈತ ತೋಟದಲ್ಲಿ ಬೆಳೆಯತಕ್ಕ ಹಣ್ಣು ತರಕಾರಿ ಪದಾರ್ಥಗಳನ್ನು ಸಾಕಷ್ಟು ಕಷ್ಟವಹಿಸಿ ಬೆಳೆದು ಮಾರಾಟಕ್ಕೆ ತಂದಾಗ ಆ ಮಾಲಿನ ಮಾರಾಟದ ಒಂದು ಶೋಚನೀಯ ಪರಿಸ್ಥಿತಿಯನ್ನು ಗಮನಿಸಿದರೆ ಬೆಳೆಗಾರನಿಗೆ ಕಡಿಮೆ ಬೆಲೆ ಸಿಕ್ಕರೆ ಕೊಳ್ಳುವವನು ದುಬಾರಿ ಬೆಲೆ ತೆರಬೇಕಾಗುತ್ತದೆ. ನಿಜವಾಗಿಯೂ ಬಹುಪಾಲು ಆದಾಯ ಮಧ್ಯವರ್ತಿಗಳ ಪಾಲು ಆಗುತ್ತದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ , ಆಗ

ತೋಟಗಾರಿಕಾ ನಿರ್ದೇಶಕರಾಗಿದ್ದ ಡಾ|| ಎಂ.ಹೆಚ್. ಮರಿಗೌಡರು ಲಾಲ್‌ಬಾಗ್‌ನಲ್ಲಿ ತೋಟದ ಬೆಳೆಗಾರ ಸಹಕಾರ ಸಂಘವನ್ನು 1959 ರಲ್ಲಿ ಪ್ರಾರಂಭ ಮಾಡಿದರು. ಶೈಶವಾವಸ್ಥೆಯಿಂದ ಆ ಸಂಘ 1980 ರವರೆಗೆ ಸಣ್ಣ ಪ್ರಮಾಣದಲ್ಲಿ ನಡೆದುಕೊಂಡು ಬಂತು. 1980 ರಲ್ಲಿ ಒಬ್ಬ ಧಕ್ಷ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಅಧಿಕಾರಿ ಬಿ.ಎ. ಚೆನ್ನಪ್ಪಗೌಡ ಏನ್ಷುವವರನ್ನು ವ್ಯವಸ್ಥಾಪಕ ನಿರ್ದೇಶಕರಾಗಿ ಮಾಡಿದರು. ಅವರ ಅವಿರತ ಶ್ರಮ ಹಾಗೂ ಕಾಳಜಿಯಿಂದಾಗಿ ಆ ಸಂಘ 1991 ರ ಜೂನ್ ತಿಂಗಳವರೆವಿಗೂ ಸತತವಾಗಿ ತನ್ನ ವಹಿವಾಟನ್ನು ಹೆಚ್ಚು ಮಾಡುತ್ತಾ ಬಹಳ ಹೆಚ್ಚಿನ ಪ್ರಮಾಣದಲ್ಲಿ ಲಾಭವನ್ನು ಗಳಿಸುತ್ತಾ ಬಂತು. ಹೀಗಾಗಿ ಬಹಳ ಜನ ಆಸಕ್ತಿವಂತರ ಕಣ್ಣು ಆ ಸಹಕಾರಿ ಸಂಘದ ಮೇಲೆ ಬಿತ್ತು. 1980ರಲ್ಲಿ ಕೇವಲ 45 ಲಕ್ಷ ವಹಿವಾಟನ್ನು ಹೊಂದಿದ್ದ ಸಂಘ 1991ರ ಜುಲೈ ಹೊತ್ತಿಗೆ 16 ಕೋಟಿ ರೂಪಾಯಿಗಳಿಗೆ ಏರಿತು ಎಂದರೆ 1 ವರ್ಷಕ್ಕೆ 16 ಕೋಟಿ ರೂಪಾಯಿಗಳ ವಹಿವಾಟು. ಇದರ ವಾರ್ಷಿಕ ಲಾಭ ಸುಮಾರು 70 ಲಕ್ಷ ರೂಪಾಯಿಗಳು. ಏನು ಕಾರಣವೋ ಅಧ್ಯಕ್ಷರೇ, ಈ ರೀತಿ ಬೆಳೆಸಿದ ಸಹಕಾರಿಸಂಘದ ವ್ಯವಸ್ಥಾಪಕ ನಿರ್ದೇಶಕರಾಗಿರುವವರನ್ನು ಸರ್ಕಾರ ಜುಲೈ 1991ರಲ್ಲಿ ಬದಲಾವಣೆ ಮಾಡುತ್ತದೆ. ಏನು ಕಾರಣವೋ ಗೊತ್ತಿಲ್ಲ. ಆಗ ಇದ್ದ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಯಾವುದೇ ಒಂದು ಅವ್ಯವಹಾರದ ಅಪಾದನೆಗಳಾಗಲೀ, ಭ್ರಷ್ಟಾಚಾರದ ಆಪಾದನೆಗಳಾಗಲೀ ಆಥವಾ ಸಂಘಕ್ಕೆ ನಷ್ಟ ಉಂಟುಮಾಡುತ್ತಿದ್ದಂತಹ ಅಪಾದನೆಗಳು ಯಾವುದೂ ಇಲ್ಲ. ಸತತವಾಗಿ ಅವರು ಆ ಸಂಸ್ಥೆಯನ್ನು ಬೆಳೆಸಿಕೊಂಡು ಬಂದರು. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದವರು ಅವರ ಒಂದು ಕಾರ್ಯದಕ್ಷತೆಯನ್ನು ನೋಡಿ ಮೆಚ್ಚಿ ವಿಶ್ವಬ್ಯಾಂಕ್ ನೆರವಿನಿಂದ ಸುಮಾರು 350 ಲಕ್ಷ ರೂಪಾಯಿ ಧನಸಹಾಯವನ್ನು ಅದರ ಅಭಿವೃದ್ಧಿ ಹಾಗೂ ವಿಸ್ತರಣೆಗೆ ಮಂಜೂರು ಮಾಡುತ್ತಾರೆ. ಮಂಜೂರು ಮಾಡುವಾಗ ಒಂದು ಶರತ್ತನ್ನು ಹಾಕುತ್ತಾರೆ. ಈಗಿರತಕ್ಕ ವ್ಯವಸ್ಥಾಪಕ ನಿರ್ದೇಶಕರು ಮುಂದುವರಿಯುವ ಹಾಗೆ ಇದ್ದರೆ ನಾವು ಸಾಲ ಕೊಡುತ್ತೇವೆಂದು ಹೇಳಿ ಶರತ್ತು ಇತ್ತು. ಇಷ್ಟೆಲ್ಲಾ ಇದ್ದರೂ ಸಹಾ 1991ರ ಜುಲೈನಲ್ಲಿ ಬದಲಾವಣೆ ಆಗುತ್ತದೆ. ಈ ಬದಲಾವಣೆ ಆದಮೇಲೆ ಆ ಸಂಘ ಅಧೋಗತಿಯ ಕಡೆಗೆ ಹೊರಟು ಈಗ 6 ತಿಂಗಳ ವಹಿವಾಟಿನ ನಂತರ ಅದನ್ನ ಪರಿಶೀಲಿಸಿದಾಗ ಸುಮಾರು 1 ಕೋಟಿ 20 ಲಕ್ಷ ರೂಪಾಯಿಗಳ ನಷ್ಟವನ್ನು ಇವತ್ತು ಅದು ಅನುಭವಿಸಿದ್ದು, ಇನ್ನೂ ಕೆಲವು ದಿವಸ ಇದನ್ನು ಹೀಗೇ ಬಿಟ್ಟರೆ ಅಲ್ಲಿರತಕ್ಕ ನೌಕರರಿಗೂ ಸಂಬಳ ಕೊಡುವುದಕ್ಕೆ ಆಗದೇ ಇರುವ ಕಷ್ಟಪರಿಸ್ಥಿತಿಗೆ ಸಂಘ ಬರುತ್ತದೆಂದು ಹೇಳಬೇಕಾಗಿದೆ. ಹಿಂದೆ ಇದ್ದ ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರು ಅಲ್ಲಿಂದ ಜಾಗ ಬಿಡುವ ಕಾಲದಲ್ಲಿ ಆ ಸಂಸ್ಥೆಗೆ ಸೇರಿದ 76 ಲಕ್ಷ ರೂಪಾಯಿಗಳು ಬ್ಯಾಂಕಿನಲ್ಲಿ ಇತ್ತು. ಎಲ್ಲಾ ವಿವರಗಳನ್ನು ಮಾನ್ಯ ಸಚಿವರು ಕೇಳಿದರೆ ನಾನು ಅದನ್ನು ಅವರಿಗೆ ಒದಗಿಸುತ್ತೇನೆ. ಎಲ್ಲಾ ವಿವರಗಳು ಅವರಿಗೇ ಗೊತ್ತಿದೆ ಎಂದು ನಾನು ತಿಳಿದಿದ್ದೇನೆ. ಆಗ ಇದ್ದದ್ದು 76 ಲಕ್ಷ ರೂಪಾಯಿಗಳು ಆದರೆ ಇವತ್ತು ಆ ಬ್ಯಾಂಕಿನಲ್ಲಿ ಇರತಕ್ಕದ್ದು ಕೇವಲ 5 – 6 ಲಕ್ಷ ರೂಪಾಯಿಗಳು ಮಾತ್ರ ಕೊಡಬೇಕಾಗಿರತಕ್ಕ ಬಾಕಿ ಬಹಳ ಅಧಿಕ ಮೊತ್ತದಲ್ಲಿದೆ. ಈ ಸಹಕಾರ ಸಂಘದ ಬ್ಲಾಬಿನಲ್ಲಿ ಇದ್ದಂತಹ ಹಣದ ಜೊತೆಗೆ ರಾಜ್ಯಸರ್ಕಾರ ಹಾಗೂ ಕೇಂದ್ರಸರ್ಕಾರದವರು ಸೇರಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಮುಖಾಂತರ ಕೊಟ್ಟಂತಹ 65 ಲಕ್ಷ ರೂಪಾಯಿ ಕೂಡ ಸೇರಿ ಆದಂತಹ ಒಟ್ಟು ಮೊತ್ತ 1 ಕೋಟಿ 36 ಲಕ್ಷ ರೂಪಾಯಿ ಇವತ್ತು ಆ ಹಣ ಎಲ್ಲಿ ಹೋಯಿತು? ಈಗ ಅಲ್ಲಿಂದೀಚೆಗೆ ಇವರು ಮಾಡಿರತಕ್ಕ ಅಭಿವೃದ್ಧಿ ಕೆಲಸಗಳು ಅದರ ಬಗ್ಗೆ ಮುಂದೆ ಮಾತನಾಡುತ್ತೇನೆ. ಸುಮಾರು 40 ಲಕ್ಷ ಖರ್ಚಾಗಿರಬೇಕು. ಕ್ರಮೇಣ ವಹಿವಾಟು ಇಳುವರಿಯಾಗಿ ಇಳುವರಿಗೆ ತಕ್ಕಂತೆ ಬಹಳಷ್ಟು ಹೆಚ್ಚಿನ ನಷ್ಟವನ್ನು ಈ ಸಂಘ ಇವತ್ತು ಅನುಭವಿಸುತ್ತಿದೆ. ತಮಗೆ ಅಂಕಿಅಂಶಗಳನ್ನು ಕೊಡಬೇಕಾದರೆ 1991ನೇ ಏಪ್ರಿಲ್ ತಿಂಗಳಿನಲ್ಲಿ ವ್ಯಾಪಾರ 1 ಕೋಟಿ 2 ಲಕ್ಷದ 67 ಸಾವಿರದ 536 ರೂಪಾಯಿ. ನಗಟು ಲಾಭ 15,10,499 ರೂಪಾಯಿ. ನಿವ್ವಳ ಲಾಭ 4,44,900 ರೂಪಾಯಿಗಳು. ಇದು ಆಗಸ್ಟ್ ತಿಂಗಳಿನವರೆಗೂ ನಡೆದುಕೊಂಡು ಬರುತ್ತದೆ. ಹಿಂದೆ ಇದ್ದಂತಹ ವ್ಯವಸ್ಥಾಪಕ ನಿರ್ದೇಶಕರು ಜುಲೈನಲ್ಲಿ ಬಿಡುತ್ತಾರೆ. ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರು ಜುಲೈ ತಿಂಗಳಿನಲ್ಲಿಯೇ ಬರುತ್ತಾರೆ. ಆಗಸ್ಟ್ ತಿಂಗಳಿನಲ್ಲಿ ವ್ಯವಹಾರ ಬಹಳ ಕುತೂಹಲವನ್ನು ಕೆರಳಿಸುತ್ತದೆ.

ಆಗಸ್ಟ್ ತಿಂಗಳಿನಲ್ಲಿ ವ್ಯವಹಾರ 1,13,43,911 ರೂಪಾಯಿ ಮಹಿವಾಟು. ಸಗಟು ಲಾಭ 14,23,148 ರೂಪಾಯಿ. ನಿವ್ವಳ ಲಾಭ 87 ಸಾವಿರ ಆಗಸ್ಟ್ ತಿಂಗಳಿನಲ್ಲಿ, ಹಿಂದಿನ ತಿಂಗಳು ಜುಲೈನಲ್ಲಿ 23,000 ಬರುತ್ತದೆ. ಒಂದೇ ತಿಂಗಳಿಗೆ ಸುಮಾರು ಒಂದೂಕಾಲುಲಕ್ಷ ಕಡಿಮೆಯಾಗುತ್ತದೆ. ಹೊಸದಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ನಂತರದ ತಿಂಗಳಿನಲ್ಲಿ ಅಂದರೆ ಸೆಪ್ಟೆಂಬರ್ ತಿಂಗಳಿನಲ್ಲಿ 1991ರಲ್ಲಿ ಮಹಿವಾಟು 97 ಲಕ್ಷಕ್ಕೆ ಇಳಿಯುತ್ತದೆ. ನಷ್ಟ 3 ಲಕ್ಷ 32ಸಾವಿರ. ಹಿಂದಿನ ತಿಂಗಳು 87 ಲಕ್ಷ ರೂಪಾಯಿ ಲಾಭ ಬಂದಂತಹ ಸಹಕಾರ ಸಂಘದಲ್ಲಿ ಅದರ ಮುಂದಿನ ತಿಂಗಳು 3 ಲಕ್ಷದ 32ಸಾವಿರದ 448 ರೂಪಾಯಿ ನಷ್ಟ ಶುರುವಾಗುತ್ತದೆ. ಅಲ್ಲಿಂದ ನಂತರ ಅಕ್ಟೋಬರ್ ತಿಂಗಳಿನಲ್ಲಿ 1 ಲಕ್ಷದ 85 ಸಾವಿರ ರೂಪಾಯಿ ನಷ್ಟ, ನವೆಂಬರ್ ತಿಂಗಳಿನಲ್ಲಿ 1 ಲಕ್ಷದ 33 ಸಾವಿರ ನಷ್ಟ, ಡಿಸೆಂಬರ್ ತಿಂಗಳಿನಲ್ಲಿ 4 ಲಕ್ಷದ 78 ಸಾವಿರ ರೂಪಾಯಿ ನಷ್ಟ, ನಷ್ಟ, ನಷ್ಟ... ಮಾನ್ಯ ಸಚಿವರು ಈ ಸದನದಲ್ಲಿ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ, ಈಗ ನಷ್ಟವಾಗುವ ಸಂಭವವಿಲ್ಲ, ಆದಾಯವಿದೆಯೆಂದು ಹೇಳಿದರು. ನನಗೆ ಬಹಳ ಖೇದವಾಗುತ್ತಿದೆ ಆ ಮಾತನ್ನು ಕೇಳಿ. ಸಚಿವರ ಬಗ್ಗೆ ನಾನು ಬಹಳ ಗೌರವ ಮತ್ತು ಅಭಿಮಾನವನ್ನು ಇಟ್ಟುಕೊಂಡವನು "ಒಳ್ಳೆಯವರ ಮಾನ ಹಳ್ಳಿಯಲ್ಲಿ ಹೋಯಿತು" ಎನ್ನುವ ಗಾದೆಯ ಮಾತು ನೆನಪಿಗೆ ಬರುತ್ತದೆ. ಅಷ್ಟು ಸ್ವಚ್ಛವಾದ ವ್ಯಕ್ತಿತ್ವವನ್ನುಳ್ಳ ಒಳ್ಳೆಯ ಸಚ್ಚಾರಿತ್ರವನ್ನುಳ್ಳ ಅವರ ಬಾಯಿಯಲ್ಲಿ ಏತಕ್ಕೆ ಸುಳ್ಳು ಹೇಳಿಸುತ್ತಾರೆನ್ನುವುದು ನನ್ನ ಪ್ರಶ್ನೆ. ಸುಳ್ಳು ಹೇಳುವುದರಿಂದ ಒಳ್ಳೆಯವಾದಾಗುವುದಾದರೆ ಸುಳ್ಳು ಹೇಳಿಕೊಳ್ಳಲಿ. ರೈತನಿಗೆ ತಾನು ಬೆಳೆದ ತೋಟದ ಬೆಳೆಗೆ ದೊಡ್ಡ ಆಸರೆಯಾಗಿ ಆ ಸಹಕಾರಸಂಘ ಇಲ್ಲಿಯ ತನಕ ನಡೆದುಕೊಂಡು ಬರುತ್ತಾ ಇದೆ. ಒಂದು ಸತ್ಯಸಂಗತಿಯನ್ನು ಹೇಳುತ್ತೇನೆ, ಯಾರೋ ಒಬ್ಬ ಗ್ರಾಮದಲ್ಲಿ ಬಾಳೆ ಬೆಳೆಯುತ್ತಾನೆ, ಟೊಮಾಟೋ ಬೆಳೆಯುತ್ತಾನೆ, ತರಕಾರಿ ಬೆಳೆಯುತ್ತಾನೆ ಮಧ್ಯವರ್ತಿಗಳು ಅಥವಾ ವ್ಯಾಪಾರಸ್ಥರು ಹೋಗಿ ಬಾಳೆಕಾಯಿಯನ್ನು ಕೊಡುತ್ತೀಯಾ ಏನಪ್ಪ ಅಂದಾಗ, ಎಂದು ಕೇಳಿದಾಗ, ರೈತ ಹೇಳುತ್ತಾ ಇದ್ದ ಕೊಡುತ್ತೇನೆ ಎಂದ. ಬೆಲೆಯೇನು ಹೇಳಪ್ಪ ಬೆಲೆಯೇನು ಹೇಳುವಹಾಗೆ ಇಲ್ಲ ಲಾಲ್‌ಬಾಗ್ ಸೊಸೈಟಿಯಲ್ಲಿ ಏನು ರೇಟ್ ಕೊಡುತ್ತಾರೆ ಆ ರೇಟಿಗೆ ಹಾಕಿಕೊಂಡು ಹೋಗಿ ಅಂದರೆ, ರೈತನಿಗೆ ಲಾಲ್‌ಬಾಗ್‌ನಲ್ಲಿದ್ದ ತೋಟ ಬೆಳೆಗಾರರ ಹಾಗೂ ಮಾರಾಟಗಾರರ ಸಹಕಾರಸಂಘ ಅಲ್ಲಿ ನಿಗದಿ ಮಾಡಿರತಕ್ಕ ಬೆಲೆ ಅದು ಸಕಾರಣವಾದುದು ನನಗೆ ಲಾಭದಾಯಕವಾಗಿದೆಯೆಂದು ಅವನಿಗೆ ಪೂರ್ತಿ ಮನವರಿಕೆಯಾಗಿತ್ತು. ವ್ಯಾಪಾರ ಮಾಡುವವನಿಗೆ ಚೌಕಾಸಿ ಏನೂ ಇಲ್ಲವೇ ಇಲ್ಲ, ಲಾಲ್‌ಬಾಗ್ ಸೊಸೈಟಿಯಲ್ಲಿ ಏನು ರೇಟು ಹಾಕುತ್ತಾರೆ, ಅದರ ಪ್ರಕಾರ ತೆಗೆದುಕೊಂಡು ಹೋಗಿ ಎಂದು ಹೇಳುವಂಥ ಆತ್ಮವಿಶ್ವಾಸ ಏನು ತೋಟಗಾರರಿಗೆ ಬಂದಿತ್ತು, ಅದು ಇಂದು ನುಚ್ಚುನೂರಾಗಿದೆ. ಇದು ಎಲ್ಲಿಗೆ ಹೋಗಿದೆ ಎಂದರೆ ಈಗಿನ ವ್ಯವಸ್ಥಾಪಕ ನಿರ್ದೇಶಕರು ಬಂದಮೇಲೆ ಅನೇಕ ಜನ ರೈತರು ತಂದಂಥ ತರಕಾರಿ, ಹಣ್ಣುಗಳನ್ನು ರಿಜೆಕ್ಟ್ ಮಾಡುವುದು, ಚೆನ್ನಾಗಿ ಇಲ್ಲವೆಂದು ವಾಪಸ್ಸು ತೆಗೆದುಕೊಂಡುಹೋಗಿ ಎಂದು ಹೇಳುವುದು ಹೆಚ್ಚಾಗಿದೆ. ಪಾಪ, ಅವರು ಏನು ಮಾಡಬೇಕು? ಸಗಟಾಗಿ ಮಾರುವುದಕ್ಕೆ ಹೋಗಬೇಕು. ಆಶ್ಚರ್ಯ ಏನೆಂದರೆ, ರೈತನಿಂದ ಇಲ್ಲಿ ತಿರಸ್ಕರಿಸಲ್ಪಟ್ಟಂಥ ಹಣ್ಣು ಮತ್ತು ತರಕಾರಿಯನ್ನು ಬಹಿರಂಗ ಮಾರುಕಟ್ಟೆಗೆ ಹೋದಾಗ ಅಲ್ಲಿ ಸಿಗುವ ಕಡಿಮೆ ಬೆಲೆಗೆ ಕೊಟ್ಟುಹೋಗುತ್ತಾರೆ. ಪುನಃ ಈ ಸಹಕಾರ ಸಂಘದವರು ಇದೇ ತರಕಾರಿ, ಹಣ್ಣನ್ನು ಬಹಿರಂಗ ಮಾರುಕಟ್ಟೆಯಲ್ಲಿ ಕೊಂಡುಕೊಂಡು ಬಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ರೀತಿಯ ವಹಿವಾಟು ಇಲ್ಲಿ ನಡೆದಿದ್ದು, ಹೇಳಿದರೆ ತಾವು ಆಶ್ಚರ್ಯ ಬೀಳುತ್ತೀರಿ. 20 ರಿಂದ 25 ಸಾವಿರ ರೂಪಾಯಿಗಳ ವಹಿವಾಟಿನ ಮೊತ್ತ ಯಾರ ಕಣ್ಣಿಗೂ ಕಾಣದೆ ಯಾರದ್ದೋ ಜೇಬಿಗೆ ಸೇರುತ್ತದೆ. ಮಾನ್ಯ ಸಭಾಧ್ಯಕ್ಷರೆಯವರೇ, ಈ ಸಂಘದ ಬಗ್ಗೆ ನಾವೆಲ್ಲರೂ ಒಂದು ಸರ್ಟಿಫಿಕೇಟ್ ಕೊಡುವುದಕ್ಕೆ ಮುಂಚೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಕೃಷಿ ಮತ್ತು ತೋಟಗಾರಿಕೆ ಸಚಿವರಾಗಿದ್ದರು. ಅವರು ಈ ಸಹಕಾರ ಸಂಘದ ಬಗ್ಗೆ ಸದನದಲ್ಲಿ ಆಡಿದ್ದಂಥ ಮಾತನ್ನು ಇಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ.

"It is an asset. It is a crown to the Horticultural Department. I thank the Officers for having bestowed their mind, time and for having worked hard for the success of this Society.

ಬಹುಶಃ ಸನ್ಮಾನ್ಯ ಮುಖ್ಯಮಂತ್ರಿಗಳು ಆವತ್ತು ಈ ಖಾತೆಯನ್ನು ಹೊಂದಿದ್ದವರು ಮಾತುಗಳನ್ನು ಹೇಳಬೇಕಾದರೆ, ಅವರು ಯಾವುದೇ ಪೂರ್ವಾಗ್ರಹ ಪೀಡಿತರಾಗದೆ ಇದ್ದಂಥ ವಸ್ತುಸ್ಥಿತಿಬಗ್ಗೆ ಸ್ಪಷ್ಟವಾಗಿ ಮಾತನಾಡಿದ್ದಾರೆ. ಈ ಸಹಕಾರ ಸಂಘಕ್ಕೆ ಇದಕ್ಕಿಂತ ಒಳ್ಳೆಯ ಸರ್ಟಿಫಿಕೇಟ್ ಕೊಡುವುದಕ್ಕೆ ಸಾಧ್ಯವಿಲ್ಲವೇನೋ. ನಾನು ಆಗಲೇ ಹೇಳಿದ ಹಾಗೆ, ಈ ಸಹಕಾರ ಸಂಘದಲ್ಲಿ ಆರು ತಿಂಗಳಿನಲ್ಲಿ ಆಗಿರತಕ್ಕಂಥ ನಷ್ಟ ಒಂದು ಕೋಟಿ 20 ಲಕ್ಷ ರೂಪಾಯಿ. ಇದರಿಂದ ಬಹಳ ಚರ್ಚಾಸ್ಪದವಾದಂಥ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ಒಪ್ಪಿಕೊಂಡರೆ ಸನ್ಮಾನ್ಯ ಸಚಿವರು ಕೂಡಲೇ ಏನಾಗಬೇಕು ಎಂದು ತುರ್ತು ಶಸ್ತ್ರಚಿಕಿತ್ಸೆಯನ್ನು ಮಾಡಬೇಕು. ಅವರು ಒಪ್ಪಿಲ್ಲವೆಂದರೆ ನಾನು ತಮ್ಮ ಮೂಲಕ ವಿನಂತಿಮಾಡುತ್ತೇವೆ. ಇದರ ಬಗ್ಗೆ ನಿಷ್ಪಕ್ಷಪಾತ ಮೇಲ್ಪಟ್ಟದ ಅಧಿಕಾರಿಯಿಂದಲೋ, ನ್ಯಾಯಾಧೀಶರಿಂದಲೋ ಒಂದು ವಿಚಾರಣೆ ಆಗಲಿ. ವಿಚಾರಣ ವರದಿ ಬಂದನಂತರ ಸತ್ಯ ಹೊರಬಿಳುತ್ತದೆಯೆನ್ನುವ ಒತ್ತಾಯವನ್ನು ತಮ್ಮಲ್ಲಿ ಮಾಡುತ್ತಿದ್ದೇನೆ. ಹಿಂದೆ ಇಲ್ಲಿ ಕೊಂಡಂಥ ಮಾಲನ್ನು ಮಾರಾಟ ಮಾಡಿದರೆ ಶೇಕಡಾ 20–25 ಭಾಗ ಲಾಭವನ್ನು ಇಟ್ಟುಕೊಳ್ಳುತ್ತಿದ್ದರು. ಅದರಲ್ಲಿ ಕೊಳೆತು ಹಾಳಾಗತಕ್ಕದ್ದು, ತೂಕದಲ್ಲಿ ಹೆಚ್ಚು ಕಡಿಮೆ ಆಗುವುದು ಎಲ್ಲಾ ಸರಿದೂಗಿಸಿಕೊಂಡುಹೋಗಿ ಶೇಕಡ 20 ರಿಂದ 25 ಭಾಗ ಲಾಭವನ್ನು ಇಟ್ಟುಕೊಳ್ಳುತ್ತಿದ್ದರು. ಈಗ ಲಾಭದ ಪ್ರಮಾಣ ಶೇಕಡ 50 ರಿಂದ 55 ರಷ್ಟು ಇದೆ. ಉದಾಹರಣೆಗೆ ಹೇಳಬೇಕೆಂದರೆ ಕಿತ್ತಳೆಹಣ್ಣು ಕಿಲೋಗೆ 7 ರೂಪಾಯಿಗೆ ಕೊಂಡುಕೊಂಡು 12 ರೂಪಾಯಿಗೆ ಮಾರ್ಕಾಟವು ಮಾಡುತ್ತಾರೆ. ಆಲೂಗೆಡ್ಡೆ 2.10 ಕ್ಕೆ ಕೊಂಡುಕೊಳ್ಳುತ್ತಾರೆ. 3.25 ಕ್ಕೆ ಮಾರುತ್ತಾರೆ. ಶೇಕಡಾ 50 – 55 ರಷ್ಟು ಲಾಭ ಮಾಡಿದರೂ ಕೂಡ ಈ ಸಹಕಾರ ಸಂಘ ಸಾಕಷ್ಟು ನಷ್ಟ ಆವತ್ತು ಅನುಭವಿಸಿದೆ. ಇವರ ವಹಿವಾಟಿನಲ್ಲಿ ಆಗಿರತಕ್ಕಂಥ ಕೆಲವಾರು ಅಕ್ರಮಗಳಲ್ಲಿ, ಕೆಲವನ್ನು ಇಲ್ಲಿ ಉದಾಹರಿಸುವುದಕ್ಕೆ ಇಚ್ಛಿಪಡುತ್ತೇನೆ. ಏಲಕ್ಕಿಬಾಳೆಯನ್ನು ದಿನಾಂಕ 4.11.91 ರಂದು ಕೊಂಡುಕೊಳ್ಳುತ್ತಾರೆ. ಈ ಸ್ಟಾಕ್‌ಬುಕ್‌ನಲ್ಲಿನ ಪುಟಸಂಖ್ಯೆಯನ್ನು ಸಹ ಹೇಳಿಬಿಡುತ್ತೇನೆ. 68 ರಿಂದ 123.46,158 ಕೆ.ಜಿ. ಕೊಂಡುಕೊಳ್ಳುತ್ತಾರೆ, ಅದರ ಒಟ್ಟು ಮೌಲ್ಯ ಕೊಟ್ಟಿರತಕ್ಕಂಥಾದ್ದು 3,23,105 ರೂಪಾಯಿಗಳು, ಸಂಘಕ್ಕೆ ಬರಬೇಕಾಗಿರುವುದು. ಅಷ್ಟಕ್ಕೇ ಮಾರಿದ್ದರೂ 3,23,106 ರೂಪಾಯಿಗಳು ಸಂಘಕ್ಕೆ ಬರಬೇಕಾಗಿತ್ತು. ಆದರೆ ಸಂಘಕ್ಕೆ ಬಂದಿರುವ ಮೊತ್ತ 48,447 ರೂಪಾಯಿಗಳು, ಆಗಿರತಕ್ಕಂಥ ವ್ಯತ್ಯಾಸ 2,74,652 ರೂಪಾಯಿಗಳು. ನನ್ನ ಹತ್ತಿರ ಈ ರೀತಿಯ ಪಟ್ಟಿಗಳು ಇವೆ, ಎಷ್ಟುಬೇಕಾದರೂ ಕೊಡುತ್ತೇನೆ. ಮಂಡ್ಯದಲ್ಲಿ ಕೊಂಡಂಥ ಬಾಳೆಹಣ್ಣನ್ನು ಬೆಂಗಳೂರಿಗೆ ರವಾನಿಸುತ್ತಾರೆ. ಬೆಂಗಳೂರು ಸ್ಟಾಕ್‌ಬುಕ್‌ನಲ್ಲಿ ಇಷ್ಟಾದರೂ ಇವತ್ತಿನವರೆಗೂ ಅದರ ಎಂಟ್ರಿ ಇಲ್ಲ, ಮಂಡ್ಯದಿಂದ ಕೊಂಡಿರುವುದಕ್ಕೆ ದಾಖಲೆ ಇದೆ, ಮಂಡ್ಯದಿಂದ ಬಾಳೆಹಣ್ಣು ಹೊರಟಿರುವುದಕ್ಕೆ ದಾಖಲೆ ಇದೆ, ಇದಕ್ಕೆ ಪಣ ಪಾವತಿಯಾಗಿದೆ. ಆದರೆ, ಬೆಂಗಳೂರಿಗೆ ಬಂದು ಎಲ್ಲಿ ಹೋಯಿತೋ, ಅದನ್ನು ಸಂಘದ ಲೆಕ್ಕಕ್ಕೆ ತೆಗೆದುಕೊಳ್ಳಲೇ ಇಲ್ಲ, ಇವರು 4 ಟ್ರಕ್‌ಗಳನ್ನು ತೆಗೆದುಕೊಂಡರು, ಮಿನಿಕ್ಯಾಬ್ ಮಧ್ಯಮ ಪ್ರಮಾಣದ ಲಾರಿಗಳನ್ನು ತೆಗೆದುಕೊಂಡರು. ಇವರು ತೆಗೆದುಕೊಂಡಿರತಕ್ಕ ಆ ಮೇಕಿನ ಗಾಡಿಗಳನ್ನು ತೆಗೆದುಕೊಳ್ಳಬೇಡಿ ಎಂದು ಇವರಿಗೆ ಉಪದೇಶ ಹೇಳಿದರು, ಆದರೆ ಇವರು ಕೇಳಲಿಲ್ಲ. ಇವರು 4 ಟ್ರಕ್‌ಗಳಿಗೆ ಹಣ ಕೊಟ್ಟಿದ್ದಾರೆ, ಆದರೆ, ಅವುಗಳಲ್ಲಿ ಮೂರು ಮಾತ್ರ ಬಂದಿವೆ, ಇನ್ನೊಂದು ಎಲ್ಲಿ ದಾರಿ ತಪ್ಪಿದೆಯೋ ಗೊತ್ತಿಲ್ಲ. ಈಗಾಗಲೇ ಮೂರುವರೆ, ನಾಲ್ಕು ತಿಂಗಳಾಗಿದೆ, ಇದುವರೆಗೂ ಸಹಕಾರ ಸಂಘಕ್ಕೆ ತಲುಪಿಲ್ಲ. ನನಗೆ ಗೊತ್ತಿರತಕ್ಕ ವಿಶ್ವಾಸನೀಯ ಮೂಲಗಳ ಪ್ರಕಾರ, ಬೇರೆ ಕಂಪನಿಯ ಮಿನಿಕ್ಯಾಬ್‌ಗಳನ್ನು ತೆಗೆದುಕೊಂಡಿದ್ದರೆ ಕಮೀಷನ್ ಕಡಿಮೆ. ಕಮೀಷನ್ ಎಂದು ಹೇಳಿದರೆ, ಅದು ಸಂಘಕ್ಕೆ ಬರುವುದಿಲ್ಲ, ಮಧ್ಯದಲ್ಲಿ ಜೇಬಿಗೆ ಬಿಟ್ಟುಕೊಳ್ಳುವುದು. ಇವರ ಹತ್ತಿರ ತೆಗೆದು ಕೊಂಡಿರುವುದರಿಂದ 25 ಸಾವಿರ ಕಮೀಷನ್, ಅದಕ್ಕೋಸ್ಕರ ಅವುಗಳನ್ನೇ ತೆಗೆದುಕೊಳ್ಳುತ್ತಾರೆ. ಇವುಗಳಲ್ಲಿ ಒಂದು ಇನ್ನೂ ಬಂದಿಲ್ಲ, ಇದಕ್ಕೂ ಹಣ ಸಂದಾಯವಾಗಿದೆ, ಇದು ಎಲ್ಲಿ ದಾರಿ

ತಪ್ಪಿದೆಯೋ ಅದನ್ನು ಸನ್ಮಾನ್ಯ ಸಚಿವರ ವಿವೇಚನೆಗೇ ಬಿಡುತ್ತೇನೆ. ಅದನ್ನು ಪತ್ತೆ ಮಾಡಿ, ಪೋಲೀಸ್ ದೂರು ಕೊಟ್ಟು ಅದಷ್ಟು ಜಾಗ್ರತೆ ಸಂಘಕ್ಕೆ ತರಿಸಬೇಕು. ಇನ್ನು ಇವರು ಕಾಮಗಾರಿ ಮಾಡಿಸುತ್ತಾರೆ. ಮೈಸೂರಿನಲ್ಲಿ ಕೆ.ಆರ್. ಆಸ್ಪತ್ರೆಯಲ್ಲಿ ಮಾರಾಟಕ್ಕಾಗಿ ಒಂದು ಮಳಿಗೆ ಮಾಡಿಸುತ್ತಾರೆ. ಇವರಲ್ಲಿ ಒಬ್ಬರು ನಿವೃತ್ತ ಇಂಜಿನಿಯರ್ ಇದ್ದರು ಇವರು ಏನೇ ಕಾಮಗಾರಿ ಮಾಡಬೇಕಾದರೂ ಎಸ್ಟಿಮೇಟ್ ಮಾಡಿ ಕೊಡುತ್ತಾರೆ. ಕೆಲಸ ಬೇಗ ಆಗಲಿ, ಎನ್ನತಕ್ಕಂಥ ದೃಷ್ಟಿಯಿಂದ ಯಾರಿಗಾದರೂ ಗುತ್ತಿಗೆ ವಹಿಸುವುದಾದರೆ ಶೇಕಡ 10 ಸೇರಿಸಿ ಕಾಮಗಾರಿ ಮಾಡಿಸುವುದು ಇವರ ಸಂಪ್ರದಾಯ. ಆದರೆ ಇವರು 90 ಸಾವಿರ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದುದು. ಒಂದೂವರೆ ಲಕ್ಷ ರೂಪಾಯಿಗಳ ಪೇಮೆಂಟ್ ಮಾಡುತ್ತಾರೆ. ತಮಗೆ ಬೇಕಾದವರಿಗೆ ಕಂಟ್ರಾಕ್ಟ್ ಕೊಡುತ್ತಾರೆ, ಶೇಕಡ 40 ಹೆಚ್ಚುವರಿ ರೇಟಿಗೆ ಗುತ್ತಿಗೆ ಕರಾರನ್ನು ಮಾಡಿಸಿ, ತಮಗೆ ಬೇಕಾದವರಿಗೆ ಕೊಟ್ಟು, ಜೊತೆಗೆ ಅನೇಕ ಅವ್ಯವಹಾರಗಳಿಗೆ ದಾರಿಮಾಡಿಕೊಟ್ಟು, ಇವತ್ತು ಸಹಕಾರ ಸಂಘವನ್ನು ರೈತ ತನ್ನದಲ್ಲ ಎನ್ನತಕ್ಕಂಥ ಪರಿಸ್ಥಿತಿಯನ್ನು ಮುಟ್ಟುವ ಸ್ಥಿತಿಗೆ ತಂದಿಟ್ಟಿದ್ದಾರೆ. ನಾನು ಮೊದಲೇ ಹೇಳಿದೆ, ಸನ್ಮಾನ್ಯ ಸಚಿವರು, ನಾನು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಮತ್ತು ಮಾಡಿರತಕ್ಕ ಆಪಾದನೆಗಳನ್ನು ಒಪ್ಪಿಕೊಂಡರೆ, ದಯಮಾಡಿ ಶೀಘ್ರವಾಗಿ, ಇದಕ್ಕೆ ಕಾಲಾವಕಾಶ ಬೇಡಿ, ಯಾರು ಇಷ್ಟೊಂದು ಅವ್ಯವಹಾರಗಳಿಗೆ ಕಾರಣಕರ್ತರು, ಅವರನ್ನು ಬೇರೆ ಕಡೆಗೆ ಕಳುಹಿಸಿ. ನನಗೆ ಗೊತ್ತಿರುವಹಾಗೆ, ನಾನು ಯಾರ ಬಗ್ಗೆಯೂ ವೈಯುಕ್ತಿಕವಾದ ಆರೋಪ ಮಾಡುತ್ತಿಲ್ಲ, ನನಗೆ ಇರತಕ್ಕಂಥದ್ದು ರೈತ ಬೆಳೆದ ಪದಾರ್ಥಗಳಿಗೆ ನ್ಯಾಯವಾದ ಬೆಲೆ ಸಿಕ್ಕಬೇಕು ಎನ್ನುವ ಒಂದೇ ಒಂದು ಉದ್ದೇಶ. ಯಾವುದೋ ಒಬ್ಬ ವ್ಯಕ್ತಿಯ ದಾಕ್ಷಿಣ್ಯಕ್ಕೊಸ್ಕರ ಸಹಕಾರ ಸಂಘವನ್ನು ಹಾಳು ಮಾಡುವುದಕ್ಕೆ ಹೊರಟಿದ್ದೇವೆ. ಇದಕ್ಕಿಂತ ಪಾಪದ ಕೆಲಸ ಬೇರೊಂದಿಲ್ಲ. ನಾನಾಗಲೀ ಸನ್ಮಾನ್ಯ ತೋಟಗಾರಿಕೆ ಸಚಿವರಾಗಲೀ ಅಥವಾ ರೈತರ ಬಗ್ಗೆ ಕಾಳಜಿ ವಹಿಸಿರತಕ್ಕ ಯಾರೇ ಆಗಲೀ ಸದನದಲ್ಲಿ ಇರುವುದಕ್ಕೆ ಅರ್ಹರಲ್ಲ, ಆದ್ದರಿಂದ ದಯಮಾಡಿ, ಕೂಡಲೇ ಅವರನ್ನು ಆ ಜಾಗದಿಂದ ಬಿಡಿಸಬೇಕು. ಹಿಂದೆ ಇದ್ದಂಥವರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅವರು ನನಗೆ ಹತ್ತಿರದವರೇನೂ ಅಲ್ಲ, ಅಥವಾ ನನ್ನ ಸಂಬಂಧಿಕರೂ ಅಲ್ಲ. ಒಂದು ಸಂಸ್ಥೆ ಉಳಿಯಬೇಕು, ಒಂದು ಸಂಸ್ಥೆ ಬೆಳೆಯಬೇಕೆಂಬುದರಲ್ಲಿ ಯಾರಿಗೆ ಯಾರೇ ವಿರೋಧವಾಗಿರಲಿ, ಅವರನ್ನು ತಂದುಕೂಡಿಸಿ ಮತ್ತೆ ಈ ಸಂಸ್ಥೆ ಎಂದಿನಂತೆ ಉತ್ತರ ಸ್ಥಿತಿಗೆ ಬರುವುದಕ್ಕೆ ಅವಕಾಶ ಮಾಡಿ ಕೊಡಬೇಕು.

1.20 ಪಿ.ಎಂ.

ದಯವಿಟ್ಟು ಸನ್ಮಾನ್ಯ ತೋಟಗಾರಿಕೆ ಸಚಿವರು ಇದರ ಬಗ್ಗೆ ಒಂದು ತುರ್ತು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎಂದುಕೊಂಡಿದ್ದೇನೆ, ಅವರು ತೆಗೆದುಕೊಳ್ಳಲೇ ಬೇಕು, ತೆಗೆದುಕೊಳ್ಳದಿದ್ದರೆ ಬಹುಶಃ ಇನ್ನೂ ಎಷ್ಟೆಷ್ಟೆ ವಿಕೋಪಕ್ಕೆ ಹೋಗುತ್ತದೆಯೋ ಹೇಳುವುದಕ್ಕೆ ಬರುವುದಿಲ್ಲ. ಈಗಾಗಲೇ ಅಲ್ಲಿರತಕ್ಕಂಥ ಅನೇಕ ಜನ ನೌಕರರು ಮುಷ್ಕರ ಹೂಡಿ ಭ್ರಷ್ಟಚಾರಕ್ಕೆ ತೀರಾ ಹೆಸರಾಗಿದ್ದಂಥ ಹಿಂದಿನ ಮ್ಯಾನೇಜರ್‌ರವರನ್ನು ತಕ್ಷಣ ಮನೆಗೆ ಓಡಿಸಿ ಏನೋ ಆಗಿ ಹೋಯಿತು ನಡೆದುಕೊಂಡು ಹೋಗುತ್ತಿದೆ. ನಾನು ಮ್ಯಾನೇಜರ್‌ರವರನ್ನು ಇದಕ್ಕೆ ದೂಷಣೆ ಮಾಡುವುದಕ್ಕಿಂತ ಮುಂಚೆ ಅದರ ಚುಕ್ಕಾಣಿಯನ್ನು ಹಿಡಿದಿರತಕ್ಕಂಥ ಮುಖ್ಯಸ್ಥರ ಅದ್ಯಕ್ಷತೆ ಮತ್ತು ಬೇಜವಾಬ್ದಾರಿ ಇದಕ್ಕೆ ಕಾರಣವಾಗಿದೆ ಎಂದು ಹೇಳುತ್ತೇನೆ, ದಯವಿಟ್ಟು ಅವರನ್ನು ನೀವು ಕೂಡಲೇ ಬೇರೆ ಕಡೆಗೆ ಕಳುಹಿಸಿರಿ, ಹಿಂದೆ ಇದ್ದಂಥವರನ್ನು ದಯವಿಟ್ಟು ತಂದು ಈ ಸಹಕಾರ ಸಂಘಗಳ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಮಾಡಿ ರೈತರಿಗೆ ಇದರಿಂದ ಉಪಕಾರವಾಗುತ್ತದೆ. ಕರ್ನಾಟಕದಲ್ಲಿರತಕ್ಕಂಥ ಕೋಟ್ಯಾಂತರ ಜನ ರೈತರುಗಳಿಗೆ ನೀವು ಸಹಕಾರ ಕೊಡಬೇಕು, ದೊಡ್ಡ ಉಪಕಾರ ಮಾಡಬೇಕೆಂದು ಬೇಡಿಕೆಯನ್ನು ಇಟ್ಟು, ಇನ್ನು ಮುಂದೆ ಅನೇಕ ವಿಚಾರಗಳನ್ನು ಶ್ರೀಮಾನ್ ರೇವಣ್ಣನವರು ಹೇಳುವವರು ಇದ್ದಾರೆ, ಅದನ್ನೂ ಕೂಡಾ ತಾವು ಗಣನೆಗೆ ತೆಗೆದುಕೊಂಡು ಒಂದು ತುರ್ತು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯಿಸಿ ನನಗೆ ಕಾಲಾವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :- ಸನ್ಮಾನ್ಯ ಅಧ್ಯಕ್ಷಣಿಯವರೇ, ಏನು ತೋಟದ ಬೆಳೆಗಾರರ ಸಹಕಾರ ಸಂಘದ ಆಡಳಿತದಲ್ಲಿ ಆಗಿರುವ ತೊಂದರೆಯನ್ನು ಕಳೆದ 27 ರಂದು ಸರಕಾರದ ಗಮನಕ್ಕೆ ತಂದಾಗ ಸರಿಯಾದ ಉತ್ತರ ಸಿಗದೇ ಹೋದುದರಿಂದ ಇವತ್ತು ನಾನು ಮತ್ತೆ ಇದರ ಬಗ್ಗೆ ಚರ್ಚಿಸಬೇಕಾಗಿದೆ. ಏನು ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಮಳೆ ಆಶ್ರಿತ ಪ್ರದೇಶಗಳಲ್ಲಿರತಕ್ಕಂಥ ರೈತರು ತಮ್ಮ ತೋಟದ ಬೆಳೆಗಳಾದ ತರಕಾರಿ ಹಣ್ಣುಗಳನ್ನು ಹಾಪ್ ಕಾಮ್ಸ್ ಸೊಸೈಟಿಗೆ ತಂದು ಅಲ್ಲಿ ತಾವು ಬೆಳೆದ ಮಾಲಿಗೆ ಸರಿಯಾದ ಹಣವನ್ನು ಪಡೆಯಲು ಬಹಳಷ್ಟು ಕಷ್ಟಪಡುತ್ತಿರತಕ್ಕಂಥ ವಿಷಯ ಈಗಾಗಲೇ ಗಮನಕ್ಕೆ ತಂದಿದ್ದೇವೆ. ಏನು 1959 ರಲ್ಲಿ ಲಾಲಾಬಾಗ್ ಗೇಟ್ ಮುಂದೆ ಚಿಕ್ಕ ಅಂಗಡಿಯಿಂದ ಪ್ರಾರಂಭವಾದ ಈ ಒಂದು ಸಂಘ ಬೃಹತ್ತ ಸಂಸ್ಥೆಯಾಗಿ ಬೆಳೆದು ಇವತ್ತು ಎಂಟುನೂರು ನೌಕರರನ್ನು ಪಡೆದು ರಾಜ್ಯದ ಅನೇಕ ಸ್ಥಳಗಳಲ್ಲಿ ಶಾಖೆಗಳನ್ನು ಪಡೆದಿರತಕ್ಕಂಥ ಒಂದು ಸಂಸ್ಥೆ ತರಕಾರಿ ಬೆಳೆಗಾರರಿಗೂ ಮತ್ತು ಕೊಳ್ಳುವ ಗ್ರಾಹಕರಿಗೂ ಮಧ್ಯೆ ಕೊಂಡಿಯಾಗಿ ನಿಂತು ತರಕಾರಿ ಮತ್ತು ಹಣ್ಣುಗಳ ಬೆಲೆಯನ್ನು ನಿಯಂತ್ರಿಸುವುದಕ್ಕೆ ಸಹಕಾರಿಯಾಗಿತ್ತು, ಆದರೆ 1991ನೇ ಜುಲೈನಿಂದ ಈಚೆಗೆ ಒಂದು ಸಹಕಾರ ಸಂಘದಲ್ಲಿ ಆಗಿರತಕ್ಕಂಥ ಆಡಳಿತ ವೈಪರಿತ್ಯ ಮತ್ತು ನಷ್ಟವನ್ನು ನೋಡಿದಾಗ ನಿಜವಾಗಿಯೂ ನಮಗೆ ದಿಗ್‌ಭ್ರಮೆಯಾಗುತ್ತದೆ. ಇವತ್ತಿನದಿವಸ ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷ ರೂಪಾಯಿ ವಹಿವಾಟು ನಡೆಸುತ್ತಿರತಕ್ಕಂಥ ಈ ಒಂದು ಸಂಸ್ಥೆ ಎಂಟು ಲಕ್ಷ ರೂಪಾಯಿಗಳ ನಷ್ಟಕ್ಕೆ ಬಂದಿದೆ. ಕಳೆದ ಆರು ತಿಂಗಳಲ್ಲಿ ಈ ಒಂದು ಸಂಸ್ಥೆ ಇಷ್ಟು ಪ್ರಮಾಣದಲ್ಲಿ ಕ್ಷೀಣಿಸಿದೆ ಎಂದು ಹೇಳಿದರೆ ಇದರಿಂದ ರೈತರು ಕಂಗಾಲಾಗಿದ್ದಾರೆ. ಏನು ತಾವು ಬೆಳೆದಂಥ ತರಕಾರಿ ಮತ್ತು ಹಣ್ಣನ್ನು ಈ ಒಂದು ಸಂಸ್ಥೆಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದ ಆ ಜನತೆ ಇವತ್ತು ಆ ಕಡೆ ನೋಡುವುದಕ್ಕೆ ಮನಸ್ಸು ಬಾರದ ರೀತಿಯಲ್ಲಿ ಆ ಸಂಸ್ಥೆ ನಿಂತಿದೆ.

ಉದಾಹರಣೆಗೆ ಹೇಳಬೇಕೆಂದರೆ ನನ್ನ ತಾಲ್ಲೂಕಿನಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ಪೊಟಾಟೋ ಮತ್ತು ಹಿಂರೇಕಾಯಿ ಬೆಳಯತಕ್ಕಂಥ ಜನರು ಇದ್ದು ಅಲ್ಲಿಂದ ಕಳೆದ ಒಂದು ಆರು ತಿಂಗಳಿಂದ ಈಚೆಗೆ ಆ ರೈತರೇ ಆ ಸೊಸೈಟಿಗೆ ಹೋಗದೆ ಇರುವ ಮಟ್ಟಕ್ಕೆ ಬಂದಿದ್ದಾರೆ. ಕಾರಣ ರೈತರು ತಾನು ಬೆಳೆದ ಮಾಲನ್ನು ತೆಗೆದುಕೊಂಡು ಹೋದಾಗ ಅದು ಸರಿಯಾಗಿಲ್ಲ ಕೊಳೆತಿದೆ ಇದನ್ನು ತೆಗೆದುಕೊಳ್ಳುವುದಿಲ್ಲ ಎಂದು ಒಂದು ಕೆಟ್ಟ ವರ್ತನೆಯಿಂದ ಅವರು ವರ್ತಿಸಿದ್ದನ್ನು ಗಮನಿಸಿ ರೈತರು ಮತ್ತೆ ಮಾರುಕಟ್ಟಗೆ ಹೋಗಬೇಕಾಗಿ ಬಂದಿದೆ. ಅದೇ ಮಾಲನ್ನು ಮಾರುಕಟ್ಟೆಯಿಂದ ದಳ್ಳಾಳಿಗಳ ಮೂಲಕ ಇವರು ತಂದು ಹೆಚ್ಚಿನ ಬೆಲೆಗೆ ಹೆಚ್ಚಿನ ಲಾಭಾಂಶವನ್ನು ಇಟ್ಟು ಇವತ್ತು ಮಾರಾಟ ಮಾಡತಕ್ಕಂಥ ಪರಿಸ್ಥಿತಿ ಬಂದರೂ ಕೂಡ ಒಂದು ತಿಂಗಳು ಕಳೆದ ಏಪ್ರಿಲ್ ನಿಂದ ಇದುವರೆಗೂ ಇದು ಭರಿಸತಕ್ಕಂಥ ನಿವ್ವಳ ಲಾಭ ಮೂರೂವರೆ ಲಕ್ಷದಿಂದ ನಾಲ್ಕುಲಕ್ಷ ಇವತ್ತು ಈ ಲಾಭ ನಾಲ್ಕು ಲಕ್ಷ ಕಳೆದು, ನಷ್ಟಕ್ಕೆ ಬಂದು ನಿಂತಿದೆ. ಇನ್ನು ಇವರು ಕೊಳೆತಂಥ ಕೆಟ್ಟಂಥ ಮಾಲನ್ನು ಪರೀಕ್ಷೆ ಮಾಡಲು ಒಂದು ಸಮಿತಿ ಇತ್ತು. ಆ ಸಮಿತಿ ಕೂಡ 6 ತಿಂಗಳಿಂದ ಒಂದು ಸಾರಿಯೂ ಸಹ ಸೇರಿಲ್ಲ, ತರಕಾರಿ ಮತ್ತು ಹಣ್ಣು ಇವು ಕೊಳೆಯುವುದು ಸತ್ಯ. ಆದರೆ, ಕೊಳೆತಿದೆ ಎನ್ನುವ ಒಂದೇ ಒಂದು ಅಂಶದಿಂದ ಅದರಲ್ಲಿ ಅವರು ದುರ್ವ್ಯವಹಾರ ಮಾಡಿ ಹಣ ಗಳಿಸುವುದಕ್ಕೆ ಹೋದರೆ ಅವರ ಆಡಳಿತ ಎಷ್ಟು ಕೊಳೆತಿದೆ? ಈ ಸಂಸ್ಥೆಯಲ್ಲಿರತಕ್ಕಂಥ ಅಧಿಕಾರಿಗಳು ಕೊಳೆತು ನಾರುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತಿದೆ. ಇವತ್ತಿನ ದಿವಸ ಪರ್ಚೇಸ್‌ನಲ್ಲೂ ಕೂಡ ಇದೇ ರೀತಿ ಆಗಿದೆ. ಮೈಸೂರಿನಲ್ಲಿ ದ್ರಾಕ್ಷಾರಸ ಮಾರಾಟ ಮಾಡತಕ್ಕಂಥ ಮಳಿಗೆ ಇತ್ತು. ಅದು ಸರಾಸರಿ ಒಂದು ಲಕ್ಷ ರೂಪಾಯಿಗಳ ವಹಿವಾಟು ಮಾಡುವಂತಹ ಸಂಸ್ಥೆ. ಇವತ್ತು ಈ ದ್ರಾಕ್ಷಾರಸ ಮಾರಾಟ ಮಾಡತಕ್ಕಂಥ ಬೂತ್ ನಿಂತಿದೆ. ನಿವ್ವಳ ಲಾಭವನ್ನು ಕೊಡುವಂತಹ ಈ ಒಂದು ಬೂತ್‌ನ್ನು ನಿಲ್ಲಿಸಿದ್ದಾರೆ. ಮತ್ತು ಅಲ್ಲಿರತಕ್ಕಂಥ ಮಳಿಗೆಗಳಿಗೆ ಬರೀ ಆಡಳಿತಾತ್ಮಕ ಖರ್ಚು ಅಂತ ತಿಂಗಳಿಗೆ 2500 ರೂಪಾಯಿಗಳ ಖರ್ಚು ಹಾಕಿ ನಷ್ಟವನ್ನು ತೋರಿಸಿದ್ದಾರೆ. ಮಳಿಗೆಗಳು ನಡೆಯುತ್ತಿಲ್ಲ, ಇನ್ನು ಕೊಳ್ಳತಕ್ಕಂಥ ರೀತಿ ನೋಡಿದರೆ, ತರಕಾರಿ ಮತ್ತು ಹಣ್ಣುಗಳನ್ನು ಬೇರೆ ಬೇರೆ ಜಾಗಗಳಿಗೆ ಸಾಗಿಸಲು ಪ್ಲಾಸ್ಟಿಕ್ ಕ್ರೇಟ್ಸ್ ಕೊಂಡಿದ್ದೇವೆಂದು ಹೇಳಿದ್ದಾರೆ. ಅದು ದಿನಾಂಕ 18.7.91 ರಲ್ಲಿ, 7 ಸಾವಿರ ಪ್ಲಾಸ್ಟಿಕ್ ಕ್ರೇಟ್ಸ್ ನಾವು

ಕೊಂಡಿದ್ದೆವೆಂದು ಹೇಳುತ್ತಾರೆ. ಒಂದು ಪ್ಲಾಸ್ಟಿಕ್ ಕ್ರೇಟ್ 157 ರೂಪಾಯಿ ಬೆಲೆ ಎಂದು ಕೋಟ್ ಮಾಡಿದ್ದಾರೆ. ಆದರೆ ಇವತ್ತಿನ ದಿವಸ ಮಾರುಕಟ್ಟೆಯಲ್ಲಿರತಕ್ಕಂಥ ಬೆಲೆ ಒಂದು ಪ್ಲಾಸ್ಟಿಕ್ ಕ್ರೇಟ್ 110 ರಿಂದ 115 ರೂಪಾಯಿಗಳು ಇದೆ. ಈ ಒಂದು ಸಂಘಕ್ಕೆ ಬಂದಿರತಕ್ಕಂಥಾದ್ದು ಕ್ರೇಟ್ಸ್ ಬರೀ 4 ಸಾವಿರ ಮಾತ್ರ. ಇನ್ನು 3ಸಾವಿರ ಕ್ರೇಟ್ಸ್ ಸಂಘಕ್ಕೆ ಬಂದಿಲ್ಲ. ಇದು ಒಂದರಲ್ಲಿ ಇರತಕ್ಕಂಥ ನಷ್ಟದ ಹಣ 6.1 ಲಕ್ಷ ರೂಪಾಯಿಗಳು. ಇಂತಹ ಉದಾಹರಣೆಗಳು ಬಹಳಷ್ಟು ನಮ್ಮ ಕಡೆ ಇವೆ. ಕಳೆದ 27 ರಂದು ನೀಡಿದ ಉತ್ತರವನ್ನು ಮಾನ್ಯ ಸಚಿವರನ್ನು ನೋಡಿದಾಗ ಅವರು ತಪ್ಪು ದಾರಿಗೆ ಎಳೆದಿದ್ದಾರೆ. ಅವರ ಅಧಿಕಾರಿಗಳು ಸರ್ಕಾರಕ್ಕೆ ಕೊಟ್ಟಂತಹ ಉತ್ತರದಿಂದ 8 ಲಕ್ಷ ಲಾಭ ಬಂದಿದೆ ಎಂದು ಹೇಳಿದ್ದಾರೆ. ಆದರೆ ಆಗಿರತಕ್ಕಂಥ ವಹಿವಾಟು 15 ಲಕ್ಷ, ನಷ್ಟದ ವಿಷಯವನ್ನೇ ಲಾಭವಾಗಿ ನಮಗೆ ತಿಳಿಸಿದ್ದಾರೆ. ಇದು ವಿಧಾನ ಸಭೆಯನ್ನು ಕೂಡ ತಪ್ಪು ದಾರಿಗೆ ಎಳೆಯುವಂತಹ ಉತ್ತರವೆಂದು ನಾನು ಭಾವಿಸುತ್ತೇನೆ. ಈ ಒಂದು ತರಕಾರಿ ಕೊಳ್ಳುವುದಕ್ಕೆ ಮಧ್ಯವರ್ತಿಗಳನ್ನು ನೇಮಿಸಿಕೊಂಡು ಅವರಿಗೆ ನಕಲಿ ಮಾರಾಟಗಾರರನ್ನು ಇಟ್ಟುಕೊಂಡು ಅವರ ಮೂಲಕ ತರಕಾರಿ ಕೊಂಡುಕೊಂಡಿರತಕ್ಕಂಥಾದ್ದು ಇವತ್ತು ನಮ್ಮ ಗಮನಕ್ಕೆ ಬಂದಿದೆ. ಇನ್ನು ಕಟ್ಟಡಗಳು ಕಟ್ಟುವ ವಿಷಯದಲ್ಲಿ ಕೂಡ ಈ ಹಿಂದೆ ಜುಲೈ ಹಿಂದಿನಿಂದ ಕಟ್ಟಿದಂತಹ ಕಟ್ಟಡಗಳಿಗೆ 65–70 ಸಾವಿರ ಇರತಕ್ಕಂಥ ಕಟ್ಟಡಗಳಿಗೆ ಇವತ್ತು ಒಂದು ಕಟ್ಟಡಕ್ಕೆ 92 ಸಾವಿರ ರೂಪಾಯಿಗಳೆಂದು ತೋರಿಸಿದ್ದಾರೆ. 20 X 12 ಇರುವ ಒಂದು ಕಟ್ಟಡಕ್ಕೆ ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ಇವತ್ತಿನ ದಿವಸ ಜನಗಳು ತರಕಾರಿ ಕೊಳ್ಳತಕ್ಕಂಥಾದ್ದನ್ನು ಸಂತೋಷದಿಂದ ನೋಡಿದ್ದೇವೆ. ಹಾಲುಬೂತ್ ಮತ್ತು ತರಕಾರಿ ಬೂತ್‌ಗಳನ್ನು ಕಟ್ಟುವಂಥಾದ್ದು ನಿಜವಾಗಿಯೂ ಸರ್ಕಾರದ ಒಳ್ಳೆಯ ಕ್ರಮ ಆಗಿತ್ತು. ಆದರೆ ಇವತ್ತಿನ ದಿವಸ ಆ ತರಕಾರಿ ಮಳಿಗೆಗಳನ್ನು ಮುಚ್ಚಿವೆ. ಅಲ್ಲಿಯೂ ಸೌಹಾರ್ದಾಯುತ ಆಡಳಿತ ನಡೆಯುತ್ತಿಲ್ಲ ಎಂದು ನಾವು ಕಂಡಿದ್ದೇವೆ. ಇನ್ನು ಇಂತಹ ಒಂದು ಉತ್ತಮವಾದಂತಹ ಸಂಸ್ಥೆಯ ಬಗ್ಗೆ ಅಭಿವೃದ್ಧಿಗೋಸ್ಕರ ವರ್ಲ್ಡ್ ಬ್ಯಾಂಕ್ 250 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ.

ಆದರೂ ಕೂಡ ಈ ವಿಶ್ವ ಬ್ಯಾಂಕ್ ಕೊಡುವ ಹಣವನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸುವ ಬದಲು ಈ ಒಂದು ಸಂಘ ಕ್ಷೀಣವಾಗಿ ಇವತ್ತು ನಷ್ಟವನ್ನು ಅನುಭವಿಸುತ್ತಿದೆ. ಏನು ಅಧಿಕಾರಿಗಳು ಕೊಡತಕ್ಕಂಥ ಮಾಹಿತಿಯನ್ನು ನಂಬಿ ಸನ್ನಿತ್ರರಾದ ಶ್ರೀ ಆತ್ಮಾನಂದರವರು, ಅವರು ನನ್ನ ಮಿತ್ರರು, ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಅವರು ಏಕೆ ಈ ಸಂಸ್ಥೆಯಲ್ಲಿ ಆಗುತ್ತಿರತಕ್ಕಂಥ ಅನ್ಯಾಯವನ್ನು ನೋಡಲಿಲ್ಲವೆಂದು ಅವರ ಗಮನವನ್ನು ಸೆಳೆದು ಆ ಸಂಸ್ಥೆಯಲ್ಲಿ ಆಗತಕ್ಕಂಥ ಅನ್ಯಾಯವನ್ನು ಸರಿಪಡಿಸಲು ಒಂದು ಸಮಿತಿ ಮಾಡಬೇಕು. ಅತಿ ಜಾಗ್ರತೆ ಈ ಒಂದು ದೊಡ್ಡ ಬೆಳೆಗಾರ ಸಂಘದಲ್ಲಿ ರೈತರು ಮತ್ತೆ ಬಂದು ತಮ್ಮ ಮಾಲನ್ನು ಮಾರುವಂತಾಗಬೇಕು ಹಾಗೂ ಅವರು ಉತ್ತಮ ಹಣವನ್ನು ಪಡೆಯಬೇಕು. ಈ ಸೌಹಾರ್ದ ಬಾಂಧವ್ಯ ಬೆಳೆಯಬೇಕಾದರೆ ಈಗಿರತಕ್ಕಂಥ ಆಡಳಿತಾಧಿಕಾರಿಯನ್ನು ತೆಗೆದು ಆ ಜಾಗಕ್ಕೆ ಒಳ್ಳೆಯವರನ್ನು ಹಾಕಬೇಕು. ತೋಟಗಾರಿಕೆ ಇಲಾಖೆ ಬಗ್ಗೆ ಮಾತನಾಡಬೇಕಾದರೆ ಡಾ|| ಎಂ. ಹೆಚ್. ಮರೀಗೌಡರನ್ನು ನಾನು ನೆನೆಸಿಕೊಳ್ಳುತ್ತೇವೆ. ಡಾ|| ಎಂ. ಹೆಚ್. ಮರೀಗೌಡರ ಚಿಂತನೆಯಿಂದ ಪ್ರಾರಂಭಗೊಂಡ ಈ ಸಂಸ್ಥೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಬೇಕಾದರೆ, ನಮ್ಮ ರೈತರಿಗೆ ಉತ್ತಮ ಹಣ ಸಿಗಬೇಕಾದರೆ ಏನು ವರ್ಲ್ಡ್ ಬ್ಯಾಂಕ್‌ನವರು ಕಂಡೀಷನ್ ಹಾಕಿದ್ದರೋ ಆ ಕಂಡೀಷನ್‌ಗೆ ಸರ್ಕಾರ ಬದ್ಧವಾಗಿರುತ್ತದೆಂದು ನಾನು ಭಾವಿಸಿ ಇದಕ್ಕೆ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕಾ, ಮಂತ್ರಿಗಳು) :- ಸನ್ಮಾನ್ಯ ಸಭಾಧ್ಯಕ್ಷರೆ, ಶ್ರೀಯುತ ಸಿ.ಎಂ. ಲಿಂಗಪ್ಪನವರು ಮತ್ತು ಶ್ರೀಯುತ ರೇವಣ್ಣನವರು ಈ ಹಿಂದೆ ಪ್ರಶ್ನೆ ಕೇಳಿ ಉದ್ಭವವಾಗಿದ್ದ ವಿಚಾರಗಳಿಗೆ ಪೂರಕವಾಗಿ ಈ ಒಂದು ಸಂಸ್ಥೆ ಮೇಲೆ ಅವರ ಅನಿಸಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಒಂದು ಸಂಸ್ಥೆಯು ಅಂದಿನ ತೋಟಗಾರಿಕೆ ಇಲಾಖೆ ನಿರ್ದೇಶಕರಾಗಿದ್ದ ಹಾಗೂ ತೋಟಗಾರಿಕೆ ಇಲಾಖೆಯು ಸಮಗ್ರ ಅಭಿವೃದ್ಧಿಯಾಗಬೇಕಾದರೆ ಕಾರಣ ಕರ್ತರಾದ ಶ್ರೀಯುತ

ಮರೀಗೌಡರ ದೂರದೃಷ್ಟಿಯ ಫಲವಾಗಿ ಈ ಸಂಸ್ಥೆ ಆಗಿದೆ. ಈ ಸಂಸ್ಥೆಯು ರೈತರಿಗೆ ಹಿತವಾದ ಕಾರ್ಯಕ್ರಮವನ್ನು ಮಾಡಿಕೊಂಡು ಬರುತ್ತಿದೆ. ಆ ಸಂಸ್ಥೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕಾರ್ಯ ಮಾಡಿರತಕ್ಕಂಥ ವ್ಯಕ್ತಿಗಳು ಚೆನ್ನಾಗಿ ಕೆಲಸ ಮಾಡಿ ಸಂಸ್ಥೆಯನ್ನು ಅಭಿವೃದ್ಧಿ ಮಾಡಿದ್ದಾರೆ. ಅದರ ಬಗ್ಗೆ ನಿರ್ವಿವಾದ. ಅವರು ಒಟ್ಟಾರೆ 11 ವರ್ಷಗಳ ಕಾಲ ಕೆಲಸವನ್ನು ಮಾಡಿದ್ದರು. ನಾನು ಅಧಿಕಾರ ವಹಿಸಿಕೊಂಡಾಗ ಅವರ ಬದಲಾವಣೆ ಆಗಿತ್ತು. ನಂತರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿರುವ ವ್ಯಕ್ತಿಗಳೂ ಕೂಡ ಹಿರಿಯ ಅಧಿಕಾರಿಗಳಾಗಿದ್ದಾರೆ. ಅವರೂ ಸಹಾ ತಮ್ಮ ಶಕ್ತಿ ಮೀರಿ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಈ ಹಿಂದೆ ಇದ್ದ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಯಾವ ರೀತಿ ಕಾರ್ಯ ವೈಖರಿಯನ್ನು ಮಾಡಿಕೊಂಡು ಬರುತ್ತಿದ್ದರೋ ಅದೇ ಒಂದು ವ್ಯವಸ್ಥೆಯನ್ನೂ ಈಗಲೂ ಕೂಡ ಮುಂದುವರಿಸಿಕೊಂಡು ಹೋಗಲಾಗುತ್ತಿದೆ. ಈ ಒಂದು ಸಂಸ್ಥೆಯ ವ್ಯಾಪ್ತಿ ಸುಮಾರು 6 ಜಿಲ್ಲೆಗಳು. ಬೆಂಗಳೂರು, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ, ಹಾಸನ, ತುಮಕೂರು, ಈ 6 ಜಿಲ್ಲೆಗಳ ರೈತರಿಗೆ ಇದು ವರಪ್ರಧಾನವಾಗಿ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಇತ್ತೀಚೆಗೆ ಈ ಸಂಸ್ಥೆ ಏನೇಕ ರೈತರಿಗೆ ಎಂದರೆ, ಉದಾಹರಣೆಗೆ ಹಾಸನದಲ್ಲಿ ಆಲೂಗಡ್ಡೆ ತೆಗೆದುಕೊಳ್ಳಬೇಕೆನ್ನುವ ಮಾತು ಆಡಲು ಮತ್ತು ರೈತರಿಗೆ ನೆರವು ಆಗಲು ಹೋಗಿತ್ತು. ಇಂಥ ಅನೇಕ ಉದಾಹರಣೆಗಳು ಇವೆ. ಈ ಒಂದು ಸಂಸ್ಥೆಯು ವಾರ್ಷಿಕವಾಗಿ ರೈತರಿಂದ ಬರತಕ್ಕಂಥ ಉತ್ಪನ್ನಗಳಲ್ಲಿ ಸುಮಾರು 10 ಪರ್ ಸೆಂಟ್ ತೆಗೆದುಕೊಂಡು ವ್ಯವಹಾರ ಮಾಡತಕ್ಕಂಥ ಶಕ್ತಿ ಹೊಂದಿದೆ. ಪ್ರತಿ ದಿವಸ 100,125 ಟನ್ ಅಷ್ಟು ಕೊಂಡುಕೊಳ್ಳತಕ್ಕಂಥ ಶಕ್ತಿ ಮತ್ತು ವ್ಯವಸ್ಥೆ ಇದೆ. ಹೊರಗಡೆಯಿಂದ ತರಕಾರಿಯನ್ನು ತೆಗೆದುಕೊಂಡು ಬರುವುದರಿಂದ ವ್ಯಾಪಾರ ಜಾಸ್ತಿಯಾಗಿ ರೈತರಿಗೆ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಅಂಕಿ ಅಂಶಗಳನ್ನು ನನ್ನ ಸಮಿತ್ರರಾದ ಶ್ರೀಯುತ ಲಿಂಗಪ್ಪನವರಿಗೆ ನಾನು ಕೊಟ್ಟಿ.

ಈ ವರ್ಷ ಸುಮಾರು 267 ಟನ್‌ಗಳಷ್ಟು ಹಣ್ಣು ಮತ್ತು ತರಕಾರಿಗಳನ್ನು ಮಾರುಕಟ್ಟೆಯಿಂದ ತಂದು ಅದೂ ಕೂಡ ವ್ಯಾಪಾರಿ ಸಂಸ್ಥೆಗೆ ಅನೇಕ ಕಾರ್ಖಾನೆಗಳಲ್ಲಿ ಸರಬರಾಜು ಮಾಡತಕ್ಕಂಥ ಒಪ್ಪಂದವನ್ನು ಮಾಡಿಕೊಂಡಿತ್ತು. ಅವರಿಗೆ ಬೇಕಾಗತಕ್ಕಂಥ ಹಣ್ಣು ಮತ್ತು ತರಕಾರಿಗಳನ್ನು ಮಾತ್ರ ಹೊರಗಡೆ ಮಾರುಕಟ್ಟೆಯಿಂದ ತರತಕ್ಕಂಥಾದ್ದು ಹಾಗೂ ರೈತರು ಸಹಕಾರಿ ಸಂಘಕ್ಕೆ 1989 ರಲ್ಲಿ 66,567 ಜನರು ಬಂದಿದ್ದಾರೆ. 1990ರಲ್ಲಿ 74,775 ಜನ ರೈತರು ಬಂದಿದ್ದಾರೆ. 1991ರಲ್ಲಿ 77,184 ಜನ ರೈತರು ಬಂದಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರು ಅಲ್ಲಿನ ವಹಿವಾಟಿನ ಬಗ್ಗೆ ಹೇಳಿದ್ದಾರೆ. ನಾನು ನನ್ನ ಉತ್ತರದಲ್ಲಿ ಸದನವನ್ನು ತಪ್ಪುದಾರಿಗೆ ಎಳೆದಿದ್ದೇನೆ ಎಂದು ಹೇಳಿದ್ದಾರೆ. ಹಾಗೆ ನಾನು ಸದನವನ್ನು ತಪ್ಪುದಾರಿಗೆ ಎಳೆದಿಲ್ಲ, 1991ರಲ್ಲಿ ಇರತಕ್ಕಂಥ ಆಡಳಿತ ವ್ಯವಸ್ಥೆಯಲ್ಲಿ ನಾವು ನಿರೀಕ್ಷಿಸಿದ ಲಾಭವನ್ನು ಮಾತ್ರ ಅದರಲ್ಲಿ ನಾನು ತಿಳಿಸಿದ್ದೇನೆ. ಹಾಗೂ ನಮ್ಮ ಮಾನ್ಯ ಸದಸ್ಯರುಗಳಿಗೆ ಕೂಡ ಗೊತ್ತಿರುವ ಹಾಗೆ 1989–90, 1990–91, ಮತ್ತು 1991–92ನೇ ಸಾಲಿಗೆ ಆಡಿಟ್ ಆಗಬೇಕು. ಅದನ್ನು ಈಗ ಮಾಡುತ್ತಾ ಇದ್ದೇವೆ. ಇವೆಲ್ಲವೂ ಕೂಡ ಅಂದಾಜು ಲಾಭ ಇರತಕ್ಕಂಥಾದ್ದು ಇದೆ. 1988–89ನೇ ಸಾಲಿನ ವರದಿಯನ್ನು ಆಗಿರತಕ್ಕಂಥ ಆಡಿಟ್ ಕೂಡ ವಾರ್ಷಿಕ ಮಹಾಸಭೆಯು ಇನ್ನೂ ಒಪ್ಪಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ :- ನಾನು ಕೇಳುತ್ತಿರುವುದೇನೆಂದರೆ, ಜುಲೈ ತಿಂಗಳವರೆಗೆ ಬಂದಂಥ ಲಾಭ ಏನು, ಅದನ್ನು ತಿಳಿಸಬೇಕು. ನಮಗೆ ವ್ಯತ್ಯಾಸ ಕಂಡು ಬಂದಿರುವುದು ಅಲ್ಲಿಯೇ?

ಶ್ರೀ ಸಿ.ಎಂ. ಲಿಂಗಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇವೊತ್ತು ಕೊಟ್ಟಿರತಕ್ಕಂಥ ಉತ್ತರದಲ್ಲಿ ಯಾವುದೇ ನಿರ್ದಿಷ್ಟವಾದ ಅಂಶಗಳು ಇಲ್ಲ. 1991ನೇ ಎಪ್ರಿಲ್ ತಿಂಗಳಲ್ಲಿ ನಡೆದಂಥ ವಹಿವಾಟು 1,02,57,536 ರೂಪಾಯಿಗಳು. ಇದರಲ್ಲಿ ನಿವ್ವಳ ಲಾಭ 4,44,000 ರೂಪಾಯಿಗಳು. 1991ನೇ ಏಪ್ರಿಲ್ ತಿಂಗಳಲ್ಲಿ ಇದು ಗೊತ್ತಾಗಿದೆ. ಅದೇ ಡಿಸೆಂಬರ್ ತಿಂಗಳಲ್ಲಿ ಒಟ್ಟು ವಹಿವಾಟು 1,01,10,800 ರೂ.ಗಳು. ಅದರಲ್ಲಿ ನಿವ್ವಳ ನಷ್ಟ 4,71,000 ರೂಪಾಯಿಗಳು ಎಂದು ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಸಮಜಾಯಿಷಿ ಹೇಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಎಸ್. ಆತ್ಮಾನಂದ :- ಯಾವುದೇ ಒಂದು ಸಂಸ್ಥೆಯಾಗಿರಲಿ, ಕಂಪನಿಯಾಗಿರಲಿ, ಒಂದು ವರ್ಷದಲ್ಲಿ ಒಟ್ಟು ಇಷ್ಟು ವಹಿವಾಟು ಎಂದು ಲೆಕ್ಕ ಹಾಕಿ, ಲಾಭ ನಷ್ಟವನ್ನು ಮಾಡುತ್ತಾರೆ. ಇದರಲ್ಲಿ ಜುಲೈ ತಿಂಗಳಿಂದ ವಹಿವಾಟು ಕಡಿಮೆಯಾಗಿದೆ ಎಂದು ತಿಳಿದು ಬರುತ್ತದೆ. ಅಲ್ಲಿ ನಷ್ಟವಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಅಲ್ಲಿ ಆ ಸಂದರ್ಭದಲ್ಲಿ ವಹಿವಾಟು ಕಡಿಮೆಯಾಗಿರತಕ್ಕಂಥಾದ್ದು ಕೂಡ ನಿಜ. ವಹಿವಾಟು ವಿತಕ್ಕಾಗಿ ಕಡಿಮೆಯಾಯಿತು ಅಂದರೆ, ತಮಗೆ ಗೊತ್ತಿರುವ ಹಾಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಭಾರಿ ಮಳೆ ಬಂತು. ಅದರ ಪರಿಣಾಮವು ಸಾಕಷ್ಟು ಆಯಿತು. ಇತ್ತೀಚಿನ ಕಾವೇರಿ ವಿವಾದದ ಗಲಾಟೆಯಲ್ಲಿ ಬೆಂಗಳೂರು ನಗರದಲ್ಲಿ 10–15 ದಿವಸಗಳ ಕಾಲ ಅಂಗಡಿಗಳು ತೆಗೆದಿರಲಿಲ್ಲ. ಇನ್ನು ಜುಲೈನಿಂದ ಇತ್ತೀಚಿಗಿನ ವಿಚಾರವನ್ನು ಹೇಳುತ್ತಾ ಇದ್ದೀರಿ. ಜುಲೈನಿಂದ ಆಚೆಗೆ ಸಿಬ್ಬಂದಿ ವೆಚ್ಚ ಕೂಡ ಹೆಚ್ಚಿಗೆ ಆಯಿತು. ಜೂನ್ ತಿಂಗಳಲ್ಲಿ ಸುಮಾರು 500–600 ಜನ ನೌಕರರನ್ನು ಖಾಯಂ ಮಾಡಿದ ಕಾರಣದಿಂದ ಸುಮಾರು ವಾರ್ಷಿಕ 60 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬಂತು. ಇದರಿಂದಾಗಿ ಲಾಭಾಂಶ ಕಡಿಮೆಯಾಯಿತು. ಅಷ್ಟೇ ಅಲ್ಲ, ಹಾಸನದಲ್ಲಿಯೂ ಕೂಡ ಒಂದು ಶೀತಲ ಗೃಹವನ್ನು ಕಟ್ಟುವುದಕ್ಕಾಗಿ ಒಂದು ಲಕ್ಷಕ್ಕಿಂತಲೂ ಹೆಚ್ಚಿಗೆ ಸೊಸೈಟಿಯು ತನ್ನ ಸ್ವಂತ ಹಣ ಕೊಟ್ಟು ನಿವೇಶನವನ್ನು ತೆಗೆದುಕೊಂಡಿದ್ದಾಗಿದೆ. ಮಾನ್ಯ ಸದಸ್ಯರು ಇನ್ನೂ ಅನೇಕ ವಿಚಾರಗಳನ್ನು ಆಪಾದನೆ ರೂಪದಲ್ಲಿ ಈ ಸಭೆಯಲ್ಲಿ ಹೇಳಿದ್ದಾರೆ. ನಾನು ಈಗಾಗಲೇ ತಿಳಿಸಿದ ಹಾಗೆ ನೌಕರರು ನನಗೆ ಮನವಿಯನ್ನು ತಂದುಕೊಟ್ಟಿರತಕ್ಕಂಥಾದ್ದು ಇದ್ದು, ಆ ಮನವಿಯಲ್ಲಿ ಹೇಳಿರತಕ್ಕಂಥ ಅಂಶಗಳು ಇವೆ.

ಇದನ್ನು ನಾನು ನಮ್ಮ ನಿರ್ದೇಶಕರ ಮತಿಯಿಂದ ವಿಚಾರಣೆ ಮಾಡಿಸುತ್ತಿದ್ದೇನೆ. ಹಾಗೂ ತಮಗೆ ಗೊತ್ತಿರುವಂತೆ ಒಂದು ಸೊಸೈಟಿಯ ವ್ಯವಹಾರದಲ್ಲಿ ತಪ್ಪುನೆಪ್ಪುಗಳು ಬರಬೇಕಾದರೆ, ಅದರಲ್ಲಿ ಆಡಿಟಾಗಿ ಅದರ ಜವಾಬ್ದಾರಿ ಕೂಡ ನಿಗದಿತವಾಗಬೇಕು ಆಡಿಟ್ ಕೂಡ ಸಧ್ಯದಲ್ಲೇ ಮುಗಿಯುತ್ತದೆ. ಅದರ ಆಧಾರದ ಮೇಲೆ ಯಾರೇ ತಪ್ಪಿತಸ್ಥರಾದರೂ ಕೂಡ ನಾನು ಸರಿಯಾದ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಹೇಳುತ್ತಾ ನಮ್ಮ ಮಿತ್ರರಿಗೆ ಒಂದು ಸಭೆಯನ್ನು ಕರೆಯುತ್ತೇನೆ ಎಂದು ಒಂದು ಆಶ್ವಾಸನೆ ನೀಡಿದ್ದೆ, ನಿನ್ನೆ ಸಭೆ ಕರೆದಿದ್ದೆ ಆದರೆ ಕಾರಣಾಂತರದಿಂದ ಸಭೆ ನಡೆಸಲಾಗಲಿಲ್ಲ ಮತ್ತು ಆ ಸಭೆ ಕರೆದು ಏನು ಲಿಂಗಪ್ಪನವರಾಗಲಿ ರೇವಣ್ಣನವರಾಗಲಿ ಸದನವೇ ರೈತರ ಬಗ್ಗೆ ಕಾಳಜಿ ಹೊತ್ತು ಆ ಸಂಸ್ಥೆ ಚೆನ್ನಾಗಿ ನಡೆಯಬೇಕು ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಮಾಡಿದ್ದಾರೆ ಅದರಂತೆ ಈ ಸಂಸ್ಥೆ ಚೆನ್ನಾಗಿ ಮತ್ತು ರೈತರಿಗೆ ಹಿತಕಾರಿಯಾಗಿ ನಡೆಯುವ ಕೆಲಸವನ್ನು ನಾನಾದರೂ ಮಾಡುತ್ತೇನೆ ಎಂಬ ಮಾತು ಹೇಳುತ್ತೇವೆ. ಮಾನ್ಯ ಸದಸ್ಯರು ವಾಹನ ಖರೀದಿ ಬಗ್ಗೆ ಕೇಳಿದರು. ವಾಹನವನ್ನು ಕೊಂಡಿರುವುದು ಎಸ್.ಪಿ.ಡಿ. ರೇಟಿನಿಂದ ಈಗ ಮೂರು ವಾಹನಗಳಿಗೆ ಮಾತ್ರ ಹಣ ಕೊಟ್ಟು ಇನ್ನೂ ಒಂದು ವಾಹನಕ್ಕೆ ಹಣ ಪಾವತಿ ಮಾಡಿರುವುದಿಲ್ಲ. ಎಸ್.ಡಿ.ಸಿ. ಯಿಂದ ಬಂದಿರುವ ಹಣವನ್ನು ಅನೇಕ ಸಂಗ್ರಹಣಾ ಕೇಂದ್ರಗಳು ವಿತರಣಾ ಮಳಿಗೆಗಳ ಮೇಲೆ ಖರ್ಚನ್ನು ಮಾಡಲಾಗಿದೆ. ಲಾಭದ ಬಗ್ಗೆ ಕೇಳಿದರು : ಸುಮಾರು 15 ಪರ್ಸೆಂಟ್ ಲಾಭವನ್ನು ಮಾತ್ರ ಇಟ್ಟುಕೊಂಡು ಉಳಿಕೆ 10 ಪರ್ಸೆಂಟನ್ನು ವಿತರಣಾ ಮಳಿಗೆಗಳಲ್ಲಿರುವ ಸಿಬ್ಬಂದಿಗೆ ಸುಮಾರು 3.75 ಪರ್ಸೆಂಟಿನ ಇನ್‌ಸೆಂಟೀವನ್ನು ಗೋಡೌನ್ ಮತ್ತು ವೇಸ್ಟೇಜ್‌ನಲ್ಲಿ 4 ಪರ್ಸೆಂಟೇಜನ್ನು ಹಾಗೂ ಓವರ್ ಹಾಲ್ ಹ್ಯಾಂಡ್ಲಿಂಗ್‌ನಲ್ಲಿ 2.75 ಪರ್ಸೆಂಟ್ ವೇಸ್ಟೇಜನ್ನು ಬಿಟ್ಟು ಉಳಿಕೆ 15 ಪರ್ಸೆಂಟ್ ಮಾರ್ಜಿನ್ ಇಟ್ಟುಕೊಂಡು ತರಕಾರಿ ಮಾರುತ್ತಿದ್ದೇವೆ. ಇದು ಚೆನ್ನಾಗಿ ನಡೆಯಬೇಕೆಂದು ಇರುವ ರೈತರ ಸಂಖ್ಯೆಯನ್ನು ಕೂಡ ಹೆಚ್ಚುಮಾಡಬೇಕೆಂದು ಅದರಲ್ಲಿ ಕೂಡ ಕಾರ್ಯಪ್ರವೃತ್ತರಾಗಿದ್ದೇವೆ. ಶ್ರೀ ರೇವಣ್ಣ ಲಿಂಗಪ್ಪನವರು ಗಳಿಗಾಗಲೇ ಇದರಲ್ಲಿ ಅನುಮಾನ ಬೇಡ. ಯಾವ ವರದಿ ಬರುತ್ತದೋ ಅದರ ಮೇಲೆ ಖಂಡಿತವಾಗಿ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ರೈತರಿಂದಲೇ ದೇಶ, ರೈತರ ಸಂಸ್ಥೆ ಪ್ರಭುದ್ಧಮಾನವಾಗಿ ಬೆಳೆಯ ಬೇಕೆನ್ನುವ ಮಾತನ್ನು ನಾನೂ ಕೂಡ ಅಷ್ಟೋ ಇಷ್ಟೋ ಕೃಷಿಯನ್ನು ನಂಬಿರುವ ವ್ಯಕ್ತಿ, ಖಂಡಿತ ನಾನು ಮಾಡುತ್ತೇನೆಂಬ ಮಾತು ಹೇಳಿ ಒಬ್ಬ ವ್ಯಕ್ತಿಯ ಸಾಮರ್ಥ್ಯ ಅಳೆಯಲಿಕ್ಕೆ ಇನ್ನೂ ಕಾಲ ಇದೆ. ಆಡಿಟಾದ ಮೇಲೆ ಮಾರ್ಚ್ ಕೊನೆಯಲ್ಲಿ ಅವರ ಸಾಮರ್ಥ್ಯವನ್ನು

ಏನು ಸಂಸ್ಥೆ ವಹಿವಾಟನ್ನು ನಡೆಸಿದೆ ಏನು ತಪ್ಪುಗಳಿವೆ . ಎಂಬುದರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ :- ಸಚಿವರು ಹೇಳ್ತಾರೆ ಆಡಿಟ್ ವರದಿ ಬಂದ ನಂತರ ಹೆಚ್ಚೂ ಕಡಿಮೆ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು. ಇದೆಷ್ಟು ಅಸಹಜವಾಗಿ ಕಾಣುತ್ತದೆಂದರೆ ಆಂಗೈ ಹುಣ್ಣಿಗೆ ಕನ್ನಡಿ ಏಕೆ ಅನ್ನುವಂತೆ. ದಯಮಾಡಿ ಇದರ ಬಗ್ಗೆ ಇಷ್ಟು ತಡಮಾಡೋಕೆ ಹೋಗಬೇಡಿ ತಾವು. 6 ತಿಂಗಳಿಗೆ ಒಂದು ಕೋಟಿ, ಆಡಿಟ್ ವರದಿ ಬರುವುದಕ್ಕೆ ಇನ್ನು 9 ತಿಂಗಳು, ಎರಡೂವರೆ ಕೋಟಿ ಹೋಗುತ್ತದೆ, ಎರಡೂವರೆ ಕೋಟಿ ನಷ್ಟವಾಗಿಲಿ ಅಂತ ಇದ್ದರೆ ತಾವು ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳಿ. ನಾನು ಅದಕ್ಕೆ ಅಡ್ಡಿ ಬರೋದಿಲ್ಲ, ಇನ್ನೊಂದು ಸೃಷ್ಟೀಕರಣ ನೀಡಿ ನನ್ನ ಮಾತು ಮುಗಿಸುತ್ತೇನೆ. ಏಕೆಂದರೆ ಬಹಳಷ್ಟು ಸದಸ್ಯರುಗಳಿಗೆ ಊಟಕ್ಕೊಗೋಣ ಅಂತ ಮನಸ್ಸಿದೆ ಅಂತ ಕಾಣುತ್ತದೆ . ನನಗೂ ಅದನ್ನು ಎಚ್ಚರಿಕೆ ಕೊಡುತ್ತಾ ಇದ್ದಾರೆ. ಒಂದು ಸಂಗತಿ ಹೇಳಿದರು ಸುಮಾರು 600 ಜನ ನೌಕರರನ್ನು ಖಾಯಂ ಮಾಡಿರುವುದರಿಂದ ಅವರಿಗೆ ಹೆಚ್ಚುವರಿ ಸಂಬಳ ಕೊಡುವ ದೆಸೆಯಿಂದ ನಮಗೆ ನಷ್ಟ ಬರುತ್ತಾ ಇದೆ ಎಂದು. ಅಂದರೆ ನಷ್ಟ ಅನ್ನೋದನ್ನು ಅವರು ಒಪ್ಪಿಕೊಂಡರು. ನಾನು ಸೃಷ್ಟೀಕರಣ ನೀಡುತ್ತೇನೆ, ಹೆಚ್ಚುವರಿ ಸಂಬಳ ಕೊಡೋಕೆ ಶುರುಮಾಡಿದ್ದುದು 91ರ ಏಪ್ರಿಲ್‌ನಿಂದ. ಏಪ್ರಿಲ್‌ನಲ್ಲಿ 4.44 ಲಕ್ಷ ಆದಾಯ ರೂ. ಇದ್ದುದ್ದು ಮೇ ತಿಂಗಳಿಗೆ ಒಂದೂಕಾಲು ಲಕ್ಷ ಕಡಿಮೆಯಾಗುತ್ತದೆ, ಏಕೆ? ಹೆಚ್ಚುವರಿ ಸಂಬಳ ಕೊಟ್ಟಿದ್ದರಿಂದ ಮೇ ತಿಂಗಳಲ್ಲಿ 3.30 ಲಕ್ಷ, ಜೂನ್‌ನಲ್ಲಿ 3.63 ಲಕ್ಷ ಜುಲೈನಲ್ಲಿ 2.33 ಲಕ್ಷ ರೂ ಲಾಭ ಬಂದಿದ್ದು ಆಗ, ಹೆಚ್ಚುವರಿ ಸಂಬಳ ಕೊಡಲಿಲ್ಲವೇ ಅವರಿಗೆ? ಕೊಡ್ತಾಯಿದ್ದರು. ಮತ್ತೆ 76 ಲಕ್ಷ ಬ್ಯಾಂಕ್ ಬ್ಯಾಲೆನ್ಸ್ ಇತ್ತಲ್ಲ ಏನಾಯಿತು? ಇದೆಲ್ಲಾ ತಮಗೆ ಗೊತ್ತಿದೆ. ಸಭೆಗೆ ತಾವು ತೃಪ್ತಿಯಾಗುವಂತಹ ಉತ್ತರ ಕೊಡದಿದ್ದರೂ ಚಿಂತಿಲ್ಲ ನನಗೆ ರೇವಣ್ಣನವರಿಗೆ ತೃಪ್ತಿಯಾಗದಿದ್ದರೂ ಚಿಂತಿಲ್ಲ ಆದರಿಂದ ಒಳ್ಳೆಯದಾಗಬೇಕೆಂದು ಹೇಳಿದಿರಿ, ತಾವು ರೈತರು, ಇದನ್ನು ಒಳ್ಳೆಯದು ಮಾಡಿ. ತಾವು ಕೂಡ ಅದಕ್ಕೆ ಬದ್ಧರಾಗಿ. ದಯಮಾಡಿ ಇದರ ಬಗ್ಗೆ ಒಂದು ತುರ್ತಾದ ಕ್ರಮವನ್ನು ತೆಗೆದುಕೊಳ್ಳಿ. ಆಡಿಟ್ ವರದಿ ಅದು ಬರಲಿ, ನೋಡೋಣ, ಮಾಡೋಣ, ದಯವಿಟ್ಟು ಇದು ಬೇಡ ಎಂದು ಹೇಳಿ, ಮಾನ್ಯ ಉಪಾಧ್ಯಕ್ಷರ ಮುಖಾಂತರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೇ, ನನ್ನ ಏರಡು ಪಾಯಿಂಟ್‌ಗೆ ಉತ್ತರ ಬರಲಿಲ್ಲ, ಕೊಂಡಂಥ ಏಳು ಸಾವಿರ ಕ್ರೇಟ್‌ಗಳಲ್ಲಿ ಮೂರು ಸಾವಿರ ಕ್ರೇಟ್‌ಗಳು ಇಲ್ಲವೇ ಇಲ್ಲ, ಇದರ ಬಗ್ಗೆ ತಮ್ಮಿಂದ ಉತ್ತರ ಬರಲಿಲ್ಲ. ಆ ಕ್ರೆಟ್‌ನ ಬೆಲೆ 157 ರೂಪಾಯಿ ಎಂದು ಇವರ ಕೋಟ್ ಮಾಡಿದ್ದಾರೆ. ಮಾರುಕಟ್ಟೆಯಲ್ಲಿ ಇರತಕ್ಕಂಥದ್ದು 110ರಿಂದ 115 ರೂಪಾಯಿಗಳು. ಅದು ಮೊದಲನೆಯ ಕ್ವಾಲಿಟಿಯಾಗಿದೆ. ಇದರ ಬಗ್ಗೆ ಸಚಿವರಿಂದ ಉತ್ತರ ಬರಲಿಲ್ಲ, ಇವರು ತಂದಿರುವುದು ಎರಡನೆಯ ಕ್ವಾಲಿಟಿ. ಜೊತೆಗೆ ಕಟ್ಟಡಗಳ ಬಗ್ಗೆ ಸಚಿವರಿಂದ ಏತಕ್ಕೋ ಮಾತೇ ಬರಲಿಲ್ಲ. ನಾನು ಕೇಳುವುದು ಏನು ಇವತ್ತಿನ ದಿವಸ ಇಡೀ ಬೆಂಗಳೂರು ನಗರದಲ್ಲಿ ಎಲ್ಲಾ ಬಡಾವಣೆಗಳಲ್ಲಿರತಕ್ಕಂಥ ಕಟ್ಟಡಗಳು ಈಗ ಆಗಿರುವುದೆಲ್ಲಾ ಕೂಡ 65 ರಿಂದ 70 ಸಾವಿರ ರೂಪಾಯಿಗಳಿಗೆ ಆಗಿರುವ ಕಟ್ಟಡಗಳು. ಎಸ್.ಆರ್.ರೇಟ್ ಭೇಂಜ್ ಆಗಿಲ್ಲ ಇದೇ 30 ಕಟ್ಟಡಗಳಿಗೆ 92 ಸಾವಿರ ರೂಪಾಯಿ ಎಂದು ಕೊಟ್ಟಾಗ ಒಂದು ಕಟ್ಟಡಕ್ಕೆ 22 ಸಾವಿರ ರೂಪಾಯಿ ಜಾಸ್ತಿಯಾದರೆ ಇದರ ಅಮೌಂಟ್ ಎಷ್ಟಾಗುತ್ತದೆ? ಈ ರೀತಿ ಸ್ವಂತಿಕೆಗೆ ಇರತಕ್ಕಂಥ ಕಂಟ್ರಾಕ್ಟರುಗಳಿಗೆ ಕೊಡುವುದು ಸರಿಯೇ ಎಂದು ಕೇಳಿದ್ದಕ್ಕೆ ಅದಕ್ಕೇನೂ ಉತ್ತರ ಬಂದಿಲ್ಲ, ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಡಿ. ಹಲಗೇಗೌಡ :- ಮಾನ್ಯ ಉಪಾಧ್ಯಕ್ಷರೇ, ತೋಟಗಾರರ ಬೆಳೆಗಾರರ ಸಹಕಾರ ಸಂಘ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಇದೊಂದು ಕಿರೀಟ ಪ್ರಾಯವಾದುದೂ ಕೂಡ ಹೌದು. ರೈತರ ಕ್ಷೇಮ ಚಿಂತನೆಯನ್ನು ಮಾಡತಕ್ಕಂಥದ್ದು ಅವರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡತಕ್ಕಂಥ ಒಂದು ಸಹಕಾರ ಸಂಘ. ಈ ಸಂಘ ರೈತರಿಗೆ ವರಪ್ರದಾನವೂ ಕೂಡ ಹೌದು. ಆದರೆ ಸುಮಾರು ಹನ್ನೊಂದು ವರ್ಷಗಳ ಪರ್ಯಂತ ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರು ಚೆನ್ನಾಗಿ

ನಡೆಸಿಕೊಂಡು ಬಂದಿದ್ದಾರೆ. ಅವರು ಎಷ್ಟು ಚೆನ್ನಾಗಿ ನಡೆಸಿದ್ದಾರೆ ಎಂದು ಹೇಳಿದರೆ ಅವರಿಗೆ ರಾಜ್ಯಪ್ರಶಸ್ತಿಯನ್ನು ಕೂಡ ಕೊಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಕೂಡ ನಾವೇ ಹೊಂದಿದ್ದು ನಾವೇ ಸೂಚನೆಯನ್ನೂ ಕೂಡ ಕೊಟ್ಟಿದ್ದೆವು. ಆದರೆ ಅಂಥ ದಕ್ಷ ಅಧಿಕಾರಿಗಳನ್ನು ಕೊನೆಯ ಅವರ ಸೇವಾ ಅವಧಿ ಎಷ್ಟು ಇದೆ, ಕೊನೆಯವರೆಗೂ ಅವರನ್ನು ಅಲ್ಲಿಯೇ ಉಳಿಸುವುದಕ್ಕೆ ಸಾಧ್ಯವೇ? ಅವರಿಗೆ ಬಡ್ತಿ ದೊರೆಯಿತು, ಬೇರೆ ಕಡೆಗೆ ಹಾಕಿದರು. ಬಡ್ತಿ ದೊರೆತ ಮೇಲೆ ಬೇರೆಯವರನ್ನು ಹಾಕಿದ ಮೇಲೆ ಬಂದರು. ಅವರಿಗೂ ಕೊಟ್ಟಿರುವ ಕಾಲ ಎಷ್ಟು? ಕೇವಲ ಒಂದು ವರ್ಷವೂ ಕೂಡಾ ಇನ್ನು ಮುಗಿದಿಲ್ಲ, ಒಂದು ವರ್ಷದ ಅವಧಿಯೊಳಗೆ ಹಾಗೆ ಆಯಿತು, ಹೀಗೆ ಆಯಿತು ಎಂದು ನಾವು ಹೇಳುವುದರ ಬದಲು ಈ ಒಂದು ವರ್ಷದಲ್ಲಿ ಏನು ಆಯಿತು ಎನ್ನತಕ್ಕಂಥದ್ದನ್ನು ಕೂಡ ನಾವು ಪರ್ಯಾಲೋಚನೆ ಮಾಡಬೇಕು. ಕಳೆದ ಮೂರು ತಿಂಗಳ ಹಿಂದೆ ಸುಮಾರು ಆರೇಳು ತಿಂಗಳವರೆಗೆ ಕೂಡ ತರಕಾರಿ ಬೆಲೆ ಗಗನಕ್ಕೆ ಮುಟ್ಟಿತ್ತು. ಎಲ್ಲಿ ಯಾವಾಗ ಒಳ್ಳೆಯ ಬೆಳೆ ಸಿಗುತ್ತದೆ ನಮ್ಮ ಮಾರುಕಟ್ಟೆಯಲ್ಲಿ ಆಗ ರೈತರು ಯಾರೂ ಕೂಡ ಸೊಸೈಟಿಗೆ ತಂದುಕೊಡುವುದಿಲ್ಲ, ನಾನು ಕೂಡ ಒಬ್ಬ ತರಕಾರಿ ಬೆಳೆಗಾರ. ಹಿಂದೆಯೂ ನಾನು ಕೂಡ ತರಕಾರಿಯನ್ನು ತೆಗೆದುಕೊಂಡು ಹೋಗಿದ್ದೇನೆ. ಆಗ ತರಕಾರಿಯನ್ನು ಯಾರೂ ಕೂಡ ತೆಗೆದುಕೊಳ್ಳಲಿಲ್ಲ, ಸೊಸೈಟಿಯವರು ಕೂಡ ತೆಗೆದುಕೊಳ್ಳಲಿಲ್ಲ, ಕೇವಲ ಬೆಂಗಳೂರು ಬಹುಶಃ ಕೋಲಾರ ಇವೆರೆಡು ಜಿಲ್ಲೆಗಳಿಗೆ ಸೀಮಿತವಾಗಿರತಕ್ಕಂಥ ಈ ಸಹಕಾರ ಸಂಘ ಇತ್ತೀಚೆಗೆ ಮಂಡ್ಯ ಮತ್ತು ಮೈಸೂರಿಗೂ ಕೂಡ ವರ್ಗಾವಣೆಯಾಗಿದೆ. ಅದರ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಂಡಿದ್ದಾರೆ. ಬಹುಶಃ ಇದನ್ನು ನಾನು ನೋಡುವುದಾದರೆ ವಿತಕ್ಕೋಸ್ಕರ ಮಂಡ್ಯ ಈ ಕಡೆಗೆ ಕೊಡುತ್ತಾರೆ ಎಂದರೆ ಕೇವಲ ಇದು ನಮ್ಮ ಜಿಲ್ಲೆಗಳಿಗೆ ಸೀಮಿತವಾಗಿರಬೇಕು, ಬೇರೆ ಕಡೆಗೆ ಹೋಗಬಾರದು ಎಂದು ಕೆಲವು ಸದಸ್ಯರುಗಳ ಅಭಿಪ್ರಾಯವಿದೆಯೋ ಏನೋ ನನಗೆ ಗೊತ್ತಿಲ್ಲ. ಈಗ ಮಂಡ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಮಂಡ್ಯದಲ್ಲಿಯೂ ಕೂಡ ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ ಮತ್ತು ಮಂಡ್ಯದ ಕೆಲವು ಭಾಗ, ಶ್ರೀರಂಗಪಟ್ಟಣ ಈ ತಾಲ್ಲೂಕುಗಳಲ್ಲಿ ಹೆಚ್ಚು ಹೆಚ್ಚು ತರಕಾರಿಯನ್ನು ಬೆಳೆದು ಕೊನೆಯ ಪಕ್ಷ ಬೆಂಗಳೂರಿಗೆ ಆಗುವಷ್ಟು ತರಕಾರಿಯನ್ನು ಕೂಡ ಕೇವಲ ನಾಲ್ಕು ತಾಲ್ಲೂಕುಗಳಲ್ಲಿ ಸರಬರಾಜು ಮಾಡುತ್ತಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಮ್ಮದೆಲ್ಲಾ ಊಟಿಗೆ ಹೋಗುತ್ತದೆ.

ಶ್ರೀ ಡಿ. ಹಲಗೇಗೌಡ :- ನಮಗೆ ಇಲ್ಲಿ ಮಾರುಕಟ್ಟೆ ದೊರೆಯದೇ ಹೊರಗಡೆ ಕೂಡ ಮೆಟ್ಟುಪಾಳ್ಯ, ಊಟಿ, ಇಂಥ ಕಡೆಗಳಿಗೆ ಲಾರಿ ಮುಖಾಂತರ ಸಾಗಿಸುತ್ತಿದ್ದೇವೆ. ಹಿಂದೆ ತರಕಾರಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ, ಅದರಲ್ಲಿ ಅರ್ಧ ಭಾಗ ಎಲ್ಲವನ್ನೂ ಈಗ ಸೊಸೈಟಿಯವರೇ ತೆಗೆದುಕೊಂಡು ನಮಗೂ ಕೂಡ ಮಾರುಕಟ್ಟೆಯನ್ನು ಒದಗಿಸಿಕೊಡುತ್ತಾರೆ. ಇದಕ್ಕೋಸ್ಕರ ನಾವು ಅವರನ್ನು ಅಭಿನಂದಿಸಬೇಕಾಗಿದೆ. ಧಕ್ಷರು ಇದ್ದರು. ಅವರೂ ಕೂಡ ಬಹಳ ಪ್ರಾಮಾಣಿಕವಾದಂಥ ಅಧಿಕಾರಿ. ನನಗೂ ಕೂಡ ಗೊತ್ತು. ಈಗ ಸನ್ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕೆಲವು ಪ್ರಾಕೃತಿಕ ಕಾರಣಗಳಿಂದ ನಷ್ಟವಾಗಿದೆ. ಕೆಲವು ರೈತರೂ ಕೂಡ ಕೊಡದೆ ಒಳ್ಳೆಯ ಬೆಲೆ ಅವರಿಗೆ ಮಾರುಕಟ್ಟೆಯಲ್ಲಿ ಸಿಕ್ಕುವುದರಿಂದ ಸಹಕಾರ ಸಂಘಕ್ಕೂ ಕೊಡದೇ ಅದರ ವಹಿವಾಟು ಕೂಡ ಕಡಿಮೆಯಾಗಿರಬಹುದು. ಸಂಬಳ ಸಾರಿಗೆ ಜಾಸ್ತಿ ಆದಾಗಲೂ ಕೂಡ ಅದರಿಂದಲೂ ಕೂಡ ನಷ್ಟವಾಗಿರಬಹುದು. ಆದರೆ ಇವರು ಏನಾದರೂ ಅಪವ್ಯಯ ಮಾಡಿದ್ದರೆ, ದುರುಪಯೋಗವನ್ನು ಮಾಡಿದ್ದರೆ ಅವರನ್ನು ಸುಮ್ಮನೆ ಬಿಡಿ ಎಂದು ನಾನು ಹೇಳುವುದಿಲ್ಲ. ಅದನ್ನು ಪರಿಶೀಲನೆ ಮಾಡಿ ತಪ್ಪು ಮಾಡಿದ್ದರೆ ತಕ್ಕ ಶಿಕ್ಷೆಯನ್ನು ನೀಡಿ. ಆದರೆ ಒಬ್ಬರನ್ನೇ ಅವರು ನಿವೃತ್ತಿಯಾಗುವವರೆಗೂ ಕೂಡ ಒಂದೇ ಜಾಗದಲ್ಲಿ ಇರಿಸುವುದು ಸಾಧ್ಯವಿಲ್ಲ, ಇವರಿಗೂ ಕೂಡ ಅವಕಾಶವನ್ನು ಕೊಡಿ.

ಆ ಸಹಕಾರ ಸಂಘದಲ್ಲಿರುವ ಅಧಿಕಾರಿಗಳಲ್ಲಿ ನೌಕರ ವರ್ಗದಲ್ಲಿ 2–3 ಭಾಗ ಆಗಿದೆ. ಒಂದು ಭಾಗ ಒಬ್ಬೊಬ್ಬರನ್ನು ವಹಿಸಿಕೊಂಡು ಹೋಗಿ ನಮಗೆ ಗೊತ್ತಿಲ್ಲದೆ ಏನೋ ವಿಚಾರಗಳನ್ನು ತಿಳಿದೋ ತಿಳಿಯದೆಯೋ ಅಪಪ್ರಚಾರಗಳನ್ನು ಹೇಳಿ, ತಪ್ಪು ತಿಳುವಳಿಕೆಯನ್ನು ಹೇಳಿ ಅವರನ್ನು ತಪ್ಪು ದಾರಿಗೆ ಎಳೆಯತಕ್ಕಂಥಹ ಕೆಲಸ ಕಾರ್ಯಗಳನ್ನು ನೌಕರವರ್ಗದವರು ಮಾಡುತ್ತಿದ್ದಾರೆ. ಏನಾದರೂ ಮುಂದೆ ಆ

ಸಹಕಾರ ಸಂಘ ಕ್ಷೀಣಸ್ಥಿತಿಗೆ ಬಂದರೆ ನೌಕರವರ್ಗದವರೇ ಕಾರಣಕರ್ತರಾಗುತ್ತಾರೆ. ಅಂತಹ ಸಹಕಾರವನ್ನು ಕೊಡದೇ ಇರತಕ್ಕ, ಸರಿಯಾಗಿ ನಿಷ್ಠೆಯಿಂದ ಕೆಲಸ ಮಾಡದೆ ಇರತಕ್ಕ ಕೇವಲ ವ್ಯಕ್ತಿ ನಿಷ್ಠೆಯನ್ನು ತೋರಿಸತಕ್ಕಂಥಹ ನೌಕರವರ್ಗದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ನೀವು ಈ ಕೆಲಸವನ್ನು ಮಾಡಿದರೆ ಮಾತ್ರ ಸಹಕಾರ ಸಂಘ ಚೆನ್ನಾಗಿ ನಡೆಯುತ್ತದೆ. ಬಾಡಿಮಾತನ್ನು ಹೇಳಿ ಸಹಕಾರ ಸಂಘಕ್ಕೆ ಧಕ್ಕೆಯನ್ನು ಉಂಟುಮಾಡತಕ್ಕ ನೌಕರವರ್ಗದವರು ಇದ್ದರೆ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಶಿಸ್ತಿನಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ಅವರಿಗೆ ಇನ್ನೂ ಕಾಲಾವಕಾಶವನ್ನು ಬೇಕಾದರೆ ಕೊಡಿ. ಮಂಡ್ಯ ಜಿಲ್ಲೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಕೇವಲ ಒಂದು ವರ್ಷದಿಂದ ಮಾತ್ರ ಸಹಕಾರ ಸಂಘ ಇದೆ. ನಮಗೂ ಇದರಿಂದ ಅನುಕೂಲವಾಗುತ್ತಿದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದರಿಂದ ಸಹಾಯವನ್ನು ಪಡೆದುಕೊಂಡಿರತಕ್ಕವನಲ್ಲಿ ನಾನೂ ಒಬ್ಬನಾಗಿದ್ದೇನೆ. ನಾನು ತರಕಾರಿ ಬೆಳೆಗಾರನಾಗಿದ್ದೇನೆ. ಅದರಿಂದ ನಮಗೆ ಏನೂ ತೊಂದರೆಯಾಗಿಲ್ಲವೆಂದು ನೇರವಾಗಿ ಹೇಳುತ್ತಿದ್ದೇನೆ. ಹೀಗೆ ಚೆನ್ನಾಗಿ ಪ್ರಾಮಾಣಿಕವಾಗಿ ಕೆಲಸಮಾಡಿದವರ ವಿಚಾರದಲ್ಲಿ ಯಾರೋ ಯಾರೋ ಮಾತನ್ನು ಕೇಳಿ ಅವರಿಗೆ ಅಪಚಾರ ಮಾಡುವುದು ಸರಿಯಲ್ಲ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ರೇವಣ್ಣನವರು ಮತ್ತು ಗೆಳೆಯರಾಗಿರತಕ್ಕಂಥಹ ಮಾನ್ಯ ಲಿಂಗಪ್ಪನವರು ಮತ್ತು ಹಿರಿಯರಾದಂತಹ ಮಾನ್ಯ ಹಲಗೇಗೌಡರು ಸರ್ಕಾರದ ಗಮನವನ್ನು ತೀವ್ರವಾಗಿ ತೋಟಗಾರಿಕಾ ಸಂಘದ ಮೇಲೆ ಸೆಳೆದಿದ್ದಾರೆ. ತೋಟಗಾರಿಕಾ ಸಂಘ ಕಳೆದ ಸಾಲಿನಲ್ಲಿ ಮತ್ತು ಹಿಂದೆಲ್ಲಾ ಬಹಳ ಲಾಭವನ್ನು ಗಳಿಸಿತ್ತು, ಚೆನ್ನಾಗಿ ಮಾಡಿತ್ತು ಎಂಬುದರ ಬಗ್ಗೆ ಸನ್ಮಿತ್ರರು ಅವರ ಭಾಷಣದಲ್ಲಿ ಈಗಾಗಲೇ ಹೇಳಿದ್ದಾರೆ. ನಾನು ತೋಟಗಾರಿಕೆ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ನಿಮ್ಮ ತೋಟಗಾರಿಕಾ ಸಂಘ ಬರೀ ಲಾಭದಾಯಕ ದೃಷ್ಟಿಯಿಂದಲೇ ಈ ಸರ್ಕಾರದಲ್ಲಿ ರಚಿತವಾಗಿಲ್ಲ. ನೀವು ಇನ್ನು ನಿಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತಾರಮಾಡಬೇಕು. ಉದಾಹರಣೆಗೆ ಇವತ್ತು ಮಾನ್ಯ ಹಲಗೇಗೌಡರು ಬೆಳೆಯತಕ್ಕಂಥಹ ತರಕಾರಿಯನ್ನು ನಾಗಮಂಗಲದಲ್ಲಿ, ಪಾಂಡವಪುರದಲ್ಲಿ, ತೋಟಗಾರಿಕಾ ಸಂಘ ಇವತ್ತಿನವರೆಗೂ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಮ್ಮ ನಾಗಮಂಗಲ ರೈತ ಬೆಳೆದ ತರಕಾರಿಯನ್ನು ಅವರು ಊಟಿಗೆ ಹೋಗಿ ದಲ್ಲಾಳಿಗಳು ಕೊಟ್ಟ ರೇಟನ್ನು ಅವರು ತೆಗೆದುಕೊಂಡು ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕಳೆದ 6–7 ತಿಂಗಳುಗಳಿಂದಲೂ ಇದರ ಬಗ್ಗೆ ನಿಮ್ಮನ್ನು ಕೇಳಿ ಸಾಕಾಗಿದೆ. ನೀವೇನಾದರೂ ಮಾಡಿ ನಾಗಮಂಗಲ ತಾಲ್ಲೂಕಿನಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ, ಶ್ರೀ ರಂಗಪಟ್ಟಣ ತಾಲ್ಲೂಕಿನಲ್ಲಿ ಬೆಳೆಯತಕ್ಕಂಥಹ ತರಕಾರಿಯನ್ನು ಪ್ರಾಕ್ಯೂರ್ ಮಾಡಿ ಅದನ್ನು ತಂದು ಮಾರಾಟ ಮಾಡಿ ಅಂದರೆ ಇನ್ನು ಆಗಿಲ್ಲ, ಅದರ ಬಗ್ಗೆ ತಾವು ಗಮನವನ್ನು ಕೊಡಬೇಕು. ಈಗ ಮಾನ್ಯ ರೇವಣ್ಣನವರು, ಮಾನ್ಯ ಲಿಂಗಪ್ಪನವರು ಹೇಳಿದ್ದಾರೆ ಅದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ಈಗಾಗಲೇ 1 ವರ್ಷಗಳಿಂದ ಮಾಡಿರತಕ್ಕ ಅಧಿಕಾರಿಯನ್ನು ಅಲ್ಲೇ ಇರಿಸುವುದು ಸರ್ಕಾರಕ್ಕೆ ಸಾಧುವಲ್ಲ. ಅಧಿಕಾರಿಗಳು ಬರುತ್ತಾರೆ, ಅಧಿಕಾರಿಗಳು ಹೋಗುತ್ತಾರೆ. ಈಗ ಇರತಕ್ಕ ಅಧಿಕಾರಿಗಳ ಮೇಲೆ ನೀವು ಕಟ್ಟುನಿಟ್ಟಿನ ಬಿಗಿ ಮಾಡಿ. ಮಾನ್ಯ ಲಿಂಗಪ್ಪನವರು, ಮಾನ್ಯ ರೇವಣ್ಣನವರು ಎಲ್ಲೆಲ್ಲೀ ಪಾಯಿಂಟ್ ಔಟ್ ಮಾಡಿದ್ದಾರೆ ಅದನ್ನೆಲ್ಲಾ ಬಿಗಿ ಮಾಡಿ ಎಲ್ಲೆಲ್ಲಿ ಸೋರಿ ಹೋಗುತ್ತಿದೆ ಅದನ್ನೆಲ್ಲಾ ಬಂದೋಬಸ್ತು ಮಾಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಪ್ರತಿ ಎರಡೂ ತಿಂಗಳಿಗೊಮ್ಮೆ ರಿವ್ಯೂ ಮಾಡಿ. ಕೋಟಿಗಟ್ಟಲೆ ಲಾಭ ಬರುತ್ತಿರುವುದು ಏಕ್‌ದಂ ಹೋಗಬೇಕಾದರೆ ಕಾರಣವೇನು? ಏಕೆಂದರೆ ಕಳೆದ 3–4 ತಿಂಗಳ ಹಿಂದೆ ಕಾವೇರಿ ಡಿಸ್‌ಪ್ಯೂಟ್‌ನಿಂದ ಯಾವುದೇ ವ್ಯವಹಾರ ಆಗಿಲ್ಲ, ಉದಾಹರಣೆಗೆ ಮಂಡ್ಯದಲ್ಲಿರತಕ್ಕ ನಿಮ್ಮ ಸ್ಟಾಲ್‌ಗಳನ್ನೆಲ್ಲಾ ಜನ ಬೀದಿಗೆ ಕಿತ್ತುಕೊಂಡು ಬಂದು ಹಾಕಿದ್ದಾರೆ. ಬೆಂಗಳೂರಿನಲ್ಲಿರತಕ್ಕಂಥ ಎಲ್ಲಾ ಸ್ಟಾಲ್‌ಗಳನ್ನು ಮುಚ್ಚಿಬಿಟ್ಟರು. ಈ ರೀತಿ ಪರಿಸ್ಥಿತಿ ಇರುವಾಗ ಲಾಸ್ ಆಗುವುದಕ್ಕೆ ಕಾರಣಗಳು ಇವೆ. ಇವೆಲ್ಲವನ್ನು ತಾವು ಪರಿಶೀಲನೆ ಮಾಡಿ, ಮಾನ್ಯ ಸದಸ್ಯರು ಗೆಳೆಯರು ಹೇಳಿರುವುದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ತಾವು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ಹಾಗೆಯೇ

ನಾಗಮಂಗಲ ತಾಲ್ಲೂಕಿನಲ್ಲಿ ಬಹಳಷ್ಟು ಬೆಳೆಯುತ್ತಿರತಕ್ಕ ಬೆಳೆ ಎಲ್ಲಾ ಹಾಳಾಗುತ್ತಿದೆ. ಇದಕ್ಕೆ ಯಾವಾಗ ಸ್ಪೋರೇಜ್ ಮಾಡುತ್ತೀರೆಂದು ಈ ಸದನದಲ್ಲಿ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ :- ಮಾನ್ಯ ಉಪಾಧ್ಯಕ್ಷಣಿಯವರೆ, ಸಂಗ್ರಹಣ ಕೇಂದ್ರಗಳನ್ನು ಬೆಂಗಳೂರು ಜಿಲ್ಲೆಗಳಂತೆ ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿಯೂ ಸಹ ಹೆಚ್ಚಾಗಿ ತರಕಾರಿಯನ್ನು ಬೆಳೆಯತಕ್ಕಂಥಹ ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ ತಾಲ್ಲೂಕಿನ ರೈತರಿಗೋಸ್ಕರವಾಗಿ ಸಧ್ಯದ್ಲೇ ಖಾಬುರಾಯನಕೊಪ್ಪಲಲ್ಲಿ ತೆರೆಯಬೇಕೆಂದು ಆಸೆ ಇದೆ. ನಾಗಮಂಗಲ ತಾಲ್ಲೂಕಿನ ರೈತರಿಗೂ ಕೂಡ ಆ ಸೌಲಭ್ಯವನ್ನು ವಿಸ್ತರಿಸತಕ್ಕಂಥಹ ಆಲೋಚನೆ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಯಾವಾಗ ತೆರೆಯುತ್ತೀರೆಂದು ಹೇಳಿ?

ಶ್ರೀ ಎಂ.ಎಸ್. ಆತ್ಮಾನಂದ :- ಕಾಲಾವಕಾಶವನ್ನು ಕೊಡಿ, ತರಕಾರಿಯನ್ನು ತೆಗೆದುಕೊಳ್ಳತಕ್ಕದ್ದು ಮುಖ್ಯ ಅಲ್ಲ, ಮಾರುಕಟ್ಟೆಯನ್ನು ಮಾಡಿಕೊಂಡು, ತರಕಾರಿಯನ್ನೂ ದೊರಕಿಸಿಕೊಳ್ಳಬೇಕು. ತರಕಾರಿ ಕೊಳೆತು ಹೋಗತಕ್ಕಂಥ ವಸ್ತು. ಅದರ ಬಗ್ಗೆ ನಾನು, ತಾವು ಹಿಂದೆ ಊಟಕ್ಕೆ ಬಂದಿರತಕ್ಕಂಥ ಸಭೆಯಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಅತಿ ಶೀಘ್ರವಾಗಿ ತೆರೆಯಲಿಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ನನ್ನ ಮಿತ್ರರಾದ ಶ್ರೀ ರೇವಣ್ಣನವರು ಕ್ರೇಟ್ಸ್ ಬಗ್ಗೆ ಹೇಳಿದರು. ನಾವು ಕೊಟೇಶನ್ ಕರೆದು ಅತಿ ಕಡಿಮೆ ಇರತಕ್ಕಂಥ ಸಂಸ್ಥೆಯ ಕೊಟೇಶನ್‌ಗೆ ಅನುಗುಣವಾಗಿ ತೆಗೆದುಕೊಂಡಿದ್ದೇವೆ. ಸುಮಾರು 7000 ಕ್ರೇಟ್ಸ್ ಈಗ ಸ್ಟಾಕ್‌ನಲ್ಲಿದೆ. ಆ ಸ್ಟಾಕ್ ನಮ್ಮ ಸೊಸೈಟಿಯಲ್ಲಿದ್ದು, ಮತ್ತು ಮೈಸೂರಿನಲ್ಲಿರತಕ್ಕೆ ಪಾನೀಯ ವಿಭಾಗ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಆ ಪಾನೀಯ ವಿಭಾಗ ಮುಚ್ಚಿಲ್ಲ, ಹಿಂದಿನಿಂದ ಕೂಡ ಹೆಚ್ಚಿನ ವಹಿವಾಟನ್ನು ಮಾಡಿಕೊಂಡು ಬರುತ್ತಿದೆ ಮತ್ತು ಸಂಬಳವನ್ನು ಜೂನ್ ತಿಂಗಳಿಂದ ಪಾವತಿ ಮಾಡಿದೆ. 1989 ರಲ್ಲಿ ಕಟ್ಟಡದ ಏನು ಅಂದಾಜು ಇತ್ತು, ಅದೇ ರೀತಿ 1992ರಲ್ಲೂ ಕೂಡ ಅಂದಾಜು ಮಾಡಿ ಕಟ್ಟುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಅನುಮಾನ ಅಥವಾ ಶಂಕೆ ಬೇಡ. ಆ ಸೊಸೈಟಿ ಚೆನ್ನಾಗಿ ನಡೆಯಬೇಕು. ಅದರ ಹೆಸರು, ಪ್ರತಿಷ್ಠೆ ಹಾಗೆ ಉಳಿಸಿಕೊಂಡು ಬರಬೇಕೆನ್ನುವ ಆಶಯ ನನಗೂ ಕೂಡ ಇದೆ. ನಾನು ಈ ದಿಸೆಯಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಂಡು ಸೊಸೈಟಿ ಇನ್ನೂ ಹೆಚ್ಚಿನ ವಹಿವಾಟು ನಡೆಸುವ ರೀತಿಯಲ್ಲಿ ಕಾರ್ಯಕ್ರಮ ಹಾಕುತ್ತೇವೆ ಎನ್ನುವ ಮಾತನ್ನು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ವಿರೋಧ ಪಕ್ಷದವರು ವಿಧಾನ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಮನವಿ.

∓ SRI QUMAURL ISLAM (Gulbarga):– Madam Deputy Speaker, for the last three days the Opposition is boycotting the Session and this boycott started when a resolution was moved by the Leader of the Opposition in connection with the leakage of the Budget for 1992–93 and he demanded the resignation from the Chief Minister for the leakage. The Chief Minister offered when this resolution was moved, that there will be an enquiry conducted by the Government or a House Committee can be constituted for the purpose. As the Opposition Leader pressed for the resolution it was put to the vote of the House and that resolution was rejected. From the next day onwards, the Opposition including S.J.P., B.J.P have boycotted the Session and they went to the Governor and appraised the situation. On Friday afternoon I raised this issue

and through you I demanded that there should be an enquiry regarding the leakage of budget, even though the matter was seized of. Hon. Chief Minister said that if the Opposition Leader would not have pressed for it the option would have been there, but the Opposition Leader in a Press Conference demanded the enquiry through the House Committee. I being one of the Opposition members of this House, demanded on Friday afternoon that budget leakage is a leakage and it is a very serious matter. So I appeal through you that the Government should not make it a prestige issue, at the same time the Opposition should also not make it a prestige issue. I request the Hon. Speaker and the Hon. Deputy Speaker to call the floor leaders and discuss the matter so that there should be an understanding and the session can be continued, and this has happened for the first time that the budget discussion was initiated by a member other than the Opposition Leader. Budget discussion was initiated by an hon. member from the ruling party. Even to-day I think the efforts were made. Yesterday Hon. Speaker called the Leader of Opposition as well as some of the Cabinet Ministers. I also attended. Some progress has been made. I hope that further there will be a progress in this regard. Hence, I request through you Madam, that the Hon. Speaker may be given one more chance, and he may use his office to bring the Ruling and Opposition together in the larger interest of the democracy and in the larger interest of the people of Karnataka, because the Opposition has to point out the loopholes in the Budget and also to give the suggestions and also to critise. Suppose the Opposition is not present and if this goes on like that, it will not be good in the interest of the people. So, I request to-day the Session may be adjourned for tomorrow and whatever efforts are being made, may be made and still we hope that using the good office of the Hon. Speaker and your goodself, it will definitely bring a sort of understanding, so that tomorrow onwards I hope and also I appeal that without making a prestige issue either by the Government side or from the Opposition, they will also join with us. With this request , I conclude.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು):- ಉಪಾಧ್ಯಕ್ಷರೆಯರೆ, ಮುಸ್ಲಿಮ್ ಲೀಗಿನ ಹಿರಿಯ ನಾಯಕರಾದಂಥ ಮಾನ್ಯ ಖಮರುಲ್ ಇಸ್ಲಾಮ್‌ರವರು ಶುಕ್ರವಾರದಿಂದ ಈ ವಿಷಯವನ್ನು ಪ್ರಸ್ತಾಪನೆ ಮಾಡುತ್ತಲೆ ಇದ್ದಾರೆ ನಾನೂ ಕೂಡ ನಾಲ್ಕು ದಿನಗಳಿಂದ ಅವರಿಗೆ ಉತ್ತರವನ್ನು ಕೊಡುತ್ತಲೇ ಇದ್ದೇನೆ. ಮೂಲಭೂತವಾದ ಪ್ರಶ್ನೆ ಎಲ್ಲಿ ಪ್ರಾರಂಭವಾಯಿತೆಂದರೆ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯ ಸಮಯದಲ್ಲಿ, ಅವರೂ ಕೂಡ ಇದ್ದರು, ತಾವು ಕೂಡ ಇಲ್ಲಿ ಕುಳಿತಿದ್ದಿರಿ ವಿರೋಧ ಪಕ್ಷದ ಬೆಂಚ್‌ನಲ್ಲಿ ಯಾರೂ ಇರಲಿಲ್ಲ. ಕೊನೆಗೆ ಸರದಿಯ ಪ್ರಕಾರ ಶ್ರೀಮಾನ್

ಇದಿನಬ್ಬನವರು ಪ್ರಸ್ತಾಪ ಮಾಡಿದರು. ಈಗ ಇರತಕ್ಕ ಪ್ರಶ್ನೆ ಏನೆಂದರೆ ಆ ದಿವಸ ತಾಂತ್ರಿಕವಾಗಿ ತಾವು ಏನು ಅಪ್ಪಣೆಯನ್ನು ಕೊಡಿಸುತ್ತೀರಿ ಆ ರೀತಿ ನಾವು ಕೇಳಬೇಕಾಗುತ್ತದೆ. ಆ ಸದನದಲ್ಲಿ ಸರ್ಕಾರದ್ದೆ ಹೆಚ್ಚುಗಾರಿಕೆ ಬರುತ್ತದೆಂದಲ್ಲ ಆ ಅಭಿಪ್ರಾಯ ಸದನದಲ್ಲಿ ಇದೆ. ಆದರೂ ಕೂಡ ತಾವು ಸಭಾಧ್ಯಕ್ಷರಾಗಿ ಏನು ಆದೇಶವನ್ನು ಅಪ್ಪಣೆಯನ್ನು ಕೊಡುತ್ತೀರೋ ಅದರ ಪ್ರಕಾರ ಆ ದಿವಸ ಆ ರೀತಿ ನಡೆದುಹೋಯಿತು. ಇದೊಂದು ತಪ್ಪನ್ನು ಬಹುಶಃ ಯಾರ ಮೇಲೆ ಹೇರಬೇಕು? ಈ ತಪ್ಪನ್ನು ಯಾರು ಮಾಡಿದರು ಎಂಬ ಬಗ್ಗೆ ಹೇಳುವುದಾದರೆ ಈ ಪ್ರಶ್ನೆ ಏನು ಸದನದ ಹೊರಗಡೆ ನಡೆದುದ್ದಲ್ಲ, ಅದಕ್ಕಿಂತ ಮೊದಲು ಏನು ಆಯವ್ಯಯದ ಲೀಕೇಜ್ ಆಯಿತು ಅಥವಾ ಆಪಾದನೆ ಏನಾಯಿತು ಅದರ ಬಗ್ಗೆ ಇಲ್ಲಿ ವ್ಯಾಪಕವಾಗಿ ಚರ್ಚೆಯಾಗಿದೆ ಆ ಚರ್ಚೆಯ ಮೇಲೆ ಆ ನಿರ್ಣಯವು ಸಹ ಬಿದ್ದುಹೋಯಿತು.

That matter was closed actually. ಆದರೆ ಯಾವಾಗ ಈ ಎರಡನೇ ವಿಚಾರ ನಡೆಯಿತು? ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸಾಮಾನ್ಯ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು, ಅದೇ ನಮ್ಮ ಇಚ್ಛೆಯು ಆಗಿತ್ತು. ಸಾಮಾನ್ಯ ಚರ್ಚೆಯನ್ನು ಏನು ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡುತ್ತಾರೆ ಅದಕ್ಕೆ ಮುಖ್ಯಮಂತ್ರಿಗಳು ಕೂಡ ಬರುತ್ತಾರೆ, ಇದರಲ್ಲಿ ಭಾಗವಹಿಸಬೇಕು ಎನ್ನುವ ಇಚ್ಛೆ ನಮ್ಮದಾಗಿತ್ತು. ಇದರಲ್ಲಿ ಯಾವುದೇ ಒಂದು ಉದ್ದೇಶ ಪೂರ್ವಕವಾಗಲಿ ಅಥವಾ ದುರುದ್ದೇಶಪೂರ್ವಕವಾಗಲಿ, ಚರ್ಚೆಯನ್ನು ಮೊಟಕು ಮಾಡಬೇಕು ಅಥವಾ ಚರ್ಚೆಯನ್ನು ಮಾಡಬಾರದು ಎನ್ನತಕ್ಕ ಉದ್ದೇಶ ಬಹುಶಃ ಈ ಕಡೆಯಲ್ಲಿ ಕೂಡ ಇರಲಿಲ್ಲ, ಹಾಗೂ ಆ ಕಡೆಯಲ್ಲಿಯೂ ಕೂಡ ಇರಲಿಲ್ಲ. ಇವತ್ತು ಶುಕ್ರವಾರ ನಾವು, ತಾವು, ಸಂಧಾನಕ್ಕೆ ಅವರನ್ನೂ ಕರೆಯಬೇಕೆಂದು ಪ್ರಯತ್ನ ಮಾಡಿದೆವು. ನಾವು ಕೂಡ ಪ್ರಯತ್ನ ಮಾಡಿದೆವು ಆದರೆ ಆ ದಿವಸ ಸಂಧಾನ ಆಗಲಿಲ್ಲ, ಶನಿವಾರ ಪುನಃ ಮನಸ್ಸು ಬದಲಾವಣೆ ಮಾಡಿಕೊಂಡು, ವಿರೋಧಪಕ್ಷದ ನಾಯಕರು, ಫ್ಲೋರ್ ಲೀಡರ್ಸ್‌ನ್ನು ಕರೆದು ಮಾತನಾಡಬೇಕು, ಅವರ ಮನಸ್ಸಿನಲ್ಲಿ ಏನಿದೆ, ಅವರ ಮನಸ್ಸಿನಲ್ಲಿ ಏನಾದರೂ ಶಂಕೆ ಇದ್ದರೆ, ಏನಾದರೂ ತೊಡಕಿದ್ದರೆ ಅದನ್ನು ನಿವಾರಿಸಲು ನಮ್ಮ ಕಡೆಯಿಂದ ನಾವು ಸಿದ್ಧವಾಗಿದ್ದೇವೆಂದು ಸ್ಪಷ್ಟವಾಗಿ ನಾವು ತಿಳಿಸಿದೆವು. ತಮಗೆ ಗೊತ್ತಿರುವಂತೆ ನಿನ್ನೆಯೂ ಕೂಡ ನಾವು ಪ್ರಯತ್ನ ಮಾಡಿದೆವು. ನಿನ್ನೆ ಹಿರಿಯ ನಾಯಕರಾದಂಥ ಮಾನ್ಯ ಕಡಿದಾಳ ಮಂಜಪ್ಪನವರು ನಿಧನವಾದುದರಿಂದ ನಿನ್ನೆ ಆ ಚರ್ಚೆ ಇರಲಿಲ್ಲ, ಮಾನ್ಯ ಸಭಾಧ್ಯಕ್ಷರೂ ಕೂಡ ಮೊನ್ನೆ ತಮ್ಮ ಮನೆಯಲ್ಲಿ ನಮ್ಮನ್ನೆಲ್ಲಾ ಮಾತುಕತೆಗೆ ಕರೆದಾಗ ಅಲ್ಲಿಯೂ ಕೂಡ ಮುಕ್ತ ಮನಸ್ಸಿನಿಂದ ಯಾವುದೇ ರೀತಿಯ ಆತಂಕವಿಲ್ಲದೆ, ರಿಸರ್ವೇಷನ್ ಇಲ್ಲದೆ, ಅಲ್ಲಿಗೆ ಎಲ್ಲರೂ ಬನ್ನಿ ಮಾತುಕತೆಯಲ್ಲಿ ಭಾಗವಹಿಸಬೇಕು, ತಮ್ಮ ಅಭಿಪ್ರಾಯ ಏನಿದೆ ಎನ್ನುವ ಬಗ್ಗೆ ಮುಕ್ತ ಮನಸ್ಸಿನಿಂದ ಮಾತನಾಡೋಣವೆಂದು ಹೇಳಿದಾಗ ಅದಕ್ಕೆ ಅವರು ಏನು ಹೇಳಿದರೆಂದರೆ, ನಾವು ವಿರೋಧಪಕ್ಷದವರು, ಫ್ಲೋರ್ ಲೀಡರ್ಸ್ ಎಲ್ಲರೂ ಸಭೆ ಸೇರುತ್ತಿದ್ದೇವೆ, ಅದು ಮುಗಿದಮೇಲೆ ಪುನಃ ಮಾತುಕತೆಗೆ ಬರುತ್ತೇವೆಂದು ಹೇಳಿದರು. ಇವತ್ತು ಅವರು ಬರುತ್ತಾರೆ, ಈ ಬಜೆಟ್ ಮೇಲೆ, ಸಾಮಾನ್ಯ ಚರ್ಚೆ ಇವತ್ತು ಪ್ರಾರಂಭವಾಗುತ್ತದೆಂದು ನಮ್ಮ ಕಡೆಯವರೆಲ್ಲರೂ ಕೂಡ ಬಹಳ ಆಶಾಭಾವನೆಯಿಂದ ಕಾಯುತ್ತಾ ಇದ್ದೇವೆ, ಅವರು ಬರಲಿಲ್ಲ, ಬಹುಶಃ ಅವರೂ ಇನ್ನೂ ಚರ್ಚೆ ಮಾಡುತ್ತಲೇ ಇರಬಹುದೆಂದು ಅನಿಸುತ್ತದೆ. ಇದು ನಮ್ಮ ಪ್ರತಿಷ್ಠೆ ಏನೂ ಇಲ್ಲ, ಇದು ಇನ್ನು ಮುಂದೆ ಜನತೆಯ ಪ್ರತಿಷ್ಠೆಯಾಗುತ್ತದೆ. ಇದು ಜನತೆಯ ಪ್ರತಿಷ್ಠೆ ಏತಕ್ಕೆ ಆಗುತ್ತದೆಂದರೆ, ಈ ಆಯವ್ಯಯದಲ್ಲಿ ಕೆಲವು ತೆರಿಗೆಯ ವಿಚಾರಗಳಿವೆ, ಅಷ್ಟೇ ಅಲ್ಲ ನೀರಾವರಿ, ವಿದ್ಯುತ್ ಇನ್ನೂ ಮುಂತಾದ ಅನೇಕ ಕಾರ್ಯಕ್ರಮಗಳ ವಿಚಾರಗಳಿವೆ. ಇವು ಬಹಳ ಆದ್ಯತೆಯ ಕಾರ್ಯಕ್ರಮಗಳು. ಆದುದರಿಂದ ಜನರು ಈ ವಿಚಾರದ ಬಗ್ಗೆ ಯೋಚನೆ ಮಾಡುತ್ತಾರೆ. ಇದರ ಬಗ್ಗೆ ಇವರು ಏತಕ್ಕೆ ಚರ್ಚೆಮಾಡುತ್ತಿಲ್ಲ ಎಂದು ನೋಡುತ್ತಾರೆ. ಇವರ ಪ್ರತಿಷ್ಠೆ ಅಲ್ಲಿ ಬರುತ್ತದೆ. ನಮ್ಮ ಪ್ರತಿಷ್ಠೆ The prestige of Opposition parties or the prestige of the ruling party will have to be surrendered to the prestige of the people at large who are not here.

ಅವರ ಪ್ರತಿಷ್ಠೆಯ ಕಣದಲ್ಲಿ ನಮ್ಮ ಪ್ರತಿಷ್ಠೆಯನ್ನು ಸರೆಂಡರ್ ಮಾಡಬೇಕಾಗುತ್ತದೆ. ನಾವು ಶರಣಾಗತವಾಗಬೇಕಾಗುತ್ತದೆ. ಇಲ್ಲಿ ನಮ್ಮ ಕಡೆಯ ಜನತಾ ಪ್ರತಿನಿಧಿಗಳೂ ಇದ್ದಾರೆ, ಅದೇ ರೀತಿ ಅವರ ಕಡೆಯ ಜನತಾ ಪ್ರತಿನಿಧಿಗಳೂ ಇದ್ದಾರೆ. ಇವತ್ತು ಆಯವ್ಯಯ ವಿಚಾರದದಲ್ಲಿ ಎಲ್ಲರೂ ಚರ್ಚೆ ಮಾಡಬೇಕಾಗುತ್ತದೆ. ಇಲಾಖಾ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಈ ಸದನದ ಮುಖಾಂತರ ನಮ್ಮ ಮೂಲಭೂತ ಹಕ್ಕು ಏನಿದೆ ಅದನ್ನು ಉಪಯೋಗಿಸಿಕೊಂಡು ನಾವು ಇಲ್ಲಿ ಕೆಲಸಮ್ನ ನಿರ್ವಹಿಸಬೇಕಾಗಿದೆ. ಅದಕ್ಕೆ ಚ್ಯುತಿ ಬಂದಾಗ Then we owe an explanatioon to the people tomorrow. We owe an explanation: We also owe an explanation to the people at large ಆ ಕಡೆಯವರಾಗಲಿ, ಈ ಕಡೆಯವರಾಗಲಿ.

ಆದುದರಿಂದ ಇವತ್ತು ಮಾನ್ಯ ಖಮರುಲ್ ಇಸ್ಲಾಂರವರು ಹೇಳಿದರು ಇವತ್ತಿಗೆ ೪ ದಿನವಾಯಿತು. ಆದರೂ ನಾವು ಇನ್ನೂ ಕಾಯೋಣ ಎಂದು. It is alright. But, the people are more concerned about their problem. We are concerned about our problems. ವಿರೋಧಪಕ್ಷ ಮತ್ತು ನಮ್ಮ ಪ್ರತಿಷ್ಠೆಯ ತಿಕ್ಕಾಟದಲ್ಲಿ ಜನತೆ ನುಚ್ಚುನೂರು ಆಗಬಾರದು. ನಮ್ಮ ಪ್ರತಿಷ್ಠೆಯ ಕಣದಲ್ಲಿ, ಸಂಘರ್ಷಣೆಯಲ್ಲಿ ಜನತೆಯ ಹಿತಾಸಕ್ತಿ ನುಚ್ಚುನೂರಾಗಬಾರದು. ಅವರ ಹಿತವನ್ನು ನಾವು ಕಾಪಾಡಬೇಕು. ಜನತೆಯ ಹಿತದೃಷ್ಟಿಯಿಂದ ನಮ್ಮ ಪ್ರತಿಷ್ಠೆಯನ್ನು ಬದಿಗೊತ್ತುವಂಥ ವಿಚಾರದಲ್ಲಿ ಅದು ಕಾವೇರಿ ನೀರಿನ ವಿಚಾರ ಇರಬಹುದು, ಅಥವಾ ಬೇರೆ ಇನ್ನಾವುದೇ ವಿಚಾರಗಳು ಇರಬಹುದು ಅವುಗಳು ನಮ್ಮ ಮುಂದೆ ಬಂದಾಗ ನಮ್ಮ ಪ್ರತಿಷ್ಠೆಗಳನ್ನು ಮೆಟ್ಟಿನಿಂತು ರಾಜ್ಯದ ಹಿತದೃಷ್ಟಿಯಿಂದ ಕೆಲಸಮಾಡಿದಂಥ ಅನೇಕ ಪ್ರಕರಣಗಳನ್ನು ಮಾನ್ಯ ವಿರೋಧಪಕ್ಷದವರು, ತೋರಿಸಿಕೊಟ್ಟಿದ್ದಾರೆ ; ಅದೇ ರೀತಿ ನಮ್ಮ ಈ ಕಡೆಯವರೂ ಕೂಡ ಎತ್ತಿ ತೋರಿಸಿಕೊಟ್ಟಿದ್ದಾರೆ.

ಆ ಒಂದು ಭವ್ಯ ಪರಂಪರೆ ಈ ಸದನಕ್ಕೆ ಇದೆ, ಇಲ್ಲವೆಂದಲ್ಲ. ಇತ್ತೀಚಿನವರೆಗೆ ಮಾಡಿದ್ದಾರೆ. ಇನ್ನು ಮುಂದೆಯೂ ಕೂಡ ನಮ್ಮ ಪ್ರತಿಷ್ಠೆಯ ಕಣದಲ್ಲಿ , ಸಾರ್ವಜನಿಕ ಪ್ರತಿಷ್ಠೆ, ಕರ್ನಾಟಕ ರಾಜ್ಯದ ಪ್ರತಿಷ್ಠೆಯ ಒಂದು ಪರಕಾಷ್ಟತೆಯನ್ನು ಬಲಿ ಕೊಡತಕ್ಕಂಥ ಕೆಲಸ ಮಾಡುವುದಿಲ್ಲ, ರಾಜ್ಯದ ಹಿತಾಸಕ್ತಿಗೆ ನಾವು ಯಾವಾಗಲೂ ಪ್ರಥಮ ಆದ್ಯತೆಯನ್ನು ಕೊಟ್ಟು ನಾವು ನಮ್ಮ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡುತ್ತೇವೆಂಬುದನ್ನು ಇವತ್ತು ಪ್ರಾಮಾಣಿಕವಾಗಿ ಹೇಳದಿದ್ದರೆ ನಮ್ಮ ಪ್ರಾಮಾಣಿಕತೆಯ ಮೇಲೆ ಅಂದರೆ ಆ ಕಡೆಯವರು ಮತ್ತು ಈ ಕಡೆಯವರದು ಕೂಡ ಇದ್ದು ಆ ಪ್ರಾಮಾಣಿಕತೆಯಮೇಲೆ ಇವತ್ತು ಜನತೆ ಪ್ರಶ್ನೆ ಮಾಡತಕ್ಕಂಥ ಕಾಲ ಬರಬಹುದು. ಏತಕ್ಕೆಂದರೆ ಇದು ಯಾರ ಹಣ? ಇಷ್ಟೆಲ್ಲ ಅಸೆಂಬ್ಲಿಯಲ್ಲಿ ಖರ್ಚಾಗುತ್ತದೆಂದು ನಾವು ಲೆಕ್ಕ ಹಾಕಿದ್ದೇವೆ. ಒಂದೊಂದು ನಿಮಿಷಕ್ಕೂ ಇಂತಿಷ್ಟು ಹಣ ಖರ್ಚಾಗುತ್ತದೆಂದು ನಾವು ಲೆಕ್ಕ ಹಾಕಿದ್ದೇವೆ. ಎಲೆಕ್ಷಾಗಿ ಬಂದಂಥ ಪ್ರತಿನಿಧಿಗಳು ವಿಧಾನ ಸಭೆಯಲ್ಲಿ ನಮ್ಮ ಒಂದು ಪ್ರತಿಷ್ಠೆಗಾಗಿ ಸಾರ್ವಜನಿಕ ಹಣ ಪೋಲು ಮಾಡುತ್ತಾರೆಂಬ ಈ ಒಂದು ಅಪವಾದ ನಮ್ಮ ತಲೆಯಮೇಲೆ ಬರುತ್ತದೆ. ಆ ಅಪವಾದ ನಮ್ಮ ತಲೆಯಮೇಲೆ ಬಾರದಹಾಗೆ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಏನಾದರೂ ಮಧ್ಯೆ ಆತಂಕ ಬಂದರೆ ಅದನ್ನು ಪರಸ್ಪರ ಕುಳಿತು ಮಾತುಕತೆ ನಡೆಸಿ ಪರಿಹಾರ ಮಾಡತಕ್ಕಂಥ ದಾರಿಯನ್ನು ನಾವು ಹುಡುಕಬೇಕೆ ಹೊರತು ಆ ದಾರಿಯನ್ನು ಪೂರ್ತಿಯಾಗಿ ಬ್ಲಾಕ್ ಮಾಡತಕ್ಕಂಥ ಒಂದು ವ್ಯವಸ್ಥೆಯಾಗಬಾರದು. ಈ ಪ್ರಜಾಪ್ರಭುತ್ವದಲ್ಲಿ ಮಾತುಕತೆಯೇ ಹೊರತು ಆಲ್ಟರ್‌ನೇಟೀವ್ ಇಲ್ಲ, ಯಾವುದೇ ಅನಾರ್ಕಿ ಇಲ್ಲ, ಅನಾರ್ಕಿ ಎಂದರೆ ಪ್ರತಿಯೊಬ್ಬರು ಕೂಡ ಅವರವರ ದಾರಿಯನ್ನು ಹಿಡಿದುಕೊಂಡು ಹೋಗತಕ್ಕಂಥದ್ದು. ಪ್ರಜಾಪ್ರಭುತ್ವ ಎಂದರೆ ಎಲ್ಲರೂ ಒಪ್ಪುವಂಥ ಕೆಲವು ದಾರಿಗಳು ಇದೆ. ಆ ದಾರಿಯನ್ನು ನಾವು ಬಿಟ್ಟು ಮತ್ತೊಂದು ದಾರಿಯನ್ನು ಹಿಡಿಯಲಿಕ್ಕೆ ಆಗುವುದಿಲ್ಲ. ಆದ್ದರಿಂದ ಸನ್ಮಾನ್ಯ ಉಪಾಧ್ಯಕ್ಷಣೆಯವರೇ we don't want to bulldoze the discussion ನಮ್ಮ ಪ್ರತಿನಿಧಿಗಳು ಹೇಳಬೇಕು. ಇವರೂ ಕೂಡ ಜನತೆಯ ಪ್ರತಿನಿಧಿಗಳೇ. ನಮ್ಮ ರೂಲಿಂಗ್ ಪಾರ್ಟಿಯವರು ನಮಗೆ ಪ್ರಶ್ನೆ ಮಾಡುತ್ತಿದ್ದಾರೆ. ನಮಗೆ ಅಂದರೆ ಸರ್ಕಾರಕ್ಕೆ ಪ್ರಶ್ನೆ ಮಾಡುತ್ತಿದ್ದಾರೆ. ನೀವು ಪ್ರತಿನಿಧಿಗಳಾಗಿ ಹೋಗಿ 2–3 ದಿವಸಗಳಿಂದ ನಿಮ್ಮ

ಜವಾಬ್ದಾರಿಯನ್ನು ನಿರ್ವಹಿಸದೆ ಲೆಜಿಸ್ಲೇಟರ್ ಹೋಮ್‌ಗೆ ಹೋಗಿ ಆರಾಮವಾಗಿ ಕುಳಿತುಕೊಂಡಿರುತ್ತಿರೆಂದು ಕೇಳುತ್ತಾರೆ. ನಿಮ್ಮನ್ನು ಕಳುಹಿಸಿರುವುದು ಕರ್ತವ್ಯ ನಿರ್ವಹಿಸಲೆಂದು ಎಂದು ಹೇಳತಕ್ಕಂಥ ಪ್ರಶ್ನೆ ಎತ್ತಿದಾಗ ಉತ್ತರ ಕೊಡಬೇಕಾದಂಥ ಜವಾಬ್ದಾರಿ ಇರುತ್ತದೆ. ತಾವು ಕೂಡ ಈ ಪ್ರಶ್ನೆಗೆ ಉತ್ತರ ಹೇಳಬೇಕಾಗುತ್ತದೆ. ಆದ್ದರಿಂದ ಇನ್ನು ಮುಂದೆ ಇಂಥ ಒಂದು ಭಾವನೆಗಳಿಗೆ ನಮ್ಮ ಶಾಸಕರಾಗಿರತಕ್ಕಂಥವರ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡತಕ್ಕಂಥ ಆ ಒಂದು ಹಂತಕ್ಕೆ ಅಂದರೆ ಜನತೆಯ ಆಕ್ರೋಶಕ್ಕೆ ಶಾಸಕರು ಬಲಿಯಾಗತಕ್ಕಂಥ ವ್ಯವಸ್ಥೆಗೆ ನಾವು ಕೊಂಡೊಯ್ಯದೆ ಇದನ್ನು ಆದಷ್ಟು ಜಾಗ್ರತೆ ಪರಿಹಾರ ಮಾಡಲು ನಾವು ಪ್ರಯತ್ನ ಮಾಡಬೇಕು. ಇದರಲ್ಲಿ ನಮಗೆ ಮುಕ್ತ ಮನಸ್ಸು ಇದೆ. ಹಾಗೆಯೇ ನಿಮಗೂ ಕೂಡ ಆ ಒಂದು ಮುಕ್ತ ಮನಸ್ಸು ಇದ್ದಾಗ ಮಾತ್ರ ಸಮಸ್ಯೆ ಪರಿಹಾರವಾಗುತ್ತದೆ. ಒಂದು ಕಡೆ ಮುಕ್ತ ಮನಸ್ಸು ಎಂದರೆ it will be one way traffic. I think there should be two ways traffic. We have opened our traffic. Road is clear. We have already given the green signal. We are ready for talks and discussions and whatever decision comes out. ಬೇಕಾದರೆ ಸಭಾಧ್ಯಕ್ಷರಿಗೆ ಬಿಟ್ಟುಬಿಡುತ್ತೇವೆ. ತಾವು ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ನಾವು ಕೂಡ ಹೇಳಲಿಕ್ಕೆ ತಯಾರಿದ್ದೇವೆ. ವಿರೋಧಪಕ್ಷದವರು ಕೂಡ ಅದನ್ನು ಹೇಳಲಿ ನಮಗೇನೂ ಇಲ್ಲ ಸನ್ಮಾನ್ಯ ಸಭಾಧ್ಯಕ್ಷರೆಯವರೇ ನಮ್ಮದೇನೂ ಅಡ್ಡಿಯಿಲ್ಲ ಬೇಕಾದರೆ ಚರ್ಚೆ ಮಾಡುವುದಕ್ಕೆ ನಾಳೆಯೇ ಬರಲಿ. ಬಹುಶಃ ಇದು ನಾಳೆಗೆ ಕೊನೆಯಾದರೆ ಬಹಳ ಒಳ್ಳೆಯದೆಂದು ನನಗನಿಸುತ್ತದೆ. ನಾಳೆಗೆ ಕೊನೆಯಾಗಬೇಕು ಅಂದರೆ ನಾಳೆಯ ತನಕ ಕಾಯುವುದು. ಕಾಯುವುದ ಅಂದರೆ ಶಾಸಕರಲ್ಲಿ ಕಾಯುವುದು. ಜನತೆ ಕಾಯುತ್ತಿದ್ದಾರೆ. ಜನತೆ ಹೆಚ್ಚು ಹೊತ್ತು ಕಾಯುವುದಕ್ಕೆ ಅವರ ಸಂಯಮದ ಪ್ರಶ್ನೆ ಬರುತ್ತದೆ. ನಮ್ಮ ಸಂಯಮದ ಪ್ರಶ್ನೆ ಅಲ್ಲ; ಜನತೆ ಸಂಯಮದಿಂದ ಕಾಯಬೇಕಾಗುತ್ತದೆ. ಆ ದೃಷ್ಟಿಯಿಂದ ನಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕಂಥ ಕೆಲಸವನ್ನು ನಾವು ಖಂಡಿತವಾಗಿಯೂ ಮಾಡೋಣ. ಇವತ್ತು ಅಡ್ಜರ್ನ್ ಮಾಡಿ. ನಾಳೆ ಮಾತ್ರ ಈ ಸಾಮಾನ್ಯ ಬಜೆಟ್ ಮೇಲೆ, ಆಯವ್ಯಯದ ಮೇಲೆ ಚರ್ಚೆಯು ನಡೆಯಬೇಕು. ಅದಕ್ಕೆ ಸ್ಪಂದನ ಎಲ್ಲರೂ ಕೂಡ ಕೊಡಬೇಕು. ವಿರೋಧ ಪಕ್ಷದ ನಾಯಕರೂ ಕೂಡ ಈ ಬಗ್ಗೆ ಸ್ಪಂದಿಸುತ್ತಾರೆಂದು ಭಾವಿಸುತ್ತೇನೆ. ಜನತೆಯ ಆಶೋತ್ತರಗಳಿಗೆ ಎಲ್ಲರೂ ಕೂಡ ಸ್ಪಂದಿಸಬೇಕು. ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಗೆ ನಾವು ಎಲ್ಲರೂ ತಲೆಬಾಗಬೇಕಾಗುತ್ತದೆ. ಆದ್ದರಿಂದ ಇವತ್ತು ಬೇಕಾದರೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಸಭೆಯನ್ನು ನಾಳೆಗೆ ಮುಂದುವರಿಸಿ.

ಉಪಾಧ್ಯಕ್ಷಿಣಿಯವರು :- ಈಗ ವಿರೋಧಪಕ್ಷದ ಕಡೆಯಿಂದ ಮುಸ್ಲಿಮ್ ಲೀಗ್ ಸದಸ್ಯರಾದ ಶ್ರೀ ಖಮರುಲ್ ಇಸ್ಲಾಮ್‌ರವರು ಮತ್ತು ಸರ್ಕಾರದ ಕಡೆಯಿಂದ ಸಂಸದೀಯ ಸಚಿವರಾದ ಶ್ರೀ ವೀರಪ್ಪಮೊಯಿಲಿಯವರು, ವಿರೋಧ ಪಕ್ಷದವರು ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ ಮಾಡಿರುತ್ತಾರೆ. ವಿರೋಧ ಪಕ್ಷದವರು ವಿಧಾನಸಭೆಯ ಕಾರ್ಯಕಲಾಪಗಳಿಗೆ ಈಗಾಗಲೇ 4 ದಿನಗಳಿಂದ ಭಾಗವಹಿಸದೇ ಇರುವುದು ಈ ಸದನಕ್ಕೆ ಶೋಭೆ ತರುವಂಥಾದ್ದು ಅಲ್ಲ. ಯಾವುದೇ ಒಪ್ಪತಪ್ಪುಗಳು ಇದ್ದರೂ ವಿರೋಧ ಪಕ್ಷದವರು ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಚರ್ಚಿಸಿ ಇತ್ಯರ್ಥಪಡಿಸಿಕೊಂಡು ಸದನದ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು ಎಂದು ನಾನು ಪುನಃ ಈ ಸದನದ ಪರವಾಗಿ ಅವರನ್ನು ಕೋರುತ್ತೇನೆ.

ಈಗ ಸಭೆಯು ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11–00 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು 2.16ಕ್ಕೆ ಮುಕ್ತಾಯವಾಗಿ ಪುನಃ 11ನೇ ಮಾರ್ಚ್ 1992ರ ಬುಧುವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಕರ್ನಾಟಕ ವಿಧಾನ ಸಭೆ

ಬುಧವಾರ 11ನೇ ಮಾರ್ಚ್ 1992 ಫಾಲ್ಗುಣ 1913 ಶಕ
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು.]

(ಚುಕ್ಕಿ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಕ.ರಾ.ರ.ಸಾ. ಸಂಸ್ಥೆಯ ನಿರ್ವಾಹಕರುಗಳ ಸಂಖ್ಯಾ ಬಲ

1486. ಶ್ರೀ ಚಿಕ್ಕಮಾದು (ಹುಣಸೂರು) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಮಂಜೂರಾಗಿರುವ ನಿರ್ವಾಹಕರುಗಳ ಹುದ್ದೆ;
ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ನಿರ್ವಾಹಕರುಗಳ ಸಂಖ್ಯೆ ;
ಇ) ಒಟ್ಟು ಎಷ್ಟು ಜನ ವರಮಾನವನ್ನು ಕದಿಯುವುದರಲ್ಲಿ ಮತ್ತು ದುರುಪಯೋಗಗಳಲ್ಲಿ ಒಳಗಾಗಿರುತ್ತಾರೆ ಅವುಗಳಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿರುತ್ತದೆ ಮತ್ತು ಎಷ್ಟು ಬಾಕಿ ಉಳಿದಿರುತ್ತದೆ;
ಈ) ಉಳಿದಿರುವ ಪ್ರಕರಣಗಳನ್ನು ಇತ್ಯರ್ಥ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಆಜೇಜ್ ಸೇಠ್ (ಸಾರಿಗೆ ಸಚಿವರು) –

ಅ) 17,921
ಆ) 31.12.91 ಕ್ಕೆ 16,982
ಇ) 11,192 ನಿರ್ವಾಹಕರು ವರಮಾನವನ್ನು ಲಪಟಾಯಿಸುವುದು ಮತ್ತು ದುರುಪಯೋಗಗಳಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದ 6,920 ಪ್ರಕರಣಗಳು ಇತ್ಯರ್ಥವಾಗಿರುತ್ತವೆ. ಇನ್ನು 4272 ಪ್ರಕರಣಗಳು ಬಾಕಿ ಉಳಿದಿರುತ್ತವೆ.
ಈ) ಗಂಭೀರವಾದ ಪ್ರಕರಣಗಳ ವಿಚಾರಣೆಯನ್ನು ತ್ವರಿತವಾಗಿ ಇತ್ಯರ್ಥ ಮಾಡಲು ನಿವೃತ್ತ ನ್ಯಾಯಾಧೀಶರುಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಘಟಕದ ವ್ಯವಸ್ಥಾಪಕರುಗಳಿಗೆ ಉಳಿದ ಪ್ರಕರಣಗಳನ್ನು ಇತ್ಯರ್ಥಮಾಡಲು ಹೆಚ್ಚಿನ ಶಿಕ್ಷಣಾತ್ಮಕ ಅಧಿಕಾರವನ್ನು ಕೊಡಲಾಗಿದೆ. ಪ್ರಕರಣಗಳನ್ನು ಪರಿಶೀಲಿಸುವಂತೆ ಎಲ್ಲಾ ವಿಭಾಗ ಅಧಿಕಾರಿಗಳಿಗೆ ಮತ್ತು ಶಿಕ್ಷಣತ್ಮಕ ಅಧಿಕಾರಿಗಳಿಗೂ ಸುತ್ತೋಲೆಯನ್ನು ಕಳುಹಿಸಿ ಆ ಪ್ರಕರಣಗಳು ಉಗ್ರವಾದ ಶಿಕ್ಷೆಗೆ ಅರ್ಹವಲ್ಲವೆಂದು ತೀರ್ಮಾನಕ್ಕೆ ಬಂದರೆ ಅಂತಹುಗಳನ್ನು ಲಘು ಶಿಕ್ಷೆ ವಿಧಿಸಿ ತೀರ್ಮಾನಿಸಲು ಆದೇಶ ನೀಡಲಾಗಿದೆ.

ಶ್ರೀ ಎಸ್. ಚಿಕ್ಕಮಾದು :- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ಮಂಜೂರಾಗಿರುವ ನಿರ್ವಾಹಕರುಗಳ ಹುದ್ದೆ ಎಷ್ಟು ಎಂದು ಕೇಳಿದ್ದೆ; ಅದಕ್ಕೆ 17,921 ಎಂದು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವವರು 16,982 ಮಂದಿಯಾದರೆ ಉಳಿದ 939 ನಿರ್ವಾಹಕರ ಹುದ್ದೆಗಳನ್ನು ಯಾವಾಗ ತುಂಬಲಾಗುತ್ತದೆ? ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಅಜೇಜ್ ಸೇಠ್ :- ಅದಕ್ಕೆ ರೆಕ್ರೂಟ್ ಮೆಂಟ್ ರೂಲ್ಸ್ ಅಮೆಂಡ್ ಆಗಬೇಕಾಗಿತ್ತು. ಅದನ್ನು ಈಗತಾನೇ ಅಮೆಂಡ್ ಮಾಡಿದ್ದೇವೆ. ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಮೊದಲು ಇಬ್ಬರು ನಾನ್ ಅಫಿಷಿಯಲ್ ಮೆಂಬರ್ಸ್ ಹಾಕಬೇಕೆಂದು ಇತ್ತು. ಈಗ 4 ಜನರನ್ನು ಹಾಕಬೇಕೆಂದು ಇದೆ. ಇದರ ಪ್ರಕಾರ ಅಮೆಂಡ್ ಮೆಂಟ್ ಆಗಬೇಕಿತ್ತು, ಅದನ್ನು ಮಾಡಿದ್ದೇವೆ. ಇನ್ನು 15 ದಿನಗಳಲ್ಲಿ ಕಮಿಟಿ ಮಾಡಿ ರೆಕ್ರೂಟ್ ಮೆಂಟ್ ಶುರು ಮಾಡುತ್ತೇವೆ.

ಶ್ರೀ ಎಸ್. ಚಿಕ್ಕಮಾದು:- ಈ ನಿರ್ವಾಹಕರಲ್ಲಿ ಕೆಲವರು ವರಮಾನವನ್ನು ಲಪಟಾಯಿಸಿ ದುರುಪಯೋಗ ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರಲ್ಲಾ, ಅಂಥ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಕೇಸುಗಳು ಇತ್ಯರ್ಥವಾಗಿವೆ? ಈ ವಿಷಯದಲ್ಲಿ ನಾನು ತಿಳಿದ ಹಾಗೆ ಯಾವುದೇ ನಿರ್ವಾಹಕರ ಮೇಲೆ ಕ್ರಮ ತೆಗೆದುಕೊಂಡು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಿದರೆ ತಕ್ಷಣ ಯೂನಿಯನ್‌ನವರು ಪ್ರತಿಭಟಿಸಿ ಯಾವುದೇ ಕ್ರಮ ತೆಗೆದುಕೊಳ್ಳಕೂಡದೆಂದು ಹೇಳಿ ಬಸ್ಸುಗಳನ್ನು ನಿಲ್ಲಿಸತಕ್ಕದ್ದು ನಡೆಯುತ್ತಿದೆ. ಇಂಥ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿವೆಯೆ?

ಶ್ರೀ ಅಜೇಜ್ ಸೇಠ್ :- ಅಂಥವು ಬಂದಿವೆ. ಅದರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಯಾರು ಕಾನೂನುಬಾಹಿರವಾಗಿ ಕೆಲಸ ಮಾಡುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಯೂನಿಯನ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಬಿ.ಹೆಚ್. ಯಂಕಾನಾಯಕ್ :- ದಾವಣಗೆರೆ, ಬಳ್ಳಾರಿ ಡಿಪೋಗಳಲ್ಲಿ ಡ್ರೈವರ್ ಕಂಡಕ್ಟರ್ ಇಲ್ಲದೆ ಬಸ್ಸುಗಳನ್ನು ಓಡಿಸುತ್ತಿಲ್ಲ ಹೀಗಾಗಿ ಹಳ್ಳಿಗಳಿಗೆ ನಾವು ಹೋದರೆ ಜನರು ನಮ್ಮ ಮೇಲೆ ಜಗಳ ಮಾಡುತ್ತಾರೆ. ನಮಗೆ ಸರ್ಕಾರಿ ಬಸ್ಸುಗಳು ಇಲ್ಲ, ಖಾಸಗಿ ಬಸ್‌ಗಳನ್ನಾದರೂ ಕೊಡಿ ಎಂದು ಹೇಳುತ್ತಾರೆ. ಕಂಡಕ್ಟರ್ ಇಂಟರ್‌ವ್ಯೂ ಕರೆಯುವುದು ಯಾವಾಗ ಮತ್ತು ಅವರನ್ನು ಆ ಹುದ್ದೆಗಳಿಗೆ ತುಂಬುವುದು ಯಾವಾಗ? ದಾವಣಗೆರೆ ಡಿಪೋದಲ್ಲಿ 30-40 ಬಸ್ಸುಗಳನ್ನು ನಿಲ್ಲಿಸಿದ್ದಾರೆ. ಹಿಂದೆ ಇದ್ದ ಡಿ.ಸಿ. ಯವರು 40 ಜನರನ್ನು ಸಸ್ಪೆಂಡ್ ಮಾಡಿದ್ದರು; ಹೀಗಾಗಿ 40 ಬಸ್ಸುಗಳು ಮೂಲೆಯಲ್ಲಿ ಬಿದ್ದಿವೆ. ಈ ಪ್ರಕಾರ ಇರುವಾಗ ಇನ್ನು ಇಂಟರ್‌ವ್ಯೂ ಕರೆದು ಕಂಡೆಕ್ಟರನ್ನು ನೇಮಕ ಮಾಡಮವರೆಗೆ ಬಹಳ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಡೈಲಿವೇಜಸ್‌ನಲ್ಲಿ ಇವರುಗಳನ್ನು ತೆಗೆದುಕೊಂಡು ಆದಷ್ಟು ಬೇಗ ಹಳ್ಳಿಗಳ ಕಡೆ ಬಸ್ಸುಗಳ ಸೌಕರ್ಯ ಮಾಡಿಕೊಡಬೇಕು. ನವೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಮಾನ್ಯ ಸಚಿವರನ್ನು ಕೇಳಿದಾಗ ಇನ್ನು ಒಂದು ವಾರದಲ್ಲಿ ಈ ಪ್ರಾಬ್ಲಂ ಸಾಲ್ವ್ ಮಾಡುತ್ತೇವೆಂದು ಹೇಳಿದರು. 3 ತಿಂಗಳಾದರೂ ಪ್ರಾಬ್ಲಂ ಸಾಲ್ವ್ ಆಗಲಿಲ್ಲ. ನೀವು ಸರಿಯಾಗಿ ನಡೆಸುವುದಾದರೆ ನಡೆಸಿ, ಇಲ್ಲದಿದ್ದರೆ ಖಾಸಗೀಯವರಿಗೆ ಕೊಟ್ಟು ಹಳ್ಳಿಯ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಜೇಜ್ ಸೇಠ್ :- ನಿಜ ಈ ರೆಕ್ರೂಟ್‌ಮೆಂಟ್ ನಾನಾ ಕಾರಣಗಳಿಂದ 3ನೇ ಬಾರಿಗೆ ಸ್ಟೇ ಆಗಿದೆ. ಒಂದು ಸಾರಿ ರೆಕ್ರೂಟ್‌ಮೆಂಟ್ ಮಾಡುವಾಗ ನೇರವಾಗಿ ಉದ್ಯೋಗ ವಿನಿಮಯ ಕೇಂದ್ರದಿಂದ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದಾಗ ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಕಾರಣ ಉದ್ಯೋಗ ವಿನಿಮಯ ಕೇಂದ್ರದಿಂದ ತೆಗೆದುಕೊಂಡರೆ ಹಳ್ಳಿಯವರು ರೂರಲ್ ಏರಿಯಾದವರು ಈ ಕೆಲಸಕ್ಕೆ ಸೇರುವುದು ಕಷ್ಟವಾಗುತ್ತದೆ. ಅದಕ್ಕೋಸ್ಕರ ಕಮಿಟಿ ಮಾಡಿ ಎಂದರು. ಕಮಿಟಿ ಮಾಡಿ ರೂಲ್ಸ್ ಅಮೆಂಡ್ ಮಾಡುವಾಗ ಇಬ್ಬರು ಸದಸ್ಯರನ್ನು ಹಾಕಿರುವುದು ಸರಿಯಲ್ಲ, 4 ಜನರು ಇರಬೇಕು; ಅದರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್, ಮೈನಾರಿಟಿ, ಷೆಡ್ಯೂಲ್ಡ್ ಕ್ಯಾಸ್ಟ್ ಫಾರ್‌ವರ್ಡ್ ಕಮ್ಯೂನಿಟಿಯವರು ಇರಬೇಕೆಂದು ಹೇಳಿದರು. ಹೀಗಾಗಿ 3ನೇ ಬಾರಿ ರೂಲ್ ಅಮೆಂಡ್ ಆಯಿತು. ಇಂಟರ್‌ವ್ಯೂ ಮಾಡಬೇಕಾದರೆ ರೂರಲ್ ಏರಿಯಾದವರಿಗೆ 15 ಪರ್ಸೆಂಟ್ ವೆಯಿಟೇಜ್ ಕೊಡಬೇಕೆಂದು ತೀರ್ಮಾನವಾಯಿತು. ಕಮಿಟಿ ಸದಸ್ಯರಿಗೆ 25 ಪರ್ಸೆಂಟ್ ಮಾರ್ಕ್ಸ್ ಏನು ಇಡಲಾಗಿತ್ತು. ಅದನ್ನು ನಾವು ತೆಗೆದುಹಾಕಿದ್ದೇವೆ. ನಮ್ಮ ಕಂಡಕ್ಟರ್ ಬೆಲೆ ಬಹಳ ಜಾಸ್ತಿಯಾಗಿದೆ; ಆದ್ದರಿಂದ ಬರೀ ಮೆರಿಟ್ ಮೇಲೆ, ಮಾರ್ಕ್ಸ್ ಮೇಲೆ ತೆಗೆದುಕೊಳ್ಳಬೇಕೆಂದು ಮಾಡಿ ಸದಸ್ಯರಿಗೆ ಏನು 25 ಮಾರ್ಕ್ಸ್ ಕೊಡುವ ಅಧಿಕಾರ ಇತ್ತು ಅದನ್ನು ವಿತ್‌ಡ್ರಾ ಮಾಡಿದ್ದೇವೆ. So the Committee

will have to see whether justice has been done and that 15% weightage is given to the rural area persons or not and ultimately honest and good persons are selected. ಮತ್ತೆ ಈವರೆಗೆ ಏನಿತ್ತು ಎಂದರೆ, ಸೆಲೆಕ್ಷನ್ ಆದವರಿಗೆ ಕೆಲಸ ಕೊಡಲಾಗುತ್ತಿತ್ತು. ಆದರೆ ಅವರಲ್ಲಿ ಬ್ಯಾಡ್ ಕ್ಯಾರೆಕ್ಟರ್ ದೂರುಗಳು ಬಂದಿವೆ. This time we have decided that all those who will be selected are sent for Police verification for their antecedents. If anybody is found with bad antecedents, even though he is selected, he will not be taken to KSRTC service. ಇದರಂತೆ ಕೆಲವು ಕಡೆ ಆಗಿದೆ. To overcome these difficulties, I have asked them to appoint temporary Drivers and Conductors. I think in Davanagere also. they must have been recruited. Even though, this question is unconnected to satisfy the Hon'ble Member, I will find out whether they have done so, if not I will see that it is done.

ಶ್ರೀ ಬಿ.ಹೆಚ್. ಯಂಕಾನಾಯಕ್ :- ಕೆಲವು ಕಂಡಕ್ಟರ್‌ಗಳ ಮೇಲೆ ಕೇಸ್ ಹಾಕಿದ್ದೀರಿ. ಆ ಕೇಸು ಇತ್ಯರ್ಥವಾಗುವುದು ಯಾವಾಗ? ಕೆಲವೊಮ್ಮೆ 6 ತಿಂಗಳವರೆಗೆ ಕೇಸು ನಡೆಯುತ್ತಿರುತ್ತದೆ. ಕಂಡಕ್ಟರ್ ಫಾಲ್ಟ್ ಏನಾದರೂ ಇದ್ದರೆ ಅಂಥವರನ್ನು ಡಿಸ್‌ಮಿಸ್ ಮಾಡಿ. ಫಾಲ್ಟ್ ಇಲ್ಲದವರನ್ನು ಆದಷ್ಟು ಜಾಗ್ರತೆ ಪುನರ್ ನೇಮಕ ಮಾಡಿ. ನೀವು ಕಮಿಟಿ ಮಾಡಿ ಕಂಡಕ್ಟರ್ಸ್ ಕರೆಯಿಸಿ ಇಂಟರ್‌ವ್ಯೂ ಆಗುವವರೆಗೂ ಜನರ ಗತಿ ಏನು? ಹಳ್ಳಿಗಳಲ್ಲಿ ಓಡಾಡುವುದಕ್ಕೆ ಬಸ್ಸಿನ ವ್ಯವಸ್ಥೆ ಏನು? ಅದರ ಬಗ್ಗೆ ಖಾಸಗಿಯವರಿಂದಾಗಲೀ ಅಥವಾ ನಿಮ್ಮ ಡಿಪಾರ್ಟ್‌ಮೆಂಟಿನಿಂದ ಆಗಲೀ, ಡೇಲಿವೇಜಸ್‌ನಲ್ಲಾಗಲೀ ಮತ್ತೆ ಯಾರನ್ನಾದರೂ ನೇಮಿಸಿ ವೆಹಿಕಲ್ಸ್ ಓಡಾಡುವ ವ್ಯವಸ್ಥೆ ಮಾಡುತ್ತೀರಾ?' ಅದರ ಬಗ್ಗೆ ದಯಮಾಡಿ ಕ್ರಮ ತೆಗೆದುಕೊಳ್ಳಿ. ತಾವು ಕಂಡಕ್ಟರ್ ಇಂಟರ್‌ವ್ಯೂ ಕರೆಯುವುದು, ಸ್ಟೇ ತರುವುದು ಮಾಮೂಲು ಅದು. ಎರಡು ವರ್ಷದ ಮೇಲೆ ಎರಡು ತಿಂಗಳೋ ಮೂರು ತಿಂಗಳೋ ಆಯಿತು. ಈ ರಾಜಕೀಯ ಬಂದು ನಮ್ಮ ಮಂತ್ರಿಮಂಡಲ ಬಂದು ತಾವು ಮಂತ್ರಿಯಾಗಿ ಯಾವಾಗ ಕೇಳಿದರೂ ತಮಗೆ ಆರ್ಥಮ್ಯ ಇಲ್ಲ, ಆರೋಗ್ಯ ಇಲ್ಲ ಎಂದು ಹೇಳುತ್ತಾರೆ. ಎಷ್ಟು ಬಡ್ಡೊಂಡರೂ ನಮ್ಮ ಪ್ರಾಬ್ಲಂ ಸಾಲ್ವ್ಡ್ ಆಗುವುದಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ಜನರು ಏನು ಅನ್ನುತ್ತಿದ್ದಾರೆ ಎಂಬುದು ನಮಗೆ ಗೊತ್ತು. ನಿವೇನೋ ಇಲ್ಲಿ ರಾಜಧಾನಿಯಲ್ಲಿರುತ್ತೀರಿ, ಮಂತ್ರಿಗಳಾಗಿರುತ್ತೀರಿ, ಹಳ್ಳಿ ಜನ ಬಂದರೆ ನಿಮ್ಮ ಇಂಟರ್‌ವ್ಯೂ ಕೂಡ ಸಿಗುವುದಿಲ್ಲ. ಆದರೆ ನಮ್ಮ ಪರಿಸ್ಥಿತಿ ಏನೆಂದರೆ, ತಾವೆಲ್ಲಾ ಶಾಸಕರಾಗಿದ್ದೀರಿ, ತಮ್ಮ ಸರ್ಕಾರ ಇದೆ, ತಮ್ಮ ಸರ್ಕಾರ ಇದ್ದೂ ಬಸ್ಸಿನ ವ್ಯವಸ್ಥೆ ಹೀಗಿದೆ ಎಂದು ಜನ ನಮಗೆ ವಿಪರೀತ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಕಂಡಕ್ಟರನ್ನು ಸೆಲೆಕ್ಟ್ ಮಾಡಿ. ಅಥವಾ ಖಾಸಗಿಯವರಿಗೆ ಪರವಾನಗಿ ಕೊಡಿ.

ಶ್ರೀ ಆಜೀಜ್ ಸೇಠ :- ನಿಜ ಅದು. ನಾನು ಹೇಳುವುದಕ್ಕೆ ಹೋದರೆ ಸದ್ಯಕ್ಕೆ ಆಶ್ಚರ್ಯ ಆಗಬಹುದು. ಒಂದು ಬಾರಿ ಇದೇ ಸದನದಲ್ಲಿ ಒಂದು ಪ್ರಶ್ನೆ ಬಂದಿತ್ತು. ಅದರಲ್ಲಿ How many employees are there in KSRTC? The answer was 56,000. How many cases, default cases are there against those employees ಎಂದು ಇತ್ತು. The answer was 56,000 cases. I was surprised myself. I have sent back the question to the Department to correct the question. Then, I got the answer as there are 56,000 employees and their cases against 19000 employees. You can just imagine Madam Speaker, that after my intervention, we have expedited and brought down to 4272 cases now. And to expedite this 4272 cases, we have said a retired Judge would be appointed as Enquiry Officer in respect of serious acts of mis-conduct and Depot Managers are vested with more disciplinary powers to

expedite the disciplinary proceedings and dispose off the same. Circular instructions have been issued to all the Divisional Controllers and disciplinary authorities to review all pending cases and dispose off them by imposing minor penalties if the case do not warrant imposition of major penalties like dismissal. These have been come down very effectively. ಮಾನ್ಯ ಸದಸ್ಯರಿಗೆ ಇಷ್ಟು ಭರವಸೆ ಕೊಡಬಹುದು. ಈಗ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಏನು ತೊಂದರೆಗಳು, ಅಡಚಣೆಗಳು ಬಂದಿವೆ, ಇದೆಲ್ಲಾ ಬದಲಾವಣೆಯಾಗುತ್ತಿದೆ. ಇನ್ನು ಮುಂದೆ ಆ ರೀತಿ ಆಗುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್ :- ಎಷ್ಟು ದಿವಸದಲ್ಲಿ ಬದಲಾವಣೆ ಮಾಡಿ ಸರಿಯಾಗಿ ಬಸ್ ಓಡಿಸುವ ವ್ಯವಸ್ಥೆ ಮಾಡುತ್ತೀರಿ? ಇಲ್ಲವೇ ಪ್ರೈವೇಟ್‌ನವರಿಗೆ ಕೊಟ್ಟುಬಿಡಿ. ಎಲ್ಲಾ ಕಂಡಕ್ಟರ್ಸ್ ಪೋಸ್ಟ್ ಆಗುವವರೆಗೆ ಖಾಸಗಿಯವರಿಗೆ ಕೊಡಿ ಅಥವಾ ಯಾರಿಗಾದರೂ ಟೆಂಪೊರರಿಯಲ್ಲಿ ಕೊಡಿ. ಅಲ್ಲಿಯವರಿಗೆ ಗತಿ ಏನು?

ಶ್ರೀ ಎಜೀಜ್ ಸೇಠ್ :- ಪ್ರೈವೇಟೈಸೇಷನ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಕೊಟ್ಟುಬಿಡಿ ಎಂದರೆ ಆದಾಗುವುದಿಲ್ಲ, ಅದಕ್ಕೂ ನಿಯಮಗಳು ಅದು ಇದು ಯೋಚನೆ ಮಾಡಬೇಕಾಗುತ್ತದೆ. It will also take sometime. I have also have a mind to privatise certain sections of the KSRTC.

ಮುಂಡರಗಿ ವಿದ್ಯುತ್ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ

1580. ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) :– ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮುಂಡರಗಿ ತಾಲ್ಲೂಕಿನಲ್ಲಿ ವಿದ್ಯುತ್ ಉಪ ವಿಭಾಗದ ಕಛೇರಿ ಇದ್ದು ಅಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರವು ಆ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಇ) ಮುಂಡರಗಿ ಮತ್ತು ಗದಗ ತಾಲ್ಲೂಕುಗಳಲ್ಲಿ ರೈತರ ಪಂಪುಸೆಟ್ಟಿಗೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಳಂಬವಾಗಲು ಕಾರಣವೇನು;

ಈ) ಗದಗ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ ರೈತರ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ, ಇನ್ನು ಎಷ್ಟು ದಿವಸಗಳಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗುತ್ತದೆ;

ಉ) ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜು ಮಾಡಲಿಕ್ಕೆ ಉಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) –

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

ಇ) ಈ ಸಾಲಿನಲ್ಲಿ (1991–92) ಮುಂಡರಗಿ ಮತ್ತು ಗದಗ ತಾಲ್ಲೂಕುಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಿರುವ ಗುರಿ ಅನುಕ್ರಮವಾಗಿ 110 ಮತ್ತು 75. ಫೆಬ್ರುವರಿ 92ರ ಅಂತ್ಯದವರೆಗೆ ಮುಂಡರಗಿ ತಾಲ್ಲೂಕಿನಲ್ಲಿ 119 ನೀರಾವರಿ ಪಂಪುಸೆಟ್ಟುಗಳನ್ನೂ ಮತ್ತು ಗದಗ ತಾಲ್ಲೂಕಿನಲ್ಲಿ 87 ನೀರಾವರಿ ಪಂಪುಸೆಟ್ಟುಗಳನ್ನು ಈಗಾಗಲೇ ವಿದ್ಯುದೀಕರಿಸಿ, ಗುರಿ ಮೀರಿದ ಸಾಧನೆಯನ್ನು ಮಾಡಲಾಗಿದೆ. ಹೀಗಾಗಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ವಿಷಯದಲ್ಲಿ ವಿಳಂಬವಾಗುತ್ತಿಲ್ಲ.

ಈ) ಫೆಬ್ರವರಿ 92ರ ಅಂತ್ಯದವರೆಗೆ ಗದಗ ತಾಲ್ಲೂಕಿನಲ್ಲಿ 45 ನೀರಾವರಿ ಪಂಪುಸೆಟ್ಟುಗಳ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ 64 ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಕಾರ್ಯವು ಬಾಕಿ ಉಳಿದಿದೆ. ಈ ಕಾರ್ಯವನ್ನು 'ರೋಸ್ಟರ್' ಪ್ರಕಾರ, ತಯಾರಿಸಲ್ಪಟ್ಟಿರುವ ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಮೇರೆಗೆ ಪೂರ್ಣಗೊಳಿಸಲಾಗುವುದು.

ಉ) ಗದಗ ಮತ್ತು ಮುಂಡರಗಿ ತಾಲ್ಲೂಕುಗಳಿಗೆ ಅಗತ್ಯಕ್ಕೆ ತಕ್ಕಂತೆ ವಿದ್ಯುತ್ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

ಊ) 'ಉ' ಕ್ಕೆ ಮೇಲೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್. ಕುರುಡಗಿ :- ನನ್ನ 'ಆ' ಪ್ರಶ್ನೆಗೆ ಉತ್ತರವಾಗಿ "ನಾವು ಶೀಘ್ರದಲ್ಲಿ ತುಂಬುತ್ತೇವೆ" ಎಂದು ಹೇಳಿದ್ದಾರೆ. ನಮ್ಮ ಮುಂಡರಗಿ ತಾಲ್ಲೂಕಿನ ವಿದ್ಯುತ್ ಉಪವಿಭಾಗದ ಕಚೇರಿಯಲ್ಲಿ ಸಿಬ್ಬಂದಿ ಇರುವವರೇ ಮೂರು ಮಂದಿ. ಆದ್ದರಿಂದ ಅಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಶೀಘ್ರ ಎಂದರೆ ಎರಡು ವರ್ಷವೋ ಮೂರು ವರ್ಷವೋ ಅಥವಾ ಸೆಕ್ಷನ್ ಬಂದ್ ಆಗಬೇಕೋ ಎಂದು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ :- ಮಾನ್ಯ ಅಧ್ಯಕ್ಷೆಯವರೆ, ಈಗ ಇಂಟರ್‌ವ್ಯೂ ಕರೆಯುತ್ತಿದ್ದೇವೆ. ಇಷ್ಟರಲ್ಲೇ ಆಗುತ್ತದೆ. ಐದಾರು ತಿಂಗಳಲ್ಲಿ ಎಲ್ಲಾ ಸರಿಹೋಗಬಹುದು. ಗೌರ್ನಮೆಂಟ್ ಕೂಡ ನಮಗೆ ಕೆಲವು ಹುದ್ದೆಗಳಿಗೆ ಪರವಾನಗಿ ಕೊಡಬೇಕು. ಅದು ಕೊಟ್ಟನಂತರ ನಾವು ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರುಡಗಿ :- ಗದಗ ತಾಲ್ಲೂಕಿನ ಕಚೇರಿಗೆ ಟೆಂಪರರಿಯಾಗಿ ಕೆಲವು ದಿವಸ ಕಾಲ ನೇಮಕ ಮಾಡಿ ಕೆಲಸ ಸಾಗುವಂತೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ರಾಮಪ್ಪ :- ಟೆಂಪರರಿಯಾಗಿ ಹಾಕುವುದಕ್ಕೆ ಬರುವುದಿಲ್ಲ. ಮಿಕ್ಕದ್ದನ್ನು ನಾನು ನೋಡಿ ಏನಾದರೂ ಅಡ್ಜೆಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಕುರುಡಗಿ :- ಮುಂಡರಗಿ ತಾಲ್ಲೂಕಿನಲ್ಲಿ ತಾವು ಗುರಿ ಸಾಧನೆ ಮಾಡಿರುವುದಾಗಿ ತಿಳಿಸಿದ್ದೀರಿ. ಆದರೆ ಅಲ್ಲಿ ಇನ್ನೂ 100 ಜನ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ.

ಶ್ರೀ ಎಂ. ರಾಮಪ್ಪ :- ಮುಂಡರಗಿಯಲ್ಲಿ ನಮ್ಮ ಗುರಿ ಇದ್ದದ್ದು 100 ಆದರೆ ಸಾಧನೆ 110 ಮಾಡಿದ್ದೇವೆ. ಹಾಗೆಯೇ ಗದಗ್‌ನಲ್ಲಿ 75 ಗುರಿ ಇದ್ದು 87 ಸಾಧನೆ ಮಾಡಿದ್ದೇವೆ. ಇದಾದಮೇಲೆ ನಮ್ಮಲ್ಲಿ ಅಪ್ಲಿಕೇಷನ್ಸ್ ಗದಗ್‌ನಲ್ಲಿ 45 ಬಾಕಿ ಇದ್ದರೆ, ಮುಂಡರಗಿಯಲ್ಲಿ 64 ಇವೆ. ಇವಕ್ಕೂ ಇನ್ನು ಐದಾರು ತಿಂಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಯತ್ನ ಮಾಡುತ್ತೇವೆ.

ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಪಡಿತರ ಹಂಚಿಕೆಯ ಪ್ರಮಾಣವನ್ನು ಹೆಚ್ಚಿಸುವುದು

1576. ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿರುವ ಅಕ್ಕಿ ಮತ್ತು ಪಾಮೋಲಿನ್ ಎಣ್ಣೆಯ ಪ್ರಮಾಣವನ್ನು ಕಡಿತಗೊಳಿಸಲಾಗಿರುವುದು ನಿಜವೇ ?

2) ಹಾಗಿದ್ದಲ್ಲಿ, ಈ ಕಡಿತಕ್ಕೆ ಕಾರಣಗಳಾವುವು?

3) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸುವ ಯೋಜನೆಯಿದೆಯೇ?

ಶ್ರೀ ಟಿ.ಎಸ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹೌದು

2) ಗ್ರಾಮಾಂತರ ಪ್ರದೇಶಗಳಲ್ಲಿರುವ ಹಸಿರು ಕೇಸರಿ ಕಾರ್ಡುಗಳಿಗೆ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣ ಕಡಿಮೆಗೊಳಿಸಿಲ್ಲ. ಕೇಂದ್ರ ಸರ್ಕಾರವು ಹಂಚಿಕೆ ಮಾಡುತ್ತಿರುವ ಪ್ರಮಾಣವನ್ನು ಕಡಿಮೆ ಗೊಳಿಸಿದ ಕಾರಣ ಪಟ್ಟಣ ಪ್ರದೇಶಗಳಲ್ಲಿ ಹಾಗೂ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿಯ

ಕಾರ್ಡುದಾರರಿಗೆ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣವನ್ನು ಕಡಿತಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಪಾಮೋಲಿನ್ ಎಣ್ಣೆಯನ್ನು ನಿಯತವಾಗಿ ಹಂಚಿಕೆ ಮಾಡುತ್ತಿಲ್ಲ, ಹಾಗೂ ಹಂಚಿಕೆ ಮಾಡಿದ ಪ್ರಮಾಣವು ಸಾಕಾಗುವಷ್ಟಾಗಿಲ್ಲ.

3) ಹೌದು - ರಾಜ್ಯಕ್ಕೆ ಅವಶ್ಯಕವಿರುವ ಪ್ರಮಾಣವನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿದರೆ ಯಥಾ ರೀತಿಯಾಗಿ ವಿತರಣೆ ಪ್ರಮಾಣವನ್ನು ಹೆಚ್ಚಿಸಲಾಗುವುದು.

ಶ್ರೀ ಎ.ಎಂ. ಹಿಂಡಸಗೇರಿ :- ಮಾನ್ಯ ಅಧ್ಯಕ್ಷರೇ, ಅಕ್ಕಿ ಮತ್ತು ಪಾಮೋಲಿನ್ ಸರಬರಾಜಿನಲ್ಲಿ ಕೇಂದ್ರದವರು ಕೊಡುವ ಪ್ರಮಾಣವನ್ನು ಕಡಿಮೆಗೊಳಿಸಿದ್ದಾರೆ ಎಂದು ಸಚಿವರು ಹೇಳಿದ್ದಾರೆ. ಮೊದಲು ಈ ಬಾಬುಗಳಲ್ಲಿ ಎಷ್ಟು ಪ್ರಮಾಣ ಬರುತ್ತಿತ್ತು ? ಹಾಗೂ ಈಗ ಎಷ್ಟು ಬರುತ್ತಿದೆ ? ಮತ್ತು ವಿಶೇಷವಾಗಿ ಅರ್ಬನ್ ಏರಿಯಾದಲ್ಲೇ ಈ ಕೋಟಾ ಕಟ್ ಮಾಡಿದ್ದೀರಿ ? ಏಕೆ ಹೀಗೆ ಮಾಡಿದ್ದೀರಿ ? ಅರ್ಬನ್ ಏರಿಯಾದಲ್ಲೂ ಕೂಡ ಕೂಲಿಕಾರರು ಬಡವರು, ಹಿಂದುಳಿದ ವರ್ಗದವರು ಇದ್ದಾರೆ. ಇಲ್ಲಿ ಏಕೆ ಕಟ್ ಮಾಡಿದ್ದೀರಿ ಎಂದು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಸುಮಾರು 80 ಸಾವಿರ ಕಾರ್ಡ್‌ಗಳನ್ನು ಜನರು ಏನು ಪಡೆದಿದ್ದಾರೋ ಅವರೆಲ್ಲರಿಗೂ ಒಂದೊಂದು ಐ.ಆರ್. ಏರಿಯಾ ಎಂದು ಇದೆ. ಅನೌಪಚಾರಿಕ ಪಡಿತರ ಪದ್ಧತಿ ಕೆಳಗೆ ಗ್ರೀನ್ ಕಾರ್ಡ್, ಕೇಸರಿ ಕಾರ್ಡ್ ಎಂದು ಇದೆ. ನಮ್ಮ ರಾಜ್ಯಕ್ಕೆ ಸುಮಾರು 75 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬೇಕೆಂದು ರಾಜ್ಯ ಸರ್ಕಾರ ಅಂದಾಜು ಮಾಡಿದೆ. ಆದರೆ ದುರ್ದೈವ ಮಾನ್ಯ ಅಧ್ಯಕ್ಷರೇ, ನಮಗೆ ಗರಿಷ್ಠ ಪ್ರಮಾಣದಲ್ಲಿ ಬಂದಿದ್ದೆಂದರೆ 1991ನೇ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ 50 ಸಾವಿರ ಮೆಟ್ರಿಕ್ ಟನ್ ಬಂತು. ಆದರೆ ಆ ಕ್ಷಣದಲ್ಲೇ ನಮಗೆ ಜನವರಿಯಿಂದ 50 ಸಾವಿರಕ್ಕೆ ಇಳಿಯಿತು. ನಮಗೆ 75 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬೇಕಾಗಿದ್ದು 45 ಸಾವಿರ, 48 ಸಾವಿರ ಮೆ. ಟನ್ ಬರುತ್ತಾ ಇತ್ತು. ಏಕಾಏಕಿ ಒಂದು ಸಾರಿ ನಮಗೆ 56 ಸಾವಿರ ಮೆ. ಟನ್ ಕೊಟ್ಟರು. ಕೇವಲ 3 ತಿಂಗಳಿಗೆ ನಮಗೆ ಅದನ್ನು ರಾಷ್ಟ್ರದ ಪ್ರಮಾಣದಲ್ಲಿ ಹಂಚಿಕೆ ಮಾಡುವಾಗ ನಮಗೆ ಕಡಿಮೆ ಮಾಡಿ ಅದನ್ನು 48 ಸಾವಿರ ಮೆ. ಟನ್‌ಗೆ ಇಳಿಸಿದರು. ನಾನು ಆ ಮಧ್ಯೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿ ಮತ್ತೆ 5 ಸಾವಿರ ಮೆ. ಟನ್ ಹೆಚ್ಚು ಮಾಡಿಸಲಾಯಿತು. ಈಗ 50 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬರುತ್ತಾ ಇದೆ. ನಮ್ಮ ಬೇಡಿಕೆಗೂ ಅವರು ಕೊಡುವುದಕ್ಕೂ ವ್ಯತ್ಯಾಸ ಇದೆ. ಇದು ಅನಿವಾರ್ಯವೂ ಆಗಿದೆ. ಇದರಿಂದ ಇವತ್ತು ಕಾರ್ಡುದಾರರಿಗೆ ಪ್ರತಿ ತಿಂಗಳು ಕೊಡುವ ಪ್ರಮಾಣದಲ್ಲೂ ಏರಿಳಿತ ಆಗುತ್ತಿದೆ. ಒಂದು ತಿಂಗಳು 10 ಕೇಜಿ ಸಿಕ್ಕರೆ ಇನ್ನೊಂದು ತಿಂಗಳು ಅದು 13 ಕೇಜಿ ಆಗುತ್ತದೆ. ಹಾಗೆಯೇ ಮತ್ತೊಂದು ತಿಂಗಳು 8 ಕೇಜಿ ಆಗುತ್ತದೆ. ಅಕ್ಕಿ ನಮಗೆ ಬಂದಹಾಗೆ ಅದು ಹೆಚ್ಚು ಕಡಿಮೆ ಆಗುತ್ತದೆ. ಮತ್ತು ನಮಗೆ 50 ಸಾವಿರ ಮೆಟ್ರಿಕ್ ಟನ್ ಗೋಧಿ ಬೇಕಾಗಿದೆ. ಆದರೆ ನಮಗೆ ಕೊಡುತ್ತಾ ಇರುವುದು ಕೇವಲ 40 ಸಾವಿರ ಮೆಟ್ರಿಕ್ ಟನ್. ನಮಗೆ ಸಕ್ಕರೆ ಸುಮಾರು 29 ಸಾವಿರ ಮೆಟ್ರಿಕ್ ಟನ್ ಬೇಕಾಗಿದ್ದು ನಮಗೆ ಬರುತ್ತಾ ಇರುವುದು ಕೇವಲ್ಲ 18 ಸಾವಿರ ಮೆಟ್ರಿಕ್ ಟನ್. ಮತ್ತು ಸೀಮೆಎಣ್ಣೆ ನಮಗೆ ಬೇಡಿಕೆ ಇರುವುದು 67 ಸಾವಿರ ಕಿಲೋ ಲೀಟರ್. ಆದರೆ ಅವರು ಕೊಟ್ಟಿರತಕ್ಕದ್ದು 58,866 ಕಿಲೋ ಲೀಟರ್‌ಗಳು ಮಾತ್ರ. ನಾವು ಹೆಚ್ಚು ಪ್ರಮಾಣಕ್ಕೆ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಕೇಂದ್ರದವರೂ ಸಹಾ ರಾಷ್ಟ್ರಮಟ್ಟದಲ್ಲಿ ಎಷ್ಟು ಪ್ರಕ್ಯೂರ್‌ಮೆಂಟ್ ಇದೆ ಎಂದು ನೋಡಿ, ರಾಜ್ಯದಿಂದ ಎಷ್ಟು ಬರುತ್ತಿದೆ, ಎಷ್ಟು ಸಿಗುತ್ತದೆ ಎಂದು ನೋಡಿ ಅವರೂ ಕೊಡುವ ವ್ಯವಸ್ಥೆ ಇದೆ. ಅವರು ಎಷ್ಟು ಪ್ರಮಾಣದಲ್ಲಿ ಕೊಡುತ್ತಾರೋ ಅದನ್ನು ಪ್ರಮಾಣಿಕವಾಗಿ, ವ್ಯವಸ್ಥಿತವಾಗಿ ಹಂಚಿಕೆ ಮಾಡುವುದು ನಮ್ಮ ಜವಾಬ್ದಾರಿ.

ಶ್ರೀ ಎ.ಎಂ. ಹಿಂಡಸಗೇರಿ :- ಮಾನ್ಯ ಉಪಾಧ್ಯಕ್ಷೆಯವರೆ, ನಮ್ಮ ರಾಜ್ಯದಲ್ಲಿಯೇ ತಯಾರು ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹಿಂದಕ್ಕೆ ಸರ್ಕಾರ ಹೇಳಿತ್ತು. ಇದುವರೆಗೆ ಅದು ಏನಾಯಿತು ಎಂದು ತಿಳಿಯಲಿಲ್ಲ. ಸರ್ಕಾರದ ವತಿಯಿಂದ ಪಾಮೋಲಿನ್ ಆಯಿಲ್ ತಯಾರು ಮಾಡಿ ಹಂಚುವ ವ್ಯವಸ್ಥೆಯನ್ನು ಮಾಡುತ್ತಾರೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ. ಮಾನ್ಯ ಉಪಾಧ್ಯಕ್ಷೀಣಿಯವರೆ, ತಾಳೆಎಣ್ಣೆ ಏನಿದೆ ಅದನ್ನು ಮಲೇಷಿಯಾದಿಂದ ರಫ್ತು ಮಾಡಿ ನಂತರ ರಾಜ್ಯಗಳಿಗೆ ಹಂಚುವಂತಹ ವ್ಯವಸ್ಥೆ ಇದೆ. ಕೇಂದ್ರ ಸರ್ಕಾರದ ವಿದೇಶವಿನಿಮಯ ಆರ್ಥಿಕ ನೀತಿಯನ್ನು ತಾವೆಲ್ಲ ಅರ್ಥ ಮಾಡಿಕೊಂಡಿದ್ದೀರಿ. ಫಾರಿನ್ ಎಕ್ಸಚೇಂಜ್ ಪ್ರಾಬ್ಲಮ್ ನಿಂದ ತಾಳೆಎಣ್ಣೆ ಹೆಚ್ಚಿನ ಪ್ರಮಾಣದಲ್ಲಿ ಬಾರದಿರುವುದರಿಂದ ಎಷ್ಟು ಪ್ರಮಾಣದಲ್ಲಿ ಬರುತ್ತದೆ ಅದನ್ನು ಎಲ್ಲಾ ರಾಜ್ಯಗಳಲ್ಲಿ ಕಾರ್ಡುಗಳಿಗೆ ಅನುಸಾರವಾಗಿ ಹಂಚಲಾಗುತ್ತಿದೆ. ನಮ್ಮ ರಾಜ್ಯಕ್ಕೆ 1200 ಮೆಟ್ರಿಕ್ ಟನ್ ಎಷ್ಟು ತಾಳೆಎಣ್ಣೆ ಬರುತ್ತಾ ಇದೆ. ಒಂದು ಕಾರ್ಡಿಗೆ ಒಂದು ಕೆ.ಜಿ. ಯನ್ನು ಸಹ ಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಬಂದಂತಹ ಎಣ್ಣೆಯ ಪ್ರಮಾಣ ಏನಿದೆ ಅದು ನಮಗೆ ಸಾಲದು, ನಮಗೆ ಬೇಕಾಗಿರುವುದು 8–9 ಸಾವಿರ ಮೆಟ್ರಿಕ್ ಟನ್. ಅವರು ನಮಗೆ ಕೊಡುತ್ತಿರುವುದು 1200 ಮೆಟ್ರಿಕ್ ಟನ್. ನಾಳೆ 13–14 ನೇ ತಾರೀಖು ಎಲ್ಲಾ ರಾಜ್ಯಗಳ ಆಹಾರ ಸಚಿವರ ಸಮ್ಮೇಳನ ನಡೆಯುತ್ತಿದೆ. ಆ ಸಮ್ಮೇಳನಕ್ಕೆ ನಾನೂ ಹೋಗುತ್ತಿದ್ದೇನೆ. ಅಂದು ತಮ್ಮ ಅನಿಸಿಕೆಯನ್ನು ಮತ್ತು ರಾಜ್ಯ ಸರ್ಕಾರದ ಕಳವಳವನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಆ ಸಭೆಯಲ್ಲಿ ಪ್ರಸ್ತಾಪ ಮಾಡಿ ತಾಳೆಎಣ್ಣೆಯನ್ನು ಹೆಚ್ಚಿಗೆ ಪಡೆಯುವುದಕ್ಕೆ ನಾವು ಒತ್ತಾಯ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಕಳೆದ ಎರಡು ವರ್ಷಗಳಿಂದಲೂ ಹಸಿರು ಕಾರ್ಡಿನ ವಿತರಣೆ ಸರಿಯಾಗಿ ಆಗಿಲ್ಲ, ಅದನ್ನು ಸರಿಪಡಿಸಬೇಕೆಂದು ನಾವು ಕೇಳುತ್ತಾ ಇದ್ದೇವೆ. ಅದನ್ನು ಸರಿಪಡಿಸುತ್ತೇವೆಂದು ನೀವು ಹೇಳಿದ್ದೀರಿ. ಈಗಾಗಲೇ ಕೆಲವು ಕಡೆ ಕ್ರಮ ತೆಗೆದುಕೊಂಡಿದ್ದಾರೆಂದು ನಮಗೆ ವದಂತಿ ಬಂತು. ಹಸಿರು ಕಾರ್ಡ್ ಸಮರ್ಪಕವಾಗಿ ಯಾರಿಗೆ ಸಿಗಬೇಕು ಅವರಿಗೆ ಸಿಗುವಂತೆ ಮಾಡುವುದಕ್ಕೆ ಏನು ತೊಂದರೆಯಿದೆ? ತೊಂದರೆ ಇದ್ದರೆ ಯಾವಾಗ ಹಸಿರುಕಾರ್ಡ್‌ನ್ನು ಹಂಚುವ ಪ್ರಯತ್ನ ಮಾಡುತ್ತೀರಿ? ಎರಡನೆಯದು ನನಗೆ ಆಶ್ಚರ್ಯವಾಗುತ್ತದೆ, ಈ ಬಜೆಟ್ ಪುಸ್ತಕದಲ್ಲಿ ಈ ಇಲಾಖೆ ಇಲ್ಲವೇ ಇಲ್ಲ, ಏನು ಮಾಡುತ್ತಾರೆಂದು ನನಗೆ ಅರ್ಥವಾಗಲಿಲ್ಲ, ದುಡ್ಡು ಎಲ್ಲಿಂದ ತರುತ್ತಾರೆ? ಹೇಗೆ ಖರ್ಚು ಮಾಡುತ್ತಾರೆ? ಬಜೆಟ್‌ನಲ್ಲಿ ಇವರ ಇಲಾಖೆ ಇಲ್ಲವೆ? ಮಾನ್ಯ ನರಸಿಂಹಮೂರ್ತಿಯವರು ಪಾಪ ಬಹಳ ಗಹನವಾಗಿ ಅವರ ಶಕ್ತಿ ಮೀರಿ ಕೆಲಸ ಮಾಡುತ್ತಾರೆ. ಬಜೆಟ್‌ನಲ್ಲಿ ಇವರ ಇಲಾಖೆಯ ಬಗ್ಗೆ ಪ್ರಸ್ತಾಪವಿಲ್ಲ, ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪ ಇದೆ. ಇದನ್ನು ಯಾವರೀತಿ ಸರಿದೂಗಿಸುತ್ತಾರೆನ್ನುವುದು ಗೊತ್ತಾಗುವುದಿಲ್ಲ, ಹಣ ಇವರಿಗೆ ಎಲ್ಲಿ ಬರುತ್ತದೆ? ಹೇಗೆ ಖರ್ಚು ಮಾಡುತ್ತಾರೆ ಎನ್ನುವ ವಿಚಾರವನ್ನು ದಯಮಾಡಿ ಸಭೆಗೆ ವಿಷದವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ನನ್ನ ಇಲಾಖೆ ಇಲ್ಲವೇ ಇಲ್ಲ ಎನ್ನತಕ್ಕ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೂ ಆ ಪ್ರಶ್ನೆಗೂ ತಾವು ಕೇಳುವ ಪ್ರಶ್ನೆಗೂ ಸಂಬಂಧವಿಲ್ಲ. ಬಜೆಟ್ ಮೇಲೆ ಮಾತನಾಡುವಾಗ ತಮಗೆ ಸ್ವಾತಂತ್ರ್ಯ ವಿದೆ. ಮಾತನಾಡಿ, ಆಗ ನನ್ನ ಇಲಾಖೆಗೆ ದುಡ್ಡು ಕೊಟ್ಟಿದ್ದಾರೋ ಇಲ್ಲವೋ ಎನ್ನುವುದು ಅದರ ಬಗ್ಗೆ ಸ್ಪಷ್ಟ ಚಿತ್ರ ತಮಗೆ ಸಿಗುತ್ತದೆ. ಈಗ ತಾವೇನು ಪ್ರಸ್ತಾಪ ಮಾಡಿದ್ದೀರಿ ಗ್ರಾಮಾಂತರ ಪ್ರದೇಶಗಳಲ್ಲಿ ಕೊಡತಕ್ಕ ಹಸಿರುಕಾರ್ಡ್‌ಗಳು ಏನಿವೆ ಅವು ಅನೇಕ ಮಂದಿಗೆ ಸಿಕ್ಕಿಲ್ಲ ಎನ್ನುವ ಮಾತು ನಿಜ ಇದೆ. ನೂರಕ್ಕೆ ನೂರರಷ್ಟು ಎಲ್ಲರಿಗೂ ಗ್ರೀನ್ ಕಾರ್ಡ್‌ಗಳು ಸಿಕ್ಕಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾಗಿದೆ. ಹಸಿರು ಕಾರ್ಡಿನ ಬಣ್ಣವನ್ನು ಬದಲಾಯಿಸಿ ಆದಾಯದ ಮಿತಿಯನ್ನು ಹೆಚ್ಚು ಮಾಡಿದ್ದೇವೆ. 3600 ರೂಪಾಯಿಗಳಿಂದ 6400 ರೂಪಾಯಿಗಳಿಗೆ ಆದಾಯದ ಮಿತಿಯನ್ನು ಏರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಸಮೀಕ್ಷೆಯನ್ನು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಆ ಕಾರ್ಯಕ್ರಮ ಇವತ್ತು ಮುಗಿಯುತ್ತಾ ಬಂದಿದೆ. ಆ ಸಮೀಕ್ಷೆಯ ನಂತರ ತಾವು ಹೇಳಿದ ರೀತಿಯಲ್ಲಿ ನಿಮ್ಮ ಕ್ಷೇತ್ರದಲ್ಲಿ ಯಾರ್ಯಾರಿಗೆ ಗ್ರೀನ್ ಕಾರ್ಡ್‌ಗಳು ಸಿಕ್ಕಿಲ್ಲಾ ಅವರಿಗೆ ಕೊಡಿಸುತ್ತೇನೆಂದು ನಾನು ಮಾನ್ಯ ಸದಸ್ಯರುಗಳಿಗೆ ಭರವಸೆಯನ್ನು ಕೊಡುತ್ತೇನೆ. ನೀವು ಶಾಸಕರು ಅಂದಮೇಲೆ ನಿಮಗೆ ಯಾವ ರೀತಿಯ ಅಧಿಕಾರವಿದೆಯೆಂದು ಗೊತ್ತಿದೆ, ನಿಮಗೆ ಆ ಬಗ್ಗೆ

ಸ್ವಾತಂತ್ಯವಿದೆ. ನಮಗೆ ಗೊತ್ತಿದೆ ಶಾಸಕರೂ ಕೂಡ ಅವರ ಕ್ಷೇತ್ರಗಳಲ್ಲಿ ಮಂತ್ರಿಗಳಾಗಿರುವುದರಿಂದ ಪ್ರತಿಯೊಂದನ್ನು ನನ್ನ ಗಮನಕ್ಕೆ ತರುವ ಅಗತ್ಯವಿಲ್ಲ, ನೀವು ಅಲ್ಲೇ ಸರಿಪಡಿಸುವಂತಹ ಅಧಿಕಾರವಿರುವುದರಿಂದ ನೀವು ನಿಮ್ಮ ಅಧಿಕಾರವನ್ನು ಚಲಾಯಿಸಬೇಕೆಂದು ನಾನು ಹೇಳುತ್ತಿದ್ದೇನೆ. ಎಲ್ಲೆಲ್ಲಿ ಗ್ರೀನ್ ಕಾರ್ಡಗಳನ್ನು ಕೊಟ್ಟಿಲ್ಲ ಅದನ್ನು ನನ್ನ ಗಮನಕ್ಕೆ ತನ್ನಿ.

ಶ್ರೀ ಎಸ್.ಎಂ. ಯಾಹ್ಯಾ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯಮಂತ್ರಿಗಳು ಕೇಂದ್ರ ಸರ್ಕಾರದಿಂದ ಎಸೆನ್ಷಿಯಲ್ ಕಮಾಡಿಟೀಸ್ ಸಪ್ಲೈ ಬಹಳ ಕಡಿಮೆಯಿದೆ, ಡಿಮಾಂಡ್ಸ್ ಬಹಳ ಹೆಚ್ಚು ಇದೆಯೆಂದು ಹೇಳಿದರು. ಅದಕ್ಕಾಗಿ ಈಗ ಬೆಲೆಗಳು ಹೆಚ್ಚು ಹೆಚ್ಚು ಆಗುತ್ತಿವೆ. ಜನ ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರದಿಂದ ಬರುವ ಸಪ್ಲೈ ಕಡಿಮೆಯಿರುವುದರಿಂದ ವಿತರಣೆ ಸರಿಯಾಗಿಲ್ಲದ ಕಾರಣ ಸಾವಿರಾರು ಬಡ ಜನರಿಗೆ ತೊಂದರೆಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಯಾವುದು ಒಂದು ವಿತರಣೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಅದನ್ನು ವಿತರಣೆಯನ್ನು ಸರಿಮಾಡುವುದಕ್ಕೆ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ? ಮಾನ್ಯ ಉಪಾಧ್ಯಕ್ಷೀಣಿಯವರೇ ತಮಗೆ ಎಲ್ಲರಿಗೂ ಗೊತ್ತಿರುವ ಹಾಗೆ ಯಾವುದೇ ಒಂದು ರೇಷನ್ ಶಾಪ್‌ನಲ್ಲಿ ಒಂದು ರೀತಿಯ ಕರಪ್ಷನ್ ಆಗಲಿ, ಒಂದು ರೀತಿಯಲ್ಲಿ ಅದು ಎಲ್ಲೆಲ್ಲಿಯೋ ಹೋಗಿಬಿಡುತ್ತದೆ. ಸರ್ಕಾರದವರು ಕೊಟ್ಟ ಎಸೆನ್ಷಿಯಲ್ ಕಮಾಡಿಟೀಸ್ ಏನಿದೆ, ಅದಕ್ಕೆ ಯಾವರೀತಿ ಕಾರ್ಯವನ್ನು ಹಾಕಿಕೊಂಡು ಅದು ಏಫಿಸಿಯಂಟ್ ಆಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಬೇಕು. ಎರಡನೆಯದಾಗಿ ಈಗ ಬೆಲೆ ಹೆಚ್ಚು ಆಗಿರುವುದರಿಂದ ನಮ್ಮ ಸರ್ಕಾರದವರು ಆಕ್ಟಿಯಾಗಲಿ, ಇನ್ನಿತರ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಸ್ಟಾಕ್ ಮಾಡಿಕೊಂಡಿದ್ದರೆ ನಮಗೆ ಸ್ವಲ್ಪ ಕಡಿಮೆ ರೇಟಿಗೆ ಸಿಗಬಹುದು. ಈ ರಾಜ್ಯಸರ್ಕಾರ ಯಾವುದಾದರೂ ಸಬ್ಸಿಡಿ ಕೊಡುವಂಥ ಕಾರ್ಯವನ್ನು ಇಟ್ಟುಕೊಂಡು ಬೆಲೆಗಳು ಏರಿದಂಥ ಕಾಲದಲ್ಲಿ ಬಡವರಿಗೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತಾರೆಯೇ ಎಂದು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಯಾಹ್ಯಾರವರು ನಮ್ಮ ರಾಜ್ಯದಲ್ಲಿ ಹಣಕಾಸಿನ ಸಚಿವರಾಗಿ ಬಹಳಷ್ಟು ಅನುಭವ ಇರತಕ್ಕಂಥ ರಾಜಕಾರಣಿಗಳಲ್ಲಿ ಒಬ್ಬರು. ಬೆಲೆಗಳು ಜಾಸ್ತಿಯಾದಾಗ ಬಹುಶಃ ರಾಜ್ಯ ಸರ್ಕಾರದ ನಿಜವಾದಂಥ ಜವಾಬ್ದಾರಿ ಏನು ಎಂಬುದು ತಮಗೆ ತಿಳಿದಿದೆ. ನಮ್ಮ ರಾಷ್ಟ್ರದಲ್ಲಿ ಬೆಲೆಗಳು ಗಗನಕ್ಕೆ ಏರಿವೆ ಎನ್ನತಕ್ಕದ್ದಕ್ಕೆ, ಆಳುವ ಪಕ್ಷ ಕೇಂದ್ರದಲ್ಲಿ ಇರಬಹುದು, ರಾಜ್ಯದಲ್ಲಿ ಇರಬಹುದು, ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಆತಂಕವನ್ನು ವ್ಯಕ್ತಪಡಿಸಿವೆ. ಆದ್ದರಿಂದ ಇದನ್ನು ನೋಡಿ ನಾವು ಆಕಾಶವನ್ನು ನೋಡುವುದಕ್ಕೆ ಸಾಧ್ಯವಿಲ್ಲ, ಇದನ್ನು ತಡೆಗಟ್ಟುತಕ್ಕಂಥ ಒಂದು ಅವಕಾಶವನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಮಾನ್ಯ ಪ್ರಧಾನಮಂತ್ರಿಗಳು ಇದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈ ಬೆಲೆಗಳನ್ನು ತಡೆಗಟ್ಟುವುದಕ್ಕೆ ರಾಜ್ಯಸರ್ಕಾರ ಏನಾದರೂ ನಿರ್ದಿಷ್ಟವಾದ ನೀತಿಯನ್ನು ಇಟ್ಟುಕೊಂಡು ಆಹಾರ ವಸ್ತುಗಳನ್ನೆ ಶೇಖರಣೆ ಮಾಡುವುದಕ್ಕೆ ನೀವು ಏಕೆ ಪ್ರಯತ್ನ ಮಾಡಬಾರದು ಎಂದು ಹೇಳಿದ್ದೀರಿ. ಬಹಳ ಒಳ್ಳೆಯ ಸಲಹೆಯನ್ನು ಮಾಡಿದ್ದೀರಿ. ಕೇಂದ್ರದಿಂದ ಬರುವಂಥ ವಸ್ತುಗಳನ್ನು ನಾವು ತೆಗೆದುಕೊಂಡು ಮಾರಾಟ ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ. ನಾನು ಆಹಾರ ನಿಗಮದ ಅಧ್ಯಕ್ಷನಾಗಿರುವುದರಿಂದ ಜೋಳ ಮತ್ತು ರಾಗಿಯನ್ನು ಎರಡು ಪ್ರದೇಶಗಳಲ್ಲಿ ಎಂದರೆ, ಉತ್ತರ ಕರ್ನಾಟಕ ಭಾಗ ಮತ್ತು ಹಳೆಯ ಮೈಸೂರಿನಲ್ಲಿ ಇಲ್ಲಿ ರಾಗಿ, ಅಲ್ಲಿ ಜೋಳ ಕೊಡುವುದಕ್ಕೆ ನಾವು ಪ್ರೊಕ್ಯೂರ್ ಮಾಡಲೇಬೇಕು. ಇದಕ್ಕೆ ಕೇಂದ್ರಸರ್ಕಾರದ ಹಣವನ್ನು ಕೂಡ ನಾವು ಪಡೆಯಬೇಕು ಎಂದು ಮೊನ್ನೆಯದಿವಸ ನಾವು ತೀರ್ಮಾನಕ್ಕೆ ಬಂದಿದ್ದೇವೆ. ಮತ್ತೊಂದು ಉತ್ತಮ ಸಲಹೆಯನ್ನು ತಾವು ಏನು ಮಾಡಿದ್ದೀರಿ ಎಂದರೆ, ಬರುವಂಥ ವಸ್ತುಗಳು ಎಷ್ಟೇ ಆಗಿರಲಿ, ಸರಿಯಾದ ವಿತರಣೆಯಾಗಬೇಕೆನ್ನುವುದು. ಈ ಕಳಕಳಿ ಏನಿದೆ, ಅದನ್ನು ಖಂಡಿತವಾಗಿಯೂ ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ನಾನು ಯಾವಾಗಲೂ ಚಿಂತನೆ ಮಾಡುತ್ತಿದ್ದೇನೆ ಮತ್ತು ನಮ್ಮ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತಾವು ತಮ್ಮ ಕ್ಷೇತ್ರದಲ್ಲಿ ಏನಾದರೂ ಅಕ್ರಮ ನಡೆಯುತ್ತಿದ್ದರೆ ಅನಿರೀಕ್ಷಿತ ಭೇಟಿ ಕೊಟ್ಟು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. ತಾವು ಏನು ಹೇಳುತ್ತೀರಿ ಆ ಶಿಕ್ಷೆಯನ್ನು ನಾವು ಮಾಡುತ್ತೇವೆ. ಈ ಬಗ್ಗೆ ನಾನು ಎಲ್ಲಾ ಶಾಸಕರ ಸಹಕಾರವನ್ನು ಕೋರುತ್ತಿದ್ದೇನೆ.

ಶ್ರೀ ಎಸ್. ಎ. ಯಾಹ್ಯಾ :- ಇದು ಪ್ರಾಮುಖ್ಯವಾದ ವಿಚಾರವಾಗಿದೆ. ನಾನು ಅಲ್ಪಸ್ವಲ್ಪ ಎಕನಾಮಿಕ್ಸ್‌ನ್ನು ತಿಳಿದುಕೊಂಡಿದ್ದೇನೆ. ಬರೇ ಇಲ್ಲಿ ನಾವು ನಿಂತುಕೊಂಡು ಬೆಲೆ ಏರಿಕೆಯನ್ನು ಇಳಿಸುವುದು ಕೇಂದ್ರದಿಂದಾಗಲೀ, ಇಂಟರ್ ನ್ಯಾಷನಲ್ ಲೆವೆಲ್‌ನಲ್ಲಿ ಆಗುತ್ತದೆ ಎಂದು ಹೇಳಿದರೆ ಜನ ಮೆಚ್ಚುವುದಿಲ್ಲ. ಅದೆಲ್ಲಾ ಥಿಯರಿಯಲ್ಲಿ ಇರುತ್ತದೆ. ಪ್ರಾಕ್ಟಿಕಲ್ ಆಗಿ ನಮ್ಮ ಸರ್ಕಾರ ಬೆಲೆಗಳನ್ನು ಇಳಿಸುವುದಕ್ಕೆ ಬೇಕಾದಷ್ಟು ಕಾರ್ಯಗಳನ್ನು ಮಾಡಬಹುದು. ಕೇಂದ್ರ ಸರ್ಕಾರದವರು ಕೆಲವು ಕಾರ್ಯಗಳನ್ನು ಮಾಡಿದ್ದಾರೆ. ಡಿಫಿಸಿಟ್‌ನ್ನು 5300 ಕೋಟಿಗೆ ಇಳಿಸಿ ಇನ್‌ಫ್ಲೇಶನ್‌ನ್ನು 17 ಪರ್ಸೆಂಟ್ ನಿಂದ 11–9 ಪರ್ಸೆಂಟ್‌ಗೆ ಇಳಿಸುವಂಥ ಕಾರ್ಯ ಮಾಡಿದ್ದಾರೆ. ಇದರಿಂದ ಬೆಲೆಗಳು ಇಳಿಯಲೇಬೇಕು. ಇದು ಒಂದೇ ಅಲ್ಲ, ಹಲವಾರು ಸ್ಟೆಪ್ಸ್‌ನ್ನು ಎಕನಾಮಿಕಲಿ ಏನು ತೆಗೆದುಕೊಳ್ಳಬಹುದು. ಅದನ್ನು ಯೋಚನೆ ಮಾಡುತ್ತಿದ್ದಾರೆ. ಅಥವಾ ಬರೇ ನಾವು ಭಾಷಣ ಮಾಡಿ ಬೆಲೆಗಳನ್ನು ಇಳಿಸುತ್ತೇವೆ ಎಂದು ಹೇಳುವುದು. ಇದು ಕೇಂದ್ರ ಸರ್ಕಾರದ್ದು, ಇಂಟರ್‌ನ್ಯಾಷನಲ್ ಪ್ರೆಸ್ ಮೇಲೆ ನಮ್ಮ ಬೆಲೆಗಳನ್ನು ಇಳಿಸುವುದು ಎಂದು ಹೇಳಿಕೊಂಡು ಹೋದರೆ ನಮಗೂ ಕನ್ವಿನ್ಸ್ ಆಗುವುದಿಲ್ಲ, ಹೊರಗಿನವರಿಗೂ ಕನ್ವಿನ್ಸ್ ಆಗುವುದಿಲ್ಲ. ಬೇಕಾದಷ್ಟು ಸ್ಟೆಪ್ಸ್ ಇದೆ. ಯೋಚನೆ ಮಾಡಿದರೆ ನಮ್ಮ ಸರ್ಕಾರದವರು ಬೆಲೆ ಇಳಿಸಲಿಕ್ಕೆ ಬೇಕಾದಷ್ಟು ಸ್ಟೆಪ್ಸ್ ಮಾಡಬಹುದು. ಇದನ್ನು ಮಾಡುತ್ತಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ :- ಮಾನ್ಯ ಯಾಹ್ಯ ಸಾಹೇಬರು ಏನು ಅತ್ಯುತ್ತಮವಾದಂಥ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ, ಆ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆ ಇಡುತ್ತದೆ.

ಶ್ರೀ ಎ.ಎಂ. ಹಿಂಡಸಗೇರಿ :- ನಾನು ಒಂದು ಪ್ರಶ್ನೆ ಕೇಳಿದ್ದೆ. ನಮ್ಮ ರಾಜ್ಯದಲ್ಲಿ ಪಾಮ್ ಆಯಿಲ್ ಅನ್ನು ಸಂಗ್ರಹ ಮಾಡಿ ಅಥವಾ ಉತ್ಪಾದನೆ ಮಾಡಿ ಡಿಸ್ಟ್ರಿಬ್ಯೂಟ್ ಮಾಡುತ್ತೇವೆ ಎಂದು ಹಿಂದೆ ಹೇಳಿದ್ದಿರಿ. ಈಗ ಅದು ಮಲೇಷಿಯಾದಿಂದ ಬರುತ್ತದೆ, ಅದನ್ನು ತೆಗೆದುಕೊಂಡು ನಾವು ಸರಬರಾಜು ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಿಂದೆ ಸದನದಲ್ಲಿ ನಾವು ರಾಜ್ಯದ ವತಿಯಿಂದ ಆಯಿಲ್ ಉತ್ಪಾದನೆ ಮಾಡಿ ಸರಬರಾಜು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಎರಡನೆಯ ಪ್ರಶ್ನೆ, ನಮ್ಮ ಉತ್ತರ ಭಾಗದಲ್ಲಿ ಗೋಧಿಯನ್ನು ಸರ್ಕಾರದಿಂದ ಕೊಡುತ್ತಿದ್ದಾರೆ. ಹಿಂದೆ ಮಾನ್ಯ ಮಂತ್ರಿಗಳು ಬಂದಾಗ ನಾವು ಅಲ್ಲಿ ಒಂದು ಮೀಟಿಂಗ್ ಮಾಡಿ ಈ ಮಾತನ್ನು ಅವರ ಗಮನಕ್ಕೆ ತಂದಿದ್ದೆವು. ಉತ್ತರ ಕರ್ನಾಟಕದಲ್ಲಿ ಜೋಳ ಬಹಳ ಶಾರ್ಟೇಜ್ ಆಗಿ ಇವತ್ತು ಕೆ.ಜಿ.ಗೆ 8 ರಿಂದ 10 ರೂಪಾಯಿ ಇದೆ. ಸರ್ಕಾರ ಶೊಲ್ಲಾಪುರ, ಆಂಧ್ರದಿಂದ ಜೋಳ ಪರ್ಚೇಸ್ ಮಾಡು ಸೋವಿ ರೇಟಿಗೆ ತೆಗೆದುಕೊಂಡು ಬಂದು ಇಲ್ಲಿ ಉತ್ತರಭಾಗದಲ್ಲಿ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಕೇಳಿಕೊಂಡಿದ್ದೆವು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಹೊರದೇಶಗಳಿಂದ ಏನು ಎಣ್ಣೆಯನ್ನು ಇಂಪೋರ್ಟ್ ಮಾಡಿಕೊಂಡು ತರುತ್ತಿದ್ದೇವೆ, ಇದು ಯಾವತ್ತೂ ನಮಗೆ ಬಹಳ ಅಪಾಯ ಮತ್ತು ಸಕಾಲದಲ್ಲಿ ಸಿಕ್ಕುವುದಿಲ್ಲ ಎನ್ನತಕ್ಕಂಥ ಚಿಂತನೆ ಮಾಡಿ, ರಾಷ್ಟ್ರಮಟ್ಟದಲ್ಲಿಯೂ ಕೂಡ ಕೇಂದ್ರಸರ್ಕಾರ, ರಾಜ್ಯಸರ್ಕಾರಗಳಿಗೆ ಸೂಚನೆ ಕೊಟ್ಟು, ತಾಳೆ ಎಣ್ಣೆ ಉತ್ಪಾದನೆ ಮಾಡತಕ್ಕ ಪ್ರದೇಶಗಳನ್ನು ಐಡೆಂಟಿಫೈ ಮಾಡಿದ್ದಾರೆ. ಅದರಲ್ಲಿ ನಮ್ಮ ರಾಜ್ಯದ ಶಿವಮೊಗ್ಗ ಜಿಲ್ಲೆಯನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಿ, ಅಲ್ಲಿ, ಈ ತಾಳೆಎಣ್ಣೆ ಬೀಜ ಏನಿದೆ, ಇದನ್ನು ಬೆಳೆಯುವುದಕ್ಕೆ ನಮ್ಮ ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ. ಇದನ್ನು ಮುಂದಿನ ವರ್ಷದಲ್ಲಿ ನಾವು ಸರಿಪಡಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ, ಕ್ರಮೇಣವಾಗಿ, ನಮಗೆ ಬೇಕಾಗಿರತಕ್ಕ ಎಣ್ಣೆಯನ್ನು ನಾವೇ ಉತ್ಪಾದನೆ ಮಾಡತಕ್ಕಂಥ ಕಾರ್ಯದಲ್ಲಿ ನಮ್ಮದೇ ಆದ ಯೋಜನೆಯನ್ನು ಇಟ್ಟುಕೊಂಡು ಹೋಗುತ್ತಿದ್ದೇವೆ. ಬಹುಶಃ ಮುಂದಿನ ವರ್ಷದಲ್ಲಿ ಆಶಾದಾಯಕವಾಗುತ್ತಿದೆ, ಮತ್ತು ತಾಳೆಎಣ್ಣೆಯ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಕಾರ್ಯದಲ್ಲಿ ರಾಜ್ಯಸರ್ಕಾರ ಪ್ರಮಾಣಿಕವಾದ ಪ್ರಯತ್ನ ಮಾಡುತ್ತಿದೆ ಎನ್ನತಕ್ಕಂಥ ಭರವಸೆಯನ್ನು ತಮಗೆ ಹೇಳುತ್ತೇನೆ.

ಪಡಿತರ ಚೀಟಿದಾರರಿಗೆ ಆಹಾರ ಪದಾರ್ಥಗಳ ವಿತರಣೆಯಲ್ಲಿ ಅವ್ಯವಹಾರ

1392. ಶ್ರೀ ಕೆ. ಸಿದ್ದಯ್ಯ (ಸಂತೇಮಾರಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಪಡಿತರ ಚೀಟಿದಾರರಿಗೆ ಆಹಾರ ಧಾನ್ಯಗಳನ್ನು ಹಾಗೂ ಸೀಮೆಎಣ್ಣೆಯನ್ನು ವಿತರಿಸುವಲ್ಲಿ ಅವ್ಯವಹಾರ ಮತ್ತು ದುರುಪಯೋಗ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2) ಹಾಗಿದ್ದಲ್ಲಿ ವಿತರಣಾ ಕೇಂದ್ರಗಳಲ್ಲಿ ನಿಶ್ಚಿತವಾದ ನಿಯಂತ್ರಿತ ಪದಾರ್ಥಗಳ ಪ್ರಮಾಣ ಹಾಗೂ ಪಡಿತರ ಚೀಟಿದಾರರಿಗೆ ನೀಡುವ ಪ್ರಮಾಣವನ್ನು ಸೂಚಿಸಿ ಸೂಚನಾ ಫಲಕಗಳ ಮೇಲೆ ತೋರಿಸಲಾಗುವುದೇ?
3) ಸಂಬಂಧಪಟ್ಟ ಹಳ್ಳಿಗಳಲ್ಲಿ ಯಾವುದಾದರೊಂದು ಸಂಸ್ಥೆ ಉಸ್ತುವಾರಿಯಲ್ಲಿ ಈ ಪಡಿತರ ವಸ್ತುಗಳನ್ನು ವಿತರಿಸುವಂತೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?
4) ಬಡಜನರು ಆಹಾರ ಪದಾರ್ಥಗಳನ್ನು ಹಾಗೂ ಸೀಮೆಎಣ್ಣೆಯನ್ನು ಬಡಪಡಿತರ ಚೀಟಿದಾರರು ಒಂದು ನಿಗಧಿತ ಅವಧಿಯಲ್ಲಿ ಲ್ಯಾಪ್ಸ್ ಆಗದಂತೆ ಪಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹೌದೂ, ಕೆಲವು ಪ್ರಕರಣಗಳಲ್ಲಿ ಮಾತ್ರ.
2) ಪ್ರತಿಯೊಂದು ನ್ಯಾಯಬೆಲೆ ಅಂಗಡಿಯು ಪಡೆದ ಪ್ರಮಾಣ ಮತ್ತು ದರಗಳನ್ನು ಸೂಚನಾ ಫಲಕದಲ್ಲಿ ತೋರಿಸುವ ಪದ್ಧತಿ ಜಾರಿಯಲ್ಲಿದೆ.
3) ಮಂಡಲ ಪಂಚಾಯಿತಿ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸುವ ಯೋಜನೆ ಸರ್ಕಾರಕ್ಕಿದೆ.
4) ಪಡಿತರ ಚೀಟಿದಾರರು ಆಹಾರ ಪದಾರ್ಥಗಳನ್ನು ಪಡೆಯಲು ಕಾಲಮಿತಿಯನ್ನು ಸರ್ಕಾರ ನಿಗಧಿಪಡಿಸಿಲ್ಲ. ವಾರದ ರಜೆಯ ದಿನವನ್ನು ಹೊರತುಪಡಿಸಿ ತಿಂಗಳಿನ ಎಲ್ಲಾ ದಿನಗಳಲ್ಲಿ ಆಹಾರ ಪದಾರ್ಥಗಳು ಹಾಗೂ ಸೀಮೆಎಣ್ಣೆ ಲಭ್ಯವಿದ್ದಾಗ ಪಡಿತರ ಚೀಟಿದಾರರು ಪಡೆಯಬಹುದು.

ಶ್ರೀ ಕೆ. ಸಿದ್ದಯ್ಯ :- ಮಾನ್ಯ ಉಪಾಧ್ಯಕ್ಷರೇ, ನನ್ನ ಮೂರನೆಯ ಪ್ರಶ್ನೆಗೆ, ಪ್ರತಿ ಮಂಡಲ ಪಂಚಾಯತಿ ಮಟ್ಟದಲ್ಲಿ ವಿತರಣಾ ಸಮಿತಿಗಳನ್ನು ಮಾಡಲು ಯೋಚನೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಈ ವಿಚಾರದಲ್ಲಿ ಸ್ವಲ್ಪ ಬೇಗ ತೀರ್ಮಾನ ತೆಗೆದುಕೊಂಡರೆ ಬಹಳ ಒಳ್ಳೆಯದು. ಬಹಳ ಕಾಲ ಯೋಚನೆಯಲ್ಲೇ ಕುಳಿತುಕೊಂಡರೆ, ಅನೇಕ ಕಡೆ ಮಿಸ್ ಅಪ್ರೋಪ್ರಿಯೇಷನ್ ಆಗುತ್ತದೆ. ಆದುದರಿಂದ, ದಯಮಾಡಿ ಇದನ್ನು ಬೇಗನೆ ಮಾಡಬೇಕು. ಜೊತೆಗೆ, ತಾವು ಮಂಡಲ್ ಪಂಚಾಯತಿ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸುವ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ ಇದಕ್ಕಿಂತ ಹೆಚ್ಚಾಗಿ , ಆಯಾ ವಿತರಣಾ ಕೇಂದ್ರಗಳು, ಫೇರ್ ಪ್ರೈಸ್ ಷಾಪ್‌ಗಳು ಮತ್ತು ಸೊಸೈಟಿ ಮಟ್ಟದಲ್ಲಿ ಇಂತಹ ಸಮಿತಿಗಳ ವಿಸ್ತಾರವನ್ನು ಮಾಡಿದರೆ ಒಳ್ಳೆಯದು. ಏಕೆಂದರೆ, ಮಂಡಲ್ ಪಂಚಾಯತಿ ಮಟ್ಟದಲ್ಲಿ 3–4 ಫೇರ್ ಪ್ರೈಸ್ ಷಾಪ್ಸ್ ಅಥವಾ ಸೊಸೈಟಿಗಳು ಇರಬಹುದು. ಆದ್ದರಿಂದ ಪ್ರತಿಯೊಂದು ಸೊಸೈಟಿ, ಫೇರ್ ಪ್ರೈಸ್ ಷಾಪ್‌ಗಳಲ್ಲಿ ಇಂತಹ ಸಮಿತಿಗಳನ್ನು ಬೇಗ ಮಾಡಿಕೊಡಬೇಕು. ಯೋಚನೆ ಬಹಳ ದಿವಸವಾದರೆ, ಸ್ವಲ್ಪ ತೊಂದರೆಯಾಗುತ್ತದೆ. ತಾವು ಕೆಲವು ಪ್ರಕರಣಗಳಲ್ಲಿ ಮಾತ್ರ ಅವ್ಯವಹಾರ ನಡೆಯುವುದು ಎಂದು ಹೇಳಿದ್ದೀರಿ. ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಚಾಮರಾಜ ನಗರದಲ್ಲಿ ಫೇರ್ ಪ್ರೈಸ್ ಷಾಪಿನವರ ಸಭೆಯನ್ನು ಮಾನ್ಯ ವಾಟಾಳ್ ನಾಗರಾಜ್ ರವರು ಕರೆದಿದ್ದರು, 30–40 ಜನ ಫೇರ್ ಪ್ರೈಸ್ ಲೈಸೆನ್ಸಿಸ್ ಬಂದಿದ್ದರು. ಆಗ ನಾನು ಕೇಳಿದೆ, ನಾವು ನಿಮ್ಮ ರೇಷನ್ ಷಾಪಿಗೆ ಬರುತ್ತೇವೆ, ದಯಮಾಡಿ ನಮ್ಮ ಎದುರಿಗೆ ರೇಷನ್ ಹಂಚಿ, ಇದು ತಮಗೆ ಒಪ್ಪಿಗೆಯೇ ಎಂದು ಅವರನ್ನೇ ಕೇಳಿದೆ. ಇದಕ್ಕೆ ಒಬ್ಬರೂ ಮಾತನಾಡಲಿಲ್ಲ. ಅವರು ಏಕೆ ನಮ್ಮ

ಎಮರಿಗೇ ಹಂಚಬಾರದು? ಇದಕ್ಕೋಸ್ಕರ ತಾವು ದಯಮಾಡಿ ಮಂಡಲ್ ಪಂಚಾಯಿತಿ ಮಟ್ಟದಲ್ಲಿ ಏನು ಸಮಿತಿ ಮಾಡುತ್ತೀರಿ, ಅದನ್ನು ಪ್ರತಿಯೊಂದು ವಿತರಣಾ ಕೇಂದ್ರದಲ್ಲೂ ಮಾಡಬೇಕು, ಇದಕ್ಕೆ ಹೆಚ್ಚಿಗೆ ಖರ್ಚು ಬರುವುದಿಲ್ಲ, ದಯಮಾಡಿ ಈ ರೀತಿ ಮಾಡುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಸನ್ಮಾನ್ಯ ಸದಸ್ಯರಾದ ಕೆ. ಸಿದ್ದಯ್ಯನವರು ಪ್ರತಿ ನ್ಯಾಯಬೆಲೆ ಅಂಗಡಿಗಳಲ್ಲೂ ಜಾಗೃತ ದಳವನ್ನು ಮಾಡಬೇಕೆಂಬ ಸಲಹೆಯನ್ನು ಹೇಳುತ್ತಿದ್ದಾರೆ. ನಾನು ಅವರ ಸಲಹೆಯನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ, ಕೇವಲ 250–300 ಕಾರ್ಡುಗಳು ಒಂದು ಕೇಂದ್ರದಲ್ಲಿ ಇರುತ್ತವೆ, ಕೆಲವು ಹಿಂದುಳಿದ ಪ್ರದೇಶಗಳಲ್ಲಿ 200 ಕ್ಕೂ ಕಡಿಮೆ ಇರುತ್ತವೆ. ನಾವು ಈ ರೀತಿ 200–300 ಕಾರ್ಡುಗಳಿರುವ ಕಡೆಗಳಲ್ಲಿ ಸಮಿತಿಗಳನ್ನು ಮಾಡುವುದಕ್ಕೆ ಹೊರಟರೆ, ಬಹುಶಃ ಸ್ಥಳೀಯವಾಗಿ ಇದು ಎಷ್ಟರಮಟ್ಟಿಗೆ ಸಾಧ್ಯ ಎಂಬುದು ನಮ್ಮನ್ನು ಕಾಡಿಸುತ್ತಿದೆ. ನಾವು ಮಂಡಲ್ ಪಂಚಾಯಿತಿ ಮಟ್ಟದಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅಲ್ಲಿ 7–8 ನ್ಯಾಯಬೆಲೆ ಅಂಗಡಿಗಳು ಸಿಗುತ್ತವೆ. ಬಹುಶಃ ಸಮಿತಿಯರು ಎಲ್ಲಾ ಕಡೆಗೂ ಹೋಗುವುದಕ್ಕೆ ಅನುಕೂಲವಾಗಲಿ ಎಂಬ ಚಿಂತನೆಯನ್ನು ಮಾಡಿದ್ದೇವೆ. ಈ ದಿಸೆಯಲ್ಲಿ ಇನ್ನೂ ಅಂತಿಮವಾಗಿ ತೀರ್ಮಾನಕ್ಕೆ ಬಂದಿಲ್ಲ, ಈ ಸಾರ್ವಜನಿಕ ವಿತರಣಾ ವ್ಯವಸ್ಥೆ ಬಗ್ಗೆ ಪ್ರಧಾನ ಮಂತ್ರಿಯವರೂ ಕೂಡ ಒಂದು ರಾಷ್ಟ್ರ ನೀತಿಯನ್ನು ರೂಪಿಸಿದ್ದಾರೆ. ಜಾಗೃತ ದಳವನ್ನು ಯಾವ ಹಂತದಲ್ಲಿ ಮಾಡಬೇಕೆನ್ನುವುದರ ಬಗ್ಗೆ ರಾಜ್ಯ ಸರ್ಕಾರಗಳಿಗೆ ಸೂಚನೆ ಕೊಟ್ಟಿದ್ದಾರೆ. ಇವೆಲ್ಲವನ್ನೂ ಗಮನಿಸಿ, ಅಕ್ರಮ, ಅನ್ಯಾಯ ಏನು ನಡೆಯುತ್ತಿದೆ ಅದನ್ನು ತಪ್ಪಿಸಬೇಕು. ನಾನು ಅಕ್ರಮ ನಡೆಯುತ್ತಿಲ್ಲವೆಂದು ಹೇಳುತ್ತಿಲ್ಲ, ಮಾನ್ಯ ಸಿದ್ದಯ್ಯನವರಾಗಿರಬಹುದು, ಸದನದ ಸದಸ್ಯರು ಯಾರೇ ಆಗಿರಬಹುದು. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಅಕ್ರಮ, ಅನ್ಯಾಯಗಳು ನಡೆಯುವ ನ್ಯಾಯಬೆಲೆ ಅಂಗಡಿಗಳವರಿಗೆ ಯಾರೇ ಪ್ರೋತ್ಸಾಹ ಮಾಡುವಂತಿದ್ದರೆ, ಅಂತಹವರ ಮೇಲೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ಬಹುಶಃ ತಮಗೆ ಗೊತ್ತಿರುವ ಹಾಗೆ, ರಾಜ್ಯದಲ್ಲಿ ಸುಮಾರು 18 ಸಾವಿರ ನ್ಯಾಯಬೆಲೆ ಅಂಗಡಿಗಳಿವೆ. ಈ 18 ಸಾವಿರ ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರತಕ್ಕ ಅನ್ಯಾಯ ಅಕ್ರಮಗಳನ್ನು ತಡೆಗಟ್ಟಬೇಕೆಂಬುದೇ ನಮ್ಮ ಉದ್ದೇಶ. ದಯಮಾಡಿ, ತಪ್ಪುಮುಖಾಂತರ ಮಾನ್ಯಸದಸ್ಯರಿಗೆ ಪ್ರಾರ್ಥನೆ ಮಾಡುತ್ತೇನೆ. ನಿಮ್ಮ ನಿಮ್ಮ ಕ್ಷೇತ್ರದಲ್ಲಿ ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ವಿಚಾರದಲ್ಲಿ ತಾವು ಸಹಾಯ ಮಾಡುವುದಾದರೆ, ಅವುಗಳನ್ನು ಮತ್ತಷ್ಟು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನ್ಯಾಯಗಳು ಇಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ :- ನೀವೇನು ಕಮಿಟಿ ಮಾಡಬೇಕೆಂದು ಹೇಳುತ್ತೀರಿ, ಇವುಗಳನ್ನು ಆದಷ್ಟುಬೇಗನೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಈ ಸಲಹೆಯನ್ನು ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಯಾವ ಹಂತದಲ್ಲಿ ಸಮಿತಿಗಳನ್ನು ಮಾಡಬೇಕೆನ್ನುವುದರ ಬಗ್ಗೆ ನನ್ನ ಇಲಾಖೆಯಿಂದ ಈ ವಿಷಯವನ್ನು ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗಿ, ಇದರ ಬಗ್ಗೆ ಚರ್ಚೆ ಮಾಡಿ, ಇದಕ್ಕೆ ಅಂತಿಮ ಸ್ವರೂಪವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ ಮತ್ತು ಆದಷ್ಟುಬೇಗನೆ ಮಾಡುತ್ತೇನೆ.

11–40 ಎ.ಎಂ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಆಹಾರ ಮಂತ್ರಿಗಳೇ; ಬಹಳ ದಿನಗಳಿಂದ ಈ ಹೇಳಿಕೆ ನಡೆಯುತ್ತಿದೆ, ಇದಕ್ಕೆ ಏನಾದರೂ ಟೈಮ್ ಕೊಟ್ಟು ಇಷ್ಟು ದಿವಸದೊಳಗಾಗಿ ಮಾಡುತ್ತೇವೆಂದು ಸ್ಪೆಸಿಫಿಕ್ ಆಗಿ ಹೇಳಬೇಕು. ಇದು ಬಹಳ ದಿವಸದಿಂದ ಹಾಗೇಯೇ ಇದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ನನಗೆ ಅರ್ಥವಾಗುತ್ತದೆ, ಮಾನ್ಯ ಶಿವರಾಮೇಗೌಡರೇ ಹೇಳಲಿ, ಅವರ ಕ್ಷೇತ್ರದಲ್ಲಿ ಎಲ್ಲೆಲ್ಲಿ ನನ್ನ ಗಮನಕ್ಕೆ ತರದಿದ್ದಾರೆ ಅದನ್ನೆಲ್ಲಾ ಸರಿಪಡಿಸಿದ್ದೇನೆ, ಸರಿಪಡಿಸುವ ಪ್ರಯತ್ನ ಮಾಡಿರುತ್ತೇನೆ. ಮಾನ್ಯ ಸದಸ್ಯರುಗಳು ಇಂತಹ ವಿಚಾರವನ್ನು ನನ್ನ ಗಮನಕ್ಕೆ

ತಂದಿದ್ದರೂ ಸಹ ಅದನ್ನು ಸರಿಪಡಿಸಿಲ್ಲ ಎಂದು ಹೇಳಿದರೆ ನಾನು ಹೇಳುತ್ತೇನೆ, ಅದಷ್ಟು ಮಟ್ಟಿಗೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಶಿವರಾಮು :- ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟ ಕೇಸ್‌ಗಳನ್ನು ನಾವು ಹಿಡಿದು ಕೊಟ್ಟಿದ್ದೇವೆ, ಹಿಡಿದು ಕೊಡುವುದರ ಜೊತೆಗೆ ಮುಂತ್ರಿಗಳಿಗೂ ಪತ್ರ ಬರೆದಿದ್ದೇವೆ, ಆದರೆ ಅಧಿಕಾರಿಗಳಾರೂ ಇದುವರೆಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡಿಲ್ಲ, ಅಷ್ಟೇ ಅಲ್ಲ ಎಲ್ಲೆಲ್ಲಿ ಹಿಡಿದುಕೊಟ್ಟಿದ್ದೇವೆ, ಅಂತಹ ಕಡೆ, ಅವರ ಜೊತೆ ಅಧಿಕಾರಿಗಳೇ ಶಾಮೀಲಾಗಿ ಕೋರ್ಟಿಗೆ ಕಳುಹಿಸಿ ಸ್ಟೇ ತರಿಸುವ ಕೆಲಸ ಮಾಡಿರುತ್ತಾರೆ. ಇದಕ್ಕೆ ಸ್ಟೇ ತರಿಸುವ ವಿಚಾರದಲ್ಲಿ, ನ್ಯಾಯ ಬೆಲೆ ಅಂಗಡಿಯನ್ನು ರದ್ದು ಮಾಡುವ ವಿಚಾರದಲ್ಲಿ ಶಾಸಕರ ಕೈವಾಡ ಇದೆ ಎಂದು ನಮ್ಮನ್ನೂ ಸೇರಿ ಪಾರ್ಟಿ ಮಾಡಿ, ಸ್ಟೇ ತರುವ ಕೆಲಸ ಮಾಡಿರುತ್ತಾರೆ. ನಾಲ್ಕು ತಿಂಗಳಾಗಿದೆ, ಇದುವರೆಗೆ ಆ ಸ್ಟೇಯನ್ನು ವಜಾ ಮಾಡಿಸುವ ಕೆಲಸಕ್ಕೆ ಕೈ ಹಾಕಿಲ್ಲ, ಬೇಕಾದರೆ ವಿಚಾರಣೆ ಮಾಡಿಸಲಿ, ಇದರಲ್ಲಿ ಶಾಸಕರ ಹೆಸರನ್ನು ಸೇರಿಸಿದ್ದಾರೋ ಇಲ್ಲವೋ ಎಂಬುದು ಗೊತ್ತಾಗುತ್ತದೆ, ನಾಲ್ಕು ತಿಂಗಳು ಆಗಿದೆಯೋ ಇಲ್ಲವೋ ಗೊತ್ತಾಗುತ್ತದೆ. ಅಧಿಕಾರಿಗಳು ಸ್ಟೇ ವೆಕೇಟ್ ಮಾಡಿಸುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ, ಇದರ ಜೊತೆಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಅಧಿಕಾರಿಗಳು ಲಾರಿ ಜೊತೆ ಹೋಗಬೇಕೆಂದು ನಿಯಮ ಇದೆ, ಆದರೆ ಯಾರೂ ಲಾರಿಯ ಜೊತೆಗೆ ಹೋಗುವುದಿಲ್ಲ, ಈ ವ್ಯವಹಾರವೆಲ್ಲಾ ಪೂರ್ತಿ ಅಧಿಕಾರಿಗಳ ಜೊತೆ ಶಾಮೀಲಾಗಿ ನಡೆಯುತ್ತಿದೆ. ಶಾಸಕರು ಏನು ಮಾಡುವುದಕ್ಕೆ ಆಗುತ್ತದೆ? ನಮ್ಮನ್ನು ಯಾವ ಕಮಿಟಿ ಸದಸ್ಯರನ್ನಾಗಿಯೂ ಸೇರಿಸುವುದಿಲ್ಲ, ಆಯಾ ಕ್ಷೇತ್ರಗಳಲ್ಲಿ, ಆಯಾ ಶಾಸಕರುಗಳೇ ಮಂತ್ರಿಗಳು ಇದ್ದಹಾಗೆ ಎಂದು ಹೇಳುತ್ತಾರೆ, ಆದರೆ ನಮಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವರೀತಿಯ ಅಧಿಕಾರವೂ ಇಲ್ಲ, ನಿರ್ದಿಷ್ಟವಾಗಿ ಅಧಿಕಾರಿಗಳ ಮೇಲೆ ಕಂಪ್ಲೇಂಟ್ ಕೊಟ್ಟರೂ ಕ್ರಮ ತೆಗೆದುಕೊಂಡಿಲ್ಲ, ಈ ನಾಲ್ಕು ವಿಚಾರಗಳ ಬಗ್ಗೆ ಎನ್‌ಕ್ವೈರಿ ಮಾಡಿ ಅವರು ಉತ್ತರ ತರಿಸಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಸಭಾಧ್ಯಕ್ಷರಲ್ಲಿ ಒಂದು ವಿನಂತಿ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಆಗಬೇಕಾಗಿದೆ, ಇದನ್ನು ಸರಿಪಡಿಸಬೇಕಾದರೆ ಇದರ ಬಗ್ಗೆ ಚರ್ಚೆ ಆಗಬೇಕು. ಆದಕಾರಣ ದಯಮಾಡಿ ಆಫ್ ಆನ್ ಹವರ್ ಡಿಸ್ಕಷನ್‌ಗೆ ಅವಕಾಶ ಮಾಡಿದರೆ ಒಳ್ಳೆಯದಾಗುತ್ತದೆ.

(ಗೊಂದಲ)

ಶ್ರೀ ಬಿ. ಶಿವರಾಮು :- ಎಂ. ಪಿ. ಎಲೆಕ್ಷನ್ ಆದನಂತರ ಎರಡು ಮೂರು ತಿಂಗಳಲ್ಲಿ ನಡೆದ ವಿಚಾರ ಇದು, ಕೋರ್ಟಿಗೆ ಹೋಗಿ ಅವರು ಸ್ಟೇ ತರತಕ್ಕಂಥ ಕಾಲದಲ್ಲಿ ಅವರು ಕೊಡತಕ್ಕಂಥ ಅರ್ಜಿಯಲ್ಲಿ ಪಾರ್ಟಿ ವಿಚಾರ ತಂದಿದ್ದಾರೆ. ನಾವು ಜನತಾ ಪಾರ್ಟಿಗೆ ಸೇರಿದವರು, ನಮ್ಮ ಎದುರುಪಾರ್ಟಿ ಶಾಸಕರು ನಮ್ಮ ಮೇಲೆ ಆಪಾದನೆ ಮಾಡಿ, ಇದನ್ನು ತೆಗೆಸಿ ಹಾಕಿದ್ದಾರೆ ಎಂಬ ವಿಚಾರವನ್ನು ಕೋರ್ಟಿನಲ್ಲಿ ಹೇಳಿ, ಸ್ಟೇ ತರುವ ಕೆಲಸ ಮಾಡಿರುತ್ತಾರೆ.

ಶ್ರೀ ಸಾದತ್ ಅಲಿ ಖಾನ್ :- ಕರ್ನಾಟಕದಲ್ಲಿ 18 ಸಾವಿರ ಫೇರ್ ಪ್ರೈಸ್ ಶಾಪ್ಸ್ ಇದೆ ಎಂದು ಮಾನ್ಯ ಸಚಿವರು ಹೇಳಿದರು. ಮಾಲ್ ಪ್ರಾಕ್ಟೀಸಸ್‌ಗಾಗಿ ಎಷ್ಟು ಶಾಪ್‌ಗಳ ಲೈಸೆನ್ಸ್‌ನ್ನು ನೀವು ಈ ವರ್ಷ ಕ್ಯಾನ್ಸೆಲ್ ಮಾಡಿರುತ್ತೀರಿ? ಈ ಫುಡ್ ಅಸಿಸ್ಟೆಂಟ್ಸ್ ಇರುವ ಎಲ್ಲಾ ಕಡೆ ಮಾಲ್ ಪ್ರಾಕ್ಟೀಸಸ್ ಆಗುತ್ತದೆ, ಈ ಕಡೆ ಇಲ್ಲ, ಆ ಕಡೆ ಇಲ್ಲ ಎಂದು ಹೇಳುವ ಹಾಗೆ ಇಲ್ಲ, ಇವರು 10 ಸಾವಿರ ತೆಗೆದುಕೊಳ್ಳುವುದು ಹೊಸದಾಗಿ ಒಂದು ಫೇರ್ ಪ್ರೈಸ್ ಶಾಪ್, (ಡಿಪೋ) ಸ್ಯಾಂಕ್ಷನ್ ಮಾಡುವುದು. ಇಷ್ಟು ನಡೆದಿದೆ. ಅಲ್ಲದೆ ನಮ್ಮ ಕೋಲೀಗ್ ಹೇಳಿದ ಹಾಗೆ ಸ್ಟೇ ಅವರೇ ಕೊಡಿಸುವುದು, ಪುನಃ ಅವರೇ ರೆಸ್ಪೋರ್ ಮಾಡಿಸುವುದು ನಡೆದಿದೆ.

(ಗೊಂದಲ)

ಶ್ರೀ ಬಿ. ಶಿವರಾಮು :- ಪೂರ್ತಿ ಆಹಾರ ಅಧಿಕಾರಿಗಳದ್ದೇ, ಅಧಿಕಾರಿಗಳ ಕೈಯಲ್ಲಿದೆ.

ಶ್ರೀ ಸಾದತ್ ಅಲಿ ಖಾನ್ :- 18 ಸಾವಿರ ಫೇರ್ ಪ್ರೈಸ್ ಶಾಪ್‌ಗಳಲ್ಲಿ ಈ ವರ್ಷ ಎಷ್ಟು ಕ್ಯಾನ್ಸೆಲ್ ಮಾಡಿರುತ್ತೀರಿ ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಕಳೆದ ಒಂದು ವರ್ಷ 752 ಪ್ರಕರಣಗಳು ನಮ್ಮ ಸರಕಾರದ ಗಮನಕ್ಕೆ ಬಂದಿದ್ದವು, ಅದರಲ್ಲಿ 144 ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡಿರುತ್ತೇವೆ. ಕಳೆದ ನವೆಂಬರ್ ತಿಂಗಳಲ್ಲಿ ನಾನು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಹೋಗಿದ್ದಾಗ, ಸಾಗರ ಟೌನ್‌ನಲ್ಲಿ ಅನಿರೀಕ್ಷಿತವಾಗಿ ಅಲ್ಲಿನ ನ್ಯಾಯ ಬೆಲೆ ಅಂಗಡಿಗಳಿಗೆ ಭೇಟಿ ಮಾಡಿದೆ. ಆಗ ಹನ್ನೊಂದೂವರೆ ಹನ್ನೆರಡು ಗಂಟೆ ಟೈಮ್ ಆಗಿತ್ತು. ನಾನು ತಹಸೀಲ್ದಾರ್‌ರವರಿಗೆ ಹೇಳಿದೆ, ನ್ಯಾಯಬೆಲೆ ಅಂಗಡಿಗಳಿಗೆ ಕರೆದುಕೊಂಡು ಹೋಗಿ ಎಂದು ಹೇಳಿದೆ, ಈ ರೀತಿ ಹೋದಾಗ ಅಲ್ಲಿನ ಒಂದು ನ್ಯಾಯಬೆಲೆ ಅಂಗಡಿಯಲ್ಲಿ ಅಕ್ರಮ ನಡೆದಿದ್ದು ಕಂಡು ಬಂದಿತು, ಸ್ಥಳದಲ್ಲಿಯೇ ನಾನು ಅದನ್ನು ರದ್ದು ಮಾಡಬೇಕಾಗಿ ಬಂತು. ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಪೂರ್ಣ ಅಧಿಕಾರ ಕೊಟ್ಟಿದ್ದೇವೆ, ಲೈಸೆನ್ಸ್ ಕೊಡತಕ್ಕದ್ದು, ಲೈಸೆನ್ಸ್ ಕ್ಯಾನ್ಸಲ್ ಮಾಡತಕ್ಕದ್ದು, ಮತ್ತೆ ಅಲಾಟ್‌ಮೆಂಟ್ ಮಾಡತಕ್ಕದ್ದು, ಎಲ್ಲಾ ಜವಾಬ್ದಾರಿ ಕೂಡ ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳನ್ನು ಪರಮಾಧಿಕಾರಿಗಳನ್ನಾಗಿ ಮಾಡಿರುತ್ತೇವೆ. ನಿರ್ದಿಷ್ಟ ಪ್ರಕರಣದಲ್ಲಿ ಹಾಸನ ಜಿಲ್ಲೆಯಲ್ಲಿಯು, ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟಿದ್ದರೂ ಅವರು ಉದಾಸೀನರಾಗಿ ಇದ್ದರೆ, ಅದು ಯಾವ ಪ್ರಕರಣ ಎಂದು ನನ್ನ ಗಮನಕ್ಕೆ ತರುವುದಾದರೆ ನಾನು ಆ ಸ್ಥಳಕ್ಕೆ ಬರುತ್ತೇನೆ, ಖುದ್ದಾಗಿ ಎನ್‌ಕ್ವೈರಿ ಮಾಡುತ್ತೇನೆ ತಪ್ಪಿತಸ್ಥರಾಗಿದ್ದರೆ ಸ್ಥಳದಲ್ಲೇ ರದ್ದು ಮಾಡುತ್ತೇನೆ ಎಂಬ ಭರವಸೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ :- ಮಾನ್ಯ ಮಂತ್ರಿಗಳು ಗಮನಿಸಬೇಕು. ನಾನು ನನ್ನ ಕ್ಷೇತ್ರದಲ್ಲಿ ಸೀಮೆ ಎಣ್ಣೆ ವಿತರಣೆ ವಿಷಯದಲ್ಲಿ ದುರುಪಯೋಗ ಆಗಿದೆ ದುರ್ಬಳಕೆ ಆಗುತ್ತಿದೆ ಇದರಲ್ಲಿ ನ್ಯಾಯಬೆಲೆ ಅಂಗಡಿಯವರು ಮತ್ತು ಸಿಬ್ಬಂದಿ ಸೇರಿಕೊಂಡು ಮಾಡುತ್ತಿದ್ದಾರೆ. ವಿತರಣೆ ಬಹಳ ಕಡಿಮೆ ಮಾಡುತ್ತಿದ್ದಾರೆಂದು ಹೇಳಿದಾಗ ಅದನ್ನು ಗಮನಿಸಿ ತಕ್ಷಣ ಅವರು ಸಿಬ್ಬಂದಿ ಕಳುಹಿಸಿಕೊಟ್ಟರು. ಅವರು 6 ಡಿವಿಜನ್‌ಗಳಲ್ಲಿ 2 ಡಿವಿಜನ್‌ಗಳಿಗೆ ಮಾತ್ರ ಕಳುಹಿಸಿದರು. ಇನ್ನು 4 ಡಿವಿಜನ್ ಗಳಿಗೆ ಕಳುಹಿಸಲಿಲ್ಲ. ಆದರೂ ಇದುವರೆಗೂ ಏನೂ ಬದಲಾವಣೆ ಆಗಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಸಭಾಧ್ಯಕ್ಷಣೆಯವರೇ ನಾನು ಭರವಸೆ ಕೊಡುತ್ತೇನೆ ಈ ಸದನದ ಸನ್ಮಾನ್ಯ ಸದಸ್ಯರುಗಳು ಎಲ್ಲೆಲ್ಲಿ ನನ್ನ ಗಮನಕ್ಕೆ ತಂದಿದ್ದಾರೋ ಅಲ್ಲಿ ನಾನು ನನ್ನ ಕೈಲಾದ ಮಟ್ಟಿಗೂ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈಗಲೂ ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಅವರು ನನ್ನನ್ನು ಎಲ್ಲಿಗೆ ಬೇಕಾದರೂ ಯಾವ ಕ್ಷಣದಲ್ಲಿ ಬೇಕಾದರೂ ಬಂದು ಕರೆದುಕೊಂಡು ಹೋಗಬಹುದು. ಅವರು ಕರೆದ ಗಳಿಗೆಯಲ್ಲಿ ನಾನು ಅವರ ಜೊತೆಯಲ್ಲಿ ಆ ಸ್ಥಳಗಳಿಗೆ ಹೋಗಿ ಅಲ್ಲಿ ಏನಾದರೂ ದುರಪಯೋಗ ನಡೆಯುತ್ತಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದಕ್ಕಿಂತ ಹೆಚ್ಚಿನ ಭರವಸೆ ನಾನೇನು ಕೊಡುವುದಕ್ಕಾಗುತ್ತದೆ?

ಶ್ರೀ ಕೆ. ಸಿದ್ದಯ್ಯ :- ಮಾನ್ಯ ಉಪಾಧ್ಯಕ್ಷಣೆಯವರೇ ಈಗ ಮಾನ್ಯ ಸಚಿವರು ಹೇಳಿದರು, ಆಹಾರ ವಸ್ತುಗಳು ಮತ್ತಿತರ ವಸ್ತುಗಳು ಲಭ್ಯವಾದಾಗ ಎಲ್ಲರಿಗೂ ಕೊಡುತ್ತೇವೆಂದು. ಇವರು ಅಲಾಟ್‌ಮೆಂಟ್ ಮಾಡುವಾಗಲೇ ಇಷ್ಟು ಜನಗಳಿಗೆ ಇಂತಿಷ್ಟು ಎಂದು ಅಲಾಟ್ ಮಾಡುತ್ತಾರೆ. ಆಗ ಲಭ್ಯ ಇರುವ ಪ್ರಶ್ನೆ ಎಲ್ಲಿ ಬರುತ್ತದೆ ? ಎಲ್ಲರಿಗೂ ಲಭ್ಯವಿರುವ ರೀತಿಯಲ್ಲಿ ಕೊಟ್ಟಿರುತ್ತೀರಿ. ಆದರೆ ಅನೇಕರಿಗೆ ಇದನ್ನು ವಿತರಣೆ ಮಾಡುವುದೇ ಇಲ್ಲ, ತಾವು ಎಷ್ಟು ಪ್ರಮಾಣದಲ್ಲಿ ಕೊಡುತ್ತೀರಿ ಅದಕ್ಕೆ ತಕ್ಕ ಹಾಗೆ ಹೆಚ್ಚು ಮಾಡುತ್ತಾರೆ. ಆದ್ದರಿಂದ ತಾವು ಕಮಿಟಿಗಳನ್ನು ಮಾಡಿದರೆ ಒಳ್ಳೆಯದು. ಪ್ರತಿಯೊಂದು ಡಿಪೋಗೆ ಆಯಾಯಾ ಲೆವೆಲ್‌ನಲ್ಲಿ ಕಮಿಟಿಗಳನ್ನು ಮಾಡಿದರೆ ಅನುಕೂಲ ಆಗುತ್ತದೆ. ಈಗ ಒಂದು ಪ್ರದೇಶದಲ್ಲಿ 200 ಜನ ಕಾರ್ಡ್‌ದಾರರು ಇದ್ದರೆ ಅವರಿಗಾಗಿ ಈ ಸಮಿತಿಯನ್ನು ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳಿದಿರಿ. ಮಾಡುವುದಕ್ಕೆ ಸಾಧ್ಯ ಇದೆ. ಆ ಊರಿನ 4 ಜನರು ಆ ಕಮಿಟಿಯಲ್ಲಿ ಇದ್ದರೆ ಅವರೇ ನೋಡಿಕೊಳ್ಳುತ್ತಾರೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ. ಇದನ್ನು ಮಾಡಬಾರದೇಕೆ? ಇದು ರೀಜನಬಲ್ ಆಗಿದೆ. ಇದನ್ನು ಕನ್ಸಿಡರ್ ಮಾಡಿ. ಒಂದೊಂದು ಡಿಪೋಗೆ ಆ ಊರಿನ 4 ಜನಗಳನ್ನೇ ಹಾಕಿ ಇದರ ಬಗ್ಗೆ ತಾವು ಬೇಗ ಕ್ರಮ ಕೈಗೊಂಡರೆ ಒಳ್ಳೆಯದು.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಸದಸ್ಯರು ಎರಡು ಪ್ರಮುಖವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಆಹಾರ ವಸ್ತುಗಳನ್ನು ಕೊಡುತ್ತೇವೆ ಅದು ಜಿಲ್ಲಾ ಮಟ್ಟದಲ್ಲಿ ಇರಬಹುದು ತಾಲ್ಲೂಕು ಮಟ್ಟದಲ್ಲಿ ಆಗಿರಬಹುದು, ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ನಲ್ಲಿ ವಿತರಣಾ ವ್ಯವಸ್ಥೆ ಏನು ಇದೆ ಅದರಂತೆ ಹಂಚಿಕೆಯಾಗುತ್ತಿದೆ. ಅದು ಆಗದಿದ್ದರೆ ನಾವು ಏಪ್ರಿಲ್ ತಿಂಗಳಲ್ಲಿ ಖಡಾಖಂಡಿತವಾಗಿ ನಮಗೆಷ್ಟು ಆಹಾರ ವಸ್ತುಗಳು ಬರುತ್ತವೆ ಅದು ಜಿಲ್ಲಾ ಮಟ್ಟದಲ್ಲಿ ಆಗಿರಬಹುದು ತಾಲ್ಲೂಕು ಮಟ್ಟದಲ್ಲಿ ಆಗಿರಬಹುದು ಆಹಾರ ವಸ್ತುಗಳ ಪ್ರಮಾಣವನ್ನು ಹೆಚ್ಚು ಮಾಡಲು ನಾನು ....

ಶ್ರೀ ಕೆ. ಸಿದ್ದಯ್ಯ :- ಡಿಸ್ಟ್ರಿಬ್ಯೂಶನ್ ಲೆವೆಲ್‌ನಲ್ಲಿ ಕಾರ್ಡ್ ಹೋಲ್ಡರ್ಸ್ ...

ಶ್ರೀ ಟಿ.ಎನ್. ನರಸಿಂಹಮೂರ್ತಿ :- ತಾವೇನು ಸಲಹೆ ಕೊಟ್ಟಿದ್ದೀರಿ ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತೊಂದು, ಕಮಿಟಿ ಮಾಡುವಾಗ 100 ಮತ್ತು 200 ಕಾರ್ಡ್‌ಗಳು ಇದ್ದರೂ ಅಲ್ಲಿ ಸಹ ಮಾಡಿ ಎಂದು ಹೇಳಿದ್ದೀರಿ. ಈ ಒಂದು ಸಲಹೆಯನ್ನು ನಾನು ಮಂತ್ರಿಮಂಡಲದ ಸಭೆಗೆ ತೆಗೆದುಕೊಂಡು ಹೋಗಿ ಅಲ್ಲಿ ಏನು ತೀರ್ಮಾನವಾಗುತ್ತದೆ ಎನ್ನುವುದನ್ನು ನೋಡಬೇಕು ಮತ್ತು ನಾನು ಅಲ್ಲಿ ತಮ್ಮೆಲ್ಲರ ಸಲಹೆಗಳನ್ನು ಇಡುತ್ತೇನೆ. ಅಂತಿಮವಾಗಿ ಏನು ತೀರ್ಮಾನವಾಗುತ್ತದೋ ನೋಡಬೇಕು.

ಶ್ರೀ ಕೆ. ಸಿದ್ದಯ್ಯ :- ಇದರಿಂದ ಸರ್ಕಾರಕ್ಕೆ ಯಾವ ಹಣ ಖರ್ಚಾಗುವುದಿಲ್ಲ.

ಉಪಾಧ್ಯಕ್ಷೆಯವರು :- ಈ ವಿಷಯದಲ್ಲಿ ಬಹಳ ಜನ ಸದಸ್ಯರು ಮಾತನಾಡಬೇಕೆಂದು ಇರುವುದರಿಂದ we will have half-an-hour discussion on some other day.

ಅರ್ಧ ಗಂಟೆ ಚರ್ಚೆಯನ್ನು ಇನ್ನೊಂದು ದಿವಸ ಇಟ್ಟುಕೊಳ್ಳೋಣ.

ಕುಂದಾಪುರ ಸಾರಿಗೆ ಸಂಸ್ಥೆಯ ಡಿಪ್ಪೋದಿಂದ ಕುಂದಾಪುರ ಹಾಲಾಡಿ, ಶಿವಮೊಗ್ಗ, ಬೆಂಗಳೂರು ಮಾರ್ಗವಾಗಿ ಓಡಾಡುವ ಬಸ್ಸು ನಿಲ್ಲಿಸಿರುವ ಬಗ್ಗೆ

1408. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕುಂದಾಪುರ ಸಾರಿಗೆ ಸಂಸ್ಥೆಯ ಡಿಪ್ಪೋದಿಂದ ಕುಂದಾಪುರ ಹಾಲಾಡಿ - ಶಿವಮೊಗ್ಗ - ಬೆಂಗಳೂರು ಮಾರ್ಗವಾಗಿ ಈ ಹಿಂದೆ ಓಡಾಡುತ್ತಿರುವ ಸುವಿಹಾರಿ ಬಸ್ಸನ್ನು ನಿಲ್ಲಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) –

ಅ) ಕುಂದಾಪುರ ಡಿಪ್ಪೋದಿಂದ ಈ ಮಾರ್ಗದಲ್ಲಿ ಸುವಿಹಾರ ಸಾರಿಗೆ ಸೇವೆಯನ್ನು ನಡೆಸಿಲ್ಲ. ಆದಾಗ್ಯೂ ಒಂದು ಐರೆ-ಸುಖಾಸೀನ ಮತ್ತು ಒಂದು ವೇಗದೂತ ಸಾರಿಗೆ ಕಾರ್ಯಾಚರಣೆ ನಡೆಸುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಮಾನ್ಯ ಅಧ್ಯಕ್ಷೆಯವರೇ ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಕುಂದಾಪುರ ಡಿಪ್ಪೋ ಮಾರ್ಗದಿಂದ ಸುವಿಹಾರ ಸಾರಿಗೆ ಸೇವೆಯನ್ನು ನಡೆಸಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಈ ಒಂದು ವ್ಯವಸ್ಥೆ ಇರುವುದನ್ನು ನಾವು ತಮ್ಮ ಗಮನಕ್ಕೆ ತಂದಿದ್ದೇವೆ. ಕಳೆದ ಒಂದು ವರ್ಷದ ಹಿಂದೆ ಸ್ವಾಮಿರಾವ್‌ರವರ ಕ್ಷೇತ್ರಕ್ಕೂ ಈ ಬಸ್ಸು ಓಡಾಡುತ್ತಿತ್ತು. ನಮ್ಮ ಕ್ಷೇತ್ರದ ಜಿ.ಎಸ್. ಆಚಾರ್‌ರವರ ಕ್ಷೇತ್ರಕ್ಕೂ ಈ ಬಸ್ಸು ಓಡಾಡುತ್ತಿತ್ತು. ಆದರೂ ಈ ವಿಷಯ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿರುವುದನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ.

ಶ್ರೀ ಅಜೀಜ್ ಸೇಠ್ :- ನಾನು ನನ್ನ ಉತ್ತರದಲ್ಲಿ ಹೇಳಿದ್ದೇನೆ. ನಮಗೆ ಈ ಎರಡು ವರ್ಷದಿಂದ ಸರಿಯಾಗಿ patronage ಸಿಕ್ಕಿಲ್ಲ. ಆದರೂ ಎರಡು ವರ್ಷ ಈ ಮಾರ್ಗವನ್ನು ನಡೆಸಿದ್ದೇವೆ. ಜನವರಿ 90 ರಿಂದ ಸೆಪ್ಟೆಂಬರ್90 ರವರೆಗೆ ನಮಗೆ ಬರೀ ಲಾಸ್ ಆಗುತ್ತಿತ್ತು. ಆದರಿಂದ ಏನೂ ಪ್ರಾಫಿಟ್ ಆಗುತ್ತಿಲ್ಲ. ಲಾಸ್ ಮಾಡಿಕೊಂಡು ಬರೀ ಒಂದು ರಾಜಕೀಯವಾಗಿ ಲಕ್ಸುರಿ ಬಸ್ ಹಾಕಬೇಕೆಂದರೆ, ಇದು ಕಮರ್ಷಿಯಲ್ ಆರ್ಗನೈಸೇಷನ್. ಲಕ್ಸುರಿ ಬಸ್‌ಗೆ patronage ಮಾಡುವ ಹಾಗಿದ್ದರೆ we will be very happy to put luxury bus and withdraw semi-luxury and express busses but the result shows it is a failure. People have not been travelling in luxury buses. They have been travelling only in semi-luxury and express buses.

ಶ್ರೀ ಬಿ. ಸ್ವಾಮಿರಾವ್ :- ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಹೇಳಿದ ಪ್ರಕಾರ, ಅದು ಲಾಸ್‌ನಲ್ಲಿ ನಡೆಯುವುದಕ್ಕೆ ಕೂಡ ಕಾರಣ ಇಷ್ಟೇ, ಆ ಬಸ್ಸನ್ನು 4 ಜನ ಶಾಸಕರು ತೀರ್ಥಹಳ್ಳಿ ಶಾಸಕರು, ಮತ್ತೆ ಕುಂದಾಪುರ ಶಾಸಕರು ಮತ್ತೆ ಬೈಂದೂರು ಶಾಸಕರು ಸೇರಿ ಬರೆದು ಕೊಟ್ಟಿದ್ದೆವು. ಅದು ಓಡುತ್ತಿತ್ತು. ಆದರೆ ನಾವು ಹೇಳಿದ ರಸ್ತೆಯಲ್ಲಿ ಓಡಿಸುತ್ತಿರಲಿಲ್ಲ. ಬೆಂಗಳೂರು - ಶಿವಮೊಗ್ಗ - ಹೊಸನಗರ - ಕುಂದಾಪುರ ಎಂದು ಹೇಳಿದರೆ ಅದು ಬೆಂಗಳೂರು - ಶಿವಮೊಗ್ಗ - ತೀರ್ಥಹಳ್ಳಿ - ಕುಂದಾಪುರಕ್ಕೆ ಓಡಿಸುತ್ತಿದ್ದರು. ಅಲ್ಲಿ ರಸ್ತೆ ಸರಿಯಿರಲಿಲ್ಲ. ಅಲ್ಲಿ ಜನ ಯಾರೂ ಹತ್ತುತ್ತಿರಲಿಲ್ಲ. ಮಧ್ಯೆ ಮಧ್ಯೆ ರಸ್ತೆಯಲ್ಲಿ ಕೆಟ್ಟುಹೋಗಿ ಅಲ್ಲೆ ನಿಂತು ರಾತ್ರಿಯೆಲ್ಲಾ ತೊಂದರೆ ಪಟ್ಟು ಆ ಬಸ್‌ನ್ನು ಹತ್ತುವಾರದೆಂದು ತೀರ್ಮಾನ ಮಾಡಿ ಅದು ಲಾಸ್ ಆಗಿರಬಹುದು. ಅದು ಬೆಂಗಳೂರಿನಿಂದ ಹೊರಟು ಶಿವಮೊಗ್ಗ - ಹೊಸನಗರ - ಕುಂದಾಪುರಕ್ಕೆ ನೇರವಾಗಿ ಹೋದರೆ ಅದು ಹತ್ತಿರವಾಗುತ್ತದೆ ಹಾಗೂ ಒಳ್ಳೆಯ ರಸ್ತೆಯಲ್ಲಿ ಹೋಗುತ್ತದೆ. ಕೆಟ್ಟ ರಸ್ತೆಯಲ್ಲಿ ಓಡಿಸಿದರೆ ಲಾಸ್ ಆಗುತ್ತದೆ. ಜನ ಯಾರೂ ಹತ್ತುವುದಿಲ್ಲ. ಅದಕ್ಕಾಗಿ ಲಾಸ್ ಆಗಿದೆ.

SRI AZIZ SAIT : I will examine this very sincerely and honestly. I also feel it may be a short-cut and passengers may not feel bored and this distance will also be less. I will do that. I will try for three months.

ಶ್ರೀ ಬಾಬುರಾವ್ ಚೌವಾಣ್ :- ಸನ್ಮಾನ್ಯ ಸಭಾಧ್ಯಕ್ಷಣೆಯವರೆ, ಮಾನ್ಯ ಮಂತ್ರಿಗಳು ಯಾವ ಕಡೆ ಪ್ಯಾಸೆಂಜರ್‌ಗಳು ಸಿಗುತ್ತಾರೋ ಆ ಕಡೆ ಮಾತ್ರ ನಾವು ಹೆಚ್ಚಿಗೆ ಬಸ್ ಓಡಿಸುತ್ತೇವೆಂದು ಯಾವ ಕಡೆ ಪ್ಯಾಸೆಂಜರ್ಸ್ ಸಿಕ್ಕುವುದಿಲ್ಲ ಆ ಕಡೆ ಓಡಿಸುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಲವು ಕಡೆ ಈ ತರಹ ಬಸ್‌ಗಳು ಓಡುತ್ತಿವೆ. ಈ ಬಸ್‌ನಲ್ಲಿ ಯಾರೂ ಕುಳಿತುಕೊಳ್ಳುವುದಿಲ್ಲ. ಆರಾಮವಾಗಿ ಧಾರಾಳವಾಗಿ ಹೋಗುತ್ತಾರೆ ಧಾರಾಳವಾಗಿ ಬರುತ್ತಾರೆ. ಖಾಲಿ ಬಸ್ಸೇ ಬಂದುಬಿಡುತ್ತದೆ. ಕಲೆಕ್ಷನ್ ಇಲ್ಲ. ಇಂಥ ಕಡೆ ಬಸ್‌ಗಳು ಓಡುತ್ತಿವೆ. ಯಾವ ಕಡೆ ಪ್ಯಾಸೆಂಜರ್ಸ್ ಜಾಸ್ತಿ ಇದ್ದಾರೋ, ಯಾವ ಕಡೆ ಒತ್ತಡ ಇದೆಯೋ ಅಲ್ಲಿ ನಿಮ್ಮ ಬಸ್‌ಗಳು ಬಿಡುತ್ತಿಲ್ಲ. ಅದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

SRI AZIZ SAIT : I want separate question for this. This has nothing to do with Gulbarga.

ಶ್ರೀ ಶಫಿ ಅಹಮದ್ :- ಮಾನ್ಯ ಅಧ್ಯಕ್ಷಣೆಯವರೆ, ತುಮಕೂರು ಮಾರ್ಗವಾಗಿ ಬೇರೆ ಜಿಲ್ಲೆಗಳಿಗೆ ಹೋಗುವ ನಾನ್‌ಸ್ಟಾಪ್ ಬಸ್‌ಗಳು ಬೈಪಾಸ್ ರಸ್ತೆಯಲ್ಲಿ ಹೋಗಿಬಿಡುತ್ತವೆ. ಮಾನ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ತಂದಿದ್ದೇವೆ. ಬಸ್‌ಗಳು ಖಾಲಿ ಹೋಗುತ್ತಿವೆ.

ಉಪಾಧ್ಯಕ್ಷಣೆಯವರು :- ಶಫಿ ಅಹಮದ್‌ರವರೇ ಈ ಪ್ರಶ್ನೆ ಅದರಲ್ಲಿ ಬರುವುದಿಲ್ಲ.

ಶ್ರೀ ಶಫಿ ಅಹಮದ್ :- ಬೈಪಾಸ್ ರಸ್ತೆ ಬಿಟ್ಟು ಸ್ಟ್ಯಾಂಡಿಗೆ ಹೋಗಿ, ಹೋದರೆ ಪ್ಯಾಸೆಂಜರ್ ಪಿಕ್‌ಅಪ್ ಆಗುತ್ತದೆ. ತುಮಕೂರು, ಜಿಲ್ಲಾ ಹೆಡ್ ಕ್ವಾರ್ಟರ್ ಇರುವುದರಿಂದ ದಯವಿಟ್ಟು ಸಚಿವರು ಇದರ ಬಗ್ಗೆ ಆದೇಶ ಕೊಟ್ಟು ಬಸ್ ಸ್ಟ್ಯಾಂಡಿಗೆ ಹೋಗಿ ಪ್ಯಾಸೆಂಜರ್ ಪಿಕ್‌ಅಪ್ ಮಾಡಿಕೊಂಡರೆ

ಕಲೆಕ್ಷನ್ ಆಗುತ್ತದೆ. ಜನಗಳಿಗೂ ಅನುಕೂಲವಾಗುತ್ತದೆ ಎನ್ನುವ ವಿಚಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

SRI AZIZ SAI : Madam, this question has nothing to do with the other question. I require notice for hon. members question.

ಪಡಿತರ ಚೀಟಿಯಿಂದ ಎಲ್ಲಾ ಆಹಾರ ಪದಾರ್ಥಗಳ ಖರೀದಿಗೆ ಬಿತ್ತಾಯ

1393. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಪಡಿತರ ಚೀಟಿದಾರರು ತಮಗೆ ಕನಿಷ್ಠ ಅವಶ್ಯಕತೆ ಇರುವ ಆಹಾರ ಪದಾರ್ಥಗಳನ್ನು (ಸಕ್ಕರೆ) ಮಾತ್ರ ಕೊಳ್ಳಲು ಅಪೇಕ್ಷಿಸಿದಾಗ ಪಡಿತರ ಚೀಟಿದಾರರಿಗೆ ಚೀಟಿಯಲ್ಲಿ ನಮೂದಿಸಲಾದ ಎಲ್ಲಾ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಲು ನ್ಯಾಯಬೆಲೆ ಅಂಗಡಿಗಳು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ನ್ಯಾಯಬೆಲೆ ಅಂಗಡಿಗಳು ಕೈಗೊಳ್ಳುತ್ತಿರುವ ಇಂತಹ ಅನೀತಿ ಹಾಗೂ ಅನ್ಯಾಯಕರ ಕ್ರಮಗಳನ್ನು ತಡೆಯುವಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸರ್ಕಾರವು ನಿರ್ದೇಶನ ನೀಡುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಇಲ್ಲ
2) ಉದ್ಭವಿಸುವುದಿಲ್ಲ

ಶ್ರೀ ಎ.ಕೆ. ಅನಂತಕೃಷ್ಣ :- ಮಾನ್ಯ ಅಧ್ಯಕ್ಷಣೆಯವರೆ, ಈ ಒಂದು ಪ್ರಶ್ನೆಯನ್ನು ನಾನು ಹಿಂದೆಯೂ ಹಾಕಿದ್ದೆ. ಆಗಲೂ ಇದೇ ತರಹ ಜವಾಬು ಬಂದಿತ್ತು. ದಯವಿಟ್ಟು ಒಂದು ಪ್ರಶ್ನೆಯನ್ನು ಯಾರಾದರೂ ಮಾನ್ಯ ಸದಸ್ಯರು ಏಕೆ ಹಾಕುತ್ತಾರೆ? ಈ ತರಹ ಗಮನಕ್ಕೆ ಬಂದಿಲ್ಲವೆಂದು ಸರ್ಕಾರ ಹೇಳುವುದಾದರೆ ಇಲ್ಲಿ ಪ್ರಶ್ನೆ ಏಕೆ ಹಾಕಬೇಕು ಎಂದು ಹೇಳಿ. ಇದು ಮೂಲಭೂತವಾದ ಪ್ರಶ್ನೆ. ನಾನು ಕೇಳುವುದಾದರೂ ಏನು?

"Whether it has come to the notice of the Government that the Fair Price Shops are insisting upon purchase of all commodities mentioned in the card even though the card holder wants the minimum items required (viz. Sugar)"

ಅದರಲ್ಲಿ ಏನಾದರೂ ಇದ್ದರೆ, ಒಂದು ಬಿಟ್ಟು ಮಿಕ್ಕದ್ದು ಬೇಡ ಎಂದು ಅಂದರೆ ಉಳಿದದ್ದೂ ತೆಗೆದುಕೊಳ್ಳಬೇಕು ಎಂದರೆ, ಅದು ಗಮನಕ್ಕೆ ಬಂದಿಲ್ಲವೆಂದರೆ ಹೇಳಿದರೆ, The very fact that this question is sent at least 10 days earlier is enough to say that the Government has come to know about it. Can the Government deny that it has come to their notice ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಸಭಾಧ್ಯಕ್ಷಣೆಯವರೆ, ಈಗಾಗಲೇ ಸರ್ಕಾರದ ಉತ್ತರ ಏನಿದೆ? ಅದನ್ನು ಮತ್ತೆ ಸ್ಪಷ್ಟಪಡಿಸುತ್ತಿದ್ದೇನೆ. ನನ್ನ ಗಮನಕ್ಕೆ ಬಂದಿಲ್ಲ. ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ನಿರ್ದಿಷ್ಟವಾಗಿ ಇಂಥ ನ್ಯಾಯಬೆಲೆ ಅಂಗಡಿಗಳಲ್ಲಿ ಅವರು ಏನು ನಾವು ಪಡಿತರ ವಸ್ತುಗಳನ್ನು ಕೊಡುತ್ತಿದ್ದೇವೆ? ಅವರಿಗೆ ಬೇಕಾದ ಒಂದನ್ನು ಕೇಳಿದಾಗ ಎಲ್ಲಾ ತೆಗೆದುಕೊಳ್ಳಿ ಎಂದು ಏನಾದರೂ ಒತ್ತಾಯ ಮಾಡಿದ್ದರೆ, ಅಂಥ ಒಂದು ನಿದರ್ಶನವನ್ನಾದರೂ ತಾವು ನನ್ನ ಗಮನಕ್ಕೆ ತಂದರೆ I will take stringent action against such shops, as identified by the Hon'ble Member of this house.

SRI A.K. ANANTHA KRISHNA : My suggestion is, Government can send out a Circular that no ration shop shall insist upon that all items should be purchased. That is all the question. Can that not be done? ಇದನ್ನು ಸರಕಾರದವರು ಗಮನಿಸಬೇಕು. ಸರಕಾರದ ಸಿಬ್ಬಂದಿಯು ಇರುವುದಾದರೂ ಏತಕ್ಕಾಗಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಅನಂತಕೃಷ್ಣರವರು ಈ ವಿಚಾರವನ್ನು ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಇಲಾಖಾ ಅಧಿಕಾರಿಗಳ ಹತ್ತಿರ ಪ್ರಸ್ತಾಪ ಮಾಡಿದ್ದೇನೆ. ಇವೊತ್ತೇ ನಾವು ಸರ್ಕ್ಯೂಲರ್‌ನ್ನು ಇಷ್ಯೂ ಮಾಡಿ ಯಾವುದಾದರೂ ನ್ಯಾಯಬೆಲೆ ಅಂಗಡಿಗಳಲ್ಲಿ ಇಂಥ ವಸ್ತುಗಳನ್ನು ತೆಗೆದುಕೊಂಡರೆ ಮಾತ್ರ ಇಂಥ ವಸ್ತುಗಳನ್ನು ಕೊಡುತ್ತೇವೆ ಎಂದು ಹೇಳುವುದಾದರೆ ಅಂಥ ಅಂಗಡಿಗಳವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೆ ಸಂಬಂಧಪಟ್ಟ ಸರ್ಕ್ಯೂಲರ್‌ನ್ನು ಇವೊತ್ತೇ ಇಷ್ಯೂ ಮಾಡುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ :- ದಯಮಾಡಿ ಸರ್ಕ್ಯೂಲರ್‌ನ್ನು ಕೂಡಲೇ ಇಷ್ಯೂ ಮಾಡಿ, ಇದನ್ನು ಇಷ್ಯೂ ಮಾಡುವುದಕ್ಕೆ ಸರಕಾರಕ್ಕೆ ಇರುವ ಕಷ್ಟವಾದರೂ ಏನು?

SRI T.N. NARASIMHA MURTHY : – Today before sun–set i am going to issue a circular.

SRI A.K. ANANTHA KRISHNA : – Thank you very much.

ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸುವುದು

1398. ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹೈಸ್ಕೂಲ್‌ಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ.

ಆ) ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಹಲಬಾಗಿಲು ಹಾಗೂ ತೆಲಗಿಯಲ್ಲಿರುವ ಹೈಸ್ಕೂಲನ್ನು ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸುವ ಹೈಸ್ಕೂಲುಗಳು ಖಾಸಗೀಯವರಿಗೆ ವಹಿಸಿ ಕೊಡುವ ಯೋಜನೆ ಏನಾದರೂ ಸರ್ಕಾರದ ಮುಂದೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹೈಸ್ಕೂಲುಗಳ ಪೈಕಿ ಕೆಳಕಂಡ 3 ಹೈಸ್ಕೂಲುಗಳನ್ನು ಮೇಲ್ದರ್ಜೆಗೇರಿಸಲು ಮನವಿ ಬಂದಿರುತ್ತದೆ.

1. ಸರ್ಕಾರಿ ಪ್ರೌಢಶಾಲೆ, ಹಲವಾಗಿಲು
2. ಸರ್ಕಾರಿ ಪ್ರೌಢಶಾಲೆ, ಮತ್ತಿಹಳ್ಳಿ
3. ಸರ್ಕಾರಿ ಪ್ರೌಢಶಾಲೆ, ತೆಲಗಿ

ಮೇಲ್ಕಂಡ ಪ್ರೌಢಶಾಲೆಗಳಲ್ಲಿ ತೆಲಗಿ ಪ್ರೌಢಶಾಲೆಯನ್ನು ಸರ್ಕಾರವು ಈಗಾಗಲೇ ಮೇಲ್ದರ್ಜೆಗೇರಿಸಿದೆ.

ಆ) ತೆಲಗಿಯ ಸರ್ಕಾರಿ ಹೈಸ್ಕೂಲನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 420 ಎಸ್. ಹೆಚ್. ಹೆಚ್. 91 ದಿನಾಂಕ 11.9.91 ರಲ್ಲಿ ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸಿದೆ. ಹಲವಾಗಿಲು ಹೈಸ್ಕೂಲನ್ನು ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಅವಶ್ಯಕತೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ

ಶ್ರೀ ಬಿ.ಹೆಚ್. ಯಂಕಾನಾಯಕ್ :- ಮಾನ್ಯ ಅಧ್ಯಕ್ಷರೇ, ಹರಪನ ಹಳ್ಳಿ ತಾಲ್ಲೂಕು ಇಕ್ಕೇರಿ, ಹಲವಾಗಲು, ತೆಲಗಿ ಮತ್ತಿ ಹಳ್ಳಿಗಳಲ್ಲಿನ ಸರಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸುತ್ತೇವೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಇದರಲ್ಲಿ ತೆಲಗಿ ಗ್ರಾಮದಲ್ಲಿ ಈಗಾಗಲೇ ಖಾಸಗೀಯವರಿಗೆ ತಾವುಗಳು ಪರವಾನಿಗೆಯನ್ನು ಕೊಟ್ಟಿದ್ದೀರಿ. ಮತ್ತಿಹಳ್ಳಿಯಲ್ಲಿ ಖಾಸಗಿಯವರಿಗೆ ಪರವಾನಿಗೆ ಕೊಟ್ಟಿದ್ದೀರಿ. ಸರಕಾರಿ ಕಾಲೇಜನ್ನು ಬಿಟ್ಟು ಹೀಗೆ ಖಾಸಗಿಯವರಿಗೆ ಪರವಾನಿಗೆಯನ್ನು ಕೊಟ್ಟರೆ ಕಷ್ಟವಾಗುತ್ತದೆ. ಆದ್ದರಿಂದ ಸರಕಾರದ ವತಿಯಿಂದಲೇ ಈ ಪದವಿ ಪೂರ್ವ ಕಾಲೇಜುಗಳನ್ನು ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಖಾಸಗೀಯವರಿಗೆ ಈ ಬಗ್ಗೆ ಅವಕಾಶ ಕೊಡದೇ ಸರಕಾರದವರೇ ಈ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ, ಸರಕಾರಿ ಪ್ರೌಢಶಾಲೆ, ತೆಲಗಿ, ಇದನ್ನು ನಾವು 11.9.91 ರ ಸರಕಾರಿ ಆದೇಶದ ಪ್ರಕಾರ ಪದವೀಪೂರ್ವ ಕಾಲೇಜಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. ಬಹುಶಃ ಈ ವರ್ಷ ಅದು ಪ್ರಾರಂಭವಾಗದಿದ್ದರೆ ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ. ಸರಕಾರಿ ಹೈಸ್ಕೂಲ್ ಹಲವಾಗಲು ಮತ್ತು ಮತ್ತಿಹಳ್ಳಿ ಈ ಎರಡನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಪ್ರಸ್ತಾವನೆ ಸರಕಾರದಲ್ಲಿದೆ. ಒಂದು ವೇಳೆ ಅದು ಅಲ್ಲಿ ಅಗತ್ಯ ಇದ್ದರೆ ನಾವು 1992-93 ರಲ್ಲಿ ಅದನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸಧ್ಯಕ್ಕೆ ನಮ್ಮಲ್ಲಿರತಕ್ಕಂಥ ಈ ಮೂರು ಸರಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಪ್ರಸ್ತಾವನೆ ಇದೆ.

ಶ್ರೀ ಬಿ. ಹೆಚ್. ಯಂಕಾನಾಯಕ್ :- ಸರಕಾರದವರು ಪದವಿಪೂರ್ವ ಕಾಲೇಜುಗಳನ್ನು ಮಾಡಿ ನಡೆಸಬೇಕು, ಅದನ್ನು ಬಿಟ್ಟು ಖಾಸಗೀಯವರಿಗೆ ಕೊಟ್ಟರೆ ಅದು ಸರಿಯಲ್ಲ. ಮತ್ತು ಸರಕಾರದ ಪಿಯುಸಿ ಕಾಲೇಜು ಇರುವಾಗ ಖಾಸಗಿಯವರದ್ದು ಇರುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರ ಸಲಹೆಗಳನ್ನು ಗಮನಿಸಲಾಗುವುದು.

ವಿದ್ಯುಚ್ಛಕ್ತಿಯ ಕಳುವಿನ ಪತ್ತೆಗೆ ನೀಡಿದ ಬಹುಮಾನದ ಮೊತ್ತ

1582. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಸರ್ಕಾರ ವಿದ್ಯುಚ್ಛಕ್ತಿ ಕಳವು ಮಾಡುವ ಅಪವಾಧ ಹುಡುಕಿಕೊಟ್ಟವರಿಗೆ ನೀಡಿದ ಬಹುಮಾನದ ಮೊತ್ತ ಎಷ್ಟು? ಹಾಗೂ ಅವುಗಳಿಗೆ ಕಾರಣವಾದ ಉದ್ದಿಮೆಗಳು ಯಾವುವು? (ಉದ್ಯಮಗಾರು ಮತ್ತು ವರ್ಷವಾರು ವಿವರ ನೀಡುವುದು ಮೂರು ವರ್ಷಗಳವರೆಗೆ.)

ಆ) ಈ ಬಹುಮಾನ ನೀಡುವ ಕ್ರಮದಿಂದ ವಿದ್ಯುತ್ತಿನ ಕಳುವಿನ ಪ್ರಮಾಣ ಕಡಿಮೆಯಾಗಿರುವುದು ಕಂಡು ಬಂದಿರುವುದೇ ಹಾಗೂ ಇಂದಿನ ಟ್ರಾನ್ಸ್‌ಮಿಷನ್ ನಲ್ಲಿಯ ಅಪವ್ಯಯದ ಪ್ರಮಾಣ ಎಷ್ಟು?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿರುವುದೇ (ವಿವರ ನೀಡುವುದು)

ಈ) ಸರ್ಕಾರದ ಈ ಪುರಸ್ಕಾರ ಬಹುಮಾನ ಪಡೆದ ವ್ಯಕ್ತಿಗಳು ಯಾರು ಯಾರು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) –

ಅ) ವಿದ್ಯುಚ್ಛಕ್ತಿ ಕಳ್ಳತನದ ಅಪರಾಧವನ್ನು ಹುಡುಕಿಕೊಟ್ಟವರಿಗೆ ಬಹುಮಾನ ನೀಡುವ ಪದ್ಧತಿಯನ್ನು 1990-91ರ ಸಾಲಿನಿಂದ ಚಾರಿಗೊಳಿಸಲಾಗಿದೆ. 1990-91 ಮತ್ತು 1991-92 ರ ಸಾಲಿನ (ಜನವರಿ 1992 ರ ಅಂತ್ಯದವರೆಗೆ) ವಿವರಗಳು ಕೆಳಕಂಡಂತಿವೆ.

ವರ್ಷ		ವಿದ್ಯುಚ್ಛಕ್ತಿ ಕಳ್ಳತನ ಮಾಡುತ್ತಿದ್ದ ಉದ್ಯಮದ ಹೆಸರು	ಅಪರಾಧ ಪುಡುಕಿಕೊಟ್ಟವರಿಗೆ ನೀಡಲಾದ ಬಹುಮಾನದ ಮೊತ್ತ ರೂಪಾಯಿಗಳಲ್ಲಿ
1991–91	1)	ಮೆ: ಪ್ರೇಮಾ ಪ್ರಾಡಕ್ಟ್ಸ್, ಪೀಣ್ಯ ಕೈಗಾರಿಕಾ ಪ್ರದೇಶ ಬೆಂಗಳೂರು	5000–00
	2)	ಮೆ : ಕ್ಲಾಸಿಕ್ ಎಂಟರ್ ಪ್ರೈಸಸ್ ಯಶವಂತಪುರ, ಬೆಂಗಳೂರು	2500–00
			7500–00
1991–92 (ಜನವರಿ 1992ರ ಅಂತ್ಯದವರೆಗೆ)	1)	ಸಿಂಗಸಂದ್ರ , ಬೆಂಗಳೂರಿನಲ್ಲಿರುವ ಎಸ್. ಪಿಟಿ. 360 ಆರ್. ಆರ್. ನಂ. ಹೊಂದಿರುವ ಫ್ಲೋರ್‌ಮಿಲ್‌ನಿಂದ ಒಂದು ನೀರಾವರಿ ಪಂಪುಸೆಟ್ಟಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ	172–00
	2)	ಮೈಸೂರಿನ ಎನ್. ಆರ್. ಮೊಹಲ್ಲಾದಲ್ಲಿರುವ ಎರಡು ಬೈಟಿಂಗ್ ಇನ್ಸ್‌ಟಲೇಷನ್ ಆರ್. ಆರ್. ನಂ.36130 ಮತ್ತು 81386 ಗಳಿಂದ ಪಕ್ಕದಲ್ಲಿನ ವರ್ಕ್‌ಷಾಪ್‌ಗೆ ಅನಧಿಕೃತ ವಿದ್ಯುತ್ ಸಂಪರ್ಕ	206–00
		ಒಟ್ಟು	378–00

ಅ) ಇದರಿಂದ ಸಾರ್ವಜನಿಕರಲ್ಲಿ ಜಾಗೃತಿ ಉಂಟಾಗಿದೆ ಆದರೆ ಬಹುಮಾನವನ್ನು ಸ್ವೀಕರಿಸಲು ಬರುತ್ತಿರುವವರ ಸಂಖ್ಯೆ ಬಹಳ ಕಡಿಮೆ ಬಹಳ ಜನ ಕೇವಲ ಸುಳಿವು ನೀಡಲು ಇಚ್ಛಿಸುತ್ತಾರೆ. 1990–91 ರ ಸಾಲಿನಲ್ಲಿ ವಿದ್ಯುತ್ ಪ್ರಸಾರಣೆ ಮತ್ತು ವಿತರಣೆಯಲ್ಲಿನ ನಷ್ಟ ಶೇ.19.48 ಇದರಲ್ಲಿ ಕಳ್ಳತನದಿಂದ ಉಂಟಾಗುತ್ತಿರುವ ವಿದ್ಯುತ್ ನಷ್ಟವೂ ಸೇರಿದೆ.

ಆ) ಹೌದು. ಮುಖ್ಯವಾಗಿ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ವಿದ್ಯುತ್ ಕಳ್ಳತನವನ್ನು ಪತ್ತೆ ಹಚ್ಚಲು ಮಂಡಳಿಯು ಜಾಗೃತ ದಳವನ್ನು ಹೊಂದಿದ್ದು, ಈ ಜಾಗೃತ ದಳವು ಅನಿರೀಕ್ಷಿತ ದಾಳಿ ನಡೆಸಿ, ವಿದ್ಯುತ್ ಕಳ್ಳತನವನ್ನು ಪತ್ತೆ ಹಚ್ಚುತ್ತಿದೆ.

2) ವಿದ್ಯುತ್ ಪ್ರಸಾರಣೆ ಮತ್ತು ವಿತರಣೆಯಲ್ಲಿ ನಷ್ಟವನ್ನು ಕಡಿಮೆಗೊಳಿಸಲು ಮಂಡಳಿಯು ಕೆಳಕಂಡ ಕ್ರಮಗಳನ್ನು ನಿರ್ವಹಿಸುತ್ತಿದೆ.

ಅ) ಪ್ರತೀ ವರ್ಷ ಹಲವಾರು ಹೊಸ ಹೊಸ ವಿದ್ಯುತ್ ಪ್ರಸಾರಣಾ ಮಾರ್ಗಗಳನ್ನು ಮತ್ತು ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಆ) ಕೆಪಾಸಿಟರ್ ಬ್ಯಾಂಕುಗಳನ್ನು ವಿದ್ಯುತ್ ಸ್ವೀಕರಣಾ ಕೇಂದ್ರಗಳಲ್ಲಿ ಉಪ ವಿದ್ಯುತ್ ಕೇಂದ್ರಗಳಲ್ಲಿ ಸ್ಥಾಪಿಸಲಾಗುತ್ತಿದೆ.

ಇ) ವಿತರಣಾ ವ್ಯವಸ್ಥೆಯಲ್ಲಿ ಹಲವಾರು ಹೊಸ ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ಸ್ಥಾಪನೆ, ಲೈಮಗಳಿಗೆ ಕೆಪಾಸಿಟರ್ ಬ್ಯಾಂಕುಗಳ ಅಳವಡಿಕೆ, ನೇರ ಫೀಡರ್‌ಗಳ ನಿರ್ಮಾಣ, ಮುಂತಾದ ಸುಧಾರಣಾ ಕ್ರಮಗಳನ್ನು ಮಾಡಲಾಗುತ್ತಿದೆ. ಮೇಲಿನ ಎಲ್ಲಾ ಕ್ರಮಗಳನ್ನು ಪ್ರತೀ ವರ್ಷವೂ

ನಿರ್ವಹಿಸಲಾಗುತ್ತಿದ್ದು, ಪ್ರತೀವರ್ಷ ವಿದ್ಯುತ್ ಪ್ರಸಾರಣೆ ಮತ್ತು ವಿತರಣೆಯಲ್ಲಿ ಆಗುತ್ತಿರುವ ನಷ್ಟವನ್ನು ಶೇ.0.5 ರಷ್ಟು ಕಡಿಮೆಗೊಳಿಸಲು ಉದ್ದೇಶಿಸಿದೆ.

ಈ) ವಿದ್ಯುತ್ ಕಳ್ಳತನದ ಸುಳಿವು ನೀಡುವ ವ್ಯಕ್ತಿಗಳ ಹೆಸರುಗಳನ್ನು ಗೋಪ್ಯವಾಗಿಡಲು ನಿರ್ಧರಿಸುವುದರಿಂದ, ವ್ಯಕ್ತಿಗಳ ಹೆಸರುಗಳನ್ನು ತಿಳಿಸಲು ಸಾಧ್ಯವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನನ್ನ ಪ್ರಶ್ನೆ ಪ್ರತಿ ವರ್ಷದಲ್ಲಿ ಕಳುವು ಮಾಡುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು? ಎಷ್ಟು ಕಂಪನಿಗಳು ವಿದ್ಯುತ್‌ನ್ನು ಕಳವು ಮಾಡುತ್ತಾ ಇದ್ದಾರೆ? ಇಂಥ ಕಂಪನಿಗಳ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಂಥ ಪ್ರಕರಣಗಳ ಬಗ್ಗೆ ಸುಳಿವು ನೀಡುವವರಿಗೆ ಬಹುಮಾನ ಕೊಡುವ ಬಗ್ಗೆ ಎಷ್ಟು ಮೊತ್ತವನ್ನು ನಿಗದಿಪಡಿಸಿದ್ದೀರಿ? ಎಂದು ಕೇಳಿದ್ದೇನೆ. ಆದರೆ ಅವರು ಕೊಟ್ಟ ಉತ್ತರವು ಬಹಳ ಏರುಪೇರು ಇದೆ. ಉತ್ತರದಲ್ಲಿ 19.8 ಟ್ರಾನ್ಸ್ ಮಿಶನ್ ಲಾಸ್ ಇದೆ ಎಂದು ಹೇಳಿದ್ದಾರೆ. ಇದರಲ್ಲಿ ಕಳ್ಳತನದಿಂದ ಕೂಡಿರತಕ್ಕಂಥ ಲಾಸ್ ಮತ್ತು ಬೇರೆ ಲಾಸ್ ಎಷ್ಟಾಗುತ್ತದೆ ಎಂಬುದನ್ನು ದಯಮಾಡಿ ತಿಳಿಸಬೇಕು. 1989–90, 1990–91, 1991–92ನೇ ಇಸವಿಯಲ್ಲಿ ಎಷ್ಟು ಟ್ರಾನ್ಸ್‌ಮಿಶನ್ ಲಾಸ್ ಆಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಮಪ್ಪ :- ಟ್ರಾನ್ಸ್‌ಮಿಶನ್ ಲಾಸ್ 19.8 ಎಂದು ಹೇಳಿದ್ದೇನೆ. ಇದರಲ್ಲಿ ಸುಮಾರು 2 ಪರ್ಸೆಂಟ್ ನಷ್ಟು ಕಳ್ಳತನದಿಂದ ಆಗುತ್ತದೆ ಎಂದು ಅರ್ಥವಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಕೇವಲ 2 ಪರ್ಸೆಂಟ್ ನಷ್ಟು ವಿದ್ಯುಚ್ಛಕ್ತಿ ಕಳ್ಳತನದಿಂದ ಲಾಸ್ ಆಗುತ್ತದೆ ಎಂದು ಹೇಳಿದ್ದಾರೆ. ವಿದ್ಯುಚ್ಛಕ್ತಿ ಕೊರತೆ ಈ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಇದೆ ಎನ್ನುವುದು ಸದನದಲ್ಲಿ ಮತ್ತು ಹೊರಗಡೆಯೂ ಚರ್ಚೆಯಾಗಿರುವುದನ್ನು ನಾವು ನೋಡಿದ್ದೇವೆ. ನನ್ನ ಪ್ರಶ್ನೆಗೆ ನೀವು ಉತ್ತರ ಕೊಡಲಿಲ್ಲ, ಕಳೆದ ವರ್ಷ ಎಷ್ಟು ಟ್ರಾನ್ಸ್ ಮಿಶನ್ ಲಾಸ್ ಇತ್ತು, ಅದರಾಚೆ ವರ್ಷ ಎಷ್ಟು ಇತ್ತು, ಎಂದು ತಾವು ಹೇಳಲಿಲ್ಲ.

ಶ್ರೀ ಎಂ. ರಾಮಪ್ಪ :- 89–90 ರಲ್ಲಿ 19.6, 90–91 ರಲ್ಲಿ 19.3, 91–92ರಲ್ಲಿ 19.8 ಅಂತ ಹೇಳಿದ್ದೆನಲ್ಲ!

ಶ್ರೀ ಎಲ್. ಆರ್. ಶಿವರಾಮೇಗೌಡ :- 89–90ಕ್ಕೆ 19.6 ಟ್ರಾನ್ಸ್ ಮಿಶನ್ ಲಾಸ್, 90–91ಕ್ಕೆ 19.3, 91–92ಕ್ಕೆ 19.8 ಟ್ರಾನ್ಸ್‌ಮಿಶನ್ ಲಾಸೆಂದು ಉತ್ತರ ಕೊಟ್ಟಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ವಿದ್ಯುತ್ ಅಭಾವ ಎಷ್ಟಿದೆ ಈ ರಾಜ್ಯದಲ್ಲಿ ವಿದ್ಯುತ್ ಇಲ್ಲದೆ ಅನಾಹುತ ಏನಾಗುತ್ತಿದೆ, ಈ ರಾಜ್ಯದ ಕೈಗಾರಿಕೆಗಳ ಮೇಲೆ, ಈ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಏನಾಗುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಟ್ರಾನ್ಸ್‌ಮಿಷನ್ ಲಾಸ್ ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಇದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ? ಇಂದು ನೀವು ವಿದ್ಯುತ್ ಉತ್ಪಾದನೆ ಮಾಡುವುದು ಮುಖ್ಯವಲ್ಲ, ಸೋರಿಹೋಗುವುದನ್ನು ಕಡಿಮೆ ಮಾಡುವುದು ಬಹಳ ಮುಖ್ಯ. ಸರ್ಕಾರ ಈ ದಿಸೆಯಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ಏನು ಹಾಕಿಕೊಂಡಿದ್ದೀರಿ ತಿಳಿಸಬೇಕು.

ಶ್ರೀ ಎಂ. ರಾಮಪ್ಪ :- ಲೈನ್ಸನ್ನು ಸ್ಟೆಂಥನ್ ಮಾಡುತ್ತಾ ಇದ್ದೇವೆ. ಮಿಕ್ಕ ಕಾರ್ಯಕ್ರಮವನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಇಷ್ಟು ಎಂದು ಹೇಳಲಿಕ್ಕೆ ಬರುವುದಿಲ್ಲ, ಎಂಟೈರ್ ರಾಜ್ಯದಲ್ಲಿ ಒಂದೇ ಸಲ ಮಾಡುತ್ತೇವೆ ಎಂದು ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳದೇ ಹೋದರೆ ವಿದ್ಯುತ್ ಲಾಸಾಗುವುದನ್ನು ನೀವು ನಿಲ್ಲಿಸಲು ಆಗುವುದೇ ಇಲ್ಲ, ಜನರಲ್ ಆಗಿ ನಾವು ನೋಡುತ್ತೇವೆ ಎಂದು ಹೇಳಿಬಿಟ್ಟರೆ ಇದು ನಿರ್ದಿಷ್ಟ ಕಾರ್ಯಕ್ರಮ ಆಗೋದಿಲ್ಲ. ಇದಕ್ಕೆ ನಿರ್ದಿಷ್ಟವಾಗಿ ಸದನದಲ್ಲಿ ನೀವು ಅನೌನ್ಸ್ ಮಾಡಿ. ಉದಾಹರಣೆಗೆ 91–92 ರಲ್ಲಿ ಇಷ್ಟೊಂದು ವಿದ್ಯುತ್ ಕಳುವಾಗಿದ್ದರೂ ಸಹ ಎರಡು ಅಥವಾ ಮೂರು ಕಂಪೆನಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ನಿಮ್ಮ ಇಲಾಖೆಯಲ್ಲಿರುವ ನೌಕರರೇ ಶಾಮೀಲಾಗಿ ವಿದ್ಯುತ್ ಕಳುವು ಮಾಡಿಸಿದ್ದಾರೆ, ಇದರ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು?

ಶ್ರೀ ಎಂ. ರಾಮಪ್ಪ :- ಮಾನ್ಯ ಉಪಾಧ್ಯಕ್ಷೆಣೆಯವರೇ, ಜನರೇಟ್ ಆಗುವುದೆಲ್ಲಾ ಒಂದು ಕಡೆಗೆ. ನಾವು ಉಪಯೋಗಿಸುವುದೆಲ್ಲಾ ಇನ್ನೊಂದು ಕಡೆಗೆ. ಬೇರೆ ಬೇರೆ ಕಡೆಯಲ್ಲಿ ನಾವು ಸಬ್‌ಸ್ಟೇಷನನ್ನು ಮಾಡುತ್ತಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಸಬ್‌ಸ್ಟೇಷನ್‌ಗಳನ್ನು ಮಾಡಿದರೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಎಂ. ರಾಮಪ್ಪ :- ಮಾಡುತ್ತಿದ್ದೇವೆ. ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ನಾವು ಅದನ್ನು ಅಧ್ಯಯನ ಮಾಡಿ ಹೇಳುತ್ತೇವೆ.

ಶ್ರೀ ಬಾಬುರಾವ್ ಚವ್ಹಾಣ್ :- ಮಾನ್ಯ ಉಪಾಧ್ಯಕ್ಷೆಣೆಯವರೇ, ವಿದ್ಯುತ್ತನ್ನು ಕಳ್ಳತನ ಮಾಡತಕ್ಕಂಥವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಮಂತ್ರಿಗಳು ಹೇಳಿದರು. ವಿದ್ಯುಚ್ಛಕ್ತಿಯನ್ನು ಯಾರು ಕದಿಯುತ್ತಾರೆ ಅಂಥವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏತಕ್ಕೆ ತಾವು ಆರ್ಡರ್ಸನ್ನು ಮಾಡುವುದಿಲ್ಲ? ಎರಡನೆಯದು ಹೈದರಾಬಾದ್ - ಕರ್ನಾಟಕ ಭಾಗದಲ್ಲಿ ಕೆಲವು ಸಿಮೆಂಟ್ ಫ್ಯಾಕ್ಟರಿಗಳವರು ವಿದ್ಯುಚ್ಛಕ್ತಿಯನ್ನು ಕಳ್ಳತನ ಮಾಡುತ್ತಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವುದಾದರೂ ರೂಪರೇಷೆಯನ್ನು ತಾವು ತಯಾರು ಮಾಡಿದ್ದೀರಾ?

ಶ್ರೀ ಎಂ. ರಾಮಪ್ಪ :- ಅವರು ಯಾರು, ಎಲ್ಲಿ ಕಳ್ಳತನವನ್ನು ಮಾಡುತ್ತಾರೆ ಎಂದು ತಿಳಿಸಿದರೆ ನಾನು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಹಿಂದೆಮುಂದೆ ನೋಡುವುದಿಲ್ಲ, ಕಂಪ್ಲೇಂಟನ್ನು ಕೊಡುವವರಂತೆ ಭಯ ಬೀಳುತ್ತಿದ್ದಾರೆ. ಕಂಪ್ಲೇಂಟನ್ನು ಕೊಟ್ಟು ಇಂಥಿಂಥಿವರು ಎಂದು ಹೇಳಿದರೆ, ಗುಟ್ಟಾಗಿ ಹೇಳಬಹುದು. ಇಲ್ಲಿ ಹೇಳಿದರೆ ಏನಾಗುತ್ತದೆ ಎಂದರೆ ಮತ್ತೆ ಗುಟ್ಟು ಅದು ರಟ್ಟಾಗುತ್ತದೆ. ಅದು ಬೇಡ. ನೀವು ಕಂಪ್ಲೇಂಟನ್ನು ಕೊಟ್ಟರೆ ಅವರ ಮೇಲೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚವ್ಹಾಣ್ :- ಅಧಿಕಾರಿಗಳಿಗೆ ಗೊತ್ತಿದೆ, ಯಾರು ಕಳ್ಳತನ ಮಾಡುತ್ತಿದ್ದಾರೆಂದು ಗೊತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಕಂಪ್ಲೇಂಟನ್ನು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೀರಾ ? ಅವರ ಆತ್ಮ ಮುಟ್ಟಿ ಹೇಳಲಿ. ಈ ರಾಜ್ಯದಲ್ಲಿ ಎಲ್ಲಿ ಕಳ್ಳತನ ನಡೆಯುತ್ತಿದೆ ಎಂದು ಅವರಿಗೆ ಗೊತ್ತಿದೆ. ಅವರನ್ನು ಹಿಡಿಯಿರಿ ಎಂದು ಹೇಳಿ. ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥದ್ದು ಮುಖ್ಯವಲ್ಲ. ಎಲ್ಲಿ ಸೋರಿ ಹೋಗುತ್ತಿದೆ, ಅದನ್ನು ನಿಲ್ಲಿಸತಕ್ಕಂಥದ್ದು ಮುಖ್ಯ. ಅದಕ್ಕೆ ನಿಮ್ಮ ಅಧಿಕಾರಿಗಳಿಗೆ ಸ್ಟ್ರೂ ಮಾಡಿ ಸೋರುವಿಕೆಯನ್ನು ತಡೆಗಟ್ಟಿ ಎಂದು ಹೇಳುತ್ತಿರುವುದು. ಅದಕ್ಕಾಗಿ ಒಂದು ಕಾರ್ಯಕ್ರಮವನ್ನು ನಿರೂಪಿಸಿ ಎಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಉಪಾಧ್ಯಕ್ಷೆಣೆಯವರೇ, ಇದು ಬಹು ಉಪಯುಕ್ತವಾಗಿರತಕ್ಕಂಥದ್ದು.

ಉಪಾಧ್ಯಕ್ಷರು :- ಬೇರೆಯವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. You please allow others to speak.

ಶ್ರೀ ಟಿ.ಬಿ. ಜಯಚಂದ್ರ :- ಇದು ಏನಾಗಿದೆ ಎಂದು ಹೇಳಿದರೆ ವಿದ್ಯುಚ್ಛಕ್ತಿಯನ್ನು ಕಳ್ಳತನ ಮಾಡುವವರನ್ನು ತೋರಿಸುವುದಕ್ಕೆ ಯಾರು ಬರುತ್ತಿಲ್ಲ ಎನ್ನತಕ್ಕಂಥ ಮಾತನ್ನು ಮಂತ್ರಿಗಳು ಹೇಳುತ್ತಾರೆ. ಇವರ ಎನರ್ಜಿ ಮೀಟರ್ ಇರತಕ್ಕಂಥದ್ದು ಒಂದು ಫ್ಯಾಕ್ಟರಿಯಲ್ಲಿ, ಎಲ್ಲೋ ಒಂದು ಮನೆಯಲ್ಲಿ ಒಳಗೆ ಇರುತ್ತದೆ. ಅದನ್ನು ಬೇರೆಯವರು ಹೇಗೆ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ? ಅದನ್ನು ಕಂಡುಹಿಡಿಯುವುದಕ್ಕೆ ಸಾಮಾನ್ಯ ಜನಗಳಿಂದ ಸಾಧ್ಯವಾಗುವುದಿಲ್ಲ, ಅದು ಆಗುವುದಿಲ್ಲ, ದಯಮಾಡಿ ಅಂಥ ಉತ್ತರಗಳನ್ನು ತಾವು ಕೊಡಬೇಡಿ. ನೀವು ಇಲಾಖೆಯಲ್ಲಿ ಏನು ನಿಮ್ಮ ವಿಜಿಲೆನ್ಸ್ ಇದೆ, ಏನು ನಿಮ್ಮ ಸೆಲ್ ಇದೆ, ಅವರಿಗೇ ಒಂದು ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ಕೊಟ್ಟು ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿ. ದಯಮಾಡಿ ಇದು ನನ್ನ ಸಲಹೆ ಇದೆ.

ಶ್ರೀ ಎಂ. ರಾಮಪ್ಪ :- ನಿರ್ದಿಷ್ಟವಾಗಿ ನೀವು ಕಂಪ್ಲೇಂಟ್ ಕೊಟ್ಟರೆ ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಏಕೆಂದರೆ ಕಳ್ಳರ ಬಗ್ಗೆ ಎಲ್ಲರೂ ನಮಗೆ ಮಾಹಿತಿ ಕೊಡುತ್ತಾ ಇಲ್ಲ, ಮಾಹಿತಿ ಕೊಟ್ಟು ಕೆಲವರಿಗೆ ಏನು ಪ್ರೈಸಸ್ ಕೊಟ್ಟಿದ್ದೇವೆ. ಮಾಹಿತಿ ಕೊಟ್ಟರೆ ಅದು ಗಲಾಟೆಯಾಗುತ್ತದೆ ಎಂದು ಹೇಳಿ, ಧೈರ್ಯವಾಗಿ ಯಾರೂ ಹೊರಕ್ಕೆ ಬರುತ್ತಾ ಇಲ್ಲ, ಎರಡನೆಯದು, ನೀವು ಕೇಳಿರುವುದು ಎಂಟೈರ್ ಸ್ಟೇಟಿನ ಸಂಬಂಧ, ಸ್ಪೆಸಿಫಿಕ್ಕಾಗಿ ನೀವು ಇಂಥ ಲೈನ್‌ನಲ್ಲಿ ಏನಾಗಿದೆ ಎಂದರೆ, ನಾನು ಸ್ಪೆಸಿಫಿಕ್ಕಾಗಿ ನಿಮಗೆ ಹೇಳುತ್ತೇನೆ. ಎಂಟೈರ್ ಸ್ಟೇಟ್‌ನದು ಸ್ಟ್ರೆಂಥನ್ ಮಾಡಬೇಕಾದ ಜವಾಬ್ದಾರಿ ನಮಗಿದೆ, ಅದನ್ನು ಮಾಡುತ್ತಾ ಇದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ :- ಮಂತ್ರಿಗಳು ಉತ್ತರ ಕೊಡುವಾಗ ವಿದ್ಯುತ್ ಕಳುವನ್ನು ಪತ್ತೆ ಹಚ್ಚಲು ಮಂಡಲಿಯು ಜಾಗೃತದಳವನ್ನು ರಚಿಸಿದ್ದು ಅದು ಅನಿರೀಕ್ಷಿತ ಧಾಳಿ ನಡೆಸಿ ವಿದ್ಯುತ್ ಕಳವನ್ನು ಪತ್ತೆ ಹಚ್ಚುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಪತ್ತೆ ಹಚ್ಚುವ ಸಂದರ್ಭದಲ್ಲಿ ಹೆರಾಸ್ಮೆಂಟಾಗುತ್ತದೆಂಬುದೂ ತಮಗೆ ಗೊತ್ತಿದೆ. ಅದಕ್ಕೇನಾದರೂ ಒಂದು ನಿರ್ದೇಶನ ಇದೆಯೇ? ಇಲ್ಲದೆ ಇದ್ದರೆ ಭ್ರಷ್ಟಾಚಾರಕ್ಕೆ ಎಡೆಕೊಟ್ಟಂತಾಗುತ್ತದೆಂಬುದೂ ತಮಗೆ ಗೊತ್ತಿದೆ. ಈಗ ಏನಾಗಿದೆ? ಪ್ರಾಮಾಣಿಕವಾಗಿ ಕರೆಂಟ್ ಉಪಯೋಗಿಸಿ ದುಡ್ಡು ಕಟ್ಟುತ್ತಾ ಇರುವವರ ಮೇಲೆ ವಿನಾಕಾರಣ ಕೇಸ್ ಹಾಕುವಂತಹ ಪ್ರಮೇಯಗಳು ಬೇಕಾದಷ್ಟು ಇವೆ, ನಾನೂ ಕೂಡ ತಮ್ಮ ಗಮನಕ್ಕೆ ಇಂಥವುಗಳನ್ನು ತಂದಿದ್ದೇನೆ. ಮೊನ್ನೆಯ ದಿವಸ ಕೂಡಬೆಲಗೂರು ಎನ್ನುವಲ್ಲಿ ಶ್ರೀ ವಿಜಯಕುಮಾರ್ ಅವರ ಕ್ಷೇತ್ರದಲ್ಲಿ ಆಗಿರುವಂಥದ್ದು. ಒಬ್ಬ ಪ್ರತಿಷ್ಠಿತ ಕೈಗಾರಿಕೆಯವರು ಮೀಟರ್ ಸರಿಯಿಲ್ಲ ಎಂದು ಕಂಪ್ಲೇಂಟ್ ಮಾಡಿದ ಮೇಲೆ ಅದರ ರಿಪೇರಿ ಮಾಡಿಸಬೇಕೆಂದು ಬಂದ ಸಂದರ್ಭದಲ್ಲಿ ಅವರ ಹಣಕ್ಕೋಸ್ಕರ ಆಸೆಪಟ್ಟು, ಕೊಡದೇ ಇದ್ದಾಗ ಅವರ ಮೇಲೆ ಕೇಸ್ ಹಾಕುವ ಒಂದು ಪ್ರಮೇಯ ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ತಂದರೂ ಕೂಡ ಇದರ ಬಗ್ಗೆ ಯಾವುದೇ ತರಹವಾದ ಕಾರ್ಯಕ್ರಮಗಳಾಗಿಲ್ಲ. ಇಲಾಖೆಯಲ್ಲಿ ಏನಾದರೂ ಸ್ಪಷ್ಟವಾದ ನಿರ್ದೇಶನ ಇದೆಯೇ ರೂಲ್ಸ್ ಇದೆಯೇ? ಅದಿಲ್ಲದಿದ್ದರೆ ರೂಲ್ಸನ್ನು ಫ್ರೇಮ್ ಮಾಡಿದರೆ ಪ್ರಾಮಾಣಿಕವಾಗಿ ಪೇಮೆಂಟ್ ಮಾಡುವವರಿಗೆ ಆಗುವ ಕಿರುಕುಳವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ, ಅದರ ಬಗ್ಗೆ ಸ್ಪೆಸಿಫಿಕ್ಕಾಗಿ ಸಚಿವರಿಂದ ಉತ್ತರ ಬಯಸುತ್ತೇನೆ.

ಶ್ರೀ ಎಂ. ರಾಮಪ್ಪ :- ಸ್ಪೆಸಿಫಿಕ್ಕಾಗಿ ನೀವು ಕೇಳಿದ ಕಂಪ್ಲೇಂಟನ್ನು ಪರಿಶೀಲನೆ ಮಾಡಲಿಕ್ಕಾಗಿ ನಾನು ಕಳಿಸಿದ್ದೇನೆ. ಇಂತಹ ಕೆಲಸ ಆಗುತ್ತಾ ಇರುವುದರಿಂದ ಡಿಐಜಿ ಒಬ್ಬರನ್ನು ನೇಮಕ ಮಾಡಿದ್ದೇನೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ :- ನಿಮ್ಮ ಹೇಳಿಕೆಗೆ ನನ್ನ ಸ್ವಾಗತ ಇದೆ. ತುಮಕೂರಿನಲ್ಲಿ ಆಗಿರತಕ್ಕಂಥ ಅವ್ಯವಹಾರವನ್ನು, ಅದೂ ಪ್ರಾಮಾಣಿಕವಾಗಿರತಕ್ಕಂಥ ಒಬ್ಬ ಕೈಗಾರಿಕೋದ್ಯಮಿಗೆ ಆಗಿರತಕ್ಕಂಥ ನೋವನ್ನು ಹೇಳಿದರೆ, ಅದನ್ನು ನೀವು ವಿಚಾರಣೆ ಮಾಡಿಸಿದರೆ ಸತ್ಯಾಂಶ ಏನು ಎಂದು ಹೊರಗೆ ಬರುತ್ತದೆ. ಇದನ್ನು ವಿಚಾರ ಮಾಡಿಸತಕ್ಕಂಥ ಅವಕಾಶವನ್ನು ನೀವು ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ :- ಮಾಡಿಕೊಡುತ್ತೇನೆ.

ಶ್ರೀ ಜಿ.ರಾಜುಗೌಡ :- ಮಾನ್ಯ ಉಪಾಧ್ಯಕ್ಷೆಯವರೇ, ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ ರಾಜವರ್ಧನ್ ಕಮಿಟಿ ಸರ್ಕಾರಕ್ಕೆ ಏನು ಶಿಫಾರಸ್ಸನ್ನು ಮಾಡಿದೆ? ಆ ಶಿಫಾರಸ್ಸನ್ನು ಕಾರ್ಯಗತ ಮಾಡತಕ್ಕಂಥದ್ದು ಒಂದು. ಇಡೀ ದೇಶದಲ್ಲಿಯೇ ಟ್ರಾನ್ಸ್‌ಮಿಷನ್ ಲಾಸ್‌ನ ಅವರೇಜ್ ಎಷ್ಟಿದೆ? ನಮ್ಮಲ್ಲಿ ಅದಕ್ಕಿಂತ ಜಾಸ್ತಿ ಇದೆಯೋ, ಕಡಿಮೆ ಇದೆಯೋ ಎನ್ನುವುದು ಎರಡನೇಯ ಪ್ರಶ್ನೆ. ಮೂರನೇಯ ಪ್ರಶ್ನೆ ಟ್ರಾನ್ಸ್‌ಮಿಷನನ್ನು ಉದ್ದಕ್ಕೆ ಎಳೆಯುವ ಬದಲು ತುಂಡಾಗಿ ಮಾಡಿ. ಎಲ್ಲಲ್ಲಿ ಸಬ್‌ಸ್ಟೇಷನನ್ನು ಮಾಡಿದಾಗ ಟ್ರಾನ್ಸ್‌ಮಿಷನ್ ಲಾಸ್‌ನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಂ. ರಾಮಪ್ಪ :- ಒಳ್ಳೆಯ ಸಲಹೆ. ಕೆಲವರು ಹಿಡಿದುಕೊಟ್ಟಿದ್ದಾರೆ. ಅವರಿಗೆ ನಾವು ಬಹುಮಾನವನ್ನು ಕೂಡ ಕೊಟ್ಟಿದ್ದೇವೆ. ಹಿಡಿದು ಕೊಟ್ಟವರಿಗೆ ನಾವು ಬಹುಮಾನವನ್ನು ಕೊಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ರಮಾನಾಥ ರೈ :- ಮಾನ್ಯ ಉಪಾಧ್ಯಕ್ಷೆಯವರೇ, ಮಾನ್ಯ ಸಚಿವರು .....

SRI QAUMARUL ISLAM : He has used the word 'screw' in what context he has used that word? ಆಫೀಸರನ್ನು ಸ್ಕ್ರೂ ಮಾಡಿ ಎಂದು ಹೇಳಿದರೆ ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದರು?

ಶ್ರೀ ಎಲ್. ಆರ್. ಶಿವರಾಮೇಗೌಡ :- ಆಫೀಸರ್‌ನ್ನು ಸ್ಕ್ರೂ ಮಾಡಿ ಎಂದರೆ ಅವರನ್ನು ಟೈಟ್ ಮಾಡಿ ಎಂದು. ಸ್ಕ್ರೂ ಎಂದರೆ ಸ್ಕ್ರೂ ಡ್ರೈವರ್ ತೆಗೆದುಕೊಂಡು ನಟ್ಟನ್ನು ಟೈಟ್ ಮಾಡುತ್ತಾರಲ್ಲಾ, ಆ ರೀತಿ ಅಧಿಕಾರಿಗಳಿಗೆ ಟೈಟ್ ಮಾಡಿ ಎಂದು. ಆ ರೀತಿ ಅಧಿಕಾರಿಗಳನ್ನು ಟೈಟ್ ಮಾಡಿದರೆ ಅಧಿಕಾರಿಗಳು ಸರಿಹೋಗುತ್ತಾರೆ.

ಶ್ರೀ ರಮಾನಾಥ ರೈ :- ಮಾನ್ಯ ಉಪಾಧ್ಯಕ್ಷೆಯವರೇ, ಮಾನ್ಯ ಸಚಿವರು ವಿದ್ಯುಚ್ಛಕ್ತಿ ಸೋರಿಕೆ ಬಗ್ಗೆ ಕಳಕಳಿಯ ಮಾಡುತ್ತಿದ್ದಾರೆ ಎಂದು ಯಾರಾದರೂ ಹೇಳಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಒಂದು ವೇಳೆ ಆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ ಎಂದು ತೀರ್ಮಾನ ತೆಗೆದುಕೊಳ್ಳಿ. ನಾವು ಯಾರನ್ನಾದರೂ ಹಿಡಿದುಕೊಟ್ಟರೆ ತಾವು ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ತೆಗೆದುಕೊಳ್ಳುತ್ತೇವೆಂದು ಆ ಬಗ್ಗೆ ತಾವು ಭರವಸೆಯನ್ನು ಕೊಡಬೇಕು.

ಶ್ರೀ ಎಂ. ರಾಮಪ್ಪ : ಖಂಡಿತವಾಗಿಯೂ ಮಾಡುತ್ತೇನೆ.

ಹೋಟೆಲ್‌ನಲ್ಲಿ ತಿಂಡಿ ದರಗಳ ಏರಿಕೆ

1349. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ದಿನ ದಿನಕ್ಕೆ ದುಭಾರಿಯಾಗಿ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2) ಹಾಗಿದ್ದಲ್ಲಿ, ಹೋಟೆಲುಗಳ ತಿಂಡಿ ಮತ್ತು ಊಟದ ಬೆಲೆಗಳನ್ನು ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?
3) ಹೋಟೆಲುಗಳಲ್ಲಿನ ಬೆಲೆಗಳನ್ನು ಕಾಲಕಾಲಕ್ಕೆ ತನಿಖೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹೌದು
2) ಹೋಟೆಲು ಮಾಲೀಕರ ಸಂಘದೊಂದಿಗೆ ಆಗಿಂದಾಗ್ಗೆ ಸಭೆ ನಡೆಸಿ ಹೋಟೆಲುಗಳಲ್ಲಿಯ ಬೆಲೆಗಳನ್ನು ಇಳಿಸಲು ಪ್ರಯತ್ನಿಸಲಾಗುತ್ತಿದೆ. ಹೋಟೆಲುಗಳಲ್ಲಿ ತಿಂಡಿ ಹಾಗೂ ಊಟದ ಬೆಲೆಗಳು ಹೆಚ್ಚಾಗುವ ಸಂದರ್ಭದಲ್ಲಿ ಈ ಬೆಲೆಗಳನ್ನು ಇಳಿಸಲು ಯಾವ ಕ್ರಮದ ಅವಶ್ಯಕತೆ ಇದೆ ಎಂಬುದನ್ನು ಕಂಡುಕೊಳ್ಳಲು ಸರ್ಕಾರವು ಆಹಾರ ಮತ್ತು ನಾಗರಿಕ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ದಿನಾಂಕ 07.07.85 ರಂದು ರಚಿಸಿದೆ.
3) ಇಲ್ಲ

ಶ್ರೀ ಎಂ.ವಿ. ವೆಂಕಟಪ್ಪ :- ಮಾನ್ಯ ಉಪಾಧ್ಯಕ್ಷರೆಯವರೆ, ಸಚಿವರು ಉತ್ತರದಲ್ಲಿ 1985 ರಲ್ಲಿಯೇ ಸಮಿತಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಆ ಸಮಿತಿ ಇದುವರೆಗೂ ಎಷ್ಟು ಸಾರಿ ಸೇರಿತ್ತು ಏನು ತೀರ್ಮಾನ ಕೈಗೊಂಡಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಉಪಾಧ್ಯಕ್ಷರೆಯವರೆ, 1985 ರಲ್ಲಿಯೇ ಈ ಸಮಿತಿ ರಚನೆಯಾಗಿದೆ. ತಾವು ಈ ಪ್ರಶ್ನೆಯನ್ನು ಕೇಳಿದಮೇಲೆ ವಿವರವನ್ನು ತರಿಸಿದ್ದೇನೆ. ನಮ್ಮ ಫುಡ್ ಅಂಡ್ ಟ್ರಾನ್ಸ್‌ಪೋರ್ಟ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಈ ಸಮಿತಿ ಆಗಿದೆ. ಅದಕ್ಕೆ ಇನ್ನು 10 ಜನ ಸದಸ್ಯರುಗಳು ಇದ್ದಾರೆ. 1985 ರಲ್ಲಿಯೇ ಸಮಿತಿ ರಚನೆಯಾಗಿದೆ. ಒಮ್ಮೆಯು ಈ ಸಮಿತಿ ಸೇರದೆ ಇರುವುದಕ್ಕೆ ನನಗೂ ಆಶ್ಚರ್ಯವಾಗಿದೆ. ಏತಕ್ಕೆ ಸೇರಿಲ್ಲ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ಇನ್ನು 15 ದಿವಸಗಳೊಳಗಾಗಿ ಸಮಿತಿ ಕೂಡಲೇ ಸೇರಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ :- ತಮಗೆ ಹೋಟಲಿಗೆ ಹೋಗಿ ಅಭ್ಯಾಸ ಇದೆಯೋ ಇಲ್ಲವೋ ಗೊತ್ತಿಲ್ಲ. ಕೆಲವು ಹೋಟಲ್ ನಲ್ಲಿ ದೋಸೆ 8 ರೂಪಾಯಿ ಇದೆ. ಇಡ್ಲಿವಡೆ 6 ರೂಪಾಯಿ ಇದೆ. ಪೂರಿ 8 ರೂಪಾಯಿ ಇದೆ, ಟೀ ಕಾಫಿಯನ್ನು ತೆಗೆದುಕೊಂಡರೆ ಒಟ್ಟು 18 ರೂಪಾಯಿಯಾಗುತ್ತದೆ. ಆ 18 ರೂಪಾಯಿಯನ್ನು ಕೊಟ್ಟು ಬೆಳಿಗಿನ ತಿಂಡಿಯನ್ನು ಮಾಡುವ ಬದಲು 18 ರೂಪಾಯಿಯನ್ನು ಕೊಟ್ಟರೆ ಊಟವನ್ನೇ ಮಾಡಬಹುದು. ಏಷ್ಟೋ ಸಲ ಈ ರೀತಿ ಆಗುತ್ತದೆ. ಬೆಳಿಗ್ಗೆ ಹೊತ್ತು ಊಟಮಾಡುವುದಕ್ಕೆ ಆಗುವುದಿಲ್ಲ. ತಿಂಡಿಯನ್ನು ತಿನ್ನುವಾಗ ಊಟವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ತಾವು ಹೋಟಲಿಗೆ ಹೋಗಿ ಚೆಕ್ ಮಾಡುತ್ತೀರಾ ? ತಾವು ಚೆಕ್ ಮಾಡುವುದಕ್ಕೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗಿ. ಯಾವ್ಯಾವ ಹೋಟಲ್‌ನಲ್ಲಿ ಎಷ್ಟೆಷ್ಟು ಬೆಲೆ ಇದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ನಾನು ಪ್ರತಿಪಕ್ಷದ ನಾಯಕನಾಗಿದ್ದಾಗ ಹೋಟಲಿಗೆ ಹೋಗುತ್ತಿದ್ದೆ. ಈಗ ಮಂತ್ರಿಯಾದಮೇಲೆ ನಾನು ಒಂದು ಸಾರಿಯೂ ಹೋಟಲಿಗೆ ಹೋಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಆಹಾರ ಮಂತ್ರಿಗಳು ತಾವು ಹೋಟಲಿಗೆ ಹೋದರೆ ನಮ್ಮ ತೊಂದರೆಗಳು ಗೊತ್ತಾಗುತ್ತದೆ. ತಾವು ಆದ್ದರಿಂದ ಹೋಟಲಿಗೆ ಹೋಗಬೇಕು.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಉಪಾಧ್ಯಕ್ಷರೆಯವರೆ, ನಾನು ನಮ್ಮ ಎಲ್ಲಾ ಸದನದ ಸದಸ್ಯರಿಗೂ ಕೈಮುಗಿದು ಪ್ರಾರ್ಥನೆ ಮಾಡುತ್ತಾ ನಾಳೆಯಿಂದ ಪ್ರತಿಯೊಬ್ಬ ಸದಸ್ಯರು ನನ್ನನ್ನು ಕರೆಯಿರಿ ನಾನು ಹೋಟಲಿಗೆ ಬರುತ್ತೇನೆ. ನೀವು ಹಣವನ್ನು ಕೊಡಿ.

ಶ್ರೀ ಎಂ. ವಿ. ವೆಂಕಟಪ್ಪ :- ಮಾನ್ಯ ಉಪಾಧ್ಯಕ್ಷರೆಯವರೆ, ನಮ್ಮನ್ನು ಅವರು ಕರೆಯಬೇಕು. ಅವರನ್ನು ನಾವೇಕೆ ಕರೆಯಬೇಕು. ಕೆಲವು ಸ್ಟಾರ್ ಹೋಟಲ್‌ಗಳು ಇವೆ. ಫೈವ್ ಸ್ಟಾರ್, ಸ್ರೀ ಸ್ಟಾರ್ ಹೋಟಲ್‌ಗಳು ಇವೆ. ಅಲ್ಲಿಯೇ ಒಂದು ರೀತಿಯ ಬೆಲೆ ಇದೆ. ಬೇರೆ ಕಡೆ ಒಂದು ತರಹ ಬೆಲೆ ಇದೆ. ಶ್ರೀ ರಾಮುಲು ಅವರು ಮಾನ್ಯ ದಿವಂಗತ ದೇವರಾಜ್‌ರವರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದಾಗ ಈ ಹೋಟಲ್ ನವರ ಸಹವಾಸಕ್ಕೆ ಕೈ ಹಾಕಿ ಮಂತ್ರಿಗಿರಿಯನ್ನು ಕಳೆದುಕೊಂಡರು. ಬಹುಶಃ ಇವರೇನಾದರೂ ಆ ಹೋಟಲ್‌ನವರಿಗೆ ಕೈಹಾಕಿದರೆ ಮಂತ್ರಿಗಿರಿಯನ್ನು ಕಳೆದುಕೊಳ್ಳುವ ಚಾನ್‌ಸಸ್ ಬಂದರೂ ಬರಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ನರಸಿಂಹಮೂರ್ತಿಯವರು ಆಹಾರ ಮಂತ್ರಿಯಾಗಿಯೇ ಇರಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಶ್ರೀಮಾನ್ ಕೆ. ಶಿವರಾಮುಲು ಶ್ರೀಮಾನ್ ದಿವಂಗತ ದೇವರಾಜ್ ಅರಸು ಮಂತ್ರಿಮಂಡಲದಲ್ಲಿ ರಾಜ್ಯ ಸಚಿವರಾಗಿದ್ದಾಗ 20 ಅಂಶದ ಕಾರ್ಯಕ್ರಮಗಳ ಚೌಕಟ್ಟಿನಲ್ಲಿ ನಗರದ ಉಸ್ತುವಾರಿ ಸಚಿವರಾಗಿದ್ದಾಗ ಅಂದಿನ ಧಾರಣೆಗಳು ಜಾಸ್ತಿಯಾಗಿದೆ ಎಂದು ಅವರನ್ನು ಮಾಡಿದ್ದುದು. ನನ್ನ ಮಂತ್ರಿಮಂಡಲ ದೇವರ ಆಶೀರ್ವಾದ ಕಡಿಮೆ ಆದಾಗ ಮಾತ್ರ ಹೋಗುತ್ತದೆ ಹೊರತು ಇಲ್ಲದೆ ಹೋಗುವುದಕ್ಕೆ ಸಾಧ್ಯವಿಲ್ಲ.

SRI AZIZ SAIT : Madam, Deputy Speaker, I have requested to withhold that question No.1352.

MADAM DEPUTY SPEAKER : – We will take it later.

ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್

1319. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಹಕಾರ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ತುಮಕೂರು ಜಿಲ್ಲೆ ಗುಬ್ಬಿ ಪ್ರಾಥಮಿಕ ಅಭಿವೃದ್ಧಿ ಬ್ಯಾಂಕಿನ ಚುನಾವಣೆ ಯಾವ ದಿನಾಂಕದಂದು ನಡೆಯಿತು.

ಆ) ಸ್ಥಳೀಯ ಶಾಸಕರು 3 ಜನ ಸದಸ್ಯರನ್ನು ನಾಮಕರಣ ಮಾಡಬೇಕೆಂದು ಮನವಿ ಸಲ್ಲಿಸಿದ್ದರ ಮೇರೆಗೆ ತಾವುಗಳು ನಾಮಕರಣದ ಆದೇಶ ಮಾಡಿದ್ದು ನಿಜವೆ?

ಇ) ಇದಾದ ಮೇಲೆ ಬೇರೆ ಮೂರು ಜನ ಸದಸ್ಯರನ್ನು ನಾಮಕರಣ ಮಾಡಿದ್ದು ನಿಜವಲ್ಲವೆ?

ಈ) ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಹಾಗೂ ಇದಕ್ಕೆ ನಿಯಮಾವಳಿ ಇದೆಯೇ?

ಉ) ಮತ್ತೆ ಇಬ್ಬರು ಸದಸ್ಯರನ್ನು ನಾಮಕರಣ ಮಾಡಿ ವಾಪಸ್ಸು ಪಡೆದಿದ್ದು ನಿಜವೆ?

ಊ) ನಾಮಕರಣ ಮಾಡಿದಂಥವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಕಾನೂನಿನಲ್ಲಿ ಅವಕಾಶ ಇದೆಯೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) –

ಅ) 3.10.1991

ಆ) ಹೌದು

ಇ) ಹೌದು

ಈ) ಜಿಲ್ಲಾ ಮಂತ್ರಿಗಳ ಮನವಿಯ ಆಧಾರದ ಮೇಲೆ ಮಾಡಲಾಗಿದೆ. ನಿಯಮಾವಳಿ ಇದೆ.

ಉ) ಹೌದು

ಊ) ಇದೆ

SRI G.S. SHIVANANJAPPA :– Madam I don't want to ask supplementaries.

ಗುಲ್ಬರ್ಗ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

349. ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಲ್ಬರ್ಗ ತಾಲ್ಲೂಕಿನ ಗ್ರಾಮೀಣ ಹಾಗೂ ನಗರದ ಒಟ್ಟು ಸರ್ಕಾರದ ಪ್ರಾಥಮಿಕ ಶಾಲೆಗಳ (1 ರಿಂದ 7) ಸಂಖ್ಯೆ ಎಷ್ಟು;

ಆ) ಸರ್ಕಾರದ ಗ್ರಾಮೀಣ ಹಾಗೂ ನಗರದ ಶಿಕ್ಷಕರ ಸಂಖ್ಯೆ ಎಷ್ಟು; (ಬೇರೆ ಬೇರೆ ಆಗಿ ಮಾಹಿತಿ ನೀಡುವುದು)

ಇ) ಗ್ರಾಮೀಣ ಹಾಗೂ ನಗರದ ಮಕ್ಕಳ ಸಂಖ್ಯೆಗಳು ಎಷ್ಟು; (ವಿವರಗಳನ್ನು ನೀಡುವುದು),

ಈ) ಕೆಲವು ಕಡೆ ಮಕ್ಕಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆ ಹೆಚ್ಚಿಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಗುಲ್ಬರ್ಗ ತಾಲ್ಲೂಕಿನಲ್ಲಿ ಅಂತಹ ಶಾಲೆಗಳು ಯಾವುವು? (ವಿವರ ನೀಡುವುದು)

ಊ) ಇದರ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) –

ಬ)

	ಗುಲ್ಬರ್ಗ ನಗರ ಪ್ರದೇಶ	ಗುಲ್ಬರ್ಗ ತಾ. ಗ್ರಾಮೀಣ ಪ್ರದೇಶ
ಸರ್ಕಾರಿ ಪ್ರಾಥಮಿಕ ಶಾಲೆಗಳು ಸಂಖ್ಯೆ	62	225
ಬ) ಸರ್ಕಾರಿ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಖ್ಯೆ	576	421
ಇ) ಸರ್ಕಾರಿ ಪ್ರಾಥಮಿಕ ಶಾಲೆಗಳ ಮಕ್ಕಳ ಸಂಖ್ಯೆ	11,188	35,758

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

ಶ್ರೀ ಬಾಬುರಾವ್ ಚವಾಣ್ :- ಮಾನ್ಯ ಸಭಾಧ್ಯಕ್ಷಣೆಯವರೆ, ಗುಲ್ಬರ್ಗ ತಾಲ್ಲೂಕ್ ಮತ್ತು ಗುಲ್ಬರ್ಗ ಟೌನ್‌ನಲ್ಲಿ ಇರತಕ್ಕ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ಮಕ್ಕಳ ಸಂಖ್ಯೆ ಎಷ್ಟು, ಶಿಕ್ಷಕರ ಸಂಖ್ಯೆ ಎಷ್ಟು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರದಲ್ಲಿ ಗುಲ್ಬರ್ಗ ನಗರದಲ್ಲಿ 11,188 ಮಕ್ಕಳು ಓದುತ್ತಿದ್ದಾರೆ, ಶಿಕ್ಷಕರ ಸಂಖ್ಯೆ 576 ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 35,758 ಮಕ್ಕಳು ಓದುತ್ತಿದ್ದರೆ ಅಲ್ಲಿ 481 ಶಿಕ್ಷಕರು ಇದ್ದಾರೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಮೂಲ ಪ್ರಶ್ನೆಯನ್ನು ಕೇಳುವುದೇನೆಂದರೆ ಗುಲ್ಬರ್ಗಾ ಟೌನ್‌ನಲ್ಲಿ ಇರತಕ್ಕ 11 ಸಾವಿರ ಚಿಲ್ಲರೆ ಮಕ್ಕಳಿಗೆ ತಾವು 576 ಶಿಕ್ಷಕರನ್ನು ಕೊಟ್ಟಿದ್ದೀರಿ. 35 ಸಾವಿರ ಚಿಲ್ಲರೆ ಮಕ್ಕಳಿರುವ ಕಡೆ 481 ಕೊಟ್ಟಿದ್ದೀರಿ ಏಕೆ ? ಎಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ ಅಲ್ಲಿ ಶಿಕ್ಷಕರನ್ನು ಜಾಸ್ತಿಯಾಗಿ ಕೊಟ್ಟಿದ್ದೀರಿ. ಎಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇದೆ ಅಲ್ಲಿ ಶಿಕ್ಷಕರನ್ನು ಕಡಿಮೆ ಕೊಟ್ಟಿದ್ದೀರಿ. ಈ ರೀತಿ ತಾರತಮ್ಯವನ್ನು ಏತಕ್ಕೆ ಮಾಡುತ್ತೀರೆಂದು ತಿಳಿಸಿ?

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ಗುಲ್ಬರ್ಗ ನಗರದಲ್ಲಿರುವಂಥ 53 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈಗಿರುವ ಮಕ್ಕಳ ಮತ್ತು ಶಿಕ್ಷಕರ ಅನುಪಾತದ ಪ್ರಕಾರ ಸುಮಾರು 150 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಹೆಚ್ಚುವರಿಯಾಗಿವೆ. ನಾವು ಮಾಡಿಲ್ಲ, ಹಾಗೆಯೇ ಇದೆ. ಈ ಹೆಚ್ಚುವರಿ ಹುದ್ದೆಗಳನ್ನು ನಾವು ಏಪ್ರಿಲ್ 1992 ರ ಮರ್ಗಾವಣೆಯಲ್ಲಿ ಅನುಪಾತವಿರುವ ಹಾಗೆ 150 ಶಿಕ್ಷಕರನ್ನು ಗುಲ್ಬರ್ಗದಿಂದ ಹೊರಗಡೆ ಕಳುಹಿಸಲೇಬೇಕಾಗುತ್ತದೆ. ಅದಕ್ಕಾಗಿ, ದಯವಿಟ್ಟು ತಾವು ಯಾರು ಆಕ್ಷೇಪ ಮಾಡದೆ ಸಹಕಾರ ಕೊಡಬೇಕೆಂದು ಮಾನ್ಯ ಉಪಾಧ್ಯಕ್ಷಣೆಯವರ ಮುಖೇನ ಕೇಳಿಕೊಳ್ಳುತ್ತೇನೆ. ಬರೀ ಗುಲ್ಬರ್ಗಾ ನಗರದಲ್ಲಿ ಮಾತ್ರವಲ್ಲ, ಅನೇಕ ನಗರಗಳಲ್ಲಿ, ಗ್ರಾಮಾಂತರಕ್ಕೆ ಹೋಗದೆ ನಗರದಲ್ಲೇ ಕೇಂದ್ರೀಕೃತರಾಗಿ ಅನಾವಶ್ಯಕವಾಗಿ ಸಂಬಳ ಪಡೆಯುತ್ತಿದ್ದಾರೆ. ಆದರೆ, ಮಕ್ಕಳಿಗೆ ಪಾಠ ಕಲಿಸುವುದಕ್ಕೆ ಆಗುತ್ತಿಲ್ಲ. ಆದುದರಿಂದ, ಮುಂದಿನ ವರ್ಷದಲ್ಲಿ ಏನು ಮಾಡುತ್ತೇವೆಂದರೆ, ಅನುಪಾತಕ್ಕೆ ಸರಿಯಾಗಿ ಎಲ್ಲಿ ಹೆಚ್ಚು ಶಿಕ್ಷಕರಿದ್ದಾರೆ, ನಾವು ಕಠಿಣವಾದ ನಿಷ್ಪಕ್ಷಪಾತವಾದ ಒಂದು ಅಬ್ಜೆಕ್ಟೀವ್ ಗೈಡ್‌ಲೈನ್ಸ್ ಇಟ್ಟುಕೊಂಡು, ಆ ಪ್ರಕಾರ ನಾವು ಈ ತಾರತಮ್ಯವನ್ನು ಸರಿಪಡಿಸಬೇಕಾಗುತ್ತದೆ. ಇದಕ್ಕೆ ಸದನದಲ್ಲಿರುವ ಎಲ್ಲಾ ಸದಸ್ಯರ ಸಹಕಾರ ಬೇಕಾಗುತ್ತದೆ. We will have an objective guideline.

ಶ್ರೀ ಬಾಬುರಾವ್ ಚವಾಣ್ :- ಮಾನ್ಯ ಉಪಾಧ್ಯಕ್ಷಣೆಯವರೆ, ಗುಲ್ಬರ್ಗ ಟೌನ್ ಆಚೆಯಿರುವ ಒಂದು ಶಾಲೆಯಲ್ಲಿ ಹುಡುಗರು 12 ಮಂದಿ ಇದ್ದಾರೆ, ಶಿಕ್ಷಕರು 12 ಮಂದಿ ಇದ್ದಾರೆ ಎಂದು ನಾನು ಕೇಳಿದ್ದುದು. ಈ ಸರ್ಕಾರಿ ಸ್ಕೂಲ್‌ನಲ್ಲಿ ಓದುತ್ತಿರತಕ್ಕಂಥ ಹುಡುಗರ ಸಂಖ್ಯೆ 12, ಶಿಕ್ಷಕರ ಸಂಖ್ಯೆ ಸಹ 12. ಒಂದೊಂದು ಹುಡುಗರಿಗೆ ಒಬ್ಬೊಬ್ಬ ಶಿಕ್ಷಕರನ್ನು ಕೊಡುತ್ತಿದ್ದರೆ, ಸರ್ಕಾರದ ಹಣ ಹಾಳಾಗುತ್ತದೆ. ಎರಡನೆಯದಾಗಿ, ಹೋದಸಲ ಜಿಲ್ಲಾ ಪರಿಷತ್ ಸದಸ್ಯರು ರಾಜಕೀಯ ಒತ್ತಡ ತಂದು ಹಳ್ಳಿಯಲ್ಲಿರತಕ್ಕಂಥ ಶಿಕ್ಷಕರನ್ನು ಪೂರ್ತಿಯಾಗಿ ಸಿಟಿಗೆ ತಂದು ಹಾಕಿದರು. ನಾವು, ಆ ಶಿಕ್ಷಕರನ್ನು

ಹೊರಗಡೆ ಕಳುಹಿಸಿ ಎಂದು ಡಿಡಿಪಿಐ ಮತ್ತು ಚೀಫ್ ಸೆಕ್ರೆಟರಿಯವರಿಗೆ ಒಂದು ಪತ್ರ ಬರೆದು ಕೊಟ್ಟಿದ್ದೇವೆ. ಆದರೆ, ಒಂದೊವರೆ ವರ್ಷದಿಂದ ಇದು ಆಗುತ್ತಿಲ್ಲ. ಇದರ ಬಗ್ಗೆ ತೀವ್ರ ಕ್ರಮ ಕೈಗೊಂಡು ಸಿಟಿಯಿಂದ ಹೊರಗಡೆ ಕಳುಹಿಸಿ ಹಳ್ಳಿಗಳಲ್ಲಿ ಮಕ್ಕಳಿಗೆ ಶಿಕ್ಷಣ ಸಿಗುವ ಹಾಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ನನ್ನ ಉತ್ತರ ಬಹಳ ಸ್ಪಷ್ಟವಾಗಿದೆ, ನೇರವಾಗಿದೆ. ಏಪ್ರಿಲ್ 1992ರಿಂದ ಹೆಚ್ಚುವರಿ ಯಾರು ಅಧ್ಯಾಪಕರಿದ್ದಾರೆ, ಅವರಿಗೆ ಒಂದು ಅಬ್ಸೆಕ್ಟಿವ್ ಕ್ರೈಟೀರಿಯಾ ಹಾಕಿ, ಅವರನ್ನು ' ನಾವು ಗ್ರಾಮಾಂತರಕ್ಕೆ ಕಳುಹಿಸಿಕೊಡುತ್ತೇವೆ. ಇದು ಗುಲ್ಬರ್ಗಾ ನಗರಕ್ಕೆ ಮಾತ್ರ ಸೀಮಿತವಾಗುವುದಿಲ್ಲ, ಕರ್ನಾಟಕ ರಾಜ್ಯದ ನಗರದಲ್ಲಿ ಎಲ್ಲಿ ಈ ರೀತಿಯಾಗಿ ಕೇಂದ್ರೀಕೃತವಾಗಿದ್ದರೆ, ಅನುಪಾತದ ದೃಷ್ಟಿ ಇಟ್ಟುಕೊಂಡು ನಿಷ್ಪಕ್ಷಪಾತವಾಗಿ, ಏಪ್ರಿಲ್ 1992ರಿಂದ ನಿರ್ದಾಕ್ಷಿಣ್ಯವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಪೇಟೆ ಕಡೆಗೆ ಹೋಗುವುದಕ್ಕೆ ಅಧ್ಯಾಪಕರು ಆಸೆ ಪಟ್ಟಿದ್ದಾರೆ. ಅಲ್ಲದೆ, ಇದರ ಬಗ್ಗೆ ಕೆಲವು ಒತ್ತಡಗಳು ಬರುತ್ತಿರುವುದನ್ನು ಖಂಡಿತವಾಗಿಯೂ ದೃಢ ಸಂಕಲ್ಪದಿಂದ ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಪೇಟೆ-ಪಟ್ಟಣದಲ್ಲಿ ಹೌಸ್ ರೆಂಟ್ ಅಲೊಯೆನ್ಸ್ ಹೆಚ್ಚು ಸಿಗುತ್ತದೋ, ಅಂತಹ ಅಲೋಯೆನ್ಸ್ ಅನ್ನು ಪಳ್ಳಿಯ ಶಾಲೆಯಲ್ಲಿರುವ ಶಿಕ್ಷಕರಿಗೂ ಸಹ ಕೊಟ್ಟರೆ, ಈ ಒಂದು ಒತ್ತಡ ಬರುವುದು ಕಡಿಮೆಯಾಗುತ್ತದೆ ಮಾತ್ರವಲ್ಲದೆ, ಅಧ್ಯಾಪಕರು ಸಹ ಅಂತಹ ಸ್ಥಳಗಳಿಗೆ ಹೋಗುವ ಸಾಧ್ಯತೆಯುಂಟು. ಮಾನ್ಯ ಮಂತ್ರಿವರ್ಯರು ಈ ಕುರಿತು ಆಲೋಚಿಸುತ್ತಾರೆಯೇ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷೀಣಿಯವರೆ, ನಗರಕ್ಕೆ ಕೊಡತಕ್ಕಂಥ ಈ ಭತ್ಯೆ ವಿಚಾರ ಬಹಳ ಮೂಲಭೂತವಾದಂಥ ಪ್ರಶ್ನೆ. ಬಹುಶಃ ಅದು ಇದಕ್ಕೆ ಹೊಂದಿಕೊಂಡಿರುವುದಿಲ್ಲ, ಆದರೆ, ಇಲ್ಲಿ ಪ್ರಶ್ನೆ ಏನೆಂದರೆ, ಶಿಕ್ಷಕರನ್ನು ನೇಮಕ ಮಾಡಿದಾಗ ಅವರು ಎಲ್ಲಿಗಾದರೂ ಹೋಗುವುದಕ್ಕೆ ಸಿದ್ಧರಿರಬೇಕು. ಅನಾವಶ್ಯಕವಾಗಿ ವರ್ಗಾವಣೆಯಾಗಬಾರದು, ಅವರಿಗೆ ಅನಾವಶ್ಯಕವಾಗಿ ಹಿಂಸೆಯಾಗಬಾರದು. ಅದಕ್ಕೋಸ್ಕರ ನಾವು ವರ್ಗಾವಣೆ ವಿಚಾರದಲ್ಲಿ ಒಂದು ಕ್ರೈಟೀರಿಯಾ ಹಾಕಿದ್ದೇವೆ ಮತ್ತು ಅವರ ರಿಕ್ವೆಸ್ಟ್ ಏನಿದೆ, ಅದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ದೃಷ್ಟಿಯಲ್ಲಿ ಪಟ್ಟಣ-ಪ್ರದೇಶಗಳಿಗೆ ಅವಕಾಶ ಸಿಗಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಾ ಸನ್ಮಾನ್ಯ ಸದಸ್ಯರಿಗೆ ನಾವು ಕೃತಜ್ಞತಾಭಾವದಿಂದ ಸ್ಪಷ್ಟಿಸಬೇಕು. ಏಕೆಂದರೆ, ಇದೇ ಪರಿಸ್ಥಿತಿ ಬೆಂಗಳೂರು ನಗರದ ಕಾಲೇಜುಗಳಲ್ಲಿ ಕೂಡ ಇದ್ದು, ಸುಮಾರು 40–50 ಲೆಕ್ಚರರ್ಸ್ super numerary ಅಂದರೆ ಹೆಚ್ಚುವರಿ ಉಪನ್ಯಾಸಕರು ಬೆಂಗಳೂರಿನಲ್ಲಿದ್ದಾಗ ನಾವು ಅವರನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸಿದ್ದೇವೆ. ಅದಕ್ಕೆ ತಾವೆಲ್ಲಾ ಸಹಕಾರ ಕೊಟ್ಟಿದ್ದೀರಿ. ಅದೇ ರೀತಿ ಮುಂದೆಯೂ ಸಹಕಾರ ಕೊಟ್ಟರೆ ನಾವು ಶಿಕ್ಷಕರನ್ನು ಗ್ರಾಮಾಂತರಕ್ಕೆ ಕಳುಹಿಸುತ್ತೇವೆ. ಮತ್ತು ವರ್ಗಾವಣೆ ಮಾಡುವಾಗ ಮನಸ್ಚೇಚ್ಛೆಯಿಂದ ಅಡ್ಡಾದಿಡ್ಡಿಯಾಗಿ ಮಾಡುವುದು ಕೂಡ ತಪ್ಪು. ಅದಕ್ಕೆ ಸರಿಯಾದಂಥ ಗೈಡ್‌ಲೈನ್ಸ್ ಹಾಕಿ, ಆ ಪ್ರಕಾರ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷೀಣಿಯವರು :- ಇದರ ಬಗ್ಗೆ ಸಚಿವರು ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ ಮತ್ತೆ ಕೇಳುವುದೇನಿದೆ?

ಶ್ರೀ ನಾರಾಯಣರಾವ್ ಮನಹಳ್ಳಿ :- ಮಾನ್ಯ ಉಪಾಧ್ಯಕ್ಷೀಣಿಯವರೆ, ನನ್ನದೊಂದು ಕ್ಲಾರಿಫಿಕೇಷನ್ ಇದೆ. ಏನೆಂದರೆ, ಜಿಲ್ಲಾ ಪರಿಷತ್‌ನವರು ಶಿಕ್ಷಕರನ್ನು ವರ್ಗಾವಣೆ ಮಾಡುತ್ತಿದ್ದರು. ತಾವು ಮಾಡುತ್ತಿದ್ದೀರಿ. ಹೀಗಾಗಿ ನಿಮಗೆ ನಮ್ಮ ಸಹಕಾರ ಕೊಡುತ್ತೇವೆ. ಆದರೆ, ಜಿಲ್ಲಾ ಪರಿಷತ್‌ನವರು ಇಂಟರ್‌ಫಿಯರ್ ಮಾಡುತ್ತಾರೆ. ಅದಕ್ಕೋಸ್ಕರ ತಾವು ಏನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ಅಧಿಕಾರದ ವಿಚಾರವನ್ನು ನಾವು ನೋಡಿಕೊಳ್ಳುತ್ತೇವೆ. ಜಿಲ್ಲಾ ಪರಿಷತ್ತಿಗೆ ಹಕ್ಕು ಇದೆ. ಆದರೆ, ಅವರಿಗೆ ಕೆಲವು ಗೈಡ್‌ಲೈನ್ಸ್ ಕೊಡತಕ್ಕಂಥ ಅಧಿಕಾರ ನಮಗಿದೆ.

ಮತ್ತು ಅಧಿಕಾರದ ವಿಚಾರದಲ್ಲಿ ಈ ಸದನ ಪರಮೋಚ್ಚ ಅಥವಾ ಈ ಒಂದು ಸದನದ ಅಪೇಕ್ಷೆ ಪ್ರಕಾರ ನಾವು ಕೆಲಸ ಮಾಡುತ್ತೇವೆ. ಸರ್ಕಾರದ ಏನು ಒಂದು ಸದಿಚ್ಛೆ ಇದೆ, ಅದನ್ನು ನಾವು ಅನುಷ್ಠಾನ ಮಾಡಬೇಕು. It is not a question of exercising power personally. ಅಥವಾ ವೈಯಕ್ತಿಕವಾಗಿ ಫೇವರ್ ಮಾಡತಕ್ಕಂಥಾದ್ದನ್ನು ವರ್ಗಾವಣೆಯಲ್ಲಿ ಉಪಯೋಗ ಮಾಡಬಾರದೆಂಬುದೇ ನಮ್ಮ ಇಚ್ಛೆ. ಸಾರ್ವಜನಿಕರ ಒಂದು ಉದ್ದೇಶ ಈಡೇರಬೇಕಾದರೆ ಏನಾದರೂ ನಿಯಮ, ಅಧಿಕಾರದ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣದ ಪ್ರಶ್ನೆ ಬಂದಾಗ ಅದನ್ನು ನಾವು ಸರಿಮಾಡುತ್ತೇವೆ. ಸರ್ಕಾರದ ಸದಿಚ್ಛೆ ಏನು ಇದೆ ಅದನ್ನು ಈಡೇರಿಸಲು ಏನಾದರೂ ನಿಯಮಗಳಿದ್ದು ಅಥವಾ ಅಧಿಕಾರದ್ದು, ವಿಕೇಂದ್ರೀಕರಣ, ಕೇಂದ್ರೀಕರಣದ ಪ್ರಶ್ನೆ ಬಂದಾಗ ಅದನ್ನು ನಾವು ಸಡಿಲಿಸುತ್ತೇವೆ.

ಶ್ರೀ ಚಿಕ್ಕಮಾದನಾಯಕ್ (ಬಸ್ಮೂರು) :- ಸನ್ಮಾನ್ಯ ಉಪಾಧ್ಯಕ್ಷರೆಯವರೆ, ಕೆಲವು ಮಕ್ಕಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆಯೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದರೆ, ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಗುಲ್ಬರ್ಗಾದ ಹಿರಿಯ ಪ್ರಾಥಮಿಕ ಶಾಲೆಯೊಂದರಲ್ಲಿ 67 ವಿದ್ಯಾರ್ಥಿಗಳಿಗೆ 24 ಶಿಕ್ಷಕರಿದ್ದಾರೆ. ಇದರ ಬಗ್ಗೆ ಗುಲ್ಬರ್ಗಾ ಜಿಲ್ಲಾಪರಿಷತ್ತಿನಲ್ಲಿಯೂ ಸಹ ಚರ್ಚೆಯಾಯಿತು ಅಲ್ಲಿ ಉಪನಿರ್ದೇಶಕರು ಇದನ್ನು ಒಪ್ಪಿಕೊಂಡಿದ್ದಾರೆ. ಇದರ ಮೇಲೆ ಕ್ರಮಕ್ಕೆಗೊಳ್ಳುತ್ತೇವೆಂದು ಹೇಳಿದ ಇಲ್ಲಿಯವರೆಗೂ ಕೂಡ ಯಾವ ಕ್ರಮವನ್ನು ಕೈಗೊಂಡಿಲ್ಲ. ಅಲ್ಲಿ ಈಗಲೂ ಸಹ 67 ಮಂದಿ ವಿದ್ಯಾರ್ಥಿಗಳಿಗೆ 24 ಮಂದಿ ಶಿಕ್ಷಕರಿದ್ದಾರೆ. ಇದು ನಿಜವೆ? ಈ ರೀತಿ ಒಂದು ಕಡೆಯಾದರೆ, ಬೇರೆ ಕಡೆ ಅಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಸೇಡಂ ಮತಕ್ಷೇತ್ರದ ಅಲ್ಲೂರಬಿ ಎನ್ನುವ ಒಂದು ಗ್ರಾಮದಲ್ಲಿ 7ನೇ ತರಗತಿಯಲ್ಲಿ ಒಬ್ಬನೇ ಶಿಕ್ಷಕನಿದ್ದು 150 ವಿದ್ಯಾರ್ಥಿಗಳು ಒಂದೇ ಕೋಣೆಯಲ್ಲಿ ಇದ್ದಾರೆ. ಇಂಥ ವ್ಯವಸ್ಥೆಯನ್ನು ಸರಿಪಡಿಸಬಹುದೇ? ಇಂಥ ವ್ಯವಸ್ಥೆಯನ್ನು ಮಾಡತಕ್ಕ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು? ಮತ್ತೆ ಯಾವಾಗ ಅವರ ಮೇಲೆ ಕ್ರಮಕ್ಕೆಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ :- ಉಪಾಧ್ಯಕ್ಷರೆಯರೆ, ಮಾನ್ಯ ಸದಸ್ಯರು ಹೇಳಿರತಕ್ಕದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಒಂದು ಶಿಕ್ಷಕರ ವರ್ಗಾವಣೆಯ ವಿಚಾರದಲ್ಲಿ ಏನು ಒಂದು ಅವ್ಯವಸ್ಥೆ ಇದೆ ಅದಕ್ಕೆ ನಾನು ಈ ಸದನದಲ್ಲಿ ಕೇಳಿಕೊಳ್ಳುವುದೇನೆಂದರೆ ನಿಮ್ಮ ಸಹಕಾರವಿದ್ದರೆ ಮುಂದೆ ಬರತಕ್ಕ ಸಾರ್ವತ್ರಿಕ ವರ್ಗಾವಣೆಯಲ್ಲಿ ಈ ಒಂದು ಅವ್ಯವಸ್ಥೆಯನ್ನು ಸರಿಮಾಡುತ್ತೇನೆ. ಅದನ್ನು ಸರಿ ಮಾಡಿಯೇ ಮಾಡುತ್ತೇವೆಂದು ಹೇಳಲಿಚ್ಚಿಸುತ್ತೇನೆ.

SRI QUAMARUL ISLAM :– Sir, you have rightly said that teacher pupil ratio should be 1:40. In Gulbarga City there are number of minority institutions which are facing shortage of teachers. So, while transferring the teachers the minority institutions be kept in mind and the ratio is maintained. I want an assurance in this behalf from the Hon'ble Minister.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಪರಿಶಿಷ್ಟ ಜಾತಿ / ಪಂಗಡಗಳ ಅನುದಾನಿತ ಸಂಸ್ಥೆಗಳ ಬಗ್ಗೆ.

1317. ಶ್ರೀ ಆರ್. ಬಿ. ತಿಮ್ಮಾಪುರ (ಮುಧೋಳ):– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಅನುದಾನಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯವಸ್ಥಾಪಕ ಮಂಡಳಿಗಳಿಗೆ ಸೇರಿದ ಸಂಸ್ಥೆಗಳು ಎಷ್ಟು? ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡಕ್ಕೆ ಸೇರಿದ ಸಂಸ್ಥೆಗಳು ಎಷ್ಟು? ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಪದವಿ ಪೂರ್ವ ಹಾಗೂ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಎಷ್ಟು? (ವಿವರ ನೀಡುವುದು)

ಆ) ಉಳಿದ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ಸೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ)	ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಿಕ್ಷಣ ಸಂಸ್ಥೆಗಳು		ಅನುದಾನಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಶಿಕ್ಷಣ ಸಂಸ್ಥೆಗಳು
	ಪದವಿ ಕಾಲೇಜುಗಳು	: 22	8
	ಕಿರಿಯ ಕಾಲೇಜುಗಳು	: 113	56
	ಪ್ರಾಥಮಿಕ ಶಾಲೆಗಳು	: 718	ವಿವರ ಒದಗಿಸಲಾಗುವುದು.
	ಪ್ರೌಢ ಶಾಲೆಗಳು	: 708	355
	ಸಂಯುಕ್ತ ಕಿರಿಯ ಕಾಲೇಜುಗಳು	: 57	15
	ವೃತ್ತಿ ಶಿಕ್ಷಣ ಸಂಸ್ಥೆಗಳು	:	ಸರ್ಕಾರಿ ಮತ್ತು ಖಾಸಗಿ ಕಿರಿಯ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ವಿಷಯಗಳನ್ನು ಭೋದಿಸಲಾಗುತ್ತದೆ.

ಆ) 1987–88 ರ ಹಿಂದೆ ಅನುಮತಿ ನೀಡಲ್ಪಟ್ಟ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಶಾಲೆಗಳಿಗೆ ಈ ಶಾಲೆಗಳು ಅನುದಾನ ಸಂಹಿತೆಗೆ ನಿಯಮಗಳನ್ನು ಪೂರೈಸಿದ್ದಲ್ಲಿ ಹಾಗೂ ಸರ್ಕಾರದ ಹಣಕಾಸಿನ ಲಭ್ಯತೆಗೆ ಒಳಪಟ್ಟು ಅನುದಾನಕ್ಕೆ ಒಳಪಡಿಸಲು ಪರಿಶೀಲಿಸಲಾಗುತ್ತಿದೆ. 1987 – 88 ರಿಂದ ಶಾಶ್ವತ ಅನುದಾನ ರಹಿತ ಎಂಬ ಷರತ್ತಿನ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಡಳಿತ ಮಂಡಳಿಗಳ ಶಾಲೆಗಳು ಸೇರಿದಂತೆ ಎಲ್ಲಾ ವರ್ಗದ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿ ಕೊಡಲಾಗುತ್ತದೆ.

ಶ್ರೀ ಆರ್. ಬಿ. ತಿಮ್ಮಾಪುರ :- ಸನ್ಮಾನ್ಯ ಉಪಾಧ್ಯಕ್ಷರೆಯರೆ, ಉತ್ತರದಲ್ಲಿ ಅನುದಾನಕ್ಕೆ ಒಳಪಡಿಸಿದ ಒಟ್ಟು ಪದವಿ ಕಾಲೇಜುಗಳು 8, ಕಿರಿಯ ಕಾಲೇಜುಗಳು 56, ಪ್ರೌಢ ಶಾಲೆಗಳು 355, ಸಂಯುಕ್ತ ಕಿರಿಯ ಕಾಲೇಜುಗಳು 15 ಎಂದು ಹೇಳಿದ್ದಾರೆ. ಸರ್ಕಾರದ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಸಾಮಾಜಿಕವಾಗಿ ಹಿಂದುಳಿದಿರತಕ್ಕ ಹಿಂದುಳಿದ ಜನಾಂಗದವರಿಂದ ನಡೆಸತಕ್ಕ ಶಾಲಾಕಾಲೇಜುಗಳು ಸಂಸ್ಥಗಳು ತುಂಬಾ ಕಡಿಮೆಯಾಗಿದೆ. ಇಂಥ ಸಂಸ್ಥೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡತಕ್ಕ ಅಥವಾ ಪ್ರೋತ್ಸಾಹವನ್ನು ಕೊಡತಕ್ಕ ಕಾರ್ಯಕ್ರಮವೇನಾದರೂ ಸರ್ಕಾರದಲ್ಲಿ ಇದೆಯೆ? ಇದರ ಜೊತೆಗೆ ವೃತ್ತಿಶಿಕ್ಷಣದ ಬಗ್ಗೆ ಕೇಳಿದಾಗ ಉತ್ತರದಲ್ಲಿ ಇಂಥ ಹಿಂದುಳಿದ ಜಾತಿ ಮತ್ತು ಸಂಸ್ಥೆಗಳವರಿಂದ ಎಷ್ಟು ಶಾಲೆಗಳು ನಡೆಯುತ್ತಿವೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. 1987 – 88 ರಿಂದ ಇಲ್ಲಿಯವರೆಗೆ ಶಾಶ್ವತವಾಗಿ ಅನುದಾನರಹಿತವಾದಂಥ ಶಾಲೆಗಳನ್ನು ತೆರೆಯಲು ಅನುಮತಿ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಹಿಂದುಳಿದ ಜನಾಂಗದ ಅಭಿವೃದ್ಧಿಗೋಸ್ಕರ ಈ ಸಂಸ್ಥೆಗಳ ಬೆಳವಣಿಗೆಗೋಸ್ಕರ ಸರ್ಕಾರ ಏನೇನು ಕಾರ್ಯಕ್ರಮ ಹಾಕಿಕೊಂಡಿದೆ ? ಹಿಂದುಳಿದ ಸಂಸ್ಥೆಗಳ ಬೆಳವಣಿಗೆಯಾಗುವುದಕ್ಕೆ ಮತ್ತು ಹಿಂದುಳಿದಿರತಕ್ಕವರು ಸಾಮಾಜಿಕವಾಗಿ ಸುಧಾರಣೆಯಾಗಬೇಕಾದರೆ ಅವರಿಗೆ ಶಿಕ್ಷಣವು ಅವಶ್ಯಕ ಎನ್ನತಕ್ಕ ಮಾತನ್ನು ನಾವೆಲ್ಲರೂ ಕೇಳಿದ್ದೇವೆ. ಹಾಗೆ ಹಿಂದುಳಿದವರ ಸಂಸ್ಥೆಗಳು ಬೆಳೆಯುವುದಕ್ಕೆ ಸರ್ಕಾರದಿಂದ ಏನು ಕಾರ್ಯಕ್ರಮಗಳು ಇವೆ ಎನ್ನತಕ್ಕ ಮಾತನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷರೆಯವರೆ, ಈಗ ಈ ಪ್ರಶ್ನೆಯಲ್ಲಿ ಖಾಸಗಿ ಪ್ರಾಥಮಿಕ ಶಾಲೆಗಳು, ಎಸ್.ಸಿ. ಎಸ್. ಟಿ. ಮತ್ತು ಉಳಿದದ್ದು ಒಟ್ಟು 4478 ಇದ್ದರೆ, ಏಡೆಡ್ 2052. ಆ ಅನುದಾನಕ್ಕೆ ಒಳಪಡದೇ ಇದ್ದಂತಾದ್ದು 2427, ಅಂದರೆ ಒಟ್ಟು ಜನರಲ್ ಮತ್ತು

ಸಾಮಾನ್ಯ ತರಗತಿಗಳದ್ದೂ ಮೈನಾರಿಟಿಸಿದ್ದೂ ಮತ್ತು ಎಸ್. ಸಿ., ಎಸ್.ಟಿ. ಎಲ್ಲಾ ಸೇರಿಕೊಂಡು. ಎಸ್. ಸಿ., ಎಸ್.ಟಿ. ಮ್ಯಾನೇಜ್‌ಮೆಂಟ್ ಶಾಲೆಗಳು ಒಟ್ಟು 718, ಅದರಲ್ಲಿ ಅನುದಾನಕ್ಕೆ ಒಳಪಟ್ಟಿದ್ದು 538. ಅನ್ ಏಡೆಡ್ 180. ಈಗ ಏನಾಗಿದೆ ಎಂದರೆ ನಾವು 2 ದೃಷ್ಟಿಯಿಂದ ನೋಡಬೇಕು. ಒಂದು ನಾವು ಆಯಾಯ ವರ್ಷ ಎಷ್ಟು ಶಾಲಾಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಿಕ್ಕೆ ನಮ್ಮ ಸಂಪನ್ಮೂಲ ಇದೆ ಅಷ್ಟೆ ಮಂಜೂರು ಮಾಡಿದರೆ ಎಲ್ಲವನ್ನೂ ಸರಿದೂಗಿಸಲು ಸಾಧ್ಯವಾಗುತ್ತದೆ. ಆದರೆ ಬೇಡಿಕೆಗಳು ಅಪಾರವಾಗಿ ಬರುತ್ತವೆ. ಖಾಸಗಿಯಾಗಿ, ಪರಿಶಿಷ್ಟ ಜನಾಂಗ ಪರಿಶಿಷ್ಟ ಪಂಗಡದ ಬೇಡಿಕೆಗಳು ಅಪಾರವಾಗಿ ಬರುತ್ತದೆ. ಅದು ಕಾಲೇಜಿಗೆ ಅಥವಾ ಪದವಿಪೂರ್ವ ಕಾಲೇಜಿಗೆ ' ಅಥವಾ' ಪ್ರೌಢಶಾಲೆಗಳಿಗೂ ಬರುತ್ತದೆ ಅಥವಾ ಪ್ರಾಥಮಿಕ ಶಾಲೆಗಳಿಗೆ ಬರುತ್ತದೆ. ಆಗ ನಾವು ಇಲ್ಲ ಎಂದು ಹೇಳಬೇಕಾಗುತ್ತದೆ. ಏಕೆಂದರೆ ವರ್ಷದಲ್ಲಿ ಸಂಪನ್ಮೂಲ ಇರುವುದಿಲ್ಲ, ಇದು ಸೆಲೆಕ್ಟಿವ್ ಆಗಿ ಆದರೆ ಮಾಡಬಹುದು. ನಾವು ಪ್ರಾರಂಭ ಮಾಡುತ್ತೇವೆ, ನೀವು ಅನುದಾನ ಕೊಡದೇ ಇದ್ದರೂ ಪರವಾಗಿಲ್ಲ ಎಂದು ಅವರು ಹೇಳುತ್ತಾರೆ. ಎಸ್.ಸಿ, / ಎಸ್.ಟಿ. ಮ್ಯಾನೇಜ್‌ಮೆಂಟ್ ಬಂದಾಗ, ಅವರು ನಾವು ಮ್ಯಾನೇಜ್ ಮಾಡುತ್ತೇವೆ ನೀವು ಅನುದಾನಕ್ಕೆ ಒಳಪಡಿಸಬೇಕಾಗಿಲ್ಲ ಅಂಡರ್ ಟೇಕಿಂಗ್‌ನ್ನು ಬಾಂಡ್ ಪೇಪರ್‌ನಲ್ಲಿ ದಸಕತ್ತು ಹಾಕಿಕೊಡುತ್ತೇವೆ, ನಮಗೆ ಶಾಶ್ವತ ಅನುದಾನ ರಹಿತವಾಗಿ ಕೊಡಿ ಎಂದು ಬರೆದುಕೊಟ್ಟಾಗ, ನೀವು ಆಗುವುದಿಲ್ಲ ಎಂದು ಹೇಳತಕ್ಕಂಥ ನಿರ್ಣ ಮಾಡುವುದಕ್ಕಾಗುವುದಿಲ್ಲ, ತಮ್ಮೆಲ್ಲರ ಅಭಿಪ್ರಾಯ ಇದ್ದರೆ ಇಲ್ಲ ಎಂದು ಹೇಳಿಕೆ ಹೇಳಬಹುದು. ಅನುದಾನಕ್ಕೆ ಎಷ್ಟು ಒಳಪಡಿಸಲಿಕ್ಕೆ ಸಾಧ್ಯ ಇದೆ ಅಷ್ಟೆ ಸಂಸ್ಥೆಗಳನ್ನು ನಾವು ಪ್ರಾರಂಭಮಾಡಲಿಕ್ಕೆ ಅನುಮತಿ ಕೊಡಬಹುದು. ಇದು ಒಂದು ಅವಕಾಶ. ಇನ್ನೊಂದು ಅಲ್ಟರ್‌ನೇಟಿವ್ ಆಗಿ ಅಂದರೆ ನಾವು ಅನುದಾನಕ್ಕೆ ಒಳಪಡಿಸಲಿಕ್ಕೆ ಎಷ್ಟು ಸಾಧ್ಯವಾಗುತ್ತದೆ ಅಷ್ಟು ಕೊಡಬಹುದು. ಈಗ ಏನಾಗಿದೆ ಎಂದರೆ 87–88 ರ ವರೆಗೆ ಅನುದಾನ ಕೊಡಬೇಕು ಎನ್ನುವುದು ಸಾಧ್ಯ ಇರತಕ್ಕಂಥದ್ದು, ಇದು ಅನುದಾನ ರಹಿತ ಎಂದು ಹೇಳಿ 87–88 ರಿಂದ ಎಲ್ಲಾ ಸಂಸ್ಥೆಗಳಿಗೆ ಅನುದಾನ ರಹಿತವಾಗಿ ನಾವು ಕೊಡುತ್ತಿರುವಂಥದ್ದು, ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗದವರು ಅನುದಾನರಹಿತವಾಗಿ ಸಂಸ್ಥೆಗಳನ್ನು ನಡೆಸಲಿಕ್ಕೆ ಮೂಲಭೂತವಾಗಿ ಸಾಧ್ಯವಾಗುವುದಿಲ್ಲ, ಇದು ನನ್ನ ಮತ್ತು ಸರ್ಕಾರದ ಅಭಿಪ್ರಾಯವೂ ಕೂಡ ಆಗಿದೆ. ಅದಕ್ಕೆ ಏನಾದರೂ ಉಪಾಯ ಕಂಡುಹಿಡಿಯಬೇಕು ಎಂದು ಈಗ ನಾವು ಒಂದು ಸಮಿತಿ ಮಾಡಿದ್ದೇವೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಕುಲಪತಿಗಳಾಗಿದ್ದ ಡಾ|| ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ. ಸಮಿತಿ ಮಾಡಿ, ಈ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಪಂಗಡಕ್ಕೆ ಒಳಪಟ್ಟಿದ್ದ ಎಷ್ಟು ಸಂಸ್ಥೆಗಳಿವೆ ಅವುಗಳ ಬಗ್ಗೆ ವ್ಯಾಪಕವಾದಂಥ ದೂರು ಕೂಡ ಇದೆ. ಪರಿಶಿಷ್ಟ ವರ್ಗ, ಜನಾಂಗದ ಹೆಸರಿನಲ್ಲಿ ಶೋಷಣೆ ಮಾಡಲಿಕ್ಕೆ ಕೆಲವರು ಸಂಸ್ಥೆಗಳನ್ನು ಮಾಡುತ್ತಿದ್ದಾರೆ, ಅಂಥಾದ್ದನ್ನು ಕಂಡುಹಿಡಿಯಬೇಕು ಮತ್ತು ನಿಜವಾಗಿ ಜೆನಿಯನ್ನಾಗಿ ಪರಿಶಿಷ್ಟ ವರ್ಗ, ಜನಾಂಗ ಅನುದಾನದಲ್ಲಿ ಒಳಪಡಿಸಬೇಕು ಅಂತಹ ಸಂಸ್ಥೆಗಳು ಇದ್ದರೆ ಅದಕ್ಕೆ ಯಾವರೀತಿಯಲ್ಲಿ ಇನ್ನು ಮುಂದೆ ನಾವು ಅನುದಾನರಹಿತ ಷರತ್ತು ಹಾಕದೆ ಆ ಸಂಸ್ಥೆಗಳನ್ನು ಸೇರಿಸಿಕೊಳ್ಳಬೇಕಾದರೆ ಯಾವರೀತಿಯ ಮಾರ್ಗದರ್ಶನ ಮಾಡಬೇಕೆಂದು ನಾವು ಈಗಾಗಲೇ ಒಂದು ಸಮಿತಿಯನ್ನು ಮಾಡಿದ್ದೇವೆ. ಅದರ ವರದಿ ಬಂದಕೂಡಲೇ ನಾವು ಕ್ರೈಟೀರಿಯಾ ಫಿಕ್ಸ್ ಮಾಡುತ್ತೇವೆ. ಮತ್ತೆ ಜನರಲ್ ಸಂಸ್ಥೆಗಳಿಗೂ ಕೂಡ ಈ ರೀತಿ ಮಾಡಿದ್ದೇವೆ. ಅದು ಬೇರೆ, ಇದು ಬೇರೆ. ಮೂರನೆಯದಾಗಿ ನಾವು ಎಲ್ಲವನ್ನೂ ಒಂದೇ ವರ್ಷದಲ್ಲಿ ಅನುದಾನಕ್ಕೆ ಒಳಪಡಿಸಲಿಕ್ಕೆ ಆಗುವುದಿಲ್ಲ, ಪರಿಶಿಷ್ಟ ವರ್ಗಕ್ಕೆ ಸೇರಿದಂಥ ಸಂಸ್ಥೆಗಳದ್ದು ಒಂದು ಸೀನಿಯಾರಿಟಿ ಪಟ್ಟಿ, ಪರಿಶಿಷ್ಟ ಪಂಗಡಕ್ಕೆ ಸೇರಿರುವಂಥದ್ದು ಮತ್ತೊಂದು ಸೀನಿಯಾರಿಟಿ ಪಟ್ಟಿ, ಮೈನಾರಿಟಿ ಸಂಸ್ಥೆಗೆ ಸೇರುವಂಥಾದ್ದು ಒಂದು ಜೇಷ್ಠತಾ ಪಟ್ಟಿ, ಮತ್ತು ಬ್ಯಾಕ್ ವರ್ಡ್ ಕ್ಲಾಸಿಗೆ ಸೇರುವಂಥಾದ್ದು ಒಂದು ಜೇಷ್ಠತಾ ಪಟ್ಟಿ. ಜನರಲ್‌ಗೆ ಸೇರುವಂಥಾದ್ದು ಒಂದು ಜೇಷ್ಠತಾ ಪಟ್ಟಿ. ಮತ್ತೆ ಇದನ್ನು ಡಿವಿಜನ್‌ವೈಸ್, ಡಿಸ್ಟ್ರಿಕ್‌ವೈಸ್ ಮಾಡುತ್ತೇವೆ. ಕೆಲವು ಸಾರಿ ಸೀನಿಯಾರಿಟಿ ಎಂದು ಹೇಳಲಿಕ್ಕೆ ಹೋದಾಗ ಒಂದು ಭಾಗ ಮಾತ್ರ ಬರುತ್ತದೆ. ಕೆಲವು ಭಾಗ ಬಿಟ್ಟೇ ಹೋಗುತ್ತದೆ. ಅದು ಮಾಡಬಾರದು. ಪ್ರಾದೇಶಿಕವಾಗಿ ಸಮಾನತೆ ಬರಬೇಕು ಆಯಾಯ ವರ್ಷದಲ್ಲಿ,

ಎಲ್ಲರಿಗೂ ಅನುಕೂಲ ಸಿಗಬೇಕು ಮತ್ತು ಬೇರೆ ಬೇರೆ ವರ್ಗಗಳಿಗೆ ಸೇರಿದಂಥ ಸಂಸ್ಥೆಗಳಿಗೆ ಕೂಡ ಸರಿಸಮಾನವಾಗಿ ನಾವು ಆಯಾಯ ವರ್ಷ ಅನುದಾನ ಕೊಡುವಾಗ ಅದು ಹಂಚಿಕೆಯಾಗಬೇಕು ಎಂಬ ಉದ್ದೇಶದಿಂದ ಈ ಕೈಟೀರಿಯಾ ಮಾಡಿದ್ದೇವೆ. ಇನ್ನು 10 ದಿವಸದಲ್ಲಿ ಈ ಜೇಷ್ಠತಾ ಪಟ್ಟಿ ತಯಾರು ಆಗುತ್ತದೆ. ಆಗ ಈ ಅನುದಾನಕ್ಕೆ ಸೇರಲಿಕ್ಕೆ ಯಾವುದು ಬಾಕಿ ಉಳಿದಿವೆ ಅಂದರೆ ಅರ್ಹತೆಯನ್ನು ಪಡೆದಂಥ ಸಂಸ್ಥೆ, ಅದು ಪರಿಶಿಷ್ಟ ವರ್ಗ ಇರಬಹುದು ಅಥವಾ ಬೇರೆ ವರ್ಗಕ್ಕೆ ಸೇರಿದ್ದು ಇರಬಹುದು, ಅದರ ಬಗ್ಗೆ ನಾವು ಸರಿಯಾದಂಥ ಒಂದು ವ್ಯವಸ್ಥೆ ಅಥವಾ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ಬಿ. ತಿಮ್ಮಾಪುರ :- ಈ ಸಮಿತಿಯನ್ನು ನೇಮಕ ಮಾಡಿರತಕ್ಕದ್ದು ಎಸ್.ಸಿ., ಎಸ್.ಟಿ. ಸಂಸ್ಥೆಗಳನ್ನು ಯಾರು ನಡೆಸುತ್ತಿದ್ದಾರೆ, ಆ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದಕ್ಕಾಗಿಯೋ ಅಥವಾ ಅವುಗಳ ಬೆಳವಣಿಗೆಗಾಗಿಯೋ ? ಪರಿಶಿಷ್ಟ ಜಾತಿ ಮತ್ತು ವರ್ಗದ ಸಂಸ್ಥೆಗಳಿಗೆ ಅನುದಾನವನ್ನು ಕೊಡುವುದಕ್ಕೆ ಮಾತ್ರವೇ ಅಥವಾ ಬೇರೆಯವರು ಏನು ನಡೆಸುತ್ತಿದ್ದಾರೆ ಅವರಿಗೂ ಅನುದಾನ ಕೊಡುವುದಕ್ಕೋ ಅಥವಾ ಕ್ಲೋಸ್ ಮಾಡುವುದಕ್ಕೋ, ಯಾವ ಉದ್ದೇಶಕ್ಕೋಸ್ಕರ ಈ ಸಮಿತಿಯನ್ನು ನೇಮಕ ಮಾಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ :- ಈಗ ಏನು ಕೆಲವು ಅವ್ಯವಸ್ಥೆಗಳಿವೆ, ಯಾವುದು ಬೋಗಸ್ ಸಂಸ್ಥೆಗಳಿವೆ ಅವುಗಳ ವಿಚಾರದಲ್ಲಿ, ಮತ್ತು ಯಾವರೀತಿ ಕಾರ್ಯಕ್ರಮವನ್ನು ಹಾಕಿಕೊಂಡರೆ ಎಸ್.ಸಿ., ಎಸ್.ಟಿ., ಸಂಸ್ಥೆಗಳಿಗೆ ಅನುದಾನ ಕೊಡುವುದಕ್ಕೆ ಸಾಧ್ಯ ಎಂಬ ಬಗ್ಗೆ ಮಾರ್ಗದರ್ಶನ ಕೊಡುವ ಸಲುವಾಗಿ ನಾವು ಈ ಸಮಿತಿಯನ್ನು ನೇಮಕ ಮಾಡಿದ್ದೇವೆ.

ಶ್ರೀ ಎಂ. ಮಹದೇವ್ :- ಎಸ್.ಸಿ.: ಎಸ್.ಟಿ. ಸಂಸ್ಥೆಗಳು ಬ್ಯಾಕ್ ವರ್ಡ್ ಕ್ಲಾಸ್, ಸಂಸ್ಥೆಗಳು, ಎಂದು ಹೇಳಿಕೊಂಡು ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಕೆಲವರು ಸೇವೆ ಮಾಡುತ್ತಿದ್ದಾರೆ. ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದಾದರೆ, ಆರ್ಥಿಕವಾಗಿ ಹಿಂದುಳಿದಂಥ ವರ್ಗದವರು ಯಾರಿದ್ದಾರೆ ಅವರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತೇವೆಂದು ಮುಂದೆ ಬಂದಾಗ, ಅವರು ಕೇಳುವಂಥ ತಾಂತ್ರಿಕ ಕಾಲೇಜುಗಳನ್ನು ಕೊಡುವುದಕ್ಕೆ ಸರ್ಕಾರ ಮುಂದೆ ಬರುತ್ತದೆಯೇ? ಅದಕ್ಕೆ ಪ್ರೋತ್ಸಾಹ ಕೊಡುತ್ತದೆಯೇ ಎಂಬುದನ್ನು ನಾನು ಈ ಸದನದಲ್ಲಿ ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸರ್ಕಾರ ಇದಕ್ಕೆ ಪ್ರೋತ್ಸಾಹ ಕೊಡುತ್ತದೆ.

ರಾಜಾಜಿನಗರ ಕ್ಷೇತ್ರದಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ

1412. ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ):– ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬೇಕಿರುವ ವಿದ್ಯುತ್ ಬೇಡಿಕೆ ಪ್ರಮಾಣವೆಷ್ಟು?

ಆ) ಈ ವಿದ್ಯುತ್ ಬೇಡಿಕೆಯನ್ನು ನಿವಾರಿಸಲು ಎಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ನಿಯೋಜಿಸಲಾಗಿದೆ?

ಇ) ಹಾಗಿದ್ದಲ್ಲಿ, ಎಂದಿನಿಂದ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು ಹಾಗೂ ಯಾವ ಯಾವ ಸ್ಥಳಗಳಲ್ಲಿ ಅಳವಡಿಸಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) –

ಅ) ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾಲಿ ಬೇಕಿರುವ ವಿದ್ಯುತ್ ಬೇಡಿಕೆಯ ಪ್ರಮಾಣ ಸುಮಾರು 2.1 ಮೆಗಾವ್ಯಾಟ್.

ಅ) 34 ವಿತರಣಾ ಟ್ರಾನ್ಸ್‌ಫಾರ್ಮರ್ ಗಳನ್ನು ಅಳವಡಿಸಲು ಯೋಜಿಸಿದೆ.

ಇ) ಕೆಲವು ಸ್ಥಳಗಳಲ್ಲಿ ಕೆಲಸವು ಪ್ರಗತಿಯಲ್ಲಿದೆ ಉಳಿದ ಕಡೆಗಳಲ್ಲಿ ಕೆಲಸವನ್ನು 1992–93 ರ ಸಾಲಿನಿಂದ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು. ಸ್ಥಳದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ..

ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಲಕ್ಷ್ಮಣ ಅವರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1412 ಕ್ಕೆ ಅನುಬಂಧ.

ಕ್ರಮ. ಸಂಖ್ಯೆ	ವಿತರಣಾ ಟ್ರಾನ್ಸ್ ಫಾರ್ಮರ್ ಸ್ಥಾಪಿಸುವ ಸ್ಥಳ	ಟ್ರಾನ್ಸ್ ಫಾರ್ಮರ್‌ನ ಸಾಮರ್ಥ್ಯ		ಷರಾ
1.	ಐ.ಆರ್.ಬ್ಲಾಕ್, ರಾಜಾಜಿನಗರ	250	ಕೆವಿಎ	ಕೆಲಸ ಪ್ರಗತಿಯಲ್ಲಿದೆ.
2.	1ನೇ ಬ್ಲಾಕ್, ರಾಜಾಜಿನಗರ	250	"	ಕೆಲಸ ನಿರ್ವಹಿಸಬೇಕಾಗಿದೆ.
3.	5ನೇ ಬ್ಲಾಕ್, ರಾಜಾಜಿನಗರ	250	"	–"–
4.	ಜೂಗನಹಳ್ಳಿ	250	"	–"–
5.	4ನೇ ಎಮ್ ಬ್ಲಾಕ್	250	"	–"–
6.	ಪ್ರಮೋದ್ ಥಿಯೇಟರ್ ಹತ್ತಿರ	500	"	–"–
7.	46ನೇ ಕ್ರಾಸ್, 3ನೇ ಬ್ಲಾಕ್ ರಾಜಾಜಿನಗರ,	250	"	–"–
8.	ರಾಮಕುಮಾರ್ ಮಿಲ್ಸ್ ಹಿಂಭಾಗ ರಾಜಾಜಿನಗರ	500	"	–"–
9.	ಜಗಜೀವನರಾಮ್ ನಗರ, 1ನೇ ಬ್ಲಾಕ್ ರಾಜಾಜಿನಗರ	250	"	–"–
10.	ಗುಬ್ಬಣ್ಣ ಲೇಔಟ್, ರಾಜಾಜಿನಗರ	250	"	–"–
11.	ರಮಾಮಣಿ ನರ್ಸಿಂಗ್ ಹೋಮ್	250	"	ಕೆಲಸ ಪ್ರಗತಿಯಲ್ಲಿದೆ.
12.	ವಿಜಯನಂದ ನಗರ	250	"	ಕೆಲಸ ನಿರ್ವಹಿಸಬೇಕಾಗಿದೆ.
13.	ಮಾರುತಿ ಬಡಾವಣೆ 3ನೇ ಕ್ರಾಸ್	250	"	ಕೆಲಸ ಪ್ರಗತಿಯಲ್ಲಿದೆ.
14.	ಮಾರುತಿ ಬಡಾವಣೆ 6ನೇ ಕ್ರಾಸ್	250	"	–"–
15.	ಪ್ರಕಾಶನಗರ 7ನೇ ಕ್ರಾಸ್	500	"	ಕೆಲಸ ನಿರ್ವಹಿಸಬೇಕಾಗಿದೆ.
16.	ಪ್ರಕಾಶನಗರದ ವಿವೇಕವರ್ಧನಿ ಶಾಲೆ ಬಳಿ	500	"	ಕೆಲಸ ಪ್ರಗತಿಯಲ್ಲಿದೆ.
17.	ಅಂಭಾಭವಾನಿ ದೇವಸ್ಥಾನದ ಬಳಿ ರಾಜಾಜಿನಗರದ 2ನೇ ಹಂತ	500	"	ಕೆಲಸ ನಿರ್ವಹಿಸಬೇಕಾಗಿದೆ.
18.	ರಾಜಾಜಿನಗರದ 2ನೇ ಹಂತದಲ್ಲಿ 8ನೇ ಮುಖ್ಯ ರಸ್ತೆ 8ನೇ ಕ್ರಾಸ್	250	"	–"–
19.	ಗಾಯಿತ್ರಿನಗರದ 2 ಮತ್ತು 3ನೇ ಕ್ರಾಸಿನ ಮಧ್ಯೆ	250	"	–"–
20.	ರಾಜಾಜಿನಗರದ 2ನೇ ಹಂತದಲ್ಲಿರುವ ಶನೇಶ್ವರ ದೇವಸ್ಥಾನದ ಹತ್ತಿರ	250	"	–"–
21.	ರಾಜಾಜಿನಗರದ 2ನೇ ಹಂತದ 5ನೇ ಮುಖ್ಯ ರಸ್ತೆ 'ಇ' ಬ್ಲಾಕ್	250	"	–"–

ಕ್ರಮ. ಸಂಖ್ಯೆ	ವಿತರಣಾ ಟ್ರಾನ್ಸ್ ಫಾರ್ಮರ್ ಸ್ಥಾಪಿಸುವ ಸ್ಥಳ	ಟ್ರಾನ್ಸ್ ಫಾರ್ಮರ್‌ನ ಸಾಮರ್ಥ್ಯ		ಷರಾ
22.	ಮರಿಯಪ್ಪನಪಾಳ್ಯದ 2ನೇ ಮುಖ್ಯರಸ್ತೆ	500	"	ಕೆಲಸ ನಿರ್ವಹಿಸಬೇಕಾಗಿದೆ
23.	ಕಾರ್ಪೋರೇಷನ್ ಮಾರುಕಟ್ಟೆ ರಾಜಾಜಿನಗರ	500	"	–" –
24.	ರಾಜಾಜಿನಗರ 2ನೇ ಹಂತ 7ನೇ ಕ್ರಾಸ್ ಸಬ್ ರಿಜಿಸ್ಟ್ರಾರ್ ಬೀದಿ (ಕರಿಗರಿ)	500	"	–"–
25.	ಕಮ್ಯೂನಿಟಿ ಹಾಲ್, ಸುಬ್ರಹ್ಮಣ್ಯನಗರ	500	"	–" –
26.	ರಾಜಾಜಿನಗರ 2ನೇ ಹಂತ 11ನೇ, ಮುಖ್ಯ ರಸ್ತೆಯಲ್ಲಿ, (ಲೇಪಾಕ್ಷಿ)	500	"	–"–
27.	ರಾಜಾಜಿನಗರ 2ನೇ ಹಂತ, 7ನೇ ಕ್ರಾಸ್, 13ನೇ ಮುಖ್ಯ ರಸ್ತೆ	500	"	ಕೆಲಸ ನಿರ್ವಹಿಸಬೇಕಾಗಿದೆ.
28.	ರಾಜಾಜಿನಗರ 2ನೇ ಹಂತ 4ನೇ ಮುಖ್ಯ ರಸ್ತೆ, ಗಾಯಿತ್ರಿನಗರ ವ್ಯಾಯಾಮ ಶಾಲೆ ಹತ್ತಿರ.	500	"	–"–
29.	ರಾಜಾಜಿನಗರ 2ನೇ ಹಂತ, 13ನೇ ಮುಖ್ಯ ರಸ್ತೆ, ಸಿದ್ಧಾಶ್ರಮದ ಹತ್ತಿರ	500	"	–"–
30.	5ನೇ ಕ್ರಾಸ್, ಅಕ್ಕಿನಾರಾಯಣಪುರ	500	"	–"–
31.	2ನೇ ಮುಖ್ಯ ರಸ್ತೆ, ನಾಗಪ್ಪಬ್ಲಾಕ್	500	"	–"–
32.	ಸಾಯಿ ಮಂದಿರದ ಬಳಿ	500	"	–"–
33.	ರಾಜಾಜಿನಗರ 2ನೇ ಹಂತದ ಲಿಂಕ್ ರೋಡಿನಲ್ಲಿ	500	"	–"–
34.	ಮರಿಯಪ್ಪನ ಪಾಳ್ಯ ದರಗಾದ ಸಮೀಪ	250	"	–"–

ಶ್ರೀ ಕೆ. ಲಕ್ಷ್ಮಣ್ಣ :- ಮಾನ್ಯ ಉಪಾಧ್ಯಕ್ಷೀಣಿಯವರೆ, ನಮ್ಮ ರಾಜಾಜಿನಗರ ಕ್ಷೇತ್ರದಲ್ಲಿ ವಿದ್ಯುತ್ ಬೇಡಿಕೆ ಎಷ್ಟು ಪ್ರಮಾಣದಲ್ಲಿದೆ ಎಂದು ನಾನು ಕೇಳಿರುವ ಪ್ರಶ್ನೆಗೆ 2.1 ಮೆಗಾವ್ಯಾಟ್ಸ್ ಎಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅದರ ಸುಧಾರಣೆಯ ಬಗ್ಗೆ ಏನು ಮಾಡಬೇಕೆಂದು ಕೇಳಿರುವುದಕ್ಕೆ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕೆಂದು ಹೇಳಿದ್ದಾರೆ. ಆದರೆ ಕಳೆದ 2 ವರ್ಷಗಳಿಂದಲೂ ನಾನು ಇದನ್ನು ಹೇಳುತ್ತಲೇ ಬಂದಿದ್ದೇನೆ, ನಾನು ಕೇಳಿದಾಗಲೆಲ್ಲಾ 34 ಟ್ರಾನ್ಸ್ ಫಾರ್ಮರ್‌ಗಳನ್ನು ಹಾಕಬೇಕಾಗಿದೆ ಎಂದು ಇವರೂ ಹೇಳುತ್ತಲೇ ಬಂದಿದ್ದಾರೆ. ಆದರೆ ಇದುವರೆಗೂ ಇವರು ಈ ಕೆಲಸವನ್ನು ಮಾಡಲಿಲ್ಲ, ಕೇವಲ 5–6 ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದ್ದಾರೆಯೇ ಹೊರತು ಉಳಿದ ಕೆಲಸ ಪ್ರಗತಿಯಲ್ಲಿಲ್ಲ, ವಿದ್ಯುಚ್ಛಕ್ತಿ ಮಂಡಲಿಯ ಇಂಜಿನಿಯರ್‌ಗಳು ಏನು ಕೆಲಸ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ, ಆಗಿಂದಾಗ್ಗೆ ವಿದ್ಯುತ್ ಹೋಗುತ್ತಿರುವುದರಿಂದ ಮನೆಗಳಲ್ಲಿರತಕ್ಕ ಟಿ.ವಿ. ರೇಡಿಯೋ, ಮುಂತಾದುವೆಲ್ಲಾ ಸುಟ್ಟು ಹೋಗುತ್ತಿವೆ. ಇದರ ಬಗ್ಗೆ ನಾನು ರಾಜಾಜಿನಗರದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಗಮನಕ್ಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಗಮನಕ್ಕೆ ಅನೇಕಸಾರಿ ತಂದರೂ ಅವರು ಮಾತ್ರ ಇದರ ಬಗ್ಗೆ ಗಮನವನ್ನೇ ಹರಿಸುತ್ತಿಲ್ಲ, ಇದು ನಮಗೆ ಬಹಳ ಬೇಸರವಾಗಿದೆ.

ಶ್ರೀ ಎಂ. ರಾಮಪ್ಪ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಅವರು ಹೇಳಿರತಕ್ಕದ್ದು ಸತ್ಯಕ್ಕೆ ದೂರವೇನೂ ಅಲ್ಲ, ಆದರೆ ಒಂದು ವಿಚಾರ ಏನೆಂದರೆ, ನಾವು ಎಲ್ಲಾದರೂ ಟ್ರಾನ್ಸ್‌ಫಾರ್ಮರ್

ಗಳನ್ನು ಹಾಕಬೇಕೆಂದು ಹೋದಾಗ ಆ ಸುತ್ತಮುತ್ತ ಇರತಕ್ಕ ಮನೆಯವರು ಟ್ರಾನ್ಸ್‌ಫಾರ್ಮರ್‌ನ್ನು ಇಲ್ಲಿ ಹಾಕಬೇಡಿ ಎಂದು ಹೇಳುತ್ತಾರೆ. ಆದುದರಿಂದ ನಾನು ಮಾನ್ಯ ಶಾಸಕರಿಗೆ ಹೇಳುವುದೇನೆಂದರೆ, ತಮ್ಮ ಶಿಫಾರಸನ್ನು ಉಪಯೋಗಿಸಿ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದಕ್ಕೆ ಜಾಗವನ್ನು ಕೊಡಿಸಿಕೊಟ್ಟರೆ ಖಂಡಿತ ಅಲ್ಲಿ ಹಾಕಿಸುತ್ತೇವೆ. ಇದನ್ನು ಮಾನ್ಯ ಸದಸ್ಯರಿಗೆ ಬಿಟ್ಟಿದ್ದೇವೆ.

ಶ್ರೀ ಎಂ. ಮಹದೇವ್ :- ಎಲ್ಲಾ ಶಾಸಕರ ಮನೆಯ ಹತ್ತಿರವೂ ಹಾಕಿಸಿಬಿಡಿ.

ಶ್ರೀ ಎಂ. ರಾಮಪ್ಪ :- ನಾನು ಹೇಳುತ್ತಿರುವುದು ರಾಜಾಜಿನಗರಕ್ಕೆ ಸಂಬಂಧಪಟ್ಟಂತೆ. ನಾನು ಮಾನ್ಯ ಸದಸ್ಯರ ಹತ್ತಿರ ನಮ್ಮ ಖಿದ್ಮುಚ್ಚಕ್ತೆ' ಮಂಡಡಲಿಯ ಸಂಬಂಧಪಟ್ಟ ಇಂಜಿನಿಯರ್‌ಗಳನ್ನು ಕಳುಹಿಸಿಕೊಡುತ್ತೇವೆ. ಅವರು ಆ ಅಧಿಕಾರಿಗಳ ಜೊತೆ ಮಾತನಾಡಿ ಎಲ್ಲಿಗೆ ಬೇಕಾದರೂ ಟ್ರಾನ್ಸ್‌ಫಾರ್ಮರ್‌ನ್ನು ಹಾಕಿಸಿಕೊಳ್ಳಲಿ.

ಶ್ರೀ ಕೆ. ಲಕ್ಷ್ಮಣ್ಣ :- ಒಂದಕಡೆ ಬೇಡ ಎಂದರೆ, ಬೇರೆ ಕಡೆ ಹಾಕುವುದಕ್ಕೆ ಅವಕಾಶ ಇದೆ. ಆದರೆ ಬೇರೆಕಡೆ ಹಾಕುವುದಕ್ಕೆ ನಿಮ್ಮ ಇಲಾಖೆಯವರು ಎಸ್ಟಿಮೇಟ್ ಮಾಡಿರುವುದಿಲ್ಲ, ಕೇಬಲ್ ಸಾಲುವುದಿಲ್ಲ, ಆದುದರಿಂದ ಇದು ಬೋರ್ಡ್‌ಗೆ ಹೋಗಬೇಕೆಂದು ಹೇಳುತ್ತಾರೆ. ಅವರು ಬಹಳ ಉದಾಸೀನದಿಂದ ಕೆಲಸಮಾಡುತ್ತಿದ್ದಾರೆ. ಸರಿಯಾದ ಜಾಗವನ್ನು ನೋಡಿ ಅಲ್ಲಿಗೆ ಸರಿಯಾಗಿ ಎಸ್ಟಿಮೇಟ್‌ನ್ನು ಮಾಡಿದರೆ ಅಲ್ಲಿ ಹಾಕುವುದಕ್ಕೆ ಅನುಕೂಲವಾಗುತ್ತದೆ. ಇವರು ಮನೆಯಪಕ್ಕಕ್ಕೆ ಎಸ್ಟಿಮೇಟ್ ಮಾಡಿ ಬೇರೆ ಕಡೆ ಹಾಕುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ, ನಾನೇ ಅನೇಕಸಾರಿ ದೂರುಗಳನ್ನು ಕೊಟ್ಟರೂ ನಿಮ್ಮ ಕೆ.ಇ.ಬಿ. ಅಧಿಕಾರಿಗಳು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ಅಂದಮೇಲೆ ಸಾರ್ವಜನಿಕರಿಂದ ದೂರುಗಳು ಬಂದರೆ ಇವರು ಯಾವರೀತಿ ಕೆಲಸ ಮಾಡುತ್ತಾರೆಂದು ನೀವೇ ಯೋಚನೆ ಮಾಡಿ.

ಶ್ರೀ ಎಂ. ರಾಮಪ್ಪ :- ಮಾನ್ಯ ಅಧ್ಯಕ್ಷಣೆಯವರೇ ಮಾನ್ಯ ಸದಸ್ಯರು ನಿರ್ದಿಷ್ಟರಾದ ಮಾಹಿತಿಯನ್ನು ಕೊಟ್ಟಿಲ್ಲ, ಅವರು ನಿರ್ದಿಷ್ಟ ಮಾಹಿತಿಯನ್ನು ಕೊಟ್ಟಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡಿ ಸರಿಯಾದ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಲಕ್ಷ್ಮಣ್ಣ :- ಮಾನ್ಯ ಅಧ್ಯಕ್ಷಣೆಯವರೇ ಶಾಸಕರು ಹೋಗಿ ಹೇಳಿದರೂ ಕೂಡ ಗಮನಹರಿಸುತ್ತಿಲ್ಲ.

ಶ್ರೀ ಎಂ. ರಾಮಪ್ಪ :- ಮಾನ್ಯ ಸದಸ್ಯರು ಅವರೇ ಖಿದ್ದಾಗಿಬಂದು ಇಂಥ ಕಡೆ ಕೆಟ್ಟಿದೆ, ಸರಿಯಾಗಿಲ್ಲವೆಂದು ಹೇಳಿದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬಹುದೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಲಕ್ಷ್ಮಣ್ಣ :- ಸುಮಾರು 35 ಟ್ರಾನ್ಸ್‌ಫಾರ್ಮಗಳು ಹಾಕಿಸಬೇಕೆಂದು ಹೇಳಿರುವುದಕ್ಕೆ 5–6 ಟ್ರಾನ್ಸ್ ಫಾರ್ಮಸ್ ಹಾಕಿಸಿದ್ದಾರೆ. ಇನ್ನು ಉಳಿದ 28 ಟ್ರಾನ್ಸ್‌ಫಾರ್ಮ್ಸ್ ಹಾಕಿಲ್ಲ, ಮಾನ್ಯ ಸಚಿವರು ಇದರ ಬಗ್ಗೆ ಯೋಚನೆ ಮಾಡಿದಂತಿಲ್ಲವೆಂದು ಕಾಣುತ್ತದೆ. ಏನೋ ಮಂತ್ರಿಗಳಾಗಬೇಕೆಂದು ಹೇಳಿ ಮಂತ್ರಿಗಳಾಗಿ ಸಮಾಧಾನಪಟ್ಟಿಕೊಂಡು ಸುಮ್ಮನೆ ತಿರುಗಾಡುತ್ತಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸುತ್ತಿಲ್ಲ.

ಶ್ರೀ ಎಂ. ರಾಮಪ್ಪ :- ಮಾನ್ಯ ಅಧ್ಯಕ್ಷಣೆಯವರೇ ನಮ್ಮ ಮಿತ್ರರು ಒಂದು ವಿದವಾದ ಮಾತನಾಡಿದ್ದಾರೆ. ನನಗೆ ಅದರಿಂದ ಬಹಳ ಕಳಕಳಿಯಾಯಿತು. ನಾನು ಮಂತ್ರಿಯಾಗಬೇಕೆಂದು ಯಾವತ್ತಿಗೂ ಆಸೆಯನ್ನು ಇಟ್ಟುಕೊಂಡಿರಲಿಲ್ಲ. ನಾನು ಮಂತ್ರಿಯಾಗಬೇಕೆಂದಿದ್ದಿದ್ದರೆ ಯಾವತ್ತೋ ಮಂತ್ರಿಯಾಗುತ್ತಿದ್ದೆ. ಮಂತ್ರಿಯಾಗಿರಬೇಕೆಂದು ಕರೆದಿದ್ದಾರೆ, ಆದ್ದರಿಂದ ನಾನು ಮಂತ್ರಿಯಾಗಿದ್ದೇನೆ.

(ಗೊಂದಲ)

ಶ್ರೀ ಎಂ. ಮಹದೇವ್ :- ಮಾನ್ಯ ರಾಮಪ್ಪನವರೇ ಈಗ ಬೇಡ ಎಂದರೆ ಬಿಟ್ಟು ಬಿಡುತ್ತೀರಾ? ನಿಮಗೆ ಮಂತ್ರಿ ಪದವಿ ಬೇಡವೇ?

ಶ್ರೀ ಎಂ. ರಾಮಪ್ಪ :- ಅದು ಇಲ್ಲಿಯಲ್ಲ ಪ್ರಶ್ನೆ ಕೇಳುವುದು. ಕೇಳಬೇಕಾದ ಸ್ಥಳದಲ್ಲಿ ಕೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಅಧ್ಯಕ್ಷಣೆಯವರೇ ಕರ್ನಾಟಕ ರಾಜ್ಯದ ಎಸ್.ಸಿ., ಎಸ್.ಟಿ., ಗಂಗಾಕಲ್ಯಾಣ ಯೋಜನೆಯನ್ನಿ ಕೆಲವು -

ಉಪಾಧ್ಯಕ್ಷಣೆಯವರು :- ಈ ಪ್ರಶ್ನೆಗೆ ಇದು ಸಂಬಂಧಪಟ್ಟಿರುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಅಧ್ಯಕ್ಷಣೆಯವರೇ ಇದಕ್ಕೆ ಸಂಬಂಧಪಟ್ಟ ಟ್ರಾನ್ಸ್‌ಫಾರ್ಮರ್ಸ್ ಇನ್ನು ಕೆಲವು ಮೆಟೀರಿಯಲ್ಸ್ ನಮ್ಮ ಕ್ಷೇತ್ರಕ್ಕೆ ಸಪ್ಲೈಯಾಗಿಲ್ಲವೆಂದು ಇಂಜಿನೀಯರ್ಸ್ ಗಳನ್ನು ಕೇಳಿದರೆ ಅವರು ನಮಗೆ ಸಪ್ಲೈಯಾಗಿಲ್ಲವೆಂದು ಹೇಳುತ್ತಾರೆ. ಇಲ್ಲಿ ಕೇಳಿದರೆ ಸಪ್ಲೈಮಾಡಿರುತ್ತೇವೆಂದು ಹೇಳುತ್ತಿರುತ್ತಾರೆ. ಅಧಿಕಾರಿಗಳು ಅಡಿಲ್ಲ, ಇದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕು, ಮತ್ತು ಕಾಲಕಾಲಕ್ಕೆ ಸರಿಯಾಗಿ ಮೆಟೀರಿಯಲ್ಸ್‌ನ್ನು ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ :- ಪ್ರಶ್ನೆ ಕೇಳಿರುವುದು ಸ್ಪೇಸಿಫಿಕ್ ಆಗಿ ರಾಜಾಜಿನಗರಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಅಲ್ಲಿಯ ವಿಚಾರದಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ರಾಯಚೂರಿನಲ್ಲಿ ಸ್ನಾತಕೋತ್ತರ ಪದವಿ ಕೇಂದ್ರವ ಪ್ರಾರಂಭ

1414. ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಿ) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಯಚೂರಿನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಆ) ಹಾಗಿದ್ದಲ್ಲಿ ಯಾವಾಗ ;
ಇ) ಆಯವ್ಯಯದಲ್ಲಿ ಅವಕಾಶ ;
ಈ) ಯಾವ ವಿಷಯಗಳನ್ನು ಅಳವಡಿಸಲಾಗುವುವು ;
ಉ) ಅತ್ಯವಶ್ಯಕವಾದ ಸೌಕರ್ಯಗಳನ್ನು ಒದಗಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಇಲ್ಲ
ಆ) ಉದ್ಭವಿಸುವುದಿಲ್ಲ
ಇ) ಅನ್ವಯಿಸುವುದಿಲ್ಲ
ಈ ಉದ್ಭವಿಸುವುದಿಲ್ಲ
ಉ) ಉದ್ಭವಿಸುವುದಿಲ್ಲ

SRI QUAMURAL ISLAM : Madam, Raichur is a very important district of Hyderbad–Karnataka and it comes under the jurisdiction of the Gulbarga University and this University is having a Sub–Centre at the Bellary District. Therefore, I feel that there is a need for a Post–Graduation Centre at Raichur. It is need of the hour of that area of the people and there is full justification also. The required land is available for P.G. Centre and people are ready to extend their co–operation. In this context, will the Government consider of starting a P.G. Centre at Raichur?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆಯವರೇ ಯಾವುದೇ ಸ್ನಾತಕೋತ್ತರ ವಿಶ್ವವಿದ್ಯಾನಿಲಯದ ಕೇಂದ್ರವನ್ನು ತೆರೆಯಬೇಕಾದರೆ ಅದಕ್ಕೆ ಶೈಕ್ಷಣಿಕ ಹಿನ್ನೆಲೆ ಇರುತ್ತದೆ. ಆ ಶೈಕ್ಷಣಿಕ ಶಾಸ್ತ್ರೀಯ ಅಧ್ಯಾಯನದ ಆಧಾರದ ಮೇಲೆ ನಾವು ಈ ಕೇಂದ್ರವನ್ನು ತೆರೆಯಬೇಕಾಗುತ್ತದೆ. ಈ ವಿಚಾರಗಳನ್ನೊಳಗೊಂಡಂತೆ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಅಂದಿನ ಕುಲಪತಿಗಳು ದಿನಾಂಕ 7.3.1986 ರಲ್ಲಿ ಒಂದು ಅಧಿಸೂಚನೆಯಲ್ಲಿ ಶ್ರೀ ಕೆ. ಆರ್. ರಾಮಚಂದ್ರ ಎಂಬುವರ ನೇತೃತ್ವದಲ್ಲಿ ಒಂದು ಏಕಸದಸ್ಯ ಆಯೋಗವನ್ನು ನೇಮಕಮಾಡಿದ್ದರು. ಆ ಆಯೋಗದವರು ದಿನಾಂಕ 2.7.1986 ರಲ್ಲಿ ತನ್ನ ವರದಿಯನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ಅವರು ಏನು ಅಭಿಪ್ರಾಯವನ್ನು ಕೊಟ್ಟಿದ್ದರೆಂದರೆ, ಅಲ್ಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಸ್ಥಾಪನೆಗೆ ಸಾಕಷ್ಟು ಅರ್ಹ ವಿದ್ಯಾರ್ಥಿಗಳು ಸಧ್ಯಕ್ಕೆ ದೊರೆಯುತ್ತಿಲ್ಲವೆಂದು ತಿಳಿಸಿದ ಮೇಲೆ ಹಾಗೂ ಅರ್ಹ ವಿದ್ಯಾರ್ಥಿಗಳು ಬರದಿದ್ದರೆ ಈ ಕೇಂದ್ರವನ್ನು ತೆರೆಯಲು ಕಾಲ ಸನ್ನಿಹಿತವಾಗಿಲ್ಲ ಎಂದು ಹೇಳಿ ಮತ್ತೊಂದು ಅಂಶವನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅಲ್ಲಿರುವ ಬಿ. ಫಾರ್ಮ. ಕಾಲೇಜಿನಲ್ಲಿ ಎಂ. ಫಾರ್ಮ. ಕಾಲೇಜ್ ತೆರೆಯುವ ವ್ಯವಸ್ಥೆ ಮಾಡಬಹುದು. ತುಂಗಭದ್ರಾ ಮಡಿಲಿನಲ್ಲಿರುವ ಜಿಲ್ಲೆಯಲ್ಲಿ ಗ್ರಾಮಾಭ್ಯುದಯ ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯುವುದರಿಂದ ಗ್ರಾಮಾಭ್ಯುದಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಅಥವಾ ಪದವಿ ಕಾಲೇಜನ್ನು ಸರ್ಕಾರದವರು ಅಥವಾ ಖಾಸಗಿಯವರು ತೆರೆಯಬಹುದೆಂದು ಒಂದು ಭಾಗದ ವರದಿಯಾದರೆ, ಎರಡನೇಯ ಭಾಗದ ವರದಿ ಏನೆಂದರೆ, ಸ್ನಾತಕೋತ್ತರ ಶಿಕ್ಷಣ ಕೇಂದ್ರದ ಅಗತ್ಯ ಇದೆ ಎಂದು ಒಪ್ಪಿಕೊಂಡರೆ 200 ಎಕರೆ ಜಾಗವನ್ನು ಜಿಲ್ಲಾಧಿಕಾರಿಗಳು ಸೂಚಿಸಿರಬೇಕು ಮತ್ತು ಅದನ್ನು ಗುರುತಿಸಬೇಕು ಮತ್ತು ಕ್ರಿಯಾಸಮಿತಿಯವರು ಏನು ಮಾಡಿದ್ದಾರೆಂದರೆ ಹತ್ತು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಬೇಕೆಂದು ಶಿಫಾರಸ್ಸು ಕೊಟ್ಟಿದ್ದಾರೆ. ನಮ್ಮ ಸರ್ಕಾರದ ವರದಿ ಪ್ರಕಾರ ಈ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯ ಯಾವುದೇ ನಿರ್ದಿಷ್ಟ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಇಲ್ಲಿಯವರೆಗೆ ಕಳುಹಿಸಿಲ್ಲ. ಕ್ರಿಯಾಸಮಿತಿಯವರು ಏನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಬಾಕಿ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದಾರೆ ಆ ಬಗ್ಗೆ ವರದಿ ಇಲ್ಲ. ಅದು ಇಲ್ಲದೆ ಒಮ್ಮೆಲೆ ಹೇಳಿಕೆಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಅಧ್ಯಯನ ಮಾಡಿ ವರದಿ ಕೊಟ್ಟಮೇಲೆ ಅದರ ಆಧಾರದ ಮೇಲೆ ಕಾರ್ಯಕ್ರಮ ಹಾಕಿಕೊಳ್ಳಬೇಕೆ ಹೊರತು ಅನ್ಯಥಾ ತೆಗೆಯುವುದಕ್ಕೆ ಕಷ್ಟವಾಗುತ್ತದೆ.

SRI QUAMARUL ISLAM : If these two conditions are fulfilled, with the Hon'ble Minister assure that a P.G. Centre will be established at Raichur?

SRI M. VEERAPPA MOILY : I cannot give assurance on nothing. I can give an assurance on the basis of certain things which are achieved. Let the report come...

ವಿನಿಧ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಇಂಜಿನಿಯರಿಂಗ್ ಮಹಾವಿದ್ಯಾಲಯಗಳ ಸಂಖ್ಯೆ

1483. ಶ್ರೀ ಡಾ|| ಎ.ಬಿ. ಮಲ್ಲಾರೆಡ್ಡಿ (ಮುದಗಲ್) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

(ಅ) ಕರ್ನಾಟಕದಲ್ಲಿ ಇರುವ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು ;

(ಬ) ಇಂಜಿನಿಯರಿಂಗ್ ಕಾಲೇಜುಗಳ ಹೆಸರುಗಳು ವಿದ್ಯಾರ್ಥಿಗಳು, ಉಪಾಧ್ಯಾಯರ ಸ್ಥೈತ ಅವರ ವಾರ್ಷಿಕ ಖರ್ಚೆಷ್ಟು;

(ಇ) ಕರ್ನಾಟಕದ ವಿದ್ಯಾರ್ಥಿಗಳು, ಹೊರ ರಾಜ್ಯದ ವಿದ್ಯಾರ್ಥಿಗಳು ಮತ್ತು ವಿದೇಶಿ ವಿದ್ಯಾರ್ಥಿಗಳು ಎಷ್ಟು ;

ಈ) ಹೊಸದಾಗಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ ;

ಉ) ಹಾಗಿದ್ದಲ್ಲಿ ವಿವರಗಳನ್ನು ಹಾಗೂ ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳು ಈ ಬಗ್ಗೆ ನಿಗಧಿಪಡಿಸಿರುವ ಮಾರ್ಗ ಸೂಚಿಗಳ ವಿವರಗಳನ್ನು ನೀಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) 51

ಆ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಒದಗಿಸಲಾಗಿದೆ.

ಇ) ಕರ್ನಾಟಕದ ವಿದ್ಯಾರ್ಥಿಗಳು 9209
ಹೊರ ರಾಜ್ಯದ ವಿದ್ಯಾರ್ಥಿಗಳು5229
ವಿದೇಶಿ ವಿದ್ಯಾರ್ಥಿಗಳು5

ಈ) ಹೌದು

ಉ) 1991–92ನೇ ಸಾಲಿನಲ್ಲಿ5 ಪ್ರಸ್ತಾವನೆಗಳು
1992–93ನೇ ಸಾಲಿನಲ್ಲಿ6 ಪ್ರಸ್ತಾವನೆಗಳು ಬಂದಿರುತ್ತದೆ.
ಹೊಸ ಕಾಲೇಜುಗಳನ್ನು ಎ.ಐ.ಸಿ.ಟಿ.ಇ. ಯವರು ನಿಗದಿಪಡಿಸಿರುವ ಮಾರ್ಗ ಸೂಚಿಗಳನ್ವಯ ಪರಿಶೀಲಿಸಲಾಗುವುದು.
(Note three pages were not composed 80,81,& 82)

ಸವಣೂರಿನಲ್ಲಿ ಸರ್ಕಾರಿ ಮಹಾವಿದ್ಯಾಲಯ

1618. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಂಗ್ಗಾವ್) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸವಣೂರು ನಗರದಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸಿ ಎಷ್ಟು ವರ್ಷಗಳಾದವು?

ಆ) ಸದರಿ ಕಾಲೇಜು ಪ್ರಾರಂಭಿಸಲು ಸೂಕ್ತ ಕಟ್ಟಡದ ವ್ಯವಸ್ಥೆ ಮಾಡಲಾಗಿದೆಯೆ ;

ಇ) ಸವಣೂರು ನಗರದಲ್ಲಿರುವ ಕೋರ್ಟ್ ಆಫ್ ವಾರ್ಡ್ಸ್‌ಗೆ ಸಂಬಂಧಿಸಿದ 6 ಎಕರೆ ಭೂಮಿತಿಯನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಈಗಾಗಲೇ ಮನವಿ ಸಲ್ಲಿಸಲಾಗಿದೆಯೆ;

ಈ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಈ ಕಾರ್ಯ ಪ್ರಾರಂಭಿಸಲಾಗುವುದು;

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) 1984 – 85 ನೇ ಸಾಲಿನಲ್ಲಿ.

ಆ) ಸವಣೂರು ಗ್ರಾಮದ ಕೋರ್ಟ್ ಆಫ್ ವಾರ್ಡ್ಸ್‌ನ ಸರ್ವೆ ನಂಬರ್ 48 ರಲ್ಲಿ 6 ಎಕರೆ 11 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಭೂ ಸ್ವಾಧೀನ ಪಡಿಸಿಕೊಂಡ ನಂತರ ಕಟ್ಟಡವನ್ನು ನಿರ್ಮಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಮೇಲಿರುವಂತೆ

ಈ) ಭೂ ಸ್ವಾಧೀನ ಪಡಿಸಿಕೊಂಡ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅನುಬಂಧ

ಪ್ರಶ್ನೆ ಸಂಖ್ಯೆ 1483

ಕ್ರಮ ಸಂಖ್ಯೆ	ಇಂಜಿನಿಯರಿಂಗ್ ಕಾಲೇಜು ಹೆಸರ	ನಿಗಧಿತ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ	ವರ್ಗಗದ ಸಂಖ್ಯೆ	ವಾರ್ಷಿಕ ವೆಚ್ಚ
1	2	3	4	5
	ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು			
1.	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು	410	90	1,17,36,676.30
2.	ಎಸ್.ಜೆ.ಎಸ್.ಜೆ.ಟಿ. ಇನ್ ಸ್ಟಿಟ್ಯೂಟ್ (ಸರ್ಕಾರಿ) ಬೆಂಗಳೂರು	50	15	12,32,000.00
3.	ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು	330	105	22,95,,000.00
4.	ಕರ್ನಾಟಕ ರೀಜಿನಲ್ ಇಂಜಿನಿಯರಿಂಗ್ ಕಾಲೇಜು, ಸೂರತ್ಕಲ್	350	183	1,53,65,354
	ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು			
5.	ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	685	63	59,32,838
6.	ನ್ಯಾಷನಲ್ ಇನ್ಸ್ ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು	390	71	61,32,915
7.	ಎಸ್.ಜೆ.ಸಿ.ಇ. ಮೈಸೂರು	500	109	10,79,230
8.	ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ	420	94	72,22,747
9.	ಮಲೆನಾಡು ಇಂಜಿನಿಯರಿಂಗ್ ಕಾಲೇಜು, ಹಾಸನ	550	106	59,14,627.00
10.	ಬಿ.ವಿ.ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ	400	55	32,46,000.00
11.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ	380	46	46,78,602
12.	ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು, ಗುಲ್ಬರ್ಗಾ	470	76	54,58,000.00
	ಖಾಸಗಿ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳು			
13.	ಆರ್. ವಿ. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	600	ಮಾಹಿತಿ ಲಭ್ಯವಿಲ್ಲ	ಮಾಹಿತಿ ಲಭ್ಯವಿಲ್ಲ
14.	ಎಂ.ಎಸ್. ರಾಮಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	600	"	- " -
15.	ದಯಾನಂದ ಸಾಗರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	600		
16.	ಬೆಂಗಳೂರು ಇನ್ಸ್ ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	480		

	2	3	4	5
17.	ಡಾ || ಅಂಬೇಡ್ಕರ್ ಇನ್ಸ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಬೆಂಗಳೂರು	450	ಮಾಹಿತಿ ಲಭ್ಯವಿಲ್ಲ	ಮಾಹಿತಿ ಲಭ್ಯವಿಲ್ಲ
18.	ಸರ್. ಎಂ. ವಿ. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	360	- " -	- " -
19.	ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಹನುಮಂತನಗರ, ಬೆಂಗಳೂರು	180	- " -	- " -
20.	ಸಿದ್ಧಗಂಗಾ ಇನ್ಸ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು	600	- " -	- " -
21.	ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜು, ತುಮಕೂರು, (ಮಂಗಳೂರು)	355	- " -	- " -
22.	ಕಲ್ಪತರು ಇನ್ಸ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತಿಪಟೂರು	120	- " -	- " -
23.	ಗೋಲ್ಡನ್ ವ್ಯಾಲಿ ಎಜ್ಯುಕೇಶನ್ ಸೊಸೈಟಿ ಇಂಜಿನಿಯರಿಂಗ್ ಕಾಲೇಜು, ಕೆ.ಜಿ.ಎಫ್.	180	- " -	- " -
24.	ಬಾಪೂಜಿ ಇನ್ಸ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ	470	- " -	- " -
25.	ಜೆ.ಎಂ. ಇನ್ಸ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು, ಚಿತ್ರದುರ್ಗ	310	- " -	- " -
26.	ಅದಿಚುಂಚನಗಿರಿ ಇಂಜಿನಿಯರಿಂಗ್ ಕಾಲೇಜು, ಚಿಕ್ಕಮಗಳೂರು	270	- " -	- " -
27.	ಜವಾಹರ್ ಲಾಲ್ ನೆಹರೂ ನ್ಯಾಷನಲ್ ಇಂಜಿನಿಯರಿಂಗ್ ಕಾಲೇಜು, ಶಿವಮೊಗ್ಗ	280	- " -	- " -
28.	ಅದಿಚುಂಚನಗಿರಿ ಇಂಜಿನಿಯರಿಂಗ್ ಕಾಲೇಜು, ಚಿಕ್ಕಬಳ್ಳಪುರ (ಎಸ್. ಜೆಸಿಎಸ್)	240	- " -	- " -
29.	ಕೆ.ಎಲ್. ಎ. ಸೊಸೈಟಿ ಇಂಜಿನಿಯರಿಂಗ್ ಕಾಲೇಜು, ಬೆಳಗಾಂ	290	- " -	- " -
30.	ಕೆ.ಎಂ.ಎಸ್. ಗೋಗಟೆ ಇಂಜಿನಿಯರಿಂಗ್ ಕಾಲೇಜು, ಬೆಳಗಾಂ	355	- " -	- " -
31.	ಬಿ.ಎಲ್.ಡಿ.ಇ. ಸಂಸ್ಥೆಯವರ ಇಂಜಿನಿಯರಿಂಗ್ ಕಾಲೇಜು, ಬಿಜಾಪುರ	340	- " -	- " -
32.	ಆರ್.ಟಿ.ಇ. ಇಂಜಿನಿಯರಿಂಗ್ ಕಾಲೇಜು, ಹುಲಿಕೋಟೆ	260	- " -	- " -
33.	ಎಸ್.ಟಿ.ಜೆ. ಇಂಜಿನಿಯರಿಂಗ್ ಕಾಲೇಜು, ರಾಣಿ ಬೆನ್ನೂರು	215	- " -	- " -
34.	ವಿಜಯನಗರ ಇಂಜಿನಿಯರಿಂಗ್ ಕಾಲೇಜು, ಬಳ್ಳಾರಿ	310	- " -	- " -
35.	ಹೆಚ್.ಕೆ.ಇ. ಸೊಸೈಟಿಯವರ ಎಸ್.ಎಲ್.ಎನ್. ಇಂಜಿನಿಯರಿಂಗ್ ಕಾಲೇಜು, ರಾಯಚೂರು	210	- " -	- " -
36.	ರೂರಲ್ ಇಂಜಿನಿಯರಿಂಗ್ ಕಾಲೇಜು, ಬಾಲ್ಕಿ	240	- " -	- " -
37.	ಅಕ್ಕಾಡಮಿಕ್ ಆಫ್ ಲಿಬರಲ್ ಎಜ್ಯುಕೇಶನ್ ಸೊಸೈಟಿ, ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜು, ಸೂಳ್ಯ	300	- " -	- " -

1	2	3	4	5
38.	ನಿಟ್ಟೆ ಮಹಲಿಂಗ ಅದ್ಯಂತ್ಯಾಯ ಮೆಮೋರಿಯಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ನಿಟ್ಟೆ	360	ಮಾಹಿತಿ ಲಭ್ಯವಿಲ್ಲ	ಮಾಹಿತಿ ಲಭ್ಯವಿಲ್ಲ
39.	ಸಿದ್ದಗಂಗ ಇನ್ಸ್ ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (ಡಿಪ್ಲೋಮಾ ಹೋಲ್ಡರ್ಸ್)	90	- " -	- " -
	ಅಲ್ಪಸಂಖ್ಯಾತರ ಇಂಜಿನಿಯರಿಂಗ್ ಕಾಲೇಜುಗಳು			
40.	ಗೌಸಿಯಾ ಇಂಜಿನಿಯರಿಂಗ್ ಕಾಲೇಜು, ರಾಮನಗರ (ಬೆಂಗಳೂರು)	260	- " -	- " -
41.	ಎಂ.ವಿ.ಜೆ. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು (ವೈಟ್ ಫೀಲ್ಡ್)	450	- " -	- " -
42.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಕಾಲೇಜು, ದಾರವಾಡ	360	- " -	- " -
43.	ಅಂಜೂಮನ್ ಇಂಜಿನಿಯರಿಂಗ್ ಕಾಲೇಜು, ಭಟ್ಕಳ.	250	- " -	- " -
44.	ಖಾಜಾ ಬಾಂದೇ ನವಾಜ್ ಇಂಜಿನಿಯರಿಂಗ್ ಕಾಲೇಜು, ಗುಲ್ಬರ್ಗಾ	230	- " -	- " -
45.	ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜು, ಬೀದರ್	290	- " -	- " -
46.	ಮಣಿಪಾಲ್ ಇನ್ಸ್ ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ್	720	- " -	- " -
47.	ಇಸ್ಲಾಮಿಯಾ ಇನ್ಸ್ ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು (1991-92 ನೇ ಸಾಲಿಗೆ ಪ್ರವೇಶ ಸಂಖ್ಯೆಯನ್ನು ನಿಗದಿ ಪಡಿಸಿಲ್ಲ)			- " -
	ಸಂಜೆ ಇಂಜಿನಿಯರಿಂಗ್ ಕಾಲೇಜುಗಳು			
48.	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು (ಸರ್ಕಾರಿ)	42	- " -	- " -
49.	ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು (ಅನುದಾನಿತ)	249	30	19,87,000.00
50.	ನ್ಯಾಷನಲ್ ಇನ್ಸ್ ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು (ಅನುದಾನಿತ)	45		49,000.00
51.	ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಮೈಸೂರರು (ಅನುದಾನಿತ)	130		

ಸೀಮೆ ಎಣ್ಣೆ ಬೇಡಿಕೆ ಹಾಗೂ ವಿತರಣೆ

1625. ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯಕ್ಕೆ ಎಷ್ಟು ಸೀಮೆಎಣ್ಣೆ ಬೇಡಿಕೆ ಇದೆ ಹಾಗೂ ಎಷ್ಟು ಸೀಮೆಎಣ್ಣೆಯ ಕೊರತೆ ಇದೆ ;
ಆ) ಸೀಮೆಎಣ್ಣೆ ವಿತರಣೆಯನ್ನು ಸಮರ್ಪಕವಾಗಿ ಹಂಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) ರಾಜ್ಯಕ್ಕೆ 67000 ಕಿಲೋ ಲೀಟರ್ ಸೀಮೆ ಎಣ್ಣೆ ಅವಶ್ಯಕವಿದೆ. ಕೇಂದ್ರ ಸರ್ಕಾರವು ನವೆಂಬರ್ 1991 ರಿಂದ ಜನವರಿ 1992 ರ ವರೆಗೆ ಮಾಹೆಯಾನ 17513 ಕಿಲೋ ಲೀಟರ್‌ನಷ್ಟು ಹಂಚಿಕೆ ಮಾಡಿದೆ. 1992 ರ ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿಗೆ 55,866 ಕಿ.ಲೋ. ಲೀ (ತಾತ್ಕಾಲಿಕ ಹೆಚ್ಚುವರಿ ಪ್ರಮಾಣ 8353 ಕಿ. ಲೀ. ಸೇರಿ) ನಷ್ಟು ಹಂಚಿಕೆ ಮಾಡಿದೆ. ರಾಜ್ಯಕ್ಕೆ ಸೀಮೆಎಣ್ಣೆ ಕೊರತೆ 21,500 ಕಿ.ಲೀ. ನಷ್ಟಿದೆ.
ಆ) ಪಡಿತರ ಚೀಟಿದಾರರಿಗೆ ಸೀಮೆಎಣ್ಣೆಯನ್ನು ಹಂಚಿಕೆ ಮಾಡಲಾಗುತ್ತಿದೆ. ಸೀಮೆಎಣ್ಣೆಯ ವಿತರಣೆಯ ಸಮರ್ಪಕತೆಯನ್ನು ಕಾಪಾಡಲು ನಿಯತವಾಗಿ ತನಿಖೆ ಮಾಡಲಾಗುತ್ತಿದೆ. ತಪ್ಪಿತಸ್ಥ ನ್ಯಾಯಬೆಲೆ ಅಂಗಡಿಗಳು ಹಾಗೂ ಟಿಲ್ಲರೆ ವಿತರಕರು (ಹಾಕರ್ಸ್) ರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.

ಜನ್ಮದಿನದ ಶುಭಾಶಯಗಳು

ಉಪಾಧ್ಯಕ್ಷಿಯಣಿಯವರು – ಶ್ರೀ ಬಸಂತ ರೆಡ್ಡಿ ಮೋತಕಪಲ್ಲಿಯವರೆ ಇಂದು ತಮ್ಮ 58 ನೇ ಜನ್ಮ ದಿನ. ಈ ಸಂದರ್ಭದಲ್ಲಿ ಸದನದ ಎಲ್ಲಾ ಸದಸ್ಯರ ಪರವಾಗಿ ಮತ್ತು ವೈಯುಕ್ತಿವಾಗಿ ತಮಗೆ ಶುಭ ಕೋರುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಾ : 11–3–92 ರ ಲಿಖಿತ ಮೂಲಕ ಉತ್ತರಿಸುವ 12ನೇ ಪಟ್ಟಿಯಲ್ಲಿರುವ 52 ಪ್ರಶ್ನೆಗಳ ಪೈಕಿ 1228, 1355, 1350, 234, 318, 320, 415, 416, 420, 5114, 5115, 616, 623, 583, ಪ್ರಶ್ನೆಗಳನ್ನು ಹೊರತುಪಡಿಸಿ 39 ಕ್ಕೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಾರ್ವಜನಿಕ ವ್ಯವಸ್ಥೆಯಲ್ಲಿರುವ ದರಗಳ ಬಗ್ಗೆ

1000. ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿರುವ ಸಾಧಾರಣ ಹತ್ತುತ್ತಮ ಗುಣಮಟ್ಟದ ಅಕ್ಕಿಯ ಪ್ರಸ್ತುತ ಬೆಲೆ ಏನು ?
2) ಮೊದಲಿದ್ದ ದರಗಳಾವುವು ?
3) ಸಾರ್ವಜನಿಕ ವಿತರಣಾ ವ್ಯವ್ಥೆ ದಕ್ಷಿಣ ರಾಜ್ಯಗಳಲ್ಲಿ ಪೂರೈಸಲಾದ ಅಕ್ಕಿಯ ಈಗಿನ ಬೆಲೆಗಳಾವುವು ?

4) ಕರ್ನಾಟಕ ಮತ್ತು ಉಳಿದ ದಕ್ಷಿಣ ರಾಜ್ಯಗಳಲ್ಲಿರುವ ಬೆಲೆಗಳಲ್ಲಿರುವ ವ್ಯತ್ಯಾಸಕ್ಕೆ ಕಾರಣಗಳಾವುವು?

5) ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಸಾಧಾರಣ ಅಕ್ಕಿಯ ಬೆಲೆಯನ್ನು ಕಡಿಮೆಗೊಳಿಸಿ ಕೆ.ಜಿ.ಗೆ. ರೂ.2.90 ರಂತೆ ಮತ್ತು ಅತ್ಯುತ್ತಮ ಅಕ್ಕಿಯನ್ನು ರೂ.3.45 ಕ್ಕೆ ಸರ್ಕಾರ ನೀಡುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಹಸಿರು ಕಾಡುಗಳನ್ನು ಹೊರತುಪಡಿಸಿ

ಅತ್ಯುತ್ತಮ ಅಕ್ಕಿ	- ರೂ. 5.10
ಸಾಧಾರಣ ಅಕ್ಕಿ	- ರೂ. 4.15

ಹಸಿರು ಕಾಡುದಾರರಿಗೆ

ಅತ್ಯುತ್ತಮ ಅಕ್ಕಿ	- ರೂ. 3.50

ಐ.ಟಿ.ಡಿ.ಪಿ. ಕಾಡುದಾರರು

ಅತ್ಯುತ್ತಮ ಅಕ್ಕಿ	- ರೂ. 4.33
ಉತ್ತಮ ಅಕ್ಕಿ	- ರೂ. 4.12
ಸಾಧಾರಣ ಅಕ್ಕಿ	- ರೂ. 3.52

2) ಹಸಿರು ಕಾಡುಗಳನ್ನು ಹೊರತುಪಡಿಸಿ ಉಳಿದವರು

ಅತ್ಯುತ್ತಮ ಅಕ್ಕಿ	- ರೂ. 4.10
ಸಾಧಾರಣ ಅಕ್ಕಿ	- ರೂ. 3.15

ಹಸಿರು ಕಾರ್ಡ್ ದಾರರಿಗೆ

ಅತ್ಯುತ್ತಮ ಅಕ್ಕಿ	- ರೂ. 2.50

ಐ.ಟಿ.ಡಿ.ಪಿ. ಪ್ರದೇಶ ಕಾಡುದಾರರು

ಅತ್ಯುತ್ತಮ ಅಕ್ಕಿ	- ರೂ. 3.45
ಉತ್ತಮ ಅಕ್ಕಿ	- ರೂ. 3.24
ಸಾಧಾರಣ ಅಕ್ಕಿ	- ರೂ. 2.64

3) ಆಂಧ್ರಪ್ರದೇಶ

ವಾರ್ಷಿಕ ಆದಾಯ ರೂ.6000–00 ಕ್ಕಿಂತ ಕಡಿಮೆ ಇರುವ ಪಡಿತರ ಚೀಟಿದಾರರಿಗೆ ನೀಡುವ ಅತ್ಯುತ್ತಮ ಅಕ್ಕಿಯ ಬೆಲೆ ಪ್ರತಿ ಕಿಲೋ ಗ್ರಾಂಗೆ ರೂ.3.50 ಆಗಿದೆ.

ತಮಿಳುನಾಡು :

ಅತ್ಯುತ್ತಮ : ಉತ್ತಮ ಅಕ್ಕಿ ರೂ.3.50 ಕಿ. ಗ್ರಾಂ.

ಸಾಧಾರಣ ಅಕ್ಕಿರೂ. 2.00 ಕಿ.ಗ್ರಾಂ.

4) ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿರುವ ಬೆಲೆಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ತಮಿಳುನಾಡು ರಾಜ್ಯವು ವಾರ್ಷಿಕವಾಗಿ ಸುಮಾರು 340–00 ಕೋಟಿ ರೂಪಾಯಿಗಳನ್ನು ಸಹಾಯಧನಕ್ಕಾಗಿ ಖರ್ಚು ಮಾಡುತ್ತಿದೆ.

5) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಣೆಗಾಗಿ ರಾಜ್ಯಕ್ಕೆ 75,000 ಮೆ.ಟನ್ ಅಕ್ಕಿಯ ಅವಶ್ಯಕವಿದೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಅಕ್ಕಿಯ ಮಾರಾಟ ಬೆಲೆಯನ್ನು ಹೆಚ್ಚಿಸಿದೆ. ಅದರಂತೆ ಅಂತಿಮ ಮಾರಾಟ ಬೆಲೆಯನ್ನು ರೂ.5.10 ಪ್ರತಿ ಕಿಲೋಗೆ ನಿಗಧಿಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು 80 ಲಕ್ಷ ಪಡಿತರ ಚೀಟಿದಾರರಿದ್ದು, ಪ್ರಸ್ತುತ 31 ಲಕ್ಷ ಕುಟುಂಬಗಳು ಹಸಿರು ಕಾರ್ಡು ಯೋಜನೆಗೆ ಒಳಪಟ್ಟಿದ್ದು ಪ್ರತಿ ಕಾರ್ಡಿಗೆ ಅತ್ಯುತ್ತಮ ಅಕ್ಕಿ ಹಾಗೂ ಗೋಧಿ ರೂ.3.50 ಹಾಗೂ 2.60 ಪ್ರತಿ ಕಿಲೋ ಗ್ರಾಂ ನಂತೆ 10 ಕಿಲೋ ಗಳನ್ನು ನೀಡಲಾಗುತ್ತಿದೆ. ಈ ದಿಸೆಯಲ್ಲಿ ಸರ್ಕಾರವು ಸಹಾಯಧನ ನೀಡುತ್ತಿದ್ದು 1991–92ನೇ ಸಾಲಿಗೆ ರೂ.55.00 ಕೋಟಿ ಗಳನ್ನು ಬಿಡುಗಡೆ ಮಾಡಿದೆ. ಅಂದರೆ ಉಳಿದ 50 ಲಕ್ಷ ಪಡಿತರ ಚೀಟಿದಾರರನ್ನು ಸಹಾಯಧನಯುಕ್ತ ಯೋಜನೆಗೆ ಒಳಪಡಿಸಬೇಕಾಗುತ್ತದೆ. ಇದರಿಂದಾಗಿ ಇನ್ನೂ ಹೆಚ್ಚಿನ ಆರ್ಥಿಕ ಭಾರವನ್ನು ಸರ್ಕಾರವು ಹೊರಬೇಕಾಗುತ್ತದೆ. ಸರ್ಕಾರದ ಈಗಿನ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ಭಾರವನ್ನು ಹೊರಲು ಶಕ್ಯವಾಗುವುದಿಲ್ಲ.

1992–93 ನೇ ಸಾಲಿನಲ್ಲಿ ಯೋಗ ಶಿಕ್ಷಣವನ್ನು ಒಂದು ಭಾಗವನ್ನಾಗಿ ಅಳವಡಿಸುವ ಬಗ್ಗೆ.

1568. ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರವು 1992–93ನೇ ಸಾಲಿನಲ್ಲಿ ಶಾಲಾ ಕಾಲೇಜುಗಳಲ್ಲಿ ಯೋಗ ಶಿಕ್ಷಣವನ್ನು ಪಠ್ಯ ವಸ್ತುವಿನಲ್ಲಿ ಒಂದು ಭಾಗವನ್ನಾಗಿ ಅಳವಡಿಸಲು ತೀರ್ಮಾನಿಸಿದೆಯೇ ;

ಆ) ಹಾಗಿದ್ದರೆ, ಯೋಗ ಶಿಕ್ಷಣವನ್ನು 14 ವರ್ಷದೊಳಗಿನ ಮಕ್ಕಳಿಗೆ ನೀಡಿದರೆ ಅದರಿಂದ ಉಂಟಾಗುವ ಪರಿಣಾಮದ ಬಗ್ಗೆ ಸರ್ಕಾರದ ಗಮನದಲ್ಲಿಯೇ;

ಇ) ಇದನ್ನು ಸರ್ಕಾರವು ಗಣನೆಯಲ್ಲಿಟ್ಟುಕೊಂಡು ಕಾಲೇಜುಗಳಿಗೆ ಮಾತ್ರ ಯೋಗ ಶಿಕ್ಷಣವನ್ನು ಅಳವಡಿಸಲಾಗುವುದೇ;

ಈ) ಯೋಗ ಶಿಕ್ಷಣದಿಂದ ಚಿಕ್ಕ ಮಕ್ಕಳಿಗೆ ಆಗುವ ಪರಿಣಾಮಗಳ ಬಗ್ಗೆ ವೈದ್ಯಕೀಯ ವರದಿ ಪಡೆಯಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) ಹೌದು

ಆ) ಯಾವ ಅಹಿತಕರ ಪರಿಣಾಮಗಳು ಉಂಟಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಆಸನಗಳು ದೈಹಿಕ ಅರ್ಹತೆಯನ್ನು ಉತ್ತಮಗೊಳಿಸುವು ಕಾರಣ ಸಾಮಾನ್ಯವಾಗಿ ವೈದ್ಯಕೀಯ ವರದಿಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ.

ಗುರುವಾಯನ ಕೆರೆಯಿಂದ ಬೆಳ್ತಂಗಡಿಗೆ ಖಾಸಗಿ ಬಸ್

1229. ಶ್ರೀ ಕೆ. ಗಂಗಾಧರಗೌಡ (ಬೆಳ್ತಂಗಡಿ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುರುವಾಯನ ಕೆರೆಯಿಂದ ಬೆಳ್ತಂಗಡಿ ತಾಲ್ಲೂಕು ಕೇಂದ್ರಕ್ಕೆ (3 ಕಿ.ಮೀ. ದೂರ) ಖಾಸಗಿ ಬಸ್ಸುಗಳ ಸಂಚಾರಕ್ಕೆ ಅನುಮತಿ ನೀಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಆ) ಗಮನ ಹರಿಸಿದ್ದರೆ ಅದರ ವಿಳಂಬಕ್ಕೆ ಕಾರಣಗಳೇನು;

ಇ) ಖಾಸಗಿ ಬಸ್ಸು ಸಂಚಾರಕ್ಕೆ ಯಾವಾಗ ಅನುಮತಿ ನೀಡಲಾಗುವುದು?

LA-Vol-III 20

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) –

ಅ) ಈಗಾಗಲೇ ಈ ಮಾರ್ಗವನ್ನು ರಾಷ್ಟ್ರೀಕರಣಗೊಳಿಸಲಾಗಿರುವುದರಿಂದ, ಖಾಸಗಿ ಬಸ್ಸುಗಳ ಸಂಚಾರಕ್ಕೆ ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲಿನ (ಅ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ಮೇಲಿನ (ಅ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಹಾಸನ ಪಟ್ಟಣದ ಬಾಲಿಕೆಯರ ಮತ್ತು ಬಾಲಕರ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಸ್ಥಳದ ಅಭಾವ.

1232. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹಾಸನ ಪಟ್ಟಣದ ಬಾಲಿಕೆಯರ ಹಾಗೂ ಬಾಲಕರ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಸ್ಥಳಾಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ 1992–93ನೇ ಸಾಲಿನಲ್ಲಿ ತಲಾ 4 ರೂಮ್‌ಗಳನ್ನು ಕಟ್ಟಿಸಲು ಸರ್ಕಾರ ಸೂಕ್ತ ಕ್ರಮತೆಗೆದುಕೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) ಹೌದು

ಆ) 1992–93ರ ಆಯವ್ಯಯದಲ್ಲಿ 2 ಕಾಲೇಜುಗಳಿಗೂ ಕೊಠಡಿಗಳನ್ನು ಒದಗಿಸುವುದಕ್ಕೆ ತಲಾ 3.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ನಕಲಿ ಪಡಿತರ ಚೀಟಿಗಳ ವಜಾ.

1423. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನಕಲಿ ಪಡಿತರ ಚೀಟಿಗಳನ್ನು ಕಂಡು ಹಿಡಿದು ವಜಾ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಆ) ಆ ದಿಸೆಯಲ್ಲಿ ಕೈಗೊಂಡಿರುವ ಕ್ರಮಗಳೇನು?

ಇ) ಪಡಿತರ ಚೀಟಿಗಳ ಬಣ್ಣ ಬದಲಾಯಿಸಲು ಸರ್ಕಾರವು ಯೋಚಿಸಿದೆಯೇ?

ಈ) ಈ ದಿಸೆಯಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) ಹೌದು

ಆ) ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ವಜಾ ಮಾಡುವ ಕಾರ್ಯ ಸತತವಾಗಿ ನಡೆಯುತ್ತಿದೆ. ರಾಜ್ಯದಲ್ಲಿ ಈಗಾಗಲೇ ಒಟ್ಟು 72324 ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ವಜಾ ಮಾಡಲಾಗಿದೆ.

ಇ) ಹೌದು (ಹಸಿರು ಬಣ್ಣದ ಪಡಿತರ ಚೀಟಿಗಳು)

ಈ) ಹಸಿರು ಪಡಿತರ ಚೀಟಿಗಳನ್ನು ನೀಡಿ ಈಗಾಗಲೇ 6–7 ವರ್ಷಗಳಾಗಿದ್ದು ಅವುಗಳ ಪುಟಗಳೆಲ್ಲಾ ಮುಗಿದು ಹೋಗಿರುತ್ತವೆ. ಅಲ್ಲದೆ, ಈಗಿರುವ ವಾರ್ಷಿಕ ಆದಾಯವನ್ನು ರೂ.3,500–00 ರಿಂದ ರೂ.6,400–00 ಕ್ಕೆ ಹೆಚ್ಚಿಸಿರುವುದರಿಂದ ಫಲಾನುಭವಿಗಳನ್ನು ಗುರುತಿಸಲು ಹೊಸದಾಗಿ ಸಮೀಕ್ಷೆ ಕಾರ್ಯ ಕೈಗೊಂಡಿದೆ. ಸಮೀಕ್ಷೆಯ ನಂತರ ಹೊಸ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಸರ್ಕಾರ ತೀರ್ಮಾನಿಸಿದೆ.

ಗೇಣಿದಾರರಿಗೆ ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವುದರ ಬಗ್ಗೆ

1394. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಗೇಣಿದಾರರಿಗೆ ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವಾಗ ಆಯಾ ಜಮೀನುದಾರರ ಪಡಿತರ ಚೀಟಿಗಳನ್ನು ಸಲ್ಲಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಒತ್ತಾಯಿಸುತ್ತಿದೆ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?
2) ಸಾಮಾನ್ಯವಾಗಿ ಎಲ್ಲಾ ಗೇಣಿದಾರರು ಜಮೀನುದಾರರೊಂದಿಗೆ ಭಾಂದವ್ಯ ಅಷ್ಟೊಂದು ಚೆನ್ನಾಗಿಲ್ಲದಿರುವುದರಿಂದಾಗಿ ಗೇಣಿದಾರರಿಗೆ ಜಮೀನುದಾರರ ಪಡಿತರ ಚೀಟಿಗಳನ್ನು ಪಡೆಯುವುದು ಅಸಾಧ್ಯವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?
3) ಹಾಗಿದ್ದಲ್ಲಿ ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಗೇಣಿದಾರರಿಗೆ ಪಡಿತರ ಚೀಟಿ ನೀಡುವಾಗ ಜಮೀನುದಾರರ ಪಡಿತರ ಚೀಟಿಗಳನ್ನು ಸಲ್ಲಿಸಲು ಒತ್ತಾಯಿಸಿಲ್ಲ. ಗೇಣಿದಾರರ ವಾಸ್ತವ್ಯದ ಬಗೆಗೆ ಬಾಡಿಗೆ ಸಂದ ರಸೀದಿಯನ್ನು ಸಲ್ಲಿಸಲು ಕೋರಲಾಗುತ್ತಿದೆ. ಒಂದು ವೇಳೆ ಬಾಡಿಗೆ ಸಂದ ರಸೀದಿಯನ್ನು ಸಲ್ಲಿಸಲಾಗದಿದ್ದಲ್ಲಿ ಬೇರೆ ದಾಖಲೆಗಳನ್ನು ನೀಡಬಹುದಾಗಿದೆ.
2) ಉದ್ಭವಿಸುವುದಿಲ್ಲ
3) ಉದ್ಭವಿಸುವುದಿಲ್ಲ

ನೇಯ್ಗೆಯಲ್ಲಿ ಆಧುನಿಕ ವೈಜ್ಞಾನಿಕ ತರಬೇತಿ

1396. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನೇಯ್ಗೆಯಲ್ಲಿ ಆಧುನಿಕ ವೈಜ್ಞಾನಿಕ ತರಬೇತಿ ನೀಡುವಂತೆ ಸೂಕ್ತ ತಾಂತ್ರಿಕ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವಂತೆ ಕೋರಿ ಅಖಿಲ ಕರ್ನಾಟಕ ದೇವಾಂಗ ಯುವಕ ಮೇದಿಕೆಯವರು ಸಲ್ಲಿಸಿದ್ದ ಮನವಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?
ಆ) ಈ ಬೇಡಿಕೆಯನ್ನು ನೆರವೇರಿಸುವುದರಿಂದ ವೃತ್ತಿಯನ್ನು ಆಧುನೀಕರಿಸಿಕೊಂಡು, ಆಂತರಾಷ್ಟ್ರೀಯ ಮಟ್ಟಕ್ಕೇರಿಸಲು ಸಹಾಯಕವಾಗುವುದರಿಂದ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಅಂತಹ ಮನವಿ ಶಿಕ್ಷಣ ಇಲಾಖೆಯ ಮುಂದಿರುವುದಿಲ್ಲ.
ಆ) ಉದ್ಭವಿಸುವುದಿಲ್ಲ

ಶಾಲಾ ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆ

1409. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಪ್ರಾಥಮಿಕ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಬಂದಿದೆ

ಆ) 1990–91ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.2.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಹಣದಲ್ಲಿ 17 ಪ್ರಾಥಮಿಕ ಶಾಲೆಗಳಿಗೆ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ

1410. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ತೆರೆದ ಕಿರಿಯ ಪ್ರಾಥಮಿಕ ಶಾಲೆಗೆ ಅತೀ ಅಗತ್ಯವಾದ ಕುಡಿಯುವ ನೀರಿನ ಸೌಲಭ್ಯದ ವ್ಯವಸ್ಥೆ ಮಾಡಲಾಗಿದೆಯೇ;

ಆ) ಮಾಡದಿದ್ದಲ್ಲಿ, ಎಷ್ಟು ಹಣ ಇದಕ್ಕಾಗಿ ಕಾದಿರಿಸಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ತಾತ್ಕಾಲಿಕ ವ್ಯವಸ್ಥೆ ಇದೆ

ಆ) ಉದ್ಭವಿಸುವುದಿಲ್ಲ

ಬೆಂಗಳೂರು ಡೈರಿಯಲ್ಲಿ ಅಧಿಕಾರಿಗಳ ನೇಮಕಾತಿಯಲ್ಲಿ ಮೀಸಲಾತಿ.

1411. ಶ್ರೀ ಅಂಜನಾಮೂರ್ತಿ (ನೆಲಮಂಗಲ) :– ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಂಗಳೂರು ಹಾಲಿನ ಡೈರಿ ಮತ್ತು ಬೆಂಗಳೂರು ಹಾಲು ಒಕ್ಕೂಟಗಳಿಗೆ ಅಧಿಕಾರಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ 1984ರಿಂದ 1991ರ ವರೆಗೆ ಮೀಸಲಾತಿ ಪದ್ಧತಿಯನ್ನು ಅನುಸರಿಸಲಾಗಿದೆಯೆ?

ಆ) ಹಾಗಿಲ್ಲದಿದ್ದಲ್ಲಿ ಮೀಸಲಾತಿ ಪದ್ಧತಿಯನ್ನು ಅನುಸರಿಸದಿರಲು ಕಾರಣಗಳೇನು?

ಇ) ಮೇಲ್ಕಂಡ ಮೀಸಲಾತಿ ಪದ್ಧತಿಯನ್ನು ಜಾರಿಗೆ ತರದ ಅಧಿಕಾರಿ ವರ್ಗದವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) –

ಅ) ಬೆಂಗಳೂರು ಡೈರಿ "ಬೆಂಗಳೂರು ಹಾಲು ಒಕ್ಕೂಟಕ್ಕೆ ವರ್ಗಾವಣೆಯಾದ ನಂತರ ನೇಮಕಾತಿಗಳು ಆಗಿಲ್ಲ.

ಬೆಂಗಳೂರು ಹಾಲು ಒಕ್ಕೂಟದ ಶೇಖರಣೆ ಮತ್ತು ಪರಿಕರ ವಿಭಾಗಕ್ಕೆ 9 ವಿಸ್ತರಣಾಧಿಕಾರಿ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಂದ ನೇಮಕಾತಿ ಮಾಡಿಕೊಳ್ಳುವಂತಹ ಹಂತದಲ್ಲಿ ಕೆಲವರು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ಹಾಕಿರುವುದರ ಮೂಲಕ (ಡಬ್ಲ್ಯೂಪಿ 18328:28) ನೇಮಕಾತಿಗಳನ್ನು ಪ್ರಶ್ನಿಸಲಾಗಿದೆ.

ಆ) ಈ ಹಿಂದೆ ಬೆಂಗಳೂರು ಡೈರಿಯು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಒಂದು ಅಂಗ ಸಂಸ್ಥೆಯಾಗಿದ್ದು ಬೆಂಗಳೂರು ಡೈರಿಗೆ ಬೇಕಾಗಿದ್ದ ಸಿಬ್ಬಂದಿಯನ್ನು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸಂಸ್ಥೆಯೇ ನೇಮಕ ಮಾಡಿಕೊಡುತ್ತಿದ್ದು, ತದನಂತರ

1984 ರಲ್ಲಿ 'ಕರ್ನಾಟಕ ಹಾಲು ಮಹಾ ಮಂಡಳ,' ಅಸ್ತಿತ್ವಕ್ಕೆ ಬಂದು ಬೆಂಗಳೂರು ಡೈರಿಯ ಆಸ್ತಿ ಜವಾಬ್ದಾರಿ ಮತ್ತು ಸಿಬ್ಬಂದಿ ಸಮೇತ ಕರ್ನಾಟಕ ಹಾಲು ಮಹಾಮಂಡಳಿಗೆ ಹಸ್ತಾಂತರವಾಯಿತು. ಮತ್ತೆ 1.9.88 ರಂದು ಬೆಂಗಳೂರು ಡೈರಿಯನ್ನು ಆಸ್ತಿ ಜವಾಬ್ದಾರಿ ಮತ್ತು ಸಿಬ್ಬಂದಿ ಸಮೇತ ಬೆಂಗಳೂರು ಹಾಲು ಒಕ್ಕೂಟಕ್ಕೆ ವರ್ಗಾಯಿಸಲಾಯಿತು. ಈ ಕಾರಣಗಳಿಂದ ಬೆಂಗಳೂರು ಹಾಲು ಒಕ್ಕೂಟದಲ್ಲಿ ನೇಮಕಾತಿಗಳು ಆಗಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲ್ಕಂಡ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ಹೇಳಿರುವ ಕಾರಣಗಳಿಂದ ಕ್ರಮತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

SETTLING LAND ACQUISITION CASES AND CASES RELATING TO GOVERNMENT THROUGH LOK ADALAT AND JANATHA NYAYALAYAS IN THE STATE.

1418. SRI SHIVANANDA H. KOUJALGI, (Bylahongal) :– Will the Minister for Law be pleased to State –

a) Whether there is any scope for settling Land Acquisition cases through Lok Adalat and Janatha Nyayalayas in the State;

b) Whether Land Acquisition cases have been settled through Lok Adalat. If not whether Government would take steps to settle these cases in future.

c) Whether Government during the past three years, has paid Compensation in the Motor Vehicle Accident cases through Lok Adalat and janatha Nyayalayas (District wise information be given);

d) How many cases are settled through Lok Adalat and janatha Nyayalaya and Compensation given (District wise information be given);

e) Is it a fact that some cases settled in Lok Adalat have not been respected by the Court?

SRI BLASIUS M.D' SOUZA (Minister for Law) –

a) Yes.

b) No

Under consideration

c) In Motor Vehicle Accident cases compensation has been paid by the Insurance Companies (as per Annexure – I)

d) As per Annexure – II.

e) It has not come to the notice of the Government.

ANNEXURE – I

DISTRICT WISE INFORMATION

Sl. No.	District	Year	No. of Janatha Nyayalayas Camps conducted	No. of Motor Vehicle Accident cases displosed	Amountof Compensation paid in Motor Vehicle Acci–dent Cases Rs.
1	2	3	4	5	6
1.	Bangalore	1989	4	758	1,61,85,850
		1990	3	377	97,18,818
		1991	4	394	1,73,19,608
	Total		11	1529	4,32,24,276
2.	Belgaum	1989	03	286	39,16,748
		1990	03	185	19,44,720
		1991	01	85	8,18,200
	Total		07	556	66,79,668
3.	Bellary	1989	01	39	6,87,950
		1990	03	302	48,46,050
		1991	01	134	15,48,910
	Total		05	475	70,82,910
4.	Bidar	1989	01	17	3,52,000
		1990	02	48	9,94,900
		1991	–	–	–
	Total		03	65	13,46,900
5.	Bijapur	1989	02	116	14,69,150
		1990	01	58	6,59,700
		1991	02	212	21,37,550
	Total		05	386	42,66,400
6.	Chickmagalur	1989	01	98	6,96,500
		1990	01	118	6,32,800
		1991	02	131	13,89,750
	Total		04	347	27,19,050
7.	Chitradurga	1989	04	412	24,70,300
		1990	02	272	37,69,041
		1991	04	298	32,17,719
	Total		10	982	94,57,060

1	2	3	4	5	6
8.	Mangalore	1989	02	541	89,09,644
		1990	02	702	1,18,97,520
		1991	03	791	1,48,58,750
	Total		07	2034	3,56,65,914
9.	Dharwad	1989	02	438	58,21,546
		1990	03	346	35,18,800
		1991	01	123	20,04,600
	Total		06	907	1,13,44,946
10.	Gulbarga	1989	—	—	—
		1990	01	68	11,55,250
		1991	02	159	44,45,450
	Total		03	227	56,00,700
11.	Hassan	1989	03	330	36,22,850
		1990	03	218	15,85,050
		1991	04	154	14,63,600
	Total		10	702	66,71,500
12.	Kolar	1989	02	110	17,29,800
		1990	02	131	20,20,650
		1991	02	63	14,38,850
	Total		06	304	51,89,300
13.	Mandya	1989	02	95	9,30,850
		1990	04	125	20,65,200
		1991	01	31	2,88,545
	Total		07	251	32,84,595
14.	Mysore	1989	03	206	45,75,750
		1990	04	208	37,87,100
		1991	03	184	31,51,000
	Total		10	598	1,15,13,850
15.	Raichur	1989	02	329	23,90,948
		1990	02	207	33,36,986
		1991	01	121	22,70,675
	Total		05	657	79,98,609

1	2	3	4	5	6
16.	Shimoga	1989	02	122	12,98,350
		1990	02	223	41,33,690
		1991	02	139	17,14,500
	Total		06	384	71,46,540
17.	Tumkur	1989	02	126	18,22,050
		1990	02	110	26,98,000
		1991	03	270	38,04,900
	Total		07	506	83,24,950
18.	Karwar (U.K.)	1989	02	280	43,00,394
		1990	03	205	24,33,575
		1991	02	150	23,63,600
	Total		07	635	90,97,569
19.	Kodagu	1989	01	07	1,80,000
		1990	01	02	18,000
		1991	–	–	–
	Total		02	09	1,98,000

ANNEXURE – II
DISTRICTEWISE INFORMATION

Sl. No.	District	Total No. of cases settled	Total No. of Civil/ Criminal/ Traffic & other cases settled	Total No. of Motor Vehicle Accident Cases settled	Total amount of Compensation paid in the Motor Vehicle Accident cases.
1	2	3	4	5	6
1.	Bangalore	1,85,775	1,84,246	1,529	4,32,24,276
2.	Belgaum	1,225	669	556	66,79,668
3.	Bellary	1,135	660	475	70,82,910
4.	Bidar	1,283	1,218	65	13,46,900
5.	Bijapur	1,325	939	386	42,66,400
6.	Chickmagalur	814	467	347	27,19,050
7.	Chitradurga	1,425	443	982	94,57,060
8.	Mangalore (D.K.)	2,889	855	2,034	3,56,65,914
9.	Dharwad	1,896	989	907	1,13,44,946
10.	Gulbarga	1,565	1,338	227	56,00,700
11.	Hassan	1,597	895	702	66,71,500
12.	Kolar	645	341	304	51,89,300
13.	Mandya	549	298	251	32,84,595
14.	Mysore	1,468	870	598	1,15,13,850
15.	Raichur	1,540	883	657	79,98,609
16.	Shimoga	859	475	384	71,46,540
17.	Tumkur	2,405	1,899	506	83,24,950
18.	Kanwar (U.K.)	834	199	635	90,97,569
19.	Kodagu	23	14	09	1,98,000
	Total	2,09,252	1,97,698	11,554	18,66,12,737

ರಾಜ್ಯದಲ್ಲಿ ವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ

1419. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ 1990–91 ಮತ್ತು 1991–92ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಮಹಾವಿದ್ಯಾಲಯ ಹಾಗೂ ಖಾಸಗಿಯ ಪ್ರೌಢ ಶಾಲೆ ಮತ್ತು ಕಿರಿಯ ಮಹಾವಿದ್ಯಾಲಯಗಳನ್ನು ತೆರೆಯಲಾಗಿದೆ (ಜಿಲ್ಲಾ ಮತ್ತು ತಾಲ್ಲೂಕುವಾರು ತಿಳಿಸುವುದು)

ಆ) ಖಾಸಗಿ ವಿದ್ಯಾ ಸಂಸ್ಥೆಗಳನ್ನು ಯಾವ ಸಂಸ್ಥೆಯವರು ತೆರೆದಿರುವರು (ಆ ಸಂಸ್ಥೆಯ ಹೆಸರು ತಿಳಿಸುವುದು)

ಇ) ಸರ್ಕಾರಿ ಪ್ರೌಢಶಾಲೆ ಹಾಗೂ ಕಿರಿಯ ಮಹಾವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ ; ನೇಮಿಸದೇ ಇದ್ದಲ್ಲಿ ನೇಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಎಂದಿನಿಂದ ನೇಮಿಸಲಾಗುವುದು.

ಈ) ಈ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಮಹಾವಿದ್ಯಾಲಯಗಳನ್ನು ತೆರೆಯುವುದರಿಂದ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಭಾರ ಬೀಳುವುದು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಕ್ಕೆ ಸರ್ಕಾರವು ಒಪ್ಪಿಗೆ ನೀಡಿದೆಯೇ;

ಉ) ಇದುವರೆಗೂ ಖಾಯಂ ಶಿಕ್ಷಕರನ್ನು ನೇಮಿಸದಿರುವುದರಿಂದ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಊ) ಈಗಿರುವ ಸರ್ಕಾರಿ ಪ್ರೌಢಶಾಲೆ ಹಾಗೂ ಖಾಸಗೀ ಪ್ರೌಢ ಶಾಲೆಗಳಲ್ಲಿ ಹೆಚ್ಚಿನ ತರಗತಿಗಳ ಅನುಮತಿ ನಿರಾಕರಿಸಲಾಗುತ್ತಿದೆ ಎಂಬ ಸಂಗತಿ ನಿಜವೆ. ಅನುಮತಿ ನೀಡಿದ್ದಲ್ಲಿ ಇನ್ನು ಎಷ್ಟು ಶಿಕ್ಷಕರು ಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) 1) 1990–91 ನೇ ಸಾಲಿನಲ್ಲಿ ಪ್ರಾರಂಭಿಸಲಾದ ಶಾಲಾ ಕಾಲೇಜುಗಳ ವಿವರ

1)	ಸರ್ಕಾರಿ ಪ್ರೌಢ ಶಾಲೆ	10
2)	ಖಾಸಗಿ ಪ್ರೌಢ ಶಾಲೆ	33
3)	ಸರ್ಕಾರಿ ಕಿರಿಯ ಮಹಾವಿದ್ಯಾಲಯ	11
4)	ಖಾಸಗೀ ಸಂಯುಕ್ತ ಕಿರಿಯ ಕಾಲೇಜು	04

2) 1991–92ನೇ ಸಾಲಿನಲ್ಲಿ ಮಂಜೂರಾದ ಶಾಲಾ ಕಾಲೇಜುಗಳ ವಿವರ

1)	ಸರ್ಕಾರಿ ಪ್ರೌಢಶಾಲೆ	131
2)	ಖಾಸಗಿ ಪ್ರೌಢಶಾಲೆ	647
3)	ಸರ್ಕಾರಿ ಕಿರಿಯ ಮಹಾವಿದ್ಯಾಲಯ	80
4)	ಖಾಸಗಿ ಸಂಯುಕ್ತ ಕಿರಿಯ ಮಹಾವಿದ್ಯಾಲಯ (ಜಿಲ್ಲಾವಾರು ಪಟ್ಟಿ ನುತರ ಒದಗಿಸಲಾಗುವುದು)	141

ಆ) ಸಂಸ್ಥೆಗಳ ವಿವರ ನಂತರ ಒದಗಿಸಲಾಗುವುದು

ಇ) ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಿಗೆ ಸಿಬ್ಬಂದಿ ಮಂಜೂರು ಮಾಡಿರುವುದಿಲ್ಲ.

ಹೊಸದಾಗಿ ಮಂಜೂರಾಗಿರುವ ಕೆಲವೊಂದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಿಬ್ಬಂದಿಯನ್ನು ಮಂಜೂರು ಮಾಡಲಾಗಿದೆ. ಹೊಸ ಶಾಲಾ ಕಾಲೇಜುಗಳಿಗೆ ಸಿಬ್ಬಂದಿ ಮಂಜೂರಾತಿ ವಿಷಯ ಪರಿಶೀಲನೆಯಲ್ಲಿದೆ.

ಈ) ಪ್ರತಿಯೊಂದು ಸರ್ಕಾರಿ ಪ್ರೌಢಶಾಲೆಗೆ ವಾರ್ಷಿಕವಾಗಿ ರೂ.3.00 ಲಕ್ಷ ಮತ್ತು ಪ್ರತಿಯೊಂದು ಕಿರಿಯ ಮಹಾವಿದ್ಯಾಲಯಕ್ಕೆ ರೂ.3.50 ಲಕ್ಷ ಖರ್ಚು ಬರುವುದು. ಈ ಶಾಲಾ ಕಾಲೇಜುಗಳಿಗೆ ಸಿಬ್ಬಂದಿಗಳ ನೇಮಕದ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಬಗತ್ಯವಿರುವಷ್ಟು ಸಿಬ್ಬಂದಿಯನ್ನು ನಿಯೋಜನೆ ಮೇರೆಗೆ ಒದಗಿಸಿರುವುದರಿಂದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ತೊಂದರೆಯಾಗಿರುವುದಿಲ್ಲ.

ಊ) ಆರ್ಥಿಕ ಮಿತವ್ಯಯ ಇರುವುದರಿಂದ ಸರ್ಕಾರಿ ಪ್ರೌಢ ಶಾಲೆಗಳಿಗೆ ಹೆಚ್ಚಿನ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡುತ್ತಿಲ್ಲ. ಖಾಸಗೀ ಪ್ರೌಢ ಶಾಲೆಗಳಲ್ಲಿ ಶಾಶ್ವತ ಅನುದಾನ ರಹಿತವಾಗಿ ಹೆಚ್ಚಿನ ತರಗತಿಗೆ ಅನುಮತಿ ನೀಡಲಾಗುತ್ತಿದೆ.

ಹುಣಸೂರಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಬಗ್ಗೆ

1487. ಶ್ರೀ ಎಸ್.ಚಿಕ್ಕಮಾದು (ಹುಣಸೂರು) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರವು ಹುಣಸೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದು ನಿಜವೆ?

ಆ) ಬೆಳೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈಗಿರುವ ಸ್ಥಳಾವಕಾಶವು ಸಾಲದಾಗಿದೆ ಎಂಬ- ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈಗಿರುವ ಸ್ಥಳಾವಕಾಶವನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಸಚಿವರು) –

ಅ) ನಿಜ

ಆ) ಬಂದಿದೆ

ಇ) ಯಾವ ಕ್ರಮ ಕೈಗೊಂಡಿಲ್ಲ.

ಹಳಿಯಾಳ ಹಾಗೂ ಅಂಕೋಲಾ ಬಸ್ ನಿಲ್ದಾಣಕ್ಕೆ ಕವರ್ಡ್ ಅಕಾಮಡೇಶನ್ ಮಂಜೂರಾತಿ

1510. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಹಾಗೂ ಅಂಕೋಲ ಬಸ್ ನಿಲ್ದಾಣಗಳಿಗೆ ಆವರಿತ ಜಾಗ (ಕವರ್ಡ್ ಅಕಾಮಡೇಶನ್) ಮಂಜೂರಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಅದಕ್ಕೆ ಎಂದು ಮಂಜೂರಾತಿ ದೊರೆಯಿತು.

ಇ) ಮಂಜೂರಾಗಿ ಹಲವಾರು ತಿಂಗಳುಗಳಾದರೂ ಇದುವರೆವಿಗೂ ಕೆಲಸ ಪ್ರಾರಂಭಿಸದಿರಲು ಕಾರಣಗಳೇನು?

ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಆದಷ್ಟು ಬೇಗ ಕೆಲಸ ಪ್ರಾರಂಭಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ?

ಉ) ಇವುಗಳಿಗೆ ತಗಲುವ ವೆಚ್ಚ ವೆಷ್ಟು? (ಹಳಿಯಾಳ ಮತ್ತು ಅಂಕೋಲದ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) –

ಅ) ಹೌದು

ಆ) 5.11.90 ರಂದು ಮಂಜೂರಾತಿ ದೊರೆಯಿತು.

ಇ) 2 ಕೆಲಸಗಳಿಗೆ ಮೊದಲನೇ ಬಾರಿಗೆ ಟೆಂಡರ್ ಕರೆದಾಗ ಯಾವ ಗುತ್ತಿಗೆದಾರರು ಟೆಂಡರಿನಲ್ಲಿ ಪಾಲ್ಗೊಳ್ಳಲಿಲ್ಲ. ಎರಡನೇ ಬಾರಿಗೆ ಅಂಕೋಲ ಕೆಲಸಕ್ಕೆ ಯಾವ ಗುತ್ತಿಗೆದಾರರು ಬಂದಿರುವುದಿಲ್ಲ. ಹಳಿಯಾಳಕ್ಕೆ ಹೆಚ್ಚಿನ ದರ ನಮೂದಿಸಿದ್ದರಿಂದ ಟೆಂಡರನ್ನು ರದ್ದುಪಡಿಸಲಾಯಿತು. ಪುನಃ ಈ ಕೆಲಸಗಳಿಗೆ ಟೆಂಡರ್ ಕರೆದಾಗ ಇದಕ್ಕೂ ಯಾವ ಗುತ್ತಿಗೆದಾರರು ಬರಲಿಲ್ಲ. ಆದಕಾರಣ, ಈ ಕೆಲಸವನ್ನು ತುಂಡು ಪದ್ಧತಿಯ ಮೇಲೆ ಕೊಡಲು ಪ್ರಸ್ತಾವನೆಯಲ್ಲಿ ಇದೆ.

ಈ) ಆದಷ್ಟು ಬೇಗನೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಹಳಿಯಾಳಕ್ಕೆ 5.00 ಲಕ್ಷ
ಅಂಕೋಲಕ್ಕೆ 5.00 ಲಕ್ಷ ರೂ.ಗಳು.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿರುವ ಗ್ರೂಪ್ "ಬಿ" ಅಧಿಕಾರಿಗಳ ಸಂಖ್ಯೆ

1577. ಶ್ರೀ ಎ.ಎಂ. ಹಿಂಡಸ್ಗೇರಿ (ಹುಬ್ಬಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿರುವ ಗ್ರೂಪ್ 'ಬಿ' ಅಧಿಕಾರಿಗಳ ಒಟ್ಟು ವೃಂದ ಬಲ ಎಷ್ಟು?

ಆ) ಪದೋನ್ನತಿಗಳಿಗಾಗಿ ಇರುವ ಹುದ್ದೆಗಳ ಸಂಖ್ಯೆ ?

ಇ) ಈ ಪದೋನ್ನತಿ ಹುದ್ದೆಗಳನ್ನು ತುಂಬಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಪದೋನ್ನತಿ ನೀಡಿ ತುಂಬಲಾಗಿರುವ ಹುದ್ದೆಗಳ ಸಂಖ್ಯೆ ಮತ್ತು ಪದೋನ್ನತಿ ನೀಡಬೇಕಾದ ಹುದ್ದೆಗಳ ಸಂಖ್ಯೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) --

ಅ) 32

ಆ) 19

ಇ) ಹೌದು

ಈ) ಉದ್ಭವಿಸುವುದಿಲ್ಲ

ಬೀದರ್ ಜಿಲ್ಲೆಗೆ 1991–92ನೇ ಸಾಲಿನಲ್ಲಿ ವಕ್ಫ್ ಮಂಡಳಿಯಿಂದ ಬಿಡುಗಡೆ ಮಾಡಲಾದ ಸಹಾಯಧನ

1517. ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) :– ಮಾನ್ಯ ಸಾರಿಗೆ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯಿಂದ 1991–92ನೇ ಸಾಲಿನಲ್ಲಿ ಮಸೀದಿಗಳ ಜೀರ್ಣೋದ್ಧಾರ, ಹೊಸ ಕಟ್ಟಡದ (ಮಸೀದಿ) ನಿರ್ಮಾಣದ ಬಗ್ಗೆ ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜನವರಿ 31, 1992 ರ ವರೆಗೆ)? (ತಾಲ್ಲೂಕುವಾರು ವಿವರಗಳನ್ನು ಸಂಸ್ಥೆಗಳ ಹೆಸರಿನ ಸಹಿತ ನೀಡುವುದು)

ಆ) ಈ ಪೈಕಿ ಎಷ್ಟು ಅರ್ಜಿಗಳಿಗೆ ಎಷ್ಟು ಮೊತ್ತದ ಸಹಾಯಧನವನ್ನು ಮಂಜೂರು ಮಾಡಲಾಗಿದೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) –

ಅ) ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ 50
ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಸಂಸ್ಥೆಯ ಹೆಸರು
	ಬೀದರ್ ತಾಲ್ಲೂಕು
1.	ಜಮಿಯ ಮಸ್ಜಿದ್, ರಂಜೋಖಾನ್ ವಿಲೇಜ್.
2.	ಮಸ್ಜಿದ್ ನೂರುಲ್, ಪಾಗೆಲ್ ವಾಡ.
3.	ಮಸ್ಜಿದ್ ಮುಸಾಫರ್ ಹುಸೇನಿ ಮನಿಯಾರ್ ತಲೀಮ್.
4.	ಜಿಲ್ಲಾ ಲಾಲ್ ಮೀಯಾನ್, ಕೋಲಾರ (ಕ).
5.	ಮಸ್ಜಿದ್ ದುಲ್ಹನ್, ಷಾ ಗಂಜ್ ಆಚೆ.
6.	ಜಮೆ ಮಸ್ಜಿದ್, ಮಲ್ಕಾಪುರ್

7. ಮಸ್ಜಿದ್ ರೆಹಮಾನಿಯ, ಚದ್ರಿ
8. ಕದೀಮ್ ಮಸ್ಜಿದ್, ಮನಹಳ್ಳಿ.
9. ಮಸ್ಜಿದ್ ಉಸಮಾನಿಯ.
10. ಜಮೆ ಮಸ್ಜಿದ್ ಮಾಲಿಕ್ ಮಿರ್ಜಾಪುರ್.
11. ಜಮೆ ಮಸ್ಜಿದ್ ತಿಲ್ಲಂಗ್ ಮಿರ್ಜಾಪುರ್.
12. ಮಸ್ಜಿದ್, ಸಾಲೆಹೀನ್ ಮೊಹಲ್ಲಾ ತಹವಾಡಿ.
13. ಮಸ್ಜಿದ್ ಮಕ್ಕಿ ವಿಲೇಜ್ ನಾಗೋರ್.

ಬೀದರ್ ತಾಲ್ಲೂಕು

1. ಮಸ್ಜಿದ್ ವಿಲೇಜ್ ಚಿಕ್ಲಿ (ಜಾನೆವಾಡ).
2. ಜಾಮೆ ಮಸ್ಜಿದ್, ಚತ್ ನಲ್.
3. ಜಮಿಯ ಮಸ್ಜಿದ್, ಬೊರಡಬ್ಬ
4. ಮಸ್ಜಿದ್ ವಿಲೇಜ್ ಬಂತಕಿ.
5. ಮಸ್ಜಿದ್ ಬೆಲ್ ಕೊರಿ, ಬಾಧಿ.
6. ಮಸ್ಜಿದ್ ಬೋಗ್ಡಿ ವಿಲೇಜ್.
7. ಜಮಿಯ ಮಸ್ಜಿದ್, ಸಂಗಾವಿ.
8. ಜಮಿಯ ಮಸ್ಜಿದ್, ಸಂತಪುರ್.
9. ಜಮಿಯ ಮಸ್ಜಿದ್, ಏಕಂಬ.
10. ಜಮಿಯ ಮಸ್ಜಿದ್, ಜಂತಿ.
11. ಮಸ್ಜಿದ್, ಮುರ್ಕಿ.

ಬಸವಕಲ್ಯಾಣ ತಾಲ್ಲೂಕು

1. ಮಸ್ಜಿದ್ ತಡೋಲ
2. ಜಮಿಯ ಮಸ್ಜಿದ್, ಮಚಲಾಂ
3. ಮಸ್ಜಿದ್ ಬಿಲ್ಗಿ ಖಾನ್.
4. ಜಮಿಯ ಮಸ್ಜಿದ್, ಮಟಾಲ.
5. ಜಮಿಯ ಮಸ್ಜಿದ್, ಕಿಟ್ಟ.
6. ಜಮಿಯ ಮಸ್ಜಿದ್, ಪರ್ತಾಪುರ್.
7. ಜಮಿಯ ಮಸ್ಜಿದ್, ಹುಲ್‌ಸೂರ್.
8. ಜಮಿಯ ಮಸ್ಜಿದ್, ಗಾರ್.

ಬಲ್ಕಿ ತಾಲ್ಲೂಕು

1. ಮಸೀದಿ, ಖಂಜ ವಿಲೇಜ್:
2. ಜಮಿಯ ಮಸ್ಜಿದ್, ಯರ್ನಳ್ಳಿ.
3. ಮೆಕ್ಕಾ ಮಸ್ಜಿದ್, ಹಲ್ಬರ್ಗ.
4. ಮಸ್ಜಿದ್ ಗುಡಿ.
5. ಜಮಿಯ ಮಸ್ಜಿದ್, ನಿರ್ಮಾನ್ ಹಳ್ಳಿ.
6. ಮಸೀದಿ ವಿಲೇಜ್ ಮೇಖಾರ್.
7. ಜಮಿಯ ಮಸ್ಜಿದ್ ಯಂಕಿನ.
8. ಜಮಿಯ ಮಸ್ಜಿದ್ ಗೋರ್ಡಿಂಚೋಲಿ.
9. ಜಮಿಯ ಮಸ್ಜಿದ್, ಧಾನುರ.

ಹುಮ್ನಾಬಾದ್ ತಾಲ್ಲೂಕು

1. ಜಮಿಯ ಮಸ್ಜಿದ್, ಮಂಗಲ್ಪಿ
2. ಜಮಿಯ ಮಸ್ಜಿದ್, ಮುರ್ತಂಗಿ.
3. ಮಸ್ಜಿದ್, ಮನೂರಕೇಲಿ.
4. ಜಮೆ ಮಸ್ಜಿದ್, ನಿರ್ಣ.
5. ಮಸ್ಜಿದ್, ಮೊಹಲ್ಲಾ ನೂರ್‌ಖಾನ್ ಅಖೋಡ.
6. ಜಮಿಯ ಮಸ್ಜಿದ್ ಮಡೇಗಿ.
7. ಮಸ್ಜಿದ್ ಗೋಶಿಯ ಚಿತಗುಪ್ಪ.
8. ಮಸ್ಜಿದ್ ಬಲಾಲ್ ಮಶ್ತರಿ.
9. ಜಮಿಯ ಮಸ್ಜಿದ್, ಹಲ್ಲಿಖೇಡ್.

ಆ) ಸಹಾಯಧನವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ.

ರಾಜ್ಯದಲ್ಲಿ ಕೈಗೊಂಡಿರುವ ಸಮಗ್ರ ಸಾಕ್ಷರತಾ ಆಂದೋಲನ

1518. ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಬೀದರ್) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1991–92ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸಮಗ್ರ ಸಾಕ್ಷರತಾ ಆಂದೋಲನವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು?

ಆ) ಇದಕ್ಕಾಗಿ ಮುಂಗಡ ಪತ್ರದಲ್ಲಿ ನಿಗದಿಪಡಿಸಲಾಗಿದ್ದ ಹಣವೆಷ್ಟು?

ಇ) ಇದರಲ್ಲಿ ಇದುವರೆವಿಗೂ ಬಿಡುಗಡೆ ಮಾಡಲಾದ ಹಣದ ಮೊತ್ತವೆಷ್ಟು? (ಜನವರಿ 31, 1992) (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಈ) ಸಾಕ್ಷರತಾ ಆಂದೋಲನದಿಂದ ಎಷ್ಟು ಲಕ್ಷ ಜನರು ಅಕ್ಷರಸ್ಥರಾಗಲಿದ್ದಾರೆ.

ಉ) ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುವ ಬೀದರ್ ಜಿಲ್ಲೆಗೆ ಈ ಯೋಜನೆಯ ಅಡಿಯಲ್ಲಿ ಹೆಚ್ಚಿನ ಪ್ರಮಾಣದ ಹಣವನ್ನೇನಾದರೂ ಬಿಡುಗಡೆ ಮಾಡಲಾಗಿದೆಯೇ?

ಊ) ಮಾಡಿದ್ದಲ್ಲಿ ಎಷ್ಟು ಪ್ರಮಾಣದ ಹಣವನ್ನು ಹೆಚ್ಚಿಗೆ ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ) 1991–92ನೇ ಸಾಲಿನಲ್ಲಿ ಮಂಡ್ಯ, ರಾಯಚೂರು, ತುಮಕೂರು, ಬೀದರ್, ಶಿವಮೊಗ್ಗ, ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು.

ಆ) 1991–92ನೇ ಸಾಲಿನಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿಯೇ ಪ್ರತ್ಯೇಕವಾಗಿ ಹಣವನ್ನು ಮುಂಗಡ ಪತ್ರದಲ್ಲಿ ನಿಗದಿಪಡಿಸಿರುವುದಿಲ್ಲ.

ಇ) ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿ ರಾಜ್ಯದ ಪಾಲನ್ನು (ಜನವರಿ 31, 1992 ರಂತೆ) ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

ಜಿಲ್ಲೆ	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
ಮಂಡ್ಯ	79.05
ರಾಯಚೂರು	80.29
ತುಮಕೂರು	30.31
ಬೀದರ್ ಮತ್ತು ಶಿವಮೊಗ್ಗ	ಈ ಜಿಲ್ಲೆಗಳಲ್ಲಿ ಪ್ರಾರಂಭದ ಹಂತದಲ್ಲಿ ಇರುವುದರಿಂದ ರಾಜ್ಯದ ಪಾಲು ಇನ್ನೂ ಬಿಡುಗಡೆಯಾಗಿರುವುದಿಲ್ಲ.

ಈ) ಜಿಲ್ಲೆಗಳ ಆಂದೋಲನ ಯೋಜನೆಗಳ ಅಂದಾಜಿನಂತೆ 5 ಜಿಲ್ಲೆಗಳಿಂದ ಸುಮಾರು 20,63,000 ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಉ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ನಿಯಮದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಹಣವನ್ನು ಬಿಡುಗಡೆ ಮಾಡಲಾಗುವುದು. ಆದ್ದರಿಂದ ಒಂದು ಜಿಲ್ಲೆಗೆ ಹೆಚ್ಚು ಅಥವಾ ಕಡಿಮೆ ಎಂಬ ಪ್ರಶ್ನೆ ಬರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್‌ಗಳ ಸಂಖ್ಯೆ

1578. ಶ್ರೀ ಎ.ಎಂ. ಹಿಂಡಸ್ಗೇರಿ (ಹುಬ್ಬಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್ ಗಳ ಒಟ್ಟು ಸಂಖ್ಯೆ ?

ಆ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಪದವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉಪ ನಿರ್ದೇಶಕರ ಹುದ್ದೆಗೆ ಇತರ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೇ?

ಇ) ಕೆ.ಎ.ಎಸ್. ಅಧಿಕಾರಿಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) 25

ಆ) ಇಲ್ಲ

ಇ) ಹೌದು

ಈ) ಇಲಾಖೆಯ ಅರ್ಹ ಅಧಿಕಾರಿಗಳ ಪ್ರಕರಣಗಳನ್ನು ಸಿ ಅಂಡ್ ಆರ್ ನಿಯಮಗಳನುಸಾರ ಪರಿಶೀಲಿಸಿ, ಅವರುಗಳಿಗೆ ಪದೋನ್ನತಿ ನೀಡಿ ಆದೇಶಗಳನ್ನು ಹೊರಡಿಸುವ ಸಂದರ್ಭದಲ್ಲಿ.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ.

1581. ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಅದರಲ್ಲಿ ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಶಿಕ್ಷಕರ ಹುದ್ದೆಗಳು ಬಹಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಹುಡುಗರ ಪಠ್ಯ ಸಂಖ್ಯೆಗಳ ಪ್ರಕಾರ ಇರಬೇಕಾದ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ತುಂಬುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಮೇಲೆ ಕಾಣಿಸಿರುವ 2 ತಾಲ್ಲೂಕುಗಳಲ್ಲಿ ಶಿಕ್ಷಕರು ಕಡಿಮೆ ಇರುವುದರಿಂದ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಬಂದಿದ್ದಲ್ಲಿ ತೀರ್ವ್ರಮ ಕೈಗೊಳ್ಳಲಾಗುವುದೇ;

ಈ) ಮುಂಡರಗಿ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರುವ ಶಾಲೆ ಕೊಠಡಿ, ಸುಖ್ಯೆ ಎಷ್ಟು ಹಾಗೂ ಕೊಠಡಿಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಉದಾ : ಮುಂಡರಗಿ ಕೋಟೆ ಶಾಲೆಯಲ್ಲಿ ಪಠ್ಯ ಸಂಖ್ಯೆ ಹೆಚ್ಚಿದ್ದು ಹೆಚ್ಚಿನ ಕೊಠಡಿಗಳನ್ನು ಕೊಡುವ ವಿಚಾರ ಸರ್ಕಾರದ ಗಮನಕ್ಕೆ ಇದೆಯೇ; ಹಾಗಿದ್ದಲ್ಲಿ ಎಷ್ಟು ಕೊಡಲಾಗುವುದು);

ಉ) ಮುಂಡರಗಿಯಲ್ಲಿ ಮುನಿಸಿಪಾಲಿಟಿ ಸರಹದ್ದಿನಲ್ಲಿ ಉರ್ದು ಶಾಲೆಗಳ ಕೊಠಡಿಗಳು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಅದರ ಬಗ್ಗೆ ಯಾವಕ್ರಮ ಕೈಗೊಳ್ಳಲಾಗುವುದು ;

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 685 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಗದಗ್ ತಾಲ್ಲೂಕಿನಲ್ಲಿ 35 ಹುದ್ದೆಗಳು, ಮುಂಡರಗಿ ತಾಲ್ಲೂಕಿನಲ್ಲಿ 24 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ)

	ಮುಂಡರಗಿ	ಗದಗ
ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತ 50:1ರ ಪ್ರಕಾರ ಇರಬೇಕಾದ ಹುದ್ದೆಗಳು	360	508
ಹಾಲಿ ಮಂಜೂರಾದ ಹುದ್ದೆಗಳು	312	446
ಹೆಚ್ಚಿಗೆ ಬೇಕಾದ ಶಿಕ್ಷಕರ ಹುದ್ದೆಗಳು	48	62

ಹೆಚ್ಚುವರಿ ಶಿಕ್ಷಕರ ಹುದ್ದೆಗಳ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಧಾರವಾಡ ಜಿಲ್ಲೆಗೆ 3ನೇ ಹಂತದ ಕಪ್ಪು ಹಲಗೆ ಕಾರ್ಯಾಚರಣೆ ಯೋಜನೆ ಅಡಿಯಲ್ಲಿ 47 ಹಾಗೂ 4ನೇ ಹಂತದಲ್ಲಿ 232 ಹುದ್ದೆಗಳು ಮಂಜೂರಾಗಿವೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಸಹ ಕ್ರಮಕ್ಕೆಗೊಳ್ಳಲಾಗುತ್ತಿದೆ.

ಇ) ತಾತ್ಕಾಲಿಕವಾಗಿ ನಿಯೋಜನೆ ಮೇರೆಗೆ ಶಿಕ್ಷಕರನ್ನು ಒದಗಿಸಿ ಶಾಲೆಗಳು ಮುಚ್ಚದಂತೆ ನೋಡಿಕೊಳ್ಳಲಾಗಿದೆ. ಖಾಲಿ ಹುದ್ದೆಗಳನ್ನು ತುಂಬಲು ತೀವ್ರಕ್ರಮ ಕೈಗೊಳ್ಳಲಾಗುವುದು.

ಈ) ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 8 ಪ್ರಾಥಮಿಕ ಶಾಲೆಗಳು ಬರುತ್ತಿದ್ದು, ಅವುಗಳಲ್ಲಿ ಒಟ್ಟು 29 ಕೊಠಡಿಗಳಿವೆ. ಸದರಿ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು ಸದ್ಯಕ್ಕೆ ನಗರ ಪ್ರದೇಶಕ್ಕೆ ಮಂಜೂರಾದ 12 ಕೊಠಡಿಗಳಲ್ಲಿ 8 ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ತಿಯಾಗಿವೆ. ಉಳಿದ 4 ಕೊಠಡಿಗಳು ಪ್ರಗತಿ ಹಂತದಲ್ಲಿವೆ.

ಕೋಟೆ ಶಾಲೆಯ ಮಕ್ಕಳ ಪಠ್ಯ ಸಂಖ್ಯೆ : 924 ಹಾಜರಾತಿ ಸಂಖ್ಯೆ : 681 ಇದೆ. ಸದರಿ ಶಾಲೆಯಲ್ಲಿ ಸದ್ಯಕ್ಕೆ 7 ಕೊಠಡಿಗಳಿದ್ದು ಇತರೆ 5 ಕೊಠಡಿಗಳ ಅವಶ್ಯಕತೆ ಇದೆ. ಸದ್ಯಕ್ಕೆ 2 ಕೊಠಡಿಗಳನ್ನು ಕಟ್ಟಿಸಲಾಗಿದೆ.

ಉ) ಸರ್ಕಾರದ ಗಮನಕ್ಕೆ ಬಂದಿದ್ದು, 9ನೇ ಹಣಕಾಸು ಯೋಜನೆಯಲ್ಲಿ 2 ಕೊಠಡಿಗಳನ್ನು ಈಗಾಗಲೇ ನಿರ್ಮಿಸಲಾಗಿದೆ.

ರಾಜ್ಯದಲ್ಲಿ ಆಂಗ್ಲ ಪ್ರಾಥಮಿಕ ಶಾಲೆ ಮಾಧ್ಯಮಿಕ ಶಾಲೆ ಪ್ರಾರಂಭಿಸಲು ಬಂದಿರುವ ಅರ್ಜಿಗಳು.

1619. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಂಗ್ಗಾವ್) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಂಗ್ಲ (ಇಂಗ್ಲೀಷ್) ಮಾಧ್ಯಮ ಶಾಲೆ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ಕೇಳಿ ರಾಜ್ಯದಲ್ಲಿ ಎಷ್ಟು ಖಾಸಗಿ ವಿದ್ಯಾ ಸಂಸ್ಥೆಗಳಿಂದ ಅರ್ಜಿಗಳು ಬಂದಿವೆ;

ಆ) ಇವುಗಳಲ್ಲಿ ಎಷ್ಟು ಖಾಸಗಿ ವಿದ್ಯಾಸಂಸ್ಥೆಗಳಿಗೆ 1985 ರಿಂದ ಈವರೆಗೆ ಮಂಜೂರಾತಿ ನೀಡಲಾಗಿದೆ;

ಇ) ತಜ್ಞರ ಸಮಿತಿಯು ಈ ಬಗ್ಗೆ ಸರ್ಕಾರಕ್ಕೆ ಕೊಟ್ಟ ವರದಿಯ ಬಗ್ಗೆ ತೆಗೆದುಕೊಂಡ ಸರ್ಕಾರದ ನಿಲುವೇನು;

ಈ) ಈ ಬಗ್ಗೆ 72 ಶಾಸಕರಿಂದ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಲು ಪರವಾನಿಗೆ ಕೇಳಿರುವ ಬಗ್ಗೆ ಸರ್ಕಾರದವರು ಯಾವುದಾದರೂ ಕ್ರಮಗಳನ್ನು ಕೈಗೊಂಡಿದ್ದಾರೆಯೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ) 559

ಆ) 559 ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ಶಾಲೆ ಮಂಜೂರು ಮಾಡಿರುವುದಿಲ್ಲ.

ಇ) ತಜ್ಞರ ಸಮಿತಿಯ ವರದಿಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಈ) ಇಲ್ಲ

ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ

1621. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕರ್ನಾಟಕದಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆ?

ಆ) ಅವು ಯಾವ್ಯಾವುವು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ) ಏಳು

ಆ) 1) ಬೆಂಗಳೂರು ವಿಶ್ವವಿದ್ಯಾಲಯ
2) ಮೈಸೂರು ವಿಶ್ವವಿದ್ಯಾಲಯ
3) ಕರ್ನಾಟಕ ವಿಶ್ವವಿದ್ಯಾಲಯ
4) ಗುಲ್ಬರ್ಗಾ ವಿಶ್ವವಿದ್ಯಾಲಯ
5) ಮಂಗಳೂರು ವಿಶ್ವವಿದ್ಯಾಲಯ
6) ಕುವೆಂಪು ವಿಶ್ವವಿದ್ಯಾಲಯ
7) ಕನ್ನಡ ವಿಶ್ವವಿದ್ಯಾಲಯ

ಹಸಿರು ಕಾರ್ಡ್ ನೀಡುವಾಗ ಆದಾಯದ ಮಿತಿ

1624. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹಸಿರು ಕಾರ್ಡು ನೀಡುವ ಬಗ್ಗೆ ಆದಾಯ ಮಿತಿಯನ್ನು ಏರಿಸಲಾಗಿದೆಯೇ?
ಆ) ಹಸಿರು ಕಾರ್ಡಿಗೆ ದಿವಂಗತ ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ಭಾವಚಿತ್ರ ಹಾಕಲು ನಿರ್ಧರಿಸಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) ಹೌದು
ವಾರ್ಷಿಕ ವರಮಾನ ರೂ. 3,500–00 ರಿಂದ ರೂ.6,400–00 ಕ್ಕೆ ಏರಿಸಲಾಗಿದೆ.
ಆ) ಹೌದು.

ಸರ್ಕಾರಕ್ಕೆ ವಹಿಸಿಕೊಂಡಿರುವ ತಾಲ್ಲೂಕು ಬೋರ್ಡ್ ಹೈಸ್ಕೂಲ್‌ಗಳ ಸಂಖ್ಯೆ

1579. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1971ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ವಹಿಸಿಕೊಂಡಿರುವ ತಾಲ್ಲೂಕು ಬೋರ್ಡ್ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು.
ಆ) ಈ ತಾಲ್ಲೂಕು ಬೋರ್ಡ್ ಪ್ರೌಢ ಶಾಲೆಗಳಿಗೆ ಸರಿಯಾದ ಸಿಬ್ಬಂದಿ ಕೊಡಲಾಗುತ್ತಿದೆಯೇ.
ಇ) ಅವುಗಳ ಸ್ಥಿತಿಗತಿಗಳನ್ನು ತಿಳಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) 291
ಆ) ಹೌದು
ಇ) ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ನಾಲ್ಕು ಹಂತಗಳಲ್ಲಿ (1971, 1973, 1976 ಮತ್ತು 1977) ಒಟ್ಟು 367 ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ವಹಿಸಿಕೊಳ್ಳಲಾಗಿದೆ. ಈ ಶಾಲೆಗಳನ್ನು ಸಿಬ್ಬಂದಿ ಸಮೇತವಾಗಿ ಸರ್ಕಾರ ವಹಿಸಿಕೊಂಡು ಸರ್ಕಾರವು ಸ್ಥಾಪಿಸಿದ ಶಾಲೆಗಳಿಗೆ ನೀಡುವಂತೆಯೇ ಸಾದಿಲ್ವಾರು, ಕಟ್ಟಡ ನಿರ್ಮಾಣ ಮತ್ತು ರಿಪೇರಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಧಿಕೃತ ಬಡ್ತಿ, ವೇತನ ಬಡ್ತಿ ಶಾಲೆಗೆ ಬೇಕಾದ ಅಗತ್ಯ ಸಿಬ್ಬಂದಿ ವರ್ಗದ ನೇಮಕ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನು ನೀಡಿ ಸರ್ಕಾರಿ ಶಾಲೆಯಂತೆ ಪರಿಗಣಿಸಿ ನಡೆಸಲಾಗುತ್ತಿದೆ.

ಗಮನ ಸೆಳೆಯುವ ಸೂಚನೆಗಳು

ರಸ್ತೆ ಸಾರಿಗೆಯ ಸಂಸ್ಥೆಯ ನೌಕರರ ಒಕ್ಕೂಟದಿಂದ ಮುಷ್ಕರ ಘೋಷಣೆ.

ಶ್ರೀ ಎಸ್.ಚಿಕ್ಕಮಾದು (ಹುಣಸೂರು):- ಮಾನ್ಯ ಉಪಾಧ್ಯಕ್ಷೆಯವರೆ, ದಿನಾಂಕ 11.3.92ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಒಕ್ಕೂಟವು ನಗರದಲ್ಲಿ ಬಸ್ಸುಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರಿಂದ ಬೆಂಗಳೂರಿನಂತ ಮಹಾನಗರದಲ್ಲಿ ಶ್ರೀಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ, ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತೇನೆ.

SRI AZEEZ SAIT : Sir, I would like to make the following statement :

The KSRTC staff & Workers Federation affiliated to AITUC has given a Notice of strike vide their letter dt.19.01.92 to observe one day total strike in all the 3 BTS Divisions on Wednesday 11.3.92 urging upon the Government and Management of KSRTC to stop privatisation of City Transport including BTS., stop bifurcation of BTS as a subsidiary Corporation and urging the Government of Karnataka to have a dialogue with them to set right the Industrial relations as decided in their Central Executive Committee Meeting held from 17th to 19th January 1992.

Soon after the receipt of strike notice from the Federation, the Management of KSRTC considered it seriously and addressed a letter to the General Secretary of the Federation inviting them for discussion on the issues raised by them. Accordingly a meeting was held with the representatives of the Federation on 25.02.92 and the position was explained to them. Further as two of the issues raised by the Federation were policy matters involving the State Government, the Federation was advised to discuss them at Government level. On 5.3.92 a meeting was held at the Government level and issues raised by them were discussed and it was impressed on the representatives of the Federation that the matter is yet to be give a definite shape and advised them to improve the functioning of city services to provide better services to the commuters and persuaded them to drop the proposed one day strike.

The Federation in its letter dt. 5.3.92 has informed that the explanation offered by the Government, in respect of Privatisation of BTS was not satisfactory and that it would be difficult for them to withdraw the strike action.

In order to sort-out the problems with the Federation one more meeting was held on 6.3.92 and they were once again persuaded to drop the proposed one day strike in BTS division.

Further the Joint Labour Commissioner (Industrial Relations) Government of Karnataka has convened a conciliation meeting on 7.3.92. As per rules the Trade Unions shall not go on strike when the conciliation is pending before the concenred authorities.

However, necessary steps will be taken to operate the services to avoid inconvenience to the travelling public.

In addition to the note already submitted on the snap strike by the workers of BTS Divisions, further information is furnished as follows :

After receipt of the strike notice, the labour federation leaders were pursuaded to give up the strike in the larger interest of the commuters. The matter was taken up before the conciliation authority also. Despite these steps, the Federation decided to go on strike today the 11th March, 1992. This strike is illegal. The Trade Union Leaders have prevented the employees coming by call buses to duty.

Enticipating the strike, all out efforts are made to operate services by pursuading the loyal employees. Arrangments were also made to draw 238 drivers and 132 conductors from other Divisions. But the Trade Union leaders gave threat to the loyal workers of dire consequences if they report for duty. They also gave a threat of throwing acid bottles on them. Despite these threat, 614 schedules out of 1486 schedules have been operated from 11 depots, till 10.00 A.M.

When the vehicles appeared on roads, the miscreants started pelting stones. As a result 9 buses were damaged and 102 buses depleted till 1000 hours, today the 11th March, 1992. At about 0615 hours a vehicle plying on the route from Dhupanahalli to Jayanagar and when it neared Richmond Circle, some miscreants have thrown stone which hit the driver Sri Thanappa on his head causing a serious injury. He has been taken to the Hospital and is being treated. Another driver Sri A.N. Siddapur was also injured at Banashankari Shopping Complex, on the Route No.12B from Padmanabhanagar to City Market.

The Police were requested to make proper arrangements to protect the passengers, crew and vehicles. Satisfactory arrangments have been made by the Police. Till 10.00 A.M. today 110 labour leaders have been arrested.

ADDITIONAL INFORMATION

I. Position as at 11.45 hours :

No. of Schedules operated.	:	630
Damaged	:	15
Depleted	:	102
Injured	:	3

II. Schedules cancelled :820

III. Slowly one by one vehicles are moving out.

IV. 400 drivers and 250 conductors have been temporarily recruited and are readily available. There is no shortage.

V. Willing drivers are threatened by the federation.

VI. 110 are employees who are arrested. Severe action will be taken as per rules.

+ ಶ್ರೀ ಎಸ್. ಚಿಕ್ಕಮಾದು :- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯದಂತೆ ಅಲ್ಲಿ ಆಡಳಿತ ಮಂಡಳಿಗೂ ಮತ್ತು ಕಾರ್ಮಿಕವರ್ಗದವರಿಗೂ ಸಣ್ಣಪುಟ್ಟ ಸಮಸ್ಯೆಗಳು ಉದ್ಭವವಾಗಿದ್ದು ಇದು ಬೃಹದಾಕಾರವಾಗಿ ಬೆಳೆದು ಈಗ ಅದರಿಂದ ಪ್ರಯಾಣಿಕರಿಗೆ ತುಂಬಾ ಕಿರುಕುಳ ಕೊಡುತ್ತಿರತಕ್ಕ ವಿಚಾರ ನಮ್ಮ ಗಮನಕ್ಕೆ ಬಂದಿದೆ. ತಾವು ಹೇಳಿದ ಪ್ರಕಾರ, ತಾವು ಕಾರ್ಮಿಕ ವರ್ಗದವರಿಗೆ ಸ್ಪಷ್ಟವಾಗಿ ಕಾನೂನು ರೀತ್ಯ ತಾವು ಚರ್ಚೆಗೆ ಆಹ್ವಾನಿಸಿದರೂ ಕೂಡ ಅದನ್ನು ಮಾನ್ಯ

ಮಾಡದೇ ಮುಷ್ಕರದಲ್ಲಿ ಭಾಗಿಯಾಗಿರುವುದರಿಂದ ಅವರ ಮೇಲೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳುತ್ತೀರಾ? ಸರ್ಕಾರದಲ್ಲಿ ನಾನು ಇವತ್ತು ಮನವಿ ಮಾಡುತ್ತೇನೆ. ರಾಜ್ಯ ಸರ್ಕಾರದಲ್ಲಾಗಲೀ, ಕೇಂದ್ರ ಸರ್ಕಾರದಲ್ಲಾಗಲೀ ಇಂತಹ ಪ್ರತ್ಯೇಕವಾದ ಸಂಘಸಂಸ್ಥೆಗಳನ್ನು ಮಾಡಿ ಅದಕ್ಕೆ ಎಐಟಿಯುಸಿ ಅಂತಹದ್ದು ಆಗಲೀ ಅಥವಾ ಇನ್ನಾವುದೇ ರಾಜಕೀಯ ಪಕ್ಷಗಳನ್ನು ಬೆರೆಸಿ ಈ ರೀತಿ ಸಾರ್ವಜನಿಕರಿಗೆ ತೊಂದರೆ ಕೊಡುವ ಸಂದರ್ಭದಲ್ಲಿ ಇಂತಹ ಸಂಘಸಂಸ್ಥೆಗೆ ತಾವು ನೋಂದಾಯಿಸಲು ಸರ್ಕಾರದಲ್ಲಿ ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲವೇ? ಒಂದು ಪಕ್ಷ ಅವರು ರಿಜಿಸ್ಟರ್ ಮಾಡಿಸಿಕೊಂಡು ಬೇಡಿಕೆ ಇಡಪಕ್ಕ ಸಂದರ್ಭದಲ್ಲಿ ಕೆಲವು ಶರತ್ತುಗಳನ್ನು ತಾವು ಹಾಕಬೇಕಾಗುತ್ತದೆ. ಯಾವುದೇ ಕಾರಣಕ್ಕೆ ಸರ್ಕಾರಕ್ಕೆ ಪರ್ಯಾಯವಾಗಿ ಅಥವಾ ವಿರೋಧವಾಗಿ ಹೋಗಬಾರದು ಎಂದು ಶರತ್ತು ಹಾಕಬೇಕೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಂತಹ ಸಂಘಸಂಸ್ಥೆಗಳಿಂದ ಸಾರ್ವಜನಕರಿಗೆ ತೊಂದರೆ ಆದ ಹಲವಾರು ನಿದರ್ಶನಗಳು ಇವತ್ತು ಇವೆ. ನಾನು ತಿಳಿಯಲ್ಪಟ್ಟಂತೆ ಮಾನ್ಯ ಸಾರಿಗೆ ಮಂತ್ರಿಗಳ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದಾಗಿ ಇತ್ತೀಚೆಗೆ ಈ ಸಂಸ್ಥೆಯಲ್ಲಿ ಉತ್ತಮ ಕಾರ್ಯಗಳು ಆಗುತ್ತಿವೆ. ಈ ಸಂಸ್ಥೆಯ ಕೆಲವು ಉನ್ನತ ಮಟ್ಟದ ಅಧಿಕಾರಿಗಳ ಹಂತದಲ್ಲೂ ಉತ್ತಮ ಕಾರ್ಯದಿಂದಾಗಿ ಸಂಸ್ಥೆಯಲ್ಲಿ ಬಿಗಿತನ ಮೂಡುತ್ತಿದೆ. ಸಂಸ್ಥೆಯ ಆಡಳಿತ ಮಂಡಳಿಯವರು ಕೆಲವು ವಿಚಾರಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದು ಇದನ್ನು ಪ್ರತಿಭಟಿಸಲು ದುರುದ್ದೇಶದಿಂದ ಅವರು ಈ ಚಳುವಳಿ ಮಾಡುತ್ತಿದ್ದಾರೆ. ಇಲಾಖೆಯಲ್ಲಿ ಯಾವುದೇ ಒಂದು ಶಿಸ್ತಿನ ಕ್ರಮ ಮೇಲಟ್ಟದಲ್ಲಿ ಕೈಗೊಂಡಾಗಲೂ ಇಂತಹ ಸಂಘಸಂಸ್ಥೆಗಳು ಮುಂದೆ ಬಂದು ಆಡಳಿತ ವ್ಯವಸ್ಥೆಯನ್ನು ಅವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಪಡುತ್ತವೆ. ಅದಕ್ಕೋಸ್ಕರ ತಾವು ಒಂದು ಕಾನೂನನ್ನು ಜಾರಿಗೆ ತರಬೇಕಾಗುತ್ತದೆ. ಕೇಂದ್ರ ಸರ್ಕಾರದ ನೌಕರರೇ ಇರಬಹುದು ಅಥವಾ ರಾಜ್ಯ ಸರ್ಕಾರದ ನೌಕರರೇ ಇರಬಹುದು, ಅವರು ತಮ್ಮ ಕುಂದುಕೊರತೆಗಳ ಬಗ್ಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯ ದೊರಕಿಸಿಕೊಳ್ಳುವುದು ಸಹಜ. ಆದರೆ ಸರ್ಕಾರಕ್ಕೆ ವಿರುದ್ಧವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಇಲ್ಲಿ ಪರ್ಯಾಯವಾಗಿ ನಡೆಯುತ್ತಾ ಇರುವ ದಿಸೆಯಿಂದ ಇಂತಹ ಸಂಘಸಂಸ್ಥೆಗಳ ಬಗ್ಗೆ ಕಾನೂನಿನಲ್ಲಿ ಏನಾದರೂ ಮಾರ್ಪಾಡು ಮಾಡಿ ಇಂತಹಕ್ಕೆ ಅವಕಾಶ ಮಾಡಿಕೊಡಬಾರದು ಎಂದು ನಾನು ಮನವಿ ಮಾಡುತ್ತೇನೆ. ಮತ್ತೆ ಸಂಸ್ಥೆಯಲ್ಲೂ ಕೂಡ ಹಲವಾರು ಕೋಟಿ ರೂಪಾಯಿಗಳು ಹೋಗುತ್ತಿವೆ. ಅದನ್ನು ಕಾನೂನುಬದ್ಧವಾಗಿ ಕೊಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಕೊಟ್ಟಿರುವ ಪಾಸ್‌ನಿಂದಾಗಿ 1 ವರ್ಷಕ್ಕೆ 74 ಕೋಟಿ ರೂಪಾಯಿಗಳನ್ನು ಸಂಸ್ಥೆ ತುಂಬಬೇಕಾಗುತ್ತದೆ. ಮತ್ತೆ ಶೇಕಡ 17 ರಷ್ಟು ತೆರಿಗೆಯಿಂದ ಮತ್ತೆ 99 ಕೋಟಿ ರೂಪಾಯಿ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು :- ಮಾನ್ಯ ಮಂತ್ರಿಗಳು ಗಮನ ಸೆಳೆಯುವ ಸೂಚನೆಯಲ್ಲಿ ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದಕ್ಕೆ ಕ್ಲಾರಿಫಿಕೇಷನ್ ಕೇಳಿ ಭಾಷಣ ಬೇಡ.

ಶ್ರೀ ಎಸ್. ಚಿಕ್ಕಮಾದು :- ಸಂಸ್ಥೆ ಉತ್ತಮವಾಗಿ ಕೆಲಸ ಮಾಡುತ್ತಿದ್ದರೂ ಕೂಡ ಕೆಲವರು ದುರುದ್ದೇಶದಿಂದ ಇಂತಹ ಸಂಘಸಂಸ್ಥೆಯವರು ಆಡಳಿತ ವ್ಯವಸ್ಥೆಯನ್ನು ಅವ್ಯವಸ್ಥೆ ಮಾಡುತ್ತಾ ಇದ್ದಾರೆ. ಸರ್ಕಾರ ಈ ಬಗ್ಗೆ ಗಮನಹರಿಸಿ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್ :- ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಯೂನಿಯನ್‌ಗಳು ರಿಜಿಸ್ಟರ್ ಮಾಡಿದರೆ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ, ಟ್ರೇಡ್ ಯೂನಿಯನ್‌ದ ಎಲೆಕ್ಷನ್ ಆದಮೇಲೆ ಯಾವುದು ರೆಕಗ್ನೈಸ್ ಇಲ್ಲ ಎಂದು, ಯಾರೂ ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ, ಏನೂ ಮಾಡುವುದಕ್ಕೆ ಬರುವುದಿಲ್ಲ, ಮಿತಿಮೀರಿ ಕಾನೂನು ಕೈನಲ್ಲಿ ತೆಗೆದುಕೊಂಡು ಹೋದರೆ ಅದಕ್ಕೆ ಏನು ಮಾಡಬೇಕೆಂದು ಅದರ ಔಷಧಿಯೂ ನಮ್ಮಲ್ಲಿ ಇದೆ. ಯಾವ ಪಕ್ಷ ಇವತ್ತು ರೆಕಗ್ನೈಸ್ ಆಗಿದೆಯೋ ಅವರು ಮಿತಮೀರಿ ಹೋಗಬೇಕಾದರೆ ಮುಂದೆ ನಾವೂ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆ ನಾವು ಹಿಂಜರಿಯುವುದಿಲ್ಲ, ಬೇರೆ ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ ಅದು ಈ ವಿಷಯಕ್ಕೆ ಸಂಬಂಧ ಇಲ್ಲದೇ ಇರುವುದರಿಂದ ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಆ ಸಂದರ್ಭದಲ್ಲಿ ನಾನು ಉತ್ತರವನ್ನು ಕೊಡುತ್ತೇನೆ.

ಉಪಾಧ್ಯಕ್ಷರು :- ಶ್ರೀ ಬಾಬೂರಾವ್ ಚಿಂಚನಸೂರ್ ಅವರ ಗಮನ ಸೆಳೆವ ಸೂಚನೆಗೆ ಬೇರೆ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಬೇಕಾಗಿರುವುದರಿಂದ ಅದನ್ನು ಮುಂದೆ ಹಾಕಿದ್ದೇನೆ.

ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡ ಕಳೆದ 3-4 ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿರುವುದು.

ಶ್ರೀ ಹನುಮನಗೌಡ ಪಾಟೀಲ್ :- ಮಾನ್ಯ ಅಧ್ಯಕ್ಷಣೆಯವರೇ, ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡವು ಕಳೆದ 3-4 ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರದ ಬಗ್ಗೆ ನಾನು ಈ ಕೆಳಕಂಡ ಸ್ಟೇಟ್‌ಮೆಂಟ್ ಮಾಡುತ್ತೇನೆ.

ರಾಯಚೂರು ಜಿಲ್ಲೆ, ಕುಷ್ಟಗಿ ಪಟ್ಟಣದಲ್ಲಿ ಸರ್ಕಾರದಿಂದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕಿಯರ ಹಾಸ್ಟೆಲ್ ಕಟ್ಟಲು 1983-84ರ ಜಿಲ್ಲಾವಲಯ ಯೋಜನೆಯಲ್ಲಿ 2.87 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಸದರಿ ಕಟ್ಟಡವನ್ನು ಕಟ್ಟಲು ಕುಷ್ಟಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ವಹಿಸಲಾಗಿತ್ತು. ಕುಷ್ಟಗಿ ನಗರದ ಸಾರ್ವಜನಿಕರು ಕಳಪೆ ಕಟ್ಟಡ ಕಟ್ಟಿದ್ದರ ಬಗ್ಗೆ ಹಾಗೂ ಕಟ್ಟಡ ಬಿದ್ದು ಹೋಗಿರುವುದರ ಬಗ್ಗೆ ದೂರು ನೀಡಿದ್ದರ ಮೇರೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರು ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ಜೂನಿಯರ್ ಇಂಜಿನಿಯರ್ ವಿರುದ್ಧ ತನಿಖೆ ನಡೆಸಿರುತ್ತಾರೆ. ಇದುವರೆವಿಗೂ ಈ ಕಟ್ಟಡಕ್ಕೆ 1.33 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಸದರಿ ವಸತಿನಿಲಯದ ಕಟ್ಟಡದ ಕೆಲಸ ನಿರ್ವಹಿಸಿದ್ದ ಕಂಟ್ರಾಕ್ಟ್‌ದಾರರು ಕುಷ್ಟಗಿ ಮುನ್ಸಿಫ್ ನ್ಯಾಯಾಲಯದಲ್ಲಿ ಕೇಸು ದಾಖಲು ಮಾಡಿದ್ದಾರೆ. ಈ ಕೇಸು ನ್ಯಾಯಾಲಯದಲ್ಲಿ ಬಾಕಿ ಇದೆ. ಕಂಟ್ರಾಕ್ಟ್‌ದಾರರು ಕೆಲಸವನ್ನು ನಿಲ್ಲಿಸಿದ್ದಾರೆ. ಮುನ್ಸಿಫ್ ನ್ಯಾಯಾಲಯದಲ್ಲಿ ಕೇಸು ತೀರ್ಮಾನವಾದ ನಂತರ, ಕುಷ್ಟಗಿಪಟ್ಟಣದಲ್ಲಿ ಬಾಲಕಿಯರ ಹಾಸ್ಟೆಲ್ ಕಟ್ಟಡವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹನುಮನಗೌಡ ಪಾಟೀಲ್ :- ಮಾನ್ಯ ಉಪಾಧ್ಯಕ್ಷಣೆಯವರೆ, 1984-85 ರಲ್ಲಿ ಈ ಹಾಸ್ಟಲ್ ಕಟ್ಟಡ ಪ್ರಾರಂಭವಾಗಿದೆ. ಅದು ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯ. ಅದು ಎಂಟು ವರ್ಷಗಳಿಂದ ಮುನ್ಸೀಫ್ ನ್ಯಾಯಾಲಯದಲ್ಲಿ ಕೇಸ್ ಪೆಂಡಿಂಗ್ ನಲ್ಲಿದೆಯೆಂದು ಹೇಳಿದ್ದಾರೆ. ಇದನ್ನು ನೋಡಿದರೆ ಇದರ ಬಗ್ಗೆ ಸರ್ಕಾರ ಆಸ್ಥೆ ವಹಿಸಿಲ್ಲವೆಂದು ಆಗುತ್ತದೆ. ಎಂಟು ವರ್ಷಗಳಿಂದ ಕಟ್ಟಡವನ್ನು ಕಟ್ಟದಿರುವುದರಿಂದ ಅದರ ಅಂದಾಜು ವೆಚ್ಚ ಈಗ ಡಬ್ಬಲ್ ಆಗುತ್ತದೆ. ಈಗ ಅದೊಂದು ಸ್ಮಾರಕವಾಗುತ್ತಿದೆ. ನಮ್ಮ ಜಿಲ್ಲೆಯವರೇ ಸಮಾಜ ಕಲ್ಯಾಣ ಸಚಿವರು ಆದು ಮಾನ್ಯ ಮಂತ್ರಿಗಳಾದ ಶಿವಣ್ಣನವರ ಸ್ಮಾರಕ ಎನ್ನುವ ಪ್ರಸಂಗ ಬಂದೀತು. ಆ ಕಡೆಗೆ ಸಮಾಜ ಕಲ್ಯಾಣ ಸಚಿವರು ಅದರಲ್ಲೂ ಜಿಲ್ಲೆಯವರು ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡವನ್ನು ಕಟ್ಟಿ ಬೇಗ ಪ್ರಾರಂಭ ಮಾಡಿದರೆ ನಮ್ಮ ತಾಲ್ಲೂಕಿನ ಜನತೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತದೆ. ದಯವಿಟ್ಟು ಅದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಉಪಾಧ್ಯಕ್ಷಣೆಯವರೆ, ಇದರ ಬಗ್ಗೆ ಒಂದು ಕೇಸು ಮುನ್ಸೀಫ್ ನ್ಯಾಯಾಲಯದಲ್ಲಿದ್ದ ಕಾರಣ ಏನೂ ಮಾಡಲಿಕ್ಕೆ ಆಗಿಲ್ಲ. ನಮ್ಮ ಅಧಿಕಾರಿಗಳಿಗೆ ಹೇಳಿ ಆ ಕೇಸು ಏನಾಗಿದೆಯೆಂದು ನೋಡಿಸುತ್ತೇನೆ. ಅಷ್ಟೇ ಅಲ್ಲದೆ ಉಳಿದ ಹಾಸ್ಟಲ್ ಬಿಲ್ಡಿಂಗ್ ಏನು ಕಟ್ಟಿಸಬೇಕು ಅದನ್ನು ಕೇಸು ತೀರ್ಮಾನವಾದ ನಂತರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ANNOUNCEMENT

MADAM DEPUTY SPEAKER : I want to make an announcement. I have received a message dated 9th March 1992 from her Majesty the Queen, Head of the Commonwealth in connection with the Commonwealth Day. The message is as follows : –

On this Commonwealth Day I ask you to remember that we share the world with many other living things. The earth is a gift to us all, whoever we are, wherever we live. We have but one planet and all life on it is inter–dependent. Our Commonwealth is a partnership of fifty nations and we are responsible for one third of this planet. We all share the task of ensuring that our world will remain fit for life and capable of sustaining us and those who will come after us.

For too long our natural environment has been taken for granted. It is now only too evident that we have to take serious steps to make certain that we cause no further destruction, nor permanently degrade the very natural resources on which we depend. For example, unless we take action now to halt the rise in global temperatures, rising sea levels will threaten the very existence of several island and low–laying Commonwealth countries.

The United Nations Conference on Environment and Development will be held later this year to draw attention to the many environmental problems that we have either inherited or created for ourselves. At this conference, and in many other ways, commonwealth countries can make significant contributions. Together we represent a wide variety of climatic, landscape and ecological conditions and we are at all levels of economic and social development. The Commonwealth can truly be described as a cross–section of the contemporary world.

Democratic Governments reflect the will of their people. In our system, the views of the individual can be translated into Government action, so it is possible for everyone to make a contribution, however large or small, to ensure the future health and vitality of the natural world around us. Bringing about the necessary changes will not be easy, particularly if it involves restraints and sacrifices. But it must be done, and we can all help in one way or another, individually or collectively.

The living world is a God–given heritage and we have to be more responsible in our stewardship of it. We all need air to breathe, water to drink and food to eat, but we must be careful–not selfish or greedy–about the way we exploit scarce natural resources and about the demands we make on the natural environment.

Gradually, we are waking up to the challenges, but we espeically need the rising generations to help us take the right decisions and actions now. I ask the

young people of the Commonwealth to make themselves aware of the critical problems and issues. There is no time to spare. It is your future that is at stake

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಮುಳವಾಡ ಏತ ನೀರಾವರಿಯ ಬಗ್ಗೆ ಶಾಸಕರ ಬಂಧನ

ಶ್ರೀ ಎಲ್.ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಶಾಸಕರಾದ ಮನೋಹರ ಐನಾಪುರ್ ಅವರನ್ನು ಅಪಹರಣ ಮಾಡಿರತಕ್ಕಂಥಾದ್ದು ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಇಲ್ಲಿ ಏನಾಗಿದೆ ಎಂದರೆ, ಕನ್ನಡ ಸೇನೆ ನಾಯಕ ಎಂದು ಒಬ್ಬರು ಬೆಂಗಳೂರಿನಿಂದ ಹೋಗಿ ಅಲ್ಲಿ ಸೇರಿಕೊಂಡು ಅವರೂ ಸಹಿತ ಬಲವಂತವಾಗಿ ಅವರನ್ನು ಕೂಡಿಸಿರತಕ್ಕಂಥ ಪ್ರಸಂಗ ಪತ್ರಿಕೆಯಲ್ಲಿ ಬಂದಿದೆ. ಬೇರೆ ಶಾಸಕರು ಹೋಗಿ ಭೇಟಿ ಮಾಡಿದರೂ ಅವರನ್ನು ಬಿಡುವುದಿಲ್ಲ, ಎಂದು ಯಾರು ಅವರನ್ನು ಕೂಡಿಸಿಕೊಂಡಿದ್ದಾರೆ ಅವರು ಹೇಳಿದ್ದಾರೆ. ಇದು ಗಲಭೆಗೆ ಅವಕಾಶವಾಗುತ್ತದೆ. ಒಬ್ಬ ಶಾಸಕರನ್ನು ಹಿಡಿದು ಕೂರಿಸತಕ್ಕದ್ದು ಅವರ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಅವರಿಗೆ ರಕ್ಷಣೆ ಇಲ್ಲದ ಹಾಗಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ನಿಲುವನ್ನು ತೆಗೆದುಕೊಂಡಿದೆ? ಅವರನ್ನು ಬಿಡಿಸತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸರ್ಕಾರ ದಯವಿಟ್ಟು ಹೇಳಿಕೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ನಾನು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಒಂದು ಗಮನಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ಉಪಾಧ್ಯಕ್ಷೀಣಿಯವರು :- ಸರ್ಕಾರದ ಕಡೆಯಿಂದ ತಾವು ಏನಾದರೂ ಹೇಳುವುದಕ್ಕೆ ಸಾಧ್ಯವೇನು?

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿ) :- ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಶಿವರಾಮೇಗೌಡರು ಹೇಳಿದಂಥ ವಿಷಯ, ನನಗನ್ನಿಸುತ್ತದೆ, ಮುಳವಾಡ ಏತನೀರಾವರಿ ವಿಷಯದ ಬಗ್ಗೆ ಇರಬೇಕು. ಈ ಮುಳವಾಡ ಏತನೀರಾವರಿ ಬಗ್ಗೆ ಈಗಾಗಲೇ ಒಂದು ಕೋಟಿ ಐವತ್ತು ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ ಮತ್ತು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಇನ್ನೂ ಆ ಕೆಲಸಕ್ಕೆ ಬೇಕಾದರೆ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡುತ್ತೇವೆ ಎಂದು ಕೂಡ ಹೇಳಿದ್ದೇವೆ. ಇಷ್ಟು ಹೇಳಿದರೂ ಕೂಡ, ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಸರ್ಕಾರದ ಪರವಾಗಿ ಮನವಿ ಮಾಡಿದರೂ ಕೂಡ ಈ ತರಹ ಶಾಸಕರನ್ನು ಏನು ಇಟ್ಟುಕೊಂಡಿದ್ದಾರೆ, ಇದರ ಬಗ್ಗೆ ಯೋಗ್ಯ ಕ್ರಮ ಹಾಕಿಕೊಳ್ಳುತ್ತೇವೆ. ಈ ತರಹ ವಾತಾವರಣ ನಿರ್ಮಾಣವಾಗುವುದರಿಂದ ಗಲಭೆ ಆಗುತ್ತದೆ ಎಂದು ಅವರು ಹೇಳಿದ್ದಾರೆ, ಸರ್ಕಾರ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿ ಈ ಹೇಳಿಕೆಯನ್ನು ನೀಡುತ್ತೇವೆ.

2) ಗುಲ್ಬರ್ಗದ ಕರ್ನಾಟಕ ವಿದ್ಯುತ್ ಮಂಡಲಿಯ, ಪ. ವರ್ಗ ಮತ್ತು ಪ. ಜಾತಿ ಸಂಘದ ಅಧ್ಯಕ್ಷರಿಂದ ಉಪವಾಸ ಸತ್ಯಾಗ್ರಹ

SRI QUAMARUL ISLAM : Madam Deputy Speaker, I would like to draw the attention of the Hon. Minister for Energy regarding Hunger strike until death by the President of the SC/ST Union of the Karnataka Electricity Board in

Gulbarga. All other Associations have also joined and they have stated that if the matter is not solved, they are going to call for Bundh in Gulbarga City. The Executive Engineer (Major Works), KEB, Gulbarga reportedly said to one of the Scheuled Caste employees "HOLEYA". Not only that, the Executive Engineer has also beaten that SC employee infront of so many other SC employees. When this matter was raised that officer was saying that I was always beating you. Why are you so serious? He also told the other people not to take this seriously. The hunger strike has entered into the 5th day. There is every possibility that it is going to lead to law and order problem if the matter is not solved immediately and if the Department is not going to take action in the matter immediately. Whether the Department knows this? If so, what is the action taken by the Department. If not, will the Department take immediate action in this regard.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯಮಂತ್ರಿ) :- ನಮ್ಮ ಸ್ನೇಹಿತರು ಹೇಳಿದ ಹಾಗೆ ನಾಳೆ ಇದರ ವಿಚಾರ ತಿಳಿದು ಸ್ಟೇಟ್ ಮೆಂಟ್ ಕೊಡುತ್ತೇನೆ.

3) ಗುಬ್ಬಿ ತಾಲ್ಲೂಕಿನಲ್ಲಿ ವೋಲ್ಟೇಜ್ ಸಮಸ್ಯೆಯಿಂದ ಜನಜೀವನ ಅಸ್ತವ್ಯಸ್ತ.

ಶ್ರೀ ಟಿ.ಬಿ. ಜಯಚಂದ್ರ :- ಗುಬ್ಬಿ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ಮೂರು ದಿವಸಗಳಿಂದ ಸಾವಿರಾರು ಜನರು ಕೆ.ಇ.ಬಿ. ವಿರುದ್ಧವಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ವೋಲ್ಟೇಜ್ ಪ್ರಾಬ್ಲಮ್ ನಿಂದ ಕುಡಿಯುವ ನೀರು ಇಲ್ಲ, ಬೇಸಾಯಕ್ಕೆ ನೀರು ಇಲ್ಲದ ಪರಿಸ್ಥಿತಿ ಉದ್ಭವಿಸಿರುವುದರಿಂದ ಮೂರು ದಿವಸಗಳಿಂದ ಈ ಉಪವಾಸ ಸತ್ಯಾಗ್ರಹವನ್ನು ಶಾಂತ ರೀತಿಯಿಂದ ನಡೆಸುತ್ತಿದ್ದಾರೆ. ಇದುವರೆಗೂ ಇಲಾಖೆಯ ಪರವಾಗಿ ಒಬ್ಬ ಅಧಿಕಾರಿಯೂ ಕೂಡ ಹೋಗಿ ಯಾವುದೇ ತರಹದ ಆಶ್ವಾಸನೆಯನ್ನು ಕೊಟ್ಟಿಲ್ಲ, ಈಗ ನನ್ನನ್ನು ಕರೆಯುತ್ತಿದ್ದಾರೆ. ನಾನು ಅಲ್ಲಿಗೆ ಹೋಗಬೇಕಾಗುತ್ತದೆ. ಹೋಗುವಂಥ ಸಂದರ್ಭದಲ್ಲಿ ಬಹುಶಃ ಐನಾಪುರ ಅವರಿಗೆ ಆಗಿರತಕ್ಕಂಥ ಪರಿಸ್ಥಿತಿ ನನಗೂ ಆಗಬಹುದು. ಆದ್ದರಿಂದ ನನ್ನ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಸರ್ಕಾರ ಆದೇಶವನ್ನು ಕೊಡಬೇಕು.

ಉಪಾಧ್ಯಕ್ಷೀಣಿಯವರು :- ನೀವು ಗಮನ ಸೆಳೆಯುವ ಸೂಚನೆಗೆ ನೋಟೀಸನ್ನು ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ :- ಈ ಸಬ್‌ಸ್ಟೇಷನ್‌ನ್ನು ಮುಗಿಸಿಕೊಟ್ಟರೆ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಎಂಟು-ಹತ್ತು ದಿವಸ ಎಂದು ಹೇಳಿ ಈಗ ಆರು ತಿಂಗಳು ಆಯಿತು. ಅದನ್ನು ಮಾಡಿಸಿಕೊಟ್ಟರೆ, ಸಮಸ್ಯೆ ನಿವಾರಣೆಯಾಗುತ್ತದೆ. ಈ ವಿಚಾರವಾಗಿ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಟ್ಟರೆ, ಅವರು ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ, ಸರ್ಕಾರದ ಕಡೆಯಿಂದ ಹೇಳಿಕೆ ಕೊಡಬೇಕು.

ಉಪಾಧ್ಯಕ್ಷರು :- ತಾವು ಈ ವಿಚಾರವಾಗಿ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೀರಿ ಆದಷ್ಟು ಬೇಗನೆ ಹಾಕುತ್ತೇವೆ. ಈಗ ಸದನ ಮುಂದೂಡಲ್ಪಟ್ಟು, ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರಲಾಗುವುದು.

ಸದನವು ಮಧ್ಯಾಹ್ನ 4.40 ಗಂಟೆಗೆ ಸಮಾವೇಶಗೊಂಡಿತು.

(ಉಪಾಧ್ಯಕ್ಷೀಣೆಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು).

ಶ್ರೀ ನಾರಾಯಣರಾವ್ ಮನಹಳ್ಳಿ :- ಮಾನ್ಯ ಉಪಾಧ್ಯಕ್ಷೀಣೆಯವರೆ, ವಿರೋಧ ಪಕ್ಷದವರು ಸದನಕ್ಕೆ ಇನ್ನೂ ಬರಲಿಲ್ಲ.

ಉಪಾಧ್ಯಕ್ಷೀಣೆಯವರು :- ಇವೊತ್ತಿನ ದಿವಸದ ಕಾರ್ಯಕಲಾಪ ಏನಿದೆ, ಮೊದಲು ಆ ಪ್ರಕಾರ ಮುಗಿಸೋಣ. ನಂತರ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ನಿಯಮ 334 ರ ಮೇರೆಗೆ

1) ಕಡಬ ವಿದ್ಯುತ್ ಸರಬರಾಜು ಸ್ಟೇಷನ್‌ನ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ.

ಶ್ರೀ ಕೆ. ಕುಶಾಲ (ಸುಳ್ಯ) :- ಮಾನ್ಯ ಉಪಾಧ್ಯಕ್ಷೀಣೆಯವರೆ, ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬಾ ವಿದ್ಯುತ್ ಸರಬರಾಜು ಸ್ಟೇಷನ್ ಕಳೆದ 4-5 ವರ್ಷಗಳ ಹಿಂದೆ ಮಂಜೂರಾಗಿರುತ್ತದೆ. ಸಬ್‌ಸ್ಟೇಷನ್ ವತಿಯಿಂದ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ವಿದ್ಯುತ್ ಸರಬರಾಜು ಆಗಬೇಕಾಗಿದೆ. ಆದರೆ, ಈ ಕಾಮಗಾರಿಯನ್ನು ಇಲಾಖೆ ಕೈಗೆತ್ತಿಕೊಂಡಿರುವುದಿಲ್ಲ. ಅಲ್ಲದೆ, ಕಾಮಗಾರಿ ಬಗ್ಗೆ ಇಲಾಖೆಯವರು ನಿರ್ಲಕ್ಷ್ಯ ಭಾವನೆ ಹೊಂದಿದ್ದಾರೆ. ಆದುದರಿಂದ, ಈಗಲಾದರೂ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೇ? ಯಾವಾಗ ಕಾಮಗಾರಿ ಕೆಲಸವನ್ನು ಮುಗಿಸುತ್ತೀರಿ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಅವರಿಂದ ಉತ್ತರ ತರಿಸಿಕೊಡುತ್ತೇನೆ.

2) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಾರಿ ನಿರ್ವಾಹಕರ ಅಪಹರಣ ಹಾಗೂ ಹತ್ಯೆ.

ಶ್ರೀ ವಿಜಯಕುಮಾರ ಶೆಟ್ಟಿ (ಸೂರತ್ಕಲ್) :- ಮಾನ್ಯ ಉಪಾಧ್ಯಕ್ಷೀಣೆಯವರೆ, ದಕ್ಷಿಣ ಕನ್ನಡ ಹಾಗೂ ಇತರ ಜಿಲ್ಲೆಗಳಲ್ಲಿ ಕಳೆದ ಕೆಲವು ತಿಂಗಳುಗಳಿಂದ ಸರಕು ಸಾಗಣೆನಿರತ ಲಾರಿಗಳನ್ನು ಅಪಹರಿಸಿ ಚಾಲಕ, ನಿರ್ವಾಹಕರನ್ನು ಕೊಲೆ ಮಾಡಿರುವ ಕೆಲ ಪ್ರಕರಣಗಳು ಹಾಗೂ ಚಾಲಕ, ನಿರ್ವಾಹಕರು ನಾಪತ್ತೆಯಾದ ಕೆಲ ಪ್ರಕರಣಗಳು ಇತ್ತೀಚೆಗೆ ನಡೆದಿದ್ದು ಸಾರ್ವಜನಿಕರಲ್ಲಿ ವಿಶೇಷವಾಗಿ, ಖಾಸಗಿ ಲಾರಿ ಚಾಲಕರು, ಸಿಬ್ಬಂದಿಗಳು ಭಯಗ್ರಸ್ತರಾಗಿರುವ ವಾತಾವರಣ ನಿರ್ಮಾಣವಾಗಿದೆ. ನವ ಮಂಗಳೂರು ಬಂದರಿನಿಂದ ಬಂದಿರತಕ್ಕ ಸರಕು ಸಾಗಿಸುವ ಸಹಸ್ರಾರು ಲಾರಿಗಳು ಪ್ರತಿದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಇತ್ತೀಚೆಗೆ ಚಿಕ್ಕಮಗಳೂರಿನ ಎಸ್ಟೇಟ್‌ಗೆ ರಸಗೊಬ್ಬರ ಸಾಗಿಸುತ್ತಿದ್ದ ಲಾರಿ ಚಾಲಕ, ನಿರ್ವಾಹಕರ ಭೀಕರ ಹತ್ತೆ ಮೂಡಿಗೆರೆ ಸಮೀಪದ ಕೊಟ್ಟಿಗೆಹಾರದಲ್ಲಿ ನಡೆದಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸುಳ್ಯಕ್ಕೆ ಸಕ್ಕರೆ ಸಾಗಿಸುತ್ತಿದ್ದ ಲಾರಿಯು ಅಪಹರಣಕ್ಕೊಳಗಾಗಿದೆ. ಸದರಿ ಲಾರಿಯು ಕಾರವಾರದ ಬಳಿ ಅನಾಥ ಸ್ಥಿತಿಯಲ್ಲಿ ಪತ್ತೆಯಾಗಿದೆ. ಇದರ ಚಾಲಕ ನನ್ನ ಕ್ಷೇತ್ರವಾದ ಸೂರತ್ಕಲ್‌ಗೆ ಸೇರಿದವರಾಗಿದ್ದು ಕಳೆದ ಒಂದು ತಿಂಗಳಿಗೂ ಅಧಿಕ ಸಮಯದಿಂದ ಪತ್ತೆಯಾಗಿಲ್ಲ. ಹೆಚ್ಚುತ್ತಿರುವ ಈ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯ ಜನರ ಮನೋಸ್ಥೈರ್ಯವನ್ನೇ ಕೆಡಿಸಿ ಹಾಕಿವೆ. ಆದ್ದರಿಂದ, ಈ ಅಪಹರಣದ ಪ್ರಕರಣಗಳ ಕುರಿತು ಸಿ.ಐ.ಡಿ. ತನಿಖೆ ನಡೆಸಿ ಅಪರಾಧಿಗಳ ಪತ್ತೆಗೆ ಶ್ರಮಿಸಬೇಕೆಂದು ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

+ ಶ್ರೀ ಧರ್ಮಸಿಂಗ್ (ಅಬ್ಕಾರಿ ಮತ್ತು ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೇ, ದಿನಾಂಕ 22.12.91 ರಂದು ಹುಬ್ಬಳ್ಳಿಯ ನಗರದ ಪ್ರತಾಪ್ ಎಂ.ಪಾ ರವರಿಗೆ ಸಂಬಂಧಿಸಿದ ಮಹಾವೀರ

ರೋಡ್ ಲೈನ್ಸ್‌ನ ಲಾರಿ ಸಂಖ್ಯೆ : ಕೆಎ 25–1264 ಇದರಲ್ಲಿ ಮೆಣಸಿನ ಕಾಯಿಯನ್ನು ಭರ್ತಿ ಮಾಡಿ ಹುಬ್ಬಳ್ಳಿಯಿಂದ ಮಂಗಳೂರಿಗೆ ತೆಗೆದುಕೊಂಡು ಬಂದು ಮಂಗಳೂರಿನಲ್ಲಿ ಮೆಣಸಿನಕಾಯಿಯನ್ನು ಸಂಬಂಧಿಸಿದವರಿಗೆ ನೀಡಲಾಗಿದೆ. ಶ್ರೀ ಗುರುರಾಜ, ವಯಸ್ಸು 25, ಹನುಮಂತಪ್ಪನವರ ಮಗ, ಕೌಲ್‌ಪೇಟ್, ಹುಬ್ಬಳ್ಳಿ ಇವರು ಲಾರಿ ಚಾಲಕರಾಗಿದ್ದು, ಬಸವೇಶ್ವರ ನಗರ, ಗೋಕುಲ್ ರಸ್ತೆ, ಹುಬ್ಬಳ್ಳಿಯ ಯಲ್ಲಪ್ಪನವರ ಮಗ ಪ್ರಮೋದ್ ಎಂಬುವರು ಕ್ಲೀನರ್ ಆಗಿದ್ದು, ಇವರು ಲಾರಿಯನ್ನು ಮಂಗಳೂರಿಗೆ ತೆಗೆದುಕೊಂಡು ಹೋಗಿದ್ದರು. ದಿನಾಂಕ 23.12.91 ರಂದು ಗಜಾನನ ರೋಡ್ ಲೈನ್ಸ್‌ಗೆ ಸಂಬಂಧಿಸಿದ ರೂ.3.50 ಲಕ್ಷ (ರೂಪಾಯಿ ಮೂರೂವರೆ ಲಕ್ಷಗಳು) ಬೆಲೆಯುಳ್ಳ ಸರಕಾದ ಅಡಿಕೆ, ತೆಂಗಿನ ಕಾಯಿ, ಗೋಡಂಬಿ, ಮೆಣಸು ಮತ್ತು ಎಣ್ಣೆ ಡಬ್ಬಗಳನ್ನು ಬೆಳಗಾಂಗೆ ಸಾಗಿಸಲು ತುಂಬಲಾಯಿತು. ಲಾರಿ ಚಾಲಕ ಮತ್ತು ಕ್ಲೀನರ್ ಇವರುಗಳು ಎಲ್ಲಾ ಸಾಮಾನುಗಳನ್ನು ತುಂಬಿಕೊಂಡ ಮೇಲೆ ಮಂಗಳೂರನ್ನು ಸಾಯಂಕಾಲ ಸುಮಾರು 7 ಘಂಟೆಗೆ ಬಿಟ್ಟು ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಇರುವ ಮುಕ್ಕಾ ಚೆಕ್ ಪೋಸ್ಟ್ ಹತ್ತಿರ ಬಂದಾಗ 4 ಜನ ಅಪರಿಚಿತ ಜನರು ಪ್ರಯಾಣಿಕರಂತೆ ನಟಿಸಿ ಬೈಂದೂರು ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕುಂದಾಪುರ ತಾಲ್ಲೂಕಿನ ಮರವಂತೆಗೆ ಹೋಗಬೇಕೆಂದು ತಿಳಿಸಿ ಲಾರಿಯನ್ನು ಹತ್ತಿದ್ದಾರೆ. ರಾತ್ರಿ ಅಂದರೆ 2.30 ಘಂಟೆಯ ಸಮಯದಲ್ಲಿ ಮರವಂತೆಗೆ ಗ್ರಾಮದ ಹತ್ತಿರ ಬಂದಾಗ ಆಪಾದಿತ ವ್ಯಕ್ತಿಗಳು ವಾಹನ ಚಾಲಕ ಗುರುರಾಜನನ್ನು ಲಾರಿ ನಿಲ್ಲಿಸುವಂತೆ ತಿಳಿಸಿದ್ದಾರೆ. ಅದರಂತೆ ಲಾರಿಯ ಚಾಲಕನು ಲಾರಿಯನ್ನು ನಿಲ್ಲಿಸಿದ ಕೂಡಲೇ ಆಪಾದಿತ 4 ಜನರು ಚಾಲಕ ಮತ್ತು ಕ್ಲೀನರ್ ಇವರಿಗೆ ಎರಡು ಚಾಕು ಮತ್ತು ಒಂದು ನಾಡ ಪಿಸ್ತೂಲ್ ಇವುಗಳನ್ನು ತೋರಿಸಿ, ಇವರ ಮೇಲೆ ಆಕ್ರಮಣ ನಡೆಸಿದ್ದಾರೆ. ಇದರಿಂದ ಕ್ಲೀನರ್ ಪ್ರಮೋದ್‌ರವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರು ಲಾರಿಯಿಂದ ಹೊರಗಡೆ ಹಾರಿ ಅಲ್ಲಿಂದ ಓಡಿ ಹೋಗಿ ಮುಂದಿನ ಹಳ್ಳಿಯಿಂದ ತಪ್ಪಿಸಿಕೊಂಡಿದ್ದಾರೆ. ವಾಹನ ಚಾಲಕ ಗುರುರಾಜರವರನ್ನು ಚಾಕುವಿನಿಂದ ಹಲ್ಲೆ ನಡೆಸಿ ಮತ್ತು ನಾಡ ಪಿಸ್ತೂಲಿನಿಂದ ಒಂದು ಸುತ್ತು ಗುಂಡನ್ನು ಹಾರಿಸಿದ್ದಾರೆ. ಇದರಿಂದ ಗುಂಡು ಗುರುರಾಜರವರಿಗೆ ಎಡಭಾಗದಲ್ಲಿ ಅಪಾಯದ ಸ್ಥಳಕ್ಕೆ ತೂರಿದೆ. ಗುರುರಾಜರವರನ್ನು ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿರುವಾಗ ಲಾರಿಯಿಂದ ಹೊರಗಡೆ ಎಳೆದು ಹಾಕಿದ್ದಾರೆ. ಅದೇ ರಾತ್ರಿ ಗಸ್ತಿನ ಮೇಲೆ ಇದ್ದ ಬೈಂದೂರು ಪೋಲಿಸ್ ಸಬ್ - ಇನ್ಸ್‌ಪೆಕ್ಟರ್‌ರವರು ಗಸ್ತು ಹೋಗುತ್ತಿದ್ದಾಗ, ರಾತ್ರಿ ವೇಳೆ ಸುಮಾರು 2.45 ಘಂಟೆಯಲ್ಲಿ ಗಾಯಗೊಂಡ ವ್ಯಕ್ತಿಯನ್ನು ನೋಡಿ ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕೂಡಲೇ ವೈದ್ಯಕೀಯ ಚಿಕಿತ್ಸೆಗಾಗಿ ಸೇರಿದ್ದಾರೆ. ಜಿಲ್ಲಾ ಪೋಲಿಸ್ ಅಧಿಕಾರಿಗಳನ್ನು ವೈರ್‌ಲೆಸ್ ಮೂಲಕ ಎಚ್ಚರಗೊಳಿಸಿದ್ದಾರೆ. ಪ್ರಾಥಮಿಕ ಚಿಕಿತ್ಸೆಯ ನಂತರ ಗಾಯಗೊಂಡ ಗುರುರಾಜರವರನ್ನು ಮಣಿಪಾಲ ಆಸ್ಪತ್ರೆಗೆ ಅದೇ ರಾತ್ರಿ ವೈದ್ಯರ ಸಲಹೆಯ ಮೇರೆಗೆ ಸ್ಥಳಾಂತರಿಸಲಾಯಿತು. ಅದೇ ದಿನ ರಾತ್ರಿ ಮತ್ತು ನಂತರ ಆಪಾದಿತರ ಮತ್ತು ಲಾರಿಯ ತೀವ್ರ ಶೋಧನೆ ನಡೆಸಿದ ನಂತರ ಮಾರನೆಯ ದಿನ ದಿನಾಂಕ 24.12.91 ರಂದು ಮಧ್ಯಾಹ್ನ ಖಾಲಿ ಲಾರಿಯನ್ನು ಉಪ್ಪಿನಂಗಡಿ ಬಳಿ ಒಳ ಮಾರ್ಗದಲ್ಲಿ ಪತ್ತೆ ಹಚ್ಚಲಾಯಿತು. ದಿನಾಂಕ 9.1.92 ರಂದು ಇಬ್ಬರು ಆಪಾದಿತರು ಅಂದರೆ 1) ಎಂ. ಅಬ್ಬಾಸ್, ವಯಸ್ಸು 26, ದಿವಂಗತ ಮಹಮ್ಮದ್ ಬ್ಯಾರಿಯವರ ಮಗ, ಮರ್ಕ ಹೌಸ್, ಅರ್ಯಾಪು ಗ್ರಾಮ, ಪುತ್ತೂರು ತಾ. 2) ಕೆ.ಎಸ್. ಶ್ಯಾಮಸುಂದರ ಹಾಲಂಬಿ, ವಯಸ್ಸು 30, ದಿವಂಗತ ಶೇಷಗಿರಿ ಹಾಲಂಬಿಯವರ ಮಗ, ಅತ್ತರಾಡಿ ಗ್ರಾಮ, ಉಡುಪಿ ರವರನ್ನು ಬಂಧಿಸಲಾಯಿತು ಮತ್ತು ಅವರೇ ಖುದ್ದಾಗಿ ನೀಡಿದ ಮಾಹಿತಿ ಮೇರೆಗೆ ಕಳೆದು ಹೋದ ಸರಕುಗಳನ್ನು ವಶಪಡಿಸಿಕೊಳ್ಳಲಾಯಿತು. ಮತ್ತಿಬ್ಬರು ಆಪಾದಿತರುಗಳಾದ 1) ಮೂಸ, ವಯಸ್ಸು 30, ಹಾಜಿ ಫಕ್ರುದ್ದಿನ್‌ರವರ ಮಗ, ಯಾಹಂಚಿ ಮಜಿಲ್ ಗ್ರಾಮದ ವಾಸಿ, ಕಾರ್ನಾಡು, ಮುಲ್ಕಿ 2) ಮಹಮ್ಮದ್ ಬಾವ, ಅಲಿಯಾಸ್ ಬಾವು, ವಯಸ್ಸು 30, ಹುಸೇನ್ ಬ್ಯಾರಿ ಯವರ ಮಗ, ದುರ್ಗಾ ರೋಡ್, ಕಾರ್ನಾಡ್, ಮುಲ್ಕಿ ಇವರು ನಾಪತ್ತೆಯಾಗಿದ್ದಾರೆ. ಪೋಲಿಸರು ಇವರನ್ನು ಹುಡುಕಲು ದಿನಾಂಕ 22.2.92 ರಂದು ಬೊಂಬಾಯಿಗೆ ಭೇಟಿ ನೀಡಿದ್ದಾರೆ.

ತೀವ್ರ ಗಾಯಗಳಿಂದ ವೈದ್ಯಕೀಯ ಶುಶ್ರೂಷೆಯಲ್ಲಿದ್ದ ಶ್ರೀ ಗುರುರಾಜ, ವಾಹನ ಚಾಲಕನು ದಿನಾಂಕ 12.1.92ರಂದು ಮಣಿಪಾಲ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾನೆ. ಈ ಬಗ್ಗೆ ಬೈಂದೂರು ಪೋಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 109:91 ಕಲಂ 307, 394 ಭಾರತ ದಂಡ ಸಂಹಿತೆ ಮೇರೆಗೆ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ. ಚಾಲಕನು ಸತ್ತ ನಂತರ ವಿಧಿ 302 ಭಾರತ ದಂಡ ಸಂಹಿತೆಗೆ ಇದನ್ನು ಸೇರಿಸಲಾಗಿದೆ. 1991 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿ ನಡೆದಿರುವುದು ಇದೇ ಮೊದಲನೆಯ ಪ್ರಕರಣವಾಗಿದೆ. ಜಿಲ್ಲೆಯಲ್ಲಿರುವ ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ರಾತ್ರಿಯ ವೇಳೆ ಹೆದ್ದಾರಿಗಳಲ್ಲಿ ಮತ್ತು ಇತರ ಮುಖ್ಯ ಮಾರ್ಗಗಳಲ್ಲಿ ಈ ರೀತಿಯ ಅಪರಾಧಗಳನ್ನು ತಡೆಗಟ್ಟಲು ಪಹರೆ ಮತ್ತು ಗಸ್ತನ್ನು ಹೆಚ್ಚಿಸಲು ಸೂಚನೆ ನೀಡಲಾಗಿದೆ. ಹಾಗೂ ಲಾರಿಯ ಮಾಲೀಕರಿಗೆ ಮತ್ತು ವಾಹನ ಚಾಲಕರಿಗೆ ರಾತ್ರಿಯ ವೇಳೆಯಲ್ಲಿ ಅಪರಿಚಿತರನ್ನು ಲಾರಿಯಲ್ಲಿ ಕೂರಿಸಿಕೊಂಡು ಹೋಗಬಾರದೆಂದು ಕೋರಲಾಗಿದೆ.

ದಿನಾಂಕ 19.2.92 ರಂದು ಕಿರಣ ಟ್ರಾನ್ಸ್ ಪೋರ್ಟ್, ಲಾರಿ ಸಂಖ್ಯೆ : ಸಿಎನ್‌ಒ 8928, ಮಂಗಳೂರಿನ ಎಂ.ಸಿ.ಎಫ್. ಫ್ಯಾಕ್ಟರಿಯಲ್ಲಿ ಯೂರಿಯಾವನ್ನು ತುಂಬಿಕೊಂಡು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಕಡೆ ಹೋಗುತ್ತಿದ್ದಾಗ ಅದೇ ರಾತ್ರಿ ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ 5 ಜನರು ಪ್ರಯಾಣಿಕರಂತೆ ನಟಿಸಿ ಲಾರಿ ಹತ್ತಿರುತ್ತಾರೆ. ಸ್ವಲ್ಪ ಸಮಯದ ನಂತರ ಲಾರಿಯ ಚಾಲಕ ವಿಠಲ ಶೆಟ್ಟಿ ಮತ್ತು ಕ್ಲೀನರ್ ಪಾಲ್ ಕಾರ್ಡಿರೋ ಇಬ್ಬರನ್ನು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಗ್ರಾಮದ ಹತ್ತಿರ ಹಲ್ಲೆ ನಡೆಸಿ ಕೊಂದು, ಅವರ ಶವಗಳನ್ನು ಬೇರೆ ಬೇರೆ ಎರಡು ಸ್ಥಳಗಳಲ್ಲಿ ಮೋರಿಯ ಕೆಳಗಡೆ ಎಸೆದು, ಯೂರಿಯಾ ತುಂಬಿದ ಲಾರಿಯನ್ನು ತೆಗೆದುಕೊಂಡು ಹೋಗಿದ್ದಾರೆ. ದಿನಾಂಕ 19.2.92 ರಂದು ಮಂಗಳೂರು ಪೋಲೀಸ್ ಅಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮತ್ತು ಚಾಮರಾಜನಗರ ತಾಲ್ಲೂಕಿನ ಎಡಮಂಗಲ ವಾಸಿಗಳಾದ 4 ಜನ ಆಪಾದಿತರನ್ನು ಹಿಡಿದು ಅವರನ್ನು ಚಿಕ್ಕಮಗಳೂರು ಪೋಲೀಸ್ ಅಧಿಕಾರಿಗಳಿಗೆ ಒಪ್ಪಿಸಲಾಗಿದೆ. ಈ ಪ್ರಕರಣವನ್ನು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಠಾಣೆಯಲ್ಲಿ ಗುನ್ನೆ ಸಂಖ್ಯೆ : 16 : 92 ರಲ್ಲಿ ಪ್ರಕರಣ ದಾಖಲುಗೊಳಿಸಿ, ಸಿ.ಪಿ.ಐ. ಕೊಪ್ಪ ಇವರು, ಈ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಶ್ರೀ ಪಿ.ಎಂ. ಕ್ಯಾಸ್ಟಿಲಿನೋ, ಮಾಲೀಕರು, ಕಿರಣ ಸಾರಿಗೆ ಸಂಸ್ಥೆ, ಬಿಕರ್ನಕಟ್ಟೆ ಮಂಗಳೂರು ಇವರು ನೀಡಿರುವ ದೂರಿನ ಮೇರೆಗೆ ಮಂಗಳೂರು ದಕ್ಷಿಣ ಠಾಣೆಯಲ್ಲಿ ಸಂಖ್ಯೆ : 57:92 ರನ್ವಯ ಕೇಸ್ ದಾಖಲೆಗೊಂಡಿದ್ದು ಪೋಲೀಸರು ತನಿಖೆ ನಡೆಸಿದ್ದಾರೆ. ಈ ಪ್ರಕರಣದ ಆರೋಪಿಗಳಾದ ಅಂತೋಣಿ ಡಿಸೌಜಾ ಮತ್ತು ಅವನ ಸಹಚರರಾದ ಅನಿಲ್ಕುಮಾರ್, ಸಿರಿಲ್ ಡಿಸೌಜಾ, ಕೆಳಗಣಗ್ರಾಮ, ಮಂಜುನಾಥ ಶೆಟ್ಟಿ, ಸಂತೇಮಾರನಹಳ್ಳಿ, ಮೈಸೂರು ಜಿಲ್ಲೆ ಹಾಗೂ ಜಾರ್ಜ್ ಡಿಸೌಜಾ ಎನ್ನುವವರನ್ನು, ಸಿ.ಪಿ.ಐ. ಕೊಪ್ಪ ಮತ್ತು ಅವರ ಸಿಬ್ಬಂದಿಯವರು ಬಂಧಿಸಿ ದಿನಾಂಕ 20.2.92 ರಂದು ಚಿಕ್ಕಮಗಳೂರು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ ಮತ್ತು ಪ್ರಶ್ನಿಸುವುದಕ್ಕೆ 27.2.92 ರವರೆಗೆ ಪೋಲೀಸ್ ಕಸ್ಟಡಿಗೆ ಒಪ್ಪಿಸಿದ್ದಾರೆ. ಲಾರಿಯ ಚಾಲಕ ಮತ್ತು ಕ್ಲೀನರ್‌ಗಳ ಮೃತದೇಹಗಳನ್ನ ಪತ್ತೆ ಹಚ್ಚಿದ್ದಾರೆ.

ದಿನಾಂಕ 24.12.91 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು, ಉಜಿರೆ ವಾಸಿ ಯು.ಎ.ಹಮೀದ್ ಎಂಬುವವರು ಲಾರಿ ಸಂ: ಸಿಟಿಎಸ್. 7859 ರ ಮಾಲೀಕರಾಗಿದ್ದು ಅವರು ಕಾರವಾರ ಪೋಲೀಸ್ ಠಾಣೆಗೆ ಫಿರ್ಯಾದು ಮಾಡಿದರು. ಈ ಫಿರ್ಯಾದಿನ ಅಂಶ ಏನೆಂದರೆ, ದಿನಾಂಕ 14.12.91 ರಂದು ಲಾರಿ ಚಾಲಕ ಹಸನಬ್ಬ ಜಯಬ್ಬ ಮತ್ತು ಕ್ಲೀನರ್ ಬಾಬಾ ಮೊಹಮ್ಮದ್ ಇವರುಗಳು ಚಿಕ್ಕೋಡಿಯಿಂದ ಸುಳ್ಳ ಸಹಕಾರಿ ಸಂಘಕ್ಕೆ ಸಕ್ಕರೆ ಮೂಟೆಗಳನ್ನು ಸಾಗಣೆ ಮಾಡುತ್ತಿದ್ದರು. ದಿನಾಂಕ 21.12.91 ರಂದು ರಾಷ್ಟ್ರೀಯ ಹೆದ್ದಾರಿ 17ನೇ ಹೆದ್ದಾರಿಯಲ್ಲಿ ಒಂದು ಖಾಲಿ ಲಾರಿಯು ವಾರಸುದಾರರಿಲ್ಲದೆ ನಿಂತಿರುವುದಾಗಿಯೂ ಆದರ ಚಾಲಕ ಮತ್ತು ಕ್ಲೀನರ್ ಕಾಣೆಯಾಗಿದ್ದಾರೆಂದು ತಿಳಿದು ಬಂದಿತು. ಈ ಲಾರಿಯನ್ನು ಕಾರವಾರ ಪುರ ಪೋಲೀಸ್ ಠಾಣೆಯಲ್ಲಿ ಅಮಾನತ್ತುಪಡಿಸಿ ಇಡಲಾಗಿದೆ.

ದಿನಾಂಕ 24.12.91 ರಂದು ಈ ಬಗ್ಗೆ ಕಾರವಾರ ಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 307:91 ಮನುಷ್ಯ ಕಾಣೆಯಾಗಿದ್ದಾನೆ ಎಂಬ ಶಿರೋನಾಮೆಯಲ್ಲಿ ನೋಂದಾಯಿಸಲಾಗಿದೆ. ದಿನಾಂಕ 28.12.91 ರಂದು ಕದ್ರ ಪೋಲೀಸಿನವರು ಅಂಶಿಫಟ್ಟ ಕಾಡಿನಲ್ಲಿ ಲಾರಿ ಚಾಲಕ ಮತ್ತು ಕ್ಲೀನರ್ ಗಳಿಗೆ ಸೇರಿದ ರಕ್ತವಿರುವ ಬಟ್ಟೆಗಳನ್ನು ಪತ್ತೆ ಮಾಡಿದ್ದಾರೆ. ಈ ಬಟ್ಟೆಗಳನ್ನು ಫಿರ್ಯಾದಿ ಯು.ಎ. ಹಮೀದ್ ಗುರ್ತು ಮಾಡಿರುತ್ತಾರೆ. ಫಿರ್ಯಾದಿಯು ಲಾರಿಯ ಚಾಲಕ ಮತ್ತು ಕ್ಲೀನರ್ ಗಳನ್ನು ಕೊಲೆ ಮಾಡಿ ಯಾರೋ ಅಪರಿಚಿತರು ಸಕ್ಕರೆ ದಾಸ್ತಾನನ್ನು ತೆಗೆದುಕೊಂಡು ಹೋಗಿರುವುದಾಗಿ ಸಂಶಯಪಟ್ಟಿದ್ದಾರೆ. ಮತ್ತು ಲಾರಿಯನ್ನು ಕಾರವಾರದಲ್ಲಿ ಬಿಟ್ಟಿರುವುದಾಗಿ ತಿಳಿಸುತ್ತಾರೆ.

ಈ ಮೇಲಿನ ಅಂಶಗಳ ಮೇಲೆ ದಿನಾಂಕ 29.12.1991 ರಂದು 12.30 ಘಂಟೆಗೆ ಕದ್ರ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 1 : 91 ಕಲಂ 302–201–392 ಭಾ.ದಂ.ಸಂ. ಪ್ರಕಾರ ನೋಂದಾಯಿಸಲಾಗಿದೆ. ತನಿಖೆಯು ಮುಂದುವರಿದಿದ್ದು, ಅಪರಾಧಿಗಳನ್ನು ಪತ್ತೆ ಮಾಡುವ ಕ್ರಮ ನಡೆದಿದೆ. ಲಾರಿಯ ಚಾಲಕ ಮತ್ತು ಕ್ಲೀನರ್‌ರವರ ಮೃತ ದೇಹಗಳು ಇನ್ನೂ ಪತ್ತೆಯಾಗಿರುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ :– ಇದರ ಬಗ್ಗೆ ತಾವು ಏನು ಮಾಡುತ್ತೀರೆಂಬುದನ್ನು ಇದರಲ್ಲಿ ಹೇಳಿಲ್ಲ, ಇದು ಕೇವಲ ನಿಮ್ಮ ಸ್ಟೇಟ್ ಮೆಂಟ್ ಆಗಿದೆಯೇ ಹೊರತು ಆ ಮೃತ ದೇಹಗಳು ಇನ್ನೂ ಪತ್ತೆ ಆಗಿಲ್ಲ. ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ?

ಶ್ರೀ ಎಸ್.ಆರ್. ಶಿವರಾಮೇಗೌಡ :– ಮಾನ್ಯ ಉಪಾಧ್ಯಕ್ಷೀಣೆಯವರೆ,

ಉಪಾಧ್ಯಕ್ಷೀಣೆಯವರು :– ನಿಯಮ 334 ರ ಮೇಲೆ ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ. ಈಗ ವಿಧೇಯಕವನ್ನು ಮಂಡಿಸುವುದು.

1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಬ್ಲೇಸಿಯಸ್ ಎಮ್. ಡಿಸೋಜ (ಕಾನೂನು ಸಚಿವರು) :– ಶ್ರೀಮತಿ ಮನೋರಮಾ ಮಧ್ವರಾಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಅವರ ಪರವಾಗಿ ಮಾನ್ಯ ಅಧ್ಯಕ್ಷರೇ– "1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೀಣೆಯವರು :– ಪ್ರಸ್ತಾವ ಏನೆಂದರೆ 1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು" ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬ್ಲೇಸಿಯಸ್ ಎಮ್. ಡಿಸೋಜ (ಕಾನೂನು ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ "1992ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೀಣೆಯವರು :– ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 1992

(1992 ರ ವಿಧಾನಸಭಾ ವಿಧೇಯಕ - 3)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966 ರ ಕರ್ನಾಟಕ ಅಧಿನಿಯಮ 18) ನ್ನು ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲುವತ್ತು ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. **ಚಿಕ್ಕ ಹೆಸರು ಮತ್ತು ಪ್ರಾರಂಭ** :- (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕುದು.
(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು.

2. **6ನೇ ಪ್ರಕರಣದ ತಿದ್ದುಪಡಿ** :- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ , 1966 (1966 ರ ಕರ್ನಾಟಕ ಅಧಿನಿಯಮ 18) ರ 6ನೇ ಪ್ರಕರಣದಲ್ಲಿ (ಸಿಇ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕುದು. ಎಂದರೆ :-
"(ಸಿಎಫ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ";

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಹಣಕಾಸು ನಿಗಮವು, ರಾಜ್ಯದಲ್ಲಿಯ ಕೈಗಾರಿಕೆಗಳ ಪ್ರವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಗೆ ಹಣಕಾಸನ್ನು ಒದಗಿಸುತ್ತಿದೆ. ಆದ್ದರಿಂದ, ಉತ್ತಮ ಸಮನ್ವಯಕ್ಕಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಕೈಗಾರಿಕಾ ಪ್ರಾದೇಶಿಕಾಭಿವೃದ್ಧಿ ಮಂಡಲಿಯ ಸದಸ್ಯರಲ್ಲೊಬ್ಬರನ್ನಾಗಿ ಸಹ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ವಿಧೇಯಕ.

ಮನೋರಮಾ ಮಧ್ವರಾಜ್,
ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966(1966 ರ ಕರ್ನಾಟಕ ಅಧಿನಿಯಮ 18) ರ ಉದ್ಧೃತ ಭಾಗ).

XX XX XX

6. ರಚನೆ - ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕುದು, ಎಂದರೆ :-
(ಎ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರು ಮಂಡಲಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.
(ಬಿ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ ;
(ಸಿ) ಸರ್ಕಾರದ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ;
(ಸಿಎ) ಕೈಗಾರಿಕಾಭಿವೃದ್ಧಿ ಇಲಾಖೆಯ ಕಮೀಷನರು ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು.
(ಸಿಬಿ) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ;

(ಸಿಸಿ) ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ;
(ಸಿಡಿ) ನಿರ್ದೇಶಕರು, ಪಟ್ಟಣ ಯೋಜನೆ;
(ಸಿಇ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ :
(ಡಿ) ಮಂಡಲಿಯ ಕಾರ್ಯ ನಿರ್ವಾಹಕ ಸದಸ್ಯರು ; ಮತ್ತು
(ಇ) ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕಿನ ಇಬ್ಬರು ನಾಮನಿರ್ದೇಶಿತ ವ್ಯಕ್ತಿಗಳು.

ಸಭೆಗೆ ಬಹಿಷ್ಕಾರವೆಸಗಿದ್ದ ಭಾ.ಜ.ಪ. ಸದಸ್ಯರ ಪುನರಾಗಮನ

+ ಶ್ರೀ ರುಕ್ಮಯ್ಯಪೂಜಾರಿ (ವಿಟ್ಲ):- ಸನ್ಮಾನ್ಯ ಸಭಾಧ್ಯಕ್ಷೀಣಿಯವರೇ ನಾವು ಕಳೆದ 5–6 ದಿವಸಗಳಿಂದ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕಿದ್ದೆವು. ಇವತ್ತು ಬೆಳಗಿನಿಂದ ಬಹಿಷ್ಕಾರವನ್ನು ವಾಪಸ್ ಪಡೆದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂಥ ತೀರ್ಮಾನವನ್ನು ನಮ್ಮ ಪಕ್ಷದ ವತಿಯಿಂದ ಮಾಡಿ ಇಂದಿನಿಂದ ಭಾಗವಹಿಸುತ್ತಿದ್ದೇವೆ. ನಾವು ಬಹಿಷ್ಕಾರ ಮಾಡಿದಂಥ ವಿಚಾರ ಸದನಕ್ಕೆ ಗೊತ್ತಿದೆ. ಸಂಸದೀಯ ವ್ಯವಸ್ಥೆಯಲ್ಲಿ ಆಯವ್ಯಯ ಪತ್ರ ಅತ್ಯಂತ ಒಂದು ಗುಪ್ತವಾದ ದಾಖಲಾತಿ. ಅದನ್ನು ಕಾಪಾಡುವಂಥದ್ದು ಮತ್ತು ಬಹಿರಂಗಪಡಿಸದೆ ಇರತಕ್ಕಂಥದ್ದು ಸರ್ಕಾರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಆದರೆ ಸರ್ಕಾರ ಆ ಒಂದು ದಿಕ್ಕಿನಲ್ಲಿ ಒಂದು ಅಪರಾಧ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸದನದ ಸತ್ಸಂಪ್ರದಾಯ ಏನೆಂದರೆ ಬಜೆಟ್ ಮಂಡನೆ ಮಾಡಿದ ನಂತರ ಅದನ್ನು ಇನ್ವಿಯೇಟ್ ಮಾಡುವುದು, ಚರ್ಚೆ ಪ್ರಾರಂಭ ಮಾಡುವುದು ಕೂಡ ವಿರೋಧಪಕ್ಷದ ನಾಯಕರ ಕಡೆಯಿಂದ ಇದ್ದು ಅದು ಇಪ್ಪು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಈ ಸಾರಿ ಅದಕ್ಕೆ ತಿಲಾಂಜಲಿ ಕೊಟ್ಟು ಸರ್ಕಾರದ ವತಿಯಿಂದಲೇ ಚರ್ಚೆಯನ್ನು ಪ್ರಾರಂಭ ಮಾಡಿಸಿದ್ದಾರೆ. ಇದೂ ಕೂಡ ಸರ್ಕಾರದ ಲೋಪವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸರ್ಕಾರವು ಪ್ರತಿಯೊಂದು ಹಂತದಲ್ಲೂ ಕೂಡ ವಿರೋಧಪಕ್ಷದ ಮಾನ್ಯ ಸದಸ್ಯರುಗಳಿಗೆ ಅಗೌರವದ ರೀತಿಯಲ್ಲಿ ವ್ಯವಹಾರ ಮಾಡಿರುವುದಕ್ಕೆ ನಮ್ಮದು ತೀವ್ರ ಪ್ರತಿಭಟನೆ ತೋರಿಸುವ ದೃಷ್ಟಿಯಿಂದ ಈ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರವನ್ನು ಹಾಕಿದ್ದೆವು. ಈ ಬಗ್ಗೆ ನಮ್ಮ ಪ್ರತಿಭಟನೆ ಕೂಡ ಇದೆ. ಆದರೂ ಕೂಡ ನಡೆದಂಥ ಮಾತಿನ ವಿಷಯ ಹಾಗೂ ಮಾನ್ಯ ಸಭಾಧ್ಯಕ್ಷರ ಮಧ್ಯಸ್ಥಿಕೆ ಒಂದು ಹಿನ್ನೆಲೆಯಲ್ಲಿ ಸರ್ಕಾರದ ಮಾನ್ಯ ಸಚಿವರುಗಳಾದ ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮತ್ತು ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರುಗಳು ಸಮಕ್ಷಮದಲ್ಲಿ ಮಾನ್ಯ ಅಧ್ಯಕ್ಷರ ಮನೆಯಲ್ಲಿ ಮೀಟಿಂಗ್ ನಡೆಸಿ ಅಲ್ಲಿ ಒಂದು ಒಮ್ಮತದ ತೀರ್ಮಾನಕ್ಕೆ ಬಂದೆವು. ಅದು ಏನೆಂದರೆ ಈ ಬಜೆಟ್ ಗೌಪ್ಯ ವಿಚಾರ ಇಟ್ಟುಕೊಳ್ಳಲಿಕ್ಕೆ ಕಷ್ಟವಾಯಿತು. ಆದರೂ ಸರ್ಕಾರದ ಹಿತದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ರಾಜ್ಯದ ನಾಲ್ಕೂವರೆಕೋಟಿ ಜನರ ಹಿತದೃಷ್ಟಿಯಿಂದ ಈ ಐದು ದಿನಗಳ ಸದನದ ಕಲಾಪಗಳಿಗೆ ಬಹಿಷ್ಕಾರ ಹಾಕಿದ್ದನ್ನು ಹಿಂತೆಗೆದುಕೊಂಡು ಕಲಾಪದಲ್ಲಿ ನಾವು ಭಾಗವಹಿಸಲು ತೀರ್ಮಾನ ಮಾಡಿದೆವು. ಮಾನ್ಯ ಸಭಾಧ್ಯಕ್ಷರ ಸಮ್ಮುಖದಲ್ಲಿ ಬಂದ ಅಭಿಪ್ರಾಯದಂತೆ, ಎರಡು ಅಭಿಪ್ರಾಯಗಳು ಒಂದು ಸದನದ ಸಮಿತಿ ಮಾಡುವಂಥದ್ದು, ಮತ್ತು ವಿರೋಧಪಕ್ಷದ ನಾಯಕರಿಗೆ ಬಜೆಟ್ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡದಿರುವುದು. ಇದರ ಬಗ್ಗೆ ಸರ್ಕಾರ ತಪ್ಪು ಒಪ್ಪಿಕೊಂಡಂತಾದರೂ ಒಮ್ಮತದ ಅಭಿಪ್ರಾಯದಲ್ಲಿ ಮೂಡಿಬಂದಂತೆ ಅದರ ಒಂದು ಆಧಾರದಮೇಲೆ ನಾವು ಇಂದು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿಕ್ಕೆ ಪ್ರಯತ್ನ ಮಾಡಿದೆವು. ಆದರೆ ಇನ್ನೂ ಕೂಡ ಮಾನ್ಯ ವಿರೋಧಪಕ್ಷದ ಮಿತ್ರರು, ಪಕ್ಷದ ನಾಯಕರು ಸದನದ ಕಾರ್ಯಕಲಾಪಗಳಿಗೆ ಭಾಗವಹಿಸಲಿಲ್ಲ. ನಾನು ತಮ್ಮ ಮೂಲಕ

ಸರ್ಕಾರವನ್ನು ಒತ್ತಾಯಿಸುತ್ತೇನೆ, ಅವರ ಮನಒಲಿಸಿ ಇವತ್ತು ನಾಲ್ಕೂವರೆಕೋಟಿ ಜನರ ಹಿತದೃಷ್ಟಿಯಿಂದ, ನಮ್ಮ ರಾಜ್ಯದ ಹಲವಾರು ಸಮಸ್ಯೆಗಳನ್ನು ಚರ್ಚೆ ಮಾಡುವ ದೃಷ್ಟಿಯಿಂದ ಅವರು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಸರ್ಕಾರ ಅವರ ಮನವನ್ನು ಒಲಿಸಲು ಆ ದಿಕ್ಕಿನಲ್ಲಿ ಸರ್ಕಾರ ಏನು ಪ್ರಯತ್ನ ಪಟ್ಟಿದೆ ಎನ್ನುವುದನ್ನು ಕೂಡ ಈ ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ವಿರೋಧ ಪಕ್ಷದವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮನವಿ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಸದಸ್ಯರಾದ ಪೂಜಾರಿಯವರ ಕಳಕಳಿ ಸರ್ಕಾರಕ್ಕೆ, ಸದನಕ್ಕೆ ಸಂಪೂರ್ಣವಾಗಿ ಅರ್ಥವಾಗಿದೆ. ವಿಷಯಗಳು ಏನು, ಯಾವ ಕಾರಣಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಕೆಲವರು ಬಹಿಷ್ಕಾರ ಹಾಕಿದ್ದಾರೆ ಎಂಬುದನ್ನು ಕೂಡ ಅತಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಒಪ್ಪುತ್ತೇನೆ. ಸದನದ ಕಾರ್ಯಕಲಾಪಗಳು ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ವಿರೋಧ ಪಕ್ಷದ ಪಾತ್ರ ಅತಿ ದೊಡ್ಡದು ಮತ್ತು ಅಗತ್ಯ. ಈ ಮಾತನ್ನು ನಾನು ಅಲ್ಲಗಳೆಯುವುದಿಲ್ಲ, ನಾನು ಅದಕ್ಕಾಗಿ ಪದೇ ಪದೇ ಸರ್ಕಾರದ ಪರವಾಗಿ ಮನವಿ ಮಾಡಿದ್ದೇನೆ. ಈ ಹಿಂದೆಯೂ ಕೂಡ ನಾನು ಮನವಿ ಮಾಡಿದ್ದೇನೆ, ಮಾನ್ಯ ಸಂಸದೀಯ ವ್ಯವಹಾರ ಸಚಿವರು ಮನವಿ ಮಾಡಿದ್ದಾರೆ. ಅವರು ಬರಬೇಕು ಚರ್ಚೆಯಲ್ಲಿ ಭಾಗವಹಿಸಬೇಕು; ಯಾವ ಯಾವ ರಾಜಕೀಯ ಪಕ್ಷಗಳು ಅಥವಾ ಪಕ್ಷೇತರರು ಬಹಿಷ್ಕಾರದ ಹೆಸರಿನಲ್ಲಿ ಹೊರಗಡೆ ಉಳಿದಿದ್ದಾರೆ ಅವರೆಲ್ಲರೂ ಸಭೆಗೆ ಬರಬೇಕೆಂಬ ಮಾತನ್ನಾಡಿದ್ದೇವೆ. ಈಗ ಬಡ್ಜೆಟ್‌ನ್ನು ಸದನದ ಮುಂದಿಡಲಾಗಿ. ಬಡ್ಜೆಟ್ ಬಹಿರಂಗವಾಗಿಲ್ಲ ಎಂಬ ಅಭಿಪ್ರಾಯ ನಮ್ಮದು; ಬಹಿರಂಗವಾಗಿದೆ ಎಂಬ ಅಭಿಪ್ರಾಯ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಕೆಲವರದು. ಬಡ್ಜೆಟ್ ಬಹಿರಂಗಗೊಂಡರೆ ಇಡೀ ಮಾರುಕಟ್ಟೆಯಲ್ಲಿ ಅಥವಾ ಸಮಾಜದ ಮೇಲೆ ಅದರ ಪರಿಣಾಮ ಇಷ್ಟರೊಳಗೆ ಆಗಬೇಕಾಗಿತ್ತು, ಆದು ಏನು ಇಲ್ಲವೆಂದು ನಾನು ಹೇಳಿದ್ದೇನೆ. ಇಂದೂ ಹೇಳುತ್ತೇನೆ, ಮುಂದೆ ಕೂಡ ಏನೂ ಆಗುವುದಕ್ಕೆ ಸಾಧ್ಯವಿಲ್ಲ ಆಗುವುದು ಇದ್ದರೆ ಇಷ್ಟರೊಳಗೆ ಮುಗಿದುಹೋಗಬೇಕಾಗಿತ್ತು. ಮುಂದೆ ಅದು ಸಾಧ್ಯವಿಲ್ಲ, ಬಡ್ಜೆಟ್ ಪ್ರೊಪೋಸಲ್‌ಗೆ ಸಂಬಂಧಪಟ್ಟ ಟ್ಯಾಕ್ಸೇಷನ್ ಮ್ಯಾಟರ್ ಬಹಿರಂಗವಾಗಿದ್ದರೆ ಅದರ ಪರಿಣಾಮ ಇಷ್ಟುಹೊತ್ತಿಗೆ ಹೊರಬರಬೇಕಾಗಿತ್ತು. ಅಂಥದ್ದು ಏನೂ ಇಲ್ಲವೆಂಬ ಮಾತನ್ನು ಆ ದಿವಸ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಪೂಜಾರಿಯವರ ಗಮನಕ್ಕೆ ತರುವುದು ಇಷ್ಟೆ. ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುತ್ತೇನೆ. ಯಾವುದೇ ಸಂದರ್ಭದಲ್ಲಿ ಬಡ್ಜೆಟ್‌ನಲ್ಲಿರತಕ್ಕ ಅಂಶಗಳು ಬಹಿರಂಗಗೊಂಡಿಲ್ಲ, ಇದು ಸರ್ಕಾರದ ನಿಲುವು. ಇಷ್ಟಾದರೂ ಅದಕ್ಕೆ ಸದನದ ಸಮಿತಿ ಆಗಬೇಕೆಂಬ ವಿಚಾರವನ್ನು ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ತಾವು ಕೂಡ ಇಟ್ಟಿದ್ದೀರಿ. ತಾವು ಹೇಳುವ ಹಾಗೆ ಅಲ್ಲಿ ಚರ್ಚೆ ಖಾಸಗಿಯಾಗಿ ನಡೆದಂಥ ಸಂದರ್ಭದಲ್ಲಿ ಆ ವಿಚಾರ ಪ್ರಸ್ತಾಪಕ್ಕೆ ಬಂದಿದೆ. ಆದರೆ ಅದರ ಬಗ್ಗೆ ಏನೆಂದು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಮ್ಮ ಮಾತನ್ನು ಸಂಪೂರ್ಣ ಬದಿಗೊತ್ತಿ ಮಾತನಾಡುತ್ತೇನೆಂದು ತಿಳಿದುಕೊಳ್ಳಬೇಡಿ. ನಾನು ಕೆಲವು ಕಾರಣಗಳಿಂದ ಏನೂ ಹೇಳುತ್ತಿಲ್ಲ, ಆದರೆ ಇಷ್ಟ ಮಾತ್ರ ಹೇಳಬಲ್ಲೆ, ಬಹಳ ವಿಚಾರಗಳು ಸಲಹೆ ರೂಪದಲ್ಲಿ ಬಂದಂತ ಕಾಲದಲ್ಲಿ ಸರ್ಕಾರ ಅದನ್ನು ಯಾವುದೇ ವಿಚಾರದಲ್ಲಿ ನೀವು ಹೇಳುವುದು ತಪ್ಪು ಮತ್ತೊಂದು ಎಂದು ನೋಡುತ್ತಿಲ್ಲ, ಯಾವುದು ಈ ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಸರ್ಕಾರ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಸದಾ ಸಿದ್ಧವಿದೆ ಎಂದು ಹಿಂದೆ ಹೇಳಿದ ಹಾಗೆ ಈಗಲೂ ಪುನರುಚ್ಚಾರ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಅವರ ಮನ ಒಲಿಸಬೇಕೆಂಬ ಮಾತನ್ನು ಹೇಳಿದ್ದೀರಿ. ಅದೇ ಪ್ರಯತ್ನವನ್ನು ತಮ್ಮ ಕಣ್ಮುಂದೆ ಮಾಡಿದ್ದೇವೆ. ಇಲ್ಲಿಯೂ

ಜೊಡ ಮತ್ತೆ ಮಾನ್ಯ ಸಭಾಧ್ಯಕ್ಷರ ಮೂಲಕ, ಸದನದ ಮೂಲಕ ಮತ್ತು ತಮ್ಮ ಮೂಲಕ ನಾ ಸಂದರ್ಭದಲ್ಲಿ ವಿನಂತಿ ಮಾಡುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಾದಿಯಾಗಿ ಯಾರು ಯಾರು ಬಹಿಷ್ಕಾರದ ವಿಚಾರದಲ್ಲಿ ಹೊರಗಡೆ ಉಳಿದಿದ್ದಾರೆ ಅವರು ದಯವಿಟ್ಟು ಸದನಕ್ಕೆ ಬರಲಿ. ಇದರಲ್ಲಿ ಹೊಸದಾಗಿ ಮತ್ತೆ ಏನೂ ಹೇಳತಕ್ಕದ್ದು ಉಳಿದಿಲ್ಲವೆಂದು ಹೇಳಿ, ಮನ ಒಲಿಸುವುದು ಇದಕ್ಕಿಂತ ಇನ್ನು ಏನು ಮಾಡಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಅವರು ಹಾಕಿಕ್ಕ ನಿಬಂಧನೆಗಳು, ಷರತ್ತುಗಳು ಮತ್ತೊಂದು ವಿಚಾರಗಳು ಏನಿವೆ ಎಂದು ಇಲ್ಲಿ ಸದನಕ್ಕೆ ಬಂದು ಹೇಳಲಿ. ಸದನಕ್ಕೆ ಬರಲಿ, ಚರ್ಚೆಯಲ್ಲಿ ಭಾಗವಹಿಸಲಿ, ಹೇಳಲಿ. ಅವರು ಹೇಳುವ ವಿಚಾರ ಸರಿಯಾಗಿ ಕಂಡುಬಂದರೆ ಒಪ್ಪಿಕೊಳ್ಳೋಣ. ಸರಿಯಿಲ್ಲ ಎಂದು ನಾವು ಹೇಳಿದರೆ ಅವರು ಒಪ್ಪಬೇಕಾಗುತ್ತದೆ. ನಾವು ಸಂಸದೀಯ ವ್ಯವಹಾರದಲ್ಲಿ ಹೋಗಬೇಕಾಗುತ್ತದೆ. ಅವರ ಮನ ಒಲಿಸುವ ಪ್ರಯತ್ನವನ್ನು ಅಲ್ಲಿ ಮಾಡಿದ್ದೇವೆ, ಮತ್ತೆ ಇಲ್ಲಿ ಮಾಡುತ್ತಿದ್ದೇವೆ. ದಯವಿಟ್ಟು ಅವರು ಬರಬೇಕೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿ ಅವರು ಸದನಕ್ಕೆ ಬಂದು ಚರ್ಚೆಯಲ್ಲಿ ಭಾಗವಹಿಸಬೇಕೆಂಬ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇದಕ್ಕಿಂತ ಹೆಚ್ಚಿಗೆ ನನಗೆ ಅರ್ಥವಾಗುತ್ತಿಲ್ಲ. ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಿದರೆ ಅವರ ಕರ್ತವ್ಯವನ್ನು ಒಳ್ಳೆಯ ರೀತಿಯಲ್ಲಿ ಮಾಡಿದಂತಾಗುತ್ತದೆ. ಇದು ಬಡ್ಜೆಟ್ ಅಧಿವೇಶನ. ಈಗಾಗಲೇ ಸುಮಾರು ನಾಲ್ಕು ದಿನಗಳ ಕಾಲ ಅಥವಾ ಐದನೆಯ ದಿನ ಎಂದು ಕಾಣುತ್ತದೆ. ನನ್ನ ಅನಿಸಿಕೆ ಕಲಾಪಗಳನ್ನು ಹೆಚ್ಚಾಗಿ ಏನೂ ಮಾಡದೆ ಕಾಲ ....

ಶ್ರೀ ನಾರಾಯಣರಾವ್ ಮನಹಳ್ಳಿ :- ವಿರೋಧಪಕ್ಷದವರ ಶರತ್ತುಗಳಲ್ಲಿ ನಿಮಗೆ ಒಪ್ಪಿಗೆ ಇಲ್ಲದೇ ಇರುವುದು ಯಾವುದು ಎಂಬುದನ್ನು ಸದನಕ್ಕೆ ಹೇಳಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ :- ನಾನು ಹೇಳುವುದು ಮಾನ್ಯ ಸದಸ್ಯರ ಗಮನಕ್ಕೆ, ಸ್ವಲ್ಪ ಅವರೇ ಬಂದು ಹೇಳಲಿ ಎಂಬುದು ನನ್ನ ಆಸೆ. ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಏನಿದ್ದಾರೆ ಅವರೇ ಬಂದು ಅವು ಏನಿದೆ ಎಂಬುದನ್ನು ಹೇಳಲಿ.

ಶ್ರೀ ನಾರಾಯಣರಾವ್ ಮನಹಳ್ಳಿ :- ಈಗಾಗಲೇ ಚರ್ಚೆಯಾಗಿದೆ ಎಂದು ಹೇಳಿದ್ದೀರಲ್ಲ ಅದಕ್ಕೆ ಏನು ಶರತ್ತುಗಳು ಹೇಳಿ ಸ್ವಲ್ಪ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಸದನಕ್ಕೆ ಬಂದು ಹೇಳಲಿ. ಅದನ್ನು.

ಶ್ರೀ ಎಸ್. ಬಂಗಾರಪ್ಪ :- ಶಿವರಾಮೇಗೌಡರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅಂದರೆ ಅದೇನು ಶರತ್ತು ಮತ್ತೊಂದು ಎಂದು ಹೇಳುತ್ತಿದ್ದಾರೆ. ಒಂದೊಂದು ಸಾರಿ ಶರತ್ತು ಬರುತ್ತದೆ, ಒಂದೊಂದು ಸಾರಿ ಹಿಂದಕ್ಕೆ ಹೋಗುತ್ತವೆ. ಮತ್ತೆ ಹೊಸದಾಗಿ ಹುಟ್ಟಿಕೊಂಡಿವೆ. ಮತ್ತೆ ಹಿಂದಕ್ಕೆ ಹೋಗುತ್ತಾ ಇರುತ್ತವೆ. ಅದೇನಿದೆ ನಿಖರವಾಗಿ ಅಲ್ಲಿ ಮಾತನಾಡುವ ಬದಲು ... ಏಕೆಂದರೆ ಅಧ್ಯಕ್ಷರಿದ್ದರೂ ಏನು ಮಾಡಬಹುದು? ಅಧ್ಯಕ್ಷರಿಗೆ ಸಂಪೂರ್ಣವಾಗಿ ಸಹಕಾರ ಕೊಡತಕ್ಕ ವಿಚಾರ. ಅಧ್ಯಕ್ಷರು ಉಪಾಧ್ಯಕ್ಷರು ಅಥವಾ ಪ್ಯಾನಲ್ ಆಫ್ ಛೇರ್ಮನ್ಸ್ ಯಾರಿದ್ದರೂ ಕೂಡ ನಾವು ಸಹಕಾರ ಕೊಡತಕ್ಕ ವಿಚಾರ. ಇದರಲ್ಲಿ ಸಹಕಾರ ಅಧ್ಯಕ್ಷರಿಗೆ ಕೊಡುತ್ತಿಲ್ಲ, ಮತ್ತೊಂದಿಲ್ಲ ಎಂದು ಅಲ್ಲ. ಇಲ್ಲಿ ಅವು ಏನು ಎಂದು ವಿವರಿಸಿ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅವರ ಬಾಯಿಯಿಂದ ಬರಲಿ ಎಂದು ನಾನು ಕರೆಯುತ್ತಿದ್ದೇನೆ. ನಾನು ವಿನಂತಿ ಮಾಡುತ್ತಿದ್ದೇನೆ. ಅವರೇ ಬಂದು ಸದನಕ್ಕೆ ಹೇಳಿಬಿಟ್ಟರೆ ಅದು ದೇಶದ ಜನತೆಗೆ ಗೊತ್ತಾಗಲಿ, ಸದನಕ್ಕೆ ಗೊತ್ತಾಗಲಿ, ತಮ್ಮ ಮುಖಾಂತರ ಗೊತ್ತಾಗಲಿ. ಇನ್ನೊಂದು ಮಾನ್ಯ ರುಕ್ಮಿಣಿ ಪೂಜಾರಿಯವರು, ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದರು. ವಿರೋಧಪಕ್ಷದ ನಾಯಕರ ಹಕ್ಕು ಬಜೆಟ್ ಚರ್ಚೆಯನ್ನು ಪ್ರಾರಂಭ ಮಾಡತಕ್ಕದ್ದು ಎಂಬ ಮಾತನ್ನು ಹೇಳಿದ್ದಾರೆ. ನಾನು ಒಪ್ಪುತ್ತೇನೆ. ನಾನು ಹಿಂದೆ ಈಗಾಗಲೇ ಅವತ್ತು ಹೇಳಿದ್ದೇನೆ. ದೆಹಲಿಗೆ ಹೋಗುವ ಮುಂಚೆ ನಾನು ಹೇಳಿದ್ದೇನೆ. ಅದು ಕಾನೂನಿನಲ್ಲಿ ಎಲ್ಲೂ ಕೂಡ ಇಲ್ಲ, ಆದರೆ ಸಂಪ್ರದಾಯ ಕನ್‌ವೆನ್‌ಷನ್. ನಾನೂ ಕೂಡ I have also worked as Leader of the Opposition, by sitting there for over one or two years. ನಾನೂ ಕೂಡ ಕೆಲಸ

ಮಾಡಿದ್ದೇನೆ. ಕಳೆದ 25 ವರ್ಷದ ಸದನದ ನನ್ನ ಅನುಭವದಲ್ಲಿ ಯಾವಾಗಲೂ ವಿರೋಧಪಕ್ಷದ ನಾಯಕರು ಬಜೆಟ್ ಚರ್ಚೆ ಪ್ರಾರಂಭ ಮಾಡುತ್ತಾರೆ. ಇವತ್ತು ಅವರ ಹಕ್ಕು, ಅವರು ಚರ್ಚೆ ಮಾಡಬೇಕು ಎಂಬ ಮಾತನ್ನು ಎಷ್ಟು ಗೌರವದಿಂದ ನಾವು ಕಾಣುತ್ತೇವೋ ಅದರ ಸದುಪಯೋಗಪಡಿಸಿಕೊಳ್ಳಬೇಕು ಎಂಬ ಎಚ್ಚರ ಅವರಿಗೂ ಕೂಡ ಇರುವುದು ಒಳ್ಳೆಯದು. ಏಕೆಂದರೆ it is a rare opportunity given particularly to the Leader of the Opposition. ಅದು ಅವರೂ ಕೂಡ ವಿಚಾರ ಮಾಡಬೇಕಾಗುತ್ತದೆ. ಅವರು ಅದರಲ್ಲಿ ಫೇಲಾಗಿದ್ದಾರೆ, ಆ ವಿಚಾರದಲ್ಲಿ ಪಾಸ್ ಆಗಿದ್ದಾರೆ ಎಂದು ಮಾತನಾಡುವುದಕ್ಕೆ ಹೋಗುತ್ತಿಲ್ಲ, ನಾನು ಈಗ ಹಕ್ಕಿನ ಸದುಪಯೋಗದ ಪ್ರಶ್ನೆ ಬಂದಾಗ ಅದನ್ನು ಬಹಳ ಎಚ್ಚರದಿಂದ ಗಮನಿಸತಕ್ಕ ಅಗತ್ಯತೆ ಬಹಳ ಇದೆ. ನಾವು ಒಂದೊಂದು ಸಾರಿ ಭಾಷಣ ಮಾಡಬೇಕಾದರೆ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಕುಳಿತುಕೊಂಡು ನಮ್ಮ ಟೈಂ ತೆಗೆದುಕೊಂಡು ಭಾಷಣ ಮಾಡಿ ಹೋಗಿದ್ದೇವೆ. ರಾತ್ರಿ 10 ಗಂಟೆ 11 ಗಂಟೆಯವರೆಗೂ ನಾವು ಭಾಷಣ ಮಾಡಿದ ಸಂದರ್ಭ ಉಂಟು. ನಾನು ಸುಮ್ಮನೆ ಜನರಲ್ಲಾಗಿ ಹೇಳಿದ್ದೇನೆ. ಅವತ್ತು ಕರೆದಿರತಕ್ಕ ಸಂದರ್ಭದಲ್ಲಿ ಅವರಿಲ್ಲ, ಈ ಸದನದಲ್ಲಿ ಅವರಿಗಿದ್ದ ಹಾಗೆ ಎಲ್ಲಾ ಮಾನ್ಯ ಸದಸ್ಯರಿಗೆ ಹಕ್ಕಿರುತ್ತದೆ. ತಪ್ಪಿಗಿರುತ್ತದೆ. ಈ ಕಡೆ ಇರುವವರಿಗೂ ಇರುತ್ತದೆ. ಕರೆಯತಕ್ಕ ದೃಷ್ಟಿಯಿಂದ ಅಧ್ಯಕ್ಷರು ಕರೆದಿದ್ದಾರೆ. ಅಂದರೆ ಆ ಸ್ಥಾನದಿಂದ ಕುಳಿತಿರತಕ್ಕ ಮಾನ್ಯ ಉಪಾಧ್ಯಕ್ಷರು ಕರೆದಿದ್ದಾರೆ. ಕಾನೂನು ಪ್ರಕಾರ ಕರೆದಿರುವುದು ಸರಿ ಇದೆ. ಕಾನೂನು ಪ್ರಕಾರ ಕರೆದು ಅವರು ಭಾಷಣ ಮಾಡಿದ್ದಾರೆ ಶ್ರೀಮಾನ್ ಇದಿನಬ್ಬ ಅವರು ಎಂದು ನನ್ನ ಭಾವನೆ. ನಾನು ಅವರ ಹಕ್ಕನ್ನು ಕಿತ್ತುಹಾಕಬೇಕು ಎಂಬ ದೃಷ್ಟಿಯಿಂದ ಅಲ್ಲ, ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ನನ್ನ ಪ್ರಶ್ನೆಗಳಿತ್ತು. ಇಡೀ ದಿವಸ ನಾನು ಅಲ್ಲಿ ಇದ್ದೆ. ಅದಾದಮೇಲೆ ಚಂದ್ರೇಗೌಡರು ಭಾಷಣ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಏಕೆಂದರೆ ಮೋಷನ್ ಏನು ಮೂವ್ ಮಾಡಿದ್ದರು ಬಜೆಟ್ ಲೀಕೇಜ್ ಬಗ್ಗೆ ಅದು ಮುಕ್ತಾಯವಾಗಿತ್ತು. ಹಿಂದಿನ ದಿವಸವೇ ಮುಗಿದು ಹೋಗಿಬಿಟ್ಟಿದೆ. ಅವರು ಭಾಷಣ ಮಾಡುತ್ತಾರೆ ಎಂದು ಕುಳಿತಿದ್ದರೆ ಅವರು ಈ ರೀತಿ ಬಹಿಷ್ಕಾರ ಹಾಕಿಕೊಂಡು ಕುಳಿತುಕೊಂಡರೆ ಸ್ವಾಮಿ ನಮ್ಮದೇನು ತಪ್ಪಿದೆ? ಸರ್ಕಾರದ ಪಾತ್ರ ಏನಿದೆ ಇದರಲ್ಲಿ ? ಕರೆಯುವವರು ಅಧ್ಯಕ್ಷರು. ಭಾಷಣ ಮಾಡುವವರು ಅವರು. ಅವರು ಇಲ್ಲದಿರುವ ಸಂದರ್ಭದಲ್ಲಿ ಮತ್ತೊಬ್ಬರಿಗೆ ಕರೆಯತಕ್ಕ ಕರ್ತವ್ಯದ ಹಿನ್ನೆಲೆಯಲ್ಲಿ ನಿಯಮಾವಳಿ ಪ್ರಕಾರ ಮಾನ್ಯ ಉಪಾಧ್ಯಕ್ಷಿಣಿಯಮ್ಮನವರು ಕರೆದಿದ್ದಾರೆ. ಅದರಲ್ಲಿ ಏನೇನೂ ತಪ್ಪಿಲ್ಲ, ಸರ್ಕಾರದ ತಪ್ಪಿಲ್ಲ, ಅಲ್ಲಿ ಆ ಸ್ಥಾನದ ತಪ್ಪಿಲ್ಲ, ಯಾವುದೂ ಕೂಡ ಇದರಲ್ಲಿ ತಪ್ಪಿಲ್ಲ, ಇದರಲ್ಲಿ ಯಾರ ತಪ್ಪು ಎಂದು ಹುಡುಕುವುದಕ್ಕೂ ನಾವು ಹೋಗುವುದಿಲ್ಲ, ಮತ್ತೊಬ್ಬರು ಕರೆದಾಗ ಅವರು ಭಾಷಣ ಮಾಡುವುದು ಅಷ್ಟೇ ಕಾನೂನುಬದ್ಧವಾಗಿ ಮಾತನಾಡತಕ್ಕ ಹಕ್ಕಿನ ಪ್ರಶ್ನೆ ಇದು. ಆದರೆ ಅವರು ಇದ್ದರೆ ಅವರು ಭಾಷಣ ಮಾಡಿ ಬೆಳಕನ್ನು ಚೆಲ್ಲಿ ಅಂಕಿಅಂಶಗಳು ಮತ್ತೊಂದನ್ನು ನಾನೂ ಕೂಡ ನಿರೀಕ್ಷೆ ಮಾಡಿದ್ದೆ. ಕಳೆದ ವರ್ಷ ಭಾಷಣ ಮಾಡಿದ್ದರು. ಈ ವರ್ಷ ಭಾಷಣ ಮಾಡಲಿಕ್ಕೆ ಅವರು ರೆಡಿ ಆಗಲಿಲ್ಲ, ಹಲವಾರು ಕಾರಣಗಳಿಂದ. ಅವರಿಗೆ ಸರಿಕಂಡಂಥ ಕಾರಣಗಳು ಬೇಕಾದಷ್ಟಿರಬಹುದು. ಅದು ಸರಿ ಇರಬಹುದು. ಆದರೆ ಈ ರೇರ್‌ಅಪ್ಪೋರ್ಚುನಿಟಿ ಸದುಪಯೋಗಪಡಿಸಿಕೊಳ್ಳಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಲೂ ಕೂಡ ವಿನಂತಿ ಮಾಡುತ್ತೇನೆ ಅವರ ಬರಲಿ. ಬಜೆಟ್ ಚರ್ಚೆಗೆ ಅವರು ಬರಬೇಕು. ಒಂದು ಗಂಟೇನೋ ಎರಡು ಗಂಟೇನೋ ಅರ್ಧ ದಿನಾನೋ ಒಂದು ದಿನಾನೋ ಭಾಷಣ ಮಾಡಲಿ. ಇನ್ನೊಂದು ಸ್ವಾಮಿ ನಾನು ಹೇಳುವುದು? ಅವರು ಬಂದು ಈಗಲೂ ಕೂಡ ಭಾಷಣ ಮಾಡಲಿ. ರಾಜ್ಯದ ಆರ್ಥಿಕ ನಿಚಾರದ ಬಗ್ಗೆ ಬೆಳಕನ್ನು ಚೆಲ್ಲಲಿ. ಸರ್ಕಾರ ಒಳ್ಳೆಯದು ಮಾಡಿದ್ದರೆ ಒಳ್ಳೆಯದು ಎಂದು ಹೇಳಲಿ, ತಪ್ಪು ಮಾಡಿದ್ದರೆ ನಮ್ಮನ್ನು ಖಂಡಿಸಲಿ. ನಾನು ಈ ಮಾತನ್ನು ಆವತ್ತೇ ಹೇಳಿದ್ದೇನೆ. ಹೆಲ್ತಿ ಟೀಕೆಗಳು, ಹೆಲ್ತಿ ಕ್ರಿಟಿಸಿಸಂ ಇದ್ದರೆ I am prepared to accept them and I invite them. 5–10 ಪಿ.ಎಂ. ನಾವು ಹೇಗೆ ಸರಿಪಡಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದಲೇ ಆರೋಗ್ಯಕರವಾದ ಟೀಕೆ ಟಿಪ್ಪಣಿಗಳನ್ನು ಹೃದಯಾಂತರಾಳದಿಂದ ಸ್ವಾಗತ ಮಾಡಿದ್ದೇವೆ. ಇದಕ್ಕಿಂತಲೂ ಹೆಚ್ಚು ಹೇಳುವುದಕ್ಕೆ ಸಾಧ್ಯವೇ ಇಲ್ಲ,

ಆದುದರಿಂದ ಅವರಿಗೆ ಗೌರವ ಕಡಿಮೆ ಮಾಡಬೇಕೆಂದು ಅಲ್ಲ, ಗೌರವವನ್ನು ಕೊಡಬೇಕೆನ್ನುವ ದೃಷ್ಟಿಯಿಂದಲೇ ಈ ಸದನ ಕಾದಿದೆ. ಅವರು ಇದನ್ನು ಉಪಯೋಗ ಮಾಡಲಿಲ್ಲ, ಇದನ್ನು ನಾನು ಇಲ್ಲಿಗೇ ನಿಲ್ಲಿಸುತ್ತೇನೆ. ಈ ವಿಚಾರದ ಬಗ್ಗೆ ಮುಂದಕ್ಕೆ ಹೋಗುವುದಕ್ಕೆ ನನಗೆ ಇಷ್ಟ ಇಲ್ಲ, ಇದಕ್ಕಿಂತ ಇನ್ನೂ ಏನು ಹೆಚ್ಚುಹೇಳಬಲ್ಲೇ? ಮಾನ್ಯ ಅಧ್ಯಕ್ಷರೇ, ನಾನು ತಮಗೆ ವಿನಂತಿ ಮಾಡುತ್ತೇನೆ. ವಿರೋಧ ಪಕ್ಷದ ನಾಯಕರು, ಶ್ರೀ ಡಿ.ಬಿ.ಚಂದ್ರೇಗೌಡರಿಗೆ, ಅವರ ಪಕ್ಷದ ಎಲ್ಲಾ ಮಾನ್ಯ ಸದಸ್ಯರಿಗೆ ಮತ್ತು ಬೇರೆ ಪಕ್ಷಗಳು, ಎನ್. ಜೆ.ಪಿ. ಇರಬಹುದು, ರೈತಸಂಘ ಇರಬಹುದು, ವಾಟಾಳ್ ನಾಗರಾಜ್ ಅವರು ಇರಬಹುದು ಅಥವಾ ಮಾನ್ಯ ಸದಸ್ಯರು ಯಾರೇ ಇರಬಹುದು, ಯಾರು ಇವತ್ತು ಅದರಲ್ಲಿ ಪಾಲ್ಗೊಂಡಿದ್ದಾರೆ ಅದು ಇವತ್ತು ಸರಿಯಾಗಲಾರದು. ಜನಹಿತದೃಷ್ಟಿಯಿಂದ ಕಲಾಪದಲ್ಲಿ ಭಾಗವಹಿಸಿದರೆ ಅವರಿಗೂ ಕೂಡ ನಿಜವಾಗಿ ಸದನಕ್ಕೂ ಕೂಡ ಶೋಭೆ ತರಬೇಕು. ಅದು ಇನ್ನೂ ಒಳ್ಳೆಯದು ಆ ಬಗ್ಗೆ ಅವರು ಬೆಳಕುಚೆಲ್ಲಲಿ ಎಂದು ಮತ್ತೊಮ್ಮೆ ತಮ್ಮ ಮುಖಾಂತರ ವಿನಂತಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ :- ಸದನದ ಸಮಿತಿ ಬಗ್ಗೆ ತಾವು ಏನೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ :- ಸದನದ ಸಮಿತಿ ಹಾಗೂ ಮತ್ತೊಂದು ವಿಚಾರದಲ್ಲಿ ತಾವು ಏನು ಕೇಳಿದ್ದೀರಿ ಅದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗಿಲ್ಲ, ಅವರು ಬಂದು ಏನು ಎಂದು ಹೇಳಲಿ.

ಶ್ರೀ ನಾರಾಯಣರಾವ್ ಮನಹಳ್ಳಿ :- ನಾನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ :- ತಾವು ಹೇಳಿದ್ದೀರಿ. ಅದು ಇರಲಿ. ಇದೆ ಅಥವಾ ಇಲ್ಲ ಎಂದು ನಾನು ಹೇಳಿಲ್ಲ, ಅವರು ಬಂದು ಹೇಳಲಿ. ಅವರು ಸದನಕ್ಕೆ ಬರಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ ; ವಿನಂತಿ ಮಾಡುತ್ತಿದ್ದೇನೆ. ಅದನ್ನು ನಾನು ಅಲ್ಲಿಗೇ ನಿಲ್ಲಿಸುತ್ತೇನೆ, ಆಮೇಲೆ ವಿಚಾರ ಮಾಡೋಣ. ಅದು ಮಾನ್ಯ ಸಭಾಧ್ಯಕ್ಷಣೆಯವರಿಗೆ ಬಿಟ್ಟಿರತಕ್ಕ ವಿಚಾರ.

ಶ್ರೀ ಎ.ಟಿ. ರಾಮಸ್ವಾಮಿ :- ಮಾನ್ಯ ಅಧ್ಯಕ್ಷಣೆಯವರೇ, ಜನತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರ ಪಾತ್ರ ಬಹಳ ಮಹತ್ವವಾದುದು. ಆದರೆ ಸದನದ ಕಾಲವನ್ನು ಅಪಹರಿಸಿಕೊಳ್ಳುವುದಕ್ಕೆ ಅಥವಾ ಮೊಟಕು ಮಾಡುವುದಕ್ಕೆ ತಾವು ಯಾರೂ ಕೂಡ ಅವಕಾಶವನ್ನು ಮಾಡಿಕೊಡಬಾರದು. ಇಡೀ ಸದನ ವಿರೋಧಪಕ್ಷದವರ ಮಾತಿಗೆ ಮನ್ನಣೆ ಕೊಟ್ಟಿದೆ. ಆದರೆ ಇಡೀ ಸದನದ ಮಾತಿಗೆ ಅವರು ಮನ್ನಣೆ ಕೊಡುತ್ತಿಲ್ಲ ಎಂದರೆ ನಿಜಕ್ಕೂ ಇದು ವಿಪರ್ಯಾಸಕರ ಸಂಗತಿ. ಸಾರ್ವಜನಿಕರ ಹಣ, ನಮ್ಮೆಲ್ಲರ ಕಾಲ ವ್ಯಯದ ಜೊತೆಗೆ ಇವರುಗಳು ಕೂಡ ಹೊಣೆಗಾರಿಕೆಯಿಂದ ದೂರ ಹೋಗುತ್ತಿದ್ದಾರೆಂದು ಹೇಳುತ್ತೇನೆ. ಸಂಸದೀಯ ಇತಿಹಾಸದಲ್ಲಿ ಪ್ರಥಮವಾಗಿ ಆಯವ್ಯಯ ಬಹಿರಂಗವಾಯಿತೆಂದು ಹೇಳಿ ಒಂದು ನಿರ್ಣಯವನ್ನು ಅವರು ಮಂಡಿಸಿದರು. ಸರ್ಕಾರ ತಪ್ಪು ಒಪ್ಪಿಕೊಳ್ಳಬೇಕು, ಜವಾಬ್ದಾರಿ ಹೊತ್ತು ರಾಜೀನಾಮೆ ಕೊಡಬೇಕೆಂದು ಹೇಳಿದರು. ಆ ನಿರ್ಣಯದ ಚರ್ಚೆಗೆ ತಾವು ಒಪ್ಪಿಕೊಂಡಿದ್ದೀರಿ. ಸರ್ಕಾರ ಕೂಡ ಒಪ್ಪಿಕೊಂಡಿತು. ಇಡೀ ಸಂಸದೀಯ ಇತಿಹಾಸದಲ್ಲೇ ಪ್ರಪ್ರಥಮವಾಗಿ ಅಂತಹ ಒಂದು ನಿರ್ಣಯ ಚರ್ಚೆಗೆ ಬಂತು. ಚರ್ಚೆಯ ನಂತರ ಅದು ಬಿದ್ದುಹೋಯಿತು. ಪ್ರಜಾಸತ್ತಾತ್ಮಕ ವಿಧಿ ವಿಧಾನಗಳನ್ನು ಅನುಸರಿಸಿ ಅದು ಬಿದ್ದುಹೋದ ಮೇಲೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸದನದ ನಿರ್ಣಯಕ್ಕೆ ತಲೆಬಾಗಿ ಅವರು ನಡೆದುಕೊಳ್ಳಬೇಕಾಗಿತ್ತು ; ಕಾರ್ಯಕಲಾಪದಲ್ಲಿ ಭಾಗವಹಿಸಬೇಕಾಗಿತ್ತು. ಅವರು ಭಾಗವಹಿಸದೇ ಇರುವುದು ನಿಜಕ್ಕೂ ಕೂಡ ವಿಷಾದದ ಸಂಗತಿ ಎಂದು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಾ, ಈ ಸಭೆಯನ್ನು ಅವರು ಬಹು ಲಘುವಾಗಿ ತೆಗೆದುಕೊಂಡಿದ್ದಾರೆಂದರೆ ಅತಿಶಯೋಕ್ತಿ ಅಲ್ಲ ಸದನದ ಗೌರವಾನ್ವಿತ ಸದಸ್ಯರು ಸದನದ ಒಳಗೆ ಬಂದು ಸದನಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಹೋರಾಟ ಮಾಡಬೇಕೇ ಹೊರತು ಸದನದ ಹೊರಗಡೆ ಮಾಡತಕ್ಕದ್ದು ಸೂಕ್ತವಲ್ಲ, ಜನಾಭಿಪ್ರಾಯಕ್ಕೆ ಬದ್ಧವಾಗಿ ಈ ಸದನ ರಚನೆಯಾಗಿದೆ. ಜನಾಭಿಪ್ರಾಯದ ಪ್ರತಿಬಿಂಬ ಈ ಸಭೆ. ಈ ಸಭೆ ಏನು ನಿರ್ಣಯ ತೆಗೆದುಕೊಳ್ಳುತ್ತದೆಯೋ ಅದಕ್ಕೆ ಅವರು ಬದ್ಧರಾಗಬೇಕೇ ಹೊರತು ಅವರ ನಿರ್ಣಯಗಳನ್ನು ಸಭೆಯ

ಮೇಲೆ ಹೇರತಕ್ಕದ್ದು ಸೂಕ್ತವಲ್ಲ, ಏಕೆ ಹೇಳುತ್ತಿರುವೆ ಎಂದರೆ, ಅವರ ಮಾತಿಗೆ ಇಡೀ ಸದನ ಮನ್ನಣೆ ಕೊಟ್ಟು ಅಂತಹ ಒಂದು ಅಪರೂಪದ ನಿರ್ಣಯವನ್ನು ಚರ್ಚೆ ಮಾಡಿದ್ದೇವೆ. ಈಗ ಇಡೀ ಸದನದ ನಿರ್ಣಯಕ್ಕೆ ಮಾನ್ಯತೆ ಕೊಡುವುದಿಲ್ಲವೆಂದರೆ ನಿಜಕ್ಕೂ ಕೂಡ ಪ್ರಜಾಸತ್ತಾತ್ಮಕ ತತ್ವಕ್ಕೆ ವಿರೋಧ ಎನ್ನುವ ಮಾತನ್ನು ಹೇಳುತ್ತಾ, ದಯವಿಟ್ಟು ಸದನದ ಕಾರ್ಯಕಲಾಪಗಳು ನಡೆಯುವುದಕ್ಕೆ ಜನಹಿತದೃಷ್ಟಿಯಿಂದ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ಶುಕ್ರವಾರದಿಂದ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಬಹಿಷ್ಕಾರ ಹಾಕಿರತಕ್ಕದ್ದು ಇಡೀ ರಾಜ್ಯಾದ್ಯಂತ ಜನಜನಿತವಾಗಿದೆ. ಶುಕ್ರವಾರದಂದು ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಪ್ರಥಮವಾಗಿ ಸಂಸದೀಯ ಪರಂಪರೆಗಳಿಗೆ ಅನುಗುಣವಾಗಿ ಪ್ರಾರಂಭ ಮಾಡಬೇಕಾಗಿತ್ತು ಎಂದು ಅವರ ವಾದ. ಆ ಒಂದು ನಿಟ್ಟಿನಲ್ಲೇ ಅವರು ಈ ಸದನವನ್ನು ಬಹಿಷ್ಕಾರ ಮಾಡಿ ಆಚೆಗೆ ಹೋಗಿದ್ದು ಎಂದು ಹೇಳಿ ಅವರು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಆವತ್ತು ನೀವು ಕರೆದಾಗ ಇವರು ಇರಲಿಲ್ಲ, ಆ ನಂತರ ಮಾನ್ಯ ಇದಿನಬ್ಬನವರು ಪ್ರಾರಂಭ ಮಾಡಿದ್ದಾರೆ. ಅದಾದಮೇಲೆ ವಿರೋಧ ಪಕ್ಷದ ಮುಖಂಡರನ್ನು ಕರೆಯಬೇಕಾಗಿತ್ತು ಎನ್ನುವ ಹಿನ್ನೆಲೆಯಲ್ಲೇ ಸರ್ಕಾರ ಆವತ್ತಿನಿಂದ ಇವತ್ತಿನವರೆವಿಗೂ ಕೂಡ ವಿನಂತಿ ಮಾಡುತ್ತಾ ಇದೆ. ಈಗ ಮಾನ್ಯ ರಾಮಸ್ವಾಮಿಯವರು ಹೇಳಿದ ಹಾಗೆ ಈ ಸದನದ ವ್ಯವಸ್ಥೆಯಲ್ಲಿ ಇವತ್ತು ಎಷ್ಟು ಹಣ ಪೋಲಾಗುತ್ತಿದೆ? ಈ ಸದನದಲ್ಲಿ ಎಂತೆಂತಹ ಚರ್ಚೆಗಳು ಆಗಬೇಕಾಗಿತ್ತು, ಜನರ ಹಿತದೃಷ್ಟಿಯಿಂದ ಅವುಗಳನ್ನೆಲ್ಲ ಕುಂಠಿತಗೊಳಿಸುತ್ತಿರುವ ಸಂದರ್ಭದಲ್ಲಿ ಆಳುವ ಪಕ್ಷಕ್ಕಿಂತ ವಿರೋಧಪಕ್ಷದವರಿಗೆ ಕೇಳುವ ಪಕ್ಷಕ್ಕೆ ಬಹಳ ಅಧಿಕಾರ ಇರತಕ್ಕದ್ದು. ಇವತ್ತು ಹೆಚ್ಚೆ ಹೆಚ್ಚೆಗೂ ಪ್ರತಿ ಹಂತ ಹಂತಕ್ಕೂ ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಂಸದೀಯ ಮಂತ್ರಿಗಳು ಸಾಕಷ್ಟು ನಾವು ಹೇಳಿದಹಾಗೆಲ್ಲ ಸದನವನ್ನು ಮುಂದಕ್ಕೆ ಹಾಕಿ ನಾಲ್ಕಾರು ದಿವಸಗಳಿಂದ ಸಂಧಾನವನ್ನು ಮಾಡುತ್ತಿದ್ದಾರೆ. ಕೊನೆಯ ಹಂತವಾಗಿ ಈಗಲೂ ಸಹಿತ ವಿರೋಧಪಕ್ಷದ ಮುಖಂಡರು ಈ ಸದನಕ್ಕೆ ಬಂದು ಆಯವ್ಯಯದ ಚರ್ಚೆಯಲ್ಲಿ ಭಾಗವಹಿಸತಕ್ಕ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಒಂದು ಮಂಗಳ ಹಾಡಲೇಬೇಕು ಎಂದು ನಾವು ಕೇಳಿಕೊಂಡು ಬರುತ್ತಲೇ ಇದ್ದೇವೆ. ಇವತ್ತಿನ ಬೆಳಿಗ್ಗೆಯ ಪತ್ರಿಕೆಯಲ್ಲಿ ವಿರೋಧಪಕ್ಷದ ಮುಖಂಡರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆ, ಅವರು ದೆಹಲಿಯಿಂದ ಬಂದ ನಂತರ ನಮ್ಮ ಶರತ್ತುಗಳಿವೆ ನಮ್ಮ ಶರತ್ತುಗಳಿಗೆ ಅವರು ಒಪ್ಪಿಕೊಳ್ಳುವುದಾದರೆ ನಾವು ಸದನಕ್ಕೆ ಹಾಜರಾಗಿ ಚರ್ಚೆಯಲ್ಲಿ ಭಾಗವಹಿಸುತ್ತೇವೆ ಎನ್ನತಕ್ಕ ಮಾತನ್ನು ಆಡಿದ್ದಾರೆ. ನಾವು ತಿಳಿದೆವು ಮುಖ್ಯ ಮಂತ್ರಿಗಳು ದೆಹಲಿಯಿಂದ ಬಂದಮೇಲೆ ತಮ್ಮ ಕೊಠಡಿಯಲ್ಲಿ ಚರ್ಚೆ ಆರಂಭವಾಗಿದೆ ಏನಾದರೂ ಒಂದು ತೀರ್ಮಾನವಾಗುತ್ತದೆಂದು. ಆದರೆ ಚರ್ಚೆ ಹೇಗೆ ಆರಂಭವಾಯಿತು, ಅಲ್ಲಿ ಏನಾಯಿತು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ನಾನೊಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ ಇದುವರೆಗೆ ಐದು ದಿವಸಗಳವರೆಗೆ ಕಾಯ್ದಿದ್ದೇವೆ. ಇವತ್ತು ಸಾಯಂಕಾಲ 5 ಗಂಟೆಯ ಮೇಲಾಯಿತು. ಇವತ್ತು ಯಾವುದೇ ಚರ್ಚೆ ಮಾಡುವುದು ಬೇಡ. ಇನ್ನೊಂದು ಅವಕಾಶವನ್ನು ಅವರಿಗೆ ಕೊಡಿ. ನಾಳೆ ಸದನ ಸೇರಿ ತಮ್ಮ ಕೊಠಡಿಯಲ್ಲಿ ಅಥವಾ ಮನೆಯಲ್ಲಿ ಕುಳಿತು ಏನಾದರೂ ಚರ್ಚೆ ಮಾಡಿ ಒಂದು ಬಿಗಿ ನಿಲುವನ್ನು ತೆಗೆದುಕೊಂಡು ತಾವೊಂದು ತೀರ್ಮಾನವನ್ನು ಮಾಡಬೇಕು. ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕು. ಈಗ ಸದನವನ್ನು ಮುಂದೂಡಲಿಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

SRI QUMURAL ISLAM : Madam Deputy Speaker, from Friday, in the interest of the democratic system and in the interest of the people of this State and because the Budget was also presented and the debate was to be continued. I

was also requesting you that the discussion on the Budget should be postponed for the next day thinking that there will be an understanding between the Opposition Party as well as the Ruling Party and some efforts have been made in this direction. Sufficient exercise has already been done and till to-day so much of water has flown. But, people are watching, I am of the opinion, that because we have to represent the people with whatever thin strength we are here – and I just say that instead of postponing, let the debate be started. We have appealed. I have also made the appeal and if the opportunity is being given, I am ready to speak on that, because we have given time for the last 4 or 5 days. Every time new points are coming up. We are agreeing to disagree and in this way the people are watching. Sadana has got its own respect. I am very happy that the Bharatiya Janata Party friends have come. I am very happy our MES people have told me that they are coming tomorrow. I am here and other people also are here. If the fate is that with only a thin Opposition, we have to discuss, at least with whatever capability and ability, we will do our job. I request that the debate may be continued.

ಶ್ರೀ ಎಸ್. ಬಂಗಾರಪ್ಪ :- ಮಾನ್ಯ ಉಪಾಧ್ಯಕ್ಷೀಣಿಯವರೇ ಆಗಬಹುದು. ಸದನವನ್ನು ಮಾನ್ಯ ಸದಸ್ಯರು ಮುಂದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆ. ಕಲಾಪಗಳನ್ನು ಮುಂದೆ ನಡೆಸತಕ್ಕದ್ದು ಮತ್ತೊಂದು ವಿಚಾರ. ನಾನು ವಿರೋಧಪಕ್ಷದ ನಾಯಕರು ಮತ್ತು ಸದಸ್ಯರೆಲ್ಲರಿಗೂ ಅಪೀಲ್ ಮಾಡಿದ್ದೇನೆ. ನಾನು ನಂಬಿಕೆಯಿಂದ ನಿರೀಕ್ಷೆ ಮಾಡುತ್ತೇನೆ ವಿರೋಧಪಕ್ಷದವರು ಯಾರ್ಯಾರು ಬಹಿಷ್ಕಾರದಲ್ಲಿ ಪಾಲ್ಗೊಂಡಿದ್ದಾರೆ. ಅವರುಗಳೆಲ್ಲ ನಾಳೆ ಬರುತ್ತಾರೆ ಎನ್ನತಕ್ಕ ನಿರೀಕ್ಷೆಯನ್ನು ನಾನು ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದಹಾಗೆ ಕಾಲ ಹೆಚ್ಚಾಗಿರುವುದರಿಂದ ತಾವು ಈ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಅಭ್ಯಂತರವಿಲ್ಲ.

ಉಪಾಧ್ಯಕ್ಷರು :- ಈ ದಿನ ಭಾರತೀಯ ಜನತಾ ಪಾರ್ಟಿಯ ಸದಸ್ಯರು ತಮ್ಮ ಬಹಿಷ್ಕಾರವನ್ನು ವಾಪಸ್ಸು ಪಡೆದು ಇವತ್ತು ಬೆಳಿಗ್ಗೆಯಿಂದ ಸಭೆಯಲ್ಲಿ ಭಾಗವಹಿಸಿದ್ದಾರೆ. ತಾವೆಲ್ಲರೂ ಹೇಳುವ ಹಾಗೆ ಆಯವ್ಯಯ ಮಹತ್ವದ ವಿಷಯ. ಪ್ರತಿಪಕ್ಷದ ನಾಯಕರು ಈವರೆಗೂ ಭಾಗವಹಿಸಿಲ್ಲ. ಇಡೀ ರಾಜ್ಯದ ಹಿತದೃಷ್ಟಿಯಿಂದ. ಮಾನ್ಯ ವಿರೋಧ ಪಕ್ಷದ ಮಾನ್ಯರುಗಳೆಲ್ಲರೂ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿ ಎಂದು ನಾನು ಮತ್ತೊಮ್ಮೆ ಅವರುಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಸಭೆಯು ಇಂದಿನ ತನ್ನ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಗಿಸಿ ಮತ್ತೆ ನಾಳೆ ಬೆಳಿಗ್ಗೆ 11–00 ಗಂಟೆಗೆ ಸಭೆ ಸೇರುವುದು.

(ಸದನವು 5–22 ಗಂಟೆಗೆ ತನ್ನ ಕಲಾಪಗಳನ್ನು ಮುಕ್ತಾಯಗೊಳಿಸಿ ದಿನಾಂಕ 12.3.92 ರಂದು ಬೆಳಿಗ್ಗೆ 11–00 ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ 1992

(1992ರ ವಿಧಾನ ಸಭಾ ವಿಧೇಯ–3)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 (1966ರ ಕರ್ನಾಟಕ ಅಧಿನಿಯಮ 18)ನ್ನು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತ ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :–

1. **ಚಿಕ್ಕ ಹೆಸರು ಮತ್ತು ಪ್ರಾರಂಭ :** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. **6ನೇ ಪ್ರಕರಣದ ತಿದ್ದುಪಡಿ :** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18)ರ 6ನೇ ಪ್ರಕರಣದಲ್ಲಿ (ಸಿಇ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು ಎಂದರೆ :–

"ಸಿಎಫ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ" ;

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಹಣಕಾಸು ನಿಗಮವು, ರಾಜ್ಯದಲ್ಲಿಯ ಕೈಗಾರಿಕೆಗಳ ಪ್ರವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಗೆ ಹಣಕಾಸನ್ನು ಒದಗಿಸುತ್ತಿದೆ. ಆದ್ದರಿಂದ, ಉತ್ತಮ ಸಮನ್ವಯಕ್ಕಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯ ಸದಸ್ಯರಲ್ಲೊಬ್ಬರನ್ನಾಗಿ ಸಹ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ವಿಧೇಯಕ.

ಮನೋರಮಾ ಮದ್ವರಾಜ
ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ

ಅನುಬಂಧ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18)ರ ಉದ್ಧೃತ ಭಾಗ)

* * * * * *

6. ರಚನೆ : ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ ;–

(ಎ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರು ಮಂಡಲಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ ;

(ಬಿ) ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ ;

(ಸಿ) ಸರ್ಕಾರದ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ;

(ಸಿಎ) ಕೈಗಾರಿಕಾಭಿವೃದ್ಧಿ ಇಲಾಖೆಯ ಕಮೀಷನರು ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು.

(ಸಿಬಿ) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ ;

(ಸಿಸಿ) ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ;

(ಸಿಡಿ) ನಿರ್ದೇಶಕರು, ಪಟ್ಟಣ ಯೋಜನೆ ;

(ಸಿಇ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ :

(ಡಿ) ಮಂಡಲಿಯ ಕಾರ್ಯ ನಿರ್ವಾಹಕ ಸದಸ್ಯರು ; ಮತ್ತು

(ಇ) ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕಿನ ಇಬ್ಬರು ನಾಮನಿರ್ದೇಶಿತ ವ್ಯಕ್ತಿಗಳು.

Printed at Government Text Book Press, Mysore

WD. 130 – 700 Copies – 3.2.94

Printed at Government Text Book Press, Mysore

KSA LIBRARY, B'lore
B020644
328.32402 548 LAD,1992
JJ48